# ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ



## ವಾರ್ಷಿಕ ವರದಿ

## 2015–16



### ಐಸೆಕ್

# ವಾರ್ಷಿಕ ವರದಿ – ೨೦೧೫–೧೬


**ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ**

**ಬೆಂಗಳೂರು**

ಡಾ. ವಿ.ಕೆ.ಆರ್.ವಿ.ರಾವ್ ರಸ್ತೆ, ನಾಗರಬಾವಿ, ಬೆಂಗಳೂರು ೫೬೦ ೦೭೨

ದೂರವಾಣಿ: ೨೩೨೧೫೪೬೮, ೨೩೨೧೫೫೧೯, ೨೩೨೧೫೫೯೨

ಫ್ಯಾಕ್ಸ್: ೯೧–೮೦–೨೩೨೧೭೦೦೮

# ಐಸೆಕ್

ಸಂಗ್ರಹಣಕಾರರು:
**ಶ್ರೀ ಇ. ವಿಷ್ಣುವರ್ಧನ್ ರೆಡ್ಡಿ,** ಸಹ ಸಂಪಾದಕರು
**ಶ್ರೀಮತಿ ಪಿ.ಎಂ. ಆರತಿ,** ಹಿರಿಯ ಡಿಟಿಪಿ ಸಹಾಯಕರು

ಅನುವಾದಕರು:
**ಡಾ. ಕೆ.ಎಸ್. ಜನಾರ್ಧನ,** ನಿವೃತ್ತ ಕೃಷಿ ಅಧಿಕಾರಿಗಳು, ಕರ್ನಾಟಕ ಸರ್ಕಾರ

ಬೆರಳಚ್ಚುಗಾರರು:
**ಶ್ರೀ ಎಚ್.ಕೆ. ಗೋವಿಂದರಾವ್,** ನಿವೃತ್ತ ಸಹಾಯಕ ರಿಜಿಸ್ಟ್ರಾರ್, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, ಬೆಂಗಳೂರು



# ಮುನ್ನುಡಿ

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯು ಇದೇ ಪ್ರಥಮ ಬಾರಿಗೆ ಸಂಸ್ಥೆಯ ೨೦೧೫–೧೬ನೇ ಸಾಲಿನ ವಾರ್ಷಿಕ ವರದಿಯನ್ನು ಕನ್ನಡ ಭಾಷೆಯಲ್ಲಿ ಹೊರತಂದಿರುತ್ತದೆ. ಇದಕ್ಕೆ ಮುಖ್ಯವಾದ ಪ್ರೇರಣೆಯನ್ನು "ಕನ್ನಡ ಉತ್ತೇಜನ ಸಮಿತಿ"ಯು ನೀಡಿದ್ದು, ಈ ಸಮಿತಿಯನ್ನು ಸಂಸ್ಥೆಯ ನಿರ್ದೇಶಕರಾದ ಡಾ. ಎಂ.ಜಿ.ಚಂದ್ರಕಾಂತ ಅವರು ರಚಿಸಿರುತ್ತಾರೆ. ಕನ್ನಡ ಉತ್ತೇಜನ ಸಮಿತಿಯಲ್ಲಿ ಡಾ. ಮನೋಹರ್ ಎಸ್.ಯಾದವ್, ಡಾ. ಕೆ.ಗಾಯಿತ್ರಿ, ಡಾ. ಸಿ.ಎಂ.ಲಕ್ಷ್ಮಣ, ಡಾ. ಎನ್.ಶಿವಣ್ಣ, ಡಾ. ಸುನಿಲ್ ನೌಟಿಯಾಲ್, ಡಾ. ಎಂ.ಲಿಂಗರಾಜು, ಡಾ. ಚನ್ನಮ್ಮ ಕಂಬಾರ, ಶ್ರೀ ಇ.ವಿಷ್ಣುವರ್ಧನ್ ರೆಡ್ಡಿ ಹಾಗೂ ಶ್ರೀಮತಿ ಎಸ್.ಅಶ್ವಿನಿ ಇವರು ಸದಸ್ಯರಾಗಿರುತ್ತಾರೆ. ಈ ವಿಷಯವನ್ನು ಆಡಳಿತ ಮಂಡಳಿಯಲ್ಲಿ ಪ್ರಸ್ತಾಪಿಸಿದಾಗ, ವಾರ್ಷಿಕ ವರದಿಯನ್ನು ಇನ್ನು ಮುಂದೆ ಪ್ರತಿವರ್ಷವೂ ಕನ್ನಡದಲ್ಲಿ ಅನುವಾದಿಸುವಂತೆಯೂ ಹಾಗೂ ಪ್ರತಿಗಳನ್ನು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಿಗೆ, ಗ್ರಂಥಾಲಯಗಳಿಗೆ ಹಾಗೂ ಸಮಾಜ ವಿಜ್ಞಾನದ ಸಂಶೋಧನಾರ್ಥಿಗಳಿಗೆ ಮತ್ತು ನೀತಿನಿಯಮಗಳನ್ನು ನಿರೂಪಿಸುವ ಸರ್ಕಾರಕ್ಕೆ ತಲುಪಿಸುವಂತೆ ಅನುಮತಿಯನ್ನು ಸಂಸ್ಥೆಯ ಛೇರ್ಮನ್‌ರಾದ ಡಾ. ಎ. ರವೀಂದ್ರ, ಐಎಎಸ್ (ನಿವೃತ್ತ) ಅವರು ನೀಡಿರುವುದು ಸಂತಸದ ವಿಷಯವೇ ಸರಿ.

ವಾರ್ಷಿಕ ವರದಿಯನ್ನು ಅನುವಾದಿಸಲು ಸಮಿತಿಯು ಐವರು ಅನುವಾದ ತಜ್ಞರಿಗೆ ಟೆಂಡರ್ ಮೂಲಕ ನಿವೇದನೆ ಸಲ್ಲಿಸಿತ್ತು. ಈ ತಜ್ಞರುಗಳು ಸಲ್ಲಿಸಿದ ಅನುವಾದದ ಕರಡು ಪ್ರತಿಗಳನ್ನು ಡಾ. ಎಂ.ಲಿಂಗರಾಜು ರವರು ಕೂಲಂಕಷವಾಗಿ ವಿಮರ್ಶೆಮಾಡಿ, ಡಾ. ಕೆ.ಎಸ್.ಜನಾರ್ಧನ ರವರನ್ನು ಅನುವಾದಕರೆಂದು ಆಯ್ಕೆ ಮಾಡಲು ಸಹಾಯ ಮಾಡಿರುತ್ತಾರೆ. ಡಾ. ಕೆ.ಎಸ್.ಜನಾರ್ಧನರವರು ಅನುವಾದ ಕಾರ್ಯವನ್ನು ಪ್ರಶಂಸನೀಯವಾಗಿ ಮಾಡಿರುತ್ತಾರೆ. ಶ್ರೀ ಹೆಚ್.ಕೆ.ಗೋವಿಂದರಾವ್‌ರವರು ಅನುವಾದದ ಹಸ್ತಪ್ರತಿಯನ್ನು ಬೆರಳಚ್ಚಿಸಿರುತ್ತಾರೆ. ಶ್ರೀ ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ. ರವರು ಪ್ರತಿಗಳನ್ನು ಮುದ್ರಿಸಿಕೊಟ್ಟಿರುತ್ತಾರೆ. ಇವರೆಲ್ಲರಿಗೂ ಸಂಸ್ಥೆಯು ಆಭಾರಿಯಾಗಿರುತ್ತದೆ.

ಈ ಕಾರ್ಯವು ಪ್ರತಿವರ್ಷವೂ ಅವಿರತವಾಗಿ ನಡೆಯಲು ಭಗವಂತನು ಪ್ರೇರೇಪಿಸಲಿ ಎಂದು ಹಾರೈಸುತ್ತೇವೆ.

ಶ್ರೀ ಹೇವಿಳಂಬಿ ಸಂವತ್ಸರ
ಕಾರ್ತೀಕ–ಮಾರ್ಗಶಿರ ಮಾಸ, ಷಷ್ಠಿ
೨೪ನೇ ನವೆಂಬರ್ ೨೦೧೭
ಬೆಂಗಳೂರು

ನಿರ್ದೇಶಕರು

# ಐಸೆಕ್

## ವಿಷಯ ಸೂಚಿ


| | | |
|---|---|---|
| | | ಪುಟ |
| **೨೦೧೫–೧೬ ರಲ್ಲಿ ಐಸೆಕ್: ಒಂದು ಪಕ್ಷಿನೋಟ** | | ೦೭ |
| ೧. | **ಐಸೆಕ್ ಸಂಘ** | ೦೯ |
| ೨. | **ಐಸೆಕ್ ಅಧ್ಯಾಪಕ ವೃಂದ/ಸಿಬ್ಬಂದಿ** | ೧೨ |
| ೩. | **ಅಧ್ಯಯನ ಕೇಂದ್ರಗಳು** | ೧೭ |
| ೪. | **ಸಂಶೋಧನಾ ಚಟುವಟಿಕೆಗಳು** | ೩೧ |
| | ಪೂರ್ಣಗೊಂಡ ಸಂಶೋಧನಾ ಕಾರ್ಯಕ್ರಮಗಳು<br>ಅಂತಿಮ ಪರಿಷ್ಕರಣೆಯಲ್ಲಿರುವ ಯೋಜನಾ ವರದಿಗಳು<br>ಪ್ರಗತಿಯಲ್ಲಿರುವ ಸಂಶೋಧನಾ ಕಾರ್ಯಕ್ರಮಗಳು | |
| ೫. | **ಶೈಕ್ಷಣಿಕ ಚಟುವಟಿಕೆಗಳು** | ೭೩ |
| | ಏರ್ಪಡಿಸಿದ ವಿಚಾರ ಸಂಕಿರಣಗಳು, ಸಮಾವೇಶಗಳು, ಕಾರ್ಯಾಗಾರಗಳು, | |
| | ತರಬೇತಿ ಕಾರ್ಯಕ್ರಮಗಳು ಮತ್ತು ಪುನಶ್ಚೇತನ ಪಠ್ಯಕ್ರಮಗಳು | |
| | ಭೇಟಿ ನೀಡಿದ ವಿದ್ವಾಂಸರು ಏರ್ಪಡಿಸಿದ ವಿಚಾರ ಸಂಕಿರಣಗಳು | |
| | ಅಧ್ಯಾಪಕ ಸಿಬ್ಬಂದಿಯು ಏರ್ಪಡಿಸಿದ ವಿಚಾರ ಸಂಕಿರಣಗಳು | |
| | ವಿದ್ಯಾರ್ಥಿಗಳು ಏರ್ಪಡಿಸಿದ ವಿಚಾರ ಸಂಕಿರಣಗಳು | |
| | ವಿದ್ಯಾರ್ಥಿಗಳ ಅರ್ಧವಾರ್ಷಿಕ ವಿಚಾರ ಸಂಕಿರಣಾ ಸರಣಿ | |
| | ಪಿಎಚ್‌ಡಿ ಕಾರ್ಯಕ್ರಮ | |
| | ಪ್ರದಾನ ಮಾಡಿದ ಪಿಎಚ್‌ಡಿ ಪದವಿಗಳು | |
| | ಡಾ. ಡಿ.ಎಂ. ನಂಜುಂಡಪ್ಪ ದತ್ತಿ ಬಹುಮಾನಗಳು | |
| | ಬೋಧನಾ ಜಾಲಗಳು | |
| | ಎಸ್‌ಆರ್‌ಟಿಟಿ ಬೆಂಬಲ ಚಟುವಟಿಕೆಗಳು | |
| ೬. | **ಪ್ರಕಟಣೆಗಳು** | ೯೩ |
| | ಪ್ರಕಟಿಸಿದ/ಸಂಪಾದಿಸಿದ ಗ್ರಂಥಗಳು | |
| | ಐಸೆಕ್‌ನ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ನಿಯತಕಾಲಿಕೆ | |
| | ಐಸೆಕ್ ನೀಳಲೇಖನ ಸರಣಿ | |
| | ಐಸೆಕ್ ಕಾರ್ಯನಿರತ ಸಂಶೋಧನಾ ಲೇಖನಗಳು | |
| | ನಿಯತಕಾಲಿಕೆಗಳು ಮತ್ತು ಸಂಪಾದಿತ ಗ್ರಂಥಗಳಲ್ಲಿ ಪ್ರಕಟಿಸಿದ ಲೇಖನಗಳು | |
| | ಪ್ರಕಟಿಸಿದ ಕಾರ್ಯನಿರತ ಸಂಶೋಧನಾ ಲೇಖನಗಳು | |



# ಐಸೆಕ್


೭. **ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಿಕೆ** ೧೦೮

ಆಯೋಜಿಸಿದ ವಿಚಾರ ಸಂಕಿರಣಗಳು

ವಿಚಾರ ಸಂಕಿರಣಗಳು, ಸಮಾವೇಶಗಳು ಹಾಗೂ ಕಾರ್ಯಾಗಾರಗಳಲ್ಲಿ ಮಂಡಿಸಿದ ಸಂಶೋಧನಾ ಲೇಖನಗಳು

ವಿಚಾರ ಸಂಕಿರಣಗಳಲ್ಲಿ, ಸಮಾವೇಶಗಳಲ್ಲಿ ಹಾಗೂ ಕಾರ್ಯಾಗಾರಗಳಲ್ಲಿ ಅಧ್ಯಕ್ಷರಾಗಿ, ಚರ್ಚಾರ್ಥಿಯಾಗಿ ಹಾಗೂ ವರದಿಗಾರರಾಗಿ ಭಾಗವಹಿಸುವಿಕೆ

ಏರ್ಪಡಿಸಿದ/ಸಂಯೋಜಿಸಿದ ವಿಚಾರ ಸಂಕಿರಣಗಳು, ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳು

ಭಾಗವಹಿಸಿದ ವಿಚಾರ ಸಂಕಿರಣಗಳು, ಸಮಾವೇಶಗಳು, ಕಾರ್ಯಾಗಾರಗಳು ಮತ್ತು ಸಭೆಗಳು

ಮಾಡಿದ ಪ್ರಧಾನ ಹಾಗೂ ಅಧ್ಯಕ್ಷೀಯ ಭಾಷಣಗಳು

ಉಪನ್ಯಾಸಗಳು, ಭಾಷಣಗಳು ಹಾಗೂ ಮಾಧ್ಯಮಗಳಲ್ಲಿ ಮಾತುಕತೆಗಳು

ಸುದ್ದಿ ಪತ್ರಿಕೆಗಳಲ್ಲಿನ ಲೇಖನಗಳು

೮. **ಐಸೆಕ್ ಹಾಗೂ ಸಂಸ್ಥೆಯ ಆವರಣದ ಸಂಕ್ಷಿಪ್ತ ಸುದ್ದಿ** ೧೩೮

ಶಿಷ್ಯವೃತ್ತಿ ವೇತನಗಳು, ಗೌರವ ಹಾಗೂ ಪ್ರಶಸ್ತಿಗಳು

ಬೋಧನಾ ವಲಯದಲ್ಲಿ, ವೃತ್ತಿ ವಲಯದಲ್ಲಿ ಹಾಗೂ ಆಡಳಿತ ವಲಯದಲ್ಲಿನ ಹುದ್ದೆಗಳನ್ನು ನಿರ್ವಹಿಸಿದ ವಿವರಗಳು

ಇತರೆ ವಿಷಯಗಳು

೯. **ಸಭೆಗಳು** ೧೫೦

೧೦. **ನೇಮಕಾತಿಗಳು, ನಿವೃತ್ತಿ, ರಾಜೀನಾಮೆ ಇತ್ಯಾದಿ** ೧೫೧

೧೧. **ಡಾ. ವಿ.ಕೆ.ಆರ್.ವಿ. ರಾವ್ ಗ್ರಂಥಾಲಯ** ೧೫೨

೧೨. **ದತ್ತಾಂಶ ಬ್ಯಾಂಕು** ೧೫೫

೧೩. **ಕೃತಜ್ಞತೆಗಳು** ೧೬೦

೧೪. **೨೦೧೫–೧೬ ರ ಸಾಲಿನ ಲೆಕ್ಕ ಪತ್ರಗಳ ಪಟ್ಟಿಗಳು** ೧೬೧

# ಐಸೆಕ್

## ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ
## ಬೆಂಗಳೂರು
## ವಾರ್ಷಿಕ ವರದಿ – ೨೦೧೫–೧೬

### ೧. ಐಸೆಕ್ ಸಂಘ

**ಅಧ್ಯಕ್ಷರು**

**ಕರ್ನಾಟಕದ ಘನತೆವೆತ್ತ ರಾಜ್ಯಪಾಲರು**
**ಶ್ರೀ ವಜುಭಾಯಿ ರೂಡಾಭಾಯಿ ವಾಲಾ**

**ಉಪಾಧ್ಯಕ್ಷರು**
**ಡಾ. ಎ. ರವೀಂದ್ರ, ಐಎಎಸ್ (ನಿವೃತ್ತ)**

# ಐಸೆಕ್



## ೨೦೧೫–೧೬ ರಲ್ಲಿ ಐಸೆಕ್: ಒಂದು ಪಕ್ಷಿನೋಟ

ಸಂಶೋಧನೆಯ ಅಂತಿಮ ಬಳಕೆದಾರರು (ಸರ್ಕಾರ ಹಾಗೂ ಕಾರ್ಯನೀತಿಯನ್ನು ರೂಪಿಸುವವರನ್ನೊಳಗೊಂಡಂತೆ) ಬಯಸುವ ವಸ್ತುನಿಷ್ಠ ಸಂಶೋಧನೆ ಹಾಗೂ ಬೌದ್ಧಿಕ ಸಂಶೋಧನೆಗೆ ಸಂಬಂಧಿಸಿದಂತಹ ಪಾಂಡಿತ್ಯಪೂರ್ಣ ಪ್ರಕಟಣೆಗಳು ಐಸೆಕ್ ಸಿಬ್ಬಂದಿಯ ದಕ್ಷ ಬೆಂಬಲದೊಂದಿಗೆ ಅಧ್ಯಾಪಕ ವೃಂದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಂದ ಹೊರಬಂದಿದೆ ಎನ್ನುವುದನ್ನು ಹೆಮ್ಮೆಯೊಂದಿಗೆ ಮತ್ತು ವಿನೀತ ಭಾವದಿಂದ ತಮ್ಮೊಂದಿಗೆ ಹಂಚಿಕೊಳ್ಳಲು ಬಹಳ ಸಂತಸವಾಗುತ್ತಿದೆ. ಸ್ಥಳ ಹಾಗೂ ವೇಳೆಯ ಅಭಾವದಿಂದಾಗಿ ಈ ಮೇಲ್ನೋಟವನ್ನು ಸಂಕ್ಷಿಪ್ತಗೊಳಿಸಲಾಗಿದೆ ಹಾಗೂ ಸಂಸ್ಥೆಯ ಒಂಭತ್ತು ಕೇಂದ್ರಗಳಲ್ಲಿ ಕೈಗೊಂಡ ವೈವಿಧ್ಯಮಯ ಅಧ್ಯಾಪನ ಚಟುವಟಿಕೆಗಳನ್ನು ಒಳಗೊಂಡಿದೆ. ಈ ಚಟುವಟಿಕೆಗಳ ಬಗ್ಗೆ ಪ್ರಾಸ್ತಾವಿಕವಾಗಿ ಹೇಳುವುದಾದರೆ ಚಿಕ್ಕಬಳ್ಳಾಪುರ ಮತ್ತು ದಾವಣಗೆರೆಗಳ ಮಾನವ ಸಂಪನ್ಮೂಲ ಅಭಿವೃದ್ಧಿ ವರದಿಗಳಂತಹ ತಳಮಟ್ಟದ ಅಧ್ಯಯನಗಳಿಂದ ಪ್ರಾರಂಭಿಸಿ ಇಡೀ ರಾಷ್ಟ್ರದ ವ್ಯಾಪ್ತಿಯನ್ನು ಹೊಂದಿರುವ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯು ಬೀರಿರುವ ಪರಿಣಾಮದ ಮೌಲ್ಯಮಾಪನವನ್ನೂ ಮಾಡಲಾಗಿದೆ ಹಾಗೂ ರಾಷ್ಟ್ರಗಳ ಎಲ್ಲೆಯನ್ನೂ ಮೀರಿ ಕೆನಡಾ ದೇಶದ ದ್ವಿದಳಧಾನ್ಯಗಳ ವ್ಯಾಪಾರಕ್ಕಿರುವ ಅವಕಾಶಗಳು ಮತ್ತು ಸವಾಲುಗಳು ಎಂಬ ಅಧ್ಯಯನವನ್ನೂ ಕೈಗೆತ್ತಿಕೊಳ್ಳಲಾಗಿದೆ. ಐಸೆಕ್ ಸಂಸ್ಥೆಯ ಸಂಶೋಧನೆಗಳು ವೈವಿಧ್ಯ ಕಾರ್ಯನೀತಿ ಅಧ್ಯಯನಗಳನ್ನೂ ಒಳಗೊಂಡಿವೆ ಎಂದು ಹೇಳಲು ಹರ್ಷವಾಗುತ್ತದೆ. ಅವೆಂದರೆ ಕರ್ನಾಟಕದಲ್ಲಿ ಗ್ರಾಮೀಣ ನೈರ್ಮಲ್ಯ ಸುಧಾರಣೆ; ನಗರ ಪ್ರದೇಶಗಳಲ್ಲಿನ ಆರ್ಥಿಕ ಹೊರತುಪಡಿಸುವಿಕೆ, ಭಾರತದಲ್ಲಿ ವಿದ್ಯಾವಂತರಲ್ಲಿನ ನಿರುದ್ಯೋಗ ಸಮಸ್ಯೆಯ ಕಾರಣಗಳು; ಪರಿಣಾಮಗಳು ಹಾಗೂ ಪರಿಹಾರಗಳು; ಕರ್ನಾಟಕದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನವು ಸಾಮಗ್ರಿಗಳ ಬಳಕೆ, ಉತ್ಪಾದನೆ, ಇಳುವರಿ ಹಾಗೂ ಆದಾಯದ ಮೇಲೆ ಬೀರಿರುವ ಪರಿಣಾಮ; ಪರಿಸರ ಶಿಕ್ಷಣದ ಸ್ಥಿತಿಗತಿಗಳು; ಭಾರತದಲ್ಲಿ ವಯಸ್ಕರ ಆರೋಗ್ಯ ಮತ್ತು ಜಾಗತಿಕ ವೃದ್ಧಾಪ್ಯ ಸಮಸ್ಯೆಯ ಅಧ್ಯಯನ; ಮಣ್ಣು ಪರೀಕ್ಷೆಯ ಆಧಾರದ ಮೇಲೆ ಶಿಫಾರಸ್ಸು ಮಾಡಲಾಗುವ ರಸಗೊಬ್ಬರಗಳ ಪ್ರಮಾಣವನ್ನು ರೈತರು ಅಳವಡಿಸಿಕೊಳ್ಳುವ ಬಗ್ಗೆ ಅಧ್ಯಯನ; ಭೂ ಚೇತನ ಕಾರ್ಯಕ್ರಮವು ಬೀರಿರುವ ಪರಿಣಾಮದ ಮೌಲ್ಯಮಾಪನ; ಜೀವ ವೈವಿಧ್ಯತೆ ಬಹಳವಾಗಿರುವ ಪ್ರದೇಶಗಳಲ್ಲಿನ ಜೀವನೋಪಾಯಗಳು, ದೌರ್ಬಲ್ಯಕ್ಕೆ ಪಕ್ಕಾಗುವಿಕೆ, ಪರಿಸರ ಬದಲಾವಣೆಗೆ ಹೊಂದಿಕೊಳ್ಳಲು ಅನುಸರಿಸುವ ಸಾಧನಾ ತಂತ್ರಗಳು; ವಿಶೇಷ ಆರ್ಥಿಕ ವಲಯಗಳಲ್ಲಿನ ವ್ಯಾಪಾರ ವಹಿವಾಟು ಸೌಲಭ್ಯತೆಗಳು ಹಾಗೂ ವ್ಯಾಪಾರ ವಹಿವಾಟಿನ ಕಾರ್ಯಕ್ಷಮತೆ; ಬೆಂಗಳೂರಿನ ಬೀದಿ ಬದಿಯ ವ್ಯಾಪಾರಿಗಳ ಅಧ್ಯಯನ; ದಲಿತ ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಸಾಮರ್ಥ್ಯಗಳು; ಸಗಟು ಮತ್ತು ಚಿಲ್ಲರೆವ್ಯಾಪಾರಗಳಲ್ಲಿನ ಧಾರಣೆ ವ್ಯತ್ಯಾಸಗಳು ಹಾಗೂ ಈರುಳ್ಳಿ ಮತ್ತು ದ್ರಾಕ್ಷಿ ಬೆಳೆಗಳ ಮಾರಾಟದಿಂದ ರೈತರು ಪಡೆದ ಬೆಲೆ; ಭಾರತದಲ್ಲಿನ ಸಾರ್ವತ್ರಿಕ ವೃದ್ಧಾಪ್ಯ ವೇತನ ಯೋಜನೆ; ಆರ್ಥಿಕ ಬೇಡಿಕೆ, ಸಾರ್ವಜನಿಕ ಹಣದ ಖರ್ಚು ಮತ್ತು ಧನ ಸಹಾಯದ ಅವಕಾಶಗಳು.

ಪ್ರಸ್ತುತ ವರ್ಷದಲ್ಲಿ ಪ್ರೊಫೆಸರ್ ಎಲ್.ಎಸ್.ವೆಂಕಟರಮಣನ್ ಸ್ಮರಣಾರ್ಥ ೧೩ನೇ ಉಪನ್ಯಾಸವನ್ನು ಕ್ಯಾನ್ಬೆರ್ರಾದ ಎಎನ್‌ಯು ವಿಶ್ವವಿದ್ಯಾನಿಲಯದ ಪ್ರೊಫೆಸರ್ ಕಾಳಿಯಪ್ಪ ಕಾಳಿರಾಜನ್‌ರವರು "ಭಾರತ ಮತ್ತು ಚೈನಾ ನಡುವಣ ಮುಕ್ತ ವ್ಯಾಪಾರ ಒಪ್ಪಂದವು ಭಾರತದ ವ್ಯಾಪಾರ ವಹಿವಾಟಿನ ಕೊರತೆಯನ್ನು ಕಡಿಮೆಗೊಳಿಸುತ್ತದೆಯೇ" ಎಂಬ ಬಗ್ಗೆ ಮಾಡಿದರು. ಐಸೆಕ್ ಸಂಸ್ಥೆಯ ಮತ್ತೊಂದು ಹೆಮ್ಮೆಯ ಉಪನ್ಯಾಸ ಮಾಲಿಕೆಯಾದ ಕರ್ನಾಟಕ ರಾಜ್ಯೋತ್ಸವ ವಿಸ್ತರಣಾ ಉಪನ್ಯಾಸ ಮಾಲಿಕೆಯಲ್ಲಿ "ವೇದಿಕೆ ಮತ್ತು ಉದ್ದೇಶ" ಎಂಬ ಬಗ್ಗೆ ಮೈಂಡ್ ಟ್ರೀ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಸುಬ್ರತೋ ಬಾಗ್ಚಿರವರು ಉಪನ್ಯಾಸ ನೀಡಿದರು.

ಐಸೆಕ್ ಸಂಸ್ಥೆಗೆ ಪ್ರಸ್ತುತ ಸಾಲಿನಲ್ಲಿ ಭೇಟಿ ನೀಡಿ ವಿಚಾರ ಸಂಕಿರಣವನ್ನು ನಡೆಸಿಕೊಟ್ಟ ಅಧ್ಯಾಪನ ಗಣ್ಯರು ಹಾಗೂ ವಿಚಾರ ಸಂಕಿರಣದ ವಿಷಯಗಳು ಈ ರೀತಿ ಇವೆ: ಲಂಡನ್ ಅರ್ಥಶಾಸ್ತ್ರ ಶಾಲೆಯ ಪ್ರೊಫೆಸರ್ ಟಿಮ್ ಡೈಸನ್‌ರವರು "ಜನ ವಸತಿಯಲ್ಲಿನ ಸ್ಥಿತ್ಯಂತರ ಹಾಗೂ ನಗರೀಕರಣ" ಎಂಬ ಬಗ್ಗೆಯೂ; ಮಿಶಿಗನ್ ವಿಶ್ವವಿದ್ಯಾನಿಲಯದ ಪ್ರೊ. ಫ್ರಾಂಕ್ ಥಾಂಪ್ಸನ್‌ರವರು "ಥಾಮಸ್ ಪಿಕೆಟಿಯವರ ಕೊಡುಗೆ: ಇಪ್ಪತ್ತೊಂದನೆಯ ಶತಮಾನದಲ್ಲಿ ಬಂಡವಾಳ" ಎಂಬ ಬಗ್ಗೆಯೂ; ಸ್ವಾಮಿ ವಿವೇಕಾನಂದ ಯುವ ಸಂಘಟನೆಯ ಡಾ. ಆರ್.ಬಾಲಸುಬ್ರಮಣ್ಯಂರವರು "ತಳಮಟ್ಟದ ಸಂಶೋಧನೆ ಮತ್ತು ಸಲಹಾ ಆಂದೋಲನ"ಎಂಬ ಬಗ್ಗೆಯೂ; ಹಾಗೂ ವಿಮೋಚನಾ ಸಂಸ್ಥೆಯ ಶ್ರೀಮತಿ ಮಧು ಭೂಷಣ್‌ರವರು "ಭಾರತದಲ್ಲಿನ ಸ್ತ್ರೀ ಆಂದೋಲನದ ಪ್ರಸ್ತುತ ಸವಾಲುಗಳು" ಎಂಬ ಬಗ್ಗೆಯೂ ಮಾತನಾಡಿದರು.

ಶ್ರೀಮತಿ ಅನೀಷಾ ಚಿಟಗುಪ್ಪಿ (ಅರ್ಥಶಾಸ್ತ್ರ) ಹಾಗೂ ಶ್ರೀಮತಿ ವಿಜಿತಾ ರಾಜನ್ (ಶಿಕ್ಷಣ) ಎಂಬ ಪಿಎಚ್‌ಡಿ ವಿದ್ಯಾರ್ಥಿಗಳು ಪಿಎಚ್‌ಡಿ ಪಠ್ಯಕ್ರಮದಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಪಡೆದಿದ್ದಕ್ಕಾಗಿ ಡಾ.ಡಿ.ಎಂ.ನಂಜುಂಡಪ್ಪ ದತ್ತಿ ಬಹುಮಾನಗಳನ್ನು ಗಳಿಸಿದ್ದಾರೆ.

# ಐಸೆಕ್

ಅಧ್ಯಾಪಕ ವೃಂದದ ಪ್ರಕಟಣೆಗಳು ಬೌದ್ಧಿಕ ಹಾಗೂ ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಮುದ್ರಣಗೊಂಡಿದ್ದು, ಅವುಗಳಲ್ಲಿ ಕೆಲವು ಈ ರೀತಿ ಇವೆ: ಆರ್ಥಿಕ ಮತ್ತು ರಾಜಕೀಯ ನಿಯತಕಾಲಿಕೆ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ನಿಯತಕಾಲಿಕೆ, ಏಷ್ಯಾ–ಪೆಸಿಫಿಕ್ ಅಭಿವೃದ್ಧಿ ನಿಯತಕಾಲಿಕೆ (ಯುಎನ್ ಇಎಸ್‌ಸಿಎಪಿ), ಏಷ್ಯಾದ ಪರಿಸರ ಮತ್ತು ನಗರೀಕರಣ (ಎಸ್‌ಎಜಿಇ) ಇಂಡಿಯನ್ ಫಾರೆಸ್ಟರ್, ಕೃಷಿ ಅರ್ಥಶಾಸ್ತ್ರದ ಭಾರತೀಯ ನಿಯತಕಾಲಿಕೆ, ನೀರಾವರಿ ವಿಜ್ಞಾನ (ಸ್ಪ್ರಿಂಗರ್), ಏಷ್ಯಾದ ಜೈವಿಕ ತಂತ್ರಜ್ಞಾನ ಮತ್ತು ಅಭಿವೃದ್ಧಿ ಪರಾಮರ್ಶೆ ನಿಯತಕಾಲಿಕೆ, ಆಡಳಿತ ಮತ್ತು ಸಾರ್ವಜನಿಕ ಕಾರ್ಯನೀತಿ ನಿಯತಕಾಲಿಕೆ, ಐಎಲ್‌ಒ ಪ್ರಕಟಣೆಗಳು, ಸಮಾಜ ವಿಜ್ಞಾನ ಸಂಶೋಧನಾ ಜಾಲ ನಿಯತಕಾಲಿಕೆ, ಕೃಷಿ ಸಂಶೋಧನೆ ಇತ್ಯಾದಿ.

ಅಧ್ಯಾಪಕ ವೃಂದದ ಗ್ರಂಥಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾದ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಮುದ್ರಣಾಲಯ, ವೆಸ್ಟ್‌ವಿಲೆ ಪ್ರಕಟಣಾ ಮಂದಿರ, ಸೇಜ್ ಪ್ರಕಟಣೆಗಳು, ಸ್ಪ್ರಿಂಗರ್, ರೂಟ್ಲೆಡ್ಜ್, ಪೇಟ್ರಿಡ್ಜ್ ಪ್ರಕಟಣೆಗಳಲ್ಲಿ ಪ್ರಕಟಗೊಂಡಿವೆ.

ಅಧ್ಯಾಪಕ ವೃಂದದ ಸದಸ್ಯರನ್ನು ಸರ್ಕಾರಕ್ಕೆ ಉಪಯುಕ್ತವಾದ ಅವರುಗಳ ಸಂಶೋಧನಾ ಸಾರಾಂಶಗಳನ್ನು ಮತ್ತು ಫಲಿತಾಂಶಗಳನ್ನು ಮಂಡಿಸಲು ಕರ್ನಾಟಕ ಸರ್ಕಾರವೂ ಮತ್ತು ದೇಶ ವಿದೇಶಗಳಲ್ಲಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು ಆಹ್ವಾನಿಸಿದ್ದವು. ಅವೆಂದರೆ: ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು "ಕರ್ನಾಟಕದಲ್ಲಿ ಮಾನವ ಅಭಿವೃದ್ಧಿಗಾಗಿ ಅನುದಾನ ನೀಡುವಿಕೆ" ಎಂಬ ಬಗ್ಗೆಯೂ; ಟಾಟಾ ಸಮಾಜ ವಿಜ್ಞಾನ ಸಂಸ್ಥೆಯು (ಟಿಐಎಸ್‌ಎಸ್) "ಸಾಲ ಪಡೆಯುವ ಅವಕಾಶ: ಎನ್‌ಎಸ್‌ಎಸ್‌ಓ ದತ್ತಾಂಶದಿಂದ ದೊರೆತ ಪುರಾವೆಗಳು" ಎಂಬ ಬಗ್ಗೆಯೂ; ಬೆಂಗಳೂರಿನ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯು "ಕರ್ನಾಟಕದ ಕಾರ್ಮಿಕ ಆಡಳಿತದ ಪ್ರಕರಣ" ಎಂಬ ಬಗ್ಗೆಯೂ; ಸಿಂಗಪೂರ್‌ನ ಸಿಂಗಪೂರ್ ರಾಷ್ಟ್ರೀಯ ವಿಶ್ವವಿದ್ಯಾಲಯವು "ಭಾರತದಲ್ಲಿನ ಒಳಗೊಳ್ಳುವಿಕೆ ಬೆಳವಣಿಗೆ: ಪ್ರದೇಶಗಳ ಒಳಗಿನ ಅಥವಾ ಅಂತರ್ ಪ್ರಾದೇಶಿಕ ತಾರತಮ್ಯತೆಗಳು" ಎಂಬ ಬಗ್ಗೆಯೂ; ಸ್ವಿಟ್ಜರ್ಲೆಂಡ್‌ನ ಲುಸಾನೆ ವಿಶ್ವವಿದ್ಯಾಲಯವು "ಪರಿಸರ ಸುಸ್ಥಿರತೆ ಮತ್ತು ಮಾನವ ಕ್ಷೇಮ – ಪರಿಕಲ್ಪನಾ ಟಿಪ್ಪಣಿ" ಎಂಬ ಬಗ್ಗೆಯೂ; ಐಸೆಕ್ ಸಂಸ್ಥೆಯಲ್ಲಿ ಹದಿನಾಲ್ಕನೇ ಆರ್ಥಿಕ ಆಯೋಗದ ಶಿಫಾರಸ್ಸುಗಳ ಬಗ್ಗೆ ನಡೆದ ವಿಚಾರಗೋಷ್ಠಿಯಲ್ಲಿ "ಸಾರ್ವಜನಿಕ ಖರ್ಚುವೆಚ್ಚಗಳ ನಿರ್ವಹಣೆಯ ಬಗ್ಗೆ ಹದಿನಾಲ್ಕನೇ ಆರ್ಥಿಕ ಆಯೋಗವು ಮಾಡಿರುವ ಶಿಫಾರಸ್ಸುಗಳು" ಎಂಬ ಬಗ್ಗೆಯೂ; ದಕ್ಷಿಣ ಕನ್ನಡ ಜಿಲ್ಲೆಯ ನಿಟ್ಟೆ ವಿಶ್ವವಿದ್ಯಾಲಯವು "ಸಾರ್ವಜನಿಕ ಸಂಸ್ಥೆಗಳಲ್ಲಿ ವಿಕೇಂದ್ರೀಕರಣ ಹಾಗೂ ಮಹಿಳೆಯರನ್ನು ರಾಜಕೀಯವಾಗಿ ಸದೃಢವಾಗಿಸುವಿಕೆ" ಎಂಬ ಬಗ್ಗೆಯೂ; ಮಲೇಷ್ಯಾದ ಮಲಯ ವಿಶ್ವವಿದ್ಯಾನಿಲಯವು "ಭಾರತದಲ್ಲಿ ವೃದ್ಧರ ಯೋಗಕ್ಷೇಮ ಮತ್ತು ಜೀವನ ವ್ಯವಸ್ಥೆಯಲ್ಲಿನ ಸಹಮತ" ಎಂಬ ಬಗ್ಗೆಯೂ; ಕರ್ನಾಟಕ ದಲಿತ ಬೌದ್ಧಿಕ ವೇದಿಕೆ ಹಾಗೂ ಬೆಂಗಳೂರಿನ ಭೀಮವಾಡ ದಲಿತ ಸಂಘರ್ಷ ಸಮಿತಿಯ "ಭಾರತದಲ್ಲಿ ದಲಿತ ಯುವಕರಲ್ಲಿ ಹೊರಹೊಮ್ಮುತ್ತಿರುವ ಜಾಗೃತಿ" ಎಂಬ ಬಗ್ಗೆಯೂ ಆಗಿದ್ದವು.

ಐಸೆಕ್ ಸಂಸ್ಥೆಯು ಕರ್ನಾಟಕ ಸರ್ಕಾರ, ಭಾರತ ಸರ್ಕಾರ, ಭಾರತೀಯ ರಿಸರ್ವ್ ಬ್ಯಾಂಕ್, ಎಸ್‌ಆರ್‌ಟಿಟಿ ಇವುಗಳ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನೀಡಿದ ಕೊಡುಗೆಗಾಗಿಯೂ ಹಾಗೂ ಸಂಶೋಧನಾ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಧನಸಹಾಯ ಮಾಡಿದ ಮತ್ತು ದೇಣಿಗೆ ನೀಡಿದ ಎಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತದೆ. ನಾವು ನಮ್ಮ ಪಿಎಚ್‌ಡಿ ಕಾರ್ಯಕ್ರಮಕ್ಕಾಗಿ ಸಹವರ್ತಿ ವಿಶ್ವವಿದ್ಯಾಲಯಗಳು ನೀಡಿದ ಕೊಡುಗೆಗಾಗಿ ಅವುಗಳನ್ನು ಪ್ರಶಂಸಿಸುತ್ತೇವೆ. ಐಸೆಕ್ ಸಂಸ್ಥೆಯ ಬೌದ್ಧಿಕ ದಿಗಂತವನ್ನು ವಿಸ್ತರಿಸಲು ತೋರಿದ ಆಸಕ್ತಿಗಾಗಿ ಮತ್ತು ಬದ್ಧತೆಗಾಗಿ ಕೊಡುಗೆ ನೀಡಿದ ಐಸೆಕ್ ಸಂಸ್ಥೆಯ ಅಧ್ಯಕ್ಷರನ್ನು, ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು, ಅಧ್ಯಾಪಕ ಸದಸ್ಯರನ್ನು, ಇತರ ಸಿಬ್ಬಂದಿಯನ್ನು, ವಿದ್ಯಾರ್ಥಿಗಳನ್ನು, ಆಜೀವ ಸದಸ್ಯರನ್ನು ಹಾಗೂ ಎಲ್ಲಾ ಭಾಗೀದಾರರನ್ನು ಸ್ಮರಿಸುತ್ತೇವೆ. ಮುಂದಿನ ದಿನಗಳಲ್ಲೂ ಸಹ ಅವರ ಬೆಂಬಲವು ಇದೇ ರೀತಿಯಲ್ಲಿ ಮುಂದುವರಿಯಲಿ ಎಂದು ನಾವು ದೇವರನ್ನು ಪ್ರಾರ್ಥಿಸುತ್ತೇವೆ. ಸಂಸ್ಥೆಯು ಸಾಧಿಸಿದ ಸಾಧನೆಗಳು, ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳ ಕೊಡುಗೆಗಳು ಹಾಗು ಸಂಸ್ಥೆಯ ಬೌದ್ಧಿಕ ಬೆಳವಣಿಗೆಗಾಗಿ ಕೊಡುಗೆ ನೀಡಿದ ಭಾಗೀದಾರರ ಇನ್ನೂ ಹೆಚ್ಚಿನ ವಿವರಗಳು ವಾರ್ಷಿಕ ವರದಿಯಲ್ಲಿ ಲಭ್ಯವಾಗುತ್ತದೆ.

**ಪ್ರೊ.ಎಂ.ಜಿ.ಚಂದ್ರಕಾಂತ್**
ನಿರ್ದೇಶಕರು

# ಐಸೆಕ್



## ಐಸೆಕ್ ಸಂಘ

ಅಧ್ಯಕ್ಷರು

**ಕರ್ನಾಟಕದ ಘನತೆವೆತ್ತ ರಾಜ್ಯಪಾಲರು**
**ಶ್ರೀ ವಜೂಭಾಯಿ ರೂಡಾಭಾಯಿ ವಾಲಾ**

**ಉಪಾಧ್ಯಕ್ಷರು**
**ಡಾ. ಎ. ರವೀಂದ್ರ, ಭಾಆಸೇ (ನಿವೃತ್ತ)**
ಅಧ್ಯಕ್ಷರು, ಆಡಳಿತ ಮಂಡಳಿ
(ಆಗಸ್ಟ್, ೨೦೧೫ ರಿಂದ)

**ಪ್ರೊ. ಜಿ. ತಿಮ್ಮಯ್ಯ, ಉಪಾಧ್ಯಕ್ಷರು**
**ಅಧ್ಯಕ್ಷರು, ಆಡಳಿತ ಮಂಡಳಿ**
(ಜನವರಿ ೨೦೧೩ರಿಂದ ಜುಲೈ, ೨೦೧೫ ರವರೆಗೆ)

## ಆಡಳಿತ ಮಂಡಳಿ ೨೦೧೩–೧೫

**ಮುಖ್ಯಸ್ಥರು**
ಡಾ. ಎ. ರವೀಂದ್ರ, ಭಾಆಸೇ (ನಿವೃತ್ತ)
(ಆಗಸ್ಟ್ ೨೦೧೫ ರಿಂದ ಡಿಸೆಂಬರ್ ೨೦೧೫ ರವರೆಗೆ)
ಪ್ರೊ. ಜಿ. ತಿಮ್ಮಯ್ಯ
(ಜನವರಿ ೨೦೧೩ರಿಂದ ಜುಲೈ ೨೦೧೫ರ ವರೆಗೆ)

**ಸದಸ್ಯರು**
ಪ್ರೊ. ಅಬ್ದುಲ್ ಅಜೀಜ್
ಪ್ರೊ. ಸುದರ್ಶನ್ ಅಯ್ಯಂಗಾರ್
ಪ್ರೊ. ಗೋಪಾಲ್ ಕೆ. ಕಡೇಕೋಡಿ
ಪ್ರೊ. ಕಲ್ಪನಾ ಕಣ್ಣಬೀರನ್
ಪ್ರೊ. ಕೆ.ಪಿ. ಕಣ್ಣನ್
ಪ್ರೊ. ಸಿ.ಟಿ. ಕುರಿಯನ್
ಪ್ರೊ. ಎಸ್.ಎಲ್. ರಾವ್
ಡಾ. ಎ. ರವೀಂದ್ರ, ಭಾಆಸೇ (ನಿವೃತ್ತ)
ಪ್ರೊ. ಜಿ. ತಿಮ್ಮಯ್ಯ
ಪ್ರೊ. ಎಸ್.ಎಸ್. ಮೀನಾಕ್ಷಿ ಸುಂದರಮ್, ಭಾಆಸೇ (ನಿವೃತ್ತ)

**ಅಧ್ಯಾಪಕ ವೃಂದದ ಪ್ರತಿನಿಧಿಗಳು**
ಪ್ರೊ ಆರ್. ಮುತ್ತರಾಯಪ್ಪ
ಡಾ. ಟಿ.ಎನ್. ಭಟ್

**ಸೇರ್ಪಡೆಗೊಳಿಸಿದ ಸಹ ಸದಸ್ಯರು**
ಪ್ರೊ. ಅನಿತಾ ಕುರುಪ್
ಪ್ರೊ. ಸುಜಾತಾ ಪಟೇಲ್
ಡಾ. ಸಿ. ರಾಮ ಮನೋಹರ್ ರೆಡ್ಡಿ
ಪ್ರೊ. ಬಿ. ಷೇಕ್ ಅಲಿ

**ಐಸಿಎಸ್ಎಸ್ಆರ್ ಪ್ರತಿನಿಧಿ**
ಡಾ. ರಮೇಶ್ ದಧೀಚ್ (ಆಗಸ್ಟ್ ೨೦೧೫ ರವರೆಗೆ)
ಡಾ. ಜಿ.ಎಸ್. ಸಾನ್ (ಸೆಪ್ಟೆಂಬರ್ ೧, ೨೦೧೫ ರಿಂದ)
ಸದಸ್ಯ ಕಾರ್ಯದರ್ಶಿಗಳು (ಅಧಿಕಾರ ನಿಮಿತ್ತ), ಐಸಿಎಸ್ಎಸ್ಆರ್

**ಪದನಿಮಿತ್ತ ಸದಸ್ಯರು**
ಕಾರ್ಯದರ್ಶಿಗಳು/ಹೆಚ್ಚುವರಿ ಕಾರ್ಯದರ್ಶಿಗಳು/
ಜಂಟಿ ಕಾರ್ಯದರ್ಶಿಗಳು
ವಾಣಿಜ್ಯ ವ್ಯವಹಾರಗಳ ಇಲಾಖೆ
ಅರ್ಥ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ

ಕಾರ್ಯದರ್ಶಿಗಳು/ಹೆಚ್ಚುವರಿ ಕಾರ್ಯದರ್ಶಿಗಳು/ ಜಂಟಿ
ಕಾರ್ಯದರ್ಶಿಗಳು
ಶಿಕ್ಷಣ ಇಲಾಖೆ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ,
ಭಾರತ ಸರ್ಕಾರ, ನವದೆಹಲಿ

# ಐಸೆಕ್

ಶ್ರೀ ಐ.ಎಸ್.ಎನ್. ಪ್ರಸಾದ್, ಭಾಆಸೇ
ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ

ಶ್ರೀ ಭರತ್ ಲಾಲ್ ಮೀನಾ, ಭಾಆಸೇ
ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಶ್ರೀಮತಿ ಉಮಾ ಮಹದೇವನ್, ಭಾಆಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನಾ ಮತ್ತು ಸಾಂಖ್ಯಿಕ ಇಲಾಖೆ,
ಕರ್ನಾಟಕ ಸರ್ಕಾರ

ಪ್ರೊ. ಬಿ. ತಿಮ್ಮೇಗೌಡ
ಉಪ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ

ಪ್ರೊ. ಎಂ.ಆರ್. ನಾರಾಯಣ
ನಿರ್ದೇಶಕರು (ಪ್ರಭಾರ), ಐಸೆಕ್
(ಫೆಬ್ರವರಿ ೪, ೨೦೧೫ ರಿಂದ ೧೬ ಆಗಸ್ಟ್ ೨೦೧೫ ರವರೆಗೆ)

ಪ್ರೊ. ಕೆ.ಎಸ್. ಜೇಮ್ಸ್
ನಿರ್ದೇಶಕರು (ಪ್ರಭಾರ), ಐಸೆಕ್
(೧೭ ಆಗಸ್ಟ್ ೨೦೧೫ ರಿಂದ



## ಐಸೆಕ್ ಸಂಘ

ಅಧ್ಯಕ್ಷರು
ಕರ್ನಾಟಕದ ಘನತೆವೆತ್ತ ರಾಜ್ಯಪಾಲರು
**ಶ್ರೀ ವಜೂಭಾಯಿ ರೂಡಾಭಾಯಿ ವಾಲಾ**

ಉಪಾಧ್ಯಕ್ಷರು
**ಡಾ. ಎ. ರವೀಂದ್ರ, ಭಾಆಸೇ (ನಿವೃತ್ತ)**
ಮುಖ್ಯಸ್ಥರು, ಆಡಳಿತ ಮಂಡಳಿ
(ಆಗಸ್ಟ್, ೨೦೧೫ ರಿಂದ)

## ಆಡಳಿತ ಮಂಡಳಿ ೨೦೧೬–೧೮

### ಮುಖ್ಯಸ್ಥರು
ಡಾ. ಎ. ರವೀಂದ್ರ, ಭಾಆಸೇ (ನಿವೃತ್ತ)

### ಸದಸ್ಯರು
ಪ್ರೊ. ಆರ್.ಎಸ್. ದೇಶಪಾಂಡೆ
ಪ್ರೊ.ಕೆ.ಪಿ. ಕಣ್ಣನ್
ಪ್ರೊ. ಡಿ. ನರಸಿಂಹ ರೆಡ್ಡಿ
ಪ್ರೊ.ವಿ.ಕೆ. ನಟರಾಜ್
ಡಾ. ಎ. ರವೀಂದ್ರ, ಭಾಆಸೇ (ನಿವೃತ್ತ)
ಡಾ. ಶಶಾಂಕ ಭಿಡೆ
ಪ್ರೊ.ಕೆ. ಸುಧಾರಾವ್
ಪ್ರೊ. ಸುಜಾತಾ ಪಟೇಲ್
ಪ್ರೊ. ಸುರೀಂದರ್ ಎಸ್. ಜೋಡ್ಕಾ
ಡಾ. ವಲೇರಿಯನ್ ರೋಡ್ರಿಗ್ಸ್

### ಅಧ್ಯಾಪಕ ವೃಂದದ ಪ್ರತಿನಿಧಿಗಳು
ಪ್ರೊ ಡಿ. ರಾಜಶೇಖರ್
ಡಾ. ಸಿ.ಎಂ. ಲಕ್ಷ್ಮಣ

### ಸಹ ಸದಸ್ಯರು
ಪ್ರೊ. ಅಶ್ವಿನಿ ದೇಶಪಾಂಡೆ
ಶ್ರೀ ಎಲ್.ವಿ. ನಾಗರಾಜನ್, ಐಎಎಸ್ (ನಿವೃತ್ತ)
ಪ್ರೊ. ಪದ್ಮಿನಿ ಸ್ವಾಮಿನಾಥನ್
ಡಾ. ಸಿದ್ಧಲಿಂಗಯ್ಯ

### ಐಸಿಎಸ್ಎಸ್ಆರ್ ಪ್ರತಿನಿಧಿ
ಡಾ. ಜಿ.ಎಸ್. ಸಾವನ್
ಸದಸ್ಯ ಕಾರ್ಯದರ್ಶಿಗಳು (ಅಧಿಕಾರ ನಿಮಿತ್ತ)

### ಪದನಿಮಿತ್ತ ಸದಸ್ಯರು
ಕಾರ್ಯದರ್ಶಿಗಳು/ಹೆಚ್ಚುವರಿ ಕಾರ್ಯದರ್ಶಿಗಳು/
ಜಂಟಿ ಕಾರ್ಯದರ್ಶಿಗಳು
ಆರ್ಥಿಕ ವ್ಯವಹಾರಗಳ ಇಲಾಖೆ
ಅರ್ಥ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ

ಕಾರ್ಯದರ್ಶಿಗಳು/ಹೆಚ್ಚುವರಿ ಕಾರ್ಯದರ್ಶಿಗಳು/ ಜಂಟಿ
ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ
ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ,
ಭಾರತ ಸರ್ಕಾರ, ನವದೆಹಲಿ

ಶ್ರೀ ಐ.ಎಸ್.ಎನ್. ಪ್ರಸಾದ್, ಭಾಆಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ

ಶ್ರೀ ಭರತ್ ಲಾಲ್ ಮೀನಾ, ಭಾಆಸೇ
ಕರ್ನಾಟಕ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ

ಶ್ರೀಮತಿ ಉಮಾ ಮಹದೇವನ್, ಭಾಆಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನಾ ಮತ್ತು ಸಾಂಖ್ಯಿಕ ಇಲಾಖೆ,
ಕರ್ನಾಟಕ ಸರ್ಕಾರ

ಪ್ರೊ. ಬಿ. ತಿಮ್ಮೇಗೌಡ
ಉಪ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ

ಪ್ರೊ. ಕೆ.ಎಸ್. ಜೇಮ್ಸ್
(ಪ್ರಭಾರ) ನಿರ್ದೇಶಕರು, ಐಸೆಕ್

# ಐಸೆಕ್

## ೨. ಐಸೆಕ್ ಅಧ್ಯಾಪಕ ವೃಂದ/ಇತರೆ ಸಿಬ್ಬಂದಿ

**ಪ್ರೊ. ಎಂ.ಆರ್. ನಾರಾಯಣ, ಪ್ರಭಾರ ನಿರ್ದೇಶಕರು**
(ಫೆಬ್ರವರಿ ೪, ೨೦೧೫ ರಿಂದ ಆಗಸ್ಟ್ ೧೬, ೨೦೧೫)

**ಪ್ರೊ. ಕೆ.ಎಸ್. ಜೇಮ್ಸ್, ಹಂಗಾಮಿ ನಿರ್ದೇಶಕರು**
(೧೭ನೇ ಆಗಸ್ಟ್ ೨೦೧೫ ರಿಂದ)

### ಪ್ರಾಧ್ಯಾಪಕರು

೧. ಡಾ. ಎಂ.ಆರ್. ನಾರಾಯಣ, ಸಿಇಎಸ್‌ಪಿ
೨. ಡಾ. ಕೆ.ವಿ. ರಾಜು, ಸಿಇಇಎನ್‌ಆರ್ (ಇಒಎಲ್ ಮೇಲೆ)
೩. ಡಾ. ಡಿ. ರಾಜಶೇಖರ್, ಸಿಡಿಡಿ
೪. ಡಾ. ಕೆ.ಎಸ್. ಜೇಮ್ಸ್, ಪಿಆರ್‌ಸಿ (ಇಒಎಲ್ ಮೇಲೆ)
೫. ಡಾ. ಮೀನಾಕ್ಷಿ ರಾಜೀವ್, ಸಿಇಎಸ್‌ಪಿ
೬. ಡಾ. ಎಸ್. ಮಾದೇಶ್ವರನ್, ಸಿಇಎಸ್‌ಪಿ
೭ ಡಾ. ಸುಪ್ರಿಯಾ ರಾಯ್ ಚೌಧುರಿ, ಸಿಪಿಐಜಿಡಿ
೮. ಡಾ. ಪರಮೋದ್ ಕುಮಾರ್, ಎಡಿಆರ್‌ಟಿಸಿ
೯. ಡಾ. ಮನೋಹರ್ ಎಸ್ ಯಾದವ್, ಸಿಎಸ್‌ಎಸ್‌ಸಿಡಿ
೧೦. ಡಾ. ಆರ್ ಮುತ್ತುರಾಯಪ್ಪ, ಪಿಆರ್‌ಸಿ
೧೧. ಡಾ. ಸುನಿಲ್ ನೌಟಿಯಾಲ್, ಸಿಇಇಎನ್‌ಆರ್
೧೨. ಡಾ. ಕಲಾ ಎಸ್ ಶ್ರೀಧರ್, ಸಿಆರ್‌ಯುಎ

### ಪ್ರಾಧ್ಯಾಪಕರು (ಕಿರಿಯ ದರ್ಜೆ)

೧. ಡಾ. ಎನ್. ಶಿವಣ್ಣ, ಸಿಪಿಐಜಿಡಿ

### ಸಹ ಪ್ರಾಧ್ಯಾಪಕರು

೧. ಡಾ. ಆನಂದ್ ಇನ್ಬನಾಥನ್, ಸಿಎಸ್‌ಎಸ್‌ಸಿಡಿ
೨. ಡಾ. ಕೆ. ಗಾಯಿತ್ರಿ, ಸಿಇಎಸ್‌ಪಿ
೩. ಡಾ. ಟಿ.ಎಸ್. ಶ್ಯಾಮಲ, ಪಿಆರ್‌ಸಿ
೪. ಡಾ. ಸಿ.ಎಂ. ಲಕ್ಷ್ಮಣ, ಪಿಆರ್‌ಸಿ
೫. ಡಾ. ಐ. ಮಾರುತಿ, ಎಡಿಆರ್‌ಟಿಸಿ
೬. ಡಾ. ವೀರಶೇಖರಪ್ಪ, ಸಿಇಎಸ್‌ಪಿ (ನಿವೃತ್ತ)
೭ ಡಾ. ಕೃಷ್ಣ ರಾಜ್, ಸಿಇಎಸ್‌ಪಿ
೮. ಡಾ. ಎಂ. ದೇವೇಂದ್ರ ಬಾಬು, ಸಿಡಿಡಿ
೯. ಡಾ. ಏಳುಮಲೈ ಕಣ್ಣನ್, ಎಡಿಆರ್‌ಟಿಸಿ (ಇಒಎಲ್ ಮೇಲೆ)
೧೦. ಡಾ. ಕೆ.ಎಸ್. ಉಮಾಮಣಿ, ಸಿಎಚ್‌ಆರ್‌ಡಿ
೧೧. ಡಾ. ರಾಮಪ್ಪ, ಕೆ.ಬಿ. ಎಡಿಆರ್‌ಟಿಸಿ
೧೨. ಡಾ. ಎಸ್. ಮಾನಸಿ, ಸಿಆರ್‌ಯುಎ
೧೩. ಡಾ. ಅನಿಲ್ ಕುಮಾರ್, ವಿ. ಸಿಪಿಐಜಿಡಿ

# ಐಸೆಕ್



**ಸಹಾಯಕ ಪ್ರಾಧ್ಯಾಪಕರು**

೧. ಶ್ರೀಮತಿ ಬಿ.ಪಿ. ವಾಣಿ, ಸಿಇಎಸ್‌ಪಿ
೨. ಡಾ. ಟಿ.ಎನ್. ಭಟ್, ಪಿಆರ್‌ಸಿ (ನಿವೃತ್ತ)
೩. ಡಾ. ಲೇಖಾ ಸುಬ್ಬಯ್ಯ, ಪಿಆರ್‌ಸಿ
೪. ಡಾ. ಎಂ. ಲಿಂಗರಾಜು, ಸಿಎಚ್‌ಆರ್‌ಡಿ
೫. ಡಾ. ಕೋಮೊಲ್ ಸಿಂಗಾ, ಎಡಿಆರ್‌ಟಿಸಿ (ರಾಜೀನಾಮೆ)
೬. ಡಾ. ಮಾರ್ಚಂಗ್ ರಿಮೀಂಗಂ, ಸಿಎಸ್‌ಎಸ್‌ಸಿಡಿ
೭. ಡಾ. ಸೋಬಿನ್ ಜಾರ್ಜ್, ಸಿಎಸ್‌ಎಸ್‌ಸಿಡಿ
೮. ಡಾ. ಎ.ವಿ. ಮಂಜುನಾಥ, ಎಡಿಆರ್‌ಟಿಸಿ
೯. ಡಾ. ಮಾಲಿನಿ ಎಲ್. ತಂತ್ರಿ, ಸಿಇಎಸ್‌ಪಿ
೧೦. ಡಾ. ಎಂ. ಬಾಲಸುಬ್ರಮಣಿಯನ್, ಸಿಇಇಎನ್‌ಆರ್
೧೧. ಡಾ. ಬರುನ್ ದೇಬ್ ಪಾಲ್, ಸಿಇಎಸ್‌ಪಿ
೧೨. ಡಾ. ಇಂದ್ರಜಿತ್ ಬೈರಾಗ್ಯ, ಸಿಹೆಚ್‌ಆರ್‌ಡಿ
೧೩. ಡಾ. ಚನ್ನಮ್ಮ ಕಂಬಾರ, ಸಿಆರ್‌ಯುಎ

## ವಿಶಿಷ್ಟ ಪೀಠ – ಪ್ರಾಧ್ಯಾಪಕರು,<br>ಗೌರವ ಪ್ರಾಧ್ಯಾಪಕರು,<br>ರಾಷ್ಟ್ರೀಯ ಮತ್ತು ಹಿರಿಯ ಸಂಶೋಧನಾ ಸಹವರ್ತಿಗಳು

**ಡಾ. ವಿ.ಕೆ.ಆರ್.ವಿ. ರಾವ್ ಪೀಠ ಪ್ರಾಧ್ಯಾಪಕರು**

ಪ್ರೊ. ಮೈಕೇಲ್ ಗೋಲ್ಡ್‌ಮನ್

**ರಾಷ್ಟ್ರೀಯ ಪೀಠ ಪ್ರಾಧ್ಯಾಪಕರು**

ಪ್ರೊ. ಪಿ.ಜಿ. ಚೆಂಗಪ್ಪ

**ಗೌರವ ಸಂದರ್ಶಕ ಪ್ರಾಧ್ಯಾಪಕರು**

ಡಾ. ಪಿ. ಪದ್ಮನಾಭ
ಪ್ರೊ. ಎಂ.ಎಸ್. ಸ್ವಾಮಿನಾಥನ್
ಡಾ. ಆರ್. ಭಾರದ್ವಾಜ್
ಪ್ರೊ. ಜಿ. ತಿಮ್ಮಯ್ಯ
ಡಾ. ಪಿ.ವಿ. ಶೆಣೈ
ಶ್ರೀ ಬಿ.ಕೆ. ಭಟ್ಟಾಚಾರ್ಯ, ಭಾಆಸೇ (ನಿವೃತ್ತ)
ಪ್ರೊ. ಎಂ.ವಿ. ನಾಡಕರ್ಣಿ
ಪ್ರೊ. ರವಿ ಕನ್ಬೂರ್
ಪ್ರೊ. ವಿ.ಆರ್. ಪಂಚಮುಖಿ
ಪ್ರೊ. ಅಬ್ದುಲ್ ಅಜೀಜ್
ಪ್ರೊ. ಕೆ. ಶ್ರೀನಿವಾಸನ್
ಪ್ರೊ. ಎಸ್.ಎಸ್. ಮೀನಾಕ್ಷಿ ಸುಂದರಂ, ಭಾಆಸೇ (ನಿವೃತ್ತ)
ಪ್ರೊ. ಸಿ.ಎಸ್. ನಾಗರಾಜು
ಡಾ. ಮೈತ್ರೇಯಿ ಕೃಷ್ಣರಾಜ್
ಪ್ರೊ. ಬಾಬು ನಹತಾ
ಪ್ರೊ. ಆರ್.ಎಸ್. ದೇಶಪಾಂಡೆ

# ಐಸೆಕ್

**ಸಂದರ್ಶಕ ಪ್ರಾಧ್ಯಾಪಕರು**

ಡಾ. ಗಿರಿಧಾರಿ ಲಾಲ್ ಪಂಡಿತ್
ಶ್ರೀ ಕೆ. ಜೈರಾಜ್, ಐಎಎಸ್ (ನಿವೃತ್ತ)
ಡಾ. ಎಸ್.ಎಂ. ಜಾಮದಾರ್, ಐಎಎಸ್ (ನಿವೃತ್ತ)

**ಐಸಿಎಸ್ಎಸ್ಆರ್ ರಾಷ್ಟ್ರೀಯ ಸಂಶೋಧನಾ ಸಹವರ್ತಿಗಳು**

ಪ್ರೊ. ಆರ್.ಎಸ್. ದೇಶಪಾಂಡೆ

**ಐಸಿಎಸ್ಎಸ್ಆರ್ ಹಿರಿಯ ಸಂಶೋಧನಾ ಸಹವರ್ತಿಗಳು**

ಡಾ. ಎಂ. ನಾಗೇಶ್ವರ ರಾವ್
ಡಾ. ಆರ್.ಜಿ. ದೇಸಾಯಿ
ಡಾ. ಪಿ.ಜೆ. ದಿಲೀಪ್ ಕುಮಾರ್
ಡಾ. ಎಂ.ಡಿ. ಉಷಾದೇವಿ
ಡಾ. ಪಿ. ತಿಪ್ಪಯ್ಯ
ಡಾ. ಕೃಷ್ಣ ನಂಬಿಯಾರ್
ಡಾ. ಸೈಯದ್ ಅಜ್ಮಲ್ ಪಾಷಾ
ಡಾ. ಚಂದ್ರಶೇಖರ ಬಿ. ದಾಮ್ಲೆ



# ಬೋಧಕೇತರ ಸಿಬ್ಬಂದಿ

## ಆಡಳಿತ ಸಿಬ್ಬಂದಿ

ಗ್ರೂಪ್ ಕ್ಯಾಪ್ಟನ್ (ನಿವೃತ್ತ) ಶ್ರೀ ಬಿ.ಕೆ. ದಾಸ್, ಕುಲಸಚಿವರು
(ಆಗಸ್ಟ್ ೧, ೨೦೧೪ ರಿಂದ ಸೆಪ್ಟೆಂಬರ್ ೧೯, ೨೦೧೫ರ ವರೆಗೆ)
ಪ್ರೊ. ಮನೋಹರ್ ಎಸ್. ಯಾದವ್, ಕುಲಸಚಿವರು
(ಸೆಪ್ಟೆಂಬರ್ ೨೧, ೨೦೧೫ ರಿಂದ)
ಶ್ರೀಮತಿ ಶಾರದ, ಕೆ., ಲೆಕ್ಕಾಧಿಕಾರಿ
ಶ್ರೀ ಎ.ಎನ್. ರವಿಶಂಕರ್, ಸಹಾಯಕ ಕುಲಸಚಿವರು
ಶ್ರೀ ಬಿ.ಕೆ. ಜಗದೀಶ್, ಸಹಾಯಕ ಕುಲಸಚಿವರು
ಶ್ರೀ ಎಂ.ಕೆ. ಮೋಹನ್ ಕುಮಾರ್, ಸಹಾಯಕ ಕುಲಸಚಿವರು
ಶ್ರೀಮತಿ ಎಸ್. ಪದ್ಮಾವತಿ, ಸಹಾಯಕ ಕುಲಸಚಿವರು

## ಪ್ರಕಟಣೆಗಳು

ಶ್ರೀ ಇ. ವಿಷ್ಣುವರ್ಧನ್ ರೆಡ್ಡಿ, ಸಹ ಸಂಪಾದಕರು

## ಗ್ರಂಥಾಲಯ ಸಿಬ್ಬಂದಿ

ಶ್ರೀ ಬಿ.ಬಿ. ಚಾಂದ್, ಉಪಗ್ರಂಥಪಾಲಕರು
ಶ್ರೀಮತಿ ಕೆ. ಲೀಲ, ಹಿರಿಯ ಸಹಾಯಕ ಗ್ರಂಥಪಾಲಕರು (ನಿವೃತ್ತ)
ಶ್ರೀ ಪ್ರದೀಪ್ ವಿ. ಹೆಗ್ಗಡೆ, ಸಹಾಯಕ ಗ್ರಂಥಪಾಲಕರು (ಸಂಗ್ರಹಣೆ)
ಶ್ರೀ ಶ್ರೀನಿವಾಸ ಕೆ., ದಾಖಲೆಕಾರರು
ಶ್ರೀ ಶಿವಕುಮಾರ ಆರ್.ಎಂ., ಡಿಜಿಟಲ್ ಗ್ರಂಥಾಲಯ ವಿಶ್ಲೇಷಕರು
ಶ್ರೀ ಕೃಷ್ಣಪ್ಪ ಎಸ್, ಆಯ್ಕೆ ಶ್ರೇಣಿ ಸಹಾಯಕರು (ಗ್ರಂಥಾಲಯ)
ಶ್ರೀ ಸಿದ್ಧರಾಜು, ಎಂ.ಎಸ್, ಗಂಥಾಲಯ ಗುಮಾಸ್ತರು

## ತಾಂತ್ರಿಕ ಸಿಬ್ಬಂದಿ

ಶ್ರೀ ಎ. ಸತೀಶ್ ಕಾಮತ್, ಸಿಸ್ಟಂ ವಿಶ್ಲೇಷಕರು
ಡಾ. ಪಿ. ಪ್ರಭುಸ್ವಾಮಿ, ಸಂಶೋಧನಾ ವಿಶ್ಲೇಷಕರು
ಶ್ರೀ ಸಿ. ಯೋಗಾನಂದ, ಸಂಶೋಧನಾ ವಿಶ್ಲೇಷಕರು
ಶ್ರೀ ಎಂ. ಕೂಸಣ್ಣ, ತಾಂತ್ರಿಕ ಸಹಾಯಕರು
ಶ್ರೀ ಆರ್. ಕೃಷ್ಣ ಚಂದ್ರನ್, ತಾಂತ್ರಿಕ ಸಹಾಯಕರು
ಶ್ರೀ ಖಲೀಲ್ ಎಂ. ಶಹಾ, ತಾಂತ್ರಿಕ ಸಹಾಯಕರು
ಶ್ರೀ ವಿನೋಥ್ ಚಂದ್ರ ರಾಯ್, ಹಿರಿಯ ಸಹಾಯಕರು (ಸಿಸ್ಟಂಸ್)

## ಆಸ್ತಿ/ಸ್ವತ್ತು ನಿರ್ವಾಹಕರು

ಶ್ರೀ ಆರ್.ಜಿ.ಬಿ.ಪಿ. ನಾಯ್ಡು

# ಐಸೆಕ್

## ಹಿರಿಯ ಆಪ್ತ ಸಹಾಯಕರು
ಶ್ರೀ ಎನ್.ಎಸ್. ವಾಸುಕಿ (ನಿವೃತ್ತ)
ಶ್ರೀ ವಿ.ಎನ್. ವೆಂಕಟೇಶ್
ಶ್ರೀ ಎಸ್. ಅರುಣ್ ಕುಮಾರ್
ಶ್ರೀಮತಿ ಬಿ. ಅಖಿಲ
ಶ್ರೀ ಚಂದ್ರಶೇಖರ ಬಿ.ಎಚ್.
ಶ್ರೀಮತಿ ಎ. ಲತ

## ಆಯ್ಕೆ ಶ್ರೇಣಿ ಸಹಾಯಕರು
ಶ್ರೀಮತಿ ಎಂ.ಎನ್. ಶಾಂತಕುಮಾರಿ
ಶ್ರೀ ಟಿ. ಅಮರ್‌ನಾಥ್
ಶ್ರೀಮತಿ ಎಂ. ಹೇಮಲತ
ಶ್ರೀಮತಿ ಆರ್. ಶಿಲ್ಪ
ಶ್ರೀಮತಿ ಕೆ. ಸುಮ
ಶ್ರೀಮತಿ ಜೆ. ವಿಮಲ
ಶ್ರೀಮತಿ ಮೋಹನದೇವಿ, ಜೆ
ಶ್ರೀಮತಿ ಶೈಲಜ ಪ್ರಭಾಕರ್

## ಹಿರಿಯ ಡಿಟಿಪಿ ಸಹಾಯಕರು
ಶ್ರೀಮತಿ ಪಿ.ಎಂ. ಆರತಿ

## ಹಿರಿಯ ಸಹಾಯಕರು
ಶ್ರೀಮತಿ ಕೆ.ಎಸ್. ಶರ್ಮಿಳ
ಶ್ರೀ ವಿಜಯ್ ಎನ್. ಮಾಲವೆ
ಶ್ರೀಮತಿ ಸುಧಾ ಎಸ್.
ಶ್ರೀ ಕಾರ್ತಿಕ್ ಟಿ.ಎಂ.ವೈ.
ಶ್ರೀಮತಿ ಶ್ವೇತಾ ಎಂ
ಶ್ರೀಮತಿ ಜ್ಯೋತಿ ಎ.ಚ್.ಆರ್
ಶ್ರೀಮತಿ ಮೇಘನಾ ಬಿ. ಕೇಸರಿ
ಶ್ರೀಮತಿ ಆರ್. ರಮ್ಯಾ
ಶ್ರೀಮತಿ ಸಿ.ಜಿ. ಚೇತನ
ಶ್ರೀಮತಿ ಅರ್ಚನ ವೈ.

## ಸಹಾಯಕರು ದರ್ಜೆ I
ಶ್ರೀಮತಿ ಎಂ.ಎಸ್. ನಾಗವಲ್ಲಿ (ನಿವೃತ್ತ)
ಶ್ರೀ ಟಿ.ಎಲ್.ಎನ್. ಸ್ವಾಮಿ
ಶ್ರೀ ಎನ್. ಭೂಪತಿ
ಶ್ರೀ ಎಸ್.ಎ. ಸುದರ್ಶನ್ (ನಿವೃತ್ತ)

## ರವಾನೆ ಗುಮಾಸ್ತ
ಶ್ರೀ ಬಿ. ಸುರೇಶ

# ಬೆಂಬಲ ಸಿಬ್ಬಂದಿ

## ವಾಹನ ಚಾಲಕರು
ಶ್ರೀ ಜಿ. ಶ್ರೀನಿವಾಸಮೂರ್ತಿ
ಶ್ರೀ ವೆಂಕಟಹನುಮಯ್ಯ
ಶ್ರೀ ಕೆ.ಎಸ್. ಪ್ರಭು

## ಎಲೆಕ್ಟ್ರೀಷಿಯನ್ (ವಿದ್ಯುತ್ ನಿರ್ವಾಹಕರು)
ಶ್ರೀ ಆರ್. ವಸಂತ್ ಕುಮಾರ್

## ಸೇವಕರು/ಪರಿಚಾರಕರು
ಶ್ರೀ ಎಸ್. ರಾಜಣ್ಣ (ನಿವೃತ್ತ)
ಶ್ರೀ ವಿ. ದೇವರಾಜ್
ಶ್ರೀ ಮಹದೇವ ಎಂ.
ಶ್ರೀ ಮಲ್ಲಯ್ಯ
ಶ್ರೀ ವೇಣುಗೋಪಾಲ್
ಶ್ರೀ ರುದ್ರೇಶ ಹೆಚ್.
ಶ್ರೀ ಕುಮಾರ್ ಎಲ್.
ಶ್ರೀ ಮುತ್ತುರಾಜ

## ಸಂದೇಶವಾಹಕರು/ತೋಟದ ಮಾಲಿಗಳು/ ಗುಡಿಸುವವರು/ಸೇವಕರು
ಶ್ರೀ ನರಸಿಂಹಯ್ಯ
ಶ್ರೀ ಶ್ರೀನಿವಾಸ ಎಂ.
ಶ್ರೀ ರೇಣುಕ ಆರ್.
ಶ್ರೀ ಶೇಖರ ಕೆ.ಸಿ
ಶ್ರೀ ನಟರಾಜ
ಶ್ರೀಮತಿ ರಮಾಮಣಿ, ಎಂ.ಬಿ.
ಶ್ರೀ ಎ. ರಾಜ
ಶ್ರೀಮತಿ ಶೋಭಾ ಟಿ.
ಶ್ರೀ ಸುಧಾಕರ ಪಿ.ಆರ್.



# ೩. ಅಧ್ಯಯನ ಕೇಂದ್ರಗಳು

ಐಸೆಕ್‌ನ ಪ್ರಾರಂಭಿಕ "ಘಟಕ"ಗಳನ್ನು "ಕೇಂದ್ರ"ಗಳನ್ನಾಗಿ ಪುನರ್‌ರಚಿಸಲಾಗಿದೆ. ವಿವಿಧ ವಿಷಯಗಳ ಅಧ್ಯಯನವನ್ನು ಬಲಪಡಿಸಲು ಹಾಗೂ ಕಾರ್ಯ ಸ್ವಾಯತ್ತತೆಯನ್ನು ಬಲಪಡಿಸುವ ಸಲುವಾಗಿ ಸಂಸ್ಥೆಯ ಮುನ್ನೋಟ ೨೦೧೦ರಲ್ಲಿ ವಿಶದ ಪಡಿಸಿರುವಂತೆ ಈ ಪುನರ್‌ರಚನೆಯನ್ನು ಮಾಡಲಾಗಿದೆ. ನಗರ ವ್ಯವಹಾರಗಳ ಸಂಶೋಧನಾ ಕೇಂದ್ರವನ್ನು (ಸಿಆರ್‌ಯುಎ) ೨೦೧೩-೧೪ರಲ್ಲಿ ಪ್ರಾರಂಭಿಸುವ ಮೂಲಕ ಐಸೆಕ್ ಈಗ ಒಂಭತ್ತು ಕೇಂದ್ರಗಳನ್ನು ಹೊಂದಿದೆ. ಪ್ರತಿಯೊಂದು ಕೇಂದ್ರದ ೨೦೧೪-೧೫ ಸಾಲಿನ ಶೈಕ್ಷಣಿಕ ವರ್ಷದ ವೃತ್ತಿಪರ ಸಾಧನೆಗಳು, ಚಟುವಟಿಕೆಗಳು ಹಾಗೂ ಒತ್ತು ನೀಡಲಾದ ಸಂಶೋಧನಾ ವಿಷಯಗಳು, ಅದರಲ್ಲೂ ಮುಖ್ಯವಾಗಿ ಮಧ್ಯಮಾವಧಿಯ ಸಂಶೋಧನೆಯ ಯಥಾವತ್ತಾದ ಚಿತ್ರಣವನ್ನು ಕೆಳಕಂಡಂತೆ ನಿರೂಪಿಸಲಾಗಿದೆ. ಈ ವಾರ್ಷಿಕ ವರದಿಯಲ್ಲಿ ಕೇಂದ್ರಗಳ ಸಾಧನೆಗಳು ಮತ್ತು ಚಟುವಟಿಕೆಗಳನ್ನು ಸೂಕ್ತವಾದ ಇತರ ಭಾಗಗಳಲ್ಲೂ ನೀಡಲಾಗಿದೆ.

## ೧. ಕೃಷಿ ಅಭಿವೃದ್ಧಿ ಮತ್ತು ಗ್ರಾಮೀಣ ಪರಿವರ್ತನಾ ಕೇಂದ್ರ (ಎಡಿಆರ್‌ಟಿಸಿ)

ಕೃಷಿ ಅಭಿವೃದ್ಧಿ ಮತ್ತು ಗ್ರಾಮೀಣ ಪರಿವರ್ತನಾ ಕೇಂದ್ರವನ್ನು (ಎಡಿಆರ್‌ಟಿಸಿ) ಭಾರತ ಸರ್ಕಾರದ ಕೃಷಿ ಸಚಿವಾಲಯಕ್ಕೆ ನೀತಿ ನಿರೂಪಣೆಯ ಬಗ್ಗೆ ಅಧ್ಯಯನಗಳಾಧಾರಿತ ಸಲಹೆಗಳನ್ನು ಸತತವಾಗಿ ಒದಗಿಸುವ ಉದ್ದೇಶದಿಂದ ೧೯೭೨ರಲ್ಲಿ ಸ್ಥಾಪಿಸಲಾಯಿತು. ಇದಕ್ಕನುಗುಣವಾಗಿ ಈ ಕೇಂದ್ರವು ಸಚಿವಾಲಯದ ಸಂಶೋಧನಾ ಕಾರ್ಯಸೂಚಿಗೆ ಬಹುಪಾಲು ಹೊಂದಿಕೊಂಡಿರುತ್ತದೆ. ಕೃಷಿ ಸಚಿವಾಲಯದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಒಂದು ಭಾಗವಾಗಿ ಈ ಕೇಂದ್ರವಿದ್ದು, ಆ ಕಾರಣ ವಿವಿಧ ಮುಖ್ಯ ನೀತಿ-ನಿರೂಪಣಾ ಅಂಶಗಳ ಬಗ್ಗೆ ಸಾಂದರ್ಭಿಕವಾಗಿ ಸಲಹೆಗಳನ್ನು ನೀಡುತ್ತಿರಬೇಕಾಗುತ್ತದೆ. ಹೀಗಿದ್ದರೂ ಸಹ, ಸಂಸ್ಥೆಯ ಬಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ವಿಶಾಲ ವ್ಯಾಪ್ತಿಯ ದೃಷ್ಟಿಕೋನದಿಂದ ಎಡಿಆರ್‌ಟಿಸಿ ಅಧ್ಯಾಪನ ಸಿಬ್ಬಂದಿಯು ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ವಿವಿಧ ಅಂಶಗಳ ಬಗ್ಗೆಯೂ ಗಮನ ಹರಿಸುತ್ತಿದೆ. ಈ ಕೇಂದ್ರವು ತನ್ನ ಸಂಶೋಧನಾ ವಿಷಯ ವ್ಯಾಪ್ತಿಯನ್ನು ರಾಷ್ಟ್ರಮಟ್ಟಕ್ಕೆ ವಿಸ್ತರಿಸಿಕೊಳ್ಳುತ್ತಿದ್ದರೂ ಸಹ, ಕರ್ನಾಟಕ ರಾಜ್ಯಕ್ಕಾಗಿ ತನ್ನ ಬದ್ಧತೆಯನ್ನು ಮುಂದುವರಿಸಿಕೊಂಡು ಹೋಗುತ್ತಿದೆ.

### ಸಾಧನೆಗಳು

ಈ ಕೇಂದ್ರವು ೨೦೧೪-೧೫ನೇ ಸಾಲಿನಲ್ಲಿ ವ್ಯಾಪಕ ಶ್ರೇಣಿಯ ಉದ್ದೇಶವನ್ನು ಹೊಂದಿದ್ದ ಬಹಳಷ್ಟು ಅಧ್ಯಯನಗಳನ್ನು ಪೂರ್ಣಗೊಳಿಸಿದೆ. ಅವುಗಳೆಂದರೆ: ಕರ್ನಾಟಕದಲ್ಲಿ ಪರಿಕರಗಳ ಬಳಕೆ, ಉತ್ಪಾದನೆ, ಉತ್ಪಾದಕತೆ ಹಾಗೂ ಆದಾಯದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನವು (ಎನ್‌ಎಫ್‌ಎಸ್‌ಎಂ) ಬೀರಿರುವ ಪ್ರಭಾವ; ಮಣ್ಣು ಪರೀಕ್ಷೆಯ ಆಧಾರದ ಮೇಲೆ ರಸಗೊಬ್ಬರಗಳನ್ನು ಶಿಫಾರಿತ ಪ್ರಮಾಣದಲ್ಲಿ ಬಳಸುವುದನ್ನು ಕರ್ನಾಟಕದ ರೈತರು ಅಳವಡಿಸಿಕೊಂಡಿರುವ ಬಗ್ಗೆ ಅಧ್ಯಯನ; ರೈತರು ಗಳಿಸುವ ಆದಾಯದ ಬೆಲೆ, ಸಗಟು ಬೆಲೆ, ಚಿಲ್ಲರೆ ಮಾರಾಟ ಬೆಲೆ, ಹಾಗೂ ರಫ್ತಿನ ಬೆಲೆಯ ನಡುವಿನ ಸಂಬಂಧವನ್ನು ಕಂಡುಹಿಡಿಯುವ ಅಧ್ಯಯನ; ಕರ್ನಾಟಕ ರಾಜ್ಯದ ಸಾಕ್ಷರತಾ ಅಭಿಯಾನ ಪ್ರಾಧಿಕಾರದ ಕಾರ್ಯಕ್ರಮದ ಮೌಲ್ಯಮಾಪನ; ಈಶಾನ್ಯ ಭಾರತದಲ್ಲಿ ಕೃಷಿಯ ಕಾರ್ಯಕ್ಷಮತೆ ಹಾಗೂ ಸಾಂಸ್ಥಿಕ ಸ್ವರೂಪದ ಬಗ್ಗೆ ಅಧ್ಯಯನ; ಭಾರತದ ಮುಖ್ಯ ಬೆಳೆಗಳಲ್ಲಿನ ಕಟಾವು ಪೂರ್ವದ ಹಾಗೂ ಕಟಾವು ನಂತರದ ನಷ್ಟಗಳನ್ನು ಅಂದಾಜು ಮಾಡುವ ಅಧ್ಯಯನ; ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯು ಬೀರಿರುವ ಪ್ರಭಾವದ ಮೌಲ್ಯಮಾಪನ – ವಲಯವಾರು ಹಾಗೂ ರಾಜ್ಯಮಟ್ಟದ ವರದಿಗಳು; ಹಾಗೂ ಈ ರೀತಿಯ ಹಲವಾರು ಅಧ್ಯಯನಗಳು. ಈ ಕೇಂದ್ರದ ಅಧ್ಯಾಪಕ ಸಿಬ್ಬಂದಿಯು ಪ್ರಸಕ್ತ ವಿಷಯಗಳ ಬಗ್ಗೆ ಅನೇಕ ಸಂವಾದಗಳಲ್ಲಿ ಭಾಗವಹಿಸಿದ್ದಾರೆ ಹಾಗೂ ವಿವಿಧ ಮಟ್ಟಗಳಲ್ಲಿ ಕಾರ್ಯಾಗಾರಗಳು ಮತ್ತು ಸಮಾವೇಶಗಳನ್ನೂ ಸಹ ಏರ್ಪಡಿಸಿದ್ದಾರೆ. ಈ ಅಧ್ಯಾಪಕ ಸಿಬ್ಬಂದಿಯು ಕೃಷಿ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾಲಯಗಳು ಹಾಗೂ ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಏರ್ಪಡಿಸಿದ್ದ ವಿಚಾರ ಸಂಕಿರಣಗಳು ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸಿ ತಮ್ಮ ಪಾಂಡಿತ್ಯವನ್ನು ಇತರರೊಡನೆ ಹಂಚಿಕೊಂಡಿದ್ದಾರೆ. ಅವರುಗಳು ವಿವಿಧ ತರಬೇತಿ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿಸಿರುವುದಲ್ಲದೆ ಅನೇಕ ಪುಸ್ತಕಗಳು, ನೀಳ ಲೇಖನಗಳು, ನಿಯತಕಾಲಿಕೆಗಳಲ್ಲಿನ ಲೇಖನಗಳು, ಕಾರ್ಯನಿರತ ಸಂಶೋಧನಾ ಲೇಖನಗಳು, ಕಾರ್ಯನೀತಿ ಸಲಹೆಗಳು ಇತ್ಯಾದಿಗಳನ್ನೂ ಬರೆದಿದ್ದಾರೆ. ಈ ಕೇಂದ್ರವು ಪ್ರಸ್ತುತ ಸಾಲಿನಲ್ಲಿ ಆರು ಯೋಜನೆಗಳನ್ನು ಪೂರ್ಣಗೊಳಿಸಿದೆ.

ಚಾಲ್ತಿಯಲ್ಲಿರುವ ಯೋಜನೆಗಳ ಪೈಕಿ ಮುಖ್ಯವಾದವುಗಳೆಂದರೆ: ಕರ್ನಾಟಕದಲ್ಲಿ ಮಣ್ಣು ಆರೋಗ್ಯ, ಉತ್ಪಾದನೆ ಮತ್ತು ಉತ್ಪಾದಕತೆಗಳ ಮೇಲೆ ಬೇವು ಲೇಪಿತ ಯೂರಿಯಾದ ಪ್ರಭಾವ; ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳು; ಸ್ಥಳೀಯ ಹಾಗೂ ಆಮದಾದ ತಾಳೆ ಎಣ್ಣೆ ಸಸಿಗಳ ಕಾರ್ಯಕ್ಷಮತೆ. ಈ ಯೋಜನೆಗಳಿಗೆ ಕೃಷಿ ಮತ್ತು ಸಹಕಾರ ಸಚಿವಾಲಯವು ಧನ ಸಹಾಯ ನೀಡಿದೆ. ಇತರ ಸಂಸ್ಥೆಗಳು ಧನ ಸಹಾಯ ನೀಡಿರುವ ಯೋಜನೆಗಳೆಂದರೆ: ಮಾಹಿತಿ, ಮಾರುಕಟ್ಟೆ ಸ್ಥಾಪನೆ ಮತ್ತು ಮತ್ತು ಕೃಷಿ ಬೆಳವಣಿಗೆ; ಭಾರತಕ್ಕೆ ಭತ್ತದ ಕಾರ್ಯತಂತ್ರ; ಭಾರತದಲ್ಲಿ ಆಹಾರ ಭದ್ರತೆ: ಹವಾಮಾನ ಬದಲಾವಣೆ, ಅರ್ಥವ್ಯವಸ್ಥೆ, ರಾಜಕೀಯ ಹಾಗೂ ವ್ಯಾಪಾರ ವಹಿವಾಟುಗಳ ನಡುವಿನ ಪರಸ್ಪರಾಭಿಮುಖಿ ಸಂವಹನೆ; ಭಾರತದಲ್ಲಿ ಆಹಾರ ಬಳಕೆ ರೀತಿಯಲ್ಲಿ ಆಗುತ್ತಿರುವ ಬದಲಾವಣೆ; ಉತ್ಪಾದನೆ ಮತ್ತು ಮಾರಾಟದ ನಡುವಣ ಸಂಪರ್ಕದ ಮೂಲಕ ಅಧಿಕ ಮೌಲ್ಯದ ಉತ್ಪನ್ನಗಳತ್ತ ವಿಕೇಂದ್ರೀಕರಿಸಲು ಇರುವ ಅವಕಾಶಗಳು; ಸುಸ್ಥಿರ ಸಂರಕ್ಷಣೆಗಾಗಿ ಕೃಷಿ ಹಾಗೂ ಮೌಲ್ಯವರ್ಧನಾ ಸರಣಿಯತ್ತ ಒಂದು ದೃಷ್ಟಿಕೋನ; ಸಮಗ್ರ ಅಭಿವೃದ್ಧಿ ಮತ್ತು ಜೀವನೋಪಾಯ ವೃದ್ಧಿ: ಭಾರತದಲ್ಲಿ ಚಿಟ್ಟೆ ಕೃಷಿಯ ಅನ್ವಯಿಕತೆ; ಜೀವಂತ ಸೂಕ್ಷ್ಮಾಣು (ಎಲ್ಎಂಒ)ಗಳ ಸಾಮಾಜಿಕ–ಆರ್ಥಿಕ ಪ್ರಭಾವಕ್ಕೆ ಬೆಲೆಕಟ್ಟುವಿಕೆ; ಕರ್ನಾಟಕದಲ್ಲಿನ ದಲಿತ ಕುಟುಂಬಗಳ ಸಾಮಾಜಿಕ–ಆರ್ಥಿಕ ಸಾಮರ್ಥ್ಯದ ಬೆಲೆಕಟ್ಟುವಿಕೆ; ಕರ್ನಾಟಕದಲ್ಲಿ ಭೂ ಚೇತನ ಕಾರ್ಯಕ್ರಮದ ಪ್ರಭಾವದ ಬೆಲೆ ಕಟ್ಟುವಿಕೆ; ಹಾಗೂ ಭಾರತ–ಕೆನಡಾ ದ್ವಿದಳಧಾನ್ಯಗಳ ವ್ಯಾಪಾರ ವಹಿವಾಟು: ಅವಕಾಶಗಳು ಮತ್ತು ಸವಾಲುಗಳು (ಕೆನಡಾದ ಶಾಸ್ತ್ರಿ ಇಂಡೋ ಕೆನಡಿಯನ್ ಸಂಸ್ಥೆ (ಎಸ್ಐಸಿಐ)ಯು ಧನ ಸಹಾಯ ಮಾಡಿರುವ).

ಈ ಕೇಂದ್ರದ ಅಧ್ಯಾಪಕ ಸಿಬ್ಬಂದಿಯು ಪ್ರಸ್ತುತ ಸಾಲಿನಲ್ಲಿ ಆರು ಪುಸ್ತಕಗಳನ್ನು ಬರೆದಿದ್ದಾರೆ. ಅವೆಂದರೆ: ಎಂಜಿಎನ್ಆರ್ಇಜಿಎ. ಉದ್ಯೋಗ, ವೇತನ ಹಾಗೂ ಗ್ರಾಮೀಣ ಭಾರತದಲ್ಲಿನ ವಲಸೆ (ರೂಟ್ಲೆಡ್ಜ್–ಟೇಲರ್ ಹಾಗೂ ಫ್ರಾನ್ಸಿಸ್, ಲಂಡನ್ ಮತ್ತು ನ್ಯೂಯಾರ್ಕ್); ಭಾರತೀಯ ಕೃಷಿ: ಕಾರ್ಯಕ್ಷಮತೆ, ಬೆಳವಣಿಗೆ ಮತ್ತು ಸವಾಲುಗಳು – ಪ್ರಾಧ್ಯಾಪಕ ರಮೇಶ್ ಶರ್ಮರವರ ಗೌರವಾರ್ಥ ಬರೆದ ಪ್ರಬಂಧಗಳು (ಸಂಪಾದಿತ), (ರೂಟ್ಲೆಡ್ಜ್ – ಟೇಲರ್ ಹಾಗೂ ಫ್ರಾನ್ಸಿಸ್, ಲಂಡನ್ ಮತ್ತು ನ್ಯೂಯಾರ್ಕ್); ಭಾರತೀಯ ಕೃಷಿಯ ಬದಲಾಗುತ್ತಿರುವ ನೋಟ (ಸಂಪಾದಿತ) (ರೂಟ್ಲೆಡ್ಜ್ –ಟೇಲರ್ ಹಾಗೂ ಫ್ರಾನ್ಸಿಸ್); ಆರ್ಥಿಕ ಬೆಳವಣಿಗೆ, ವ್ಯಾಪಾರ ವಹಿವಾಟು ಹಾಗೂ ಬಡತನ: ಭಾರತ–ಚೀನಾಗಳ ನಡುವಣ ಒಂದು ತುಲನಾತ್ಮಕ ವಿಶ್ಲೇಷಣೆ (ಸಂಪಾದಿತ), (ಕೊನಾರ್ಕ್ ಪ್ರಕಾಶಕರು, ನವದೆಹಲಿ); ಕೃಷಿ ಶೇಷವನ್ನು (ಕೂಳೆ) ಸುಡುವುದರಿಂದ ಸಾಮಾಜಿಕ–ಆರ್ಥಿಕ ಹಾಗೂ ಪರಿಸರಗಳ ಮೇಲಾಗುವ ಪರಿಣಾಮಗಳು: ಭಾರತದ ಪಂಜಾಬ್‌ನಲ್ಲಿನ ಒಂದು ಪ್ರಕರಣ (ಸ್ಪ್ರಿಂಗರ್), ಈಶಾನ್ಯ ಭಾರತದಲ್ಲಿ ಗುರುತಿಸಿಕೊಳ್ಳುವಿಕೆ, ಸ್ಪರ್ಧೆ ಹಾಗೂ ಅಭಿವೃದ್ಧಿ, (ನವದೆಹಲಿ: ರೂಟ್ಲೆಡ್ಜ್). ಇದರ ಜೊತೆಗೆ ಕೇಂದ್ರದ ಅಧ್ಯಾಪಕ ವೃಂದವು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಖ್ಯಾತಿಯ ತೀರ್ಪುಗಾರರಿಂದೊಡಗೂಡಿದ ವಿವಿಧ ನಿಯತಕಾಲಿಕೆಗಳಲ್ಲಿ ಗುಣಮಟ್ಟದ ೧೮ ಸಂಶೋಧನಾ ಲೇಖನಗಳನ್ನೂ, ಸಂಪಾದಿತ ಗ್ರಂಥಗಳಲ್ಲಿ ಎಂಟು ಸಂಶೋಧನಾ ಲೇಖನಗಳನ್ನೂ, ಪತ್ರಿಕೆಗಳಲ್ಲಿ ಕೆಲವು ಜನಪ್ರಿಯ ಲೇಖನಗಳನ್ನೂ, ನಾಲ್ಕು ಕಾರ್ಯನಿರತ ಸಂಶೋಧನಾ ಲೇಖನಗಳನ್ನೂ ಪ್ರಕಟಿಸಿರುವುದಲ್ಲದೆ ಪ್ರಧಾನ ಭಾಷಣಗಳನ್ನೂ ಮಾಡಿದ್ದಾರೆ ಹಾಗೂ ಆಹ್ವಾನಿತ ಉಪನ್ಯಾಸಗಳನ್ನೂ ಸಹ ನೀಡಿದ್ದಾರೆ.

ಈ ಕೇಂದ್ರವು "ಕರ್ನಾಟಕದಲ್ಲಿ ಭೂ ಚೇತನ ಕಾರ್ಯಕ್ರಮದಿಂದಾದ ಪರಿಣಾಮಗಳ ಮೌಲ್ಯಮಾಪನ"ವನ್ನು ಕುರಿತಂತೆ ಒಂದು ಆರಂಭಿಕ ಕಾರ್ಯಾಗಾರವನ್ನು ಮಾಡಿದೆ; ಕೊಡಗಿನ ಕಾಫಿ ಆಧಾರಿತ ಆರ್ಥಿಕತೆಯ ಭವಿಷ್ಯವನ್ನು ಕುರಿತಂತೆ ಒಂದು ಕಾರ್ಯನೀತಿ ಸಂವಾದವನ್ನು ಏರ್ಪಡಿಸಿದೆ; ರಾಷ್ಟ್ರೀಯ ಕೃಷಿ ವಿಜ್ಞಾನಗಳ ಅಕಾಡೆಮಿಯ ಸಹಯೋಗದೊಡನೆ "ಅಭಿವೃದ್ಧಿಗಾಗಿ ಕೃಷಿ ಸಂಶೋಧನೆ, ಶಿಕ್ಷಣ ಹಾಗೂ ವಿಸ್ತರಣೆಗಳ ಉಸ್ತುವಾರಿ ಮತ್ತು ಮೌಲ್ಯಮಾಪನ"ವನ್ನು ಕುರಿತಂತೆ ಬುದ್ಧಿಮತ್ತೆ ಒಗ್ಗೂಡಿಸುವ ಅಧಿವೇಶನವನ್ನು ಏರ್ಪಡಿಸಿದೆ; "ಜೀವಂತ ಸೂಕ್ಷ್ಮಾಣುಗಳ (ಎಲ್ಎಂಒ) ಸಾಮಾಜಿಕ–ಆರ್ಥಿಕ ಬೆಲೆಕಟ್ಟುವಿಕೆಗಾಗಿ ಮಾರ್ಗಸೂಚಿಗಳನ್ನು ಮತ್ತು ಕಾರ್ಯಪದ್ಧತಿಗಳನ್ನು ಅಭಿವೃದ್ಧಿ ಪಡಿಸುವಿಕೆ" ಎಂಬ ವಿಷಯದ ಕಾರ್ಯಾಗಾರವನ್ನು ಏರ್ಪಡಿಸಿದೆ. ಕೇಂದ್ರವು ಗ್ಲಾಸ್ಗೋ ವಿಶ್ವವಿದ್ಯಾಲಯದೊಡನೆ ಒಂದು ಜಂಟಿ ಅಧ್ಯಯನವನ್ನು ಸಹ ಮಾಡುತ್ತಿದೆ. ಕೇಂದ್ರದ ಅಧ್ಯಾಪಕ ವೃಂದದಲ್ಲೊಬ್ಬರು ಶ್ರೀಲಂಕಾದ ಕೊಲಂಬೋದಲ್ಲಿನ ಹೆಕ್ಟರ್ ಕಾಬೇದಾದುವಾ ಕೃಷಿ ಸಂಶೋಧನಾ ಮತ್ತು ಚರ್ಮ ಹದಮಾಡುವ ಸಂಸ್ಥೆಯಲ್ಲಿ ಏರ್ಪಡಿಸಿದ್ದ "ಸುಸ್ಥಿರ ಹಾಗೂ ಹವಾಮಾನ ಪ್ರತಿರೋಧಿ ಕೃಷಿಗಾಗಿ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳನ್ನು ಒಗ್ಗೂಡಿಸುವಿಕೆ" ಎಂಬ ವಿಷಯದ ಬಗೆಗಿನ ವಿಚಾರಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು. ಇನ್ನೊಬ್ಬ ಅಧ್ಯಾಪಕರನ್ನು ನವದೆಹಲಿಯ ಐಸಿಸಿಆರ್ ಸಂಸ್ಥೆಯು ನಿಯೋಜನೆಯ ಮೇರೆಗೆ ಎರಡು ತಿಂಗಳ ಮಟ್ಟಿಗೆ ಚೀನಾದ ಗ್ಯಾಂಗ್‌ಜು (Guangzhou,) ಎಂಬಲ್ಲಿನ ಜಿನಾನ್ ವಿಶ್ವವಿದ್ಯಾಲಯದಲ್ಲಿ ಭಾರತೀಯ ಪೀಠ ಪ್ರಾಧ್ಯಾಪಕರಾಗಿ ನಾಮ ನಿರ್ದೇಶನ ಮಾಡಲಾಗಿತ್ತು.

## ೨. ವಿಕೇಂದ್ರೀಕರಣ ಹಾಗೂ ಅಭಿವೃದ್ಧಿ ಕೇಂದ್ರ (ಸಿಡಿಡಿ)

ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಕೇಂದ್ರವು ಆಡಳಿತ, ಆರ್ಥಿಕ ಮತ್ತು ರಾಜಕೀಯ ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ವಿವಿಧ ಆಯಾಮಗಳಿಂದ ಒಡಗೂಡಿದ ಅಧ್ಯಯನಗಳನ್ನು ಕೈಗೊಳ್ಳುತ್ತಲಿದೆ. ಈ ಕೇಂದ್ರದ ಅಭಿಯಾನವು ಸರ್ಕಾರದ, ದಾನಿಗಳ, ನಾಗರಿಕ ಸಮುದಾಯದ ಸಂಸ್ಥೆಗಳು ಹಾಗೂ ಸಾರ್ವಜನಿಕರ ವಿಕೇಂದ್ರೀಕರಣ ಪ್ರಯತ್ನಗಳನ್ನು ಬೆಂಬಲಿಸುವುದು ಮತ್ತು ಮುಂದುವರೆಸುವುದಾಗಿದ್ದು, ಅದಕ್ಕಾಗಿ ಕಾರ್ಯನೀತಿಗೆ ಸಂಬಂಧಿಸಿದ ಸಂಶೋಧನೆಗಳು, ಸಂಶೋಧನಾ ಮಾಹಿತಿ ಪ್ರಸರಣೆ ಮತ್ತು ಸಾಮರ್ಥ್ಯ ಹೆಚ್ಚಿಸುವಿಕೆಯ ಪ್ರಯತ್ನಗಳನ್ನು ಮಾಡುವುದಾಗಿದೆ.

# ಐಸೆಕ್



ಈ ಕೇಂದ್ರದ ಸಂಶೋಧನಾ ಅಧ್ಯಯನಗಳು ಎರಡು ವಿಧದಲ್ಲಿವೆ. ಮೊದಲನೆಯದು, ವಿಕೇಂದ್ರೀಕೃತ ಸ್ಥಳೀಯ ಆಡಳಿತ, ಹೆಚ್ಚುತ್ತಿರುವ ಸ್ಪಂದನೆ ಮತ್ತು ಭಾಗವಹಿಸುವಿಕೆಗೆ ಪೂರಕವಾಗಿ ಸರ್ಕಾರಿ ಸಂಸ್ಥೆಗಳಲ್ಲಿ ಆಗುತ್ತಿರುವ ಸುಧಾರಣೆಯ ಬಗ್ಗೆ ಅಧ್ಯಯನಗಳು. ಎರಡನೆಯದು, ವಿಕೇಂದ್ರೀಕರಣದ ಅವಕಾಶಗಳನ್ನು ಬಡಜನರೂ ಸೇರಿದಂತೆ ಸಾರ್ವಜನಿಕರು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಂಡಿದ್ದಾರೆ ಮತ್ತು ಅದರಿಂದ ಪ್ರಯೋಜನ ಪಡೆದಿದ್ದಾರೆ ಎಂಬುದನ್ನು ಕಂಡು ಹಿಡಿಯುವ ಅಧ್ಯಯನಗಳು. ಇವು ಸಾರ್ವಜನಿಕರ ಭಾಗವಹಿಸುವಿಕೆ, ಬಡಜನರ ಧ್ವನಿ, ಗಣ್ಯರ ಒಳಗೊಳ್ಳುವಿಕೆ ಹಾಗೂ ಸಹಕಾರಗಳನ್ನು ಕುರಿತಾದ ಅಧ್ಯಯನಗಳನ್ನು ಸಹ ಒಳಗೊಂಡಿರುತ್ತದೆ.

## ಸಾಧನೆಗಳು

ಈ ಕೇಂದ್ರವು ೨೦೧೫–೧೬ನೇ ಸಾಲಿನಲ್ಲಿ ಕೆಳಕಂಡ ಏಳು ಸಂಶೋಧನಾ ಅಧ್ಯಯನಗಳನ್ನು ನಿರ್ವಹಿಸಿದೆ. ಅವುಗಳೆಂದರೆ: (೧) ಚಿಕ್ಕಬಳ್ಳಾಪುರ ಜಿಲ್ಲೆಯ ಮಾನವ ಸಂಪನ್ಮೂಲ ಅಭಿವೃದ್ಧಿ ವರದಿ; (೨) ರಾಮನಗರ ಜಿಲ್ಲೆಯ ಮಾನವ ಸಂಪನ್ಮೂಲ ಅಭಿವೃದ್ಧಿ ವರದಿ, (೩) ಸಂಸ್ಥೆಗಳು, ಆಡಳಿತ ಮತ್ತು ಅಭಿವೃದ್ಧಿ – ಕರ್ನಾಟಕದಲ್ಲಿನ ಆಯ್ದ ಗ್ರಾಮ ಪಂಚಾಯಿತಿಗಳ ಅಧ್ಯಯನ; (೪) ಸಂಸ್ಥೆಗಳನ್ನು ಬಡವರ ಪರವಾಗಿನ ಅಭಿವೃದ್ಧಿಗಾಗಿ ಸುಧಾರಿಸುವುದು; (೫) ವಿಕೇಂದ್ರೀಕರಣ ಮತ್ತು ಸಾಮಾಜಿಕ ಭದ್ರತೆ – ಅಸಂಘಟಿತ ಕಾರ್ಮಿಕರಿಗಾಗಿ ಏಕ ಗವಾಕ್ಷಿ ಸೇವಾ ಕೇಂದ್ರಗಳ ಅಧ್ಯಯನ; (೬) ಕರ್ನಾಟಕದಲ್ಲಿ ವಿಕೇಂದ್ರೀಕರಣ ಮತ್ತು ಶಿಕ್ಷಣ; (೭) ನಿವೃತ್ತಿ ವೇತನದ ದೀರ್ಘಾವಧಿ ಉಳಿತಾಯ ಯೋಜನೆಗೆ ಹೆಚ್ಚಿನ ಜನರನ್ನು ನೋಂದಾಯಿಸುವುದು ಮತ್ತು ಹೆಚ್ಚಿನ ಉಳಿತಾಯ ಮಾಡಿಸುವುದು.

ಈ ಅಧ್ಯಯನಗಳ ಪೈಕಿ ಮೊದಲ ಎರಡು ಅಧ್ಯಯನಗಳು ಮುಗಿದಿವೆ ಮತ್ತು ಮೂರನೆಯ ಅಧ್ಯಯನದ ವರದಿಯ ಕರಡನ್ನು ಅಂತಿಮಗೊಳಿಸಲಾಗಿದೆ. ನಂತರದ ಎರಡೂ (ಸಂಖ್ಯೆ ೪ ಮತ್ತು ೫) ಯೋಜನೆಗಳು ಚಾಲ್ತಿ ಯೋಜನೆಗಳಾಗಿದ್ದು, ಕೊನೆಯ ಎರಡು ಯೋಜನೆಗಳು (ಸಂಖ್ಯೆ ೬ ಮತ್ತು ೭) ಪ್ರಸ್ತುತ ಸಾಲಿನಲ್ಲಿ ಪ್ರಾರಂಭಗೊಂಡಿವೆ. ಒಂದು ಯೋಜನೆಯನ್ನು ಹೊರತುಪಡಿಸಿ (ಸಂಖ್ಯೆ ೩) ಉಳಿದೆಲ್ಲಾ ಯೋಜನೆಗಳೂ ಹೊರಗಿನ ಸಂಸ್ಥೆಗಳಿಂದ ಅನುದಾನವನ್ನು ಪಡೆದಿವೆ. ಕೇಂದ್ರವು ಪ್ರಾಥಮಿಕ ದತ್ತಾಂಶದ ನೆರವಿನೊಂದಿಗೆ ಕನಾಟಕದಲ್ಲಿ ೨೦೧೫ರಲ್ಲಿ ನಡೆದ ಗ್ರಾಮ ಪಂಚಾಯಿತಿ ಚುನಾವಣೆಗಳ ವಿವಿಧ ಆಯಾಮಗಳನ್ನು ಅಧ್ಯಯನ ಮಾಡುವ ಉಪಕ್ರಮಿಕೆಯನ್ನೂ ಸಹ ಮಾಡಿದೆ.

ಈ ಕೇಂದ್ರವು ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಗಳನ್ನು ಸಿದ್ಧಪಡಿಸುವ ಮೂಲಕ ಕರ್ನಾಟಕ ಸರ್ಕಾರಕ್ಕೆ ನೆರವು ನೀಡಿದೆ.

ಕೇಂದ್ರದ ಅಧ್ಯಾಪಕ ವೃಂದ ಹಾಗೂ ಸಿಬ್ಬಂದಿ ವರ್ಗವು ತಮ್ಮ ಸಂಶೋಧನಾ ಫಲಿತಾಂಶಗಳನ್ನು ಶೈಕ್ಷಣಿಕ ಲೇಖನಗಳ ಮೂಲಕ, ವಿಚಾರ ಸಂಕಿರಣಗಳು ಹಾಗೂ ಕಾರ್ಯಾಗಾರಗಳಲ್ಲಿನ ನಿರೂಪಣೆಯ ಮೂಲಕ ಮತ್ತು ದಿನಪತ್ರಿಕೆಗಳಲ್ಲಿನ ಲೇಖನಗಳ ಮೂಲಕ ಪ್ರಸರಿಸಿರುತ್ತಾರೆ. ೨೦೧೫–೧೬ ರ ಸಾಲಿನಲ್ಲಿ ಮೂರು ಕಾರ್ಯನಿರತ ಸಂಶೋಧನಾ ಲೇಖನಗಳನ್ನು ಪ್ರಕಟಿಸಲಾಯಿತು. ಅವೆಂದರೆ: (೧) ವಂಚನೆ, ಸಹವರ್ತನೆ ಹಾಗೂ ಸೆರೆಹಿಡಿಯುವಿಕೆ: ಭಾರತದ ಕರ್ನಾಟಕದಲ್ಲಿ ಸಾಮಾಜಿಕ ಹೊಣೆಗಾರಿಕೆ ಹಾಗೂ ಸಾಮಾಜಿಕ ಪರಿಶೋಧನೆ (ಆಕ್ಸ್‌ಫರ್ಡ್ ಅಭಿವೃದ್ಧಿ ಅಧ್ಯಯನಗಳು, ಸಂಪುಟ ೪೩, ಸಂಚಿಕೆ ೩, ೨೦೧೫; (೨) ವಿಕೇಂದ್ರೀಕೃತ ಯೋಜನೆ: ಕರ್ನಾಟಕದಲ್ಲಿನ ಅನುಷ್ಠಾನ (ಕನ್ನಡದಲ್ಲಿ), ೨೦೧೬, ಪರಿಷ್ಕೃತ ಸಂಪುಟ, ಕರ್ನಾಟಕದ ಅಭಿವೃದ್ಧಿ: ಆರ್ಥಿಕ, ಸಾಮಾಜಿಕ ಮತ್ತು ಸುಸ್ಥಿರ ಅಭಿವೃದ್ಧಿ, ಸದರನ್ ಇಕಾನಮಿಸ್ಟ್ ಪ್ರಕಟಣೆ, ಬೆಂಗಳೂರು, ಕರ್ನಾಟಕ; (೩) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ (ಎಂಎನ್‌ಆರ್‌ಇಜಿಎಸ್) ಪರಿಶಿಷ್ಟ ಜಾತಿ ಕುಟುಂಬಗಳ ಪಾಲ್ಗೊಳ್ಳುವಿಕೆ: ಕರ್ನಾಟಕದಲ್ಲಿ ದೊರೆತ ಸಾಕ್ಷ್ಯ, ಐಸೆಕ್ ಕಾರ್ಯನಿರತ ಸಂಶೋಧನಾ ಲೇಖನ ಸಂಖ್ಯೆ ೩೫೯.

"ವಂಚನೆ, ಸಹವರ್ತನೆ ಹಾಗೂ ಸೆರೆಹಿಡಿಯುವಿಕೆ: ಭಾರತದ ಕರ್ನಾಟಕದಲ್ಲಿ ಸಾಮಾಜಿಕ ಹೊಣೆಗಾರಿಕೆ ಹಾಗೂ ಸಾಮಾಜಿಕ ಪರಿಶೋಧನೆ", ಆಕ್ಸ್‌ಫರ್ಡ್ ಅಭಿವೃದ್ಧಿ ಅಧ್ಯಯನಗಳು – ಎಂಬ ಈ ಕಾರ್ಯನಿರತ ಸಂಶೋಧನಾ ಲೇಖನವು ಅಭಿವೃದ್ಧಿ ಅಧ್ಯಯನಗಳಿಗೆ ಸಲ್ಲಿಸಿದ ಕೊಡುಗೆಗಾಗಿ ೨೦೧೫ರ ಅತ್ಯುತ್ತಮ ಲೇಖನವೆಂದು ಪರಿಗಣಿಸಲ್ಪಟ್ಟು ಸಂಜಯ್‌ಲಾಲ್ ಬಹುಮಾನವನ್ನು ಪಡೆದಿದೆ.

ಕೇಂದ್ರದ ಅಧ್ಯಾಪಕ ವೃಂದ ಮತ್ತು ಸಿಬ್ಬಂದಿಯು ತಮ್ಮ ಸಂಶೋಧನಾ ಅಧ್ಯಯನಗಳ ಫಲಿತಾಂಶಗಳನ್ನು ದಿನಪತ್ರಿಕೆಗಳ ಮೂಲಕ ಪ್ರಸರಿಸಿ, ಈ ಫಲಿತಾಂಶಗಳನ್ನು ಸಾರ್ವಜನಿಕರ ಗಮನಕ್ಕೂ ತಂದಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಕರ್ನಾಟಕದ ವಿಕೇಂದ್ರೀಕರಣದಲ್ಲಿನ ಗಮ್ಯ ಅಂಶಗಳನ್ನು ರಾಜ್ಯದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್ ಚುನಾವಣೆಗಳ ಸಂದರ್ಭದಲ್ಲಿ ಎಲ್ಲರ ಗಮನಕ್ಕೆ ತರಲು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯ ೨೦೧೬ರ ಫೆಬ್ರವರಿ ೧೨ ರ ಸಂಚಿಕೆಯಲ್ಲಿ "ಸ್ಥಳೀಯ ಸಂಸ್ಥೆಗಳ ಚುನಾವಣೆಗಳು: ಕಾಣೆಯಾಗಿರುವ ಪ್ರಮುಖ ಅಂಶಗಳು" ಎಂಬ ಲೇಖನವನ್ನು ಪ್ರಕಟಿಸಲಾಗಿತ್ತು.

ಕೇಂದ್ರದ ಸದಸ್ಯರು ಹನ್ನೊಂದು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ ಮತ್ತು ಸಂಶೋಧನಾ ಲೇಖನಗಳನ್ನು ಪ್ರಸ್ತುತ ಪಡಿಸಿದ್ದಾರೆ. ಇವುಗಳಲ್ಲಿ ಒಂದು ಅಂತರಾಷ್ಟ್ರೀಯ ವಿಚಾರ ಸಂಕಿರಣವಾಗಿತ್ತು. ಜೊತೆಗೆ ಈ ಸದಸ್ಯರು ಹಲವಾರು ಕಾರ್ಯಾಗಾರಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದಾರೆ.

# ಐಸೆಕ್

ಸಾರ್ಕ್ ದೇಶಗಳಿಂದ ಬಂದಿದ್ದ ಶಿಕ್ಷಣಾರ್ಥಿಗಳಿಗೆ ೨೦೧೫ ರ ಮೇ ೨೫ ರಿಂದ ೨೯ ರ ವರೆಗೆ "ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿಗಾಗಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸುವ ಮಾರ್ಗ" ಎಂಬ ವಿಷಯದ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮವು ಮುಖ್ಯವಾಗಿ ಕರ್ನಾಟಕದಿಂದ ದೊರೆತ ಅನುಭವಗಳನ್ನಾಧರಿಸಿ ವಿಕೇಂದ್ರೀಕೃತ ಸರ್ಕಾರಿ ಹಾಗೂ ಸಹಕಾರ ಸಂಸ್ಥೆಗಳ ಪರಸ್ಪರಾಭಿಮುಖಿತ್ವವನ್ನು ಸ್ಥಾಪಿಸುವ ಬಗ್ಗೆ ಅಂಶಗಳನ್ನು ರೂಪಿಸುವ ಉದ್ದೇಶವನ್ನು ಹೊಂದಿತ್ತು.

## ಪ್ರಸ್ತುತ ಚಟುವಟಿಕೆಗಳು

ಕೆಳಕಂಡ ೫ ಸಂಶೋಧನಾ ಅಧ್ಯಯನಗಳು ಪ್ರಸ್ತುತದಲ್ಲಿ ಕಾರ್ಯೋನ್ಮುಖವಾಗಿವೆ: (೧) ವಿಕೇಂದ್ರೀಕೃತ ಸರ್ಕಾರ ಹಾಗೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ (ನರೇಗಾ) ಸೌಲಭ್ಯಗಳ ವಿತರಣೆ; (೨) ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಮತ್ತು ಅವುಗಳ ಬಗ್ಗೆ ತಿಳುವಳಿಕೆಯನ್ನು ಪಡೆಯಲು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಸಂಯೋಜಕರಾಗಿರುವ ಏಕ ಗವಾಕ್ಷಿ ಸೇವಾ ಕೇಂದ್ರಗಳು ಎಷ್ಟರ ಮಟ್ಟಿಗೆ ನೆರವಾಗಿದೆ ಎಂಬುದನ್ನು ಅಂದಾಜು ಮಾಡುವಿಕೆ; (೩) ಶಾಲಾ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣಗಳನ್ನು ಅಭಿವೃದ್ಧಿ ಪಡಿಸುವಲ್ಲಿ ವಿಕೇಂದ್ರಿತ ಸರ್ಕಾರದ ಪಾತ್ರ; (೪) ನರೇಗಾ ಸೇವೆಗಳ ಮಾಹಿತಿ ಮತ್ತು ವಿತರಣೆ; (೫) ಅಸಂಘಟಿತ ಕಾರ್ಮಿಕರಲ್ಲಿ ವೃದ್ಧಾಪ್ಯ ಆದಾಯ ಭದ್ರತೆಗಾಗಿ ಉಳಿತಾಯವನ್ನು ಉತ್ತೇಜಿಸುವುದು. ಈ ಸಂಶೋಧನಾ ಅಧ್ಯಯನಗಳನ್ನು ಅನುಷ್ಠಾನಗೊಳಿಸಲು ಕೇಂದ್ರವು ಬ್ರಿಸ್ಟಲ್, ಮೆಲ್ಬರ್ನ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳೊಡನೆಯೂ, ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್ ಸಂಸ್ಥೆಯೊಡನೆಯೂ ಹಾಗೂ ಜರ್ಮನ್ ಅಂತರ್‌ರಾಷ್ಟ್ರೀಯ ಸಹಕಾರ (ಜಿಐಜಡ್) ಮತ್ತು ಯುಎಸ್ಏಡ್‌ನೊಂದಿಗೂ ಸಹಯೋಗವನ್ನು ಹೊಂದಿದೆ.

## ೩. ಜೀವಿ ಪರಿಸರ ಅರ್ಥಶಾಸ್ತ್ರ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೇಂದ್ರ (ಸಿಇಇಎನ್‌ಆರ್)

ಈಗ ಜೀವಿ ಪರಿಸರ ಅರ್ಥಶಾಸ್ತ್ರ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೇಂದ್ರ (ಸಿಇಇಎನ್‌ಆರ್) ಎಂದು ಮರುನಾಮಕರಣ ಹೊಂದಿರುವ ಈ ಕೇಂದ್ರವನ್ನು ೧೯೮೧ ರಷ್ಟು ಹಿಂದೆಯೇ ಸಂಸ್ಥೆಯಲ್ಲಿ ಜೀವಿ ಪರಿಸರ ಅರ್ಥಶಾಸ್ತ್ರ ಘಟಕವೆಂದು ಪ್ರತ್ಯೇಕ ಘಟಕವಾಗಿ ರಾಷ್ಟ್ರದಲ್ಲೇ ಮೊದಲ ಬಾರಿಗೆ ಸ್ಥಾಪಿಸಿದ್ದು ಸಂಸ್ಥೆಯ ಸ್ಥಾಪಕ ಸದಸ್ಯರ ದೂರದೃಷ್ಟಿಯನ್ನು ಎತ್ತಿ ತೋರಿಸುತ್ತದೆ.

ಈ ಕೇಂದ್ರಕ್ಕೆ ವಿಧಿಸಿರುವ ಕರ್ತವ್ಯಗಳು ಈ ರೀತಿ ಇವೆ: ಅರ್ಥವ್ಯವಸ್ಥೆ, ಜೀವಿ ಪರಿಸರ ಹಾಗೂ ಸಂಸ್ಥೆಗಳ ನಡುವೆ ಇರುವ ಪರಸ್ಪರಾಭಿಮುಖಿತ್ವವನ್ನು ವಿಶ್ಲೇಷಿಸುವುದು, ಬೆಳವಣಿಗೆ ಮತ್ತು ಪರಿಸರದ ನಡುವೆ ಇರುವ ವ್ಯಾಪಾರ ವಹಿವಾಟು ಸಂಬಂಧವನ್ನು ವಿಶ್ಲೇಷಿಸುವುದು ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ನಿರ್ವಹಣೆಗಾಗಿ ಸೂಕ್ತ ಕಾರ್ಯತಂತ್ರವೊಂದನ್ನು ರೂಪಿಸುವುದು. ಅಭಿವೃದ್ಧಿಗೆ ಸಂಬಂಧಿಸಿದ ಜೀವಿ ಪರಿಸರ ಅಂಶಗಳು ಮುಂಚೂಣಿಗೆ ಬರುತ್ತಿದ್ದಂತೆ, ಕೇಂದ್ರವು ಸುಸ್ಥಿರ ಅಭಿವೃದ್ಧಿಗಾಗಿ ವಿವಿಧ ಪರ್ಯಾಯ ಕಾರ್ಯನೀತಿಗಳನ್ನು ಗುರುತಿಸಲು ಹಾಗೂ ವಿಶ್ಲೇಷಿಸಲು ಮುಖ್ಯ ಕೇಂದ್ರಬಿಂದುವಾಗಿ ಹೊರಹೊಮ್ಮಿದೆ. ಸಿಇಇಎನ್‌ಆರ್ ಕೇಂದ್ರವು ಸುಸ್ಥಿರ ಕ್ರಮದಲ್ಲಿ ಅಭಿವೃದ್ಧಿಯನ್ನು ಉತ್ತೇಜಿಸಲು ಹಾಗೂ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಜೀವನೋಪಾಯವನ್ನು ಸುಧಾರಿಸಲು ತಿಳುವಳಿಕೆ ಪದ್ಧತಿಗಳನ್ನು ಹಾಗೂ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಿ ತನ್ಮೂಲಕ ಕಾರ್ಯನೀತಿ ಹಾಗೂ ಕಾರ್ಯಾನುಷ್ಠಾನಗಳನ್ನು ಪ್ರಭಾವಿಸಲು ಪ್ರಯತ್ನಿಸುತ್ತಿದೆ. ಈ ಕೇಂದ್ರದ ಸಂಶೋಧನಾ ಚಟುವಟಿಕೆಗಳ ಪ್ರಮುಖ ಗಮನವು ಸುಸ್ಥಿರ ಅಭಿವೃದ್ಧಿ ಹಾಗೂ ನೈಸರ್ಗಿಕ ಸಂಪನ್ಮೂಲದ ಸುಸ್ಥಿರ ತಾಳಿಕೆ ಬಳಕೆ ಮತ್ತು ನಿರ್ವಹಣೆಯ ಬಗ್ಗೆ ಕೇಂದ್ರೀಕೃತವಾಗಿದೆ. ಇದಕ್ಕನುಗುಣವಾಗಿ ಈ ಕೇಂದ್ರವು ಸದರಿ ವಿಷಯಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಅಂಶಗಳ ಬಗ್ಗೆ ಕೆಲಸ ಮಾಡಲು ಪ್ರಯತ್ನಿಸುತ್ತಿದೆ. ಅವೆಂದರೆ: (ಅ) ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ನಿರ್ವಹಣೆ, (ಆ) ಅಭಿವೃದ್ಧಿ ಮತ್ತು ಸಂರಕ್ಷಣೆ, (ಇ) ಜೀವ ವೈವಿಧ್ಯ ಸಂರಕ್ಷಣೆ ಮತ್ತು ಸಾಂಸ್ಥಿಕ ಪರ್ಯಾಯಗಳ ಆರ್ಥಿಕತೆ, (ಈ) ಜೀವ ಪರಿಸರ ಪದ್ಧತಿಗಳ ಸೇವಾಮೌಲ್ಯ ಮತ್ತು ಹಸಿರು ಲೆಕ್ಕಾಚಾರ, (ಉ) ಆರ್ಥಿಕ ಅಭಿವೃದ್ಧಿ, ಸಂಪನ್ಮೂಲ ಕ್ಷೀಣಿಸುವಿಕೆ ಮತ್ತು ಸಂಪನ್ಮೂಲ ಮಾಲಿನ್ಯ, (ಊ) ಪುನರ್ ನವೀಕರಿಸಬಲ್ಲ ಶಕ್ತಿ ಮತ್ತು ಪರ್ಯಾಯ ಇಂಧನಗಳು, (ಋ) ನಗರ ಜೀವ ಪರಿಸರ ಶಾಸ್ತ್ರ, (ೠ) ಸಮಗ್ರ ಜಲ ಸಂಪನ್ಮೂಲ ನಿರ್ವಹಣೆ ಮತ್ತು ನೀರಿನ ಗುಣಮಟ್ಟದ ಅಂಶಗಳು, (ಎ) ಲಿಂಗ ಪ್ರಭೇಧ ಮತ್ತು ಪರಿಸರ/ಪರಿಸರ ಆಡಳಿತ, (ಏ) ಸುಸ್ಥಿರ ಗ್ರಾಮೀಣಾಭಿವೃದ್ಧಿ, ಉತ್ಪಾದನಾ ಪದ್ಧತಿ ವಿಶ್ಲೇಷಣೆ, ಭೂಬಳಕೆ/ಭೂ ಹೊದಿಕೆ ವಿಶ್ಲೇಷಣೆ, (ಐ) ವಾತಾವರಣ ಬದಲಾವಣೆ ಮತ್ತು ಸಾಮಾಜಿಕ – ಜೀವಿ ಪರಿಸರ ಪದ್ಧತಿಗಳ ಮೇಲೆ ಅದರ ಪ್ರಭಾವ – ಉಪಶಮನಗೊಳಿಸುವಿಕೆ ಮತ್ತು ಅಳವಡಿಸಿಕೊಳ್ಳುವಿಕೆ, (ಒ) ಸಂರಕ್ಷಿತ ಪ್ರದೇಶದ ನಿರ್ವಹಣೆ, (ಓ) ಭೂ ದೃಶ್ಯ ಸಂಶೋಧನೆ ಮತ್ತು ಜೀವಿ ಪರಿಸರ ಸೂತ್ರ ಚೌಕಟ್ಟುಗಳಿಗಾಗಿ ಜಿಐಎಸ್ ಮತ್ತು ದೂರ ಸಂವೇದನೆಗಳನ್ನು ಬಳಸುವಿಕೆ, (ಔ) ಪರಿಸರ ಮತ್ತು ಒಳ್ಳೆಯ ಜೀವನ, ಪರಿಸರ ಮತ್ತು ಆರೋಗ್ಯ, ಸಾಮರ್ಥ್ಯಾಭಿವೃದ್ಧಿ ಮತ್ತು ಕ್ಷೇತ್ರ ವ್ಯಾಪ್ತಿ ಹೆಚ್ಚಿಸಿಕೊಳ್ಳುವಿಕೆ.

## ಸಾಧನೆಗಳು

ಸಿಇಇಎನ್‌ಆರ್ ಕೇಂದ್ರವು ೨೦೧೫–೧೬ ರ ಸಾಲಿನಲ್ಲಿ ವಿವಿಧ ಸಮಾವೇಶಗಳು ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸಿದೆಯಲ್ಲದೆ,



ಸಹಯೋಗಿ ಸಂಶೋಧನಾ ಚಟುವಟಿಕೆಗಳನ್ನೂ ಕೈಗೊಂಡಿದೆ. ಸಹಯೋಗಿ ಸಂಸ್ಥೆಗಳ ವಿವರ ಈ ರೀತಿ ಇದೆ: ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಬೆಂಬಲ, ಜರ್ಮನಿಯ ಲೀಬ್‌ನಿಜ್ ಕೃಷಿ ಭೂ ವಿನ್ಯಾಸ ಸಂಶೋಧನಾ ಕೇಂದ್ರ, ತಂತ್ರಜ್ಞಾನ, ಮಾಹಿತಿ, ಮುನ್ಸೂಚನೆ ಹಾಗೂ ಅಂದಾಜೀಕರಣ ಪರಿಷತ್ತು (ಟಿಐಎಫ್ಎಸಿ), ಕರ್ನಾಟಕ ಸರ್ಕಾರದ ರಾಜ್ಯ ಯೋಜನಾ ಇಲಾಖೆ, ನವದೆಹಲಿಯ ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಪರಿಷತ್ತು ಹಾಗೂ ಜರ್ಮನಿಯ ಅಲೆಕ್ಸಾಂಡರ್ ವಾನ್ ಹಂಬೋಲ್ಡ್ಟ್ ಪ್ರತಿಷ್ಠಾನ ಇವುಗಳ ಸಹಯೋಗ.

ಈ ಕೇಂದ್ರವು ವಿವಿಧ ಉದ್ದೇಶಗಳನ್ನೊಳಗೊಂಡ ವ್ಯಾಪಕ ಶ್ರೇಣಿಯ ಹಲವಾರು ಅಧ್ಯಯನಗಳನ್ನು ಪೂರ್ಣಗೊಳಿಸಿದೆ. ಅವುಗಳೆಂದರೆ: (೧) ಜೀವ ವೈವಿಧ್ಯತೆ ಉಸ್ತುವಾರಿ ಮತ್ತು ನಕ್ಷೆ ತಯಾರಿಕೆ; (೨) ಹವಾಮಾನ ಬದಲಾವಣೆ ಮತ್ತು ಸಾಮಾಜಿಕ–ಪರಿಸರ ಅಭಿವೃದ್ಧಿ; (೩) ಜೀವಿ ವೈವಿಧ್ಯತೆ ಸಂರಕ್ಷಣೆ ಮತ್ತು ಬುಡಕಟ್ಟು ಸಮುದಾಯಗಳ ಅಭಿವೃದ್ಧಿ; (೪) ನಗರಾಭಿವೃದ್ಧಿ; (೫) ಮಾಲಿನ್ಯ ತಡೆಗಟ್ಟಲು ಆರ್ಥಿಕ ಸಾಧನಗಳು; (೬) ಭೂಮಿ, ಅರಣ್ಯ, ನೀರು ಹಾಗೂ ಇನ್ನಿತರ ಸಾರ್ವಜನಿಕ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗೆ ಸಂಬಂಧಿಸಿದಂತಹ ಆರ್ಥಿಕ ಮತ್ತು ಸಾಂಸ್ಥಿಕ ಅಂಶಗಳು; (೭) ಅಭಿವೃದ್ಧಿಗೆ ಸಂಬಂಧಿಸಿದಂತೆ ಲಿಂಗ ಪ್ರಬೇಧ, ಆಡಳಿತ ಹಾಗೂ ಸಾಮಾಜಿಕ ಅಂಶಗಳು; (೮) ಪರಿಸರ ಹಾಗೂ ಸಂಸ್ಕೃತಿ, ಪರಿಸರ ವೈವಿಧ್ಯತೆ ಹಾಗೂ ಇನ್ನಿತರ ಅಧ್ಯಯನಗಳು. ಈ ಕೇಂದ್ರವು ಪ್ರಚಲಿತ ವಿದ್ಯಮಾನಗಳು ಹಾಗೂ ಪರಿಸರ ಕಾಳಜಿಗೆ ಸಂಬಂಧಿಸಿದಂತೆ ಸಾರ್ವಜನಿಕ ವಿಚಾರ ವೇದಿಕೆಗಳಲ್ಲಿ ಭಾಗವಹಿಸಿದೆಯಲ್ಲದೆ ಜ್ಞಾನ ಹಾಗೂ ಕಲ್ಪನೆಗಳನ್ನು ಪ್ರಸರಿಸುವ ಸಲುವಾಗಿ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಹಾಗೂ ಸಮಾವೇಶಗಳನ್ನೂ ಏರ್ಪಡಿಸಿದೆ. ಅಧ್ಯಾಪಕ ಸಿಬ್ಬಂದಿಯು ಕಾರ್ಯನೀತಿ ವಿವರಣೆ, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ತರಬೇತಿಗಳು, ಗ್ರಂಥ ಪ್ರಕಟಣೆ, ದೀರ್ಘ ಲೇಖನಗಳು, ನಿಯತಕಾಲಿಕೆಗಳಲ್ಲಿನ ಲೇಖನಗಳು, ಸಂಶೋಧನಾ ಲೇಖನಗಳು ಮುಂತಾದವುಗಳ ಮೂಲಕವೂ ಸಹ ಜ್ಞಾನ ಪ್ರಸರಣೆಯನ್ನು ಮಾಡುತ್ತಿದ್ದಾರೆ.

ಪ್ರಸ್ತುತ ಸಾಲಿನಲ್ಲಿ ಸಿಇಇಎನ್ಆರ್ ಕೇಂದ್ರವು ಅಂತರ್‌ರಾಷ್ಟ್ರೀಯ, ರಾಷ್ಟ್ರೀಯ ಹಾಗು ರಾಜ್ಯ ಪೋಷಿತ ಮೂರು ಸಂಶೋಧನಾ ಯೋಜನೆಗಳನ್ನು ಹಾಗೂ ಕಾರ್ಯಾಗಾರಗಳನ್ನು ಪೂರ್ಣಗೊಳಿಸಿದೆ. ಜೊತೆಗೆ ನಾಲ್ಕು ವಾರಗಳ ಅವಧಿಯ ಐಸೆಕ್–ಎನ್‌ಸಿಐ ಅಂತರ್‌ರಾಷ್ಟ್ರೀಯ ಕಾರ್ಯಕ್ರಮವನ್ನು "ಭಾರತದಲ್ಲಿ ಪರಿಸರವನ್ನು ತಲುಪುವಿಕೆ – ಪ್ರಕೃತಿ – ಆರ್ಥಿಕತೆ – ಸಮಾಜದ ನಡುವಿನ ಪರಸ್ಪರಾಭಿ– ಮುಖಿತ್ವಕ್ಕೆ ಸಂಬಂಧಿಸಿದ ಅಧ್ಯಯನದಲ್ಲಿರುವ ಅಂಶಗಳು ಮತ್ತು ಪದ್ಧತಿಗಳು" ಎಂಬ ವಿಷಯವನ್ನು ಕುರಿತಂತೆ ೨೦೧೫ರ ಜೂನ್ ೨೮ ರಿಂದ ಜುಲೈ ೨೫ ರ ವರೆಗೆ ಐಸೆಕ್‌ನಲ್ಲಿ ನಿರ್ವಹಿಸಿದೆ. ನಾರ್ಡಿಕ್ ದೇಶಗಳಾದ ಡೆನ್ಮಾರ್ಕ್, ಜರ್ಮನಿ, ಸ್ವೀಡನ್ ಮತ್ತು ಫಿನ್ಲೆಂಡ್ ದೇಶಗಳಲ್ಲಿನ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಅಂತರ್‌ರಾಷ್ಟ್ರೀಯ ಪಠ್ಯಕ್ರಮದಲ್ಲಿ ಭಾಗವಹಿಸಿದ್ದರು. ಸ್ಥಳೀಯ ಮಟ್ಟದಲ್ಲಿ ಹಾಸನ ತಾಲ್ಲೂಕಿನ ಗೌರಿಪುರ ಗ್ರಾಮದಲ್ಲಿ "ಕೃಷಿ–ಜೀವ ವೈವಿಧ್ಯತೆ ಸಂರಕ್ಷಣೆ, ಸಂಪನ್ಮೂಲ ಬಳಕೆ ಮತ್ತು ಜೀವಿ ಪರಿಸರ ಪದ್ಧತಿಯ ನಿರ್ವಹಣೆ" ಎಂಬ ವಿಷಯವಾಗಿ ರೈತರೊಡನೆ ರೈತರ ಸಂವಾದವನ್ನು ೨೦೧೬ರ ಮಾರ್ಚ್ ೧೧ ರಂದು ಏರ್ಪಡಿಸಲಾಗಿತ್ತು.

ಕೇಂದ್ರದ ಅಧ್ಯಾಪಕ ವೃಂದ ಹಾಗೂ ಸಿಬ್ಬಂದಿಯು ಹಲವಾರು ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಸಮಾವೇಶಗಳು ಹಾಗೂ ಸಭೆಗಳಲ್ಲಿ ಭಾಗವಹಿಸಿರುವರಲ್ಲದೆ, ಸಂಶೋಧನಾ ಲೇಖನಗಳನ್ನೂ ಸಹ ಮಂಡಿಸಿದ್ದಾರೆ. ಜೊತೆಗೆ ಇವರುಗಳು ವೈವಿಧ್ಯಮಯ ವಿಷಯಗಳ ಅಂದರೆ ಹವಾಮಾನ ಬದಲಾವಣೆ ಮತ್ತು ಇಂಗಾಲದ ಆಯವ್ಯಯ, ಸ್ವಾಭಾವಿಕ ಸಂಪನ್ಮೂಲ ನಿರ್ವಹಣೆ ಮತ್ತು ಸ್ಥಳೀಯ ಜೀವನೋಪಾಯಾಭಿವೃದ್ಧಿ, ಹವಾಮಾನ ಬದಲಾವಣೆ ಮತ್ತು ಸೂಕ್ಷ್ಮ ಮಟ್ಟದಲ್ಲಿ ಹವಾಮಾನ ಬದಲಾವಣೆಯ ಪರಿಣಾಮ ಇತ್ಯಾದಿಗಳ ಸಂಶೋಧನಾ ಪ್ರಸ್ತಾವನೆಗಳನ್ನು ತಯಾರಿಸಿ ಸಲ್ಲಿಸಿದ್ದಾರೆ. ಕೇಂದ್ರದ ಅಧ್ಯಾಪಕ ವೃಂದವು ಅಂತರ್‌ರಾಷ್ಟ್ರೀಯ ಪಂಡಿತರನ್ನು ಅಂದರೆ ಅಮೆರಿಕಾ ಸಂಯುಕ್ತ ಸಂಸ್ಥಾನದ ರಟ್ಜರ್ಸ್ ವಿಶ್ವವಿದ್ಯಾಲಯದ ಭೌಗೋಳಿಕ ಶಾಸ್ತ್ರ ಇಲಾಖೆಯ ಹಾಗೂ ಬೆನಿನ್‌ನಲ್ಲಿನ ಹೌಡೆಗ್ಬೆ ಉತ್ತರ ಅಮೆರಿಕಾ ವಿಶ್ವವಿದ್ಯಾಲಯದ ಪಂಡಿತರ ಸಂಶೋಧನಾ ಕಾರ್ಯದ ಉಸ್ತುವಾರಿಯನ್ನೂ ಸಹ ಮಾಡಿದೆ.

## ಪ್ರಸ್ತುತ ಚಟುವಟಿಕೆಗಳು

ಸಿಇಇಎನ್ಆರ್ ಕೇಂದ್ರವು ಪ್ರಸ್ತುತದಲ್ಲಿ "ಕೃಷಿ – ಜೀವ ವೈವಿಧ್ಯತೆ ಸಂರಕ್ಷಣೆ ಹಾಗೂ ಪರಿಸರ ನಿರ್ವಹಣೆ' ಮತ್ತು "ಭೂ ಬಳಕೆಯಲ್ಲಿನ ಬದಲಾವಣೆ ಮತ್ತು ಮಣ್ಣಿನ ಫಲವತ್ತತೆ" ಎಂಬ ಎರಡು ಚಾಲ್ತಿ ಯೋಜನೆಗಳನ್ನು ನಿರ್ವಹಿಸುತ್ತಿದೆ. ಈ ಕೇಂದ್ರವು ತನ್ನ ಸಂಶೋಧನಾ ವ್ಯಾಪ್ತಿಯನ್ನು ಹೊಸ ಆಯಾಮಗಳಿಗೆ ವಿಸ್ತರಿಸಿದೆ. ಅವೆಂದರೆ: ಹವಾಮಾನ ಬದಲಾವಣೆ: ಸೂಕ್ಷ್ಮ ಮಟ್ಟದಲ್ಲಿ ಅದರ ಪರಿಣಾಮದ ಅಂದಾಜೀಕರಣ; ಹಸಿರು ಆರ್ಥಿಕತೆ/ಹಸಿರು ಒಟ್ಟಾರೆ ಆಂತರಿಕ ಉತ್ಪನ್ನ (ಜಿಡಿಪಿ); ಪರಿಸರ ಸೇವೆಗಳ ಬೆಲೆ ಕಟ್ಟುವಿಕೆ; ಭಾರತೀಯ ಗ್ರಾಮೀಣ – ನಗರ ಪರಸ್ಪರಾಭಿಮುಖಿತ್ವದಲ್ಲಿ ಸಾಮಾಜಿಕ ಮತ್ತು ಪರಿಸರ ಪದ್ಧತಿಗಳು ಇತ್ಯಾದಿ.

ಸದ್ಯದಲ್ಲಿ ಆರು ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಪಿಎಚ್‌ಡಿ ವ್ಯಾಸಂಗವನ್ನು ಕೇಂದ್ರದಲ್ಲಿ ಮುಂದುವರಿಸಿದ್ದಾರೆ. ಕೇಂದ್ರದ ಅಧ್ಯಾಪಕ ವೃಂದವು ವಿವಿಧ ಭಾರತೀಯ ವಿಶ್ವವಿದ್ಯಾಲಯಗಳ ಮತ್ತು ಸಂಸ್ಥೆಗಳ ಪ್ರಶಿಕ್ಷಣ ವಿದ್ಯಾರ್ಥಿಗಳ ವ್ಯಾಸಂಗದ ಮೇಲುಸ್ತುವಾರಿ ಮಾಡಿದೆ.

# ಐಸೆಕ್

## ೪. ಆರ್ಥಿಕ ಅಧ್ಯಯನಗಳು ಮತ್ತು ಕಾರ್ಯನೀತಿ ಕೇಂದ್ರ (ಸಿಇಎಸ್‌ಪಿ)

ಪ್ರಾಯೋಗಿಕ ಸಂಶೋಧನೆ ಮತ್ತು ಕಾರ್ಯನೀತಿ ರಚನೆಗಳಿಗೆ ಸಂಬಂಧಿಸಿದಂತೆ ಈ ಕೇಂದ್ರದ ಅಧ್ಯಾಪಕ ಸಿಬ್ಬಂದಿಯ ಹಲವಾರು ವರ್ಷಗಳ ಬದ್ಧ ಪ್ರಯತ್ನಗಳು ಸಮಾಜದ ಮೇಲೆ ಅದರಲ್ಲೂ ನಿರ್ದಿಷ್ಟವಾಗಿ ಕರ್ನಾಟಕ ರಾಜ್ಯದ ಸಮಾಜದ ಮೇಲೆ ಮರೆಯಲಾರದ ಪ್ರಭಾವವನ್ನು ಬೀರಿವೆ. ಈ ಕೇಂದ್ರದಲ್ಲಿರುವ ೮ ಅಧ್ಯಾಪಕ ಸಿಬ್ಬಂದಿಯು ಅರ್ಥಶಾಸ್ತ್ರದ ಮುಖ್ಯವಾಹಿನಿ ಮತ್ತು ಅನ್ವಯಿಕ ಅರ್ಥಶಾಸ್ತ್ರಗಳೆರಡರಲ್ಲೂ ಸಂಶೋಧನೆ, ಬೋಧನೆ ಹಾಗೂ ಸಂಶೋಧನಾ ಮಾರ್ಗದರ್ಶನಗಳಲ್ಲಿ ಗಾಢವಾಗಿ ತೊಡಗಿಸಿಕೊಂಡಿದ್ದಾರೆ. ಸಿಇಎಸ್‌ಪಿ ಕೇಂದ್ರದ ಅಧ್ಯಾಪಕ ಸಿಬ್ಬಂದಿಯು ಬೋಧನಾ ವಲಯದಲ್ಲಿಯೂ ಮತ್ತು ಕಾರ್ಯನೀತಿ ವಲಯದಲ್ಲಿಯೂ ಬಹುವಾಗಿ ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಈ ಸಿಬ್ಬಂದಿಯು ೨೦೧೫-೧೬ ರಲ್ಲಿ ಪ್ರತಿ ಅಧ್ಯಾಪಕರಿಗೆ ಸರಾಸರಿ ಮೂರರಂತೆ ಹೊರಗಿನಿಂದ ಬರುವ ಅನುದಾನದ ಬಹಳಷ್ಟು ಸಂಶೋಧನಾ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದರು. ಎಲ್ಲ ಅಧ್ಯಾಪಕ ಸಿಬ್ಬಂದಿಯೂ ಪಿಎಚ್‌ಡಿ ಪೂರ್ವ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಸೂಕ್ಷ್ಮ ಅರ್ಥಶಾಸ್ತ್ರ, ವ್ಯಾಪಕ ಅರ್ಥಶಾಸ್ತ್ರ, ಮಾಪನ ಅರ್ಥಶಾಸ್ತ್ರ ಮತ್ತು ಸಾಂಖ್ಯಿಕ ಶಾಸ್ತ್ರಗಳಲ್ಲಿನ ಇತ್ತೀಚಿನ ಬೆಳವಣಿಗೆಗಳ ಮೇಲೆ ಗಮನವಿಟ್ಟುಕೊಂಡು ಸಂಶೋಧನೆಯಲ್ಲಿ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಕೇಂದ್ರೀಕೃತವಾದ ಬೋಧನೆಯಲ್ಲಿ ನಿರತರಾಗಿದ್ದರು. ಕೇಂದ್ರದ ವಿದ್ಯಾರ್ಥಿಗಳ ಪೈಕಿ ಶೇ ೨೫.೪೩ ರಷ್ಟು ಮಂದಿ ಪಿಎಚ್‌ಡಿ ವಿದ್ಯಾರ್ಥಿಗಳು ಪ್ರಮುಖ ಪಠ್ಯವಾದ ಅರ್ಥಶಾಸ್ತ್ರ ವಿಭಾಗಕ್ಕೆ ಸೇರಿದವರಾಗಿದ್ದು, ಅಧ್ಯಾಪಕ ವೃಂದದ ಹೆಚ್ಚಿನ ಸಮಯವು ಈ ವಿದ್ಯಾರ್ಥಿಗಳಿಗೆ ಪ್ರಚಲಿತದಲ್ಲಿರುವ ವಿವಿಧ ಆರ್ಥಿಕ ಮತ್ತು ಸಾಮಾಜಿಕ ವಿದ್ಯಮಾನಗಳ ಬಗ್ಗೆ ಯಶಸ್ವಿ ಮಾರ್ಗದರ್ಶನವನ್ನು ನೀಡುವುದರಲ್ಲಿ ವ್ಯಯವಾಗುತ್ತಿದೆ. ಐಸೆಕ್‌ನ ಗಣನೀಯ ಪ್ರಮಾಣದ ವಿದ್ಯಾ ವಿಶಾರದರು ಸದ್ಯದಲ್ಲಿ ರಾಷ್ಟ್ರದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು, ವ್ಯಾಪಾರೋದ್ಯಮಗಳು ಹಾಗೂ ಆರ್ಥಿಕ ಸಂಸ್ಥೆಗಳಲ್ಲಿ ಉದ್ಯೋಗ ದೊರಕಿಸಿಕೊಂಡಿದ್ದಾರೆ. ಕೇಂದ್ರವು ನಗರಾಡಳಿತ ನಿಗಮ, ಕೇಂದ್ರೀಯ ಸಾಂಖ್ಯಿಕ ಸಂಸ್ಥೆ ಇತ್ಯಾದಿ ವಿವಿಧ ಸರ್ಕಾರಿ ಸಂಸ್ಥೆಗಳ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮವನ್ನೂ ಸಹ ನಡೆಸುತ್ತಿದೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಅರ್ಥಶಾಸ್ತ್ರದಲ್ಲಿ ಆಗಿರುವ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ತಿಳುವಳಿಕೆಯನ್ನು ಮೂಡಿಸುವುದಲ್ಲದೆ ಅರ್ಥಮಾಪನ ಸಾಧನಗಳ ಬಳಕೆಯ ಬಗ್ಗೆಯೂ ತಿಳಿಸಿಕೊಡುತ್ತದೆ.

ಕೇಂದ್ರವು ಒತ್ತು ನೀಡುತ್ತಿರುವ ಪ್ರಧಾನ ಸಂಶೋಧನಾ ಕ್ಷೇತ್ರವು ವ್ಯಾಪಕ ಅರ್ಥಶಾಸ್ತ್ರ, ಕಾರ್ಮಿಕ ಅರ್ಥಶಾಸ್ತ್ರ, ಪರಿಸರ ಅರ್ಥಶಾಸ್ತ್ರ, ಅಂತರ್‌ರಾಷ್ಟ್ರೀಯ ಅರ್ಥಶಾಸ್ತ್ರ, ಸಾರ್ವಜನಿಕ ಹಣಕಾಸು, ಭಾರತೀಯ ಆರ್ಥಿಕತೆ ಇತ್ಯಾದಿಗಳಾಗಿದ್ದರೂ ಸಹ, ಇತ್ತೀಚಿನ ವರ್ಷಗಳಲ್ಲಿ ಸಿಇಎಸ್‌ಪಿ ಅಧ್ಯಾಪಕ ವೃಂದದ ಕಾರ್ಯಕ್ಷೇತ್ರವನ್ನು ಯೋಜನಾ ನಿರ್ದಿಷ್ಟ ಸಂಶೋಧನೆಯು ಬಹುಪಾಲು ಆವರಿಸಿದೆ. ಆದರೂ ಸಹ, ಆರ್ಥಿಕ ಸಿದ್ಧಾಂತ, ಸಾಧನಗಳು ಹಾಗೂ ಮಾದರಿಗಳನ್ನು ವಿವಿಧ ಸೈದ್ಧಾಂತಿಕ ಹಾಗೂ ಕಾರ್ಯನೀತಿ ಸಂಶೋಧನೆಗಳಿಗೆ ಅನ್ವಯಿಸುವುದು ಸಾಧ್ಯವಾಗಿಲ್ಲ. ಇಂದಿನ ತನಕ ಒಂಭತ್ತು ಯೋಜನೆಗಳು ಪೂರ್ಣಗೊಂಡಿವೆ; ಒಂದೆರಡು ವರದಿಗಳು ಕರಡು ಹಂತದಲ್ಲಿದ್ದು, ಕೆಲವು ಯೋಜನೆಗಳನ್ನು ಪ್ರಾರಂಭಿಸಲಾಗಿದೆ.

ಕೇಂದ್ರದಲ್ಲಿ ಪ್ರಸ್ತುತ ೧೨ ಸಂಶೋಧನಾ ಕಾರ್ಯಕ್ರಮಗಳು ಪ್ರಗತಿಯಲ್ಲಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ: (೧) ಭಾರತಕ್ಕಾಗಿ ಯುವ ಅಭಿವೃದ್ಧಿ ಸೂಚ್ಯಂಕವನ್ನು ರಚಿಸುವುದು – ಏಕೆಂದರೆ ಭಾರತದ ಹೊಸ ಪೀಳಿಗೆಯ ಶೇ.೪೦ ಭಾಗ ಯುವಕರೇ ಆಗಿದ್ದು, ಈ ಯೋಜನೆಯು ಯುವ ಪ್ರಾಬಲ್ಯದ ಅನುಕೂಲಗಳನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯನೀತಿಯನ್ನು ರೂಪಿಸುವ ದೃಷ್ಟಿಯಿಂದ ಮಹತ್ವದ್ದಾಗಿದೆ. ಇನ್ನೊಂದು ಯೋಜನೆಯಾದ "ಬೆಂಗಳೂರು ಮತ್ತು ನ್ಯೂಯಾರ್ಕ್ ನಗರಗಳಲ್ಲಿನ ಪರಿಸರ ಬದಲಾವಣೆ, ನಗರ ನೀರು ಪೂರೈಕೆ ಮತ್ತು ಬೇಡಿಕೆ ನಿರ್ವಹಣೆಗಳಲ್ಲಿನ ದಕ್ಷತೆ"ಯು ನ್ಯೂಯಾರ್ಕ್ ನಗರದ ಅನುಭವದಿಂದ ದೊರೆತ ಪಾಠವನ್ನು ಬೆಂಗಳೂರು ನಗರದಲ್ಲಿನ ಕೊರತೆ ಮಟ್ಟದಲ್ಲಿನ ಜಲಸಂಪನ್ಮೂಲಗಳ ಪೂರೈಕೆ ಮತ್ತು ಬೇಡಿಕೆ ಆಯ್ಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ನೆರವಾಗುತ್ತದೆ. ಮತ್ತೊಂದು ಯೋಜನೆಯಾದ "ಗ್ರಾಮೀಣ ಭಾರತದಲ್ಲಿನ ಕೃಷಿ ವಲಯ ಮತ್ತು ಕೃಷಿಯೇತರ ವಲಯಗಳ ಸಂಪರ್ಕದ ನಕ್ಷೆ ತಯಾರಿಕೆ"ಯು ಗ್ರಾಮೀಣ ಅಭಿವೃದ್ಧಿಗೆ ಈ ವಲಯಗಳು ನೀಡುವ ಕೊಡುಗೆಯನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗುತ್ತದೆ. "ಕರ್ನಾಟಕದಲ್ಲಿನ ಆಡಳಿತ: ಒಲವು, ಗಮ್ಯ ಅಂಶಗಳು ಹಾಗೂ ಮಾರ್ಗಸೂಚಿ" ಎಂಬ ಅಧ್ಯಯನವು ರಾಜ್ಯಕ್ಕೆ ಸಮಗ್ರ ಕೊಳಚೆ ಪ್ರದೇಶಾಭಿವೃದ್ಧಿ ಕಾರ್ಯನೀತಿ ರೂಪಿಸುವ ಬಗ್ಗೆ ಸಲಹೆ ನೀಡುವ ಬಗೆಯದ್ದಾಗಿದೆ. "ಕೃಷಿ ಸಾಲದಲ್ಲಿ ಬಡ್ಡಿ ಮನ್ನಾ: ಇದು ಉದ್ದೇಶವನ್ನು ಈಡೇರಿಸುತ್ತದೆಯೇ?" ಎಂಬ ಅಧ್ಯಯನವು ಅಲ್ಪಾವಧಿ ಉತ್ಪಾದನಾ ಸಾಲಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಹಾಗೂ ಸಹಕಾರಿ ಬ್ಯಾಂಕುಗಳಿಗೆ ಶೇ.೨ರಷ್ಟು ಬಡ್ಡಿಮೊತ್ತದ ಕೊಡುಗೆಯನ್ನು ನೀಡುವ ಸಾರ್ಥಕತೆಯ ಮೌಲ್ಯ ಮಾಪನ ಮಾಡುತ್ತದೆ. "ಉದಯಿಸುತ್ತಿರುವ ಮಾರುಕಟ್ಟೆಗಳಲ್ಲಿ ಆಹಾರ ವಿತರಣೆ: ಭಾರತದ ಮೀನುಗಾರಿಕೆ ಪ್ರಕರಣ" ಎಂಬ ಅಧ್ಯಯನವು ಭಾರತದಲ್ಲಿನ ಸಾಮಾಜಿಕ-ಆರ್ಥಿಕ ಗುಂಪುಗಳಾದ್ಯಂತ ಮೀನು ಆಹಾರದ ವಿತರಣೆಯ ಅಧ್ಯಯನವನ್ನು ಮಾಡುತ್ತದೆ. ಕರ್ನಾಟಕ ಸರ್ಕಾರದ ಸದನ ಸಮಿತಿಯು ಪುರಸ್ಕರಿಸಿರುವ ಅಧ್ಯಯನವಾದ "ಬೆಂಗಳೂರು-ಮೈಸೂರು ಒಳಹಂದರ ರಸ್ತೆ ಯೋಜನೆಯ ಸಾಮಾಜಿಕ-ಆರ್ಥಿಕ ವಿಶ್ಲೇಷಣೆ"ಯ ಒಪ್ಪಂದದ ಚೌಕಟ್ಟಿನಲ್ಲಾಗಿರುವ ಪ್ರಮುಖ ಉಲ್ಲಂಘನೆಗಳು ಹಾಗೂ ಅವುಗಳಿಂದಾಗಿ ಯೋಜನೆಯ ಅನುಷ್ಠಾನದಲ್ಲಾಗಿರುವ ವಿಘ್ನಗಳನ್ನು ತನಿಖೆ ಮಾಡುತ್ತದೆ. ಜೊತೆಗೆ ಇದರಿಂದಾಗುವ ಸಾಮಾಜಿಕ-ಆರ್ಥಿಕ ಪರಿಣಾಮಗಳು; ನಿರ್ದಿಷ್ಟವಾಗಿ ನಿವ್ವಳ ಪ್ರಸ್ತುತ ಮೌಲ್ಯ ಮತ್ತು ಆಂತರಿಕ ವರಮಾನ ದರಗಳ ಮೇಲಾಗುವ ಪರಿಣಾಮಗಳನ್ನು ಮತ್ತು ಯೋಜನೆಯಿಂದ



ಬಾಧಿತವಾಗಿರುವ ಜನರ ಮೇಲಾಗಿರುವ ಪರಿಣಾಮಗಳನ್ನು ಸಹ ತನಿಖೆ ಮಾಡುತ್ತದೆ. ಅಧ್ಯಯನದ ಫಲಿತಾಂಶಗಳನ್ನು ಸದನ ಸಮಿತಿಯು ಮೆಚ್ಚುಗೆಯಿಂದ ಒಪ್ಪಿಗೊಂಡಿದೆ. "ವ್ಯಾಪಾರ ವಹಿವಾಟು, ಲಿಂಗ ಪ್ರಭೇಧ ಮತ್ತು ಆಹಾರ ಭದ್ರತೆ: ನೀಲಗಿರಿಯಲ್ಲಿನ ಟೀ ತೋಟಗಳನ್ನು ದೃಷ್ಟಿಯಲ್ಲಿಟ್ಟುಕೊಂಡು" ಎಂಬ ಅಧ್ಯಯನವು ನೀಲಗಿರಿಯಲ್ಲಿನ ತೋಟಗಳ ಕಾರ್ಮಿಕರ ಆಹಾರ ಭದ್ರತೆಯ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸಿದೆ. "ಭಾರತದಲ್ಲಿ ಸಮಾಜ ವಿಜ್ಞಾನ ಸಂಶೋಧನೆಗಾಗಿ ಹಣ ನೀಡುವ ಸಂಪನ್ಮೂಲಗಳು: ಹರಿವು, ಸಾಕಷ್ಟು ಪ್ರಮಾಣದಲ್ಲಿರುವಿಕೆ ಹಾಗೂ ಆದ್ಯತೆಗಳು" ಎಂಬ ಅಧ್ಯಯನವು ಸಮಾಜ ವಿಜ್ಞಾನ ಸಂಶೋಧನೆಗೆ ನೀಡುತ್ತಿರುವ ಧನ ಸಹಾಯದಲ್ಲಿನ ಅಸಮಾನತೆಯನ್ನು ಎತ್ತಿ ತೋರಿಸುತ್ತಲ್ಲದೆ, ಧನ ಸಹಾಯವನ್ನು ಹೆಚ್ಚಿಸಲು ಕಾರ್ಯನೀತಿ ಸಲಹೆಗಳನ್ನೂ ಸಹ ನೀಡುತ್ತದೆ. ಅಂತರ್ರಾಷ್ಟ್ರೀಯ ಸಹಯೋಗ ಹೊಂದಿರುವ ಯೋಜನೆಯಾದ "ವಿವಿಧ ಆಯಾಮಗಳ ಶ್ರೇಯೋಭಿವೃದ್ಧಿ: ಪರಿಕಲ್ಪಿತ, ಕಾರ್ಯವಿಧಾನದ ಹಾಗೂ ವಿಶ್ಲೇಷಣಾತ್ಮಕ ದೃಷ್ಟಿಕೋನಗಳು" ಎಂಬ ಅಧ್ಯಯನವು ಭಾರತ ಹಾಗು ಸ್ವಿಟ್ಜರ್ಲೆಂಡ್ ದೇಶಗಳಿಗಾಗಿ ವಿವಿಧ ಆಯಾಮಗಳ ಶ್ರೇಯೋಭಿವೃದ್ಧಿ ಸೂಚ್ಯಂಕವನ್ನು ನಿರ್ಧರಿಸುವಲ್ಲಿ ತೊಡಗಿದೆ.

ಕೇಂದ್ರದ ಅಧ್ಯಾಪಕ ವೃಂದವು ತೀರ್ಪುಗಾರರುಳ್ಳ ನಿಯತಕಾಲಿಕೆಗಳಲ್ಲಿ ಸಾಕಷ್ಟು ಲೇಖನಗಳನ್ನು ಪ್ರಕಟಿಸಿರುವುದಲ್ಲದೆ ಗ್ರಂಥಗಳ ಸಂಪಾದನೆಯನ್ನೂ ಮಾಡಿದ್ದಾರೆ. ಜೊತೆಗೆ ಗ್ರಂಥಗಳನ್ನು, ನೀಳ ಲೇಖನಗಳನ್ನು ಹಾಗೂ ಕಾರ್ಯನಿರತ ಸಂಶೋಧನಾ ಲೇಖನಗಳನ್ನೂ ಸಹ ಬರೆದಿದ್ದಾರೆ. ಕೇಂದ್ರವು ನಿಯಮಿತವಾಗಿ ಭಾರತೀಯ ಸಾಂಖ್ಯಿಕ ಸೇವೆಗಳ (ಐಎಸ್‌ಎಸ್) ಪರೀಕ್ಷಾರ್ಥ ಸೇವಾವಧಿ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಮಾಡುತ್ತಿರುವುದಲ್ಲದೆ, ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳು ಹಾಗೂ ಕಾರ್ಯಾಗಾರಗಳನ್ನೂ ಸಹ ಏರ್ಪಡಿಸುತ್ತಿದೆ.

### ೫. ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ (ಸಿಎಚ್‌ಆರ್‌ಡಿ)

ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವು (ಸಿಎಚ್‌ಆರ್‌ಡಿ) ಈ ಮೊದಲು "ಶಿಕ್ಷಣ ಘಟಕ" ವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈ ಘಟಕವನ್ನು ವಿವಿದೋದ್ದೇಶ ಘಟಕವಾಗಿ ಪರಿವರ್ತಿಸಲೂ ಮತ್ತು ಕೇಂದ್ರದ ಬೋಧನಾ ವ್ಯಾಪ್ತಿಯನ್ನು ವಿಶಾಲಗೊಳಿಸಲೂ ೨೦೦೬ ರಲ್ಲಿ ಮರುನಾಮಕರಣ ಮಾಡಲಾಯಿತು. ಈ ಕೇಂದ್ರವು ಸಾರ್ವಜನಿಕ ಸಂಸ್ಥೆಗಳು ಮತ್ತು ವೃತ್ತಿಪರ ಜ್ಞಾನ ವೃದ್ಧಿ ಮಾಡಲು, ಸಾರ್ವಜನಿಕ ಕಾರ್ಯ ನೀತಿಗಳನ್ನು ರೂಪಿಸಲು ಮತ್ತು ಸುಧಾರಣೆ ಮಾಡಲು, ತನ್ನ ಕೊಡುಗೆಯನ್ನು ನೀಡುವ ಸಲುವಾಗಿ ಸಂಶೋಧನೆ, ವಿಸ್ತರಣೆ, ತರಬೇತಿ ಮತ್ತು ಸಮಾಲೋಚನೆಗಳ ಮೂಲಕ ಶಿಕ್ಷಣ ನೀಡುವತ್ತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಮಾಡುವತ್ತ ತನ್ನ ಗಮನವನ್ನು ಕೇಂದ್ರೀಕರಿಸಿದೆ.

ಈ ಕೇಂದ್ರವು ಸಂಸ್ಥೆಯ ಪಿಎಚ್‌ಡಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದೆ. ಪಿಎಚ್‌ಡಿ ಪೂರ್ವ ಪಠ್ಯಕ್ರಮದ ಶಿಕ್ಷಣ ವಿಭಾಗದ ಭಾಗ 'ಎ' ಮತ್ತು 'ಬಿ' ಪಠ್ಯಗಳನ್ನು ತಯಾರಿಸುವ ಕಾರ್ಯದಲ್ಲಿ ಮತ್ತು ಅದನ್ನು ಬೋಧಿಸುವಲ್ಲಿ ಕೇಂದ್ರದ ಅಧ್ಯಾಪಕ ಸಿಬ್ಬಂದಿಯು ತೊಡಗಿಸಿಕೊಂಡಿದೆ. ಆಲ್‌ಫ್ರೆಡ್ ನೊಬೆಲ್ ಸ್ಮರಣಾರ್ಥ ಅರ್ಥಶಾಸ್ತ್ರದಲ್ಲಿನ ಸ್ವೆರಿಜ್ಸ್ ರಿಕ್ಸ್‌ಬ್ಯಾಂಕ್ ಬಹುಮಾನ ವಿಜೇತರ ಜರ್ಮನಿಯಲ್ಲಿನ ಐದನೇ ಲಿಂಡಾ ಸಭೆಯಲ್ಲಿ ಯುವ ಅರ್ಥಶಾಸ್ತ್ರಜ್ಞರಾಗಿ ಈ ಕೇಂದ್ರದ ಅಧ್ಯಾಪಕ ಸಿಬ್ಬಂದಿ ಒಬ್ಬರು ಭಾಗವಹಿಸಿದ್ದರು. ಅಂತೆಯೇ, ಕೇಂದ್ರದ ಅಧ್ಯಾಪಕ ಸಿಬ್ಬಂದಿಯು ಐಸೆಕ್‌ನ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರಲ್ಲದೆ, ಪ್ರವಚನಗಳನ್ನೂ ನೀಡುತ್ತಿದ್ದಾರೆ. ಇದರ ಜೊತೆಗೆ ಬೆಂಗಳೂರಿನ ವಿವಿಧ ಮಹಾವಿದ್ಯಾಲಯಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಗಳನ್ನೂ ಸಹ ನೀಡುತ್ತಿದ್ದಾರೆ.

ಕೇಂದ್ರದ ಅಧ್ಯಾಪಕ ವೃಂದದ ಎಲ್ಲರೂ ರಾಷ್ಟ್ರದ ಒಳಗಿನ ಮತ್ತು ಹೊರಗಿನ ವಿವಿಧ ಸ್ಥಳಗಳಲ್ಲಿ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ. ಅಧ್ಯಾಪಕ ವೃಂದದ ಗಮನಾರ್ಹ ಪ್ರಕಟಣೆಗಳಲ್ಲಿ ರಟ್ಲೆಡ್ಜ್–ಟೇಲರ್ ಮತ್ತು ಫ್ರಾನ್ಸಿಸ್ ಗುಂಪು (ಲಂಡನ್/ನ್ಯೂಯಾರ್ಕ್) ನಲ್ಲಿನ ಪ್ರಕಟಣೆ, ಐದು ಸಂಪಾದಿತ ಗ್ರಂಥಗಳು – ಬೆಂಗಳೂರಿನ ನಿರುತಾ ಪ್ರಕಟಣ ಸಂಸ್ಥೆ, ವಾರಣಾಸಿಯ (ಉತ್ತರ ಪ್ರದೇಶ) ನೂತನ್ ಪ್ರಕಟಣ ಸಂಸ್ಥೆ, ರಾಮನಗರದ ಅಂಕನಹಳ್ಳಿ ಪ್ರಕಾಶನ ಹಾಗೂ ನವದೆಹಲಿಯ ಜಾಗತಿಕ ಸಂಶೋಧನಾ ಪ್ರಕಟಣ ಸಂಸ್ಥೆ. ಇವುಗಳ ಜೊತೆಗೆ ಪ್ರತಿಷ್ಠಿತ ನಿಯತಕಾಲಿಕೆಗಳು ಮತ್ತು ಸಂಪಾದಿತ ಸಂಪುಟಗಳಲ್ಲಿ ಅನೇಕ ಸಂಶೋಧನಾ ಲೇಖನಗಳೂ ಸಹ ಪ್ರಕಟಗೊಂಡಿವೆ.

ಕೇಂದ್ರವು ನವದೆಹಲಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ನೇಮಿಸಿದ ಸಂಪರ್ಕ ಸಂಸ್ಥೆಯಾಗಿ ಈಚೆಗೆ ಕರ್ನಾಟಕದ ೧೬ ಜಿಲ್ಲೆಗಳಲ್ಲಿನ ಸರ್ವ ಶಿಕ್ಷಾ ಅಭಿಯಾನ (ಎಸ್‌ಎಸ್‌ಎ) ಹಾಗೂ ಮಧ್ಯಾಹ್ನದ ಊಟ (ಎಂಡಿಎಂ) ಕಾರ್ಯಕ್ರಮಗಳ ಉಸ್ತುವಾರಿಯನ್ನು ಮುಂದುವರೆಸಿತು. ಅಧ್ಯಾಪಕ ವೃಂದದ ಒಬ್ಬ ಮುಖ್ಯ ಸದಸ್ಯರಿಗೆ "ಮಧ್ಯಾಹ್ನದ ಊಟದ ರಾಜ್ಯಮಟ್ಟದ ಜಂಟಿ ಪರಿಶೀಲನಾ ಅಭಿಯಾನ" ದ ಸದಸ್ಯರಾಗುವ ಗೌರವ ಲಭಿಸಿತು. ಈ ಕಾರ್ಯದ ಉದ್ದೇಶವು ಕಾರ್ಯಕ್ರಮದ ಉಸ್ತುವಾರಿಯನ್ನು ವಿಶ್ಲೇಷಿಸುವುದು ಹಾಗೂ ನಿರ್ವಹಣೆಯನ್ನು ಪರೀಕ್ಷಿಸುವುದಾಗಿರುವುದಲ್ಲದೆ, ಶಾಲೆಗಳಿಗೆ/ಅಡಿಗೆ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ಆಗುವ ಹಣದ ಹರಿವನ್ನು ಪರಿಶೀಲಿಸುವುದೂ ಸಹ ಆಗಿದೆ. ಶಾಲಾ ಆರೋಗ್ಯ ಕಾರ್ಯಕ್ರಮವು ಗುಣಮಟ್ಟದಲ್ಲಿ ವಿಶಿಷ್ಟವಾಗುವುದಕ್ಕಾಗಿಯೂ ಮತ್ತು ಶಾಲಾ ಮಕ್ಕಳಿಗೆ ಅನುಕೂಲಕರವಾಗುವುದಕ್ಕಾಗಿಯೂ ಸಹ ಈ ಕಾರ್ಯಕ್ರಮದ ಪರೀಕ್ಷಣೆಯನ್ನು ಮಾಡಲಾಯಿತು.

# ಐಸೆಕ್

ಭಾಭಾ ಪರಮಾಣು ಸಂಶೋಧನಾ ಕೇಂದ್ರವು (ಬಿಎಆರ್‌ಸಿ) "ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ವಿಶೇಷ ಸಾಮಗ್ರಿಗಳನ್ನಿಡುವ ಸೌಲಭ್ಯ ಮಾಡಿಕೊಳ್ಳಲು ಪ್ರಸ್ತಾವಿಸಲಾದ ಜಾಗದ ಜನಸಂಖ್ಯೆ ಮತ್ತು ಆರೋಗ್ಯ ಸಮೀಕ್ಷೆ" ಎಂಬ ಅಧ್ಯಯನಕ್ಕೆ ಧನ ಸಹಾಯ ನೀಡಿತ್ತು. ಈ ಅಧ್ಯಯನವು ೨೦೧೪ ರಲ್ಲಿ ಪೂರ್ಣಗೊಂಡಿತು. ಅಧ್ಯಯನವು ಆ ಪ್ರದೇಶದ ಫಲವತ್ತತೆ, ನಶ್ವರತೆ ಹಾಗೂ ವಲಸೆಗಳ ಬಗ್ಗೆ ಎಲ್ಲೆಗೆರೆ ಸಮೀಕ್ಷೆಯನ್ನು ಹೊರತಂದಿತು. ಈ ರೀತಿ ದಾಖಲಾದ ಆ ಪ್ರದೇಶದ ಆರೋಗ್ಯ ಚಿತ್ರಣವು ಅಂದರೆ ಅಲ್ಲಿರುವ ಸಾಮಾನ್ಯ ರೋಗ ಸಮಸ್ಯೆಗಳು, ಜೀವನ ಶೈಲಿ ಪದ್ಧತಿಗಳು ಇತ್ಯಾದಿಯು ಆ ಪ್ರದೇಶದ ಭವಿಷ್ಯದ ಅಭಿವೃದ್ಧಿಗಾಗಿ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲು ಬಿಎಆರ್‌ಸಿ ಸಂಸ್ಥೆಗೆ ನೆರವಾಗುವ ಸಾಧ್ಯತೆ ಇದೆ. ಕೇಂದ್ರವು ಈಚೆಗೆ ಎರಡು ಯೋಜನೆಗಳನ್ನು ಪೂರ್ಣಗೊಳಿಸಿತು. ಅವೆಂದರೆ: (ಅ) ಭಾರತದಲ್ಲಿ ವಿದ್ಯಾವಂತರ ನಿರುದ್ಯೋಗ: ಕಾರಣಗಳು, ಪರಿಣಾಮಗಳು ಹಾಗೂ ಪರಿಹಾರಗಳು, (ಆ) ಶಾಲಾ ಮಟ್ಟದಲ್ಲಿ ಪರಿಸರ ಶಿಕ್ಷಣದ ಸ್ಥಿತಿಗತಿಗಳು: ಬೆಂಗಳೂರಿನ ಹೆಬ್ಬಾಳ ಸಮುಚ್ಚಯದ ಪ್ರಕರಣ.

ಕೇಂದ್ರದ ಅಧ್ಯಾಪಕ ವೃಂದವು ಅನೇಕ ಸಾಮರ್ಥ್ಯಾಭಿವೃದ್ಧಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಸಂಯೋಜಿಸಿದ್ದಾರೆ. ಅವೆಂದರೆ ನವದೆಹಲಿಯ ಐಸಿಎಸ್‌ಎಸ್‌ಆರ್ ಸಂಸ್ಥೆಯಿಂದ ಪುರಸ್ಕೃತವಾದ "ಬುಡಕಟ್ಟು ಜನಾಂಗಗಳು ಮತ್ತು ಗಿರಿಜನ ಉಪಯೋಜನೆಗೆ ಸೇರಿದ ಇತರ ಅಂಚಿಗೆ ತಳ್ಳಿದ ಗುಂಪುಗಳಿಗೆ ಸೇರಿದ ಸಂಶೋಧನಾ ವಿದ್ವಾಂಸರು ಹಾಗೂ ಅಧ್ಯಾಪಕ ವೃಂದಕ್ಕೆ ಮಾರ್ಗ ಪ್ರವರ್ತನ ಕಾರ್ಯಕ್ರಮ"; ಕೇರಳ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಉಪಕ್ರಮಿಕೆಯಾದ "ಶೈಕ್ಷಣಿಕ ನಾವೀನ್ಯತೆ ಮತ್ತು ಸಂಶೋಧನೆಗಳ ನಡುವಣ ಸಂಪರ್ಕವನ್ನು ಬಲಪಡಿಸುವುದು" (ಫ್ಲೇರ್)ನ ಮೂಲಕ ಸಂಯೋಜಿಸಿದ "ಸಮಾಜ ವಿಜ್ಞಾನದಲ್ಲಿನ ಜ್ಞಾನೋತ್ಪಾದನೆ: ಮಾರ್ಗಗಳು ಹಾಗೂ ಪದ್ಧತಿಗಳು". ಈ ತರಬೇತಿ ಕಾರ್ಯಕ್ರಮಗಳಲ್ಲದೆ ಕೇಂದ್ರವು ಪದವಿಗಾಗಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಶ್ರೀ ರತನ್ ಟಾಟಾ ದತ್ತಿ ನಿಧಿಯ (ಎಸ್‌ಆರ್‌ಟಿಟಿ) ಆರ್ಥಿಕ ಸಹಾಯದೊಂದಿಗೆ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಕ್ರಿಸ್ತ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ೨೦೧೧ ರಿಂದಲೂ ಐಸೆಕ್‌ನ ಚಾಲ್ತಿ ಯೋಜನೆಯಾಗಿರುವ "ಸಮಾಜ ವಿಜ್ಞಾನ ಪ್ರತಿಭಾನ್ವೇಷಣೆ ಕಾರ್ಯಕ್ರಮವನ್ನು (ಎಸ್‌ಎಸ್‌ಟಿಎಸ್‌ಎಸ್)" ಏರ್ಪಡಿಸಿತ್ತು. ಈ ಕಾರ್ಯಕ್ರಮವು ಸಮಾಜ ವಿಜ್ಞಾನದ ವಿದ್ಯಾರ್ಥಿಗಳು ಈ ವಿಜ್ಞಾನದ ವಿವಿಧ ವಿಭಾಗಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಮತ್ತು ಅದರಲ್ಲಿ ಆಸಕ್ತಿ ಉಳಿಸಿಕೊಳ್ಳಲು ಬೆಂಬಲ ನೀಡುತ್ತದೆ. ಕೇಂದ್ರದ ಒಬ್ಬ ಅಧ್ಯಾಪಕ ಸದಸ್ಯರು "ಸಂಶೋಧನಾ ಕಾರ್ಯಪದ್ಧತಿಗಳು ಮತ್ತು ಅವುಗಳ ಅನ್ವಯಿಕತೆ" ಬಗೆಗಿನ ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮದ ಸಂಯೋಜಕರಾಗಿದ್ದಾರೆ. ಇದೂ ಅಲ್ಲದೆ, ಕೇಂದ್ರದ ಅಧ್ಯಾಪಕ ಸಿಬ್ಬಂದಿಯು ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ "ಶಿಕ್ಷಣ, ಮೇಲುಗೈ ಸಾಧಿಸುವಿಕೆ, ಬಿಡುಗಡೆ ಹಾಗೂ ಘನತೆ" ಎಂಬ ವಿಷಯದ ಬಗೆಗಿನ ರಾಷ್ಟ್ರೀಯ ಸಮಾವೇಶವನ್ನು ಏರ್ಪಡಿಸಿದ್ದರು. ಈ ಕೇಂದ್ರವು ಶಿಕ್ಷಣ ಮತ್ತು ಮಾನವ ಸಂಪನ್ಮೂಲವನ್ನು ಶ್ರೀಮಂತಗೊಳಿಸುವ ಬಗೆಗಿನ ಹೊಸದಾಗಿ ಹೊರಹೊಮ್ಮುತ್ತಿರುವ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉತ್ಸುಕವಾಗಿದೆ.

## ೬. ರಾಜಕೀಯ ಸಂಸ್ಥೆಗಳು, ಆಡಳಿತ ಮತ್ತು ಅಭಿವೃದ್ಧಿಯ ಕೇಂದ್ರ (ಸಿಪಿಐಜಿಡಿ)

ಈ ಕೇಂದ್ರವು ೨೦೦೬ ರಲ್ಲಿ ಸಂಸ್ಥೆಯ ಘಟಕಗಳನ್ನು ಮರುವರ್ಗೀಕರಿಸಿದ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದಿತು. ಪೂರ್ವದಲ್ಲಿ ಇದನ್ನು ೧೯೭೪ರಲ್ಲಿ ಪ್ರೊ. ಅಮಲ್ ರೇ ಮತ್ತು ಪ್ರೊ. ಬಿ.ಎಸ್. ಭಾರ್ಗವರವರ ನೇತೃತ್ವದಲ್ಲಿ "ಅಭಿವೃದ್ಧಿ ಆಡಳಿತ ಘಟಕ"ವೆಂಬುದಾಗಿ ಸ್ಥಾಪಿಸಲಾಗಿತ್ತು.

ಈ ಕೇಂದ್ರವು ಸ್ಥಾಪನೆಯಾದಾಗಿನಿಂದ ಅನೇಕ ಮೈಲಿಗಲ್ಲುಗಳನ್ನು ದಾಟಿದೆ. ಕೇಂದ್ರವು ಪ್ರಕಟಿಸಿರುವ ೫೪ ಸಂಶೋಧನಾ ಕಾರ್ಯಕ್ರಮಗಳು, ೧೬ ಗ್ರಂಥಗಳು, ೭ ನೀಳ ಲೇಖನಗಳು, ೩೦ ಕಾರ್ಯನಿರತ ಸಂಶೋಧನಾ ಲೇಖನಗಳು, ೫೦೦ಕ್ಕಿಂತಲೂ ಹೆಚ್ಚಿನ ಸಂಶೋಧನಾ ಲೇಖನಗಳು ಮತ್ತು ೩೨ ಪಿಎಚ್‌ಡಿ ಪದವಿಗಳ ಹೆಗ್ಗಳಿಕೆ ಈ ಕೇಂದ್ರದ್ದಾಗಿದೆ.

## ಪ್ರಾಮುಖ್ಯತೆಯ ಕ್ಷೇತ್ರ

ಈ ಕೇಂದ್ರದ ಮುಖ್ಯ ಗಮನವು ಆಡಳಿತಕ್ಕೆ ಸಂಬಂಧಿಸಿದ್ದು (ಸಾರ್ವಜನಿಕ ಕಾರ್ಯ ನೀತಿಗಳು ಮತ್ತು ಅವುಗಳ ಪ್ರಭಾವ), ಇದಕ್ಕಾಗಿ ಅಭಿವೃದ್ಧಿ ಮತ್ತು ವಿತರಣಾಡಳಿತಗಳೆರಡರ ಬಗ್ಗೆಯೂ ಗಮನ ನೀಡಲಾಗಿದೆ. ಕೇಂದ್ರದ ಮತ್ತೊಂದು ಮುಖ್ಯ ಸಂಶೋಧನಾ ಆಯಾಮವು ಅಭಿವೃದ್ಧಿಯ ರಾಜಕೀಯ ಆರ್ಥಿಕತೆಯ ಮೇಲಿನ ಸ್ಥಿರ ತಾಳಿಕೆಯುಳ್ಳ ಗಮನ ಹರಿಸುವಿಕೆಯಾಗಿದೆ. ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ಧಿಗಳೆರಡರಲ್ಲೂ ಸೇರ್ಪಡಿಸುವಿಕೆ ಮತ್ತು ಬೇರ್ಪಡಿಸುವಿಕೆ ಅಂಶಗಳತ್ತ ಈ ಗಮನವು ಕೇಂದ್ರೀಕೃತವಾಗಿದೆ.

ಹಲವಾರು ವರ್ಷಗಳಿಂದ ಕೇಂದ್ರವು ಈ ಮುಂದಿನ ಮುಖ್ಯ ಅಂಶಗಳ ಬಗ್ಗೆಯೂ ಕಾರ್ಯ ಪ್ರವೃತ್ತವಾಗಿದೆ: ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನವನ್ನು ರಾಜಕೀಯ ಮತ್ತು ಆಡಳಿತ ದೃಷ್ಟಿಕೋನದಿಂದ ಮಾಡುವುದು; ಸಾಮಾಜಿಕವಾಗಿ ಅನಾನುಕೂಲಕ್ಕೊಳಗಾದ ಗುಂಪುಗಳನ್ನು ಸದೃಢಗೊಳಿಸುವುದು, ಯೋಜನೆ, ವಿಕೇಂದ್ರೀಕೃತ ಆಡಳಿತ, ರಾಜಕೀಯ ಮತ್ತು ಆಡಳಿತ ನಾಯಕತ್ವ, ಒಕ್ಕೂಟ ವ್ಯವಸ್ಥೆ,

# ಐಸೆಕ್



ವಿಕೇಂದ್ರೀಕರಣ ಹಾಗೂ ಉತ್ತಮ ಆಡಳಿತ. ಕೇಂದ್ರದ ದೃಷ್ಟಿಕೋನ ಹಾಗೂ ಸಂಶೋಧನಾ ಕಾರ್ಯಸೂಚಿಯು ಯಾವಾಗಲೂ ಕ್ರಿಯಾಶಕ್ತಿಯುತವಾಗಿದ್ದು, ರಾಜಕೀಯ ಸಂಸ್ಥೆಗಳ ಕರ್ತ್ಯವ್ಯಕ್ಕನುಗುಣವಾಗಿ ತನ್ನ ಕಾರ್ಯ ಸೂಚಿಯನ್ನೂ ಪ್ರವೃತ್ತಗೊಳಿಸಿಕೊಳ್ಳುತ್ತಿದೆ. ಇದು ಜಾಗತೀಕರಣವಾಗಿರಬಹುದು ಅಥವಾ ಪ್ರಜಾ ಪ್ರಭುತ್ವದ ವಿಕೇಂದ್ರೀಕರಣವಾಗಿರಬಹುದು ಅಥವಾ ಹೊಸ ಸಾಮಾಜಿಕ ಮತ್ತು ರಾಜಕೀಯ ಆಂದೋಲನಗಳಾಗಿರಬಹುದು ಅಥವಾ ತಾಂತ್ರಿಕ ಕ್ರಾಂತಿಗಳಾಗಿರಬಹುದು (ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ). ಇಂತಹ ಅಧ್ಯಯನಗಳು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಅಂಶಗಳೆರಡಕ್ಕೂ ಪ್ರಾಧಾನ್ಯತೆ ನೀಡುತ್ತಿರುವುದರಿಂದ ನಮ್ಮ ಸಂಶೋಧನೆಯಲ್ಲಿ ತೀವ್ರತೆಯನ್ನು ತಂದಿರುವುದಲ್ಲದೆ, ಕಾರ್ಯನೀತಿ ರೂಪಿಸುವವರಿಗೆ ಮತ್ತು ವಿದ್ವಾಂಸರಿಗೆ ಸೂಕ್ತವಾಗುವ ರೀತಿಯಲ್ಲಿವೆ.

## ಸಾಧನೆಗಳು

ಕೇಂದ್ರದ ಅಧ್ಯಾಪಕ ವೃಂದವು ೨೦೧೫ರ ಏಪ್ರಿಲ್‌ನಿಂದ ಮಾರ್ಚ್ ೨೦೧೬ರವರೆಗೆ ವಿಶಾಲ ವ್ಯಾಪ್ತಿಯ ವಿಷಯಗಳನ್ನುಳ್ಳ, ಸೈದ್ಧಾಂತಿಕ, ಪ್ರಾಯೋಗಿಕ ಮತ್ತು ಕಾರ್ಯನೀತಿ ಪರಿಣಾಮಗಳುಳ್ಳ ಅನೇಕ ಯೋಜನೆಗಳ ಬಗ್ಗೆ ಕರ್ತವ್ಯ ನಿರ್ವಹಿಸಿದೆ. ಈ ಯೋಜನೆಗಳು ಯಾವುವೆಂದರೆ: ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ನಗರಾಡಳಿತ ಕಾರ್ಯನೀತಿ ಮತ್ತು ಯೋಜನೆ; ಹೊಸ ಸೇವಾ ಆರ್ಥಿಕತೆಯಲ್ಲಿ ಕೆಲಸ ಹಾಗೂ ಕಾರ್ಮಿಕರು – ಬೆಂಗಳೂರಿನ ಒಂದು ಮುಂಚೂಣಿ ಅಧ್ಯಯನ; ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ನಗರಾಡಳಿತ ಮತ್ತು ಸ್ಥಳೀಯ ಪ್ರಜಾಪ್ರಭುತ್ವ; ಹಾಗೂ ಕಾರ್ಯ ಚಟುವಟಿಕೆಯ ತತ್ವಶಾಸ್ತ್ರ; ಹನ್ನಾ ಆರಂಡ್ಟ್ ಹಾಗೂ ಆಧುನಿಕತೆ – ಬೃಹತ್ ಉದ್ದಿಮೆಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಯೋಜನೆಗಳಡಿಯಲ್ಲಿ ಯೋಜಿಸಲಾದ ಯಾದ್ಗೀರ್ ಜಿಲ್ಲೆಯ ಯೋಜನಾ ಗ್ರಾಮಗಳ ಫಲಾನುಭವಿಗಳ ಅಂದಾಜೀಕರಣ. ಮೇಲಿನ ಕೆಲವು ಯೋಜನೆಗಳನ್ನು ಐಸೆಕ್, ಐಸಿಎಸ್‌ಎಸ್‌ಆರ್, ಸಿಎಸ್‌ಆರ್ ಹಾಗೂ ಕರ್ನಾಟಕ ಸರ್ಕಾರ ವಿವಿಧ ಸಂಸ್ಥೆಗಳು ಹಾಗೂ ಸರ್ಕಾರದ ಪ್ರಾಯೋಜಿಸಿವೆ.

ಕೇಂದ್ರದ ಅಧ್ಯಾಪಕ ವೃಂದವು ಅನೇಕ ಸಂಶೋಧನಾ ಲೇಖನಗಳನ್ನು ಪ್ರಕಟಿಸಿವೆ. ಜೊತೆಗೆ ಇನ್ನೂ ಹಲವು ಲೇಖನಗಳು ತೀರ್ಪುಗಾರರುಳ್ಳ ನಿಯತಕಾಲಿಕೆಗಳಲ್ಲಿ, ಸಂಪಾದಿತ ಗ್ರಂಥಗಳಲ್ಲಿ, ನೀಳ ಲೇಖನಗಳಲ್ಲಿ ಹಾಗೂ ಕಾರ್ಯನಿರತ ಸಂಶೋಧನೆಗಳ ವರದಿಗಳಲ್ಲಿ ಪ್ರಕಟವಾಗುವ ಹಂತದಲ್ಲಿವೆ. ಈ ಲೇಖನಗಳ ಕಾರ್ಯಕ್ಷೇತ್ರಗಳು ಈ ರೀತಿ ಇವೆ: ಸ್ವಯಂ ಉದ್ಯೋಗ: ಆಯಾಮಗಳು ಮತ್ತು ವೈವಿಧ್ಯತೆಗಳು; ಸ್ಥಳೀಯ ಆಡಳಿತದಲ್ಲಿ ಲಿಂಗ ಸಮಾನತೆ; ಕಾರ್ಮಿಕ ಅಧ್ಯಯನಗಳಲ್ಲಿ ಬದಲಾಗುತ್ತಿರುವ ಪ್ರಾಮುಖ್ಯತೆಗಳು; ಕರ್ನಾಟಕದಲ್ಲಿ ನಗರಾಡಳಿತ: ಜಾಗತಿಕ ಬದಲಾವಣೆಗಳು ಮತ್ತು ಸ್ಥಳೀಯ ಪರಿಣಾಮಗಳು; ನಗರಗಳಿಗೆ ಹಕ್ಕು: ಆಡಳಿತ ಅಂಶಗಳು; ಕೃಷಿ ಕಾರ್ಮಿಕರು ಹಾಗೂ ಲಿಂಗ ಆಯಾಮ; ಭಾರತದಲ್ಲಿ ಕಾರ್ಯನೀತಿ ವಿಧಾನವಾಗಿ ವಿಕೇಂದ್ರೀಕರಣ; ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ನೇರ ಹಾಗೂ ಪರೋಕ್ಷ ಚುನಾವಣೆ: ಚಿಂತನೆಗಳು ಮತ್ತು ಪರಿಣಾಮಗಳು; ಭಾರತದಲ್ಲಿ ರಾಜಕೀಯ ಮತ್ತು ಆಡಳಿತ ವಿಕೇಂದ್ರೀಕರಣ: ದೂರದೃಷ್ಟಿ ಹಾಗೂ ವಾಸ್ತವತೆ; ನಗರಾಡಳಿತ ಮತ್ತು ಸಾಂಸ್ಥಿಕ ಪುನರ್ರಚನೆ: ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಹಾಗೂ ಭಾಗವಹಿಸುವಿಕೆಯ ಮೂಲಕ ಮಹಿಳೆಯರನ್ನು ಸಶಕ್ತರನ್ನಾಗಿಸುವುದು.

ಯೋಜನೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಸಕ್ರಿಯವಾಗಿ ಕಾರ್ಯಗತಗೊಳಿಸುವುದು ಹಾಗೂ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದೂ ಅಲ್ಲದೆ ಅಧ್ಯಾಪಕ ವೃಂದವು ವಿಚಾರ ಸಂಕಿರಣಗಳಲ್ಲಿ ಹಾಗೂ ಕಾರ್ಯಾಗಾರಗಳಲ್ಲಿ ಸಂಶೋಧನಾ ಲೇಖನಗಳನ್ನೂ ಮಂಡಿಸಿದೆ. ಜೊತೆಗೆ ಅವರನ್ನು ಪ್ರಧಾನ ಭಾಷಣ ಹಾಗೂ ಅಧ್ಯಕ್ಷೀಯ ಭಾಷಣಗಳನ್ನು ನೀಡಲೂ ಸಹ ಆಹ್ವಾನಿಸಲಾಗಿತ್ತು. ವಿಶೇಷ ಉಪನ್ಯಾಸಗಳನ್ನೂ ನೀಡಿದ್ದಾರೆ. ತಜ್ಞರ ತಂಡಗಳ ಸದಸ್ಯರಾಗಿ ಮತ್ತು ವಿಶೇಷ ಚರ್ಚಾಪಟುಗಳಾಗಿಯೂ ಅಧ್ಯಾಪಕ ವೃಂದವು ಕರ್ತವ್ಯ ನಿರ್ವಹಿಸಿದೆ.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳು, ಸಮಾವೇಶಗಳು, ಕಾರ್ಯಾಗಾರಗಳು ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉಪನ್ಯಾಸಗಳನ್ನು ನೀಡಿರುವುದು ಕೇಂದ್ರದ ಸಾಧನೆಯಾಗಿದೆ. ಇವುಗಳ ಮುಖ್ಯ ವಿಷಯಗಳು ಈ ರೀತಿ ಇವೆ: ಸಂಶೋಧನಾ ವಿಧಾನಗಳು, ಕನಿಷ್ಟ ವೇತನ, ಕೊಳೆಗೇರಿಗಳ ನಿರ್ಮೂಲನೆಯ ಬಗ್ಗೆ ಸಾರ್ವಜನಿಕ ವಾದದ ಆಲಿಕೆ, ಕಾರ್ಮಿಕ ಆಡಳಿತದ ಬದಲಾಗುತ್ತಿರುವ ಮಾದರಿಗಳು, ಅನೌಪಚಾರಿಕತೆಯನ್ನು ಸಿದ್ದಾಂತೀಕರಿಸುವಿಕೆ, ಗ್ರಾಮೀಣ ಉದ್ಯಮಶೀಲತೆಯ ಗುಣಗಳು, ಗ್ರಾಮೀಣ ಸ್ಥಿತ್ಯಂತೀಕರಣ – ಅವಕಾಶಗಳು, ನಿರೀಕ್ಷೆಗಳು, ಸವಾಲುಗಳು, ಜೀವಿ ಪರಿಸರ ಶಾಸ್ತ್ರ ಮತ್ತು ಕಾರ್ಮಿಕೀಕರಣ, ವಿಕೇಂದ್ರೀಕೃತ ಆಡಳಿತ ಮತ್ತು ಗ್ರಾಮೀಣಾಭಿವೃದ್ಧಿಯ ಯೋಜನೆ, ಗ್ರಾಮೀಣ ಭಾರತದಲ್ಲಿ ನೈರ್ಮಲ್ಯ, ವಿಕೇಂದ್ರೀಕರಣ ಮತ್ತು ಅಭಿವೃದ್ಧಿ, ಸಂವಿಧಾನದ ೭೩ನೆಯ ತಿದ್ದುಪಡಿಯ ಪ್ರಮುಖ ಅಂಶಗಳು, ಭಾರತದಲ್ಲಿ ರಾಜಕೀಯ ಮತ್ತು ಆಡಳಿತ ವಿಕೇಂದ್ರೀಕರಣ – ದರ್ಶನ ಮತ್ತು ವಾಸ್ತವತೆ.

ಕೇಂದ್ರದ ಎಲ್ಲಾ ಅಧ್ಯಾಪಕ ಸದಸ್ಯರನ್ನೂ ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು, ಪಿಎಚ್‌ಡಿ ಪೂರ್ವ ಸಂಯೋಜಕರಾಗಿ ಕರ್ತವ್ಯ ನಿರ್ವಹಿಸಲು ಹಾಗೂ ಬೋಧನಾ ಕರ್ತವ್ಯ ನಿರ್ವಹಿಸಲು ಬಳಸಿಕೊಳ್ಳಲಾಗಿದೆ. ಈ ಸದಸ್ಯರನ್ನು ಸಂಸ್ಥೆಯ ಇತರ ಕೇಂದ್ರಗಳ ಹಾಗೂ ಭಾರತದ ಉದ್ದಗಲಕ್ಕೂ ಹೆಸರಾಂತ ವಿಶ್ವವಿದ್ಯಾಲಯಗಳ ಪಿಎಚ್‌ಡಿ ವಿದ್ಯಾರ್ಥಿಗಳ ಸಲಹಾ ಸಮಿತಿಗಳಲ್ಲಿ ಭಾಗವಹಿಸಲು ಕೋರಲಾಗಿತ್ತು. ಇದರ ಜೊತೆಗೆ ೧೦ ಜನ ಪಿಎಚ್‌ಡಿ ವಿದ್ಯಾರ್ಥಿಗಳು ಈ ಕೇಂದ್ರಕ್ಕೆ ಸೇರಿದವರಾಗಿದ್ದು, ಇವರುಗಳು ತಮ್ಮ ಡಾಕ್ಟೊರಲ್ ಪ್ರಬಂಧಕ್ಕಾಗಿ ವಿಶಾಲ ವ್ಯಾಪ್ತಿಯ

ಅಂಶಗಳ ಮೇಲೆ ಸಂಶೋಧನೆಯನ್ನು ಮಾಡುತ್ತಿದ್ದಾರೆ. ಕರ್ನಾಟಕ ಸರ್ಕಾರದ ಹಾಗೂ ವಿವಿಧ ವೃತ್ತಿಪರ ಸಂಸ್ಥೆಗಳಲ್ಲಿನ ಬಹಳಷ್ಟು ಉನ್ನತಾಧಿಕಾರ ಸಮಿತಿಗಳಲ್ಲಿ ಕರ್ತವ್ಯ ನಿರ್ವಹಿಸುವ ಹಿರಿಮೆಯು ಕೇಂದ್ರದ ಅಧ್ಯಾಪಕ ವೃಂದಕ್ಕೆ ದೊರೆತಿದೆ.

ಕೇಂದ್ರವು ಮುಂಬರುವ ತಿಂಗಳುಗಳಲ್ಲಿ ಈ ಮುಂದೆ ನಿರೂಪಿಸಿರುವ ಕ್ಷೇತ್ರಗಳಲ್ಲಿ ಸಂಶೋಧನೆ, ಬೋಧನೆ ಹಾಗೂ ತರಬೇತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಯೋಜಿಸುತ್ತಿದೆ: ಅಭಿವೃದ್ಧಿ ರಾಜಕೀಯ, ಜಾಗತೀಕರಣ, ಪ್ರಜಾ ಪ್ರಭುತ್ವ ವಿಕೇಂದ್ರೀಕರಣ, ಹಕ್ಕುಗಳು, ಶ್ರಮ, ಒಕ್ಕೂಟ ವ್ಯವಸ್ಥೆ, ವಿಕೇಂದ್ರೀಕರಣ ಹಾಗೂ ಆಡಳಿತ – ರಾಜಕೀಯ, ಆಡಳಿತ, ಗ್ರಾಮೀಣ, ನಗರ, ವಲಯವಾರು ಹಾಗೂ ಎಲೆಕ್ಟ್ರಾನಿಕ್.

## ೭. ನಗರ ವಿದ್ಯಮಾನಗಳ ಸಂಶೋಧನಾ ಕೇಂದ್ರ (ಸಿಆರ್‌ಯುಎ)

ನಗರ ವಿದ್ಯಮಾನಗಳ ಸಂಶೋಧನಾ ಕೇಂದ್ರವು (ಸಿಆರ್‌ಯುಎ) ಐಸೆಕ್ ಸಂಸ್ಥೆಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿರುವುದು ಮಾತ್ರವಲ್ಲದೆ, ಈ ಕೇಂದ್ರದ ಅಧ್ಯಾಪಕ ಸಿಬ್ಬಂದಿಯ ವಿಷಯ ತಜ್ಞತೆಯನ್ನು ಗಣನೆಗೆ ತೆಗೆದುಕೊಂಡರೆ ಇಲ್ಲಿ ಬೋಧಿಸಲಾಗುತ್ತಿರುವ ಪ್ರಾಥಮಿಕ ನಗರ ಹಾಗೂ ಪ್ರಾದೇಶಿಕ ಅರ್ಥವ್ಯವಸ್ಥೆ, ಭಾರತೀಯ ನಗರಾಭಿವೃದ್ಧಿ ಮತ್ತು ನಗರಗಳ ಅನೌಪಚಾರಿಕ ವಲಯದಲ್ಲಿನ ಲಿಂಗ ಸಂಬಂಧಿ ಅಂಶಗಳು ಮುಂತಾದ ಪಠ್ಯಕ್ರಮಗಳಿಂದಾಗಿ ಇಡೀ ರಾಷ್ಟ್ರದಲ್ಲೇ ಈ ಕೇಂದ್ರವು ವಿಶಿಷ್ಟವಾಗಿದೆ. ಭಾರತದಲ್ಲಿ ಇದೊಂದು ಪ್ರವರ್ಧಮಾನಕ್ಕೆ ಬರುತ್ತಿರುವ ಸಂಶೋಧನಾ ಕ್ಷೇತ್ರವಾಗಿದ್ದು, ಇದರ ಬಗ್ಗೆ ಬೋಧನೆ ಮತ್ತು ಸಂಶೋಧನೆಗಳು ವ್ಯಾಪಕವಾಗಿ ನಡೆದಿರುವುದಿಲ್ಲ. ಕೇಂದ್ರದ ಅಧ್ಯಾಪಕ ಸಿಬ್ಬಂದಿಯು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾದ ನಿಯತಕಾಲಿಕೆಗಳಲ್ಲಿ ಸಾಕಷ್ಟು ಸಂಶೋಧನಾ ಲೇಖನಗಳನ್ನು ಬರೆದಿದ್ದು, ಇದರಿಂದಾಗಿ ಐಸೆಕ್‌ನ ಪಿಎಚ್‌ಡಿ ಕಾರ್ಯಕ್ರಮದಲ್ಲಿನ ನಗರ ಅಧ್ಯಯನ ಪಠ್ಯಗಳನ್ನು ಬೋಧಿಸುವ ವಿಶಿಷ್ಟ ಅನುಕೂಲವು ಈ ಕೇಂದ್ರಕ್ಕೆ ದೊರೆತಿದೆಯಲ್ಲದೆ, ಈ ವಿಷಯದಲ್ಲಿನ ಕಾರ್ಯನೀತಿಗೆ ಸಂಬಂಧಿಸಿದ ಸಂಶೋಧನೆಯಲ್ಲಿ ತೀವ್ರವಾಗಿ ತೊಡಗಿಸಿಕೊಳ್ಳುವುದಕ್ಕೂ ಸಹಕಾರಿಯಾಗಿದೆ.

ಈ ಕೇಂದ್ರವು ಆದ್ಯತೆ ನೀಡುವ ಸಂಶೋಧನಾ ಕ್ಷೇತ್ರಗಳು ಯಾವುದೆಂದರೆ, ನಗರ ಯೋಜನೆ, ಭೂ ಬಳಕೆ ನಿಬಂಧನೆಗಳು ಮತ್ತು ಅವುಗಳು ನಗರದ ಸ್ವರೂಪ ಮತ್ತು ಸಾಂದ್ರತೆಗಳ ಮೇಲೆ ಬೀರುವ ಪ್ರಭಾವ, ಭಾರತದ ನಗರಗಳಲ್ಲಿನ ವಾತಾವರಣ ಬದಲಾವಣೆಯ ಆರ್ಥಿಕ ಪ್ರಭಾವಗಳನ್ನೊಳಗೊಂಡ ನಗರ ಜೀವಿಪರಿಸರ ಶಾಸ್ತ್ರ, ನೈರ್ಮಲ್ಯ ಲಭ್ಯತೆ, ತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ಪರಿಸರದ ಮೇಲೆ ಅವುಗಳ ಪ್ರಭಾವ, ಜಲ ಸಂರಕ್ಷಣೆ ಮತ್ತು ಮರು ಬಳಕೆಯ ಬಗ್ಗೆ ಕೇಂದ್ರೀಕೃತವಾದ ಜಲಸಂಪನ್ಮೂಲಗಳ ನಿರ್ವಹಣೆ, ಭಾರತದ ನಗರಗಳ ವೈಶಿಷ್ಟ್ಯತೆಗಳು ಹಾಗೂ ಸ್ಪರ್ಧಾತ್ಮಕತೆ ಮೌಲ್ಯೀಕರಣವನ್ನು ಒಳಗೊಂಡ ನಗರಾಡಳಿತ, ಭಾರತದ ನಗರಗಳ ಉಪನಗರೀಕರಣ ಹಾಗೂ ನಗರಗಳ ಅತಿ ಜರೂರು ಸಮಸ್ಯೆಗಳ ಪರಿಹಾರಕ್ಕಾಗಿ ನವೀನ ಸಾಧನಗಳ (ಜಿಐಎಸ್ ಅಥವಾ ಭೂ ಭಾಗ ಮಾಹಿತಿ ಪದ್ಧತಿ) ಬಳಕೆ ಇತ್ಯಾದಿ. ಈಚೆಗೆ ಕೇಂದ್ರದ ಇನ್ನೊಂದು ಹೆಚ್ಚುವರಿ ಒತ್ತು ಕಾರ್ಯಕ್ಷೇತ್ರವು ನಗರ ಪ್ರದೇಶಗಳಲ್ಲಿನ ಲಿಂಗ ಪ್ರಭೇಧ ಅಂಶಗಳು ಮತ್ತು ಅನೌಪಚಾರಿಕ ವಲಯಗಳಾಗಿವೆ.

ಹೊಸದಾಗಿ ಸ್ಥಾಪಿತಗೊಂಡ ಈ ಕೇಂದ್ರದ ಹೆಗ್ಗಳಿಕೆಯೇನೆಂದರೆ ಪ್ರಾರಂಭವಾದ ಮೊದಲ ಎರಡು ವರ್ಷಗಳಲ್ಲೇ ಐಸೆಕ್‌ನ ನಗರ ಅಧ್ಯಯನದ ಪಿಎಚ್‌ಡಿ ಕಾರ್ಯಕ್ರಮದ ಭಾಗ 'ಎ' ಮತ್ತು ಭಾಗ 'ಬಿ' ಗಳನ್ನೊಳಗೊಂಡ ನಾಲ್ಕು ಹೊಸ ಪಿಎಚ್‌ಡಿ ಮಟ್ಟದ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿ, ಅವುಗಳನ್ನು ಬೋಧಿಸಲು ಸಮರ್ಥವಾಗಿರುವುದಾಗಿದೆ. ಕೇಂದ್ರವು ನಾಲ್ಕು ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿದೆ: ಮೂವರು ಪೂರ್ಣಾವಧಿ ವಿದ್ಯಾರ್ಥಿಗಳು ಹಾಗೂ ಒಬ್ಬರು ಅರೆಕಾಲಿಕ ವಿದ್ಯಾರ್ಥಿ. ಈ ಕೇಂದ್ರದ ತೀರಾ ಇತ್ತೀಚಿನ ಸಾಧನೆಯೆಂದರೆ ಸುಸ್ಥಿರ ನಗರಗಳು ಹಾಗೂ ನಗರೀಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ನಗರ ಹಿತಾಸಕ್ತಿ ಸಂಸ್ಥೆ ಹಾಗೂ ಯುನೈಟೆಡ್ ಕಿಂಗ್‌ಡಂನ ಸಂಶೋಧನಾ ಪರಿಷತ್ತುಗಳ (ಆರ್‌ಸಿಯುಕೆ) ಅಂತರ್‌ರಾಷ್ಟ್ರೀಯ ಜಾಲದಲ್ಲಿ ಒಂದು ಭಾಗವಾಗಿ ಸೇರಿಕೊಂಡಿರುವುದಾಗಿದೆ.

ಶೈಶವಾವಸ್ಥೆಯಲ್ಲಿರುವ ಈ ಕೇಂದ್ರದ ಸಂಶೋಧನಾ ಚಟುವಟಿಕೆಗಳೆಂದರೆ ಐಸಿಎಸ್‌ಎಸ್‌ಆರ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ ಇವುಗಳು ಬೆಂಗಳೂರಿನಲ್ಲಿ ಜೀವಿಸುವ ಸಾಧ್ಯತೆ ಹಾಗೂ ವಿಸ್ತೃತ ಬೆಳವಣಿಗೆ ಕುರಿತಂತೆ ಹಲವು ಸಂಶೋಧನಾ ಯೋಜನೆಗಳಿಗೆ ಧನ ಸಹಾಯ ಪಡೆದಿದ್ದು, ಅವುಗಳ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಇವುಗಳ ಜೊತೆಗೆ ಐಸೆಕ್ ಸಂಸ್ಥೆಯ ಸಂಶೋಧನಾ ಕಾರ್ಯಕ್ರಮಗಳ ಸಮಿತಿಯು ನೀಡಿರುವ ಧನ ಸಹಾಯದಿಂದ ಬೆಂಗಳೂರು ನಗರ ಸಮೀಕ್ಷೆಯನ್ನು ಕುರಿತಂತೆ ಒಂದು ಪೈಲಟ್ ಯೋಜನೆಯನ್ನೂ ಸಹ ಪೂರ್ಣಗೊಳಿಸಿದೆ. ಕೇಂದ್ರದ ಪೂರ್ಣಗೊಂಡ ಇತರ ಯೋಜನೆಗಳು ಈ ರೀತಿ ಇವೆ: ರಸ್ತೆ ಬದಿಯ ಮಹಿಳಾ ವ್ಯಾಪಾರಸ್ಥರು ಹಾಗೂ ಮಹಿಳೆಯರ ಸಂತಾನೋತ್ಪತ್ತಿ ಆರೋಗ್ಯ. ಇವುಗಳಿಗೆ ಐಸೆಕ್‌ನ ಆರ್‌ಪಿಸಿ ಹಾಗೂ ಐಸಿಎಸ್‌ಎಸ್‌ಆರ್ ಸಂಸ್ಥೆ ಇವುಗಳು ಧನ ಸಹಾಯ ಮಾಡಿವೆ. ಸದ್ಯ ಪ್ರಗತಿಯಲ್ಲಿರುವ ನಗರ ಸಾರಿಗೆ ಆಡಳಿತದ ಮೇಲಿನ ಒಂದು ಚಾಲ್ತಿ ಯೋಜನೆಗೆ ವಿಶ್ವ ಸಂಪನ್ಮೂಲ ಸಂಸ್ಥೆಯು (ಡಬ್ಲ್ಯುಆರ್‌ಐ) ಧನ ಸಹಾಯ ಮಾಡಿದೆ. ಭಾರತ ಸರ್ಕಾರದ ಮಾನವ ವಸಾಹತುಗಳ ಸಂಶೋಧನಾ ಸಂಸ್ಥೆಯು "ನಗರ ನೈರ್ಮಲ್ಯ: ನಗರದ ಬಡಜನರಿಗೆ ಅದು ದೊರಕುವಿಕೆ" ಎಂಬ ಇನ್ನೇನು ಪೂರ್ಣಗೊಳ್ಳುತ್ತಿರುವ ಕೇಂದ್ರದ ಯೋಜನೆಗೆ ಧನ ಸಹಾಯ ನೀಡಿದೆ.



ಪ್ರಕಟಣೆಗಳ ಬಗ್ಗೆ ಹೇಳುವುದಾದರೆ, ಕೇಂದ್ರದ ಅಧ್ಯಾಪಕ ಸದಸ್ಯರೊಬ್ಬರು ಬರೆದಿರುವ "ಭಾರತದ ಉತ್ತರ–ದಕ್ಷಿಣ ವಿಭಜನೆಯ ವಿಪರ್ಯಾಸ" (ಸೇಜ್, ೨೦೧೫) ಗ್ರಂಥವೊಂದನ್ನು ವ್ಯಾಪಕವಾಗಿ ಪರಾಮರ್ಶಿಸಲಾಗಿದೆ. ಇದರ ಜೊತೆಗೆ ಹಲವಾರು ನೀಳ ಸಂಶೋಧನಾ ಲೇಖನಗಳು ಹಾಗೂ ಸಂಶೋಧನಾ ಲೇಖನಗಳನ್ನೂ ಸಹ ಇತರ ಎಲ್ಲೆಡೆಯ ಸಂಶೋಧನಾ ಸಹವರ್ತಿಗಳು ಪರಾಮರ್ಶಿಸುವ ನಿಯತಕಾಲಿಕೆಗಳಲ್ಲಿ ಪ್ರಕಟಿಸಲಾಗಿದೆ (ಏಶಿಯಾದ ಪರಿಸರ ಹಾಗೂ ನಗರೀಕರಣ, ನಿರ್ವಹಣೆ ಮತ್ತು ಕಾರ್ಮಿಕ ಅಧ್ಯಯನಗಳು, ಸಾರ್ವಜನಿಕ ಕಾಮಗಾರಿಗಳ ನಿರ್ವಹಣೆ ಮತ್ತು ಕಾರ್ಯನೀತಿ, ಹಾಗೂ ಏಶಿಯಾ ಫೆಸಿಫಿಕ್ ಅಭಿವೃದ್ಧಿ ನಿಯತಕಾಲಿಕೆ). ಕೇಂದ್ರದ ಅಧ್ಯಾಪಕ ವೃಂದವು ಹಲವಾರು ಪ್ರತಿಷ್ಠಿತ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ನಗರ ನಿಯತಕಾಲಿಕೆಗಳ ಪರಾಮರ್ಶನಕಾರರಾಗಿದ್ದಾರೆ (ಚೀನಾ ರಿಪೋರ್ಟ್ ಹಾಗೂ ಏಶಿಯಾದ ಪರಿಸರ ಮತ್ತು ನಗರೀಕರಣ). ಜೊತೆಗೆ ಈ ವೃಂದವು ರಾಷ್ಟ್ರೀಯ ಮಾಧ್ಯಮಗಳಿಗೆ ಮತ್ತು ಆರ್ಥಿಕ ದಿನಪತ್ರಿಕೆಗಳಿಗೆ ಅಂಕಣ ಬರಹಗಳನ್ನೂ ಬರೆದುಕೊಟ್ಟಿದೆ (ಇಕನಾಮಿಕ್ ಟೈಮ್ಸ್, ಟೈಮ್ಸ್ ಆಫ್ ಇಂಡಿಯಾ, ಬಿಸಿನೆಸ್ ಸ್ಟ್ಯಾಂಡರ್ಡ್, ಫೈನಾನ್ಷಿಯಲ್ ಎಕ್ಸ್‌ಪ್ರೆಸ್, ಡೆಕ್ಕನ್ ಕ್ರಾನಿಕಲ್ ಹಾಗೂ ಸ್ಥಳೀಯ ಭಾಷೆಗಳ ದಿನಪತ್ರಿಕೆಗಳು). ಈ ಕೇಂದ್ರದ ಅಧ್ಯಾಪಕ ವೃಂದವು ಉನ್ನತ ಸಂಸ್ಥೆಗಳಲ್ಲೂ ಸಹ ಹೆಸರುವಾಸಿಯಾಗಿದ್ದಾರೆ. ಅವೆಂದರೆ: ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ನಗರ ವಿದ್ಯಮಾನ ಸಂಸ್ಥೆ; ಅಂತರ್‌ರಾಷ್ಟ್ರೀಯ ಸಂಸ್ಥೆಗಳಾದ ಯುನೈಟೆಡ್ ಕಿಂಗ್‌ಡಮ್ಮಿನ ಸಂಶೋಧನಾ ಪರಿಷತ್ತುಗಳು, ಸಿಂಗಪುರ್‌ನ ರಾಷ್ಟ್ರೀಯ ವಿಶ್ವವಿದ್ಯಾಲಯದ ದಕ್ಷಿಣ ಏಷ್ಯಾ ಅಧ್ಯಯನಗಳ ಸಂಸ್ಥೆ (ಐಎಸ್‌ಎಎಸ್) ಹಾಗೂ ಏಷಿಯನ್ ಅಭಿವೃದ್ಧಿ ಬ್ಯಾಂಕ್ ಸಂಸ್ಥೆ). ಈ ಸಂಸ್ಥೆಗಳು ಕೇಂದ್ರದ ಅಧ್ಯಾಪಕ ವೃಂದವನ್ನು ವಿವಿಧ ಸಮಾವೇಶಗಳಲ್ಲಿ ಹಾಗೂ ಕಾರ್ಯಾಗಾರಗಳಲ್ಲಿ ಮಾತನಾಡಲು ಕರೆದಿವೆ. ವಿಚಾರ ವೇದಿಕೆಯೊಂದರಲ್ಲಿ "ಕೇಂದ್ರ ಸರ್ಕಾರದ ೧೪ನೇ ಹಣಕಾಸು ಆಯೋಗದ ಶಿಫಾರಸ್ಸುಗಳು ನಗರ ಪ್ರದೇಶಗಳ ಮೇಲೆ ಬೀರುವ ಪರಿಣಾಮಗಳ ಬಗ್ಗೆಯೂ ಹಾಗೂ "ಕರ್ನಾಟಕದ ನಾಲ್ಕನೆಯ ರಾಜ್ಯ ಹಣಕಾಸು ಆಯೋಗಕ್ಕೆ ಸಿಆರ್‌ಯುಎ ಯ ಹಣಕಾಸು ಸಂಶೋಧನೆ" ಯನ್ನೂ ಮಂಡಿಸಿದೆ. ಈ ಕೇಂದ್ರದ ಮುಖ್ಯಸ್ಥರು ಚೀನಾದ ಶಾಂಘೈನಲ್ಲಿ ನಡೆಯಲಿರುವ ನಗರಗಳ ಸ್ಥಿತ್ಯಂತೀಕರಣ ೨೦೧೬ ಸಮಾವೇಶದ ವೈಜ್ಞಾನಿಕ ಸಮಿತಿಯ ಸದಸ್ಯರಾಗಿದ್ದು, ಈ ಸಮಾವೇಶವನ್ನು ಎಲ್ಸೆವಿಯರ್ ಮತ್ತು ಏಲ್ ವಿಶ್ವವಿದ್ಯಾಲಯಗಳು ಏರ್ಪಡಿಸಿವೆ. ಕೇಂದ್ರದ ಅಧ್ಯಾಪಕ ವೃಂದವು "ಆನ್ವಯಿಕ ಪದ್ಧತಿಗಳ ವಿಶ್ಲೇಷಣೆಯ ಬಗೆಗಿನ ಅಂತರ್‌ರಾಷ್ಟ್ರೀಯ ಸಂಸ್ಥೆ" ಯು ನೀಡುವ ಪೆಕ್ಕೈ ಮತ್ತು ಮಿಖಾಲೆವಿಚ್ ಪ್ರಶಸ್ತಿಗಳಿಗೆ ತೀರ್ಪುಗಾರರಾಗಿದ್ದರು. ಇವುಗಳ ಜೊತೆಗೆ ಕೇಂದ್ರದ ಅಧ್ಯಾಪಕ ವೃಂದವು ನಗರ ಸಂಶೋಧನೆಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾದ ಸಂಸ್ಥೆಗಳು ಮತ್ತು ಕೇಂದ್ರೀಯ ವಿಶ್ವವಿದ್ಯಾಲಯಗಳ ಅಂದರೆ ಮದ್ರಾಸ್‌ನ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ), ಮದ್ರಾಸ್ ಅರ್ಥಶಾಸ್ತ್ರ ಶಾಲೆ ಹಾಗೂ ಕರ್ನಾಟಕದ ಕೇಂದ್ರೀಯ ವಿಶ್ವವಿದ್ಯಾಲಯದ ನೋಂದಾಯಿತ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ನೀಡಿದ್ದಾರೆ.

ನಗರ ವಿದ್ಯಮಾನ ಅಧ್ಯಯನವು ಉದಯಿಸುತ್ತಿರುವ ಕ್ಷೇತ್ರವಾಗಿದ್ದು, ಈಗ ಇದು ಕರ್ನಾಟಕದಲ್ಲಿ ಮಾತ್ರವಲ್ಲದೆ ರಾಷ್ಟ್ರಮಟ್ಟದಲ್ಲಿ ಹಾಗೂ ಜಾಗತಿಕ ಮಟ್ಟದಲ್ಲೂ ತನಗೆ ನ್ಯಾಯವಾಗಿ ಸಿಗಬೇಕಾದ ಗಮನವನ್ನು ಗಳಿಸಿಕೊಂಡಿರುವುದರಿಂದ, ಕೇಂದ್ರವು ಈಗ ಒಂದು ವಿಶಿಷ್ಟ ಬುದ್ಧಿ ಸಂಗ್ರಹಾಗಾರವಾಗಲು ಸಿದ್ಧವಾಗಿದೆ ಹಾಗೂ ನಗರ ಕಾರ್ಯನೀತಿಯ ಮೇಲೆ ಸಾಕಷ್ಟು ಪ್ರಭಾವ ಬೀರಬಹುದಾದ ಹರಿತವಾದಂತಹ ನಗರ ಸಂಶೋಧನೆಯನ್ನು ಮಾಡಲೂ ಮತ್ತು ಇತರ ಸಂಸ್ಥೆಗಳೊಂದಿಗೆ ಸಹಯೋಗದಿಂದ ಸಂಶೋಧನೆ ನಡೆಸಲೂ ಆಸಕ್ತವಾಗಿದೆ.

## ೮. ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ ಅಧ್ಯಯನ ಕೇಂದ್ರ (ಸಿಎಸ್‌ಎಸ್‌ಸಿಡಿ)

ಈ ಕೇಂದ್ರದ ಪ್ರಮುಖ ಸಂಶೋಧನಾ ಕ್ಷೇತ್ರಗಳು ಮುಖ್ಯವಾಗಿ ಅರ್ಥಪೂರ್ಣ ನಾಗರಿಕತೆ ಮತ್ತು ಅಭಿವೃದ್ಧಿ ಹಾಗೂ ಸಾಮಾಜಿಕ ಬದಲಾವಣೆಯ ಸ್ವರೂಪ, ವಿಧಾನಗಳು ಮತ್ತು ಧ್ಯೇಯಗಳ ಅಧ್ಯಯನವಾಗಿದೆ. ಅಧ್ಯಾಪಕ ಸಿಬ್ಬಂದಿಯ ಸದ್ಯದ ಸಂಶೋಧನಾ ಕಾರ್ಯವು ವ್ಯಾಪಕ ಶ್ರೇಣಿಯದ್ದಾಗಿದ್ದು, ಜಾತಿಯ ಪ್ರಶ್ನೆಗಳು ಮತ್ತು ಎಲ್ಲೆಗಳು, ನಾಗರಿಕ ಸಮಾಜ, ರಾಜಕೀಯ ವಿಕೇಂದ್ರೀಕರಣ, ಶಿಕ್ಷಣ, ಕಾರ್ಮಿಕರ ಆರೋಗ್ಯ, ವಲಸೆ ಹಾಗೂ ಅಂಚಿನ ಸ್ಥಾನಮಾನಗಳಲ್ಲಿನ ಸಾಮಾಜಿಕ ಕುಸಿತ ಇತ್ಯಾದಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಗುರಿಗಳಾಗಿವೆ. ಈ ಸಂಶೋಧನಾ ಅಧ್ಯಯನಗಳನ್ನು ಅಧ್ಯಾಪಕ ಸಿಬ್ಬಂದಿಯು ತಮ್ಮ ಸಂಶೋಧನಾ ಆಸಕ್ತಿಗಳು, ಐಸೆಕ್ ಸಂಸ್ಥೆಯ ಅಗತ್ಯತೆಗಳು ಹಾಗೂ ಅಧ್ಯಯನಗಳನ್ನು ಪ್ರಾಯೋಜಿಸುವ ಸಂಸ್ಥೆಗಳ ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ನಡೆಸುತ್ತಿದ್ದಾರೆ.

ಈ ಅವಧಿಯಲ್ಲಿ ಅಧ್ಯಾಪಕ ಸಿಬ್ಬಂದಿಯು ಎರಡು ಸಂಶೋಧನಾ ಅಧ್ಯಯನಗಳನ್ನು ಮತ್ತು ಒಂದು ಹೊರ ಸಂಸ್ಥೆಗಳ ನೆರವಿನ ಯೋಜನೆಯನ್ನು ಪೂರ್ಣಗೊಳಿಸಿದ್ದಾರೆ. ಇವೆಂದರೆ: (೧) ಈಶಾನ್ಯ ಭಾರತದ ಪರಿಶಿಷ್ಟ ಪಂಗಡಗಳ ಆರ್ಥಿಕತೆಯ ಮೇಲೆ ಶಿಕ್ಷಣ ಮತ್ತು ಉದ್ಯೋಗವು ಬೀರಿರುವ ಪ್ರಭಾವ (ಐಸಿಎಸ್‌ಎಸ್‌ಆರ್), (೨) ಕನಾಟಕದಲ್ಲಿನ ಆಯ್ದ ಗ್ರಾಮಗಳಲ್ಲಿನ ದಲಿತ ಮತ್ತು ಮುಸ್ಲಿಂ ಸಮುದಾಯಗಳ ಆರೋಗ್ಯಾಪೇಕ್ಷಿ ನಡವಳಿಕೆಗಳ ರೀತಿ ಮತ್ತು ತಾರತಮ್ಯ ಹಾಗೂ ಪದ್ಧತಿಗಳು (ಕೇರಳ ಸರ್ಕಾರ). ಈ ಅವಧಿಯಲ್ಲಿ ೩ ಹೊಸ ಅಧ್ಯಯನಗಳನ್ನು ಕೈಗೆತ್ತಿಕೊಳ್ಳಲಾಗಿದೆ: (೧) ಕರ್ನಾಟಕದಲ್ಲಿನ ಗ್ರಾಮ ಪಂಚಾಯಿತಿಗಳು: ಪ್ರತಿನಿಧಿಗಳ ಮೀಸಲಾತಿ ಮತ್ತು ಭಾಗವಹಿಸುವಿಕೆ; (೨) ಕರ್ನಾಟಕದ ಕುಡುಬಿ ಸಮುದಾಯ: ಒಂದು ಜನಾಂಗೀಯ ಅಧ್ಯಯನ; ಹಾಗೂ (೩) ಭಾರತದಲ್ಲಿ ನಿರೋಧಾತ್ಮಕ ಮತ್ತು ಆರೋಗ್ಯವರ್ಧಕ ವೈದ್ಯಕೀಯ

# ಐಸೆಕ್

ಪದ್ಧತಿ:  ಸಾರ್ವಜನಿಕ ಆರೋಗ್ಯದ ಮೇಲಿನ ಪರಿಣಾಮಗಳು. ಅಧ್ಯಾಪಕ ಸಿಬ್ಬಂದಿಯು ಭಾರತೀಯ ವೈದ್ಯಕೀಯ ಸಂಶೋಧನಾ ಅನುಸಂಧಾನ, ಐಸಿಎಸ್‌ಎಸ್‌ಆರ್ ಹಾಗೂ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯಗಳಿಗೂ ಸಂಶೋಧನಾ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಾರೆ.

ಕೇಂದ್ರದ ಅಧ್ಯಾಪಕ ವೃಂದವು ತಮ್ಮ ಸಂಶೋಧನಾ ಫಲಿತಾಂಶಗಳನ್ನು ಗ್ರಂಥಗಳ ರೂಪದಲ್ಲಿ, ಸಂಪಾದಿತ ಗ್ರಂಥಗಳಲ್ಲಿ, ನಿಯತಕಾಲಿಕೆಗಳಲ್ಲಿನ ಹಾಗೂ ಸಂಪಾದಿತ ಗ್ರಂಥಗಳಲ್ಲಿನ ಲೇಖನಗಳ ರೂಪದಲ್ಲಿ ಹಾಗೂ ದಿನಪತ್ರಿಕೆಗಳಲ್ಲಿನ ಲೇಖನಗಳ ರೂಪದಲ್ಲಿ ಪ್ರಕಟಿಸುತ್ತಿದೆ. ಪ್ರಸ್ತುತ ಸಾಲಿನಲ್ಲಿ ಈ ವೃಂದವು ಒಂದು ಗ್ರಂಥ, ನಿಯತಕಾಲಿಕೆಗಳು ಮತ್ತು ಸಂಪಾದಿತ ಗ್ರಂಥಗಳಲ್ಲಿ ಅನೇಕ ಸಂಶೋಧನಾ ಲೇಖನಗಳು, ಐಸೆಕ್‌ನ ಎರಡು ಕಾರ್ಯನಿರತ ಸಂಶೋಧನಾ ಲೇಖನಗಳು ಹಾಗೂ ಅನೇಕ ದಿನಪತ್ರಿಕೆ ಲೇಖನಗಳನ್ನು ಪ್ರಕಟಿಸಿದೆ. ದೇಶದ ವಿವಿಧ ಭಾಗಗಳಲ್ಲಿ ಹಾಗೂ ಹೊರದೇಶಗಳಲ್ಲಿ ಏರ್ಪಡಿಸಿದ್ದ ಸಮಾವೇಶಗಳು ಹಾಗೂ ವಿಚಾರ ಸಂಕಿರಣಗಳಲ್ಲೂ ಸಹ ಅಧ್ಯಾಪಕ ಸದಸ್ಯರು ಭಾಗವಹಿಸಿರುವುದಲ್ಲದೆ, ತಮ್ಮ ವಿಚಾರಧಾರೆಯ ಕೊಡುಗೆಯನ್ನೂ ನೀಡಿದ್ದಾರೆ.

ಕೇಂದ್ರದ ಅಧ್ಯಾಪಕ ವೃಂದವು ಪಿಎಚ್‌ಡಿ ವ್ಯಾಸಂಗದ ವಿದ್ಯಾರ್ಥಿಗಳಿಗೆ ಪಠ್ಯಗಳನ್ನು ಬೋಧಿಸುವಲ್ಲಿ ನಿರತರಾಗಿರುವುದರ ಜೊತೆಗೆ ಐಸೆಕ್‌ನಲ್ಲಿ, ಬೆಂಗಳೂರಿನ ವಿವಿಧ ಸಂಸ್ಥೆಗಳಲ್ಲಿ ಕರ್ನಾಟಕದ ಹಾಗೂ ಭಾರತದ ಬೇರೆಡೆಗಳಲ್ಲಿಯೂ ತರಬೇತಿ ಕಾರ್ಯಕ್ರಮಗಳನ್ನು ನಡೆಸುವಲ್ಲಿ ತೊಡಗಿದ್ದಾರೆ. ಪ್ರತಿ ಅವಧಿಯಲ್ಲೂ ಬೋಧಿಸುವ ಸಮಾಜಶಾಸ್ತ್ರ/ಸಾಮಾಜಿಕ ಮಾನವಶಾಸ್ತ್ರಗಳ ಜೊತೆಗೆ ಕೇಂದ್ರದ ಇಬ್ಬರು ಅಧ್ಯಾಪಕ ಸದಸ್ಯರು "ಕಾರ್ಯವಿಧಾನಗಳು" ಹಾಗೂ "ದೃಷ್ಟಿಕೋನ" ಎಂಬ ಎರಡು ಸಾಮಾನ್ಯ ಪಠ್ಯಗಳನ್ನೂ ಸಹ ಸಂಯೋಜಿಸುತ್ತಿದ್ದಾರೆ. ಕೇಂದ್ರವು ಪಿಎಚ್‌ಡಿ ಸಂಶೋಧನೆಯ ವಿವಿಧ ಹಂತಗಳಲ್ಲಿರುವ ೧೨ ವಿದ್ಯಾರ್ಥಿಗಳನ್ನು ಹೊಂದಿದೆ. ಐಸೆಕ್‌ನ ಇತರ ಕೇಂದ್ರಗಳಿಗೆ ಸೇರಿದ ೮ ಪಿಎಚ್‌ಡಿ ವಿದ್ಯಾರ್ಥಿಗಳಿಗೂ ಸಹ ಅಧ್ಯಾಪಕ ವೃಂದವು ಮಾರ್ಗದರ್ಶನವನ್ನು ನೀಡುತ್ತಿದೆ. ಒಬ್ಬ ಪಿಎಚ್‌ಡಿ ವಿದ್ಯಾರ್ಥಿಯು ತನ್ನ ಪ್ರೌಢಪ್ರಬಂಧ ಪೂರ್ವ ಸಲ್ಲಿಕೆಯ ವಿಚಾರ ಸಂಕಿರಣವನ್ನು ನಡೆಸಿಕೊಟ್ಟಿರುವುದಲ್ಲದೆ ಪ್ರೌಢಪ್ರಬಂಧವನ್ನು ಇನ್ನೇನು ಸಲ್ಲಿಸುವ ಹಂತದಲ್ಲಿದ್ದಾರೆ. ಜೊತೆಗೆ ಕೇಂದ್ರವು ೨೦೧೫–೧೬ ಸಾಲಿನ ಸಮಾಜಶಾಸ್ತ್ರ/ಸಾಮಾಜಿಕ ಮಾನವಶಾಸ್ತ್ರದ ಪಠ್ಯಕ್ರಮಕ್ಕೆ ಇಬ್ಬರು ಹೊಸ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದೆ.  ಇವರುಗಳು ತಮ್ಮ ಪಿಎಚ್‌ಡಿ ಕೋರ್ಸ್‌ವರ್ಕ್ ಅನ್ನು ಯಶಸ್ವಿಯಾಗಿ ಮುಗಿಸಿರುವುದಲ್ಲದೆ, ತಮ್ಮ ಸಂಶೋಧನಾ ವಿಷಯಗಳ ಅಧ್ಯಯನದಲ್ಲಿ ನಿರತವಾಗಿದ್ದಾರೆ. ಪ್ರಸ್ತುತ ಸಾಲಿನಲ್ಲಿ ಕೇಂದ್ರದ ಕೆಲವು ವಿದ್ಯಾರ್ಥಿಗಳು ನಿಯತಕಾಲಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ ರಾಷ್ಟ್ರೀಯ ಮತ್ತು ಅಂತರ‍್ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಸಂಶೋಧನಾ ವಿಷಯಗಳನ್ನು ಮಂಡಿಸಿದ್ದಾರೆ.

ಕೇಂದ್ರವು ಬೆಂಗಳೂರಿನ ಕ್ರಿಸ್ತ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಜೊತೆಗೆ ಸಹಯೋಗವನ್ನು ಹೊಂದಿದೆ. ಈ ಸಹಯೋಗವು ಜಂಟಿ ಸಂಶೋಧನಾ ಯೋಜನೆಗಳ ಸಲುವಾಗಿದೆ. ಈ ಸಹಯೋಗದ ಉದ್ದೇಶ ಜಂಟಿ ಸಂಶೋಧನಾ ಯೋಜನೆಗಳನ್ನು ನಡೆಸುವುದಾಗಿದೆ. ಅವೆಂದರೆ: ಸಮಾಜ ವಿಜ್ಞಾನ ಕ್ಷೇತ್ರದಲ್ಲಿನ ವಿವಿಧ ವಿಷಯಗಳ ಬಗೆಗಿನ ಹಾಗೂ ಒಂದೇ ವಿಷಯದ ವಿವಿಧ ಅಂಶಗಳ ಬಗೆಗಿನ ಸಂಶೋಧನೆ ಮತ್ತು ಸಮಾಜ ವಿಜ್ಞಾನ ಕ್ಷೇತ್ರದಲ್ಲಿನ ಡಾಕ್ಟೊರಲ್ ಕಾರ್ಯಕ್ರಮಗಳ ಮೌಲ್ಯಮಾಪನ ಹಾಗೂ ಪೂರ್ಣಗೊಳಿಸುವಿಕೆಯಾಗಿದೆ.  ಕೇಂದ್ರದ ಅಧ್ಯಾಪಕ ವೃಂದವು ಕರ್ನಾಟಕದ ಒಳಗೆ ಮತ್ತು ಹೊರಗೆ ಅನೇಕ ಮಹಾವಿದ್ಯಾಲಯಗಳು ಹಾಗೂ ವಿಶ್ವವಿದ್ಯಾಲಯಗಳೊಡನೆ ಸಂಪರ್ಕವಿಟ್ಟುಕೊಂಡಿದ್ದು, ಇವುಗಳಲ್ಲಿನ ಅಧ್ಯಯನ ಮಂಡಳಿಯ ಸದಸ್ಯರಾಗಿ ಹಾಗೂ ಪರೀಕ್ಷಾ ಮಂಡಳಿಯ ಸದಸ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಬ್ಬ ಅಧ್ಯಾಪಕರು ಕರ್ನಾಟಕ ಸರ್ಕಾರದ ಮೈಸೂರಿನಲ್ಲಿರುವ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾ ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಮೌಲ್ಯಮಾಪನದ ಸಲುವಾಗಿ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯದಿಂದ ತಜ್ಞ ಸಮಿತಿಯ ಸದಸ್ಯರಾಗಿ ನಾಮನಿರ್ದೇಶಿಸಲ್ಪಟ್ಟಿದ್ದಾರೆ.

## ೯. ಜನಸಂಖ್ಯಾ ಸಂಶೋಧನಾ ಕೇಂದ್ರ (ಪಿಆರ್‌ಸಿ)

ಈ ಕೇಂದ್ರದ ಪ್ರಮುಖ ಉದ್ದೇಶಗಳು ಜನಸಂಖ್ಯಾ ಅಧ್ಯಯನದ ಸಂಶೋಧನೆಗಳನ್ನು ಕೈಗೊಳ್ಳುವುದು ಮತ್ತು ಪ್ರೋತ್ಸಾಹಿಸುವುದು. ಆ ಮೂಲಕ ಭಾರತ ಸರ್ಕಾರದ ನವದೆಹಲಿಯಲ್ಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಕ್ಕೆ (ಎಂಓಹೆಚ್‌ಡಬ್ಲ್ಯೂ) ಹಾಗೂ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ (ಡಿಹೆಚ್‌ಎಫ್‌ಡಬ್ಲ್ಯೂ) ಕಾರ್ಯನೀತಿ ಅಂಶಗಳು, ಜನಸಂಖ್ಯೆಯ ಬಗೆಗಿನ ಪೂರಕ ಮಾಹಿತಿ, ಆರೋಗ್ಯ ಮತ್ತು ಲಿಂಗ ಸಂಬಂಧಿ ಅಂಶಗಳ ಬಗ್ಗೆ ನೆರವು ನೀಡುವುದಾಗಿದೆ. ಈ ಕೇಂದ್ರವು ಜನಸಂಖ್ಯೆ ಮತ್ತು ಆರೋಗ್ಯ ಅಧ್ಯಯನಗಳ ಬಗ್ಗೆ ಡಾಕ್ಟೊರಲ್ ತರಬೇತಿ ಕಾರ್ಯಕ್ರಮವೂ ಸೇರಿದಂತೆ ಇತರ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತದೆ. ಪಿಆರ್‌ಸಿ ಕೇಂದ್ರವು ಜನಸಂಖ್ಯಾ ಬದಲಾವಣೆಯಲ್ಲಿನ ಸಮಕಾಲೀನ ಅಂಶಗಳು, ಭಾರತದಲ್ಲಿ ಆರೋಗ್ಯ ಮತ್ತು ವೃದ್ಧಾಪ್ಯದ ಅಂಶಗಳು ಹಾಗೂ ಭಾರತಕ್ಕೆ ಸಂಬಂಧಿಸಿದಂತೆ ಜನಸಂಖ್ಯೆ, ಅಭಿವೃದ್ಧಿ ಮತ್ತು ಪರಿಸರಗಳಲ್ಲಿನ ಸಂಪರ್ಕ ಕೊಂಡಿಗಳ ಬಗ್ಗೆಯೂ ಸಕ್ರಿಯವಾಗಿ ಸಂಶೋಧನೆಗಳನ್ನು ಮಾಡುತ್ತಿದೆ.  ಪ್ರಸ್ತುತದಲ್ಲಿ ಈ ಕೇಂದ್ರವು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್‌ಆರ್‌ಎಚ್‌ಎಂ)ದಡಿ ಪಿಐಪಿ ಉಸ್ತುವಾರಿಯನ್ನು ಮುಂದುವರಿಸಿರುವುದಲ್ಲದೆ, ತಿಂಗಳಿಗೊಮ್ಮೆ ಎಚ್‌ಎಂಐಎಸ್ ಪೋರ್ಟಲ್‌ಗೆ ಅಪ್‌ಲೋಡ್ ಆಗುತ್ತಿರುವ ಕರ್ನಾಟಕದ ಎಚ್‌ಎಂಐಎಸ್ ದತ್ತಾಂಶದ ಗುಣಮಟ್ಟವನ್ನೂ ಸಹ ಪರೀಕ್ಷಿಸುತ್ತಿದೆ.

# ಐಸೆಕ್



**ಚಟುವಟಿಕೆಗಳು**

ಪಿಆರ್‌ಸಿ ಕೇಂದ್ರವು "ಭಾರತದಲ್ಲಿ ಜನಸಂಖ್ಯಾ ವೃದ್ಧಾಪ್ಯದ ವಿಷಯಜ್ಞಾನ ಆಧಾರವನ್ನು ರೂಪಿಸಿಕೊಳ್ಳುವಿಕೆ: ಹೆಚ್ಚಿದ ತಿಳುವಳಿಕೆ ಮತ್ತು ವೃದ್ಧರ ಸೇವೆಗಳ ಗುಣಮಟ್ಟ ಮತ್ತು ಅದನ್ನು ದೊರಕಿಸಿಕೊಳ್ಳುವಿಕೆ" ಎಂಬ ಸಂಶೋಧನಾ ಕಾರ್ಯಕ್ರಮಕ್ಕಾಗಿ ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (ಯುಎನ್‌ಎಫ್‌ಪಿಎ), ದೆಹಲಿಯ ಆರ್ಥಿಕ ಬೆಳವಣಿಗೆ ಸಂಸ್ಥೆ (ಐಇಜಿ) ಹಾಗೂ ಮುಂಬಯಿಯ ಸಮಾಜ ವಿಜ್ಞಾನಗಳ ಬಗೆಗಿನ ಟಾಟಾ ಸಂಸ್ಥೆ (ಟಿಐಎಸ್‌ಎಸ್) ಇವುಗಳೊಡನೆ ದೀರ್ಘಾವಧಿ ಸಹಯೋಗವನ್ನು ಹೊಂದಿದೆ. ವಯಸ್ಕರ ಆರೋಗ್ಯದಲ್ಲಿನ ಅಸಮಾನತೆಗಳು, ವಯಸ್ಕ ಮಹಿಳೆಯರ ಸಮಸ್ಯೆಗಳು ಹಾಗೂ ವೃದ್ಧಾಪ್ಯ ವೇತನ ಯೋಜನೆಯ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಗಮನ ಸೆಳೆಯುವಂತಹ ಮೂರು ವರದಿಗಳನ್ನು ಈ ಯೋಜನೆಯಡಿ ಪೂರ್ಣಗೊಳಿಸಲಾಗಿದೆ. ಕೇಂದ್ರವು ವೃದ್ಧಾಪ್ಯ ಸಮಸ್ಯೆಗೆ ಸಂಬಂಧಿಸಿದಂತಹ ಇನ್ನೊಂದು ಸಹಯೋಗಿ ಸಂಶೋಧನಾ ಕಾರ್ಯಕ್ರಮದಲ್ಲೂ ಭಾಗಿಯಾಗಿದೆ. ಇದನ್ನು ನೆದರ್‌ಲ್ಯಾಂಡಿನ ಗ್ರೋನಿಂಗೆನ್ ವಿಶ್ವವಿದ್ಯಾಲಯದ, ಯುನೈಟೆಡ್ ಕಿಂಗ್‌ಡಂನ ಸೌಥಾಂಪ್ಟನ್ ವಿಶ್ವವಿದ್ಯಾಲಯದ ಹಾಗೂ ತಿರುವನಂತಪುರದ ಅಭಿವೃದ್ಧಿ ಅಧ್ಯಯನಗಳ ಕೇಂದ್ರ (ಸಿಡಿಎಸ್)ದ ಸಹಯೋಗದೊಂದಿಗೆ ಭಾರತ–ಯೂರೋಪ್ ಸಂಶೋಧನಾ ಯೋಜನೆಯ ಒಂದು ಭಾಗವಾಗಿ "ಜಾಗತಿಕ ವಿಶ್ವದಲ್ಲಿ ವಯಸ್ಸಾಗುವಿಕೆ ಮತ್ತು ವಯಸ್ಕರ ಶ್ರೇಯೋಭಿವೃದ್ಧಿ" ಎಂಬ ವಿಷಯದ ಬಗ್ಗೆ ಮಾಡಲಾಗುತ್ತಿದೆ. ಭಾರತ, ಯುನೈಟೆಡ್ ಕಿಂಗ್‌ಡಂ ಹಾಗೂ ನೆದರ್‌ಲ್ಯಾಂಡ್ – ಈ ದೇಶಗಳ ಜನಸಂಖ್ಯಾ ಚಿತ್ರಣವನ್ನು ಹೋಲಿಸಿ, ಅವುಗಳನ್ನು ವೃದ್ಧಾಪ್ಯ ಹಾಗೂ ಸಾಮಾಜಿಕ ಕಾರ್ಯನೀತಿಗಳಿಗೆ ಸಂಪರ್ಕಿಸುವ ಮೂಲಕ ಈ ಅಧ್ಯಯನವು ಕಾರ್ಯನೀತಿ ರೂಪಿಸಲು ಸೂಕ್ತವಾದ ಹಲವಾರು ಸಂಶೋಧನಾ ಲೇಖನಗಳನ್ನು ಹೊರತರಲು ಉದ್ದೇಶಿಸಿದೆ.

ಪಿಆರ್‌ಸಿ ಕೇಂದ್ರವು "ಜಿಲ್ಲಾ ಮಟ್ಟದಲ್ಲಿ ನಾಗರಿಕರ ನೋಂದಣಿ ಪದ್ಧತಿಗಳ (ಸಿಆರ್‌ಎಸ್) ದತ್ತಾಂಶ ಗುಣಮಟ್ಟವನ್ನು ನಿಯಮಿತವಾಗಿ ಅಂದಾಜಿಸುವುದು ಹಾಗೂ ಆ ಮೂಲಕ ರಾಷ್ಟ್ರೀಯ ಜನಸಂಖ್ಯಾ ವಹಿ (ಎನ್‌ಪಿಆರ್)ಯನ್ನು ಇಲ್ಲಿಯವರೆಗಿನ ಮಾಹಿತಿಯೊಂದಿಗೆ ತುಂಬಿಸುವುದಕ್ಕೆ ನೆರವಾಗುವುದು" ಎಂಬ ಸಂಶೋಧನಾ ಅಧ್ಯಯನವನ್ನು ಯುಎನ್‌ಎಫ್‌ಪಿಎ ಮತ್ತು ನವದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ ಇವುಗಳ ಸಹಯೋಗದಲ್ಲಿ ಮಾಡುತ್ತಿದೆ. ಈ ಶೈಕ್ಷಣಿಕ ವರ್ಷದಲ್ಲಿ ಪ್ರಾಥಮಿಕ ದತ್ತಾಂಶ ಆಧರಿತ ವರದಿಯೊಂದನ್ನು ಪೂರ್ಣಗೊಳಿಸಲಾಗಿದೆ. ಕೇಂದ್ರದ ಸಂಶೋಧನಾ ಕಾರ್ಯವು ಕರ್ನಾಟಕ ರಾಜ್ಯವನ್ನು ನಿರ್ದಿಷ್ಟವಾಗಿಟ್ಟುಕೊಂಡು ಹಾಗೂ ಸಾಮಾನ್ಯವಾಗಿ ಎಲ್ಲಾ ರಾಜ್ಯಗಳನ್ನೂ ಗಮನದಲ್ಲಿಟ್ಟುಕೊಂಡು "ಈಚಿನ ನಗರೀಕರಣದ ಒಲವು ಹಾಗೂ ಅದರಲ್ಲಿನ ತಾರತಮ್ಯ"ಗಳನ್ನು ಕಂಡುಹಿಡಿಯುತ್ತದೆ ಮತ್ತು ಎತ್ತಿ ತೋರಿಸುತ್ತದೆ. ಲಿಂಗ ಸಂಬಂಧಿ ಮತ್ತು ಆರೋಗ್ಯ, ಜನಸಂಖ್ಯೆ, ಅಭಿವೃದ್ಧಿ ಮತ್ತು ಪರಿಸರ ಹಾಗೂ ಇವುಗಳ ನಡುವಿನ ಆಂತರಿಕ ಸಂಪರ್ಕಗಳ ಬಗೆಗಿನ ಸಂಶೋಧನೆಯು ಕೇಂದ್ರದ ಪ್ರಮುಖ ಗುರಿಯಾಗಿದೆ.

ಪಿಆರ್‌ಸಿ ಕೇಂದ್ರದ ಒಂದು ಮುಖ್ಯ ಉದ್ದೇಶವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಕ್ಕೆ ಕಾರ್ಯನೀತಿ ಹಾಗೂ ಕಾರ್ಯಕ್ರಮಾಧಾರಿತ ಪರಿಕರಗಳನ್ನು ಒದಗಿಸುವುದಾಗಿದೆ. ಆದ್ದರಿಂದ ಈ ಕೇಂದ್ರವು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್‌ಆರ್‌ಎಚ್‌ಎಂ) ದಡಿಯಲ್ಲಿ ಕಾರ್ಯಕ್ರಮ ಅನುಷ್ಠಾನ ಯೋಜನೆ(ಪಿಐಪಿ)ಯ ಉಸ್ತುವಾರಿ ಮಾಡುವಲ್ಲಿ ಸಕ್ರಿಯವಾಗಿ ಭಾಗಿಯಾಗಿದೆ. ಪ್ರಸ್ತುತ ಸಾಲಿನಲ್ಲಿ ತಮಿಳುನಾಡಿನ ಐದು ಜಿಲ್ಲೆಗಳಲ್ಲಿ ಹಾಗೂ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಪಿಐಪಿಗಳ ಜಿಲ್ಲಾ ಮಟ್ಟದ ಅನುಷ್ಠಾನದ ಉಸ್ತುವಾರಿಯನ್ನು ಮುಗಿಸಿದೆ. ಇದೇ ಸಮಯದಲ್ಲಿ ಪಿಆರ್‌ಸಿಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದಿಂದ ಪುರಸ್ಕೃತವಾದ "ಆರೋಗ್ಯ ನಿರ್ವಹಣಾ ಮಾಹಿತಿ ಪದ್ಧತಿ" (ಎಚ್‌ಎಂಐಎಸ್) ಅಡಿ ಭಾರತದಲ್ಲಿ ಸಂಗ್ರಹವಾಗಿರುವ ಅಪಾರ ಪ್ರಮಾಣದ ದತ್ತಾಂಶದ ಗುಣಮಟ್ಟವನ್ನು ಸದೃಢಪಡಿಸುವಲ್ಲಿ ಭಾಗಿಯಾಗಿದೆ. ಎಚ್‌ಎಂಐಎಸ್‌ನಲ್ಲಿನ ವಿವಿಧ ಆರೋಗ್ಯ ಅಂಶಗಳ ಬಗ್ಗೆ ಗುಣಮಟ್ಟವನ್ನು ಸದೃಢಗೊಳಿಸುವುದು ಹಾಗೂ ಉತ್ತಮ ದತ್ತಾಂಶ ಪದ್ಧತಿಗಳನ್ನು ಬಲಪಡಿಸುವ ಸಲುವಾಗಿ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಇಲಾಖೆಗಳೆರಡಕ್ಕೂ ನೆರವು ನೀಡುವ ಸಲುವಾಗಿ ಕರ್ನಾಟಕದ ಎಚ್‌ಎಂಐಎಸ್ ದತ್ತಾಂಶದ ಗುಣ ಮಟ್ಟವನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡಿ ವರದಿ ಮಾಡುತ್ತಿದೆ.

೨೦೧೫–೧೬ ಸಾಲಿನಲ್ಲಿ ಪಿಆರ್‌ಸಿಯು ರಾಷ್ಟ್ರದಲ್ಲಿನ ವಿವಿಧ ಜನಸಂಖ್ಯಾ ಸಂಶೋಧನಾ ಕೇಂದ್ರಗಳು ನಡೆಸಿದ ಅಧ್ಯಯನಗಳ ಸಂಗ್ರಹವನ್ನು ತಯಾರುಮಾಡಲು ಸಂಯೋಜಕತ್ವದ ಪ್ರಮುಖ ಪಾತ್ರವನ್ನೂ ಸಹ ವಹಿಸುತ್ತಿದೆ. ಭಾರತ ಸರ್ಕಾರದ ನವದೆಹಲಿಯಲ್ಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಐಸೆಕ್‌ನ ಪಿಆರ್‌ಸಿ ಇವುಗಳು ಒಗ್ಗೂಡಿ "ಭಾರತದಲ್ಲಿ ಬಾಣಂತಿ ಹಾಗೂ ಶಿಶು ಆರೋಗ್ಯ: ಜನಸಂಖ್ಯಾ ಸಂಶೋಧನಾ ಕೇಂದ್ರಗಳು ನಡೆಸಿರುವ ಸಂಶೋಧನಾ ಅಧ್ಯಯನಗಳ ಸಂಗ್ರಹ" ಎಂಬ ಸಂಪಾದಿತ ಸಂಗ್ರಹವನ್ನು ಪ್ರಕಟಿಸಿವೆ.

ಪ್ರಸ್ತುತ ಸಾಲಿನಲ್ಲಿ ಕೇಂದ್ರವು ಡಾಕ್ಟೊರಲ್ (ಪಿಎಚ್‌ಡಿ) ತರಬೇತಿ ಕಾರ್ಯಕ್ರಮವನ್ನೂ ಸಹ ನಡೆಸಿಕೊಡುತ್ತಿದೆ ಹಾಗೂ ಜನಸಂಖ್ಯಾ ಸಿದ್ಧಾಂತ ಹಾಗೂ ತಿಳುವಳಿಕೆಗಳನ್ನು ಗಾಢವಾಗಿ ಅಳವಡಿಸಿಕೊಂಡ ಜನಸಂಖ್ಯಾ ಮಾಪನ ಸಾಧನಗಳು ಹಾಗೂ ತಾಂತ್ರಿಕತೆಗಳನ್ನು ಬಳಸಿಕೊಂಡು ಸಂಶೋಧನೆಯನ್ನು ನಡೆಸುವುದಕ್ಕೆ ಒತ್ತು ನೀಡಿದೆ.

# ಐಸೆಕ್

ಪಿಆರ್‌ಸಿ ಕೇಂದ್ರವು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ (ಡಿಎಚ್‌ಎಫ್‌ಡಬ್ಲ್ಯು) ಬಲವಾದ ಸಂಬಂಧವನ್ನಿಟ್ಟುಕೊಂಡಿದೆ. ಕೇಂದ್ರದಲ್ಲಿ ಕೈಗೊಂಡ ಅಧ್ಯಯನಗಳಿಂದ ಹೊರಬರುವ ಮುಖ್ಯ ಫಲಿತಾಂಶಗಳನ್ನು ಪ್ರಸರಿಸುವ ಸಲುವಾಗಿ ಡಿಎಚ್‌ಎಫ್‌ಡಬ್ಲ್ಯು ಮತ್ತು ಪ್ರಾದೇಶಿಕ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಇವರುಗಳೊಡನೆ ನಿಯಮಿತವಾಗಿ ಸಭೆಗಳನ್ನು ಏರ್ಪಡಿಸಲಾಗುತ್ತಿರುತ್ತದೆ. ಕೇಂದ್ರದಲ್ಲಿ ನಡೆಸುವ ಸಂಶೋಧನೆಗಳ ಫಲಿತಾಂಶಗಳನ್ನು ಆಯಾ ಅಧ್ಯಾಪಕ ಸದಸ್ಯರು ಸಂಪಾದಿತ ಗ್ರಂಥಗಳ ಮೂಲಕ, ನಿಯತಕಾಲಿಕೆಗಳಲ್ಲಿನ ಲೇಖನಗಳ ಮೂಲಕ ಹಾಗೂ ಕಾರ್ಯನಿರತ ಸಂಶೋಧನಾ ಲೇಖನಗಳ ಮೂಲಕ ಪ್ರಸರಿಸುತ್ತಾರೆ. ಕೇಂದ್ರದ ಸದಸ್ಯರು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಸಮಾವೇಶಗಳಲ್ಲಿ ನಿಯಮಿತವಾಗಿ ಭಾಗವಹಿಸಿ ತಮ್ಮ ಸಂಶೋಧನೆಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ. ಜೊತೆಗೆ ಜನಸಂಖ್ಯಾ ಅಧ್ಯಯನಕ್ಕಾಗಿ ಭಾರತೀಯ ಸಂಘ (ಐಎಎಸ್‌ಪಿ), ಅಮೆರಿಕದ ಜನಸಂಖ್ಯಾ ಸಂಘ (ಪಿಎಎ), ಜನಸಂಖ್ಯೆಯ ವೈಜ್ಞಾನಿಕ ಅಧ್ಯಯನಕ್ಕಾಗಿರುವ ಅಂತರ್‌ರಾಷ್ಟ್ರೀಯ ಸಂಘಟನೆ (ಐಯುಎಸ್‌ಎಸ್‌ಪಿ), ಏಶಿಯಾದ ಜನಸಂಖ್ಯಾ ಸಂಘ (ಎಪಿಎ) ಹಾಗೂ ಜನಸಂಖ್ಯಾ ಅಧ್ಯಯನಗಳ ಯೂರೋಪ್ ದೇಶಗಳ ಸಂಘ (ಇಎಪಿಎಸ್) – ಇವುಗಳ ವಾರ್ಷಿಕ ಸಭೆಗಳಲ್ಲೂ ಭಾಗವಹಿಸಿ ತಮ್ಮ ಸಂಶೋಧನೆಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ.

ಈ ಕೇಂದ್ರವು ೨೦೧೫–೧೬ರ ಸಾಲಿನಲ್ಲಿ ಸಂಕೀರ್ಣ ವಿಷಯಗಳಾದ ಜನಸಂಖ್ಯೆಯಲ್ಲಿನ ಬದಲಾವಣೆ, ವೃದ್ಧಾಪ್ಯ ಹಾಗೂ ಶುಶ್ರೂಷಾ ಅಗತ್ಯಗಳ ಬಗ್ಗೆ ಚರ್ಚಿಸಲು ಅಂತರ್‌ರಾಷ್ಟ್ರೀಯ ವಿದ್ವಾಂಸರಿಗೆ ವೇದಿಕೆಯನ್ನು ಕಲ್ಪಿಸಿಕೊಟ್ಟಿತ್ತು. ಈ ಬಗ್ಗೆ ೨೦೧೫ರ ಡಿಸೆಂಬರ್ ೧೭–೧೮ ಗಳಂದು "ವೃದ್ಧಾಪ್ಯ ಹಾಗೂ ಯೋಗಕ್ಷೇಮ: ಆರೋಗ್ಯ ಮತ್ತು ಸಾಮಾಜಿಕ ಶುಶ್ರೂಷೆಯ ಬಗೆಗಿನ ವಿಭಿನ್ನ ಸಂಸ್ಕೃತಿಗಳ ದೃಷ್ಟಿಕೋನ" ಎಂಬ ಬಗ್ಗೆ ಏರ್ಪಡಿಸಿದ್ದ ಎರಡು ದಿವಸಗಳ ವಿಚಾರ ಸಂಕಿರಣದಲ್ಲಿ ಈ ಚರ್ಚೆ ಸಾಧ್ಯವಾಯಿತು. ಈ ವಿಚಾರ ಸಂಕಿರಣವು ವೃದ್ಧಾಪ್ಯ ಮತ್ತು ಯೋಗಕ್ಷೇಮ ಬಗೆಗಿನ ವಿಷಯಗಳನ್ನು ವಿಭಿನ್ನ ಸಂಸ್ಕೃತಿಗಳ ದೃಷ್ಟಿಕೋನದಿಂದ ಚರ್ಚಿಸಲು ಭಾರತ ಹಾಗೂ ಯೂರೋಪ್ ದೇಶಗಳ ವಿದ್ವಾಂಸರನ್ನು ಒಟ್ಟಿಗೆ ಸೇರಿಸಿತ್ತು. ಈ ವಿಚಾರ ಸಂಕಿರಣದಲ್ಲಿ ಚರ್ಚಿಸಿದ ನಾಲ್ಕು ಅಂಶಗಳು ಈ ರೀತಿ ಇವೆ: ಜನಸಂಖ್ಯಾ ಬದಲಾವಣೆ, ಬಾಳುವ ವ್ಯವಸ್ಥೆ ಹಾಗೂ ಶುಶ್ರೂಷಾ ಅಗತ್ಯಗಳು; ವಯಸ್ಸಾದವರ ಆರೋಗ್ಯ ಸ್ಥಿತಿಗತಿಗಳು; ವೃದ್ಧಾಪ್ಯ: ಹೊಸ ಕಾರ್ಯವಿಧಾನಗಳು ಹಾಗೂ ದತ್ತಾಂಶ; ಮತ್ತು ವೃದ್ಧಾಪ್ಯ, ಲಿಂಗ ಪ್ರಭೇಧ ಹಾಗೂ ಸಾಮಾಜಿಕ ಭದ್ರತೆ. ಈ ವಿಚಾರ ಸಂಕಿರಣವನ್ನು ಹೊರತುಪಡಿಸಿ "ಸಾಂಸ್ಥಿಕ ಸಂದರ್ಭಕ್ಕನುಗುಣವಾಗಿ ವೃದ್ಧಾಪ್ಯ: ಭಾರತ ಮತ್ತು ನೆದರ್‌ಲ್ಯಾಂಡ್" ಎಂಬ ವಿಷಯದ ಬಗೆಗಿನ ಭಾವಚಿತ್ರ ಪ್ರದರ್ಶನವನ್ನೂ ಸಹ ವ್ಯವಸ್ಥೆಗೊಳಿಸಲಾಗಿತ್ತು.



# ೪. ಸಂಶೋಧನಾ ಚಟುವಟಿಕೆಗಳು

## ಪೂರ್ಣಗೊಂಡ ಸಂಶೋಧನಾ ಕಾರ್ಯಕ್ರಮಗಳು

೧) ಚಿಕ್ಕಬಳ್ಳಾಪುರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ
(ಡಾ. ಎಂ. ದೇವೇಂದ್ರ ಬಾಬು)

೨) ಕರ್ನಾಟಕದಲ್ಲಿ ಗ್ರಾಮೀಣ ನೈರ್ಮಲ್ಯವನ್ನು ಸುಧಾರಿಸುವೆಡೆಗೆ – ಇನ್ಫೋಸಿಸ್ ಪ್ರತಿಷ್ಠಾನದ ನೆರವಿನ ಯೋಜನೆಯಾದ "ಪರಿಶುದ್ಧ" ದಡಿಯಲ್ಲಿ ನಿರ್ಮಿಸಿರುವ ಖಾಸಗಿ ಶೌಚಾಲಯಗಳ ಕಾರ್ಯದಕ್ಷತೆ ಮತ್ತು ಅನುಕೂಲತೆಗಳನ್ನು ತಿಳಿದುಕೊಳ್ಳುವಿಕೆ.
(ಡಾ. ಎಸ್. ಮಾನಸಿ ಮತ್ತು ಡಾ. ಸುನಿಲ್ ನೌಟಿಯಾಲ್)

೩) ಬೆಂಗಳೂರು ಮೆಟ್ರೋ ರೈಲು ಯೋಜನೆಯಲ್ಲಿ ದರ ನಿಗದಿ ಪಡಿಸುವಿಕೆ.
(ಡಾ. ಬರುನ್ ದೇಬ್‌ಪಾಲ್ ಹಾಗೂ ಶ್ರೀಮತಿ ಬಿ.ಪಿ. ವಾಣಿ)

* ಈ ಸಂಶೋಧನಾ ಕಾರ್ಯಕ್ರಮದ ದತ್ತಾಂಶ ಹಾಗೂ ವಿಶ್ಲೇಷಣೆಯಲ್ಲಿನ ಗೌಪ್ಯತೆ ಹಾಗೂ ಯೋಜನೆಯ ಪ್ರಾಯೋಜಕರ ಕೋರಿಕೆಯ ಅನುಸಾರವಾಗಿ ಫಲಿತಾಂಶದ ಸಾರಾಂಶವನ್ನು ಈ ವರದಿಯಲ್ಲಿ ಸೇರಿಸಿಲ್ಲ.

೪) ನಗರ ಪ್ರದೇಶಗಳಲ್ಲಿ ಧನಸಹಾಯದಿಂದ ದೂರವಿಡುವಿಕೆ: ಕರ್ನಾಟಕದ ಒಂದು ಪ್ರಕರಣ.
(ಪ್ರೊ. ಮೀನಾಕ್ಷಿ ರಾಜೀವ್ ಹಾಗೂ ಶ್ರೀಮತಿ ಬಿ.ಪಿ. ವಾಣಿ)

೫) ಭಾರತದಲ್ಲಿ ಶಿಕ್ಷಿತರಲ್ಲಿನ ನಿರುದ್ಯೋಗ: ಕಾರಣಗಳು, ಪರಿಣಾಮಗಳು ಹಾಗೂ ಪರಿಹಾರಗಳು.
(ಡಾ. ಇಂದ್ರಜಿತ್ ಬೈರಾಗ್ಯ)

೬) ಜಾಗತೀಕರಣ, ಪ್ರಜಾಪ್ರಭುತ್ವ ರಾಜಕಾರಣ ಹಾಗೂ ಒಳಗೊಳ್ಳುವಿಕೆ ಆಡಳಿತ: ಭಾರತದಿಂದ ದೊರೆತ ಅನುಭವಗಳು.
(ಪ್ರೊ. ಎಸ್.ಎನ್. ಸಂಗೀತಾ)

೭) ಭಾರತದಲ್ಲಿ ಮೂಲ ಸೌಕರ್ಯದ ಆಡಳಿತದಲ್ಲಿನ ಸುಧಾರಣೆಗಳು: ತೆಗೆದುಕೊಂಡ ಕ್ರಮಗಳು ಹಾಗೂ ಫಲಿತಾಂಶಗಳು.
(ಪ್ರೊ. ಎಸ್.ಎನ್. ಸಂಗೀತಾ)

೮) ೧೨ ಜಿಲ್ಲೆಗಳಲ್ಲಿ ಪಿಐಪಿ ಉಸ್ತುವಾರಿ (ಕರ್ನಾಟಕದ ೨ ಜಿಲ್ಲೆಗಳು ಮತ್ತು ಜಾರ್ಖಂಡ್‌ನ ೧೦ ಜಿಲ್ಲೆಗಳು.
(ಡಾ. ಸಿ.ಎಂ. ಲಕ್ಷ್ಮಣ)

೯) ಭಾರತ–ಕೆನಡಾ ದ್ವಿದಳಧಾನ್ಯ ವ್ಯಾಪಾರ ವಹಿವಾಟು: ಅವಕಾಶಗಳು ಮತ್ತು ಸವಾಲುಗಳು.
(ಡಾ. ಏಳುಮಲೈ ಕಣ್ಣನ್)

೧೦) ಕರ್ನಾಟಕದಲ್ಲಿ ಪರಿಕರಗಳ ಬಳಕೆ, ಉತ್ಪಾದನೆ, ಇಳುವರಿ ಮತ್ತು ಆದಾಯದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದ (ಎನ್‌ಎಫ್‌ಎಸ್‌ಎಂ) ಪರಿಣಾಮ.
(ಡಾ. ಎ.ವಿ. ಮಂಜುನಾಥ ಮತ್ತು ಪ್ರೊ. ಪರಮೋದ್ ಕುಮಾರ್)

೧೧) ಕರ್ನಾಟಕದಲ್ಲಿ ೨೦೧೪ರ ನವೆಂಬರ್‌ನಿಂದ ೨೦೧೫ರ ಮಾರ್ಚ್‌ವರೆಗೆ ಎಸ್‌ಎಸ್‌ಎ–ಆರ್‌ಟಿಇಗಳ ಉಸ್ತುವಾರಿ.
(ಡಾ. ಕೆ.ಎಸ್. ಉಮಾಮಣಿ, ಡಾ. ಎಂ. ಲಿಂಗರಾಜು ಹಾಗೂ ಡಾ. ಇಂದ್ರಜಿತ್ ಬೈರಾಗ್ಯ)

೧೨) ದಾವಣಗೆರೆ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ.
(ಪ್ರೊ. ಎನ್. ಶಿವಣ್ಣ)

೧೩) ಶಾಲಾ ಮಟ್ಟದಲ್ಲಿ ಪರಿಸರ ಶಿಕ್ಷಣದ ಸ್ಥಿತಿಗತಿಗಳು: ಹೆಬ್ಬಾಳ ಸಮುಚ್ಚಯದ ಒಂದು ಪ್ರಕರಣ, ಬೆಂಗಳೂರು.
(ಡಾ. ಕೆ.ಎಸ್. ಉಮಾಮಣಿ)

೧೪) ವಿಶ್ವ ಆರೋಗ್ಯ ಸಂಸ್ಥೆ – ಸೇಜ್ ಇಂಡಿಯಾ "ಭಾರತದಲ್ಲಿ ವಯಸ್ಕರ ಆರೋಗ್ಯ ಹಾಗೂ ಜಾಗತಿಕ ಮಟ್ಟದಲ್ಲಿ ವೃದ್ಧಾಪ್ಯ – ಕರ್ನಾಟಕ ರಾಜ್ಯಕ್ಕಾಗಿ ವೇವ್'೨ ೨೦೧೫"
(ಡಾ.ಸಿ.ಎಂ. ಲಕ್ಷ್ಮಣ, ಡಾ. ಪಿ. ಪ್ರಭುಸ್ವಾಮಿ ಹಾಗೂ ಶ್ರೀ ಸಿ. ಯೋಗಾನಂದ)

೧೫) ವಲಸೆಗಾರರ ಪ್ರವಾಸದ ಜೇಲ: ಭಾರತ ಹಾಗೂ ನೆದರ್ಲ್ಯಾಂಡ್‌ಗಳ ನಡುವೆ ಸಾಮಾಜಿಕ ಬಂಡವಾಳ, ಅಸ್ತಿತ್ವ ಹಾಗೂ ಸೂತ್ರ ನಿಯಮಗಳ ಹರಿವನ್ನು ಪರೀಕ್ಷಿಸುವಿಕೆ.
(ಪ್ರೊ. ಕೆ.ಎಸ್. ಜೇಮ್ಸ್).

೧೬) ಕರ್ನಾಟಕದಲ್ಲಿನ ರೈತರು ಮಣ್ಣು ಪರೀಕ್ಷೆ ಆಧಾರದ ಮೇರೆಗೆ ಶಿಫಾರಿತ ಪ್ರಮಾಣದ ರಸಗೊಬ್ಬರಗಳನ್ನು ಹಾಕುವುದನ್ನು ಅಳವಡಿಸಿಕೊಳ್ಳುವಿಕೆ.
(ಡಾ. ಕೆ.ಬಿ. ರಾಮಪ್ಪ ಮತ್ತು ಡಾ. ಏಳುಮಲೈ ಕಣ್ಣನ್)

೧೭) ಕರ್ನಾಟಕದಲ್ಲಿ ಭೂ ಚೇತನ ಕಾರ್ಯಕ್ರಮದ ಪರಿಣಾಮಗಳ ಮೌಲ್ಯಮಾಪನ.
(ಡಾ. ಏಳುಮಲೈ ಕಣ್ಣನ್ ಮತ್ತು ಡಾ. ಕೆ.ಬಿ. ರಾಮಪ್ಪ)

೧೮) ಹವಾಮಾನ ವೈಪರೀತ್ಯ ಹಾಗೂ ಬದಲಾವಣೆಗಳಿಗೆ ತಕ್ಕಂತೆ ಜೀವನೋಪಾಯ ರೂಪಿಸಿಕೊಳ್ಳುವಿಕೆ, ಅದಕ್ಕೆ ಪಕ್ಕಾಗುವಿಕೆ ಹಾಗೂ ಅದಕ್ಕೆ ಹೊಂದಿಕೊಳ್ಳುವಿಕೆ: ಭಾರತದ ಎರಡು ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ (ಜೀವ ವೈವಿಧ್ಯತೆ ಅಪಾಯ ಸ್ಥಳಗಳು) ಹವಾಮಾನ ಬದಲಾವಣೆ ಪರಿಣಾಮಗಳನ್ನು ಎದುರಿಸಲು ಬುಡಮೇಲು ಕಾರ್ಯ ವಿಧಾನ.
(ಡಾ. ಸುನಿಲ್ ನೌಟಿಯಾಲ್, ಡಾ. ಕೆ.ಎಸ್. ರಾವ್, ಸಸ್ಯಶಾಸ್ತ್ರ ವಿಭಾಗ, ದೆಹಲಿ ವಿಶ್ವವಿದ್ಯಾಲಯ ಹಾಗೂ ಪ್ರೊ. ಕೆ.ವಿ.ರಾಜು)

೧೯) ವ್ಯಾಪಾರ ವಹಿವಾಟುಗಳಿಗೆ ಸೌಕರ್ಯ ಕಲ್ಪಿಸುವಿಕೆ ಮತ್ತು ವ್ಯಾಪಾರ ವಹಿವಾಟಿನ ಕಾರ್ಯದಕ್ಷತೆ: ಭಾರತದ ಆಯ್ದ ಎಸ್‌ಇಜಡ್‌ಗಳ ಸಂದರ್ಭಕ್ಕನುಗುಣವಾಗಿ ಒಂದು ಅಂದಾಜೀಕರಣ
(ಡಾ. ಮಾಲಿನಿ ಎಲ್. ತಂತ್ರಿ).

೨೦) ಬೆಂಗಳೂರು ನಗರದ ಸಮೀಕ್ಷೆಗಳು – ೨
(ಪ್ರೊ. ಕಲಾ ಎಸ್. ಶ್ರೀಧರ್, ಡಾ. ಎಸ್. ಮಾನಸಿ ಮತ್ತು ಡಾ. ಕೆ.ಸಿ. ಸ್ಮಿತಾ)

೨೧) ಬೆಂಗಳೂರು ನಗರದಲ್ಲಿನ ರಸ್ತೆ ಬದಿ ಮಹಿಳಾ ವ್ಯಾಪಾರಿಗಳ ಒಂದು ಅಧ್ಯಯನ
(ಪ್ರೊ. ಆರ್. ಮುತ್ತುರಾಯಪ್ಪ ಮತ್ತು ಡಾ. ಚನ್ನಮ್ಮ ಕಂಬಾರ).

೨೨) ಕರ್ನಾಟಕದಲ್ಲಿ ಎಚ್‌ಐಎಂಎಸ್ ದತ್ತಾಂಶದ ಗುಣಮಟ್ಟ: ಒಂದು ಜಿಲ್ಲಾ ಮಟ್ಟದ ವಿಶ್ಲೇಷಣೆ
(ಡಾ. ಸಿ.ಎಂ. ಲಕ್ಷ್ಮಣ ಮತ್ತು ಡಾ. ಪಿ. ಪ್ರಭುಸ್ವಾಮಿ)

೨೩) ಕರ್ನಾಟಕದಲ್ಲಿನ ದಲಿತ ಕುಟುಂಬಗಳ ಸಾಮಾಜಿಕ–ಆರ್ಥಿಕ ಸಾಮರ್ಥ್ಯವನ್ನು ಮೌಲ್ಯಮಾಪನ/ನಿರ್ಧರಿಸುವಿಕೆ.
(ಡಾ. ಐ. ಮಾರುತಿ ಮತ್ತು ಡಾ. ಪೆಸಲ ಬೂಸೆಣ್ಣಾ)

೨೪) ಕರ್ನಾಟಕದಲ್ಲಿ ದ್ರಾಕ್ಷಿ ಮತ್ತು ಈರುಳ್ಳಿ ಬೆಳೆಗಳಿಗೆ ರೈತರು ಪಡೆದ ಹಣ, ಚಿಲ್ಲರೆ ಮಾರಾಟ ಬೆಲೆಗಳು ಮತ್ತು ಸಗಟು ವ್ಯಾಪಾರ ಬೆಲೆಗಳಲ್ಲಿನ ವ್ಯತ್ಯಾಸಗಳು
(ಡಾ. ಪರಮೋದ್ ಕುಮಾರ್)

೨೫) ಭಾರತದಲ್ಲಿನ ಸಾರ್ವತ್ರಿಕ ವೃದ್ಧಾಪ್ಯ ವೇತನ: ಆರ್ಥಿಕ ಬೇಡಿಕೆ, ಸಾರ್ವಜನಿಕ ಹಣಕಾಸು ಮತ್ತು ಧನಸಹಾಯ ಆಯ್ಕೆಗಳು?
(ಪ್ರೊ.ಎಂ.ಆರ್. ನಾರಾಯಣ)



೨೬) ಮಧ್ಯಪ್ರದೇಶದಲ್ಲಿ ಹವಾಮಾನಕ್ಕೆ ಸ್ಪಂದಿಸುವ ಕೃಷಿ ಪದ್ಧತಿ ಅಳವಡಿಕೆಯನ್ನು ಸಾಧಿಸುವುದಕ್ಕಾಗಿ ತಾಂತ್ರಿಕತೆಗಳ ಆದ್ಯತೀಕರಣ
(ಡಾ. ಬರುನ್ ದೇಬ್ ಪಾಲ್)

೨೭) ಸಮಾಜ ವಿಜ್ಞಾನ ಜ್ಞಾನೋತ್ಪಾದನೆಯಲ್ಲಿ ಆಗಿರುವ ಪ್ರಗತಿ: ಕಾರ್ಯ ಪ್ರವರ್ತನೆ ಮತ್ತು ಪದ್ಧತಿಗಳು
(ಡಾ ಸೋಬಿನ್ ಜಾರ್ಜ್ ಮತ್ತು ಡಾ. ಎಂ. ಲಿಂಗರಾಜು)

೨೮) ಕರ್ನಾಟಕದಲ್ಲಿನ ನಗರಗಳ ಬೆಳವಣಿಗೆಯಲ್ಲಿನ ಪ್ರಾದೇಶಿಕ ಅಸಮಾನತೆಗಳು: ಒಲವುಗಳು, ಮಟ್ಟಗಳು ಮತ್ತು ಪರಿಣಾಮಗಳು
(ಡಾ. ಸಿ.ಎಂ. ಲಕ್ಷ್ಮಣ)

೨೯) ಭಾರತದಲ್ಲಿ ಕುಟುಂಬ ಯೋಜನೆ ಮತ್ತು ಕಾರ್ಯಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ
(ಡಾ. ಟಿ.ಎಸ್. ಭಟ್)

## ೧. ಚಿಕ್ಕಬಳ್ಳಾಪುರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ

***ಡಾ. ಎಂ. ದೇವೇಂದ್ರ ಬಾಬು***

ವಿಶ್ವಸಂಸ್ಥೆಯ ಯುಎನ್‌ಡಿಪಿ ಘಟಕವು ೧೯೯೦ರ ಸಾಲಿನಲ್ಲಿ ವಿಶ್ವದಲ್ಲಿನ ರಾಷ್ಟ್ರಗಳ ಮಾನವ ಅಭಿವೃದ್ಧಿ ಮಟ್ಟದ ಮೇಲೆ ಬೆಳಕು ಚೆಲ್ಲುವುದಕ್ಕಾಗಿ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿದಾಗಿನಿಂದ, ಅನೇಕ ರಾಷ್ಟ್ರಗಳು ಅದನ್ನು ಅನುಕರಿಸಿದವು ಹಾಗೂ ರಾಷ್ಟ್ರದಲ್ಲಿನ ಒಳಗಿನ ವಿವಿಧ ಮಟ್ಟಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವನ್ನು (ಎಚ್‌ಡಿಐ) ಅಳೆದು ವರದಿಗಳನ್ನು ತಯಾರಿಸಿದವು. ಭಾರತದ ಯೋಜನಾ ಆಯೋಗವೂ ರಾಷ್ಟ್ರೀಯ ಮಾನವ ಅಭಿವೃದ್ಧಿ ವರದಿಯನ್ನು ತಯಾರಿಸಿತು ಹಾಗೂ ಕಾಲಾನುಕಾಲಕ್ಕೆ ಅದನ್ನು ಇತ್ತೀಚಿನ ಮಾಹಿತಿಗಳಿಂದ ಆಧುನೀಕರಿಸಿತು. ಈ ರಾಷ್ಟ್ರೀಯ ಮಾದರಿಯನ್ನು ನೋಡಿ ಕರ್ನಾಟಕವೂ ಸಹ ಜಿಲ್ಲಾ ಮಟ್ಟದಲ್ಲಿ ಈ ರೀತಿಯ ವರದಿಗಳನ್ನು ತಯಾರಿಸಲು ಉಪಕ್ರಮಿಸಿತು ಹಾಗೂ ೨೦೦೫ರಲ್ಲಿ ತಯಾರಿಸಿದ ವರದಿಯೇ ಈಚಿನದಾಗಿತ್ತು. ನಂತರ ರಾಜ್ಯವು ಮಹತ್ವಾಕಾಂಕ್ಷೆಯಿಂದ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ, ತನ್ನ ಎಲ್ಲಾ ಜಿಲ್ಲೆಗಳಿಗೂ ಏಕರೀತಿಯ ಸ್ವರೂಪ ಮತ್ತು ವಿನ್ಯಾಸಗಳುಳ್ಳ ಮಾನವ ಅಭಿವೃದ್ಧಿ ವರದಿಗಳನ್ನು (ಡಿಎಚ್‌ಡಿಆರ್‌ಗಳು) ತಯಾರಿಸಲು ಮುಂದಾಯಿತು.

### ಉದ್ದೇಶ ಮತ್ತು ಕಾರ್ಯ ವಿಧಾನ

ಡಿಎಚ್‌ಡಿಆರ್‌ನ ವ್ಯಾಪಕ ಉದ್ದೇಶವು ತಾಲ್ಲೂಕುಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಅಳೆಯುವುದಾಗಿದೆ. ಮಾನವ ಅಭಿವೃದ್ಧಿಯನ್ನು ಅಳೆಯುವ ಮೂರು ಪ್ರಾಥಮಿಕ ಆಯಾಮಗಳು ಇವಾಗಿವೆ: ಆರೋಗ್ಯ, ಶಿಕ್ಷಣ ಹಾಗೂ ಜೀವನ ಮಟ್ಟ.

ಈ ಅಧ್ಯಯನವು ಎಚ್‌ಡಿಐಯನ್ನು ಅಳೆಯುವುದರ ಜೊತೆಗೆ ಇನ್ನೂ ೫ ಮಾನವ ಅಭಿವೃದ್ಧಿ ಸಂಬಂಧಿತ ಅಂಶಗಳನ್ನು ಅಳೆದಿದೆ. ಅವೆಂದರೆ: ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ (ಜಿಐಐ), ಮಕ್ಕಳ ಅಭಿವೃದ್ಧಿ ಸೂಚ್ಯಂಕ (ಸಿಡಿಐ), ಆಹಾರ ಭದ್ರತೆ ಸೂಚ್ಯಂಕ (ಎಫ್‌ಎಸ್‌ಐ), ನಗರಾಭಿವೃದ್ಧಿ ಸೂಚ್ಯಂಕ (ಯುಡಿಐ) ಹಾಗೂ ಸಮಗ್ರ ತಾಲ್ಲೂಕು ಅಭಿವೃದ್ಧಿ ಸೂಚ್ಯಂಕ (ಸಿಟಿಡಿಐ). ಈ ಪ್ರತಿಯೊಂದು ಅಂಶಗಳಿಗೂ ಸಂಬಂಧಿಸಿದಂತೆ ಸೂಚ್ಯಾಂಶಗಳ ಸಮಷ್ಟಿಯನ್ನು ಗುರುತಿಸಿ ಅವುಗಳನ್ನು ಬಳಸಲಾಯಿತು. ಈ ಸೂಚ್ಯಾಂಶಗಳು ಮಾನವ ಅಭಿವೃದ್ಧಿಯ ಮೂರು ವ್ಯಾಪಕ ಅಂಶಗಳ ಮೇಲೆ ಪ್ರಭಾವ ಬೀರುತ್ತವೆ. ಇವುಗಳನ್ನು ಜನಸಂಖ್ಯಾ ಅಂಶಗಳು, ಜೀವನೋಪಾಯ, ಉದ್ಯೋಗ ಸಂಬಂಧಿತ ಅಂಶಗಳು, ಕುಟುಂಬದ ಸ್ವತ್ತುಗಳು, ಸಮುದಾಯವನ್ನು ಬಲಪಡಿಸುವ ಅಂಶಗಳು, ಆರೋಗ್ಯದ ಅಂಶಗಳು, ನೀರು ಸರಬರಾಜು, ನೈರ್ಮಲ್ಯ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ವಿವಿಧ ಸೂಚ್ಯಾಂಕಗಳನ್ನು ರೂಪಿಸುವಾಗ ಹಾಗೂ ಅಧ್ಯಾಯಗಳ ಕರಡನ್ನು ಸಿದ್ಧಪಡಿಸುವಾಗ ಹೆಚ್ಚಾಗಿ ಉಪ ದತ್ತಾಂಶಗಳನ್ನೇ ಆಧರಿಸಲಾಗಿದ್ದು, ಸ್ವಲ್ಪಮಟ್ಟಿಗೆ ಮಾತ್ರ ಪ್ರಾಥಮಿಕ ದತ್ತಾಂಶಗಳನ್ನೂ ಬಳಸಿಕೊಳ್ಳಲಾಗಿದೆ. ಜೊತೆಗೆ ಈ ಅಧ್ಯಯನವು ಜಿಲ್ಲೆಯಲ್ಲಿನ ಮಾನವ ಅಭಿವೃದ್ಧಿಗೆ ನೆರವಾಗುವ ಇತರ ನಾಲ್ಕು ಸಣ್ಣ ಪ್ರದೇಶಾಧ್ಯಯನಗಳನ್ನೂ ಒಳಗೊಂಡಿದೆ. ಈ ಅಧ್ಯಯನಗಳಿಗಾಗಿ ಆಯ್ದ ಕುಟುಂಬಗಳಿಂದ ದತ್ತಾಂಶ/ಮಾಹಿತಿಯನ್ನು ಪಡೆಯಲು ಸಣ್ಣ ಪ್ರತ್ಯೇಕ ಪ್ರಶ್ನಾವಳಿಗಳನ್ನು ಬಳಸಲಾಯಿತು.

ಚಿಕ್ಕಬಳ್ಳಾಪುರದ ಡಿಎಚ್‌ಡಿಆರ್ ವರದಿಯನ್ನು ೧೨ ಅಧ್ಯಾಯಗಳ ಮೂಲಕ ನಿರೂಪಿಸಲಾಗಿದೆ. ಮೊದಲ ಅಧ್ಯಾಯವಾದ ಪೀಠಿಕೆಯು ಇಡೀ ಅಧ್ಯಯನದ ಬಗ್ಗೆ ಬೆಳಕು ಚೆಲ್ಲುತ್ತದೆ. ಎರಡನೆಯ ಅಧ್ಯಾಯವು ಜಿಲ್ಲೆಯ ವಿಹಂಗಮ ನೋಟಕ್ಕೆ ಮೀಸಲಾಗಿದೆ. ಮೂರನೆಯ ಅಧ್ಯಾಯವು ಮಾನವ ಅಭಿವೃದ್ಧಿ ಮಟ್ಟವನ್ನು ಸೂಚಿಸುತ್ತದೆ. ಈ ಅಧ್ಯಾಯದಲ್ಲಿ ಎಚ್‌ಡಿಐ, ಜಿಐಐ, ಸಿಡಿಐ, ಎಫ್‌ಎಸ್‌ಐ, ಯುಡಿಐ ಹಾಗೂ ಸಿಟಿಡಿಐಗಳ

ವಿವರವಾದ ವಿಶ್ಲೇಷಣೆಯನ್ನು ಮಾಡಲಾಗಿದೆ. ತದನಂತರದ ಅಧ್ಯಾಯಗಳು ಮಾನವ ಅಭಿವೃದ್ಧಿಯನ್ನು ನೇರವಾಗಿ ಬಾಧಿಸುವ ಇತರ ನಿರ್ದಿಷ್ಟ ಅಂಶಗಳನ್ನೊಳಗೊಂಡಿವೆ.

## ಚಿಕ್ಕಬಳ್ಳಾಪುರ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕ

ಮಾನವ ಅಭಿವೃದ್ಧಿಯ ಒಟ್ಟಾರೆ ಅಳತೆಗೋಲು ಎಚ್‌ಡಿಐ ಆಗಿದೆ. ಇದು ಮಾನವ ಅಭಿವೃದ್ಧಿಯನ್ನು ಜೀವನಮಟ್ಟ, ಆರೋಗ್ಯ ಮತ್ತು ಶಿಕ್ಷಣ ಇವುಗಳ ಮೂಲಕ ಅಳೆಯುತ್ತದೆ. ಈ ಮೂರು ಆಯಾಮಗಳನ್ನು ಅಳೆಯಲು ಒಟ್ಟು ೧೧ ವಿವಿಧ ಅಂಶಗಳನ್ನು ಬಳಸಲಾಗಿತ್ತು. ಜಿಲ್ಲೆಯ ಆರು ತಾಲ್ಲೂಕುಗಳ ಪೈಕಿ ಚಿಕ್ಕಬಳ್ಳಾಪುರ ತಾಲ್ಲೂಕು ಮಾನವ ಅಭಿವೃದ್ಧಿಯಲ್ಲಿ ಮೊದಲನೆಯದಾಗಿದ್ದು (೦.೮೫೫), ಉಳಿದ ಸ್ಥಾನಗಳನ್ನು ಕ್ರಮವಾಗಿ ಚಿಂತಾಮಣಿ (೦.೭೫೩), ಶಿಡ್ಲಘಟ್ಟ (೦.೭೨೫), ಬಾಗೇಪಲ್ಲಿ (೦.೬೯೪) ಹಾಗೂ ಗೌರಿಬಿದನೂರು ತಾಲ್ಲೂಕುಗಳು ಪಡೆದುಕೊಂಡಿವೆ. ಗುಡಿಬಂಡೆ ತಾಲ್ಲೂಕು ೦.೩೬೭ ಅಂಕದೊಂದಿಗೆ ಕೊನೆಯ ಸ್ಥಾನದಲ್ಲಿದೆ. ಮೊದಲ ಸ್ಥಾನ ಪಡೆದ ತಾಲ್ಲೂಕು ಹಾಗೂ ಕೊನೆಯ ಸ್ಥಾನ ಪಡೆದ ತಾಲ್ಲೂಕುಗಳ ನಡುವಣ ಅಂತರವು ೦.೪೮೯ ರಷ್ಟಿದ್ದು, ಜಿಲ್ಲೆಯ ತಾಲ್ಲೂಕುಗಳಲ್ಲಿ ಮಾನವ ಅಭಿವೃದ್ಧಿಯ ತೀವ್ರ ಅಸಮಾನತೆಯನ್ನು ಇದು ಬಿಂಬಿಸುತ್ತದೆ.

ಲಿಂಗ ಸಂಬಂಧಿ ಸಂಬಂಧಿ ಅಭಿವೃದ್ಧಿ ಸೂಚ್ಯಂಕವು ಮಹಿಳಾ ಪ್ರಗತಿಗೆ ಸಂಬಂಧಿಸಿದಂತೆ ಆಗಿರುವ ಸಾಧನೆಯನ್ನು ಅಳೆದಿದೆ. ಜೊತೆಗೆ ಲಿಂಗ ಸಂಬಂಧಿ ಅಸಮಾನತೆಗಳು ವಿವಿಧ ಪರಿಮಾಣಗಳಲ್ಲಿ ಇರುವುದನ್ನೂ ತೋರಿಸಿದೆ. ಮೂಲಭೂತ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೆಚ್ಚು ಲಿಂಗ ಸಂಬಂಧಿ ಅಸಮಾನತೆಗಳು ಇದ್ದಷ್ಟೂ, ಜಿಡಿಐ ಸೂಚ್ಯಂಕವು ಕಡಿಮೆಯಾಗುತ್ತಾ ಹೋಗಿದೆ.

ಜಿಲ್ಲೆಯ ಆರು ತಾಲ್ಲೂಕುಗಳ ಪೈಕಿ ಗುಡಿಬಂಡೆ ತಾಲ್ಲೂಕಿನಲ್ಲಿ ಲಿಂಗ ಸಂಬಂಧಿ ಅಸಮಾನತೆಯು ಕಡಿಮೆಯಿದ್ದು, ನಂತರದ ಸ್ಥಾನಗಳು ಶಿಡ್ಲಘಟ್ಟ, ಚಿಂತಾಮಣಿ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಗೌರಿಬಿದನೂರು ತಾಲ್ಲೂಕುಗಳಿಗೆ ದೊರಕಿವೆ. ಮೇಲ್ನೋಟಕ್ಕೆ ಎಲ್ಲಾ ತಾಲ್ಲೂಕುಗಳ ಜಿಐಐ ಸೂಚ್ಯಂಕವೂ ಸಹ ಒಂದಕ್ಕೊಂದು ಬಹಳ ಹತ್ತಿರದಲ್ಲಿದ್ದು, ೦.೦೯ ರಿಂದ ೦.೧೬ ರವರೆಗಿನ ಅಂಕಗಳನ್ನು ಪಡೆದಿರುವುದು ವ್ಯಕ್ತವಾಗುತ್ತದೆ.

ಮಕ್ಕಳ ಅಭಿವೃದ್ಧಿಯನ್ನು ಆರೋಗ್ಯ, ಪೋಷಕಾಂಶ ಹಾಗೂ ಶಿಕ್ಷಣಗಳ ಮೂಲಕ ಅಳೆಯಲಾಗಿದೆ. ಸಿಡಿಐ ಸೂಚ್ಯಂಕದ ಪ್ರಕಾರ ಮಕ್ಕಳ ಅಭಿವೃದ್ಧಿಯಲ್ಲಿ ಶಿಡ್ಲಘಟ್ಟ ತಾಲ್ಲೂಕು ಮೊದಲ ಸ್ಥಾನ ಪಡೆದಿದ್ದು, ನಂತರದಲ್ಲಿ ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಿವೆ. ಶಿಡ್ಲಘಟ್ಟದ ಸಿಡಿಐ ೦.೯೪೧ ಆಗಿದ್ದು, ಗುಡಿಬಂಡಿಗೆ ಅತೀ ಕಡಿಮೆ ಅಂದರೆ ೦.೦೦೬ ಸಿಕ್ಕಿದೆ.

ಆಹಾರ ಭದ್ರತೆ ಸೂಚ್ಯಂಕವು (ಎಫ್‌ಎಸ್‌ಐ) ಬಡತನದ ಮಟ್ಟವನ್ನು ಅಳೆದಿದ್ದು, ಮಾನವರ ಮೂಲಭೂತ ಅಗತ್ಯಗಳಾದ ಆಹಾರ ಲಭ್ಯತೆ, ಪೌಷ್ಟಿಕಾಂಶ, ಆಹಾರ ದೊರಕುವ ಕಾರ್ಯವಿಧಾನ ಇತ್ಯಾದಿಗಳನ್ನೊಳಗೊಂಡಿದೆ. ಇದು ಮೂರು ಆಯಾಮಗಳನ್ನು ಹೊಂದಿದ್ದು, ಆಹಾರ ಲಭ್ಯತೆ, ದೊರಕಿಸಿಕೊಳ್ಳುವ ವಿಧಾನ ಮತ್ತು ಅರಗಿಸಿಕೊಳ್ಳುವಿಕೆ ಅಂಶಗಳು ಇದರಲ್ಲಿದೆ. ಈ ವಿಷಯದಲ್ಲಿ ಚಿಕ್ಕಬಳ್ಳಾಪುರವು ಮೊದಲ ಸ್ಥಾನದಲ್ಲಿದ್ದು, ನಂತರದ ಸ್ಥಾನಗಳು ಬಾಗೇಪಲ್ಲಿ, ಚಿಂತಾಮಣಿ, ಶಿಡ್ಲಘಟ್ಟ, ಗೌರಿಬಿದನೂರು ಹಾಗೂ ಗುಡಿಬಂಡೆಗಳಿಗೆ ದೊರಕಿವೆ.

ಯುಡಿಐಗೆ ಸಂಬಂಧಿಸಿದಂತೆ ಶಿಡ್ಲಘಟ್ಟ ಟಿಎಂಸಿಯು ೦.೬೪೧ ಸೂಚ್ಯಂಕವನ್ನು ಪಡೆದು ಜಿಲ್ಲೆಗೇ ಮೊದಲ ಸ್ಥಾನವನ್ನು ಪಡೆದಿದ್ದು, ಉಳಿದ ತಾಲ್ಲೂಕುಗಳು ನಂತರದ ಸ್ಥಾನಗಳನ್ನು ಹೊಂದಿವೆ. ಅದು ಈ ರೀತಿ ಇದೆ: ಚಿಂತಾಮಣಿ ಸಿಎಂಸಿ (೦.೫೮೪), ಬಾಗೇಪಲ್ಲಿ ಟಿಎಂಸಿ (೦.೫೬೪), ಚಿಕ್ಕಬಳ್ಳಾಪುರ ಸಿಎಂಸಿ (೦.೪೮೪), ಗುಡಿಬಂಡೆ ಟಿ.ಪಿ (೦.೩೫೬) ಹಾಗೂ ಗೌರಿಬಿದನೂರು ಟಿಎಂಸಿ (೦.೨೩೬).

ಸಮಗ್ರ ತಾಲ್ಲೂಕು ಅಭಿವೃದ್ಧಿ ಸೂಚ್ಯಂಕವು (ಸಿಟಿಡಿಐ) ತಾಲ್ಲೂಕುಗಳ ನಡುವಣ ಅಭಿವೃದ್ಧಿಯನ್ನು ಅಳೆಯುತ್ತದೆ. ಈ ವಿಷಯದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು ಮೊದಲ ಸ್ಥಾನ ಪಡೆದಿದ್ದು (೦.೬೨೦), ನಂತರದ ಸ್ಥಾನಗಳು: ಶಿಡ್ಲಘಟ್ಟ (೦.೫೮೧), ಗುಡಿಬಂಡೆ (೦.೫೩೭), ಚಿಂತಾಮಣಿ (೦.೫೦೪), ಬಾಗೇಪಲ್ಲಿ (೦.೪೯೩) ಮತ್ತು ಗೌರಿಬಿದನೂರು (೦.೩೪೯) ತಾಲ್ಲೂಕುಗಳಿಗೆ ದೊರಕಿವೆ.

## ಮುಂದೆ ಇರುವ ದಾರಿ

ಚಿಕ್ಕಬಳ್ಳಾಪುರ ಜಿಲ್ಲೆಯು ಅಸ್ತಿತ್ವಕ್ಕೆ ಬಂದು ಏಳು ವರ್ಷಗಳ ಮೇಲಾಗಿದೆ. ಅದು ನಿಧಾನವಾಗಿ ತನ್ನ ಬಾಲ್ಯಾವಸ್ಥೆಯಿಂದ ಹೊರಬರುತ್ತಿದೆ. ಪ್ರಾದೇಶಿಕ ಅಸಮಾನತೆಗಳನ್ನು ಸರಿಪಡಿಸುವುದಕ್ಕಾಗಿ ೨೦೦೨ರಲ್ಲಿ ರಚಿಸಲಾಗಿದ್ದ ಉನ್ನತ ಅಧಿಕಾರದ ಸಮಿತಿಯು ಬಾಗೇಪಲ್ಲಿ ತಾಲ್ಲೂಕನ್ನು ಅತಿ ಹಿಂದುಳಿದ ತಾಲ್ಲೂಕೆಂದು ಗುರುತಿಸಿತ್ತು. ಗುಡಿಬಂಡೆ ಹಾಗೂ ಗೌರಿಬಿದನೂರು ತಾಲ್ಲೂಕುಗಳನ್ನು ಹೆಚ್ಚು ಹಿಂದುಳಿದ ತಾಲ್ಲೂಕುಗಳೆಂದೂ, ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದೂ ಹಾಗೂ ಚಿಕ್ಕಬಳ್ಳಾಪುರ ತಾಲ್ಲೂಕನ್ನು ಇತರ ತಾಲ್ಲೂಕುಗಳಿಗೆ ಹೋಲಿಸಿದಾಗ ಸ್ವಲ್ಪ ಅಭಿವೃದ್ಧಿ ಹೊಂದಿದ ತಾಲ್ಲೂಕೆಂದೂ ಗುರುತಿಸಿತ್ತು. ಇದಾದ ೧೨ ವರ್ಷಗಳ ನಂತರ ಯಾವ ತಾಲ್ಲೂಕನ್ನು ಅತಿ ಹಿಂದುಳಿದ ತಾಲ್ಲೂಕೆಂದು ಸಮಿತಿಯು ಗುರುತಿಸಿತ್ತೋ ಆ ಬಾಗೇಪಲ್ಲಿ ತಾಲ್ಲೂಕು ಅಭಿವೃದ್ಧಿಯನ್ನು ಹೊಂದಿದ್ದು, ಉತ್ತಮ ಪ್ರಗತಿಯನ್ನೂ ತೋರಿಸುತ್ತಿದೆ.



ಚಿಂತಾಮಣಿ ಹಾಗೂ ಶಿಡ್ಲಘಟ್ಟ ತಾಲ್ಲೂಕುಗಳೂ ಅಭಿವೃದ್ಧಿ ಹೊಂದಿದ್ದು, ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ತೆಗೆದುಹಾಕುವ ಸ್ಥಿತಿಗೆ ಬಂದಿವೆ. ಚಿಕ್ಕಬಳ್ಳಾಪುರ ತಾಲ್ಲೂಕು ಜಿಲ್ಲಾ ಕೇಂದ್ರಸ್ಥಾನವನ್ನು ಹೊಂದಿದ್ದರೂ ಸ್ವಲ್ಪ ಮಟ್ಟಿನ ನಿಂತಲ್ಲೇ ನಿಲ್ಲುವ ಪ್ರವೃತ್ತಿ ತೋರುತ್ತಿದೆ. ಇತರ ಎರಡು ತಾಲೂಕುಗಳಾದ ಗುಡಿಬಂಡೆ ಮತ್ತು ಗೌರಿಬಿದನೂರು ತಾಲ್ಲೂಕುಗಳು ಹಿಂದೆಯೇ ಉಳಿದಿದ್ದು ಕೊನೆಯ ಎರಡು ಸ್ಥಾನಗಳಲ್ಲಿವೆ. ಸಾಕ್ಷರತೆ, ವಿದ್ಯಾಭ್ಯಾಸ, ಆರೋಗ್ಯ ಮತ್ತು ಜೀವನೋಪಾಯ ಅಂಶಗಳ ದೃಷ್ಟಿಯಿಂದ ಪ್ರಾದೇಶಿಕ ಅಸಮಾನತೆಗಳು ತಾಲ್ಲೂಕುಗಳ ಉದ್ದಗಲಕ್ಕೂ ಹರಡಿಕೊಂಡಿವೆ. ಈ ಅಸವಾನತೆಗಳನ್ನು ಜಿಲ್ಲಾಭಿವೃದ್ಧಿಯಲ್ಲಿ ತೊಡಗಿರುವ ಎಲ್ಲಾ ಭಾಗೀದಾರರೂ ಸೇರಿಕೊಂಡು ಪ್ರಜ್ಞಾಪೂರ್ವಕ ಪ್ರಯತ್ನಗಳಿಂದ ಕಡಿಮೆಗೊಳಿಸಬೇಕಾಗಿದೆ.

## ೩. ಕರ್ನಾಟಕದಲ್ಲಿ ಗ್ರಾಮೀಣ ನೈರ್ಮಲ್ಯವನ್ನು ಸುಧಾರಿಸುವೆಡೆಗೆ – ಇನ್ಫೋಸಿಸ್ ಪ್ರತಿಷ್ಠಾನದ ನೆರವಿನ ಯೋಜನೆಯಾದ "ಪರಿಶುದ್ಧ" ದಡಿಯಲ್ಲಿ ನಿರ್ಮಿಸಿರುವ ಖಾಸಗಿ ಶೌಚಾಲಯಗಳ ಕಾರ್ಯದಕ್ಷತೆ ಮತ್ತು ಅನುಕೂಲತೆಗಳನ್ನು ತಿಳಿದುಕೊಳ್ಳುವಿಕೆ

***ಡಾ. ಎಸ್.ಮಾನಸಿ ಮತ್ತು ಡಾ. ಸುನಿಲ್ ನೌಟಿಯಾಲ್***

ಸುರಕ್ಷಾ ನೈರ್ಮಲ್ಯವು ಸಹಜವಾಗಿಯೇ ಮಾನವರ ಹಾಗೂ ಪರಿಸರ ಪದ್ಧತಿಗಳೊಡನೆ ಬೆರೆತಿದ್ದು, ಸುರಕ್ಷಿತ ಮತ್ತು ಆರೋಗ್ಯಪೂರ್ಣ ಜೀವನದ ಅತಿ ಅವಶ್ಯಕ ಅಂಶವಾಗಿದೆ. ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಹಾಗೂ ಇತರ ಸಂಸ್ಥೆಗಳು ಅನೇಕ ಯತ್ನಗಳನ್ನು ನಡೆಸಿದ್ದರೂ ಸಹ, "ಪರಿಶುದ್ಧ ಉಪಕ್ರಮ"ವು (ಪಿಐ) ತಿಳುವಳಿಕೆಯನ್ನು ಹೆಚ್ಚಿಸುವುದರ ಜೊತೆ ಜೊತೆಗೇ ನಡವಳಿಕೆಯನ್ನು ಬದಲಾಯಿಸುವ ಅರಿವನ್ನೂ ನೀಡುವ ಈ ಮಾದರಿಯು ರಾಜ್ಯಕ್ಕೆ ಸೂಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಸಂಶೋಧಕರಿಗೆ, ಕಾರ್ಯನೀತಿ ನಿರೂಪಿಸುವವರಿಗೆ ಮತ್ತು ಸಮಾಜಕ್ಕೆ ಹೊಸ ಜ್ಞಾನವನ್ನು ಪರಿಣಾಮಕಾರಿಯಾಗಿ ವರ್ಗಾಯಿಸುವ ಸಾಧನೆ ಮಾಡುವ ಸಲುವಾಗಿ ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು ನಿರ್ಧರಿಸಲಾಯಿತು. ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ನಾವು ಪರಿಶುದ್ಧ ಯತ್ನ ಮಾದರಿಯಲ್ಲಿನ ಕಾರ್ಯವಿಧಾನಗಳನ್ನು, ಪರಿಸ್ಥಿತಿಯ ವಿಶ್ಲೇಷಣೆಯನ್ನು, ಆರೋಗ್ಯಕ್ಕೆ ಸಂಬಂಧಿಸಿದಂತೆ ಬಳಕೆದಾರರು ತೃಪ್ತಿ ಪಟ್ಟಿರುವಿಕೆ, ನಿರ್ವಹಣಾ ಖರ್ಚುಗಳು, ಬಳಸಿಕೊಳ್ಳುವ ಅವಕಾಶಗಳು ಮತ್ತು ಅನುಕೂಲತೆ, ಉದ್ದೇಶಿತ ಗ್ರಾಮಗಳ ಉದ್ದಗಲಕ್ಕೂ ಕಂಡುಬಂದ ಯಶೋಗಾಥೆಗಳು ಮತ್ತು ವಿಫಲತೆಗಳು ಇತ್ಯಾದಿಗಳನ್ನು ದಾಖಲಿಸಿದ್ದೇವೆ. ಜೊತೆಗೆ ಈ ಯೋಜನೆಯು ಸಾಕಷ್ಟು ಪ್ರಮಾಣದಲ್ಲಿರುವಿಕೆ, ಇದರ ಕಾರ್ಯದಕ್ಷತೆ ಹಾಗೂ ಸುಸ್ಥಿರತೆಯನ್ನು ಹೆಚ್ಚಿಸಲೂ ಸಹ ನಿರ್ಣಾಯಕ ಅಂಶಗಳನ್ನು ಮತ್ತು ತಾರ್ಕಿಕ ನಿರ್ಣಯಗಳನ್ನು ನೀಡಿದ್ದೇವೆ. ಸಮೀಕ್ಷೆಗಾಗಿ ವಿನ್ಯಾಸಿತ ಹಾಗೂ ಅರೆ ವಿನ್ಯಾಸಿತ ಸಮೀಕ್ಷಾ ಸಾಧನಗಳನ್ನು ಬಳಸಲಾಯಿತಲ್ಲದೆ ವಿಷಯ ಕೇಂದ್ರಿತ ಗುಂಪು ಚರ್ಚೆಗಳು, ಪ್ರತ್ಯೇಕ ವ್ಯಕ್ತಿಗತ ಸಂವಹನಗಳು ಮತ್ತು ಪ್ರಕರಣಾಧ್ಯಯನಗಳನ್ನೂ ಸಹ ಮಾಡಲಾಯಿತು. ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಜಿಲ್ಲೆಗಳನ್ನೂ ಒಳಗೊಂಡಂತೆ ಉತ್ತರ ಕರ್ನಾಟಕದ ಆರು ಜಿಲ್ಲೆಗಳ ಉದ್ದಗಲಕ್ಕೂ ೫೦೦ ಪ್ರಾತಿನಿಧಿಕ ಫಲಾನುಭವಿಗಳ (ಒಟ್ಟು ಫಲಾನುಭವಿಗಳ ಶೇ. ೫ರಷ್ಟು) ಸಮೀಕ್ಷೆಯನ್ನು ಮಾಡಲಾಯಿತು.

### ಮುಖ್ಯ ಫಲಿತಾಂಶಗಳು

ಅಧ್ಯಯನ ಪ್ರದೇಶದಲ್ಲಿ ಶೌಚಾಲಯಗಳಿಲ್ಲದಿದ್ದದ್ದು ಅನೇಕ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿದ್ದನ್ನು ಗಮನಿಸಲಾಯಿತು. ಎದುರಾಗಿದ್ದ ಮುಖ್ಯ ಸಮಸ್ಯೆಗಳೆಂದರೆ ರಾತ್ರಿಯ ಹೊತ್ತು ಹೊರಗೆ ಹೋಗುವುದು –ಅದರಲ್ಲೂ ವಿಶೇಷವಾಗಿ ಗರ್ಭಿಣಿಯರಿಗೆ, ಮಕ್ಕಳಿಗೆ ಮತ್ತು ವೃದ್ಧರಿಗೆ; ಜೊತೆಗೆ ಲೈಂಗಿಕ ಕಿರುಕುಳದ ಸಮಸ್ಯೆಯೂ ಕಂಡು ಬಂದಿತು. ಸಮೀಕ್ಷೆಗೆ ಒಳಗಾದವರ ಪೈಕಿ ಶೇ.೩೭.೪ರಷ್ಟು ಜನರು ಶೌಚಾಲಯ ಸೌಲಭ್ಯ ತಮಗೆ ಇಲ್ಲವೆಂದೂ ಮತ್ತು ಇದರಿಂದಾಗಿ ಪ್ರತಿದಿವಸವೂ ಮಾನಸಿಕ ಯಾತನೆಯನ್ನು ಅನುಭವಿಸುತ್ತಿರುವುದಾಗಿಯೂ ತಿಳಿಸಿದರು. ಕಾರ್ಯಕ್ರಮ ಅನುಷ್ಠಾನದಿಂದಾಗಿ ಶೌಚಾಲಯಗಳ ಅತಿ ಬಳಕೆಯಿಂದ ಉಂಟಾಗುತ್ತಿದ್ದ ರೋಗಗಳ ಪ್ರಕರಣಗಳು ಕಡಿಮೆಯಾದವು (ಶೇ.೮೫.೮೫); ಇದರಿಂದಾಗಿ ಬಯಲು ಶೌಚದ ಪ್ರಮಾಣ ತಗ್ಗಿತಲ್ಲದೆ ಮನೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿನ ನೈರ್ಮಲ್ಯವು ಸುಧಾರಿಸಿತು. ಅಳವಡಿಸಿರುವ ಶೌಚಾಲಯ ಮಾದರಿಗಳ ಬಗ್ಗೆ ಹೆಚ್ಚೂ ಕಡಿಮೆ ಶೇ.೯೮.೨೩ ರಷ್ಟು ಜನರು ತೃಪ್ತಿಯನ್ನು ವ್ಯಕ್ತಪಡಿಸಿದರು. ಗ್ರಾಮಗಳಾದ್ಯಂತ ಜೈವಿಕ ಅನಿಲ ಸ್ಥಾವರಗಳು ಜನಪ್ರಿಯವಾಗಿವೆ. ಗ್ರಾಮಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ವಿವಿಧ ಹಿನ್ನೆಲೆಗಳುಳ್ಳ ಸ್ವಯಂಸೇವಕರು ಪ್ರೋತ್ಸಾಹಿಸಿ ಪ್ರಮುಖ ಪಾತ್ರ ವಹಿಸಿದರು. ಈ ಯೋಜನಾ ಅನುಷ್ಠಾನ ಕಾರ್ಯವಿಧಾನವು ಪ್ರಚಲಿತ ಸಾಮಾಜಿಕ ಬಂಡವಾಳದಿಂದ ಸ್ವಯಂ ಸೇವಕರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತಲ್ಲದೆ ವಿಶೇಷ ತಿಳುವಳಿಕೆ ಆಂದೋಲನಕ್ಕೆ ಹೊರತಾದ ಸಂಸ್ಥೆಗಳನ್ನು ಸೆಳೆಯುವಲ್ಲೂ ಸಫಲವಾಯಿತು. ಮನೆಯ ಶೌಚಾಲಯಗಳನ್ನು ಬಳಸುವವರ ಸಂಖ್ಯೆ ಹೆಚ್ಚು ಹೆಚ್ಚುವುದರೊಂದಿಗೆ, ಸಮಾಜದ ಎಲ್ಲ ವರ್ಗಗಳ ಜನರು ಶೌಚಾಲಯವನ್ನು ಬಳಸುವುದು ಕ್ರಮೇಣ ಹೆಚ್ಚಿತು. ಇತರ ಜಿಲ್ಲೆಗಳಿಗೆ ಹೋಲಿಸಿದರೆ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ನಿರ್ಮಲ ಶೌಚಾಲಯದ ಅಗತ್ಯ ಹೆಚ್ಚಾಗಿದ್ದುದರಿಂದ, ಈ ಯೋಜನೆಯ ಅನುಷ್ಠಾನವನ್ನು ಉತ್ತರ ಕರ್ನಾಟಕದ ಆಯ್ದ ಜಿಲ್ಲೆಗಳಲ್ಲಿ ಮಾಡಲಾಯಿತು. ಒಟ್ಟಿನಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಯಿತಲ್ಲದೆ, ಒಂದು ವರ್ಷದಲ್ಲಿ ೧೦,೦೦೦ ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ಈಡೇರಿಸಿತು.

# ಐಸೆಕ್

## ನಗರ ಪ್ರದೇಶಗಳಲ್ಲಿ ಧನಸಹಾಯದಿಂದ ಹೊರಗಿಡುವಿಕೆ: ಕರ್ನಾಟಕದ ಒಂದು ಪ್ರಕರಣ

**ಪ್ರೊ. ಮೀನಾಕ್ಷಿ ರಾಜೀವ್ ಮತ್ತು ಶ್ರೀಮತಿ ಬಿ.ಪಿ. ವಾಣಿ**

ಆರ್ಥಿಕ ಸಿದ್ಧಾಂತವು ಬೆಳವಣಿಗೆಗೆ ಉಂಟುಮಾಡುವುದಕ್ಕೆ ಬಂಡವಾಳವು ತುಂಬಾ ಮುಖ್ಯ ಎಂದು ಸಾಬೀತು ಪಡಿಸುತ್ತದೆ. ಆರ್ಥಿಕ ಮಧ್ಯವರ್ತಿ ಅಂಶಗಳು ಉಳಿತಾಯಕ್ಕೆ ಚಾಲನೆ ನೀಡಿ ಅದನ್ನು ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಉತ್ಪಾದಕ ಬಂಡವಾಳವನ್ನಾಗಿ ಮಾಡುವ ಸಂದರ್ಭದಲ್ಲಿ ಈ ಉಳಿತಾಯವನ್ನು ಉಪಯೋಗಿಸಲು ಸಾಧನವಾಗಿ ಪರಿಣಮಿಸುತ್ತವೆ. ಹೀಗಾಗಿ ಎಲ್ಲರನ್ನೂ ಒಳಗೊಂಡ ಬೆಳವಣಿಗೆಯನ್ನು ಸಾಧಿಸುವುದಕ್ಕಾಗಿ ಬಡವರಿಗೂ ಸಹ ಆರ್ಥಿಕ ಸಂಬಂಧಿ ಸೌಲಭ್ಯಗಳು ಸುಲಭವಾಗಿ ದೊರಕುವಂತೆ ಮಾಡಬೇಕಾಗುತ್ತದೆ. ಪ್ರಸ್ತುತದಲ್ಲಿ ಬ್ಯಾಂಕ್ ಖಾತೆಗಳನ್ನು ಹೊಂದಿಲ್ಲದವರು ತಮ್ಮ ಹಣವನ್ನು ಬ್ಯಾಂಕ್‌ಗಳಲ್ಲಿ ಠೇವಣಿಯಾಗಿ ಇಡುವುದಕ್ಕೂ ಮತ್ತು ಸಾಲ ಪಡೆಯುವ ಸೌಲಭ್ಯ ಹೊಂದಲೂ ಅವಕಾಶ ಕಲ್ಪಿಸುವುದಕ್ಕೂ ಕಾರ್ಯನೀತಿ ನಿರೂಪಕರು ಸಾಕಷ್ಟು ಗಮನವನ್ನು ಹರಿಸುತ್ತಿದ್ದಾರೆ. ಈಚೆಗೆ ಕೇಂದ್ರದಲ್ಲಿರುವ ಎನ್‌ಡಿಎ ಸರ್ಕಾರವು ಜನಧನ ಯೋಜನೆಯ ಮೂಲಕ ಎಲ್ಲರನ್ನೂ ಒಳಗೊಳ್ಳುವ ಆಂದೋಲನವನ್ನು ಹಮ್ಮಿಕೊಂಡಿರುವುದು ಗಮನಾರ್ಹವಾಗಿದೆ.

ಹಾಗೆ ನೋಡಿದರೆ ರೈತರ ಕುಟುಂಬಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಸಾಲ ಮಾರುಕಟ್ಟೆಯ ಬಗ್ಗೆ ಅನೇಕ ವಿಚಾರಪೂರಿತ ಅಧ್ಯಯನಗಳು ನಡೆದಿವೆ. ನಗರ ಪ್ರದೇಶಗಳಲ್ಲಿನ ಸ್ವಯಂ ಉದ್ಯೋಗವನ್ನು ಹೊಂದಿರುವ ಬಡಕುಟುಂಬಗಳು ತಮ್ಮ ವ್ಯಾಪಾರಕ್ಕಾಗಿ ಸಾಲದ ನಿರಂತರ ಅವಶ್ಯಕತೆಯನ್ನು ಹೊಂದಿದ್ದರೂ ಸಹ, ಅವರುಗಳಿಗೆ ಸಾಲ ಸಿಗುವ ಅವಕಾಶಗಳು ಕಡಿಮೆಯೇ ಎಂದು ಪರಿಕಲ್ಪನೆ ಮಾಡಲಾಗಿದ್ದರೂ ಸಹ, ಈ ಸನ್ನಿವೇಶವನ್ನು ಅನಾವರಣಗೊಳಿಸಲು ಆಗಿರುವ ಅಧ್ಯಯನಗಳು ಕಡಿಮೆಯೇ ಎನ್ನಬಹುದು. ಈ ಹಿನ್ನೆಲೆಯಲ್ಲಿ ಸದರಿ ಅಧ್ಯಯನವು ಭಾರತದ ನಗರ ಪ್ರದೇಶಗಳ ಜನಸಂಖ್ಯೆಯನ್ನು ನಿರ್ದಿಷ್ಟವಾಗಿ ಗಮನದಲ್ಲಿಟ್ಟುಕೊಂಡು ಧನ ಸಹಾಯ ಮಾಡುವಿಕೆಯಿಂದ ಈ ಜನಸಂಖ್ಯೆಯನ್ನು ದೂರವಿಟ್ಟಿರುವುದರ ಬಗ್ಗೆ ಗಮನವನ್ನು ಕೇಂದ್ರೀಕರಿಸಿದೆ. ಈ ಬಗ್ಗೆ ವ್ಯಾಪಕ ದೃಷ್ಟಿಕೋನ ಹೊಂದುವುದಕ್ಕಾಗಿ ಈ ಅಧ್ಯಯನವು ಭಾರತದ ನಗರಗಳಲ್ಲಿನ ಋಣಭಾರತ್ವದ ವ್ಯಾಪಕತೆ ಮತ್ತು ಸ್ವರೂಪದ ವಿಶ್ಲೇಷಣೆಯೊಂದಿಗೆ ಪ್ರಾರಂಭಗೊಳ್ಳುತ್ತದೆ. ಅಧ್ಯಯನದ ದತ್ತಾಂಶಕ್ಕಾಗಿ ಎನ್‌ಎಸ್‌ಎಸ್‌ಒ ೫೯ನೇ ಸುತ್ತಿನ ದತ್ತಾಂಶವನ್ನು ಆಧರಿಸಿದ್ದು, ಋಣಭಾರತ್ವದ ಬಗ್ಗೆ ಆ ಸಮಯದಲ್ಲಿ ಲಭ್ಯವಾಗುತ್ತಿದ್ದ ವ್ಯಾಪಕ ಮಟ್ಟದ ದತ್ತಾಂಶವು ಇದಾಗಿದೆ.

ಈ ಬಗ್ಗೆ ಕರ್ನಾಟಕದ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ನಡೆಸಿದ ಪ್ರಾಥಮಿಕ ಸಮೀಕ್ಷೆಯನ್ನು ಆಧರಿಸಿ, ಸೇವಾ ವಲಯದಲ್ಲಿ ತೊಡಗಿರುವ ಅಂದರೆ ಸಗಟು ಮತ್ತು ಚಿಲ್ಲರೆ ಮಾರಾಟದಲ್ಲಿ ತೊಡಗಿರುವ ಸ್ವಯಂ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಈ ಅಧ್ಯಯನ ವರದಿಯು ಕೆಳಕಂಡ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ: ೭೦ನೇ ಸುತ್ತಿನ ಎನ್‌ಎಸ್‌ಎಸ್ ದತ್ತಾಂಶವನ್ನು ಆಧರಿಸಿ ಸಾಲ ನೀಡಿಕೆಯಿಂದ ಈ ಜನಸಂಖ್ಯೆಯನ್ನು ದೂರವಿಟ್ಟಿರುವುದರ ವ್ಯಾಪಕತೆ ಮತ್ತು ಸ್ವರೂಪದ ಅಧ್ಯಯನ; ಸೇವಾ ಸಿಬ್ಬಂದಿ ಅಥವಾ ಸ್ವಯಂ ಉದ್ಯೋಗಿಗಳನ್ನು ಅವರನ್ನು ಎಷ್ಟರಮಟ್ಟಿಗೆ ಧನಸಹಾಯದಿಂದ ದೂರವಿರಿಸಲಾಗಿದೆ ಎಂಬುದರ ಆಧಾರದ ಮೇಲೆ ಅಂದರೆ ಪೂರ್ಣವಾಗಿ ದೂರವಿರಿಸುವಿಕೆ, ಸ್ವಲ್ಪ ಮಟ್ಟಿಗೆ ದೂರವಿರಿಸುವಿಕೆ ಹಾಗೂ ಪೂರ್ಣವಾಗಿ ಸೇರ್ಪಡಿಸಿಕೊಳ್ಳುವಿಕೆ – ಇವುಗಳನ್ನಾಧರಿಸಿ ಅದರ ವ್ಯಾಪಕತೆ ಮತ್ತು ಸ್ವರೂಪವನ್ನು ಅಧ್ಯಯನ ಮಾಡುವುದು. ಇದಕ್ಕಾಗಿ ಈ ರೀತಿಯ ಸೇವೆಗಳನ್ನೆಲ್ಲಾ ಅಂದರೆ ಠೇವಣಿ ಇರಿಸುವಿಕೆ, ಸಾಲ ನೀಡುವಿಕೆ, ವಿಮೆ ಮಾಡುವಿಕೆ, ಹಣ ಕಟ್ಟುವಿಕೆ ಹಾಗೂ ಅಧ್ಯಯನಕ್ಕಾಗಿ ಆರಿಸಿಕೊಂಡಿರುವ ಜನಸಂಖ್ಯೆಗೆ ಅಗತ್ಯವಾದ ಇತರ ಸೇವೆಗಳ ಸಂಪೂರ್ಣ ಪಟ್ಟಿಯನ್ನು ತಯಾರಿಸುವ ಅಗತ್ಯವಿರುತ್ತದೆ; ವಿವಿಧ ವರ್ಗಗಳ ಸ್ವಯಂ ಉದ್ಯೋಗಿಗಳಿಗೆ/ಸೇವಾ ಸಿಬ್ಬಂದಿಗೆ ಧನಸಹಾಯ ನೀಡದಿರುವುದಕ್ಕೆ ಕಾರಣಗಳು; ಕಾರ್ಯನೀತಿಯ ಸಾಧ್ಯ ಮಧ್ಯಪ್ರವೇಶವನ್ನು ಗುರುತಿಸುವಿಕೆ.

### ಫಲಿತಾಂಶಗಳು

ಎನ್‌ಎಸ್‌ಎಸ್‌ಒ ಸಮೀಕ್ಷೆಯ ಪ್ರಕಾರ ನಗರ ಪ್ರದೇಶಗಳ ಕುಟುಂಬಗಳು ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳೆರಡರಿಂದಲೂ ಕಡಿಮೆ ಪ್ರಮಾಣದ ಸಾಲ ಸೌಲಭ್ಯವನ್ನು ಪಡೆಯುತ್ತಿದ್ದಾರೆ ಎಂದು ಗಮನಿಸಲಾಗಿದೆ. ಔಪಚಾರಿಕ ವಲಯದಲ್ಲಿನ ಸಾಲ ಸೌಲಭ್ಯವು ನಗರ ಪ್ರದೇಶಗಳಲ್ಲಿನ ಬಡ ಕುಟುಂಬಗಳಿಗಿಂತ ಶ್ರೀಮಂತ ವರ್ಗಕ್ಕೆ ಹೆಚ್ಚಾಗಿ ಸಿಗುತ್ತಿದೆ. ಇದೇ ರೀತಿಯ ವ್ಯತ್ಯಾಸವು ವಿವಿಧ ಸಾಮಾಜಿಕ ಸ್ತರಗಳಲ್ಲಿರುವವರಿಗೆ ದೊರಕುತ್ತಿರುವ ಸಾಲ ಸೌಲಭ್ಯದಲ್ಲೂ ಗೋಚರಿಸುತ್ತಿದೆ. ಆದಕಾರಣ ಮಹಿಳೆಯಿಂದ ನಡೆಸಲ್ಪಡುವ ಕುಟುಂಬಗಳಿಗೆ (ಮುಖ್ಯವಾಗಿ ಸಣ್ಣ ಮಕ್ಕಳೊಂದಿಗಿರುವ ಹಾಗೂ ಸ್ವಯಂ ಉದ್ಯೋಗ ಚಟುವಟಿಕೆಗಳಲ್ಲಿ ತೊಡಗಿರುವ ವಿಧವೆಯ ಕುಟುಂಬ) ಮತ್ತು ಪರಿಶಿಷ್ಟ ಬುಡಕಟ್ಟು ಜನಾಂಗ ಹಾಗೂ ಆ ರೀತಿಯ ಇತರ ಸಾಮಾಜಿಕ ಗುಂಪುಗಳು ಉಳಿದ ಗುಂಪುಗಳ ಮಟ್ಟಕ್ಕೆ ಬರುವ ರೀತಿಯಲ್ಲಿ ಧನಸಹಾಯ ಆಂದೋಲನ ನಡೆಸುವುದಕ್ಕೆ ವಿಶೇಷ ಗಮನ ನೀಡಬೇಕಾಗಿದೆ.

ದೇಶದ ನಗರ ಪ್ರದೇಶಗಳು ಅದರಲ್ಲೂ ಮಹಾನಗರಗಳಲ್ಲಿ, ವಿಶೇಷವಾಗಿ ಬೆಂಗಳೂರು ಮಹಾನಗರದಲ್ಲಿ ಅದರ ಉದ್ದಗಲಕ್ಕೂ ಬ್ಯಾಂಕುಗಳು ಕರ್ತವ್ಯ ನಿರ್ವಹಿಸುತ್ತಿವೆ. ಆದರೂ ಸಹ ನಮ್ಮ ಅಧ್ಯಯನವು ಹೊರಗೆಡಹಿದ ಸತ್ಯಾಂಶವೇನೆಂದರೆ ಸ್ವಯಂ ಉದ್ಯೋಗಿ ಜನಸಂಖ್ಯೆಯ ಬಹುಪಾಲು



ಮಂದಿ ನಿಯಮಿತವಾಗಿ ದುಡ್ಡು ಪಡೆಯಬೇಕಾದ ಅಗತ್ಯಗಳನ್ನು ಹೊಂದಿದ್ದರೂ ಸಹ ಮತ್ತು ಬ್ಯಾಂಕುಗಳು ಅವರುಗಳಿಗೆ ತೀರಾ ಸಮೀಪದಲ್ಲೇ ಇದ್ದರೂ ಸಹ ಅಲ್ಲಿಗೆ ಹೋಗಲು ಅವರ ಮನಸ್ಥಿತಿ ತಡೆಹಿಡಿಯುತ್ತಿದೆ. ನಮ್ಮ ಸಮೀಕ್ಷೆಯಲ್ಲಿ ಬಹುಪಾಲು ಸಂದರ್ಭಗಳಲ್ಲಿ ಗಮನಿಸಿದ್ದೇನೆಂದರೆ ಈ ರೀತಿಯ ಅವರ ಮನಸ್ಥಿತಿಯು ಬ್ಯಾಂಕುಗಳಲ್ಲಿ ಅವರಿಗಾದ ವೈಯುಕ್ತಿಕ ಅನುಭವಗಳಿಂದಲ್ಲ ಆದರೆ ಒಟ್ಟಾರೆ ತಮ್ಮಂಥವರು ಬ್ಯಾಂಕುಗಳ ಸೌಲಭ್ಯ ಪಡೆಯಲು ಸಾಧ್ಯವಾಗುವುದಿಲ್ಲ ಎಂಬ ನಂಬಿಕೆಯಿಂದ. ಈ ನಿಟ್ಟಿನಲ್ಲಿ ಆರ್ಥಿಕ ಸಾಕ್ಷರತೆಯು ಬಹಳ ಮುಖ್ಯವೆನಿಸುತ್ತದೆ.

ಈ ಅಧ್ಯಯನದಲ್ಲಿ ಧನ ಸಹಾಯದಿಂದ ದೂರವಿಡುವ ಸೂಚ್ಯಂಕಗಳನ್ನು ಸಿದ್ಧಪಡಿಸಲು ಅನೇಕ ಲಕ್ಷಣ ಅಂದರೆ ಸಾಲ, ಠೇವಣಿ, ವಿಮೆ ಇತ್ಯಾದಿಗಳನ್ನು ಆಧರಿಸಲಾಯಿತೆಂಬುದು ಮುಖ್ಯ ವಿಷಯವಾಗಿರುತ್ತದೆ. ಧನ ಸಹಾಯದಿಂದ ದೂರವಿಡುವಿಕೆಯ ಮೇಲೆ ಪ್ರಭಾವ ಬೀರುವ ವಿವಿಧ ಅಂಶಗಳ ಬಗ್ಗೆ ತಿಳಿದುಕೊಳ್ಳಲು ನಾವು ದೂರವಿಡುವಿಕೆ ಸೂಚ್ಯಂಕವು ಅವಲಂಬಿತ ಅಂಶವಾಗಿರುವ ಲಾಜಿಸ್ಟಿಕ್ ರಿಗ್ರೆಷನ್ ಮಾದರಿಯನ್ನು ರಚಿಸಿದೆವು. ಈ ವಿಶ್ಲೇಷಣೆಯು ಧನ ಸಹಾಯದಿಂದ ದೂರವಿಡುವುದಕ್ಕೆ ಆದಾಯವು ಒಂದು ಗಣನೀಯ ನಿರ್ಣಾಯಕ ಅಂಶ ಎಂಬುದನ್ನು ತಿಳಿಯಪಡಿಸಿತು. ಅಂದರೆ ಆದಾಯದ ಮಟ್ಟ ಹೆಚ್ಚಿದ್ದಷ್ಟೂ ದೂರವಿಡುವಿಕೆ ಮಟ್ಟವು ಕಡಿಮೆಯಾಗುತ್ತಾ ಹೋಗುತ್ತದೆ. ಶಿಕ್ಷಣ ಮಟ್ಟಕ್ಕೆ ಸಂಬಂಧಿಸಿದ ಫಲಿತಾಂಶವೂ ಇದೇ ರೀತಿಯಾಗಿತ್ತು. ಶಿಕ್ಷಣ ಮಟ್ಟ ಕಡಿಮೆಯಿದ್ದಷ್ಟೂ ಧನಸಹಾಯ ನೀಡುವಿಕೆಯಿಂದ ದೂರುವಿಡುವುದು ಹೆಚ್ಚಾಗುತ್ತಾ ಹೋಗುತ್ತದೆ. ಇದೇ ರೀತಿ ಹೆಚ್ಚಿನ ಶಿಕ್ಷಣ ಇದ್ದಷ್ಟೂ ಧನಸಹಾಯ ನೀಡುವಿಕೆಯಲ್ಲಿ ಸೇರ್ಪಡೆಗೊಳಿಸಿಕೊಳ್ಳುವ ಅವಕಾಶ ಹೆಚ್ಚುತ್ತಾ ಹೋಗುತ್ತದೆ. ಆದರೂ ಸಹ, ನಿರಕ್ಷರಸ್ಥರಿಗೂ ಹಾಗೂ ಪ್ರಾಥಮಿಕ ಶಿಕ್ಷಣ ಪಡೆದವರಿಗೂ ಧನ ಸಹಾಯದಿಂದ ದೂರವಿಡುವಿಕೆಯಲ್ಲಿ ಗಣನೀಯ ವ್ಯತ್ಯಾಸ ಕಂಡುಬರಲಿಲ್ಲ. ಹೀಗಾಗಿ ಔಪಚಾರಿಕ ವಲಯದ ಬ್ಯಾಂಕುಗಳ ಸೌಲಭ್ಯಗಳನ್ನು ಪಡೆಯಲು ಕನಿಷ್ಟ ಪಕ್ಷ ಮಾಧ್ಯಮಿಕ ಅಥವಾ ಅದಕ್ಕಿಂತ ಹೆಚ್ಚಿನ ಶಿಕ್ಷಣವಾದರೂ ಇರುವುದು ಸೂಕ್ತವೆಂದು ಅಧ್ಯಯನದಲ್ಲಿ ಕಂಡುಬಂದಿತು. ಇದೇ ರೀತಿಯಲ್ಲಿ ಬಟ್ಟೆ ವ್ಯಾಪಾರ, ಎಲೆಕ್ಟ್ರಾನಿಕ್ ವಸ್ತುಗಳ ವ್ಯಾಪಾರ ಮುಂತಾದವುಗಳಲ್ಲಿ ತೊಡಗಿರುವವರನ್ನೂ ಧನ ಸಹಾಯದಿಂದ ದೂರವಿಡುವುದು ಕಡಿಮೆಯೆಂದು ಕಂಡು ಬಂದಿದೆ (ಉಳಿದ ವ್ಯಾಪಾರಗಳಲ್ಲಿ ತೊಡಗಿರುವವರಿಗೆ ಹೋಲಿಸಿದರೆ). ವಯಸ್ಸಿಗೂ ಮತ್ತು ಧನ ಸಹಾಯದಿಂದ ದೂರವಿಡುವುದಕ್ಕೂ ಸಂಬಂಧವಿರುವುದಿಲ್ಲ. ಇದೇ ರೀತಿಯಲ್ಲಿ ಅವರು ಎಲ್ಲಿ ವ್ಯಾಪಾರ ಮಾಡುತ್ತಾರೆ ಎಂಬುದೂ ಅಂದರೆ ಸರಿಯಾದ ಅಂಗಡಿಗಳಲ್ಲಿ ಅಥವಾ ರಸ್ತೆ ಬದಿಯಲ್ಲಿ ಅಥವಾ ಸರಿಯಾದ ರಚನೆಯಿಲ್ಲದ ಅಂಗಡಿಗಳಲ್ಲಿ ವ್ಯಾಪಾರ ಮಾಡುವುದಕ್ಕೂ ಮತ್ತು ಧನ ಸಹಾಯದಿಂದ ದೂರವಿಡುವುದಕ್ಕೂ ಸಂಬಂಧವಿರುವುದಿಲ್ಲ. ಹೀಗಾಗಿ ಖಾಯಂ ಅಂಗಡಿಯನ್ನು ಹೊಂದಿರುವುದಾಗಲೀ ಅಥವಾ ಖಾಯಂ ವ್ಯಾಪಾರದ ವಿಳಾಸ ಹೊಂದಿರುವುದಾಗಲೀ ಗಣನೀಯ ಅಂಶವೆನಿಸುವುದಿಲ್ಲವೆಂದು ಅಧ್ಯಯನ ತಿಳಿಸಿದೆ.

**ಕಾರ್ಯನೀತಿ ರಚನೆಗೆ ಸಲಹೆಗಳು:**

- ನಗರ ಪ್ರದೇಶಗಳ ಬಡವರಿಗೆ ಅದರಲ್ಲೂ ವಿಶೇಷವಾಗಿ ಸ್ವಯಂ ಉದ್ಯೋಗಿಗಳಿಗೆ ಸಾಲ ಒದಗಿಸುವ ಪದ್ಧತಿಯನ್ನು ಸುಧಾರಿಸುವ ಅಗತ್ಯವಿದೆ. ಅನೌಪಚಾರಿಕವಾಗಿ ಹಣ ನೀಡುವವರು ಅಸಲಿನಿಂದ ಬಡ್ಡಿಯನ್ನು ಪ್ರತ್ಯೇಕಿಸಿ, ಕೇವಲ ಬಡ್ಡಿಯನ್ನೇ ಪಡೆಯುತ್ತಾ ಹೋಗುವುದರಿಂದ ಸಾಲಗಾರರು ಅಸಲಿನ ಹಲವಾರು ಪಟ್ಟು ಹಣವನ್ನು ಬಡ್ಡಿಯಾಗೇ ಕಟ್ಟುತ್ತಾ ಹೋದರೂ ಸಾಲ ಮಾತ್ರ ತೀರುವುದಿಲ್ಲವೆಂಬುದೂ ಅಧ್ಯಯನದಲ್ಲಿ ಕಂಡುಬಂದಿದೆ. ಜೊತೆಗೆ ವಿವಿಧ ಗುಂಪುಗಳು, ಪ್ರದೇಶಗಳು, ರಾಜ್ಯಗಳು ಇತ್ಯಾದಿಗಳ ನಡುವಣ ಧನ ಸಹಾಯ ಪಡೆಯುವಲ್ಲಿರುವ ತಾರತಮ್ಯವನ್ನು ನಿವಾರಿಸಲೂ ಸಹ ಕಾರ್ಯನೀತಿ ರೂಪಿಸುವುದು ಸೂಕ್ತವಾಗಿದೆ.

- ಎರಡನೆಯದಾಗಿ, ಬ್ಯಾಂಕಿನ ಸೌಲಭ್ಯ ಪಡೆಯಲು ಅಲ್ಲಿಗೆ ಹೋಗಲು ಇರುವ ಮಾನಸಿಕ ಅಡಚಣೆಯನ್ನು ದೂರ ಮಾಡಲು ಅವರನ್ನು ಆರ್ಥಿಕ ಸಾಕ್ಷರರನ್ನಾಗಿ ಮಾಡಬೇಕು.

- ಮೂರನೆಯದಾಗಿ ಈ ಗ್ರಾಹಕರಿಗೆ ಮೊದಲೇ ಸಿದ್ಧಪಡಿಸಿದ ಸೇವೆಗಳನ್ನು ನೀಡುವುದು ಅಗತ್ಯವಾಗಿದೆ. ಈ ಅಧ್ಯಯನದಲ್ಲಿನ ನಗರ ಪ್ರದೇಶಗಳ ಸ್ವಯಂ ಉದ್ಯೋಗಿಗಳು ಆಯಾ ಪ್ರದೇಶಕ್ಕೆ ಸೀಮಿತವಾದ ಕಿಯೋಸ್ಕ್ ಆಧಾರಿತ ಸೇವೆಗಳ ಮೂಲಕ ಬ್ಯಾಂಕ್‌ಗಳು ತಮ್ಮ ವ್ಯಾಪಾರಕ್ಕೆ ಸೌಲಭ್ಯ ಒದಗಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

## ಭಾರತದಲ್ಲಿ ಶಿಕ್ಷಿತರ ನಿರುದ್ಯೋಗ: ಕಾರಣಗಳು, ಪರಿಣಾಮಗಳು ಹಾಗೂ ಪರಿಹಾರಗಳು

***ಡಾ. ಇಂದ್ರಜಿತ್ ಬೈರಾಗ್ಯ***

ಪ್ರಚಲಿತದಲ್ಲಿರುವ ಸಂಶೋಧನಾ ಸಾಹಿತ್ಯವು ಕಾರ್ಮಿಕ ಮಾರುಕಟ್ಟೆಯಲ್ಲಿ ಕಡಿಮೆ ಶಿಕ್ಷಣ ಹೊಂದಿರುವ ಕೆಲಸಗಾರರಿಗಿಂತ ಶಿಕ್ಷಿತ ಕೆಲಸಗಾರರು ಕನಿಷ್ಠ ಪಕ್ಷ ಮೂರು ರೀತಿಯ ಮೂಲಭೂತ ಅನುಕೂಲಗಳನ್ನು ಹೊಂದಿರುತ್ತಾರೆಂದು ಪ್ರತಿಪಾದಿಸುತ್ತದೆ. ಅವೆಂದರೆ: ಹೆಚ್ಚಿನ ವೇತನ, ಆದಾಯ ಮತ್ತು ವೃತ್ತಿಯಲ್ಲಿ ಬೇಗನೆ ಮೇಲೆ ಮೇಲೆ ಹೋಗುವ ಸಾಧ್ಯತೆ ಹಾಗೂ ವೃತ್ತಿಯಲ್ಲಿ ಹೆಚ್ಚಿನ ಸ್ಥಿರತೆ (ಸಿಚರ್‌ಮನ್, ೧೯೮೭; ಮಿನ್ಸರ್, ೧೯೯೧).

ಹೀಗಿದ್ದರೂ ಸಹ ಕೆಲಸಗಾರರಿಗಾಗಿ ಕಡಿಮೆ ಬೇಡಿಕೆ, ಹುಡುಕಾಟ ಹಾಗೂ ಅಗತ್ಯಕ್ಕೆ ತಕ್ಕಷ್ಟು ಹೊಂದಾಣಿಕೆಯ ಕೊರತೆ, ಸುಶಿಕ್ಷಿತರ ಆಶೋತ್ತರಗಳು ಹಾಗೂ ಅದಕ್ಕೆ ತಕ್ಕಂತೆ ಸೂಕ್ತ ಉದ್ಯೋಗಾವಕಾಶಗಳು ಇಲ್ಲದಿರುವುದು ಇತ್ಯಾದಿಗಳು ಸಾಮರ್ಥ್ಯವುಳ್ಳ ಉದ್ಯೋಗಾಕಾಂಕ್ಷಿಗಳು ಉದ್ಯೋಗ ಅಭದ್ರತೆ ಮತ್ತು ಅಸ್ಥಿರತೆಯಿಂದ ಬಳಲುವಂತೆ ಮಾಡುತ್ತವೆ. ಇದಕ್ಕಿಂತ ಹೆಚ್ಚಿನದಾಗಿ, ಶಿಕ್ಷಣದ ಕಳಪೆಮಟ್ಟವೂ ಸಹ ಹೆಚ್ಚಿನ ಪ್ರಮಾಣದ ನಿರುದ್ಯೋಗ ಹಾಗೂ ಕಡಿಮೆ ಮಟ್ಟದ ಉದ್ಯೋಗಕ್ಕೆ ಗಣನೀಯ ಪ್ರಮಾಣದಲ್ಲಿ ಕಾರಣವಾಗುತ್ತದೆ (ಸ್ಟಿಗ್‌ಲಿಟ್ಜ್, ೧೯೭೫). ಉದಾಹರಣೆಗೆ ಹೇಳುವುದಾದರೆ, ಅಂತರ‍್ರಾಷ್ಟ್ರೀಯ ಮಟ್ಟದಲ್ಲಿ ನೋಡಿದರೆ ಅಮೆರಿಕದ ಪದವೀಧರರ ನಿರುದ್ಯೋಗ ಮಟ್ಟವು ೨೦೧೩ರಲ್ಲಿ ಶೇ.೭.೬ ರಷ್ಟಿತ್ತು. ಇದಕ್ಕೆ ಮುಖ್ಯ ಕಾರಣ ಉದ್ಯೋಗಾವಕಾಶಗಳು ಕಡಿಮೆ ಇದ್ದುದು ಹಾಗೂ ಉದ್ಯೋಗದಾತರು ಅಪೇಕ್ಷೆ ಪಡುವ ಕೌಶಲ್ಯಗಳು ಇರುವಂತಹ ಅಭ್ಯರ್ಥಿಗಳ ಕೊರತೆ (ಜಾನ್, ೨೦೧೩; ಜೆನ್ನಿಫರ್, ೨೦೧೨). ಈ ರೀತಿಯಾಗಿ ಆರ್ಥಿಕ ವ್ಯವಸ್ಥೆಯ ವಿವಿಧ ಭಾಗಗಳಲ್ಲಿ ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಅಸಮಾನ ಹೊಂದಿಕೆಯು ಶಿಕ್ಷಿತರ ನಿರುದ್ಯೋಗಕ್ಕೆ ಕಾರಣವಾಗುತ್ತಿದೆ. ಈ ಮೊದಲು, ಬಹುಪಾಲು ಓಇಸಿಡಿ ರಾಷ್ಟ್ರಗಳಲ್ಲಿ ಶಿಕ್ಷಣ ಮತ್ತು ನಿರುದ್ಯೋಗಗಳೆರಡೂ ತಲೆಕೆಳಗಾದ ಸಂಬಂಧವನ್ನು ಹೊಂದಿದ್ದವು ಹಾಗೂಬಹುತೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಶಿಕ್ಷಿತರ ಪೈಕಿ ಕಡಿಮೆ ದರ್ಜೆಯ ಉದ್ಯೋಗ ಹಾಗೂ ಹೆಚ್ಚಿನ ಮಟ್ಟದ ನಿರುದ್ಯೋಗ ಸಮಸ್ಯೆ ಇರುತ್ತಿದ್ದವು (ಓಹಿಗ್ಗಿನ್ಸ್, ೨೦೦೧).

ಹೀಗಿರುವಾಗ ೨೦೦೮ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕಾರಣವಾಗಿಯೋ ಏನೋ ಶಿಕ್ಷಿತರಲ್ಲಿನ ನಿರುದ್ಯೋಗ ಹಾಗೂ ಕಡಿಮೆ ದರ್ಜೆಯ ಉದ್ಯೋಗಗಳು ಕಣ್ಣಿಗೆ ಕಾಣುವಷ್ಟು ಹೆಚ್ಚುತ್ತಾ ಹೋದವು ಮತ್ತು ಈ ಸಮಸ್ಯೆಯು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೆಲ್ಲವನ್ನೂ ಕಾಡಿದರೂ ಸಹ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳನ್ನು ಹೆಚ್ಚು ಕಾಡಿದವು. ಈ ಸಮಸ್ಯೆಗೆ ಕಾರ್ಮಿಕ ಮಾರುಕಟ್ಟೆಯ ಬಗ್ಗೆ ತಪ್ಪು ಅಭಿಪ್ರಾಯ ಹೊಂದಿ ಹೆಚ್ಚಿನ ಶಿಕ್ಷಣ ಹೊಂದುವುದು ಒಂದು ಕಾರಣವಾಗಿದ್ದರೆ, ಶಿಕ್ಷಿತ ಉದ್ಯೋಗಿಗಳಿಗಾಗಿ ಇರುವ ಬೇಡಿಕೆ ಹಾಗೂ ಪೂರೈಕೆಗಳ ನಡುವೆ ಇರುವ ಅಸಮ ಹೊಂದಾಣಿಕೆಯಲ್ಲಿ ಸಾಮಾಜಿಕ-ಆರ್ಥಿಕ ಅಂಶಗಳೂ ಸಹ ಗಣನೀಯ ಪಾತ್ರವನ್ನು ವಹಿಸುತ್ತಿದೆ. ಇತರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ರೀತಿಯಲ್ಲೇ, ದೊಡ್ಡ ಪ್ರಮಾಣದ ಕಡಿಮೆ ಮಟ್ಟದ ಅನೌಪಚಾರಿಕ ಉದ್ಯೋಗಗಳಿದ್ದರೂ ಸಹ, ಭಾರತದ ಅರ್ಥವ್ಯವಸ್ಥೆಯು ಬಹುವಾರ್ಷಿಕ ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಲೇ ಇದೆ. ಉದಾಹರಣೆಗೆ ಹೇಳುವುದಾದರೆ, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ (ಎನ್‌ಎಸ್‌ಎಸ್‌ಓ) ೨೦೦೯-೧೦ ಹಾಗೂ ೨೦೧೧-೧೨ ಸಮೀಕ್ಷೆಗಳ ಪ್ರಕಾರ ಭಾರತದ ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ಮಾಧ್ಯಮಿಕ ಶಿಕ್ಷಣ ಹಾಗೂ ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದವರು ಹಾಗೂ ಮಾಧ್ಯಮಿಕ ಶಿಕ್ಷಣಕ್ಕಿಂತ ಕಡಿಮೆ ಶಿಕ್ಷಣ ಪಡೆದವರ ನಡುವೆ ಹೋಲಿಸಿದರೆ, ಹೆಚ್ಚಿನ ಶಿಕ್ಷಣ ಪಡೆದವರ ನಿರುದ್ಯೋಗ ಹೆಚ್ಚಾಗಿರುವುದು ಕಂಡು ಬರುವುದಲ್ಲದೆ, ಈ ನಿರುದ್ಯೋಗ ಪ್ರಮಾಣವು ಶಿಕ್ಷಣ ಹೆಚ್ಚಾದಂತೆಲ್ಲಾ ಇನ್ನೂ ಜಾಸ್ತಿಯಾಗುತ್ತಾ ಹೋಗುತ್ತಿದೆ. ಪ್ರಸಕ್ತ ಸಂಶೋಧನಾ ಸಾಹಿತ್ಯದಲ್ಲಿಲ್ಲದ ಈ ಎಲ್ಲ ಮೇಲಿನ ಕಾರಣಗಳೂ ಶಿಕ್ಷಿತರ ನಿರುದ್ಯೋಗಕ್ಕೆ ಕಾರಣವಾದ ಮುಖ್ಯ ಅಂಶಗಳಾಗಿವೆ. ಆದ್ದರಿಂದ ಈ ಅಧ್ಯಯನದ ಉದ್ದೇಶವು ಶಿಕ್ಷಿತರ ನಿರುದ್ಯೋಗದ ಸ್ವರೂಪ ಮತ್ತು ವಿನ್ಯಾಸಗಳನ್ನು ಅಳೆಯುವುದಾಗಿದೆ. ಭಾರತದ ವಿವಿಧ ಪ್ರದೇಶಗಳ ಉದ್ದಗಲಕ್ಕೂ, ಒಂದು ನಿಗದಿತ ಅವಧಿಯಲ್ಲಿನ ಲಿಂಗ ಪ್ರಭೇಧಗಳಲ್ಲಿ ಹಾಗೂ ಸಾಮಾಜಿಕ ಗುಂಪುಗಳಲ್ಲಿನ ಶಿಕ್ಷಿತರ ನಿರುದ್ಯೋಗವನ್ನು ಎನ್‌ಎಸ್‌ಎಸ್‌ಓ ಸಂಸ್ಥೆಯ ೧೯೮೩ ರಿಂದ ೨೦೧೧-೧೨ರವರೆಗಿನ ಅಗಾಧ ಪ್ರಮಾಣದ ಹಾಗೂ ರಾಷ್ಟ್ರೀಯ ಮಟ್ಟದ ಪ್ರಾತಿನಿಧಿಕ ಮಾದರಿ ವೈಯುಕ್ತಿಕ (ಘಟಕ ಪ್ರಮಾಣದ) ಮಾಹಿತಿಯ ಮೂಲಕ ಅಳೆಯುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ. ಜೊತೆಗೆ ಶಿಕ್ಷಿತರ ನಿರುದ್ಯೋಗದ ಹಿಂದೆ ಅಡಗಿರುವ ಸಾಮಾಜಿಕ-ಆರ್ಥಿಕ ಕಾರಣಗಳು ಹಾಗೂ ಇದರೊಂದಿಗೆ ತಳುಕು ಹಾಕಿಕೊಂಡಿರುವ ವೆಚ್ಚಗಳನ್ನು ಗುರುತಿಸಿರುವ ಕಾರ್ಯವನ್ನೂ ಸಹ ಈ ಅಧ್ಯಯನವು ಮಾಡುತ್ತದೆ.

ಈ ಅಧ್ಯಯನದ ಫಲಿತಾಂಶವು ಶಿಕ್ಷಣ ಮತ್ತು ನಿರುದ್ಯೋಗಗಳಲ್ಲಿನ ದ್ವಂದ್ವತೆಯು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ ಇವೆರಡರಲ್ಲಿ ಇರುವುದನ್ನು ಸೂಚಿಸುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಶಿಕ್ಷಣದ ಮಟ್ಟ ಹೆಚ್ಚಿದಷ್ಟೂ ನಿರುದ್ಯೋಗವು ಕಡಿಮೆಯಾಗುತ್ತದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶಿಕ್ಷಣದ ಮಟ್ಟ ಹೆಚ್ಚಿದಷ್ಟೂ ನಿರುದ್ಯೋಗ ಜಾಸ್ತಿಯಾಗುತ್ತದೆ. ಇದಕ್ಕೆ ಕಾರಣಗಳು ಬೇಡಿಕೆ ಅಥವಾ ಕೌಶಲ್ಯಗಳ ಅಸಮ ಹೊಂದಾಣಿಕೆ ಇರಬಹುದಾಗಿದೆ ಅಥವಾ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ಕಾರ್ಮಿಕ ಮಾರುಕಟ್ಟೆಯ ಕಡಿಮೆ ಸ್ವೀಕಾರ ಸಾಮರ್ಥ್ಯ ಸಹ ಆಗಿರಬಹುದಾಗಿದೆ. ಭಾರತದ ಸಂದರ್ಭದಲ್ಲೂ ಸಹ ಇದೇ ರೀತಿಯ ಸಂದರ್ಭ ಇದೆ. ಅಂದರೆ ಉನ್ನತ ಶಿಕ್ಷಣಕ್ಕೂ ಮತ್ತು ಉದ್ಯೋಗ ಪ್ರಮಾಣಕ್ಕೂ ನಕಾರಾತ್ಮಕ ಸಂಬಂಧ ಇದೆ.

ತಾಂತ್ರಿಕ ಶಿಕ್ಷಣ ಹೊಂದುವುದರಿಂದಲೇ ಉದ್ಯೋಗ ಖಾತ್ರಿ ಆಗುವುದಿಲ್ಲ ಎಂಬುದು ಈ ಅಧ್ಯಯನದಿಂದ ತಿಳಿದು ಬಂದಿದೆ. ಭಾರತ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ತಾಂತ್ರಿಕ ಶಿಕ್ಷಣವನ್ನು ಇಂದಿನ ದಿನಗಳಲ್ಲಿ ಉತ್ತೇಜಿಸುತ್ತಿರುವುದರ ಹಿಂದಿನ ಮೂಲಕಾರಣವನ್ನೇ ಇದು ಪ್ರಶ್ನಿಸುವಂತಾಗುತ್ತದೆ. ಹೆಚ್ಚು ಕೈಗಾರೀಕೃತ ರಾಜ್ಯಗಳು ಕಡಿಮೆ ಶಿಕ್ಷಣವನ್ನು ಹೊಂದಿರುವವರ ನಿರುದ್ಯೋಗವನ್ನು ಹೆಚ್ಚಿಸುತ್ತಿವೆಯಾದರೂ, ಇದೇ ರಾಜ್ಯಗಳು ಹೆಚ್ಚು ಶಿಕ್ಷಣ ಪಡೆದ ಎಲ್ಲರನ್ನೂ ಉತ್ಪಾದನಾ ಕಾರ್ಯದಲ್ಲಿ ನಿರತರಾಗಿಸಲು ವಿಫಲವೂ ಆಗುತ್ತಿವೆ. ಜೊತೆಗೆ ಶಿಕ್ಷಿತರು ಹಾಗೂ ಅಶಿಕ್ಷಿತರು ಈ ಎರಡೂ ವರ್ಗಗಳಲ್ಲೂ ನಿರುದ್ಯೋಗವು ಹೆಚ್ಚಿರುವುದರಿಂದ ಮತ್ತು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿಕೊಳ್ಳದೆ ಇರುವವರನ್ನು



ಅರಸುವಿಕೆ ಮತ್ತು ಉದ್ಯೋಗಕ್ಕೆ ಹೊಂದಿಸುವಿಕೆಯು ಕಷ್ಟವಾಗುವುದೂ ಸಹ ಭಾರತದಲ್ಲಿ ಶಿಕ್ಷಿತರಲ್ಲಿ ನಿರುದ್ಯೋಗ ಇರುವುದಕ್ಕೆ ಒಂದು ಮುಖ್ಯ ಕಾರಣವಾಗಿದೆ.

ಜೊತೆಗೆ ಶಿಕ್ಷಿತರ ನಿರುದ್ಯೋಗವು ವಿವಿಧ ಸಾಮಾಜಿಕ ಗುಂಪುಗಳು, ಲಿಂಗ ಪ್ರಭೇಧಗಳು, ಧರ್ಮಗಳು, ಪ್ರದೇಶಗಳು ಹಾಗೂ ಇತರ ಸಾಮಾಜಿಕ–ಆರ್ಥಿಕ ಗುಣವಿಶೇಷಗಳಲ್ಲಿ ವ್ಯತ್ಯಾಸ ಹೊಂದುವುದೂ ಕಂಡು ಬಂದಿದೆ.

ಭಾರತದಲ್ಲಿ ಶಿಕ್ಷಿತರಲ್ಲಿನ ನಿರುದ್ಯೋಗವು ವ್ಯಕ್ತಿಗತ ಮಟ್ಟದ ಜೊತೆಗೆ ಹಾಗೂ ವ್ಯಾಪಕ ಆರ್ಥಿಕ ಖರ್ಚು ವೆಚ್ಚಗಳೊಂದಿಗೂ ಸಂಬಂಧ ಹೊಂದಿದೆ. ವ್ಯಕ್ತಿಗತ ಮಟ್ಟದಲ್ಲಿನ ನೇರ ಖರ್ಚು ಹಣದ ರೂಪದಲ್ಲಿನ ಬಂಡವಾಳ ವೆಚ್ಚವಾಗಿದೆ. ಇದು ಅಪರೋಕ್ಷ ವೆಚ್ಚವನ್ನೂ ಹೊಂದಿದೆ. ಹೇಗೆಂದರೆ ಅವನು ಅಥವಾ ಅವಳು ಶಿಕ್ಷಣಕ್ಕಾಗಿ ಸಮಯದ ಬಂಡವಾಳ ಹಾಕುವ ಬದಲು ಬೇರೆ ಯಾವುದಕ್ಕಾದರೂ ಸಮಯವನ್ನು ಉಪಯೋಗಿಸಬಹುದಾಗಿತ್ತಾದ್ದರಿಂದ, ಈ ಅಪರೋಕ್ಷ ವೆಚ್ಚವು ಅವಕಾಶ ವೆಚ್ಚದ ರೂಪದಲ್ಲಿದೆಯೆನ್ನಬಹುದು. ಕಾರ್ಯ ನೀತಿ ನಿರೂಪಕರ ದೃಷ್ಟಿಯಿಂದ ನೋಡುವುದಾದರೆ ಈ ಶಿಕ್ಷಿತ ನಿರುದ್ಯೋಗಿಗಳ ಮೇಲೆ ಹೂಡಿದ ಸಾರ್ವಜನಿಕ ಬಂಡವಾಳವನ್ನು ಇನ್ನಾವುದಾದರೂ ಉದ್ಯೋಗ ಕಲ್ಪಿಸುವ ಉತ್ಪಾದಕ ಕಾರ್ಯಕ್ರಮಗಳಿಗೆ ಉಪಯೋಗಿಸಿದ್ದರೆ, ಈ ಸಾರ್ವಜನಿಕ ಬಂಡವಾಳದ ಸದುಪಯೋಗವಾಗುತ್ತಿತ್ತು. ಈ ಅಧ್ಯಯನವು ಮೇಲೆ ಹೇಳಿದ ಖರ್ಚುಗಳ ಲೆಕ್ಕಾಚಾರ ಹಾಕುವ ಪ್ರಯತ್ನವನ್ನೂ ಮಾಡಿದೆ.

## ಭಾರತದಲ್ಲಿ ಮೂಲ ಸೌಕರ್ಯದ ಆಡಳಿತದಲ್ಲಿನ ಸುಧಾರಣೆಗಳು: ತೆಗೆದುಕೊಂಡ ಕ್ರಮಗಳು ಹಾಗೂ ಫಲಿತಾಂಶಗಳು

***ಪ್ರೊ. ಎಸ್.ಎನ್. ಸಂಗೀತಾ***

ಅಭಿವೃದ್ಧಿಯ ಕಾರ್ಯಸಾಧನಾ ತಂತ್ರದ ಮಹತ್ವವು ೧೯೮೦ರಿಂದೀಚೆಗೆ ಶಾಸನಕರ್ತರು, ಆಡಳಿತಗಾರರು, ಖಾಸಗಿ ನಿಗಮಗಳು, ಸ್ವಯಂ ಸೇವಾ ಸಂಸ್ಥೆಗಳು, ಸಂಶೋಧಕರು ಹಾಗೂ ಅಭಿವೃದ್ಧಿ ತಜ್ಞರ ಗಮನವನ್ನು ಆಕರ್ಷಿಸುತ್ತಿದೆ. ಅನೇಕ ರಾಷ್ಟ್ರಗಳು ಆಡಳಿತದಲ್ಲಿ ಅಭಿವೃದ್ಧಿ ಮಾದರಿಯನ್ನು ಅಳವಡಿಸಿಕೊಂಡಿವೆ. ಈ ಅಳವಡಿಕೆಗಾಗಿ ರೂಢಿಯಲ್ಲಿದ್ದ "ನಿಯಂತ್ರಿತ ಆರ್ಥಿಕತೆ"ಯ ಬದಲಾಗಿ "ಮಾರುಕಟ್ಟೆ ಆರ್ಥಿಕತೆ"ಗೆ ತಮ್ಮ ಅಭಿವೃದ್ಧಿ ಮಾದರಿಗಳನ್ನು ಬದಲಾಯಿಸಿಕೊಂಡಿವೆ. ಸರ್ಕಾರಗಳ ವಿಫಲತೆ, ಜಾಗತೀಕರಣ ಹಾಗೂ ತಾಂತ್ರಿಕ ಕ್ರಾಂತಿಗಳ ಬಗ್ಗೆ ಹೆಚ್ಚು ಹೆಚ್ಚು ವಾಸ್ತವತೆಯ ಅರಿವು ಆದಂತೆ, ಈ ಬದಲಾವಣೆಗಳೂ ಅಳವಡಿಕೆಗೆ ಬಂದಿವೆ. ಈ "ಸರ್ಕಾರದ ವಿಫಲತೆಯು" ವಿದ್ವಾಂಸರು, ಅನುಷ್ಠಾನಕಾರರು ಹಾಗೂ ಅಭಿವೃದ್ಧಿ ತಜ್ಞರು/ಸಂಸ್ಥೆಗಳನ್ನು ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸುವ ವ್ಯಾಪಕ ಕಾರ್ಯನೀತಿಯಲ್ಲಿ ಹಾಗೂ ಸರ್ಕಾರಗಳ ರಚನೆ ಹಾಗೂ ಕಾರ್ಯ ವೈಖರಿಗಳಲ್ಲಿ ಬದಲಾವಣೆಗಳನ್ನು ಶಿಫಾರಸ್ಸು ಮಾಡುವುದಕ್ಕೆ ಒತ್ತಾಯಿಸಿವೆ.

ಸರ್ಕಾರದ ಅನುಷ್ಠಾನ ಕಾರ್ಯವೈಖರಿಯ ಬಗೆಗಿನ ದೃಷ್ಟಿಕೋನವು ಬದಲಾಗುತ್ತಿದ್ದಂತೆ, ಸರ್ಕಾರದ ಪಾತ್ರವನ್ನು ಮರುವ್ಯಾಖ್ಯಾನಿಸುವ ಸಲುವಾಗಿ ಅನೇಕ ಸುಧಾರಣೆಗಳ ಉಪಕ್ರಮಿಕೆಯಾಗುತ್ತಿದೆ. ಅವೆಂದರೆ ಸರ್ಕಾರದ ಕಾರ್ಯಗಳು ಸುಸೂತ್ರವಾಗಿ ನಡೆಯುವಿಕೆ, ಗಾತ್ರವನ್ನು ತಗ್ಗಿಸುವಿಕೆ, ಕಾರ್ಯನೀತಿಗಳು ಹಾಗೂ ನಿಯಮಗಳನ್ನು ಪಾರದರ್ಶಕ ಮತ್ತು ಊಹಿಸುವಂತೆ ಮಾಡುವಿಕೆ, ಭಾಗವಹಿಸುವಿಕೆ, ಸ್ಪಂದಿಸುವಿಕೆ, ಹೊಣೆಗಾರಿಕೆ, ಸ್ವತಂತ್ರ ನಿಯಂತ್ರಕಗಳಿರುವಿಕೆ; ಮಾರುಕಟ್ಟೆಯಲ್ಲಿನ ಬಂಡವಾಳ ಹಿಂಪಡೆಯುವಿಕೆ, ಖಾಸಗೀಕರಣ, ಒಪ್ಪಂದ/ಹೊರ ಗುತ್ತಿಗೆ, ಸರ್ಕಾರ–ಖಾಸಗಿ ಪಾಲುಗಾರಿಕೆ, ಬಳಕೆದಾರ ಶುಲ್ಕ; ಹಾಗೂ ನಾಗರಿಕ ಸಮಾಜದ ಭಾಗವಹಿಸುವಿಕೆ, ಧ್ವನಿ, ಪ್ರಾತಿನಿಧಿತ್ವ, ಸ್ಪಂದನೆ, ಸಬಲೀಕರಣ, ಸಾಮಾಜಿಕ ಬಂಡವಾಳ ಇತ್ಯಾದಿಗಳೆಲ್ಲವನ್ನೂ ಹೆಚ್ಚು ಉತ್ಪನ್ನಗಳನ್ನು ಉತ್ಪಾದಿಸಲು ಹಾಗೂ ಸೇವೆಗಳನ್ನು ಒದಗಿಸುವ ಸಲುವಾಗಿ ಸುಧಾರಿಸುವುದಾಗಿದೆ. ಈಗ ಸರ್ಕಾರವು ಮಾರುಕಟ್ಟೆ ಹಾಗೂ ನಾಗರಿಕ ಸಮಾಜ ಇವೆರೆಡರ ಒಟ್ಟಿಗೆ ಕಾರ್ಯನೀತಿ ರೂಪಿಸುವಿಕೆ/ಅನುಷ್ಠಾನಗೊಳಿಸುವಿಕೆ/ನಿರೀಕ್ಷಿತ ಮಟ್ಟದಲ್ಲಿ ಸರಕುಗಳನ್ನು ಉತ್ಪಾದಿಸಲು ಮತ್ತು ಸೇವೆಗಳನ್ನು ಒದಗಿಸಲು ಶಾಸನಗಳನ್ನು ರೂಪಿಸುವುದು/ಜನರನ್ನು ಅದರಲ್ಲೂ ವಿಶೇಷವಾಗಿ ಸೌಲಭ್ಯವಂಚಿತರನ್ನು ತೃಪ್ತಿಗೊಳಿಸುವುದು ಇತ್ಯಾದಿಗಳ ಹೊಣೆಗಾರಿಕೆಯನ್ನು ವಹಿಸಬೇಕಾಗಿದೆ.

ಮೂಲಭೂತ ಸೌಲಭ್ಯಗಳು ಹಾಗೂ ಅವುಗಳ ಲಭ್ಯತೆ ಅಂದರೆ ವಿದ್ಯುಚ್ಛಕ್ತಿ, ದೂರಸಂಪರ್ಕ, ಸಂಚಾರ/ಸಾಗಣೆ/ರಸ್ತೆಗಳು/ರೈಲು ಸೌಕರ್ಯ, ವಿಮಾನ ಸೌಕರ್ಯ, ಹಡಗು ಸೌಕರ್ಯ, ಬಂದರುಗಳು (ವಾಯು, ಸಮುದ್ರ), ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಇತ್ಯಾದಿಗಳು ಬೆಳವಣಿಗೆ ಮತ್ತು ವ್ಯವಹಾರ ಅಭಿವೃದ್ಧಿಗಳನ್ನು ಹೆಚ್ಚಿಸಲು ನಿರ್ಣಾಯಕವಾಗಿರುತ್ತವೆ. ಉದಾಹರಣೆಗೆ ಹೇಳುವುದಾದರೆ ಕಡಿಮೆ ಆದಾಯವನ್ನು ಹೊಂದಿರುವ ರಾಷ್ಟ್ರಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜಿನ ನಿರಂತರತೆ ಇಲ್ಲದಿರುವಾಗ ಬಹುಪಾಲು ವ್ಯವಹಾರ ಸಂಸ್ಥೆಗಳು ಬೆಳವಣಿಗೆ ಮತ್ತು ವ್ಯವಹಾರ ಅಭಿವೃದ್ಧಿಯಲ್ಲಿ ಬಹಳ ತೊಂದರೆ ಅನುಭವಿಸುತ್ತವೆ.

ಈ ಹಿನ್ನೆಲೆಯಲ್ಲಿ ಸದರಿ ಅಧ್ಯಯನವು ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸುವಲ್ಲಿ (ಬಂಡವಾಳ, ತಂತ್ರಜ್ಞಾನ ಮತ್ತು ದಕ್ಷತೆ) ಆಡಳಿತ ಸುಧಾರಣೆಯ ಪರಿಣಾಮವನ್ನು ಅಧ್ಯಯನ ಮಾಡುವುದಲ್ಲದೆ ನಾಗರಿಕರಿಗೆ ಅದರಲ್ಲೂ ಮುಖ್ಯವಾಗಿ ಸೌಲಭ್ಯ ವಂಚಿತರಿಗೆ ತೃಪ್ತಿದಾಯಕ ಸೇವೆಯನ್ನು

ಒದಗಿಸುವುದಕ್ಕೆ ಅವಕಾಶ ಕಲ್ಪಿಸುತ್ತದೆಯೇ ಎಂಬುದನ್ನೂ ಅಧ್ಯಯನ ಮಾಡುತ್ತದೆ. ಅಧ್ಯಯನದ ಉದ್ದೇಶಗಳು ಈ ರೀತಿ ಇವೆ:

- ಬಂಡವಾಳ ಹೂಡುವಿಕೆ ಮತ್ತು ಉಂಟಾಗುವ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಆಗುವ ಕಾರ್ಯನೀತಿಯಲ್ಲಿನ ಬದಲಾವಣೆ, ನಿಯಮಗಳಲ್ಲಿನ ಬದಲಾವಣೆ, ನಿಬಂಧನೆಗಳಲ್ಲಿನ ಬದಲಾವಣೆ ಹಾಗೂ ಮೂಲಭೌತ ಸೌಕರ್ಯಗಳಲ್ಲಿನ ವೃದ್ಧಿ – ಇವುಗಳಿಗಿರುವ ಸಂಬಂಧಗಳನ್ನು ಪರೀಕ್ಷಿಸುವುದು.
- ಉತ್ಪಾದಕರು ಮತ್ತು ಬಳಕೆದಾರರ ಹಿತಾಸಕ್ತಿಗಳ ರಕ್ಷಣೆಗಾಗಿನ ಸ್ವತಂತ್ರ ನಿಯಂತ್ರಕಗಳ ಸ್ವಾಯತ್ತತೆ ಮತ್ತು ಹೊಣೆಗಾರಿಕೆಗಳನ್ನು ಪರೀಕ್ಷಿಸುವುದು.
- ಆಡಳಿತ ಸುಧಾರಣೆಗಳು ಮತ್ತು ದಕ್ಷತೆಯಿಂದಾಗುವ ಲಾಭಗಳನ್ನು ಉಪಯುಕ್ತತೆಯ ಮಟ್ಟದಲ್ಲಿ ಅವುಗಳಿಗಿರುವ ಸಂಬಂಧದ ಮೂಲಕ ಪರೀಕ್ಷಿಸುವುದು.
- ಶಾಸನ ರಚನೆ ಮತ್ತು ಉಸ್ತುವಾರಿಯಲ್ಲಿ ಪಾಲುದಾರರ ಭಾಗವಹಿಸುವಿಕೆಯ ಮಟ್ಟವನ್ನು ಪರೀಕ್ಷಿಸುವುದು.
- ಮೂಲಭೂತ ಸೌಕರ್ಯಗಳಿಗಾಗಿ ಬಂಡವಾಳ ಹೂಡಿಕೆಯ ಹೆಚ್ಚಿಸುವಿಕೆ ಹಾಗೂ ದಕ್ಷ ನಿರ್ವಹಣೆಯ ಸಾರ್ವಜನಿಕ ಕಾರ್ಯನೀತಿಯ ರಚನೆಯಲ್ಲಿ ಉತ್ತಮ ಫಲಿತಾಂಶಗಳಿಗಾಗಿ ರಾಜಕೀಯದ ಪಾತ್ರವನ್ನು ಪರೀಕ್ಷಿಸುವುದು.
- ಸೈದ್ಧಾಂತಿಕ ಹಾಗೂ ಕಾರ್ಯನೀತಿ ದೃಷ್ಟಿಕೋನಗಳನ್ನು ರೂಪಿಸುವುದು.

ಈ ಅಧ್ಯಯನವು ಆಡಳಿತ ದೃಷ್ಟಿಕೋನದಿಂದ ಮೂಲಭೂತ ಸೌಕರ್ಯಗಳ ಬಗೆಗಿನ ಅಂಶಗಳ ಮೇಲೆ ದೃಷ್ಟಿಯನ್ನು ಹರಿಸಿದೆ. ಈ ಅಧ್ಯಯನಕ್ಕೆ ಸರ್ಕಾರಿ ದಾಖಲೆಗಳು (ಅಧಿನಿಯಮಗಳು, ವಾರ್ಷಿಕ ವರದಿಗಳು, ತಜ್ಞರ ಸಮಿತಿಯ ವರದಿಗಳು ಇತ್ಯಾದಿ), ದಿನಪತ್ರಿಕೆಗಳ ವರದಿಗಳು ಹಾಗೂ ವೆಬ್‌ಸೈಟ್‌ಗಳ ಮೂಲಕ ದತ್ತಾಂಶವನ್ನು ಒದಗಿಸಿಕೊಳ್ಳಲಾಗಿದೆ. ಈ ಅಂಶಗಳ ಬಗ್ಗೆ ಪರೀಕ್ಷಿಸಲು ಒಂದು ವಿಶ್ಲೇಷಣಾತ್ಮಕ ಚೌಕಟ್ಟನ್ನು ಅಭಿವೃದ್ಧಿ ಪಡಿಸಲಾಯಿತು. ಈ ಅಧ್ಯಯನವು ಇತರ ಅನೇಕ ಅಧ್ಯಯನಗಳಲ್ಲಿನ ಫಲಿತಾಂಶಗಳನ್ನು ಹಾಗೂ ತಜ್ಞರ ಗುಂಪಿನ ಶಿಫಾರಸ್ಸುಗಳನ್ನು ತನ್ನ ಪ್ರತಿಪಾದನೆಯನ್ನು ಸಮರ್ಥಿಸಿಕೊಳ್ಳಲು ಉದಹರಿಸಿದೆ ಹಾಗೂ ಕೆಲವನ್ನು ವಿಶೇಷವಾಗಿ ನಿರೂಪಿಸಿದೆ.

ಈ ಅಧ್ಯಯನದ ಮುಖ್ಯ ಫಲಿತಾಂಶಗಳು ಈ ರೀತಿ ಇವೆ: ಮೂಲ ಭೂತ ಸೌಕರ್ಯದ ಪಾಲು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇಕಡವಾರು ಹತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೇ.೫.೪ ರಷ್ಟು, ಹನ್ನೊಂದನೆಯ ಯೋಜನೆಯಲ್ಲಿ ಶೇ.೭.೨೧ರಷ್ಟು ಮತ್ತು ಹನ್ನೆರಡನೆಯ ಯೋಜನೆಯಲ್ಲಿ ಶೇ.೭.೫ರಿಂದ ೮.೫ರಷ್ಟು. ಏರಿಕೆ ಕಂಡಿದೆ. ಹತ್ತನೆಯ ಯೋಜನೆಗೆ ಹೋಲಿಸಿದರೆ ಹನ್ನೊಂದನೆಯ ಏರಿಕೆಯು ಯೋಜನೆಯಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಹೂಡಿದ ಬಂಡವಾಳವು ಶೇ.೨.೧೭ರಷ್ಟು ಹೆಚ್ಚಳವನ್ನು ಕಂಡಿತ್ತು. ಇದರಲ್ಲಿ ಶೇ.೭೦ರಷ್ಟು ಏರಿಕೆಯು ಖಾಸಗಿ ಭಾಗವಹಿಸುವಿಕೆಯು ಹೆಚ್ಚಾದದ್ದರಿಂದ ಆಗಿದ್ದು, ಈ ಭಾಗವಹಿಸುವಿಕೆಯು ಪಂಚವಾರ್ಷಿಕ ಯೋಜನೆಗಳ ಅವಧಿಗಳಲ್ಲಿ ಹೆಚ್ಚಾಗುತ್ತಾ ಹೋಗುತ್ತಿದೆ. ಮೂಲಭೂತ ಸೌಕರ್ಯಗಳಿಗಾಗಿ ಖಾಸಗಿ ಬಂಡವಾಳ ಹೂಡಿಕೆಯು ಒಟ್ಟಾರೆ ಯೋಜನಾ ಆಯವ್ಯಯದಲ್ಲಿ ಹೆಚ್ಚುತ್ತಾ ಹೋಗುತ್ತಿದ್ದು, ಹತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೇ.೨೨.೦೪ರಷ್ಟು, ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೇ.೩೬.೬೧ರಷ್ಟಿದ್ದದ್ದು, ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೇ.೪೮ರಷ್ಟಕ್ಕೆ ಏರಿಕೆಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಮೂಲಭೂತ ಸೌಕರ್ಯಗಳಲ್ಲಿನ ಮಾರುಕಟ್ಟೆ ಸುಧಾರಣೆಯಲ್ಲಿ ಆಂಧ್ರ ಪ್ರದೇಶ, ಗುಜರಾತ್ ಮತ್ತು ಕರ್ನಾಟಕ ರಾಜ್ಯಗಳು ಮುಂಚೂಣಿಯಲ್ಲಿವೆ. ಈ ರಾಜ್ಯಗಳು ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮಾದರಿಯ ಯೋಜನೆಗಳಿಗೆ ಖಾಸಗಿಯವರನ್ನು ಆಕರ್ಷಿಸಲು ಅನೇಕ ನಿಯಂತ್ರಣಗಳು, ಅಧಿನಿಯಮಗಳು ಹಾಗೂ ಆರ್ಥಿಕ ಪ್ರೋತ್ಸಾಹಗಳನ್ನು ಜಾರಿಗೆ ತಂದಿವೆ.

ಭಾರತೀಯ ದೂರಸಂಪರ್ಕ ವಲಯದ ಯಶೋಗಾಥೆಯು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸಾಬೀತಾಗಿದೆ. ಈ ವಲಯವು ಕಳೆದ ಎರಡು ವರ್ಷಗಳಲ್ಲಿ ಪ್ರಶಂಸಾರ್ಹ ಬೆಳವಣಿಗೆಯನ್ನು ಕಂಡಿದೆ. ಈ ವಲಯವು ಒಟ್ಟಾರೆ ೯೧೪.೬೦ ದಶಲಕ್ಷ ಚಂದಾದಾರರನ್ನು ಹೊಂದಿದ್ದು, ಶೇ.೭೬.೦೩ರಷ್ಟು ದೂರ ಸಂಪರ್ಕ ಸಾಂದ್ರತೆಯನ್ನು ಹೊಂದಿದೆ ಹಾಗೂ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಸದೃಢವಾಗುತ್ತಿದೆ. ಮೊಬೈಲ್ ಸೇವೆಗಳಲ್ಲಿ ಕಂಡು ಬಂದಿರುವ ದಾಪುಗಾಲಿನ ಬೆಳವಣಿಗೆಯು ಬ್ರಾಡ್ ಬ್ಯಾಂಡ್ ಸೇವೆಗಳಲ್ಲಿ ಇನ್ನೂ ಕಂಡುಬರಬೇಕಿದ್ದು, ಸದ್ಯಕ್ಕೆ ಅದರ ಚಂದಾದಾರರ ಸಂಖ್ಯೆ ೧೨ ದಶಲಕ್ಷಕ್ಕೂ ಹೆಚ್ಚಿದೆ. ಸರ್ಕಾರವು ಬೇಡಿಕೆಗೆ ಅನುಸಾರವಾಗಿ ದೂರವಾಣಿ ಸಂಪರ್ಕ ಹಾಗೂ ಬ್ರಾಡ್ ಬ್ಯಾಂಡ್ ಸೌಲಭ್ಯಗಳನ್ನು ದೇಶಾದ್ಯಂತ ವಿಸ್ತರಿಸುವ ದೂರದೃಷ್ಟಿಯನ್ನು ಹೊಂದಿ ಹಾಗೂ ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಒದಗಿಸಲಿದ್ದು, ಇದನ್ನು ಸಾಧಿಸಲು ಪ್ರಯತ್ನಿಸುತ್ತಿದೆ.

ರೈಲ್ವೆ ಮೂಲಭೂತ ಸೌಕರ್ಯಗಳ ಬೆಳವಣಿಗೆಯು ಕಳೆದ ದಶಕದಲ್ಲಿ ವಿವಿಧ ಕಾರಣಗಳಿಂದಾಗಿ ಅಷ್ಟೇನೂ ಹೆಚ್ಚಾಗಲಿಲ್ಲ. ಅದಕ್ಕೆ ಕಾರಣಗಳು ಈ ರೀತಿ ಇವೆ: ಸಾಕಷ್ಟು ಅನುದಾನ ಲಭ್ಯವಿಲ್ಲದಿರುವುದು, ಬಂಡವಾಳ ಹೂಡಿಕೆಯನ್ನು ಆದ್ಯತೆಗೆ ತಕ್ಕಂತೆ ಮಾಡದಿರುವುದು, ಆಡಳಿತ ಸುಧಾರಣೆಯ



ಕೊರತೆ, ಖಾಸಗಿ ಬಂಡವಾಳವನ್ನು ಆಕರ್ಷಿಸಲು ಸಾಧ್ಯವಾಗದಿರುವುದು ಇತ್ಯಾದಿ. ರೈಲ್ವೆಯು ಖಾಸಗಿ ವಲಯದ ಅವಶ್ಯಕತೆಗಳಿಗೆ ತಕ್ಕಂತೆ ತನ್ನನ್ನು ಬದಲಾಯಿಸಿಕೊಂಡಿಲ್ಲ.

ರೈಲ್ವೆಯ ೨೦೨೦ರ ದೂರದೃಷ್ಟಿಯ ನೋಟದಲ್ಲಿನ ಮಹತ್ವಾಕಾಂಕ್ಷಿ ಗುರಿಗಳನ್ನು ಸಾಧಿಸಲು ಅಲ್ಪಾವಧಿ ಕ್ರಮಗಳಾದ ಭೂಮಿಗೆ ಸಂಬಂಧಿಸಿದ ವಿಷಯಗಳು, ಇತ್ಯರ್ಥಗೊಳಿಸಿಕೊಳ್ಳುವಿಕೆ, ಸಾರ್ವಜನಿಕ–ಖಾಸಗಿ ಸಹಭಾಗಿತ್ವವನ್ನು ಎಚ್ಚರಿಕೆಯಿಂದ ರೂಪಿಸುವುದು ಹಾಗೂ ಶೀಘ್ರ ನಿರ್ಧಾರಗಳನ್ನು ಕೈಗೊಳ್ಳುವುದು ಮತ್ತು ದೀರ್ಘಾವಧಿ ಕ್ರಮಗಳಾದ ನಿಯಂತ್ರಣಾ ಕ್ರಮಗಳು, ಸಾಂಸ್ಥಿಕ ಸುಧಾರಣೆಗಳು ಇತ್ಯಾದಿಗಳನ್ನು ಸಮ್ಮಿಶ್ರಗೊಳಿಸಬೇಕಾಗುತ್ತದೆ. ಭಾರತೀಯ ರೈಲ್ವೆಯು ತನ್ನಲ್ಲಿರುವ ಗಳಿಕೆಯ ಅಗಾಧ ಸಾಮರ್ಥ್ಯವನ್ನು ಅನಾವರಣಗೊಳಿಸಿಕೊಳ್ಳಲು ತನ್ನ ವೆಬ್‌ಸೈಟ್‌ಗಳ ಮೂಲಕ, ರೈಲುಗಾಡಿಗಳಲ್ಲಿ ಮತ್ತು ರೈಲ್ವೆನಿಲ್ದಾಣಗಳಲ್ಲಿ ಜಾಹೀರಾತುಗಳನ್ನು ನೀಡುವಂತಹ ಹೊಸ ಮಾರುಕಟ್ಟೆ ಪ್ರಚೋದಿತ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಲೇಬೇಕಾಗುತ್ತದೆ.

ರೈಲ್ವೆಯು ಪಕ್ಷಪಾತವನ್ನು ನಿಯಂತ್ರಿಸದ ಹೊರತು ಹಾಗೂ ಅದಕ್ಷತೆಯನ್ನು ಹೋಗಲಾಡಿಸದ ಹೊರತು ತನ್ನ ಹಣೆಬರಹವನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ರೈಲ್ವೆ ಸೇವೆಯನ್ನು ಎಲ್ಲಾ ಆಯಾಮಗಳಲ್ಲೂ ಅಭಿವೃದ್ಧಿಪಡಿಸಲು ಪ್ರಧಾನಮಂತ್ರಿಗಳ ಕಚೇರಿ, ರೈಲ್ವೆ ಮಂಡಳಿ, ರೈಲ್ವೆ ಸಚಿವರುಗಳು ಹಾಗೂ ಆಯಾ ರಾಜ್ಯಗಳ ಮುಖ್ಯಮಂತ್ರಿಗಳು ದೃಢ ಮನಸ್ಸಿನಿಂದ ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಲೇ ಬೇಕಾಗುತ್ತದೆ.

## ಕಾರ್ಯಕ್ರಮ ಅನುಷ್ಠಾನ ಯೋಜನೆ (ಪಿಐಪಿ) – ೧೨ ಜಿಲ್ಲೆಗಳಲ್ಲಿ (ಕರ್ನಾಟಕದಲ್ಲಿ ೨ ಮತ್ತು ಜಾರ್ಖಂಡ್‌ನಲ್ಲಿ ೧೦)

### (ಅ) ಕರ್ನಾಟಕದ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವರದಿ

*ಡಾ. ಸಿ.ಎಂ. ಲಕ್ಷ್ಮಣ, ಡಾ. ಪಿ. ಪ್ರಭುಸ್ವಾಮಿ, ಸಿ. ಯೋಗಾನಂದ*

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್‌ಆರ್‌ಎಚ್‌ಎಂ)ವನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಿದ ಮೇಲೆ, ಕರ್ನಾಟಕ ಸರ್ಕಾರವು ಮಹಿಳೆಯರು ಮತ್ತು ಮಕ್ಕಳಿಗೆ ಖಂಡಿತವಾಗಿಯೂ ನೆರವು ನೀಡುವ ಸಮಗ್ರ ಆರೋಗ್ಯ ರಕ್ಷಣೆ ಸೇವೆಯನ್ನು ನೀಡುವಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ. ಆದರೂ ಸಹ ಡಿಎಲ್‌ಎಚ್‌ಎಸ್ ೪ ಈಚೆಗೆ ನಡೆಸಿದ ಸಮೀಕ್ಷೆಯ ಪ್ರಕಾರ ರಾಜ್ಯದ ಇತರ ಎಲ್ಲಾ ಜಿಲ್ಲೆಗಳಿಗಿಂತ ಬೆಂಗಳೂರು ನಗರ ಜಿಲ್ಲೆಯಲ್ಲಿ ಮಕ್ಕಳಲ್ಲಿನ ಪೋಷಕಾಂಶ ಕೊರತೆ (ಅನೀಮಿಯಾ) ಹೆಚ್ಚಿದೆ. ಮಹಿಳೆಯರದೂ ಸಹ ಇದೇ ಪಾಡಾಗಿದೆ. ಹಾಗೆ ನೋಡಿದರೆ ಕರ್ನಾಟಕವು ಒಂದು ಪ್ರಗತಿಪರ ರಾಜ್ಯವಾಗಿದ್ದು, ಸಾಮಾಜಿಕ–ಆರ್ಥಿಕ ಹಾಗೂ ಜನಸಂಖ್ಯೆ – ಈ ವಿಷಯಗಳಲ್ಲಿ ಕೆಲ ಅಂಶಗಳ ಬಗ್ಗೆ ಅಂದರೆ ಮಹಿಳಾ ಸಾಕ್ಷರತೆ, ಶಿಕ್ಷಣ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ಉತ್ತಮ ಕಾರ್ಯದಕ್ಷತೆಯನ್ನು ತೋರಿಸಿದೆ. ಜನಸಂಖ್ಯಾ ಗುರಿಯಲ್ಲೂ ಸಹ ರಾಜ್ಯವು ಸಾಕಷ್ಟು ಉತ್ತಮ ಕಾರ್ಯದಕ್ಷತೆಯನ್ನು ತೋರಿಸಿದೆ. ಫಲವತ್ತತೆ ಪ್ರಮಾಣವು ಬದಲಿಸುವಿಕೆ ಮಟ್ಟಕ್ಕಿಂತ ಕೆಳಗಿದೆ. ಆದರೂ ಸಹ ರಾಜ್ಯದಲ್ಲಿ ಅನೀಮಿಯಾದಿಂದ ಬಳಲುತ್ತಿರುವ ಮತ್ತು ಕಡಿಮೆ ಪೌಷ್ಟಿಕಾಂಶಗಳಿಂದ ಬಳಲುತ್ತಿರುವ ಮಕ್ಕಳು ಮತ್ತು ಮಹಿಳೆಯರ ಪ್ರಮಾಣ ಅಗಾಧವಾಗಿಯೇ ಇದೆ. ಇದಕ್ಕಾಗಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಪಿಐಪಿ ಉಸ್ತುವಾರಿಯನ್ನು ಮಾಡಲಾಯಿತು. ಭೇಟಿ ನೀಡಿದ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಆರೋಗ್ಯ ಕಾರ್ಯಕರ್ತರೊಡನೆ ಮತ್ತು ಫಲಾನುಭವಿಗಳ ಜೊತೆಗೆ ಚರ್ಚೆಯನ್ನು ಮಾಡಲಾಯಿತು. ಕ್ಷೇತ್ರ ಕಾರ್ಯ ಹಾಗೂ ಚರ್ಚೆಗಳ ಬಗ್ಗೆ ಸಚಿವಾಲಯಕ್ಕೆ ಪ್ರತ್ಯೇಕವಾದ ವರದಿಗಳನ್ನು ಸಲ್ಲಿಸಲಾಯಿತು. ವಿಧಿಸಿರುವ ನಿಬಂಧನೆಗಳ ಪ್ರಕಾರ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳೆರಡರಲ್ಲೂ ಸಾಕಷ್ಟು ವೈದ್ಯಕೀಯ ಸೌಲಭ್ಯಗಳಿವೆ. ಸರ್ಕಾರಿ ಕಟ್ಟಡಗಳಲ್ಲೇ ಬಹುಪಾಲು ವೈದ್ಯಕೀಯ ಸೇವೆಗಳನ್ನು ಒದಗಿಸಲಾಗುತ್ತಿದೆ. ಆದರೆ ವೈದ್ಯರು, ಅದರಲ್ಲೂ ತಜ್ಞರು, ಇತರ ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ತಾಂತ್ರಿಕ ಸಿಬ್ಬಂದಿಯ ಕೊರತೆ ಇದೆ. ಎಸ್‌ಎನ್‌ಸಿಯುಗಳಲ್ಲಿನ ವೈದ್ಯಕೀಯ ಕೊರತೆಯು ಪ್ರಾಥಮಿಕ ಮಟ್ಟದ ಆರೋಗ್ಯ ಸೇವೆಗಳಲ್ಲಲ್ಲದೆ, ಮೇಲ್ಮಟ್ಟದ ಆರೋಗ್ಯ ಸೇವೆಗಳಲ್ಲೂ ಕಾಣಬಹುದಾಗಿದೆ. ರಾಮನಗರದ ಜಿಲ್ಲಾ ಆಸ್ಪತ್ರೆಯು ಐಸಿಯು, ಸಿಟಿ ಸ್ಕ್ಯಾನ್, ಎಂಆರ್‌ಐ, ಅಪಘಾತ/ಆತಂಕ ನಿವಾರಣಾ ಕೇಂದ್ರ, ದೂರ ಸಂಪರ್ಕದ ಮೂಲಕ ಔಷಧಿಗಳ ಸಲಹೆ, ಹೊರ ರೋಗಿಗಳ ಶುಶ್ರೂಷೆಗೆಬೇಕಾದ ಕೊಠಡಿಗಳು ಇತ್ಯಾದಿ ಸೌಕರ್ಯವನ್ನು ಹೊಂದಿಲ್ಲ. ಈ ಜಿಲ್ಲೆಯಲ್ಲಿ ಎಚ್‌ಎಂಐಎಸ್ ವ್ಯಾಪಕತೆಯು ತೃಪ್ತಿಕರವಾಗಿದೆ. ಆದರೆ ಎಂಸಿಟಿಎಸ್ ವ್ಯಾಪಕತೆಯು ಕಡಿಮೆ ಇದೆ ಎಂದು ಹೇಳಬಹುದಾಗಿದೆ. ನವಜಾತ ಶಿಶುಗಳನ್ನು ರಕ್ಷಿಸುವ ಸಲುವಾಗಿ ಭೌತಿಕ ಸಾಧನಗಳು/ಉಪಕರಣಗಳಲ್ಲದೆ ಇತರೆ ಮೂಲಭೂತ ಅವಶ್ಯಕತೆಗಳನ್ನೂ ಸಹ ಎಸ್‌ಎನ್‌ಸಿಯು ಸೇವೆಗೆ ಹೆಚ್ಚು ಒತ್ತುಕೊಟ್ಟು ರಾಮನಗರದ ಆರೋಗ್ಯ ಇಲಾಖೆಯು ಒದಗಿಸಬೇಕಾಗುತ್ತದೆ. ಎಆರ್‌ಎಸ್‌ಎಚ್ ಚಿಕಿತ್ಸಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ನವತಾರುಣ್ಯದ ಯುವಕ–ಯುವತಿಯರಿಗೆ ಸಲಹೆ ನೀಡಲು ಪ್ರತ್ಯೇಕ ವೈದ್ಯರಿಲ್ಲ; ವಿವಿಧ ಮಟ್ಟಗಳ ಆರೋಗ್ಯ ಸಂಸ್ಥೆಗಳನ್ನು ಜಿಲ್ಲೆಯಾದ್ಯಂತ ಸಂಪರ್ಕಿಸಲು ಭೇಟಿ ಮಾಡಿದಾಗ ಇದು ಸಾಮಾನ್ಯ ದೃಶ್ಯವಾಗಿತ್ತು. ಜಿಲ್ಲೆಯಲ್ಲಿ ಬಾಣಂತಿಯರ ಮತ್ತು ಶಿಶುಗಳ ಆರೈಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಆಶಾ ಕಾರ್ಯಕರ್ತೆಯರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಿತ್ತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಈ ಜಿಲ್ಲೆಯ ಹೆಚ್ಚಿನ ಆರ್‌ಸಿಎಚ್ ಸೂಚ್ಯಂಕಗಳು ರಾಜ್ಯದ ಸರಾಸರಿಗಿಂತ ಹೆಚ್ಚಾಗಿಯೇ ಇವೆ.  ಆದರೂ ಸಹ ಈ ಜಿಲ್ಲೆಯಲ್ಲಿ ಮಾನವ ಸಂಪನ್ಮೂಲ ಕೊರತೆಯು ತೀರ ಎದ್ದು ಕಾಣುತ್ತಿದೆ. ಈ ಜಿಲ್ಲೆಯಲ್ಲಿನ ೧೯೮ ಉಪಕೇಂದ್ರಗಳ ಪೈಕಿ ೬೬ ಉಪಕೇಂದ್ರಗಳು ಸರ್ಕಾರಿ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸರಿ ಸುಮಾರು ೩೦ ಉಪ ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿವೆ. ಲಾಜಿಸ್ಟಿಕ್ ಸಂಘವು ಆರೋಗ್ಯ ಕೇಂದ್ರಗಳ ಅಗತ್ಯಕ್ಕೆ ತಕ್ಕಂತೆ ಔಷಧಗಳನ್ನು ಅದರಲ್ಲೂ ವಿಶೇಷವಾಗಿ ಅವಶ್ಯಕ ಹಾಗೂ ತುರ್ತು ಔಷಧಿಗಳನ್ನು ಪೂರೈಸುತ್ತಿಲ್ಲ.

## (ಆ) ಜಾರ್ಖಂಡ್‌ನ ೧೦ ಜಿಲ್ಲೆಗಳಲ್ಲಿ ಎನ್‌ಆರ್‌ಎಚ್‌ಎಂ – ಪಿಐಪಿ ಉಸ್ತುವಾರಿ

***ಡಾ.ಸಿ.ಎಂ. ಲಕ್ಷ್ಮಣ , ಡಾ.ಟಿ.ಎಸ್. ಶ್ಯಾಮಲ, ಡಾ.ಟಿ.ಎನ್. ಭಟ್, ಡಾ.ಲೇಖಾ ಸುಬ್ಬಯ್ಯ, ಡಾ.ಪಿ. ಪ್ರಭುಸ್ವಾಮಿ ಮತ್ತು ಸಿ. ಯೋಗಾನಂದ***

ಈ ರಾಜ್ಯದ ಒಟ್ಟಾರೆ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು ರಾಷ್ಟ್ರದ ಪರಿಸ್ಥಿತಿಯೊಡನೆ ಅದರಲ್ಲೂ ನಿರ್ದಿಷ್ಟವಾಗಿ ಪ್ರಗತಿಪರ ರಾಜ್ಯಗಳೊಡನೆ ಹೋಲಿಸಿದರೆ ದಾರಿದ್ರ್ಯದಿಂದ ಕೂಡಿದೆ. ಜನಸಂಖ್ಯಾ ಸೂಚಕಗಳಾದ ಟಿಎಫ್‌ಆರ್, ಸಿಬಿಆರ್, ಐಎಂಆರ್, ಎಂಎಂಆರ್ ಹಾಗೂ ಸಿಡಿಆರ್‌ಗಳಲ್ಲಿನ ಕಾರ್ಯಕ್ಷಮತೆಯಲ್ಲಿ ರಾಜ್ಯವು ರಾಷ್ಟ್ರದ ಮಾನದಂಡಗಳಿಗಿಂತ ಬಹಳ ಹಿಂದಿದೆ. ಆದರೂ ಸಹ, ಎನ್‌ಆರ್‌ಎಚ್‌ಎಂ ಮಧ್ಯಂತರ ಪ್ರವೇಶದಿಂದಾಗಿ ಈಚಿನ ಕಾಲಾವಧಿಯಲ್ಲಿ ಕೆಲವು ಜಿಲ್ಲೆಗಳಲ್ಲಿ ಟಿಎಫ್‌ಆರ್ ಸೂಚಕವು ಕುಸಿಯುತ್ತಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯನಿಯೋಜನೆಯ ಪ್ರಕಾರ ಜಾರ್ಖಂಡ್‌ನ ೧೦ ಜಿಲ್ಲೆಗಳಲ್ಲಿ ಪಿಆರ್‌ಸಿ ಸಿಬ್ಬಂದಿಯು ಪಿಐಪಿ ಉಸ್ತುವಾರಿಯನ್ನು ಮಾಡಿತು. ಆರೋಗ್ಯ ಕಾರ್ಯಕರ್ತರು/ಸಿಬ್ಬಂದಿ ಹಾಗೂ ಫಲಾನುಭವಿಗಳಿಂದ ಲಭ್ಯವಾದ ಮಾಹಿತಿ ಹಾಗೂ ಆರೋಗ್ಯ ಸಿಬ್ಬಂದಿಯೊಡನೆ ನಡೆಸಿದ ಚರ್ಚೆ ಮತ್ತು ಕ್ಷೇತ್ರ ಭೇಟಿಗಳ ಆಧಾರದಿಂದ ಪ್ರತ್ಯೇಕ ವರದಿಗಳನ್ನು ತಯಾರಿಸಿ ಸಚಿವಾಲಯಕ್ಕೆ ಸಲ್ಲಿಸಲಾಯಿತು.

ಜಾರ್ಖಂಡ್‌ನಲ್ಲಿ ಭೇಟಿ ನೀಡಿದ ಜಿಲ್ಲೆಗಳಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಎದ್ದುಕಂಡುಬಂದ ದೃಶ್ಯವೆಂದರೆ ಭೌತಿಕ ಮೂಲಭೂತ ಸೌಕರ್ಯಗಳ ಲಭ್ಯತೆಗಿಂತ ಮಾನವ ಸಂಪನ್ಮೂಲದ ತೀವ್ರ ಕೊರತೆ ಇರುವುದು. ಅರಿವಳಿಕೆ ತಜ್ಞರು, ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆಯರು ಹಾಗೂ ಶಸ್ತ್ರಚಿಕಿತ್ಸಾ ತಜ್ಞರಂತಹ ತಜ್ಞ ವೈದ್ಯರ ಕೊರತೆಯು ರಾಜ್ಯದಾದ್ಯಂತ ಸಾಮಾನ್ಯ ಸಂಗತಿಯಾಗಿತ್ತು. ಮಂಜೂರಾದ ಆರೋಗ್ಯ ಸಿಬ್ಬಂದಿ ಅಂದರೆ ಎಲ್‌ಎಚ್‌ವಿ, ಸ್ಟ್ಯಾಫ್ ದಾದಿ, ಗುಮಾಸ್ತರು, ಪ್ರಯೋಗಾಲಯ ತಂತ್ರಜ್ಞರು – ಇವರುಗಳ ಸಂಖ್ಯೆಯೂ ಸಾಕಷ್ಟಿರಲಿಲ್ಲ.

ವಿವಿಧ ಆರೋಗ್ಯ ಸೌಲಭ್ಯಗಳ ಮೂಲಕ ಜಿಲ್ಲೆಗಳಲ್ಲಿ ಒದಗಿಸುತ್ತಿರುವ ಬಾಣಂತಿ ಹಾಗೂ ಶಿಶು ಆರೋಗ್ಯ ಸೇವೆಗಳನ್ನು ಇನ್ನೂ ಸುಧಾರಿಸಬೇಕಾಗಿದೆ. ಒಟ್ಟಾರೆಯಾಗಿ ಜಿಲ್ಲೆಗಳಲ್ಲಿ ಎಎನ್‌ಸಿ ವ್ಯಾಪ್ತಿ, ಸಾಂಸ್ಥಿಕ ಸೇವೆಗಳು ಹಾಗೂ ನಿರೋಧಕೀಕರಿಸುವ ವ್ಯಾಪ್ತಿ ಇತ್ಯಾದಿಗಳು ಬಹಳಷ್ಟು ಕಡಿಮೆ ಎಂದು ಹೇಳಬಹುದು. ವಿವಿಧ ಆರೋಗ್ಯ ಸೇವಾ ಸೌಲಭ್ಯಗಳ ಮೂಲಕ ನವ ತಾರುಣ್ಯದ ಯುವಕ–ಯುವತಿಯರಿಗೆ ಅಗತ್ಯ ವೈದ್ಯಕೀಯ ಸೌಲಭ್ಯ ಒದಗಿಸಲಾಗುತ್ತಿದೆ.

ಜಿಲ್ಲೆಗಳಲ್ಲಿ ಜೆಎಸ್‌ಎಸ್‌ಕೆ ಯೋಜನೆಯು ಸಾಕಷ್ಟು ಚೆನ್ನಾಗಿಯೇ ಕಾರ್ಯ ನಿರ್ವಹಿಸುತ್ತಿದೆ.  ಆದರೆ ಜೆಎಸ್‌ವೈ ಕಾರ್ಯಕ್ರಮವನ್ನು ಇನ್ನೂ ಬಲಪಡಿಸಬೇಕಿದೆ. ಆರೋಗ್ಯ ಸಿಬ್ಬಂದಿಯ ಮೂಲಭೂತ ಅಗತ್ಯಗಳನ್ನು ಅಂದರೆ ವಸತಿ, ವಿದ್ಯುಚ್ಛಕ್ತಿ ಪೂರೈಕೆ ಹಾಗೂ ನೀರಿನ ಸೌಲಭ್ಯ ಇತ್ಯಾದಿಗಳನ್ನು ಒದಗಿಸುವುದಕ್ಕೆ ವಿಶೇಷ ಗಮನ ನೀಡಬೇಕಾಗುತ್ತದೆ. ಎಚ್‌ಎಂಐಎಸ್ ಹಾಗೂ ಎಂಸಿಟಿಎಸ್ ಅನುಷ್ಠಾನವು ಸಾಕಷ್ಟು ತೃಪ್ತಿಕರವಾಗಿದೆ.

ಇಲ್ಲಿ ವರದಿ ಮಾಡಬೇಕಾದ ಒಂದು ಮುಖ್ಯ ಅಂಶವೆಂದರೆ ಪ್ರಸವದ ನಂತರದ ಶುಶ್ರೂಷೆಯಲ್ಲಿನ ಉತ್ತಮ ಸುಧಾರಣೆಯಿಂದಾಗಿ ಹೆರಿಗೆ ಸಮಯದ ಸಾವಿನ ಸಂಖ್ಯೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಕರ್ತವ್ಯಲೋಪದಿಂದ ಕೂಡಿದ ತಂತ್ರಜ್ಞರು ಅಥವಾ ತಂತ್ರಜ್ಞರ ಕೊರತೆ ಇಡೀ ರಾಜ್ಯದಲ್ಲಿ ಸಾಮಾನ್ಯ ಸಂಗತಿಯಾಗಿದೆ. ಆರೋಗ್ಯ ಸೇವೆಯನ್ನು ಪಡೆದುಕೊಳ್ಳಲು ಅಶಕ್ತರಾದ ಬಡವರು ಹಾಗೂ ಬುಡಕಟ್ಟು ಜನಾಂಗದವರಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಹೆಚ್ಚಿನ ಉತ್ತಮ ಪ್ರಯತ್ನಗಳಾಗಬೇಕಾಗಿದೆ. ಭೇಟಿ ನೀಡಿದ ಜಿಲ್ಲೆಗಳಲ್ಲಿ ನಿರೋಧೀಕರಿಸುವ (ಲಸಿಕೆ ಹಾಕಬೇಕಾದ) ವ್ಯಾಪ್ತಿಯು ೯ರಿಂದ ೧೧ ತಿಂಗಳ ಒಳಗಿನ ಮಕ್ಕಳಲ್ಲಿ ಹೆಚ್ಚಾಗಿಯೇ ಇತ್ತು. ಆದರೆ ೧೨ರಿಂದ ೨೩ ತಿಂಗಳ ಒಳಗಿನ ಮಕ್ಕಳಿಗೆ ನಿರೋಧೀಕರಣವು ಸುಸ್ಥಿರವಾಗಿ ಸುಧಾರಣೆಯನ್ನು ಕಾಣುತ್ತಿಲ್ಲ. ಜಾರ್ಖಂಡ್‌ನ ಭೇಟಿ ನೀಡಿದ ಜಿಲ್ಲೆಗಳಲ್ಲಿ ಕೆಲಸ ಬಿಟ್ಟು ಹೋಗುವ ಆಶಾ ಕಾರ್ಯಕರ್ತೆಯರ ಸಂಖ್ಯೆಯ ಪ್ರಮಣ ಬಹಳ ಹೆಚ್ಚಾಗಿದೆ.

## ಭಾರತ–ಕೆನಡಾ ದ್ವಿದಳ ಧಾನ್ಯಗಳ ವ್ಯಾಪಾರ ವಹಿವಾಟು: ಅವಕಾಶಗಳು ಮತ್ತು ಸವಾಲುಗಳು

***– ಡಾ. ಏಳುಮಲೈ ಕಣ್ಣನ್ ಮತ್ತು ಪ್ರೊ.ರಿಚರ್ಡ್ ಎಸ್. ಗ್ರೇ***

ವಿಶ್ವಸಂಸ್ಥೆಯು ೨೦೧೬ನೇ ಇಸವಿಯನ್ನು "ಅಂತರಾಷ್ಟ್ರೀಯ ದ್ವಿದಳಧಾನ್ಯಗಳ ವರ್ಷ" ಎಂದು ಘೋಷಿಸಿತು.  ಅಭಿವೃದ್ಧಿ ಹೊಂದುತ್ತಿರುವ

ರಾಷ್ಟ್ರಗಳಲ್ಲಿನ ಬಡವರ ಶಕ್ತಿಯ ಅವಶ್ಯಕತೆಗಾಗಿ ಪೋಷಕಾಂಶಯುಕ್ತವಾದ ಆರೋಗ್ಯಕರ ಆಹಾರವನ್ನು ಒದಗಿಸುವಲ್ಲಿ ದ್ವಿದಳಧಾನ್ಯಗಳ ಪ್ರಾಮುಖ್ಯತೆಯನ್ನು ಇದು ಸೂಚಿಸುತ್ತದೆ. ಏಕದಳ ಧಾನ್ಯಗಳೊಂದಿಗೆ ಸೇವಿಸಿದಾಗ ದ್ವಿದಳಧಾನ್ಯಗಳು ಅಗತ್ಯ ಪ್ರಮಾಣದ ಸಸಾರಜನಕವನ್ನು ಒದಗಿಸುವುದರಿಂದ, ಜನಸಂಖ್ಯೆಯ ಬಹಳಷ್ಟು ಭಾಗಕ್ಕೆ ದ್ವಿದಳ ಧಾನ್ಯಗಳು ಅವರ ಆಹಾರದ ಒಂದು ಮುಖ್ಯ ಭಾಗವಾಗುತ್ತದೆ. ಹೀಗಿದ್ದರೂ ಸಹ ಬಡ ಬಳಕೆದಾರರು ದ್ವಿದಳ ಧಾನ್ಯಗಳ ಬೆಲೆ ಏರಿದಾಗೆಲ್ಲಾ ಅದರ ಬದಲಾಗಿ ಕಡಿಮೆ ಬೆಲೆಯ ಏಕದಳ ಧಾನ್ಯಗಳನ್ನೋ ಅಥವಾ ತರಕಾರಿಗಳನ್ನೋ ಉಪಯೋಗಿಸಲು ಪ್ರಾರಂಭಿಸುತ್ತಾರೆ. ಭಾರತವು ದ್ವಿದಳಧಾನ್ಯಗಳ ಉತ್ಪಾದನೆಯಲ್ಲಿ ಮತ್ತು ಬಳಕೆಯಲ್ಲಿ ವಿಶ್ವದಲ್ಲೇ ಮೊದಲ ಸ್ಥಾನದ ರಾಷ್ಟ್ರವಾಗಿದೆ. ರಾಷ್ಟ್ರದ ಸದ್ಯದ ದ್ವಿದಳಧಾನ್ಯ ಉತ್ಪಾದನಾ ಪ್ರಮಾಣವು ಬಳಕೆ ಪ್ರಮಾಣಕ್ಕೆ ತಕ್ಕಷ್ಟಿಲ್ಲ. ಭಾರತವು ತನ್ನ ಬಳಕೆ ಅಗತ್ಯಗಳನ್ನು ಪೂರೈಸಲು ಮತ್ತು ಆಂತರಿಕ ಮಾರುಕಟ್ಟೆಯಲ್ಲಿನ ಬೆಲೆಗಳನ್ನು ನಿಯಂತ್ರಿಸಲು ಆಮದಿನ ಮೇಲೆ ಹೆಚ್ಚು ಅವಲಂಬಿತವಾಗಿದೆ. ಕೆನಡಾ ದೇಶವು ದ್ವಿದಳ ಧಾನ್ಯಗಳನ್ನು ಅದರಲ್ಲೂ ನಿರ್ದಿಷ್ಟವಾಗಿ ಹಳದಿ ಬಟಾಣಿಯನ್ನು ಭಾರತಕ್ಕೆ ಅತ್ಯಧಿಕ ಪ್ರಮಾಣದಲ್ಲಿ ಪೂರೈಸುವ ರಾಷ್ಟ್ರವಾಗಿದೆ. ಕೆನಡಾದ ದ್ವಿದಳಧಾನ್ಯ ಬೆಳೆಗಾರರೂ ಸಹ ಸಾಧಾರಣ ಗುಣಮಟ್ಟದ ಹಳದಿ ಬಟಾಣಿಯನ್ನು ರಫ್ತು ಮಾಡುವಲ್ಲಿ ಬೆಲೆ ಅನುಕೂಲತೆಯನ್ನು ಹೊಂದಿದ್ದಾರೆ. ಜೊತೆಗೆ ಪ್ರಸ್ತುತದಲ್ಲಿ ಭಾರತ ಮತ್ತು ಕೆನಡಾ ದೇಶಗಳ ವ್ಯಾಪಾರ ವಹಿವಾಟಿನ ಸಂಬಂಧಗಳು ದ್ವಿದಳಧಾನ್ಯ ವ್ಯಾಪಾರ ವಹಿವಾಟನ್ನು ಬಲವಾಗಿ ಆಧರಿಸಿದೆ. ಈ ಸಂದರ್ಭಕ್ಕನುಗುಣವಾಗಿ ಭಾರತ ಮತ್ತು ಕೆನಡಾ ದೇಶಗಳ ದ್ವಿದಳಧಾನ್ಯ ವ್ಯಾಪಾರ ವಹಿವಾಟಿನ ಸುಸ್ಥಿರತೆಯ ಮೇಲೆ ಭಾರತದ ವಾಣಿಜ್ಯ ನೀತಿಗಳು ಬೀರಬಹುದಾದ ಪರಿಣಾಮವನ್ನು ಪ್ರಸ್ತುತ ಅಧ್ಯಯನವು ವಿಶ್ಲೇಷಿಸಿದೆ.

ಭಾರತ ಮತ್ತು ಕೆನಡಾ ದೇಶಗಳ ದ್ವಿಪಕ್ಷೀಯ ವ್ಯಾಪಾರ ವಹಿವಾಟುಗಳು ಕಾಲಾನುಕ್ರಮದಲ್ಲಿ ಅದ್ಭುತ ಬೆಳವಣಿಗೆಯನ್ನು ಸಾಧಿಸಿದೆ. ಒಟ್ಟಾರೆ ವ್ಯಾಪಾರ ವಹಿವಾಟಿನ ಪ್ರಮಾಣವು ವಾರ್ಷಿಕ ಶೇ.೧೧.೯ರ ಬೆಳವಣಿಗೆ ಗತಿಯಲ್ಲಿ ೧೯೯೦ರಲ್ಲಿ ಇದ್ದ ೪೬೩ ದಶಲಕ್ಷ ಅಮೆರಿಕನ್ ಡಾಲರ್‌ಗೆ ಪ್ರತಿಯಾಗಿ ೨೦೧೪ರಲ್ಲಿ ೫೪೮೯ ದಶಲಕ್ಷ ಅಮೆರಿಕನ್ ಡಾಲರ್‌ಗಳಿಗೆ ಏರಿತ್ತು. ಈ ದೇಶಗಳ ನಡುವೆ ೨೦೧೪ರಲ್ಲಿ ಆದ ವ್ಯಾಪಾರ ವಹಿವಾಟಿನ ಪೈಕಿ ಕೃಷಿ ಉತ್ಪನ್ನಗಳು ಪ್ರಮುಖ ಸ್ಥಾನವೊಂದನ್ನು ಆಕ್ರಮಿಸಿದ್ದು, ಒಟ್ಟಾರೆ ವ್ಯಾಪಾರ ವಹಿವಾಟಿನಲ್ಲಿ ಶೇ.೨೪.೨ರಷ್ಟು ಕೊಡುಗೆ ನೀಡಿತ್ತು. ಕೃಷಿ ಉತ್ಪನ್ನಗಳ ರಫ್ತಿನ ಪ್ರಮಾಣಕ್ಕಿಂತ ಆಮದಿನ ಪ್ರಮಾಣವೇ ಹೆಚ್ಚಿರುವುದರಿಂದ, ಕೃಷಿ ವ್ಯಾಪಾರ ವಹಿವಾಟಿನ ತಕ್ಕಡಿಯು ಕೆನಡಾ ದೇಶದ ಕಡೆಗೆ ಹೆಚ್ಚು ವಾಲಿದೆ. ಕೆನಡಾದಿಂದ ೨೦೧೩ರಲ್ಲಿ ಆಮದು ಮಾಡಿಕೊಂಡ ಕೃಷಿ ಉತ್ಪನ್ನಗಳ ಪೈಕಿ ದ್ವಿದಳ ಧಾನ್ಯಗಳೇ ಶೇ.೯೮.೩ರಷ್ಟಿದ್ದವು. ಈ ರೀತಿ ಆಮದು ಮಾಡಿಕೊಂಡ ದ್ವಿದಳಧಾನ್ಯಗಳ ಪೈಕಿ ಒಣ ಬಟಾಣಿಯೇ ಹೆಚ್ಚು ಪ್ರಮಾಣದಲ್ಲಿದ್ದು, ಮಸೂರು ಬೇಳೆ ಹಾಗೂ ಕಡಲೆಗಳು ನಂತರದ ಸ್ಥಾನಗಳಲ್ಲಿದ್ದವು.

ದ್ವಿದಳ ಧಾನ್ಯಗಳ ಪೂರೈಕೆ ಭಾಗವನ್ನು ವಿಶ್ಲೇಷಿಸಿದಾಗ, ಅದರಲ್ಲೂ ನಿರ್ದಿಷ್ಟವಾಗಿ ಹಳದಿ ಬಟಾಣಿಯ ವಿಶ್ಲೇಷಣೆ ಮಾಡಿದಾಗ, ಕೆನಡಾದಲ್ಲಿ ಈ ಬೆಳೆಯನ್ನು ಕಾಲಾನುಕ್ರಮದಲ್ಲಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ ಮತ್ತು ಉತ್ಪಾದನೆಯೂ ಸಹ ಗಣನೀಯವಾಗಿ ಹೆಚ್ಚಿದೆ. ಈ ಬೆಳೆಯು ೧೯೯೦ರಲ್ಲಿ ೦.೧೮ ದಶಲಕ್ಷ ಹೆಕ್ಟೇರುಗಳಲ್ಲಿ ಕಟಾವಾಗಿದ್ದು, ಇದೇ ಬೆಳೆಯನ್ನು ೨೦೧೩ರಲ್ಲಿ ೧.೨೩ ದಶಲಕ್ಷ ಹೆಕ್ಟೇರುಗಳಲ್ಲಿ ಕಟಾವು ಮಾಡಲಾಯಿತು. ಹಾಗೆಯೇ ಉತ್ಪಾದನೆಯೂ ಸಹ ೦.೨೭ ದಶಲಕ್ಷ ಟನ್ನುಗಳಿಂದ ೩.೧ ದಶಲಕ್ಷ ಟನ್ನುಗಳಿಗೆ ಏರಿತು. ಈ ರೀತಿಯಾಗಿ ಹಳದಿ ಬಟಾಣಿಯ ಉತ್ಪಾದನೆಯನ್ನು ಆಶ್ಚರ್ಯಕರ ರೀತಿಯಲ್ಲಿ ಹೆಚ್ಚಿಸುವಲ್ಲಿ ಬೆಳೆಗಾರರು, ತಳಿವಿಜ್ಞಾನಿಗಳು ಹಾಗೂ ಬೆಳೆಗಾರರ ಸಂಘಗಳ ಒಗ್ಗೂಡಿತ ಪ್ರಯತ್ನ ಇದ್ದಿತೆನ್ನಬಹುದು. ಕೆನಡಾದ ವಿವಿಧ ಪ್ರಾಂತಗಳ ಪೈಕಿ ಸಸ್ಕಟ್ ಚೇವನ್ ದ್ವಿದಳಧಾನ್ಯ ಬೆಳೆಗಾರರ ಸಂಘವು (ಎಸ್‌ಪಿಜಿ) ಒಂದು ಗಣನೀಯ ಪಾತ್ರವನ್ನು ವಹಿಸುತ್ತಿದ್ದು, ಸಸ್ಕಟ್ ಚೇವನ್‌ನಲ್ಲಿ ದ್ವಿದಳಧಾನ್ಯ ವಲಯವನ್ನು ಸುಧಾರಿಸಲು ಸಂಶೋಧನೆಗೆ ಅಗತ್ಯ ಬಂಡವಾಳ ಹೂಡಲು, ಅಭಿವೃದ್ಧಿಗೆ ಬಂಡವಾಳ ಹೂಡಲು ಮತ್ತು ಇತರ ಮುಖ್ಯ ಚಟುವಟಿಕೆಗಳನ್ನು ನಿರ್ವಹಿಸಲು ಗಣನೀಯವಾಗಿ ಶ್ರಮಿಸುತ್ತಿದೆ. ಎಸ್‌ಪಿಜಿ ಸಂಸ್ಥೆಯು ಈ ರೀತಿಯಾಗಿ ಬಂಡವಾಳ ತೊಡಗಿಸುವುದಕ್ಕೆ ಇರುವ ಪ್ರಮುಖ ಆದಾಯ ಮೂಲವು ಬೆಳೆಗಾರರು ದ್ವಿದಳ ಧಾನ್ಯಗಳ ಮಾರಾಟ ಮಾಡುವಾಗ ಅವರಿಂದ ಸಂಗ್ರಹಿಸುವ ಮಾರಾಟದ ಶೇ.೧ರಷ್ಟು ಹಣವೇ ಆಗಿದೆ. ರಿಚರ್ಡ್ ಗ್ರೇ ಹಾಗೂ ಇತರರು ೨೦೦೮ರಲ್ಲಿ ನಡೆಸಿದ ಸಂಘದ ಖರ್ಚಿನ ವಿವರವಾದ ವಿಶ್ಲೇಷಣೆಯು ಉತ್ಪಾದಕರು ಮಾಡಿದ ಖರ್ಚು ಮತ್ತು ಪಡೆದುಕೊಂಡ ಲಾಭದ ಅನುಪಾತವು ಗಣನೀಯವಾಗಿದ್ದುದನ್ನು (೨೦.೨) ತಿಳಿಸಿತು.

ಮುಖ್ಯ ಭಾಗೀದಾರರೊಡನೆ ಅಂದರೆ ಕೆನಡಾದ ದ್ವಿದಳಧಾನ್ಯ ಉದ್ಯಮದ ಅಧಿಕಾರಿ ಸಿಬ್ಬಂದಿಯೊಂದಿಗೆ, ವ್ಯಾಪಾರಸ್ಥರು/ರಫ್ತುದಾರರೊಡನೆ ಮತ್ತು ತಳಿ ವಿಜ್ಞಾನಿಗಳೊಡನೆ ನಡೆಸಿದ ಚರ್ಚೆಯ ಪ್ರಕಾರ ಹಳದಿ ಬಟಾಣಿಯನ್ನು ರಫ್ತು ಮಾಡಲು ಭಾರತದ ಮಾರುಕಟ್ಟೆಯೇ ಮುಂದೆಯೂ ಸಹ ಮುಖ್ಯ ಗುರಿಯಾಗಿರುತ್ತದೆ ಹಾಗೂ ಈ ಹಳದಿ ಬಟಾಣಿಯ ರಫ್ತು ಸಾಮರ್ಥ್ಯವೂ ಬಹಳ ಹೆಚ್ಚಿನದಿರುತ್ತದೆ. ಪ್ರಸ್ತುತದಲ್ಲಿ ತಳಿ ಅಭಿವೃದ್ಧಿ ಕಾರ್ಯಕ್ರಮವು ಸುವಾಸನೆಯನ್ನು ಹೆಚ್ಚಿಸಲು, ಅಡಿಗೆಗೆ ತಕ್ಕುದಾದ ಗುಣಮಟ್ಟವನ್ನು ಸುಧಾರಿಸಲು ಹಾಗೂ ಸೂಕ್ಷ್ಮ ಪೋಷಕಾಂಶಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಹಳದಿ ಬಟಾಣಿಯು ತೊಗರಿ ಬೇಳೆಗೆ ಉತ್ತಮ ಪರ್ಯಾಯವಾಗಿದೆಯಲ್ಲದೆ ಅದರಲ್ಲಿಯ ಪೋಷಕಾಂಶಗಳೂ ಸಹ ಹೆಚ್ಚೂ ಕಡಿಮೆ ತೊಗರಿ ಬೇಳೆಯಲ್ಲಿದ್ದಷ್ಟೇ ಇದೆ, ಜೊತೆಗೆ ಅದರ ಬೆಲೆಯೂ ಕಡಿಮೆ. ಆದರೂ ಸಹ ಈ ಬಗ್ಗೆ ಕಾರ್ಯನೀತಿ ನಿರೂಪಕರು ಶೀಘ್ರವಾಗಿ

ಪರಿಹಾರ ಕಂಡುಕೊಳ್ಳಬೇಕಾದ ವ್ಯಾಪಾರ ವಹಿವಾಟು ಸಂಬಂಧಿತ ಅಂಶಗಳೂ ಇವೆ. ಈಗ ದ್ವಿದಳಧಾನ್ಯಗಳನ್ನು ಉಚಿತವಾಗಿ ಆಮದು ಮಾಡಿಕೊಳ್ಳಬಹುದಾದರೂ ಸಹ ಅದಕ್ಕೆ ಹೊಂದಿಕೊಂಡಂತಹ ಶುಲ್ಕ ದರಗಳು ಈಗಲೂ ಸಹ ಹೆಚ್ಚಾಗಿಯೇ ಉಳಿದಿದೆ. ಇದರಿಂದ ಏನಾಗುತ್ತದೆಂದರೆ ಭಾರತ ಸರ್ಕಾರವು ಯಾವಾಗ ಅಗತ್ಯ ಬೀಳುತ್ತದೋ ಆವಾಗ ರಫ್ತುದಾರರಿಗೆ ಮುನ್ಸೂಚನೆಯನ್ನೂ ಕೊಡದೆ ಆಮದಿನ ಮೇಲಿನ ಶುಲ್ಕವನ್ನು ಹೇರಬಹುದಾಗಿದೆ. ಆಮದು ನೀತಿಯಲ್ಲಿನ ಈ ಅನಿಶ್ಚಿಯತೆಯು ವ್ಯಾಪಾರಸ್ಥರಲ್ಲಿ ಸ್ವಲ್ಪಮಟ್ಟಿನ ಆತಂಕವನ್ನು ಉಂಟು ಮಾಡಬಹುದು. ಇದೂ ಅಲ್ಲದೆ ಆಹಾರ ಸುರಕ್ಷತೆ ಪ್ರಮಾಣನ ಮತ್ತು ಭಾರತದ ಪ್ರಮಾಣನ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ)ದ ವಿಧಿವಿಧಾನಗಳು ಬಂದರಿನಿಂದ ಬಂದರಿಗೆ ವ್ಯತ್ಯಾಸವಾಗುವುದರಿಂದ ರಫ್ತುದಾರರಿಗೆ ನಿಶ್ಚಿತವಾಗಿಯೂ ಅನಾನುಕೂಲವಾಗುತ್ತದೆ. ಕೆನಡಾ ಹಾಗೂ ಭಾರತಗಳೆರಡರಲ್ಲೂ ದ್ವಿದಳ ಧಾನ್ಯಗಳನ್ನು ಆಂತರಿಕವಾಗಿ ದಕ್ಷ ರೀತಿಯಲ್ಲಿ ಸಾಗಣೆ ಮಾಡಲು ಮುಖ್ಯ ತೊಡಕುಗಳನ್ನು ಕೆಲವು ಸಾಗಣೆ ಅಂಶಗಳು ಉಂಟು ಮಾಡುತ್ತವೆ ಎಂದು ವರದಿಯಾಗಿದೆ. ಹಳದಿ ಬಟಾಣಿಯನ್ನು ಕೆನಡಾ ದೇಶದಿಂದ ನಮ್ಮ ದೇಶಕ್ಕೆ ಆಮದು ಮಾಡಿಕೊಳ್ಳಲು ಮುಂಬಯಿ ಮತ್ತು ಚೆನ್ನೈಗಳು ಪ್ರಮುಖ ಬಂದರುಗಳಾಗಿವೆ. ಈ ಬಂದರುಗಳಲ್ಲಿ ಸರಕುಗಳನ್ನು ಇಳಿಸಿಕೊಳ್ಳುವಿಕೆ, ಉಗ್ರಾಣಗಳಿಗೆ ಸಾಗಿಸುವಿಕೆ ಹಾಗೂ ದಾಸ್ತಾನು ಮಾಡುವಿಕೆಯಲ್ಲಿನ ಕಳಪೆ ಪರಿಸ್ಥಿತಿ ಇತ್ಯಾದಿ ಮೂಲಭೂತ ಸೌಕರ್ಯಗಳ ಸಮಸ್ಯೆಯಿಂದ ಉತ್ಪನ್ನವು ನಶಿಸಿ ವ್ಯರ್ಥವಾಗುತ್ತಿದೆ. ವ್ಯಾಪಾರ ವಹಿವಾಟು ಸುಲಲಿತವಾಗಿ ನಡೆದುಕೊಂಡು ಹೋಗಲು ಹಾಗೂ ಹೆಚ್ಚಾಗಲು ಈ ಅಂಶಗಳನ್ನು ಸರಿಪಡಿಸಬೇಕಾಗಿದೆ. ಇದು ದೀರ್ಘಾವಧಿಯಲ್ಲಿ ಭಾರತೀಯ ಬಳಕೆದಾರರಿಗೆ ಪೋಷಕಾಂಶಯುಕ್ತ ದ್ವಿದಳಧಾನ್ಯಗಳನ್ನು ಒದಗಿಸುವಲ್ಲಿ ಸಹಕಾರಿಯಾಗುತ್ತದೆ. ಜೊತೆಗೆ ಆಮದಿನ ಬೇಡಿಕೆಯಲ್ಲಿ ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಆಮದು ಪದಾರ್ಥದ ಪೋಷಕಾಂಶ ಸಮೃದ್ಧತೆ, ಪರ್ಯಾಯತೆ, ಬೆಲೆ ಹಾಗೂ ಪಡೆದುಕೊಳ್ಳುವ ಸಾಧ್ಯತೆಗಳೂ ಮುಖ್ಯವಾಗಿರುತ್ತವೆ.

## ಕರ್ನಾಟಕದಲ್ಲಿ ಪರಿಕರಗಳ ಬಳಕೆ, ಉತ್ಪಾದನೆ, ಇಳುವರಿ ಹಾಗೂ ಆದಾಯದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನವು (ಎನ್‌ಎಫ್‌ಎಸ್‌ಎಂ) ಬೀರಿರುವ ಪರಿಣಾಮ

***ಡಾ.ಎ.ವಿ. ಮಂಜುನಾಥ ಹಾಗೂ ಪ್ರೊ. ಪರಮೋದ್ ಕುಮಾರ್***

ರಾಷ್ಟ್ರದಲ್ಲಿನ ಆಹಾರ ಕೊರತೆ ಸಮಸ್ಯೆಯನ್ನು ಎದುರಿಸಲು ಭಾರತ ಸರ್ಕಾರವು ೨೦೦೭–೦೮ ರಲ್ಲಿ ಅಂದರೆ ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯ (ಎಫ್‌ವೈಪಿ) ಪ್ರಾರಂಭದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನವನ್ನು (ಎನ್‌ಎಫ್‌ಎಸ್‌ಎಂ) ಪ್ರಾರಂಭಿಸಿತು. ಎನ್‌ಎಫ್‌ಎಸ್‌ಎಂ ಯೋಜನೆಯು ಹನ್ನೊಂದನೆಯ ಎಫ್‌ವೈಪಿ ಅಂತ್ಯದ ವೇಳೆಗೆ ಅನುಕ್ರಮವಾಗಿ ಭತ್ತದ ಉತ್ಪಾದನೆಯನ್ನು ೧೦, ಗೋಧಿಯ ಉತ್ಪಾದನೆಯನ್ನು ೮ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ೨ ದಶಲಕ್ಷ ಟನ್ನುಗಳಷ್ಟು ಹೆಚ್ಚಿಸುವ ಗುರಿ ಹೊಂದಿತ್ತು. ಈ ಉದ್ದೇಶಿತ ಗುರಿಯನ್ನು (೨೦ ದಶಲಕ್ಷ ಟನ್ನುಗಳು) ಯಶಸ್ವಿಯಾಗಿ ತಲುಪಿದ್ದರಿಂದ ಯೋಜನೆಯನ್ನು ಹನ್ನೆರಡನೆಯ ಎಫ್‌ವೈಪಿಯಲ್ಲೂ ವಿಸ್ತರಿಸಲಾಯಿತು. ಜೊತೆಗೆ ಹೊಸ ಗುರಿಗಳನ್ನು ನಿಗದಿ ಪಡಿಸಿ, ೨೦೧೬–೧೭ ರೊಳಗೆ ೧೦ ದಶಲಕ್ಷ ಟನ್ನು ಭತ್ತ, ೮ ದಶಲಕ್ಷ ಟನ್ನು ಗೋಧಿ, ೪ ದಶಲಕ್ಷ ಟನ್ನು ದ್ವಿದಳಧಾನ್ಯಗಳು ಮತ್ತು ೩ ದಶಲಕ್ಷ ಟನ್ನು ಒರಟು ಧಾನ್ಯಗಳನ್ನು ಉತ್ಪಾದಿಸಲು ನಿರ್ಧರಿಸಿತು.

ಎನ್‌ಎಫ್‌ಎಸ್‌ಎಂ ಯೋಜನೆಯು ಕರ್ನಾಟಕವೂ ಸೇರಿದಂತೆ ರಾಷ್ಟ್ರದ ೨೭ ರಾಜ್ಯಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ. ಕರ್ನಾಟಕದಲ್ಲಿ ಹನ್ನೊಂದನೆಯ ಎಫ್‌ವೈಪಿ ಪ್ರಾರಂಭದಿಂದಲೂ ಎನ್‌ಎಫ್‌ಎಸ್‌ಎಂ – ಭತ್ತ ಮತ್ತು ಎನ್‌ಎಫ್‌ಎಸ್‌ಎಂ – ದ್ವಿದಳ ಧಾನ್ಯಗಳು ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿವೆ. ಈ ಕಾರ್ಯಕ್ರಮದ ಮೂಲಕ ಭತ್ತವನ್ನು ಎಫ್‌ವೈಪಿಯ ೫ ವರ್ಷಗಳಲ್ಲೂ ೭ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬೆಳೆಯಲಾಯಿತು. ಆದರೆ ದ್ವಿದಳ ಧಾನ್ಯವನ್ನು ಹನ್ನೊಂದನೆಯ ಎಫ್‌ವೈಪಿಯ ಮೊದಲೆರಡು ವರ್ಷಗಳಲ್ಲಿ ೧೩ ಜಿಲ್ಲೆಗಳಲ್ಲೂ ಮತ್ತು ನಂತರದ ಮೂರು ವರ್ಷಗಳಲ್ಲಿ ರಾಜ್ಯದ ಎಲ್ಲಾ ೩೦ ಜಿಲ್ಲೆಗಳಲ್ಲೂ ಯೋಜನೆಯ ವ್ಯಾಪ್ತಿಗೆ ತರಲಾಯಿತು.

ಈ ಹಿನ್ನೆಲೆಯಲ್ಲಿ ಸದರಿ ಅಧ್ಯಯನವು ಕೆಳಗೆ ತಿಳಿಸಿರುವ ನಿರ್ದಿಷ್ಟ ಉದ್ದೇಶಗಳೊಂದಿಗೆ ಮುಂದುವರಿಯಿತು. ಅವೆಂದರೆ: (೧) ಕರ್ನಾಟಕದ ಎನ್‌ಎಫ್‌ಎಸ್‌ಎಂ ವ್ಯಾಪ್ತಿಯಲ್ಲಿರುವ ಮತ್ತು ವ್ಯಾಪ್ತಿಯಲ್ಲಿಲ್ಲದೆ ಇರುವ ಜಿಲ್ಲೆಗಳಲ್ಲಿ ಭತ್ತ, ಗೋಧಿ ಮತ್ತು ದ್ವಿದಳ ಧಾನ್ಯ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಉತ್ಪಾದಕತೆಗಳ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದು; (೨) ಎನ್‌ಎಫ್‌ಎಸ್‌ಎಂ ಯೋಜನೆಯ ಪ್ರಭಾವವು ಫಲಾನುಭವಿ ಭತ್ತದ ಬೆಳೆಗಾರರಲ್ಲಿ ಪರಿಕರಗಳ ಬಳಕೆ, ಉತ್ಪಾದನೆ ಮತ್ತು ಆದಾಯಗಳಲ್ಲಿ ಸುಧಾರಣೆ ಉಂಟು ಮಾಡಿದೆಯೇ ಎಂಬುದನ್ನು ಅಂದಾಜಿಸುವುದು; (೩) ಎನ್‌ಎಫ್‌ಎಸ್‌ಎಂ ಯೋಜನೆಯಲ್ಲಿ ಭಾಗವಹಿಸಲು ಭತ್ತದ ಬೆಳೆಗಾರರನ್ನು ಪ್ರೇರೇಪಿಸಿದ ಅಂಶಗಳಾವುವು ಎಂಬುದನ್ನು ಗುರುತಿಸುವುದು; ಹಾಗೂ (೪) ಎನ್‌ಎಫ್‌ಎಸ್‌ಎಂ ಯೋಜನೆಯ ಕಾರ್ಯದಕ್ಷತೆಗೆ ಅಡ್ಡಿಯಾಗುತ್ತಿರುವ ಅಂಶಗಳು ಯಾವುವು ಎಂಬುದನ್ನು ಗುರುತಿಸುವುದು.

ಈ ಉದ್ದೇಶಗಳನ್ನು ಸಾಧಿಸಲು ಪ್ರಾಥಮಿಕ ಹಾಗೂ ಉಪ ದತ್ತಾಂಶ ಇವೆರಡನ್ನೂ ಪರಿಗಣಿಸಲಾಗಿದೆ. ಪ್ರಾಥಮಿಕ ದತ್ತಾಂಶವನ್ನು ಕರ್ನಾಟಕದ ರಾಯಚೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಭತ್ತದ ಬೆಳೆಗಾರರಿಂದ ಪಡೆಯಲಾಗಿದೆ ಹಾಗೂ ಇದಕ್ಕಾಗಿ ಬಹುಸ್ತರದ ಮಾದರಿ ಪದ್ಧತಿಯನ್ನು



ಅನುಸರಿಸಲಾಗಿದೆ. ಎನ್‌ಎಫ್‌ಎಸ್‌ಎಂ ಯೋಜನೆಯ ೩೦೦ ಫಲಾನುಭವಿ ರೈತರಿಂದ ಹಾಗೂ ೧೦೦ ಇತರೆ ರೈತರಿಂದ ಪ್ರಾಥಮಿಕ ದತ್ತಾಂಶವನ್ನು ಪಡೆಯಲಾಗಿದೆ. ಪ್ರಾಥಮಿಕ ಹಾಗೂ ಉಪದತ್ತಾಂಶಗಳೆರಡನ್ನೂ ವಿವರಣಾತ್ಮಕ ಸಂಖ್ಯಾಶಾಸ್ತ್ರ, ಬೆಳೆಗಳ ಖರ್ಚು ಮತ್ತು ಆದಾಯದ ಆರ್ಥಿಕತೆ ಹಾಗೂ ಲಾಜಿಸ್ಟಿಕ್ಸ್ ರಿಗ್ರೆಷನ್‌ಗಳನ್ನು ಬಳಸಿ ವಿಶ್ಲೇಷಿಸಲಾಗಿದೆ. ಅಧ್ಯಯನದ ಮುಖ್ಯ ಫಲಿತಾಂಶಗಳು ಹಾಗೂ ನೀತಿ ನಿರೂಪಣೆಗೆ ಸಹಾಯಕವಾಗುವ ಸಲಹೆಗಳು ಈ ರೀತಿ ಇವೆ:

- ಎನ್‌ಎಫ್‌ಎಸ್‌ಎಂ ಯೋಜನೆಯ ಎಲ್ಲೆಗೆರೆ ವರ್ಷವಾದ ೨೦೦೬-೦೭ಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಬೆಳೆದ ಭತ್ತದ ಬೆಳೆಯಲ್ಲಿ ವಿಸ್ತೀರ್ಣದ ಹೆಚ್ಚಳವು ಶೇ.೧.೫೧ರಷ್ಟು, ಉತ್ಪಾದನೆಯ ಹೆಚ್ಚಳವು ಶೇ.೧೪.೬೬ರಷ್ಟು ಹಾಗೂ ಉತ್ಪಾದಕತೆಯ ಹೆಚ್ಚಳವು ಶೇ.೧೩.೦೮ರಷ್ಟಾಗಿತ್ತು. ಇದೇ ರೀತಿ ದ್ವಿದಳಧಾನ್ಯ ಬೆಳೆಗಳ ವಿಸ್ತೀರ್ಣದಲ್ಲಿ ಶೇ.೨.೭೯ರಷ್ಟು ಕಡಿತ, ಉತ್ಪಾದನೆಯಲ್ಲಿ ಶೇ.೨೬.೯೯ರಷ್ಟು ಹೆಚ್ಚಳ ಮತ್ತು ಉತ್ಪಾದಕತೆಯಲ್ಲಿ ಶೇ.೩೦.೫೦ರಷ್ಟು ಹೆಚ್ಚಳವಾಗಿತ್ತು.

- ಫಲಾನುಭವಿಗಳ ಪೈಕಿ ಶೇ.೧೫ರಷ್ಟು ರೈತರು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೂ, ಶೇ.೫೯ರಷ್ಟು ರೈತರು ಇತರೆ ಹಿಂದುಳಿದ ವರ್ಗಗಳಿಗೂ ಮತ್ತು ಶೇ.೨೬ರಷ್ಟು ರೈತರು ಸಾಮಾನ್ಯ ವರ್ಗಕ್ಕೂ ಸೇರಿದ್ದಾರೆ. ಫಲಾನುಭವಿ ರೈತರು ಸರಾಸರಿ ೮.೯೫ ಎಕರೆ ಭೂಮಿಯನ್ನೂ ಮತ್ತು ಫಲಾನುಭವಿಗಳಲ್ಲದ ರೈತರು ಸರಾಸರಿ ೬.೪೨ ಎಕರೆ ಭೂಮಿಯನ್ನು ಹೊಂದಿದ್ದು, ಫಲಾನುಭವಿಗಳಲ್ಲದ ರೈತರಿಗಿಂತ ಫಲಾನುಭವಿ ರೈತರು ನಿವ್ವಳ ಶೇ.೩೯ರಷ್ಟು ಹೆಚ್ಚಿನ ಸಾಗುವಳಿ ಜಮೀನನ್ನು ಹೊಂದಿದ್ದರು.

- ಎನ್‌ಎಫ್‌ಎಸ್‌ಎಂ ಫಲಾನುಭವಿಗಳು ಭತ್ತದ ಬೀಜಗಳನ್ನು (ಶೇ.೩೧), ಪೋಷಕಾಂಶ ಕೊರತೆ ಇರುವ ಜಮೀನುಗಳಿಗೆ ಸೂಕ್ಷ್ಮ ಪೋಷಕಾಂಶಗಳನ್ನು ಹಾಕಲು ಪ್ರೋತ್ಸಾಹ (ಶೇ.೧೮), ಕೈಚಾಲಿತ ಹಾಗೂ ಯಂತ್ರಚಾಲಿತ ಸಿಂಪರಕಗಳು (ಶೇ.೧೫), ಆಮ್ಲೀಯ ಮಣ್ಣುಗಳಿಗೆ ಸುಣ್ಣ ಹಾಕಲು ಪ್ರೋತ್ಸಾಹ (ಶೇ.೧೪) ಹಾಗೂ ಸಸ್ಯ ಸಂರಕ್ಷಣಾ ರಾಸಾಯನಿಕ (ಶೇ.೧೩) ಇತ್ಯಾದಿಗಳನ್ನು ಪಡೆದುಕೊಂಡಿದ್ದಾರೆ.

- ಸಮೀಕ್ಷಾ ಫಲಿತಾಂಶಗಳು ಈ ಯೋಜನೆಯ ಫಲಾನುಭವಿ ಭತ್ತದ ಬೆಳೆಗಾರರು ಫಲಾನುಭವಿಗಳಲ್ಲದ ರೈತರಿಗಿಂತ ಶೇ.೨೦ರಷ್ಟು ಹೆಚ್ಚಿನ ಇಳುವರಿಯನ್ನೂ ಮತ್ತು ಶೇ.೪೬ರಷ್ಟು ಹೆಚ್ಚಿನ ನಿವ್ವಳ ಆದಾಯವನ್ನೂ ಪಡೆದುಕೊಂಡಿದ್ದಾರೆಂದು ತೋರಿಸಿವೆ. ಜೊತೆಗೆ ಫಲಾನುಭವಿಗಳಲ್ಲದ ರೈತರಿಗಿಂತ ಅವರಿಗೆ ಎಕರೆಯೊಂದಕ್ಕೆ ತಗುಲಿದ ಸಾಗುವಳಿ ವೆಚ್ಚವು ಶೇ.೧೮ರಷ್ಟು ಕಡಿಮೆಯಾಗಿತ್ತು. ಜೊತೆಗೆ ಫಲಾನುಭವಿ ರೈತರು ಫಲಾನುಭವಿಗಳಲ್ಲದ ರೈತರಿಗಿಂತ ಬೇಸಿಗೆ ಭತ್ತದ ಬೆಳೆಯಲ್ಲಿ ಎಕರೆವಾರು ಶೇ.೬ರಷ್ಟು ಹೆಚ್ಚಿನ ಇಳುವರಿಯನ್ನೂ ಮತ್ತು ಶೇ.೮೮ರಷ್ಟು ಹೆಚ್ಚಿನ ನಿವ್ವಳ ಆದಾಯವನ್ನೂ ಪಡೆದಿದ್ದಾರೆ. ಇದೂ ಅಲ್ಲದೆ ಫಲಾನುಭವಿಗಳಲ್ಲದ ರೈತರಿಗೆ ಹೋಲಿಸಿದರೆ ಫಲಾನುಭವಿ ರೈತರು ಬೇಸಿಗೆ ಬೆಳೆಯನ್ನು ಪ್ರತಿ ಎಕರೆಗೆ ಶೇ.೪೩ರಷ್ಟು ಕಡಿಮೆ ವೆಚ್ಚದಲ್ಲಿ ಬೆಳೆದಿದ್ದಾರೆ.

- ಲಾಜಿಸ್ಟಿಕ್ ರಿಗ್ರೆಷನ್ ಫಲಿತಾಂಶಗಳ ಪ್ರಕಾರ ಎನ್‌ಎಫ್‌ಎಸ್‌ಎಂ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆಗೆದುಕೊಂಡ ನಿರ್ಧಾರದಿಂದ ಫಲಾನುಭವಿ ರೈತರಿಗೆ ಸಾಲ ಸುಲಭವಾಗಿ ಪಡೆಯಲು ಆಯಿತು ಹಾಗೂ ಹೆಚ್ಚು ಜಮೀನನ್ನು ಸಾಗುವಳಿ ಮಾಡಲು ಸಾಧ್ಯವಾಯಿತು. ಅಲ್ಲದೆ ತಿಳುವಳಿಕೆ ಪಡೆಯಲು ಆಯಿತು ಹಾಗೂ ಕುಟುಂಬದ ಹೆಚ್ಚಿನ ಸದಸ್ಯರು ಕೃಷಿಯಲ್ಲಿ ತೊಡಗಿಕೊಳ್ಳಲು ಸಾಧ್ಯವಾಯಿತು.

## ನೀತಿ ನಿರೂಪಣೆಗಾಗಿ ಸಲಹೆಗಳು

- ಎನ್‌ಎಫ್‌ಎಸ್‌ಎಂ ಕಾರ್ಯಕ್ರಮದಲ್ಲಿ ಒದಗಿಸಲಾದ ಸೌಲಭ್ಯಗಳ ಬಗ್ಗೆ ಶೇ.೩೬ರಷ್ಟು ಫಲಾನುಭವಿಗಳಿಗೆ ಮಾತ್ರ ತಿಳುವಳಿಕೆಯಿತ್ತು. ಆದ್ದರಿಂದ ಎನ್‌ಎಫ್‌ಎಸ್‌ಎಂ ಕಾರ್ಯಕ್ರಮವನ್ನು ಜನಪ್ರಿಯಗೊಳಿಸಲು ಕೃಷಿ ಇಲಾಖೆ/ರೈತ ಸಂಪರ್ಕ ಕೇಂದ್ರಗಳು/ಕೃಷಿ ವಿಜ್ಞಾನ ಕೇಂದ್ರಗಳು/ ಗ್ರಾಮ ಪಂಚಾಯಿತಿಗಳು ವಿಶೇಷ ಪ್ರಯತ್ನಗಳನ್ನು ಮಾಡಬೇಕಾಗಿದೆ.

- ಫಲಾನುಭವಿ ರೈತರು ಹಾಗೂ ಫಲಾನುಭವಿಗಳಲ್ಲದ ರೈತರು ಬೆಳೆದ ಭತ್ತದ ಬೆಳೆಯ ಇಳುವರಿಯಲ್ಲಿ ವ್ಯಾಪಕ ಪ್ರಮಾಣದ ವ್ಯತ್ಯಾಸವು ಅಂದರೆ ಎಕರೆಗೆ ೧೦ರಿಂದ ೪೦ ಕ್ವಿಂಟಾಲ್‌ಗಳಷ್ಟು ಇಳುವರಿ ವ್ಯತ್ಯಾಸವಿದೆ. ಕೃಷಿ ಇಲಾಖೆಯು ರೈತರ ಸಾಮರ್ಥ್ಯಾಭಿವೃದ್ಧಿಯನ್ನು ಹೆಚ್ಚಿಸಿದರೆ ಈ ರೀತಿಯ ವ್ಯಾಪಕ ಇಳುವರಿ ವ್ಯತ್ಯಾಸವನ್ನು ತಗ್ಗಿಸಬಹುದಾಗಿದೆ.

- ಹೆಚ್ಚಿನ ಫಲಾನುಭವಿಗಳು ಹಾಗೂ ಫಲಾನುಭವಿಗಳಲ್ಲದ ರೈತರು ತಾವು ಬೆಳೆದ ಉತ್ಪನ್ನವನ್ನು ಖಾಸಗಿ ಕಂಪನಿಗಳಿಗಾಗಲೀ ಅಥವಾ ಖಾಸಗಿ ಗಿರಣಿಗಳಿಗಾಗಲೀ ಸ್ಪರ್ಧಾತ್ಮಕವಲ್ಲದ ಬೆಲೆಗಳಿಗೆ ಮಾರಿದ್ದಾರೆ. ಹೀಗಾಗಿ ಭತ್ತದ ಮಾರಾಟ ವ್ಯವಸ್ಥೆಯಲ್ಲಿ ಸ್ಪರ್ಧೆ ಹಾಗೂ ದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ಪರ್ಯಾಯ ಮಾರಾಟ ವ್ಯವಸ್ಥೆಗಳನ್ನು ಮಾಡಬೇಕಾಗಿದೆ.

- ಲಾಜಿಸ್ಟಿಕ್ ರಿಗ್ರೆಷನ್ ಫಲಿತಾಂಶಗಳ ಪ್ರಕಾರ ಕಡಿಮೆ ಮಟ್ಟದ ವಿದ್ಯಾಭ್ಯಾಸ ಹಾಗೂ ಕಡಿಮೆ ಹಿಡುವಳಿಯನ್ನು ಹೊಂದಿರುವ ರೈತರು

ಸಾಧಾರಣವಾಗಿ ಎನ್‌ಎಫ್‌ಎಸ್‌ಎಂ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಂದೆ ಬರುತ್ತಿಲ್ಲದೆ ಇರುವುದು ಕಂಡು ಬಂದಿದೆ. ಆದ್ದರಿಂದ ಕೃಷಿ ಇಲಾಖೆ/ಕೃಷಿ ವಿಜ್ಞಾನ ಕೇಂದ್ರಗಳು/ರೈತ ಸಂಪರ್ಕ ಕೇಂದ್ರಗಳು/ಗ್ರಾಮ ಪಂಚಾಯಿತಿಗಳು ಎನ್‌ಎಫ್‌ಎಸ್‌ಎಂ ಯೋಜನೆಯನ್ನು ಜನಪ್ರಿಯಗೊಳಿಸುವುದಕ್ಕೋಸ್ಕರ ಈ ಅಂಶಗಳ ಬಗ್ಗೆ ವಿಶೇಷ ಪ್ರಯತ್ನಗಳನ್ನು ಮಾಡಬೇಕು.

## ಕರ್ನಾಟಕದಲ್ಲಿ ಎಸ್‌ಎಸ್‌ಎ–ಆರ್‌ಟಿಇ ಉಸ್ತುವಾರಿ: ನವೆಂಬರ್ ೨೦೧೪ರಿಂದ ಮಾರ್ಚ್ ೨೦೧೫ರವರೆಗೆ

*ಡಾ. ಕೆ.ಎಸ್. ಉಮಾಮಣಿ, ಡಾ. ಎಂ. ಲಿಂಗರಾಜು ಹಾಗೂ ಡಾ. ಇಂದ್ರಜಿತ್ ಬೈರಾಗ್ಯ*

ಸಂಸ್ಥೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ (ಸಿಎಚ್‌ಆರ್‌ಡಿ)ವು ಸರ್ವ ಶಿಕ್ಷಣ ಅಭಿಯಾನ (ಎಸ್‌ಎಸ್‌ಎ)ದ ಉಸ್ತುವಾರಿಯನ್ನು ಏಳು ಜಿಲ್ಲೆಗಳಾದ ಕೋಲಾರ, ಶಿವಮೊಗ್ಗ, ಬೆಳಗಾಂ, ಬೀದರ್, ದಾವಣಗೆರೆ, ಧಾರವಾಡ ಮತ್ತು ಗದಗ ಜಿಲ್ಲೆಗಳಲ್ಲಿ ಕೈಗೊತ್ತುಕೊಂಡು ತನ್ನ ವರದಿಯಲ್ಲಿ ಕಾರ್ಯಕ್ರಮ ಅನುಷ್ಠಾನದ ವಿವಿಧ ಅಂಶಗಳನ್ನು ಪರೀಕ್ಷಿಸಿದೆ. ಈ ಪ್ರಕ್ರಿಯೆಯು ಎಸ್‌ಎಸ್‌ಎ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಉಸ್ತುವಾರಿಯ ಜವಾಬ್ದಾರಿಯನ್ನು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ನಿಬಂಧನೆಗಳ ಪ್ರಕಾರ ಮಾಡಲಾಗಿದೆ. ಈ ಉಸ್ತುವಾರಿಯಲ್ಲಿ ಕಿರಿಯ ಪ್ರಾಥಮಿಕ ಪಾಠಶಾಲೆಗಳು, ಹಿರಿಯ ಪ್ರಾಥಮಿಕ ಪಾಠಶಾಲೆಗಳು ಹಾಗೂ ಶಿಶು ವಿಹಾರಗಳು ಒಳಪಡುತ್ತವೆ ಹಾಗೂ ಸಚಿವಾಲಯದ ಮಾನದಂಡದ ಪ್ರಕಾರವೇ ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಅದರಂತೆ ಪ್ರತಿ ಜಿಲ್ಲೆಯಲ್ಲಿ ೪೦ ಶಾಲೆಗಳನ್ನು ಮಾದರಿಯಾಗಿ ಆಯ್ಕೆ ಮಾಡಿ ಅವುಗಳಲ್ಲಿನ ಕಾರ್ಯಕ್ರಮ ಅನುಷ್ಠಾನವನ್ನು ವಿಶ್ಲೇಷಿಸಲಾಗಿದೆ. ವಿಶ್ಲೇಷಣೆಯ ಮುಖ್ಯಾಂಶಗಳನ್ನು ಈ ಕೆಳಗೆ ನಿರೂಪಿಸಲಾಗಿದೆ:

**೧. ಭೌತಿಕವಾಗಿ ತಲುಪುವ ಸಾಧ್ಯತೆ:** ಎಲ್ಲಾ ಶಾಲೆಗಳಲ್ಲೂ ನೋಂದಾಯಿಸಿರುವ ಹೆಚ್ಚಿನ ವಿದ್ಯಾರ್ಥಿಗಳು ಶಾಲೆಗೆ ಹತ್ತಿರವಿರುವ ಅಕ್ಕ–ಪಕ್ಕದ ಊರಿನವರೇ ಆಗಿರುವುದರಿಂದ ಈ ಶಾಲೆಗಳಿಗೆ ಭೌತಿಕವಾಗಿ ಬಂದು ಸೇರುವ ಸಾಧ್ಯತೆಗಳು ಚೆನ್ನಾಗಿದೆ. ಬಹಳಷ್ಟು ಪೋಷಕರು ತಾವು ವಾಸಿಸುವ ಸ್ಥಳದಿಂದ ದೂರವಿದ್ದರೂ ಸಹ ಕೆಲವು ಶಾಲೆಗಳು ಶೈಕ್ಷಣಿಕವಾಗಿ ಯಶಸ್ವಿಯಾಗಿದ್ದು, ಜನಪ್ರಿಯವೂ ಆಗಿರುವುದರಿಂದ ಆ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಲು ಇಷ್ಟ ಪಡುತ್ತಾರೆ. ಇದರ ಹೊರತಾಗಿಯೂ ಕೆಲವು ಮಕ್ಕಳು ಬೇರೆ ಆಯ್ಕೆಗಳಿರದ ಕಾರಣ ಈ ಶಾಲೆಗಳಿಗೆ ಬಹಳ ದೂರ ಅಂದರೆ ಮೂರರಿಂದ ಐದು ಕಿಲೋಮೀಟರ್‌ಗಳವರೆಗೆ ನಡೆದು ಬರುತ್ತಿರುವುದು ಸಹ ಕಂಡುಬಂದಿದೆ.

**೨. ಶಾಲೆಗಳ ಗುಣಮಟ್ಟ:** ಬಹಳಷ್ಟು ಶಾಲೆಗಳಲ್ಲಿ ಅಗತ್ಯಕ್ಕೆ ತಕ್ಕಷ್ಟು ಪಾಠದ ಕೊಠಡಿಗಳಿವೆ. ಮಾದರಿಗಳಾಗಿ ಆಯ್ಕೆ ಮಾಡಿರುವ ಬಹುತೇಕ ಶಾಲೆಗಳಲ್ಲಿ ಕೆಲವು ಅಪವಾದಗಳನ್ನು ಬಿಟ್ಟು, ಪಾಠದ ಕೊಠಡಿಗಳ ಸರಾಸರಿ ಅನುಪಾತ ಹಾಗೂ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪಾಠದ ಕೊಠಡಿಗಳ ಅನುಪಾತ ತೃಪ್ತಿಕರವಾಗಿಯೇ ಇದೆ. ಪಠ್ಯ ಪುಸ್ತಕಗಳನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಬಹಳಷ್ಟು ಶಾಲೆಗಳಲ್ಲಿ ನೀಡಲಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಮಾತ್ರ ವಿಳಂಬವಾಗಿ ಅಥವಾ ತಡವಾಗಿ ನೀಡಲಾಗುತ್ತಿದೆ. ಕೆಲವು ಶಾಲೆಗಳಲ್ಲಿ ಪಾಠಕ್ಕೆ ಉಪಯೋಗಿಸುವ ಕಪ್ಪು ಹಲಗೆಯ ಗುಣಮಟ್ಟ ಸಾಧಾರಣ ಅಥವಾ ಕಳಪೆಯಾಗಿತ್ತು. ಹಲಗೆಗೆ ಬಳಿದ ಬಣ್ಣದ ಗುಣಮಟ್ಟ ಇದಕ್ಕೆ ಕಾರಣವಾಗಿದ್ದಿರಬಹುದು ಅಥವಾ ನಿರ್ವಹಣೆಯಲ್ಲಿನ ಸಮಸ್ಯೆ ಇದ್ದಿರಬಹುದು. ಬಹುತೇಕ ಎಲ್ಲ ಶಾಲೆಗಳಲ್ಲೂ ದಿನಪತ್ರಿಕೆಗಳು ಹಾಗೂ ಗ್ರಂಥಗಳಿಂದ ಒಡಗೂಡಿದ ಗ್ರಂಥಾಲಯ ಇತ್ತು. ಆದರೆ ಕೆಲವೇ ಶಾಲೆಗಳು ಮಾತ್ರ ಆಟದ ಮೈದಾನದ ಸೌಲಭ್ಯವನ್ನು ಹೊಂದಿದ್ದವು. ಹೆಚ್ಚಿನ ಶಾಲೆಗಳು ತಮ್ಮ ಪ್ರಾಂಗಣದಲ್ಲಿ ನೀರಿನ ಸೌಕರ್ಯವನ್ನು ಹೊಂದಿದ್ದವು. ಎಲ್ಲಾ ಶಾಲೆಗಳೂ ಪ್ರತ್ಯೇಕವಾದ ಶೌಚಾಲಯವನ್ನು ಹೊಂದಿದ್ದವು ಮತ್ತು ಹುಡುಗರಿಗೆ, ಹುಡುಗಿಯರಿಗೆ ಹಾಗೂ ಉಪಾಧ್ಯಾಯರಿಗೆ ಬೇರೆ ಬೇರೆ ಶೌಚಾಲಯಗಳನ್ನು ಇರಿಸುವ ಪ್ರಯತ್ನವೂ ನಡೆದಿತ್ತು. ಕೆಲವು ಶಾಲೆಗಳು "ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ (ಸಿಡಬ್ಲ್ಯುಎಸ್‌ಎನ್)"ಯೇ ಶೌಚಾಲಯವನ್ನು ನಿರ್ಮಿಸಿದ್ದವು.

**೩. ಸಾಮಾಜಿಕವಾಗಿ ತಲುಪುವಿಕೆ:** ಎಲ್ಲ ೧೫ ಜಿಲ್ಲೆಗಳಲ್ಲೂ ನೋಂದಾಯಿಸಿದ ವಿದ್ಯಾರ್ಥಿಗಳ ಲಿಂಗ ಪ್ರಭೇಧವನ್ನು ಗಮನಿಸಿದಾಗ, ಹುಡುಗರಿಗಿಂತ ಹುಡುಗಿಯರೇ ಹೆಚ್ಚಾಗಿದ್ದುದು ಕಂಡು ಬಂದಿತು. ಬಹುತೇಕ ವಿದ್ಯಾರ್ಥಿಗಳು ವಿವಿಧ ಸಾಮಾಜಿಕ ಸ್ತರಗಳಿಂದ ಅಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು, ಅಲ್ಪ ಸಂಖ್ಯಾತರನ್ನೊಳಗೊಂಡಂತೆ ಎಲ್ಲ ಜಾತಿಗಳಿಂದಲೂ ಬಂದಿದ್ದರು. ಉಸ್ತುವಾರಿ ತಂಡವು ಜಾತಿ ಅಥವಾ ಲಿಂಗ ಪ್ರಭೇಧಗಳ ಆಧಾರದ ಮೇಲೆ ಯಾವುದೇ ಪಕ್ಷಪಾತವೂ ಆಗುತ್ತಿಲ್ಲದೆ ಇದ್ದುದನ್ನು ಗಮನಿಸಿತು. ಆದರೂ ಸಹ ಹುಡುಗರು ಮತ್ತು ಹುಡುಗಿಯರು ಪ್ರತ್ಯೇಕವಾಗಿ ಕುಳಿತುಕೊಳ್ಳುವುದು ಮತ್ತು ಆಟವಾಡುವ ಕೆಲವು ಪ್ರಸಂಗಗಳೂ ಕಾಣಬಂತು. ಹಾಜರಾತಿ ಸ್ವರೂಪದಿಂದ ಯಾವುದೇ ನಿರ್ದಿಷ್ಟ ಸಾಮಾಜಿಕ ವರ್ಗವು ಅತ್ಯಂತ ವಿಭಿನ್ನ ರೀತಿಯಲ್ಲಿ ನಡೆದುಕೊಂಡದ್ದು ಕಂಡು ಬರಲಿಲ್ಲ.

**೪. ಸದೃಢಗೊಳಿಸುವ ಪರಿಸ್ಥಿತಿ:** ಶಾಲಾ ಶಿಕ್ಷಣದ ಗುಣಮಟ್ಟವು ಮೂಲಭೂತವಾಗಿ ಉಪಾಧ್ಯಾಯರು, ಅವರು ನೀಡುವ ತರಬೇತಿ ಹಾಗೂ ಅಗತ್ಯ ಅನುದಾನದ ಮೇಲೆ ನಿಂತಿದೆ. ಇಲಾಖೆಯು ಎಲ್ಲಾ ಶಾಲೆಗಳಲ್ಲೂ ಎಲ್ಲಾ ಪಠ್ಯ ವಿಷಯಗಳಿಗೂ ಉಪಾಧ್ಯಾಯರನ್ನು ನೇಮಿಸಲು ಪ್ರಯತ್ನಿಸುತ್ತದಾದರೂ, ಎಲ್ಲಾ ಜಿಲ್ಲೆಗಳಲ್ಲಿಯೂ ಕೆಲವು ಖಾಲಿ ಹುದ್ದೆಗಳು ಕಂಡುಬಂದವು. ಗುಣಮಟ್ಟವನ್ನು ಸಾಧಿಸಲು ಉಪಾಧ್ಯಾಯರಿಗೆ

# ಐಸೆಕ್



ವೃತ್ತಿಯಲ್ಲಿನ ತರಬೇತಿಗಳು ಹಾಗೂ ವಾರ್ಷಿಕ ತರಬೇತಿಗಳನ್ನು ನೀಡಲಾಗುತ್ತದೆ. ಜಿಲ್ಲೆಗೆ ನೀಡಿದ ಅನುದಾನದ ಆಧಾರದ ಮೇಲೆ ಎಲ್ಲಾ ಶಾಲೆಗಳಿಗೂ ಸಹ ವಾರ್ಷಿಕ ಅನುದಾನವನ್ನು ಮತ್ತು ವಿಶೇಷ ಅನುದಾನವನ್ನು ಒದಗಿಸಲಾಗುತ್ತದೆ.

**೫. ಬೋಧನೆ – ಕಲಿಯುವಿಕೆ ವಿಧಾನ:** ಬೋಧನಾ ಸ್ವರೂಪವನ್ನು ಹಾಗೂ ದಿನನಿತ್ಯದ ಬೋಧನೆಯಲ್ಲಿ ಸಕಾರಾತ್ಮಕತೆಯ ಅಸ್ತಿತ್ವವು ಇದೆಯೇ ಎಂಬುದನ್ನು ಪರೀಕ್ಷಿಸುವುದೂ ಸಹ ಉಸ್ತುವಾರಿಯ ಒಂದು ಅಂಶವಾಗಿತ್ತು. ಹೆಚ್ಚಿನ ಶಿಕ್ಷಕರು ಸಕಾರಾತ್ಮಕ ವಿಧಾನದ ಬಗ್ಗೆ ಸೈದ್ಧಾಂತಿಕವಾಗಿ ಸ್ಪಷ್ಟತೆಯನ್ನು ಹೊಂದಿರಲಿಲ್ಲ. ಆದರೂ ಸಹ, ಹೆಚ್ಚಿನ ಶಿಕ್ಷಕರು ಪ್ರಜ್ಞಾವಂತರಾಗಿದ್ದುದಲ್ಲದೆ, ವಿದ್ಯಾರ್ಥಿ ಕೇಂದ್ರಿತ ಬೋಧನಾ ವಿಧಾನವನ್ನು ಅನುಸರಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಸ್ವಾಯತ್ತತೆಯನ್ನು ನೀಡುವ ಪ್ರಯತ್ನವನ್ನೂ ಮತ್ತು ಅವರಿಂದ ಭಾಗವಹಿಸುವಿಕೆಯನ್ನು ನಿರೀಕ್ಷಿಸುವ ಕೆಲವು ಪ್ರಯತ್ನಗಳೂ ಕಂಡು ಬಂದವು. ಶಿಕ್ಷಣದ ಸೌಲಭ್ಯಗಳನ್ನು ಸಿಡಬ್ಲ್ಯುಎನ್‌ಎಸ್‌ಗೆ ವಿಸ್ತರಿಸುವ ಪ್ರಯತ್ನಗಳೂ ಆಗಿವೆ.

**೬. ಕಂಪ್ಯೂಟರ್ ನೆರವಿನಿಂದ ಕಲಿಯುವಿಕೆ (ಸಿಎಎಲ್):** ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸುವ ಮೂಲಕ ಶಿಕ್ಷಣವನ್ನು ಆಧುನೀಕರಿಸಲಾಗಿದೆ. ಸಿಎಎಲ್ ಸಂಪನ್ಮೂಲ ಸಾಮಗ್ರಿಯನ್ನು ಶಾಲೆಗಳಿಗೆ ಹಂತ ಹಂತವಾಗಿ ಒದಗಿಸಲಾಗುತ್ತಿದೆ. ಇದರ ಒಂದು ವಿಧಾನವೆಂದರೆ ಎಸ್‌ಎಸ್‌ಎ ಯೋಜನೆಯ ಮೂಲಕ ಹಾಗೂ ಇತರ ಮೂಲಗಳ ಮೂಲಕ ಅನುದಾನ ನೀಡುವಿಕೆ. ಬಹಳಷ್ಟು ಶಾಲೆಗಳು ಕೇವಲ ಕಂಪ್ಯೂಟರ್‌ಗಳನ್ನು ಶೇಖರಿಸಿಕೊಳ್ಳುವುದಷ್ಟೇ ಮಾಡದೆ, ಅವುಗಳ ಮೂಲಕ ಬೋಧನೆ ಮತ್ತು ಕಲಿಯುವಿಕೆಯನ್ನೂ ಸಾಧ್ಯವಾಗಿಸುತ್ತಿದ್ದಾರೆ. ಬಹಳಷ್ಟು ಬೋಧಕರನ್ನು ಸಿಎಎಲ್ ಸಂಪನ್ಮೂಲಗಳನ್ನು ಬಳಸುವ ಬಗ್ಗೆ ಮತ್ತು ಕಂಪ್ಯೂಟರ್‌ನ ಮೂಲಭೂತ ತಿಳುವಳಿಕೆಯ ಬಗ್ಗೆ ತರಬೇತುಗೊಳಿಸಲಾಗಿದೆ.

**೭. ಬಾಲಕಿಯರ ಶಿಕ್ಷಣ:** ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಬಾಲಕಿಯರಿಗೆ ಶಿಕ್ಷಣ ದೊರಕಿಸುವ ಕಾರ್ಯವು ಆದ್ಯ ಕಾರ್ಯಗಳಲ್ಲೊಂದಾಗಿದೆ. ಈ ಗುರಿಯನ್ನು ಎಸ್‌ಎಸ್‌ಎ ರಭಸವಾಗಿ ತಲುಪುತ್ತಿದೆ. ಶಾಲೆಗಳಿಗೆ ಬಾಲಕಿಯರನ್ನು ನೋಂದಾಯಿಸುವ ಕಾರ್ಯವು ತೃಪ್ತಿಕರವಾಗಿದ್ದು, ಎಲ್ಲಾ ಜಿಲ್ಲೆಗಳಲ್ಲೂ ಬಾಲಕರಿಗಿಂತ ಬಾಲಕಿಯರ ನೋಂದಾವಣೆ ಅನುಪಾತವು ಹೆಚ್ಚಿರುವುದು ಕಂಡು ಬಂದಿದೆ. ಬಹಳಷ್ಟು ಪೋಷಕರು ತಮ್ಮ ಗಂಡು ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಸೇರಿಸಲು ಇಷ್ಟ ಪಡುತ್ತಾರೆ ಹಾಗೂ ಸರ್ಕಾರಿ ಶಾಲೆಗಳ ಶಿಕ್ಷಣ ಅಗ್ಗವಾದುದರಿಂದ ತಮ್ಮ ಹೆಣ್ಣು ಮಕ್ಕಳನ್ನು ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳಿಗೆ ಸೇರಿಸುವ ಪ್ರವೃತ್ತಿಯು ಇದಕ್ಕೆ ಭಾಗಶ: ಕಾರಣವಾಗಿರಬಹುದಾಗಿದೆ.

**೮. ಕಾಮಗಾರಿಗಳು:** ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವ ಹಾಗೂ ಶಾಲಾ ಆವರಣವನ್ನು ಉತ್ತಮ ಪಡಿಸುವ ಪ್ರಯತ್ನಗಳು ನಡೆದಿವೆ. ಆಯ್ದ ಶಾಲೆಗಳಿಗೆ ಪಾಠದ ಕೊಠಡಿಗಳನ್ನು ಮಧ್ಯಾಹ್ನದ ಊಟಕ್ಕಾಗಿ ಅಡಿಗೆ ಮನೆಯನ್ನು, ಶೌಚಾಲಯಗಳನ್ನು ಹಾಗೂ ಇತರೆ ಅಗತ್ಯತೆಗಳನ್ನು ನಿರ್ಮಿಸಲು ಅನುದಾನವನ್ನು ನೀಡಲಾಗುತ್ತಿದೆ. ಎಲ್ಲಾ ಜಿಲ್ಲೆಗಳೂ ಸಹ ಇದರ ಸೌಲಭ್ಯವನ್ನು ಪಡೆದುಕೊಳ್ಳುತ್ತಿವೆ.

**೯. ಸಮುದಾಯ ಜಾಗೃತೀಕರಣ:** ಶಾಲೆಗಳ ಪ್ರಗತಿಗಾಗಿ ಎಸ್‌ಎಂಸಿ ಹಾಗೂ ಅದರ ಸದಸ್ಯರ ಭಾಗವಹಿಸುವಿಕೆಯನ್ನು ಸಲಹೆ ಮಾಡಲಾಗಿದೆ. ಎಲ್ಲಾ ಶಾಲೆಗಳೂ ಸಹ ತಮ್ಮ ಶಾಲೆಗಳಲ್ಲಿ ನೋಂದಣಿ ಆಗಿರುವ ವಿದ್ಯಾರ್ಥಿಗಳ ಪೋಷಕರನ್ನು ಒಳಗೊಂಡಂತಹ ಸಮಿತಿಗಳನ್ನು ರಚಿಸಬೇಕೆಂದು ಅಧಿಕೃತವಾಗಿ ನಿರೀಕ್ಷಿಸಲಾಗಿದೆ. ಇದನ್ನು ಸಮುದಾಯ ಭಾಗವಹಿಸುವಿಕೆ ಹಾಗೂ ಒಳಗೊಳ್ಳುವಿಕೆಯನ್ನು ದೃಢ ಪಡಿಸಿಕೊಳ್ಳುವ ಒಂದು ನಿರ್ಣಾಯಕ ಕ್ರಮವೆಂದು ಭಾವಿಸಲಾಗಿದೆ.

## ದಾವಣಗೆರೆಯ ಜಿಲ್ಲಾ ಮಾನವ ಅಭಿವೃದ್ಧಿ ವರದಿ

**ಪ್ರೊ. ಎನ್.ಶಿವಣ್ಣ**

"ಅಭಿವೃದ್ಧಿ" ಮತ್ತು "ಮಾನವ ಅಭಿವೃದ್ಧಿ" ವಿಧಾನಗಳನ್ನು ಅರಿತುಕೊಳ್ಳುವುದಕ್ಕೆ ಸಾಕಷ್ಟು ಕಾಲ ಸರಿದಿದೆ. ಪ್ರಸ್ತುತದಲ್ಲಿ ಅಭಿವೃದ್ಧಿಯ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕೆಂದರೆ ಲಿಂಗ ಪ್ರಭೇಧದಲ್ಲಿನ ಅಸಮತೋಲನ, ಅಸಮಾನತೆಗಳು, ಆರ್ಥಿಕ ದುರ್ಬಲತೆ, ಸಾಮಾಜಿಕ ದುರ್ಬಲತೆ ಇತ್ಯಾದಿಗಳ ಮಟ್ಟವನ್ನು ಅಳೆದು ಹೇಳುವಂತಹದ್ದಾಗಿದೆ. ಆದ್ದರಿಂದ ಮಾನವ ಅಭಿವೃದ್ಧಿ ಎಂಬ ಸಿದ್ಧಾಂತವು ಸಾಂಪ್ರದಾಯಿಕ ಆರ್ಥಿಕ ಅಭಿವೃದ್ಧಿಗಿಂತಲೂ ಮುಂದೆ ಹೋಗಿ ನಾಗರಿಕರ ಕಲ್ಯಾಣವೃದ್ಧಿಯ ಸೂಚಿಯಾಗಿದೆ. ಈ ಅರ್ಥದ ಹಿನ್ನೆಲೆಯಲ್ಲಿ ದಾವಣಗೆರೆಯ ಜಿಲ್ಲಾ ಮಾನವ ಅಭಿವೃದ್ಧಿ ವರದಿಯನ್ನು (ಡಿಎಚ್‌ಡಿಆರ್) ಸಿದ್ಧಪಡಿಸುವಾಗ ಮಾನವ ಅಭಿವೃದ್ಧಿ ಸೂಚ್ಯಂಕ(ಎಚ್‌ಡಿಐ)ವೊಂದನ್ನು ಜಿಲ್ಲಾ ಮಟ್ಟದಲ್ಲಿ ಮತ್ತು ಕೆಳಗಿನ ಮಟ್ಟಗಳಲ್ಲಿ ಅಂದಾಜು ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಇದಕ್ಕಾಗಿ ಮೂರು ಆಯಾಮಗಳನ್ನು ಬಳಸಲಾಗಿದೆ: ಜೀವನ ಮಟ್ಟ, ಆರೋಗ್ಯ ಹಾಗೂ ಶಿಕ್ಷಣ – ಮಾನವ ಅಭಿವೃದ್ಧಿಯಲ್ಲಿ ಕೆಲವು ಬದಲಾವಣೆಗಳನ್ನು ಪ್ರತಿಬಿಂಬಿಸುವುದಕ್ಕಾಗಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಎಚ್‌ಡಿಐ ಸೂಚ್ಯಂಕವನ್ನು ಸಿದ್ಧಪಡಿಸುವುದಕ್ಕಾಗಿ ೧೧ ಅಂಶಗಳನ್ನು ಬಳಸಲಾಗಿದೆ.

# ಐಸೆಕ್

ಈ ಜಿಲ್ಲೆಯು ಎಚ್‌ಡಿಐ ಸೂಚ್ಯಂಕ (೦.೫೨೮)ದ ಪ್ರಕಾರ ಅಷ್ಟೇನೂ ಚೆನ್ನಾದ ಅಭಿವೃದ್ಧಿಯನ್ನು ಹೊಂದಿಲ್ಲ. ಅನೇಕ ಮುಖ್ಯ ಎಚ್‌ಡಿಐ ಅಂಶಗಳಲ್ಲಿ ಪ್ರಗತಿ ಕಂಡಿಲ್ಲ. ವ್ಯಕ್ತಿಗತ ತಲಾ ಆದಾಯ, ನೀರಿನ ಸೌಲಭ್ಯ, ವಿದ್ಯುಚ್ಛಕ್ತಿ ಸೌಲಭ್ಯ ಇತ್ಯಾದಿಗಳು ದೊರಕಿರುವಿಕೆ, ಸಾಕ್ಷರತಾ ಪ್ರಮಾಣ ಹೆಚ್ಚಾಗಿರುವಿಕೆ, ಜಿಇಆರ್ ಹೆಚ್ಚಾಗಿರುವಿಕೆ ಇವುಗಳಲ್ಲಿ ಉತ್ತಮ ಪ್ರಗತಿ ತೋರಿಸಿದೆ. ಜಿಲ್ಲೆಯ ಎಚ್‌ಡಿಐನಲ್ಲಿನ ೧೧ ಅಂಶಗಳ ಪೈಕಿ ೬ ಅಂಶಗಳಲ್ಲಿ ಮೇಲ್ನೋಟಕ್ಕೆ ಕಡಿಮೆ ಪ್ರಗತಿ ಆಗಿದೆ: (೧) ಆಧುನಿಕ ಇಂಧನ ಬಳಕೆ (ರಾಜ್ಯದ ಗರಿಷ್ಠ ಶೇ.೭೬.೩ ಕ್ಕೆ ಪ್ರತಿಯಾಗಿ ಶೇ ೨೬), (೨) ಶೌಚಾಲಯ ಬಳಕೆ (೪೬/೯೫), (೩) ಗಟ್ಟಿಯಾಗಿ ಕಟ್ಟಿದ ಪಕ್ಕಾ ಮನೆ ದೊರಕುವಿಕೆ (೫೩/೮೮), (೪) ಒಟ್ಟಾರೆ ಕಾರ್ಮಿಕರ ಪೈಕಿ ಕೃಷಿಯೇತರ ಕಾರ್ಮಿಕರು (೪೦/೯೫), (೫) ಸಿಎಂಆರ್ (ರಾಜ್ಯದ ಕನಿಷ್ಠ ೧೧.೭ಕ್ಕೆ ಪ್ರತಿಯಾಗಿ ೪೪), (೬) ಎಂಎಂಆರ್ (ರಾಜ್ಯದ ಕನಿಷ್ಠ ೪೫ಕ್ಕೆ ಪ್ರತಿಯಾಗಿ ೧೬೩). ತಾಲ್ಲೂಕು ಮಟ್ಟದಲ್ಲಿ ದಾವಣಗೆರೆ ತಾಲ್ಲೂಕು ೦.೯೯೧ ಎಚ್‌ಡಿಐ ಸೂಚ್ಯಂಕದೊಂದಿಗೆ ಮುಂದಿದ್ದು, ನಂತರದ ಸ್ಥಾನಗಳಲ್ಲಿ ಹರಿಹರ (೦.೬೦೦) ಹಾಗೂ ಹೊನ್ನಾಳಿ (೦.೫೭೫)ಗಳಿವೆ. ಆದರೆ ಜಿಲ್ಲಾಮಟ್ಟಕ್ಕೆ ಹೋಲಿಸಿದರೆ ಹರಪನಹಳ್ಳಿ (೦.೨೧೮) ಹಾಗೂ ಜಗಳೂರು (೦.೪೧೮) ತಾಲ್ಲೂಕುಗಳು ಕಡಿಮೆ ಸೂಚ್ಯಂಕವನ್ನು ಹೊಂದಿವೆ. ದಾವಣಗೆರೆ ಜಿಲ್ಲೆ ಮಾನವ ಅಭಿವೃದ್ಧಿ ಮಟ್ಟವು ಅಷ್ಟೇನೂ ತೃಪ್ತಿಕರವಾಗಿಲ್ಲ ಹಾಗೂ ಕೆಲವು ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಬೇಕಾಗಿದೆ.

ಒಟ್ಟಾರೆ ಹೇಳುವುದಾದರೆ ದಾವಣಗೆರೆ ಜಿಲ್ಲೆಯು ಮಾನವ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಕೆಲವು ಅಂಶಗಳಲ್ಲಿ ಸಾಕಷ್ಟು ಉತ್ತಮ ಪ್ರಗತಿಯನ್ನು ಸಾಧಿಸಿದೆ. ಅವೆಂದರೆ ಶೈಕ್ಷಣಿಕ ಪ್ರಗತಿ ಹಾಗೂ ಜೀವನ ಮಟ್ಟಕ್ಕೆ ಸಂಬಂಧಿಸಿದ ಕೆಲವು ಅಂಶಗಳು. ಆರೋಗ್ಯ ಪರಿಸ್ಥಿತಿ ಸುಧಾರಿಸಲು ಇನ್ನೂ ಉತ್ತಮ ಪ್ರಯತ್ನಗಳನ್ನು ಮಾಡಬೇಕಾಗಿದೆ. ದಾವಣಗೆರೆಯು ಒಂದು ಪ್ರಮುಖ ಜಿಲ್ಲೆಯಾಗಿರುವುದರಿಂದಲೂ ಹಾಗೂ ಸಾಕಷ್ಟು ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿರುವುದರಿಂದಲೂ, ಬಹಳಷ್ಟು ಉತ್ತಮ ಕಾರ್ಯದಕ್ಷತೆ ಹೊಂದಬೇಕಾಗಿದೆ ಹಾಗೂ ದೂರದೃಷ್ಟಿತ್ವ ಇರಬೇಕಾಗಿದೆ. ಹೀಗಾದಾಗ ಮುಂಬರುವ ವರ್ಷಗಳಲ್ಲಿ ಮಾನವ ಅಭಿವೃದ್ಧಿಯಲ್ಲಿ ಪರಿಣಾಮಕಾರಿ ಸುಧಾರಣೆಗಳನ್ನು ಕಾಣಬಹುದಲ್ಲದೆ ರಾಜ್ಯದ ಇತರೆ ಜಿಲ್ಲೆಗಳ ಪೈಕಿ ತನ್ನ ಸ್ಥಾನವನ್ನು ಉತ್ತಮ ಪಡಿಸಿಕೊಳ್ಳಲೂ ಬಹುದಾಗಿದೆ. ಈ ಅಧ್ಯಯನವು ಇದಕ್ಕಾಗಿ ಒಂದು ಸಮಗ್ರ ಮಾನವ ಅಭಿವೃದ್ಧಿ ಕಾರ್ಯಕ್ರಮವನ್ನು ಅಂದರೆ ಅಲ್ಪಾವಧಿ ಹಾಗೂ ದೀರ್ಘಾವಧಿ ಕಾರ್ಯತಂತ್ರಗಳನ್ನೊಳಗೊಂಡ ಕಾರ್ಯಕ್ರಮವನ್ನು ರೂಪಿಸಲು ಶಿಫಾರಸ್ಸು ಮಾಡಿದೆ. ಈ ಕಾರ್ಯಕ್ರಮವು ಮೇಲಿನ ಮಟ್ಟದಿಂದ ಕೆಳಗಿನ ಮಟ್ಟಕ್ಕೆ ಬಂದದ್ದಾಗಿರದೆ ಗ್ರಾಮ ಪಂಚಾಯಿತಿ ಮಟ್ಟದಿಂದ ಆಗಬೇಕಾಗಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇರುವಂತಹ ತಾರತಮ್ಯಗಳು ಹಾಗೂ ಬೇಕಾದ ಅಗತ್ಯಗಳನ್ನೊಳಗೊಂಡ ಸಮಗ್ರ ದೃಷ್ಟಿ ಹಾಗೂ ಯೋಜನೆಗಳನ್ನು ಹೊಂದಿರತಕ್ಕಂತಹ ಮಾನವ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನವಾಗಬೇಕಾಗಿದೆ. ಇದು ಹೆಚ್ಚೂ ಕಡಿಮೆ ತಳಮಟ್ಟದ ಯೋಜನಾ ವಿಧಾನವಾಗಬೇಕಾಗಿದೆ. ಹಾಗಾದಾಗ ಅದು ಹೆಚ್ಚು ದಕ್ಷತೆಯಿಂದ ಕೂಡಿರುವುದಲ್ಲದೆ ಫಲಿತಾಂಶ ತರುವುದಕ್ಕೆ ಸಹಕಾರಿಯಾಗುತ್ತದೆ. ಗ್ರಾಮ ಮಟ್ಟದಲ್ಲಿ ನೀರು, ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಹಾಗೂ ಇತರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಇವುಗಳಲ್ಲಿನ ಸ್ವಾವಲಂಬನೆ ಆಗಬೇಕಾಗಿದೆ. ಸಹಾಯಧನ ನೀಡುವ ನೀತಿಯಿಂದಲೇ ಬಡತನವನ್ನು ನಿರ್ಮೂಲಗೊಳಿಸಬಹುದೆಂಬ ಭಾವನೆಯನ್ನು ಬಿಡಬೇಕಾಗಿದೆ.

ಅನುದಾನದ ಶೀಘ್ರ ಬಿಡುಗಡೆ, ಸಮುದಾಯದ ಭಾಗವಹಿಸುವಿಕೆ, ಪಾರದರ್ಶಕತೆ ಇತ್ಯಾದಿಗಳ ಕಾರ್ಯವಿಧಾನದಲ್ಲಿ "ಹೊಣೆಗಾರಿಕೆ"ಯನ್ನು ನಿಗದಿ ಪಡಿಸುವಲ್ಲಿ ನೀತಿ ನಿರೂಪಕರು ಗಮನ ಹರಿಸಬೇಕಾದುದು ಇನ್ನೊಂದು ಮುಖ್ಯ ಅಂಶವಾಗಿದೆ. ಶೈಕ್ಷಣಿಕ ವಲಯವನ್ನು ಹೆಚ್ಚು ಅಭಿವೃದ್ಧಿ ಮುಖಿಯಾಗಿಸಬೇಕಾಗಿದೆ ಹಾಗೂ ಎಸ್‌ಡಿಎಂಸಿಗಳನ್ನು ಸುತ್ತುವರಿದಿರುವ ರಾಜಕೀಯದಿಂದ ದೂರವಿರಿಸಬೇಕಾಗಿದೆ. ವೈದ್ಯಕೀಯ ಸೌಲಭ್ಯಗಳನ್ನು ಮತ್ತು ಉತ್ತಮ ಗುಣಮಟ್ಟದ ಸೇವೆಯನ್ನು ಪಡೆಯಲು ವೈದ್ಯಕೀಯ ವಲಯದಲ್ಲಿ ಖಾಸಗಿಯವರ ಪ್ರವೇಶವನ್ನು ಹೆಚ್ಚಿಸಬೇಕಾಗಿದೆ. ಜೊತೆಗೆ ಈ ಕ್ಷೇತ್ರದಲ್ಲಿನ ಆಗುಹೋಗುಗಳಿಗೆ ವೈದ್ಯಕೀಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕಾಗಿದೆ ಹಾಗೂ ಎಲ್ಲಾ ಮಟ್ಟದಲ್ಲೂ ಅಗತ್ಯವಾದಷ್ಟು ಸಿಬ್ಬಂದಿ ಉತ್ತರದಾಯಿಗಳನ್ನಾಗಿ ಇರುವಂತೆ ಮಾಡಿ ಸೌಲಭ್ಯಗಳು ಉಪಯೋಗಿಸಲು ಸಿದ್ಧವಾಗಿ ಸಿಗುವಂತೆ ಮಾಡಬೇಕು.

## ಶಾಲಾ ಮಟ್ಟದಲ್ಲಿ ಪರಿಸರ ಶಿಕ್ಷಣದ (ಇಇ) ಸ್ಥಿತಿಗತಿಗಳು: ಬೆಂಗಳೂರಿನ ಹೆಬ್ಬಾಳ ಸಮುಚ್ಚಯದ ಒಂದು ಪ್ರಕರಣ

*ಡಾ. ಕೆ.ಎಸ್.ಉಮಾಮಣಿ*

ಜಾಗತಿಕ, ಪ್ರಾದೇಶಿಕ ಹಾಗೂ ಸ್ಥಳೀಯ ಮಟ್ಟದಲ್ಲಿ ಗಮನಿಸುವುದಾದರೆ ಇತ್ತೀಚೆಗೆ ಹೆಚ್ಚಿರುವ ಮನುಷ್ಯರ ಅನವಶ್ಯಕ ಚಟುವಟಿಕೆಗಳು ಪರಿಸರವನ್ನು ವಿವಿಧ ಮಟ್ಟಗಳಲ್ಲಿ ಹಾಗೂ ವಿವಿಧ ರೀತಿಯಲ್ಲಿ ಹದಗೆಡಿಸುತ್ತಿವೆ – ಈ ನಿಟ್ಟಿನಲ್ಲಿ ಪರಿಸರ ಶಿಕ್ಷಣ(ಇಇ)ವನ್ನು ಅಗತ್ಯವಾಗಿ ನೀಡುವುದರ ಮೂಲಕ ಸುಸ್ಥಿರ ಪರಿಸರದ ಮಹತ್ವದ ಬಗ್ಗೆ ಅಗತ್ಯ ತಿಳುವಳಿಕೆಯಿಂದ ನಾಗರಿಕರನ್ನು ಸಬಲೀಕರಿಸುವುದರ ಮೂಲಕ ಪರಿಸರ ಸುಸ್ಥಿರತೆಯನ್ನು ಸಾಧಿಸಬಹುದಾಗಿದೆ. ಪರಿಸರವನ್ನು ನಿರ್ವಹಿಸಲು ಅಗತ್ಯವಾದ ಪರಿಣಾಮಕಾರಿ ಕಾರ್ಯನೀತಿ ಚೌಕಟ್ಟಾಗಲು ಸುಭದ್ರ ಶಾಸನದಿಂದೊಡಗೂಡಿದ ಪರಿಸರ ಶಿಕ್ಷಣವು ಮುಖ್ಯ ಅಂಶವಾಗುತ್ತದೆ. ಆದ್ದರಿಂದ ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲೇ ಅವುಗಳ ಮನಸ್ಸು ಕಲಿಯುವುದಕ್ಕೆ ಮತ್ತು ಜ್ಞಾನವನ್ನು ಅರಗಿಸಿಕೊಳ್ಳುವುದಕ್ಕೆ ಮುಕ್ತವಾಗಿದ್ದಾಗ, ಪರಿಸರದ ಮೌಲ್ಯಗಳನ್ನು ಬೇರೂರಿಸುವುದು ಬಹಳ ಮುಖ್ಯವಾಗುತ್ತದೆ.

# ಐಸೆಕ್



ಈ ಹಿನ್ನೆಲೆಯಲ್ಲಿ ಪ್ರಸಕ್ತ ಅಧ್ಯಯನವು ಬೆಂಗಳೂರು ನಗರ ಕ್ಷೇತ್ರದ ಒಂದು ಸಮುಚ್ಚಯದಲ್ಲಿ ಶಾಲಾ ಮಟ್ಟದಲ್ಲಿನ ಪರಿಸರ ಶಿಕ್ಷಣದ ಸ್ಥಿತಿಗತಿಗಳನ್ನು ಅನ್ವೇಷಿಸುತ್ತದೆ. ಅಧ್ಯಯನದ ಉದ್ದೇಶಗಳು ಈ ರೀತಿ ಇವೆ:

- ಕರ್ನಾಟಕ ರಾಜ್ಯವು ಶಾಲಾ ಪಠ್ಯದಲ್ಲಿ ಪರಿಸರ ಶಿಕ್ಷಣವನ್ನು ಸೇರಿಸಲು ಯಾವ ರೀತಿಯ ಪ್ರಯತ್ನ ಮಾಡಿದೆ ಹಾಗೂ ಸೇವಾ ನಿರತ ಉಪಾಧ್ಯಾಯರಿಗೆ ಪರಿಸರ ಶಿಕ್ಷಣ ತರಬೇತಿ ನೀಡಲು ರೂಪಿಸಲಾದ ತರಬೇತಿ ನಮೂನೆಗಳ ವಿಧಗಳನ್ನು ಅರಿತುಕೊಳ್ಳುವುದು.
- ಬೆಂಗಳೂರಿನ ಆಯ್ದ ಶಾಲೆಗಳಲ್ಲಿ ಪರಿಸರ ಶಿಕ್ಷಣವನ್ನು ಯಾವ ರೀತಿ ನೀಡಲಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದು – ಅಂದರೆ ಪಠ್ಯದಲ್ಲಿ ಅದನ್ನು ಯಾವ ಪ್ರಮಾಣದಲ್ಲಿ ಸೇರಿಸಲಾಗಿದೆ, ವೇಳಾಪಟ್ಟಿ, ಪರಿಸರ ಶಿಕ್ಷಣಕ್ಕಾಗಿ ಎಷ್ಟು ಉಪಾಧ್ಯಾಯರನ್ನು ನಿಯೋಜಿಸಲಾಗಿದೆ ಹಾಗೂ ಶಿಕ್ಷಣದ ಪರಿಣಾಮಕಾರಿತ್ವವನ್ನು ಯಾವ ರೀತಿ ಅಂದಾಜಿಸಲಾಗುತ್ತಿದೆ ಇತ್ಯಾದಿ.
- ಶಾಲೆಗಳಲ್ಲಿನ ಪರಿಸರ ಶಿಕ್ಷಣ ಪಠ್ಯದಲ್ಲಿ ಯಾವುದಾದರೂ ನವೀನ ಪದ್ಧತಿಗಳು ಅಥವಾ ಸ್ಥಳೀಯ ಅಂಶಗಳನ್ನು ಸೇರಿಸಿಕೊಳ್ಳಲಾಗಿದೆಯೇ ಎಂಬುದನ್ನು ಗುರುತಿಸುವುದು.
- ಶಾಲೆಗಳಲ್ಲಿ ಪರಿಸರ ಶಿಕ್ಷಣದ ಪಠ್ಯಕ್ರಮವನ್ನು ಹೇಗೆ ಬಲಪಡಿಸಬಹುದೆಂಬುದನ್ನು ಕುರಿತಾಗಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

ಇದಕ್ಕಾಗಿ ಅನುಸರಿಸಲಾದ ಕಾರ್ಯವಿಧಾನವು ಈ ರೀತಿ ಇದೆ: ಶಾಲಾ ಉಪಾಧ್ಯಾಯರುಗಳೊಂದಿಗೆ ವಿಷಯ ಕೇಂದ್ರಿತ ಅಂದರೆ ಬೋಧನಾ ಕ್ರಮ, ಬೋಧನಾ ವಿಧಾನಗಳು, ಇವುಗಳಿಗೆ ಸಂಬಂಧಿಸಿದ ಇತರೆ ಅಂಶಗಳು, ಪರಿಸರ ಸಂಘಗಳ ಅಸ್ತಿತ್ವ ಇವುಗಳ ಬಗ್ಗೆ ಚರ್ಚೆಗಳನ್ನು ಮಾಡಲಾಯಿತು ಹಾಗೂ ಇತರ ಹಸಿರು ಕಾರ್ಯಕ್ರಮಗಳನ್ನು ಯಾವ ರೀತಿ ಅನುಷ್ಠಾನಗೊಳಿಸಲಾಯಿತು ಎಂಬುದನ್ನು ದಾಖಲಿಸಿಕೊಳ್ಳಲಾಯಿತು. ಸಿಇಇ ಮತ್ತು ಕೆಲವು ಶಿಕ್ಷಣ ಇಲಾಖೆಯ ಸಿಬ್ಬಂದಿಯನ್ನು ಸಂದರ್ಶಿಸಿ ಅವರ ದೃಷ್ಟಿಕೋನಗಳು ಮತ್ತು ಗಮನಿಸುವಿಕೆಗಳನ್ನು ದಾಖಲಿಸಲಾಯಿತು. ಈ ಸಮೀಕ್ಷೆಯಲ್ಲಿ ೧೭ ಶಾಲೆಗಳನ್ನು ಸಮೀಕ್ಷೆ ಮಾಡಲಾಯಿತು. ಇವುಗಳು ಸಾಮಾಜಿಕ–ಆರ್ಥಿಕವಾಗಿ ಕೆಳಗಿರುವ, ಮಧ್ಯಮ ಮಟ್ಟದಲ್ಲಿರುವ ಮತ್ತು ಮೇಲ್ಮಟ್ಟದಲ್ಲಿರುವ ಗುಂಪುಗಳನ್ನು ಪ್ರತಿನಿಧಿಸಿದ್ದವು. ರಾಜ್ಯ ಮಂಡಳಿ, ಐಸಿಎಸ್ಇ ಹಾಗೂ ಸಿಬಿಎಸ್ಇ ಮಂಡಳಿಗಳ ವ್ಯಾಪ್ತಿಗೆ ಬರುವ ಶಾಲೆಗಳು, ಸರ್ಕಾರಿ ಕಿರಿಯ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳು, ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳು (ಒಟ್ಟು ೧೭) ಈ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದವು.

### ಅಧ್ಯಯನದ ಫಲಿತಾಂಶಗಳು

**ಕರ್ನಾಟಕ ರಾಜ್ಯದ ಪ್ರಯತ್ನಗಳು:** ಕರ್ನಾಟಕದಲ್ಲಿ ಪರಿಸರ ಶಿಕ್ಷಣವನ್ನು ಅಳವಡಿಸಲು ಅನೇಕ ಪ್ರಯತ್ನಗಳು ನಡೆದಿವೆ ಮತ್ತು ಈ ಬಗ್ಗೆ ಉಪಾಧ್ಯಾಯರ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ – ಅವೆಂದರೆ: ಶಾಲಾ ಪಠ್ಯಪುಸ್ತಕಗಳ ಹೊಸ ದೃಷ್ಟಿ, ಉಪಾಧ್ಯಾಯರ ತರಬೇತಿ, ಸಂಪನ್ಮೂಲ ಸಾಮಗ್ರಿಗಳ ಅಭಿವೃದ್ಧಿ ಮತ್ತು ಪ್ರಸರಣೆ, ಸೇವಾನಿರತ ಉಪಾಧ್ಯಾಯರ ತರಬೇತಿಗಾಗಿ ನಮೂನೆಗಳನ್ನು ಸಿದ್ಧಪಡಿಸುವಿಕೆ, ಸೇವಾ ಪೂರ್ವ ಉಪಾಧ್ಯಾಯ ಶಿಕ್ಷಣಕ್ಕಾಗಿ ವ್ಯಾಸಂಗ ಕ್ರಮವನ್ನು ಅಭಿವೃದ್ಧಿ ಪಡಿಸುವುದು, ಡಿ.ಎಡ್ ಪದವಿಯ ಪ್ರಥಮ ವರ್ಷದ ವ್ಯಾಸಂಗದಲ್ಲಿ ಪರಿಸರ ವಿಜ್ಞಾನವನ್ನು ಒಂದು ಕಡ್ಡಾಯ ಪತ್ರಿಕೆಯಾಗಿ ಸೇರಿಸುವುದು. ಕರ್ನಾಟಕ ಸರ್ಕಾರವು ಶಾಲೆಗಳಲ್ಲಿ ರಾಷ್ಟ್ರೀಯ ಪರಿಸರ ಶಿಕ್ಷಣ ಕಾರ್ಯಕ್ರಮ (ಎನ್ಇಇಪಿಎಸ್)ವನ್ನು ಕೈಗೊಂಡಿದೆ. ಇದು ಸಂಸ್ಥೆಗಳ ನಡುವೆ ಸಂಪರ್ಕವನ್ನು ಸಾಧಿಸುತ್ತದೆ ಮತ್ತು ಅದನ್ನು ಸಶಕ್ತವಾಗಿಸುತ್ತದೆ. ಪರಿಸರ ಮಿತ್ರ ಕಾರ್ಯಕ್ರಮವು ಸರ್ಕಾರದ ಇನ್ನೊಂದು ಪ್ರಯತ್ನವಾಗಿದೆ. ಇದರ ಉದ್ದೇಶವು ನೀರು, ಗಾಳಿ, ಇಂಧನ, ಮಣ್ಣು, ಆರೋಗ್ಯ, ಸ್ವಚ್ಛತೆ ಹಾಗೂ ಶಾಲೆಯ ಸುತ್ತಮುತ್ತಲಿನ ಪರಿಸರದ ಬಗ್ಗೆ ತಿಳುವಳಿಕೆ ಉಂಟು ಮಾಡುವುದಾಗಿದೆ.

**ಉಪಾಧ್ಯಾಯರ ಹಿನ್ನೆಲೆ ಮತ್ತು ಶಿಕ್ಷಣ ಪದ್ಧತಿ:** ಸಮೀಕ್ಷೆ ನಡೆಸಿದ ಯಾವ ಶಾಲೆಯಲ್ಲೂ ಸಹ ಪರಿಸರ ವಿಜ್ಞಾನದಲ್ಲಿ ಪರಿಣತಿಯನ್ನು ಪಡೆದ ಶಿಕ್ಷಕರು ಇರಲಿಲ್ಲ. ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳಲ್ಲಿನ ಉಪಾಧ್ಯಾಯರು ಟಿಸಿಹೆಚ್ ಹಿನ್ನೆಲೆ ಇದ್ದವರಾಗಿದ್ದರು. ಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ ಇನ್ನೊಂದು ಸಮಸ್ಯೆಯಾಗಿತ್ತು. ಶಿಕ್ಷಣ ಪದ್ಧತಿಯು ಸಾಮಾನ್ಯವಾಗಿ ಪಾಠದ ಕೊಠಡಿಯಲ್ಲಿನ ಶಿಕ್ಷಣವಾಗಿತ್ತು. ಕೆಲವು ಶಾಲೆಗಳಲ್ಲಿ ಸಿದ್ಧಾಂತ/ಪಠ್ಯ ವಸ್ತುವು ಮನಸ್ಸನ್ನು ಸೆರೆ ಹಿಡಿಯಲೆಂದು ಬಣ್ಣದ ಸೀಮೆಸುಣ್ಣಗಳನ್ನು ಬಳಸಲಾಗುತ್ತಿತ್ತು. ಇನ್ನೂ ಕೆಲವು ಶಾಲೆಗಳಲ್ಲಿ ಸಂವಾದ ಸಭೆಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿತ್ತು.

**ಉಪಾಧ್ಯಾಯರ ತರಬೇತಿ:** ಪ್ರಾಥಮಿಕ ಶಿಕ್ಷಣದ ಉಪಾಧ್ಯಾಯರಿಗಾಗಿ ವಿಶೇಷವಾಗಿ ರೂಪಿಸಲಾಗಿರುವ ತರಬೇತಿ ಕಾರ್ಯಕ್ರಮವಾದ "ಚೈತನ್ಯ"ದಲ್ಲಿ ಸೇವಾನಿರತ ಉಪಾಧ್ಯಾಯರನ್ನು ಪರಿಸರ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಸಂವಾದ ರೂಪದಲ್ಲಿ ಬೋಧಿಸುವ ಬಗ್ಗೆಯೂ, ಭಾಷೆಗಳನ್ನು ಹಾಗೂ ಗಣಿತವನ್ನೂ ಸಂವಾದ ರೂಪದಲ್ಲಿ ಬೋಧಿಸುವ ಬಗ್ಗೆ ತರಬೇತಿ ನೀಡಲಾಗುತ್ತದೆ. ಹೀಗಿದ್ದರೂ ಸಹ, ಇವಿಎಸ್ ಅನ್ನು ಸೇವಾ ನಿರತ ಉಪಾಧ್ಯಾಯರಿಗೆ ವರ್ಗಾಯಿಸುವ ಯಾವುದೇ ಪ್ರತ್ಯೇಕ ತರಬೇತಿ ಅಥವಾ ಅಧ್ಯಯನ ಕ್ರಮ ಇಲ್ಲವಾಗಿದೆ.

**ಶಾಲೆಗಳಲ್ಲಿನ ಪ್ರಯತ್ನಗಳು:** ರಾಷ್ಟ್ರೀಯ ಹಸಿರು ದಳ (ಎನ್‌ಜಿಸಿ) ಕಾರ್ಯಕ್ರಮವು ಪರಿಸರ ತಿಳುವಳಿಕೆ ಹೆಚ್ಚಿಸುವ ಕಾರ್ಯವನ್ನು ದೇಶದಾದ್ಯಂತ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾಪಿಸಿರುವ ಪರಿಸರ ಸಂಘ (ಇಕೋ ಕ್ಲಬ್)ಗಳ ಮೂಲಕ ಮಾಡುತ್ತಿದೆ. ಇಕೋ ಕ್ಲಬ್‌ಗಳು ಭಾರತ ಸರ್ಕಾರದ ಪ್ರೇರಣೆಯಾಗಿದೆ. ಶಾಲೆಗಳಲ್ಲಿ ಈ ಇಕೋ ಕ್ಲಬ್‌ಗಳನ್ನು ೨೦೦೧ರಿಂದ ವಾರ್ಷಿಕ ರೂ.೨೫೦೦/–ಗಳ ಅನುದಾನ ಬೆಂಬಲದೊಂದಿಗೆ ನಡೆಸಲಾಗುತ್ತಿದೆ. ಇದರ ಚಟುವಟಿಕೆಗಳು ಈ ರೀತಿ ಇವೆ: ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ಚರ್ಚಾಕೂಟಗಳನ್ನು ಏರ್ಪಡಿಸುವುದು, ಪ್ರವಚನಗಳನ್ನು ಏರ್ಪಡಿಸುವುದು, ನಿರ್ದಿಷ್ಟ ಪರಿಸರ ಸುರಕ್ಷಾ ಅಂಶಗಳಾದ ಜಾಗತಿಕ ತಾಪಮಾನ ನಿಯಂತ್ರಣ, ಹವಾಮಾನ ಬದಲಾವಣೆಗೆ ಆಳವಡಿಸಿಕೊಳ್ಳುವಿಕೆ, ಅನುಪಯುಕ್ತ ತ್ಯಾಜ್ಯದ ನಿರ್ವಹಣೆ, ಔಷಧೀಯ ಸಸ್ಯಗಳು ಮತ್ತು ಅದರ ಸಂರಕ್ಷಣೆ, ಆರೋಗ್ಯ ಮತ್ತು ಸ್ವಚ್ಛತೆ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಮಾಲಿನ್ಯ ಹಾಗೂ ವಿಪತ್ತು ನಿರ್ವಹಣೆ. ಈ ಕ್ಲಬ್‌ಗಳು ಪರಿಸರದ ಬಗ್ಗೆ ತಿಳುವಳಿಕೆಯನ್ನು ಬೀದಿ ನಾಟಕಗಳು, ಭಾಷಣಗಳು, ಚರ್ಚಾ ಸ್ಪರ್ಧೆಗಳು, ಮಾನವ ಸರಣಿ, ಓಟ, ನಡೆ ಇತ್ಯಾದಿಗಳ ಮೂಲಕವೂ ಮಾಡಿವೆ.

**ಶಾಲೆಗಳಲ್ಲಿ ಹಸಿರು ಚಟುವಟಿಕೆಗಳು:** ಕೆಲವು ಶಾಲೆಗಳಲ್ಲಿ ಹಸಿರು ಚಟುವಟಿಕೆಗಳಾದ ಸಸಿಗಳನ್ನು ನೆಡುವುದು, ಗಿಡಗಳಿಗೆ ನೀರು ಹಾಕುವುದು ಇತ್ಯಾದಿಗಳನ್ನು ಮಾಡಿದ್ದಾರೆ. ಪರಿಸರದ ಅಂಶಗಳ ಬಗ್ಗೆ ಚರ್ಚೆಗಳು, ಚರ್ಚಾ ಸ್ಪರ್ಧೆಗಳು ಇತ್ಯಾದಿಗಳನ್ನೂ ಮಾಡಲಾಗಿದೆ. ಒಂದು ಶಾಲೆಯು ಡೆಂಗ್ಯೂ ಜ್ವರದ ಬಗ್ಗೆ ತಿಳುವಳಿಕೆ ಕಾರ್ಯಕ್ರಮವನ್ನೂ ಮಾಡಿದೆ ಮತ್ತು ಹಾಗೆ ಮಾಡುವಾಗ ನಿಂತ ನೀರಿನಿಂದ ಸೊಳ್ಳೆ ಉತ್ಪತ್ತಿ ಹೆಚ್ಚಾಗುವುದರಿಂದ ನೀರನ್ನು ಕೊಳೆಯಲು ಬಿಡಬಾರದೆಂದು ಸಾರ್ವಜನಿಕರನ್ನು ಕೋರಲಾಗಿದೆ. ಶಿಕ್ಷಣ ಇಲಾಖೆಯು ಮಾಡಿರುವ ಮತ್ತೊಂದು ಕುತೂಹಲಕಾರಿ ಕಾರ್ಯವೆಂದರೆ ಒಂದನೆಯ ಮತ್ತು ಮೂರನೆಯ ದರ್ಜೆಯ ವಿದ್ಯಾರ್ಥಿಗಳಿಗೆ ರೇಡಿಯೋ ಕಾರ್ಯಕ್ರಮವನ್ನು ಬಿತ್ತರಿಸಿರುವುದಾಗಿದೆ. ಪ್ರತಿದಿನ ಮಧ್ಯಾಹ್ನ ೨.೩೫ ರಿಂದ ೩.೦೫ ರವರೆಗೆ ಅರ್ಧ ಗಂಟೆಯ ಕಾಲ ಪರಿಸರಕ್ಕೆ ಸಂಬಂಧಿಸಿದ ಯಾವುದಾದರೂ ಒಂದು ವಿಷಯದ ಬಗ್ಗೆ ಈ ಕಾರ್ಯಕ್ರಮ ಬಿತ್ತರಗೊಳ್ಳುತ್ತಿತ್ತು.

ಈ ಅಧ್ಯಯನವು ಪರಿಸರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಾಲೆಗಳಲ್ಲಿನ ಕೆಲವು ನ್ಯೂನತೆಗಳನ್ನೂ ಸಹ ಗುರುತಿಸಿದೆ. ಅವೆಂದರೆ: ಸಾಕಷ್ಟು ತರಬೇತಿ ಇಲ್ಲದಿರುವುದು, ಬೋಧನಾ ಸಾಮಗ್ರಿಗಳ ಕೊರತೆ, ಉಪಾಧ್ಯಾಯರಲ್ಲಿ ಪರಿಣತಿ ಇಲ್ಲದಿರುವುದು. ಪರಿಸರ ಶಿಕ್ಷಣವನ್ನು ಸಬಲೀಕರಿಸಲು ಶಿಕ್ಷಣ ಇಲಾಖೆಗೆ ಆಗುತ್ತಿಲ್ಲದಿರುವುದು ಇತ್ಯಾದಿ. ಒಟ್ಟಿನಲ್ಲಿ ಈ ಶಿಕ್ಷಣದ ಗುರಿಯು ಮಕ್ಕಳಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ತಿಳುವಳಿಕೆಯನ್ನು ಉಂಟು ಮಾಡುವುದಾಗಿದೆ ಹಾಗೂ ಸುಸ್ಥಿರ ಪರಿಸರಕ್ಕಾಗಿ ಪ್ರಯತ್ನ ಪಡಲು ಅವರಿಗೆ ನೆರವು ನೀಡುವುದಾಗಿದೆ.

## ಡಬ್ಲ್ಯುಎಚ್‌ಓ–ಎಸ್‌ಎಜಿಇ ಇಂಡಿಯಾ – “ಜಾಗತಿಕ ವೃದ್ಧಾಪ್ಯದ ಅಧ್ಯಯನ ಹಾಗೂ ಭಾರತದಲ್ಲಿ ವೃದ್ಧರ ಆರೋಗ್ಯ – ವೇವ್ ೨” ೨೦೧೫ – ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ

*– ಡಾ. ಸಿ.ಎಂ.ಲಕ್ಷ್ಮಣ, ಡಾ. ಪಿ.ಪ್ರಭುಸ್ವಾಮಿ ಮತ್ತು ಶ್ರೀ ಸಿ.ಯೋಗಾನಂದ*

ಡಬ್ಲ್ಯುಎಚ್‌ಓ – ಸೇಜ್ ಇಂಡಿಯಾ ವೇವ್ ೨ ಸಂಶೋಧನಾ ಅಧ್ಯಯನವು ಮುಂಬಯಿಯ ಐಐಪಿಎಸ್ ಸಂಸ್ಥೆಯಿಂದ ಧನ ಸಹಾಯ ಪಡೆದ ಯೋಜನೆಯಾಗಿದೆ. ಸೇಜ್ ಇಂಡಿಯಾ ಮಾದರಿಯು ರಾಷ್ಟ್ರವನ್ನೆಲ್ಲಾ ಪ್ರತಿನಿಧಿಸುತ್ತದೆ ಹಾಗೂ ಆರು ರಾಜ್ಯಗಳಲ್ಲಿ ಅನುಷ್ಠಾನಗೊಂಡಿದೆ. ಅವೆಂದರೆ ಅಸ್ಸಾಂ, ಕರ್ನಾಟಕ, ಮಹಾರಾಷ್ಟ್ರ, ರಾಜಾಸ್ತಾನ, ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳು. ಐಸೆಕ್‌ನ ಜನಸಂಖ್ಯಾ ಸಂಶೋಧನಾ ಕೇಂದ್ರವು ಕರ್ನಾಟಕದಲ್ಲಿ ಕ್ಷೇತ್ರ ಕಾರ್ಯವನ್ನು ಕೈಗೊಂಡು ೨೦೧೫ರಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಿದೆ. ಈ ಸಮೀಕ್ಷೆಯ ನಿರ್ದಿಷ್ಟ ಉದ್ದೇಶಗಳು ಈ ರೀತಿ ಇವೆ: (೧) ವಯಸ್ಸಿಗೆ ಸಂಬಂಧಿಸಿದಂತೆ ಆರೋಗ್ಯದಲ್ಲಿ ಆಗುವ ಬದಲಾವಣೆಗಳು ಮತ್ತು ಶ್ರೇಯೋಭಿವೃದ್ಧಿಯ ನಮೂನೆಗಳು ಹಾಗೂ ಸಂಚಲನವನ್ನು ಪರೀಕ್ಷಿಸುವುದು. ಇದಕ್ಕಾಗಿ ಸಮೀಕ್ಷೆಯಲ್ಲಿ ಭಾಗವಹಿಸಿದ ವೃದ್ಧರಿಗೆ ವಯಸ್ಸಾದಂತೆಲ್ಲಾ ಅದರ ಅನುಸರಣೆಯನ್ನು ರೇಖಾಂಶಾಧಾರಿತ ಸಮೀಕ್ಷೆಯ ಪ್ರಕಾರ ಮಾಡುವುದು ಹಾಗೂ ಆರೋಗ್ಯದ ಬದಲಾವಣೆಯಿಂದಾಗಿ ಆಗುವ ಸಾಮಾಜಿಕ – ಆರ್ಥಿಕ ಪರಿಣಾಮಗಳನ್ನು ಅನ್ವೇಷಿಸುವುದು; (೨) ರಾಷ್ಟ್ರ ಮಟ್ಟದ ಪ್ರಾತಿನಿಧಿಕ ಮಾದರಿಗಳಲ್ಲಿ ೫೦ ವರ್ಷಕ್ಕಿಂತ ಹೆಚ್ಚು ವಯಸ್ಸಾದ ವಯಸ್ಕ ಜನಸಂಖ್ಯೆಯ ಆರೋಗ್ಯ ಮಟ್ಟದ ಬಗ್ಗೆ ನಂಬಲರ್ಹವಾದ, ಪರೀಕ್ಷಿಸಲು ಯೋಗ್ಯವಾದ ಹಾಗೂ ತುಲನಾತ್ಮಕ ದತ್ತಾಂಶವನ್ನು ಪಡೆಯುವುದು; (೩) ಆಯ್ದ ಆರೋಗ್ಯ ಆಯಾಮಗಳಿಗಾಗಿ ಆಚರಣಾ ಪರೀಕ್ಷೆಗಳ ಮೂಲಕ ಸ್ವಯಂ ನೀಡಿದ ವರದಿಗಳನ್ನು ಆ್ಯಂಕರಿಂಗ್ ವಿಗ್ನೆಟ್ ವಿಧಾನದ ಮೂಲಕ ಪುಷ್ಟಿಗೊಳಿಸುವುದು ಹಾಗೂ ನಂಬಲರ್ಹವಾಗಿ ಮಾಡುವುದು, (೪) ಸ್ವಯಂ ವರದಿ ಮಾಡಿದ ಆರೋಗ್ಯ ದತ್ತಾಂಶವನ್ನು ನಂಬಲರ್ಹವಾಗುವಂತೆ ಮಾಡಲು ದತ್ತಾಂಶವನ್ನು ಆರೋಗ್ಯ ಪರೀಕ್ಷೆಗಳಿಗನುಸಾರವಾಗಿ ಪಡೆಯುವುದು ಹಾಗೂ ಮಾಡಿದ ಮಧ್ಯಂತರ ಪ್ರವೇಶದ ಉಸ್ತುವಾರಿಯನ್ನು ಮಾಡುವುದು. ಈ ಸಮೀಕ್ಷೆಯು ೫೦ ಪ್ರಾಥಮಿಕ ಮಾದರಿ ಘಟಕಗಳನ್ನು (ಪಿಎಸ್‌ಯು) ಒಳಗೊಂಡಿದೆ – ನಗರ ಪ್ರದೇಶಗಳಿಂದ ೧೪ ಮತ್ತು ಗ್ರಾಮೀಣ ಪ್ರದೇಶದಿಂದ ೩೬ – ಕರ್ನಾಟಕ ರಾಜ್ಯದಿಂದ ಸಮೀಕ್ಷೆಯು ೧೨೦೦ ಕುಟುಂಬಗಳನ್ನು ಅಧ್ಯಯನಕ್ಕಾಗಿ ಬಳಸಿಕೊಂಡಿದೆ. ಸಮೀಕ್ಷೆಯ ಒಟ್ಟಾರೆ ಬಳಸಿಕೊಳ್ಳುವಿಕೆಯು ಸುಮಾರು ಶೇ.೯೦ರಷ್ಟಿತ್ತು.



# ಐಸೆಕ್

## ವಲಸೆಗಾರರ ಕೈಚೀಲ: ಭಾರತ ಹಾಗೂ ನೆದರ್‌ಲ್ಯಾಂಡ್ಸ್ ದೇಶಗಳ ನಡುವಣ ನಮೂನೆಗಳ ಹರಿವು, ಅನನ್ಯತೆ ಹಾಗೂ ಸಾಮಾಜಿಕ ಬಂಡವಾಳ

***ಪ್ರೊ. ಕೆ.ಎಸ್.ಜೇಮ್ಸ್***

ಈ ಯೋಜನೆಯು ನೆದರ್‌ಲ್ಯಾಂಡ್ಸ್ ದೇಶದ ಗ್ರೊನಿಂಗನ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆ ದೇಶದ ಎನ್‌ಒಡಬ್ಲ್ಯು ಸಂಸ್ಥೆಯು ಬೆಂಬಲಿಸಿದ ಪ್ರೌಢ ಸಂಶೋಧನೋತ್ತರ ಶಿಷ್ಯವೃತ್ತಿಯನ್ನು ಒಳಗೊಂಡಿತ್ತು. ಈ ಶಿಷ್ಯವೃತ್ತಿಯು "ಅಂತರ‍್ರಾಷ್ಟ್ರೀಯ ಪಾವತಿಗಳು ಹಾಗೂ ಭಾರತ ಮತ್ತು ನೆದರ್‌ಲ್ಯಾಂಡ್ಸ್‌ಗಳಲ್ಲಿನ ಕುಟುಂಬಗಳ ಮೇಲೆ ಅವು ಉಂಟು ಮಾಡುವ ಪರಿಣಾಮ" ಎಂಬ ವಿಷಯವನ್ನು ಅಧ್ಯಯನ ಮಾಡುವುದಕ್ಕಾಗಿತ್ತು. ಗ್ರೊನಿಂಗನ್ ವಿಶ್ವವಿದ್ಯಾಲಯದ ಸಂಶೋಧಕರು ನೆದರ್‌ಲ್ಯಾಂಡ್ಸ್‌ನಲ್ಲಿನ ಕ್ಷೇತ್ರ ಸಂಶೋಧನಾ ಕಾರ್ಯವನ್ನು ಮಾಡಿದರು.

ಕುಟುಂಬಗಳ ಮಟ್ಟದಲ್ಲಿ ವಲಸೆಯು ಉಂಟುಮಾಡುವ ಪರಿಣಾಮವನ್ನು ಈ ಅಧ್ಯಯನವು ಗುಣಾತ್ಮಕವಾಗಿ ಹಾಗೂ ಪರಿಮಾಣಾತ್ಮಕವಾಗಿ ಅಧ್ಯಯನ ಮಾಡಿದೆ. ಪರಿಮಾಣಾತ್ಮಕವಾಗಿ ಅಧ್ಯಯನ ಮಾಡುವ ಸಲುವಾಗಿ ಭಾರತವನ್ನು ಸಮಗ್ರವಾಗಿ ಪರಿಗಣಿಸಲಾಯಿತಲ್ಲದೆ ದಕ್ಷಿಣದ ಎರಡು ರಾಜ್ಯಗಳನ್ನು ಈ ವಿಷಯದಲ್ಲಿ ಅಂದರೆ ಕುಟುಂಬಗಳ ಬಳಕೆ ರೀತಿಯ ಮೇಲೆ ಅಂತರ‍್ರಾಷ್ಟ್ರೀಯ ಪಾವತಿಗಳು ಉಂಟುಮಾಡುವ ಪರಿಣಾಮದ ಬಗ್ಗೆ ಹೋಲಿಕೆ ಮಾಡಲಾಯಿತು. ಎನ್‌ಎಸ್‌ಎಸ್‌ಓ ಸಂಸ್ಥೆಯ ಅರವತ್ತನಾಲ್ಕನೆಯ ಸುತ್ತಿನ ಕುಟುಂಬ ಸಮೀಕ್ಷೆಯ ದತ್ತಾಂಶವನ್ನು ಬಳಸಿಕೊಂಡು ಈ ಅಧ್ಯಯನವು ಜನರ ಬಳಕೆಯಲ್ಲಿನ ವರ್ತನೆಯು ಅಂತರ‍್ರಾಷ್ಟ್ರೀಯ ಪಾವತಿಯಿಂದ ಗಣನೀಯವಾಗಿ ಬದಲಾಗಬಲ್ಲದೇ ಎಂಬುದನ್ನು ಅಧ್ಯಯನ ಮಾಡಿದೆ. ಬೈ ವೇರಿಯೇಟ್ ಹಾಗೂ ಮಲ್ಟಿ ವೇರಿಯೇಟ್ ವಿಶ್ಲೇಷಣೆಯ ಫಲಿತಾಂಶಗಳ ಅನುಸಾರ ಈ ವಿಷಯದಲ್ಲಿ ಎರಡು ರಾಜ್ಯಗಳ ಹಾಗೂ ಇಡೀ ಭಾರತದ ವರ್ತನೆಯು ಹೆಚ್ಚೂ ಕಡಿಮೆ ಒಂದೇ ಇದ್ದುದು ಕಂಡು ಬಂದಿತು. ಈ ಅಧ್ಯಯನವು ಅನೇಕ ಬಳಕೆ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಅಂತರ‍್ರಾಷ್ಟ್ರೀಯ ಪಾವತಿಯು ವಲಸಿಗರ ಕುಟುಂಬಗಳ ಬಳಕೆ ವರ್ತನೆಯನ್ನು ಬದಲಾಯಿಸಿರುವುದನ್ನು ಸೂಚಿಸುತ್ತದೆ.

ಈಗಾಗಲೇ ಚರ್ಚಿಸಿರುವ ಹಿಂದಿನ ಅಧ್ಯಯನಗಳಲ್ಲಿದ್ದಂತೆಯೇ ಈ ಅಧ್ಯಯನದಲ್ಲೂ ಕುಟುಂಬ ಮಟ್ಟದಲ್ಲಿ ಅಂತರ‍್ರಾಷ್ಟ್ರೀಯ ಪಾವತಿಗಳ ಪರಿಣಾಮ ಇದೆ ಎಂದು ಹೇಳಬಹುದು. ಈ ಅಧ್ಯಯನವು ಸದರಿ ಪಾವತಿಯನ್ನು ಇನ್ನೂ ಹೆಚ್ಚಿನ ಉಪಯುಕ್ತ ಬಳಕೆಗೆ ಉಪಯೋಗಿಸಲು ಸಲಹೆಮಾಡುತ್ತದೆ. ಅಧ್ಯಯನದ ಮೂಲಕ ಮಾಡಿದ ವಿಶ್ಲೇಷಣೆಯ ಪ್ರಕಾರ ಈ ಪಾವತಿಗಳನ್ನು ಅತಿ ಮುಖ್ಯ ಬಳಕೆಗಾಗಿ ಅಂದರೆ ಆಹಾರಕ್ಕಾಗಿ ಕಡಿಮೆ ಖರ್ಚು ಮಾಡುತ್ತಿದ್ದಾರೆ. ಅದಕ್ಕೆ ಬದಲಾಗಿ ಕೆಲವು ಭೌತಿಕ ಹಾಗೂ ಬಂಡವಾಳ ಖರ್ಚುಗಳನ್ನು ಅಂದರೆ "ಆರೋಗ್ಯ ರಕ್ಷಣೆ"ಗಾಗಿ ಹಾಗೂ "ಬಾಳಿಕೆ ಬರುವಂತಹ" ವಸ್ತುಗಳ ಖರೀದಿಗಾಗಿ ವಲಸೆ ಹೋಗಿಲ್ಲದ ಕುಟುಂಬಗಳಿಗಿಂತ ಹೆಚ್ಚಾಗಿ ಮಾಡುತ್ತಿದ್ದಾರೆ. ಅಂತರ‍್ರಾಷ್ಟ್ರೀಯ ಪಾವತಿಯ ಒಂದು ಸಕಾರಾತ್ಮಕ ಮತ್ತು ಗಣನೀಯ ಪರಿಣಾಮವೆಂದರೆ ವಲಸಿಗ ಕುಟುಂಬಗಳ ಆರೋಗ್ಯ ಸುಧಾರಣೆ. ಮಾನವ ಬಂಡವಾಳವನ್ನು ಹೆಚ್ಚಿಸುವ ಈ ಪರಿಣಾಮವು ದೇಶದ ಅರ್ಥವ್ಯವಸ್ಥೆಯ ಅಬಿವೃದ್ಧಿಗೂ ಕಾಣಿಕೆ ನೀಡುತ್ತಿದೆ. ಆದರೆ ಇಲ್ಲಿ ಗಮನಿಸಲಾದ ಮತ್ತೊಂದು ಅಂಶವೆಂದರೆ ಈ ಪಾವತಿಗಳು ಕುಟುಂಬದ ವಿದ್ಯಾಭ್ಯಾಸದ ಖರ್ಚುಗಳ ಮೇಲೆ ಗಣನೀಯ ಪರಿಣಾಮ ಬೀರಿಲ್ಲದೆ ಇರುವುದು. ಹೀಗಿದ್ದರೂ ಒಟ್ಟಿನಲ್ಲಿ ಪಾವತಿಗಳು ಆರೋಗ್ಯ ರಕ್ಷಣೆಗಾಗಿ, ಬಾಳಿಕೆ ಬರುವ ವಸ್ತುಗಳಿಗಾಗಿ ಹೆಚ್ಚು ಉಪಯೋಗವಾಗಿ, ಆಹಾರಕ್ಕೆ ಕಡಿಮೆ ಉಪಯೋಗವಾಗುತ್ತಿರುವುದು ಒಂದು ಆಶಾದಾಯಕ ಸಂಗತಿಯೇ ಆಗಿದೆ. ಆದರೆ ವಿದ್ಯಾಭ್ಯಾಸದ ಖರ್ಚಿನ ಮೇಲೆ ಈ ಪಾವತಿಗಳು ಪರಿಣಾಮ ಬೀರಿಲ್ಲದೆ ಇರುವುದು ಇತರ ಅನೇಕ ಅಧ್ಯಯನಗಳ ಫಲಿತಾಂಶಗಳಿಗೆ ವ್ಯತಿರಿಕ್ತವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಅಂತರ‍್ರಾಷ್ಟ್ರೀಯ ಪಾವತಿಗಳು ಆರೋಗ್ಯ ರಕ್ಷಣೆ, ಬಾಳಿಕೆ ವಸ್ತುಗಳ ಖರೀದಿ ಇತ್ಯಾದಿಗಳಿಗೆ ಖರ್ಚಾಗುತ್ತಿವೆಯಲ್ಲದೆ ಆಹಾರಕ್ಕಾಗಿ ಆಗುತ್ತಿಲ್ಲವಾದ್ದರಿಂದ, ದೀರ್ಘಾವಧಿಯಲ್ಲಿ ವಲಸಿಗ ಕುಟುಂಬಗಳ ಶ್ರೇಯೋಭಿವೃದ್ಧಿಯನ್ನು ಹೆಚ್ಚಿಸುತ್ತದೆ ಹಾಗೂ ತನ್ಮೂಲಕ ದೇಶದ ಅರ್ಥ ವ್ಯವಸ್ಥೆಯ ಅಭಿವೃದ್ಧಿಗೆ ಸಕಾರಾತ್ಮಕ ಕಾಣಿಕೆಯನ್ನು ನೀಡುತ್ತಿದೆ ಎನ್ನಬಹುದಾಗಿದೆ.

ವಲಸೆಯ ಗುಣಾತ್ಮಕ ಪರಿಣಾಮದ ಅನ್ವೇಷಣೆಯು ವಲಸಿಗರು ತಮ್ಮ ಹುಟ್ಟೂರಿನಿಂದ ವಲಸೆ ಹೋಗುವ ಜಾಗಕ್ಕೆ ಕೊಂಡೊಯ್ಯಬಹುದಾದ ಸಾಮಾಜಿಕ ರೀತಿ ನೀತಿಗಳು ಹಾಗೂ ಹುಟ್ಟೂರಿನಿಂದ ತಾವಿರುವ ಜಾಗಕ್ಕೆ ಇರುವ ಅಗಾಧ ದೂರ ಮತ್ತು ಸ್ವಂತ ಸಂಸ್ಕೃತಿ ಕಾಣೆಯಾಗಿರುವಿಕೆ – ಇವುಗಳನ್ನು ಕುರಿತದ್ದಾಗಿತ್ತು. ಅಧ್ಯಯನವು ವಲಸಿಗರು ತಾವು ಹೋಗಿರುವ ಜಾಗದಲ್ಲೇ ಯಾವ್ಯಾವ ದಾರಿಗಳಲ್ಲಿ ಮತ್ತು ರೀತಿಗಳಲ್ಲಿ ತಮ್ಮಿಂದ ದೂರವಾಗಿರುವ ಸ್ವಂತ ಸಂಸ್ಕೃತಿಯನ್ನು ಮರಳಿ ಪಡೆಯಲು ಯತ್ನಿಸುತ್ತಾರೆ ಎಂಬುದನ್ನೂ ಗಮನಿಸಿದೆ.

## ಕರ್ನಾಟಕದ ರೈತರು ಮಣ್ಣು ಪರೀಕ್ಷೆ ಆಧಾರದ ಮೇರೆಗೆ ಶಿಫಾರಿತ ಪ್ರಮಾಣದ ರಸಗೊಬ್ಬರ ಹಾಕುವಿಕೆಯನ್ನು ಅಳವಡಿಸಿಕೊಂಡಿರುವ ಬಗ್ಗೆ ಅಧ್ಯಯನ

***ಡಾ. ರಾಮಪ್ಪ ಕೆ.ಬಿ. ಹಾಗೂ ಡಾ. ಏಳುಮಲೈ ಕಣ್ಣನ್***

ಕಾಲಾನುಕ್ರಮದಲ್ಲಿ ಬೆಳೆ ಉತ್ಪಾದನಾ ತಾಂತ್ರಿಕತೆಗಳ ಆದ್ಯತೆ ಬದಲಾಯಿಸುತ್ತಿರುವ ಕಾರಣವಾಗಿ ರಾಷ್ಟ್ರದ ದೀರ್ಘಾವಧಿ ಆಹಾರ ಭದ್ರತೆಗೆ

ಹಲವಾರು ಹೊಸ ಸವಾಲುಗಳು ಎದುರಾಗಿವೆ. ರಸಗೊಬ್ಬರಗಳಿಗೆ ಸ್ಪಂದಿಸುವ ಬೆಳೆ ತಳಿಗಳನ್ನು ಕಂಡುಹಿಡಿದಿರುವುದರಿಂದ ಹಾಗೂ ಭೂಮಿಯಲ್ಲಿ ತೀವ್ರತರ ಕೃಷಿಯನ್ನು ಮಾಡುತ್ತಿರುವುದರಿಂದ, ಈಚಿನ ದಿನಗಳಲ್ಲಿ ಮಣ್ಣು ಆರೋಗ್ಯ ಕ್ಷೀಣಿಸುತ್ತಿರುವುದು ಹೆಚ್ಚಿನ ಆತಂಕಕ್ಕೆ ಕಾರಣವಾಗಿದೆ. ರಾಸಾಯನಿಕ ಗೊಬ್ಬರಗಳು ಬೆಳೆಗಳಿಗೆ ಪೋಷಕಾಂಶ ಒದಗಿಸುವ ಮುಖ್ಯ ಮೂಲವಾದ್ದರಿಂದ ರೈತರು ಈ ಗೊಬ್ಬರಗಳನ್ನು ಲೆಕ್ಕಪಕ್ಕವಿಲ್ಲದೆ ಬಳಸಲು ಪ್ರಾರಂಭಿಸಿದರು. ಈ ಕಾರಣದಿಂದಾಗಿ ಮಣ್ಣಿನ ಫಲವತ್ತತೆಯನ್ನು ಸಮಗ್ರ ರೀತಿಯಲ್ಲಿ ನಿರ್ವಹಿಸಲು ಅಂದರೆ ಸಾವಯವ ಗೊಬ್ಬರ, ರಾಸಾಯನಿಕ ಗೊಬ್ಬರ ಹಾಗೂ ಜೈವಿಕ ಗೊಬ್ಬರಗಳನ್ನು ಸೂಕ್ತ ಪ್ರಮಾಣದಲ್ಲಿ ಬಳಸುವ ಸಮಗ್ರ ಪೋಷಕಾಂಶ ನಿರ್ವಹಣೆಯು ಹೆಚ್ಚಿನ ಅವಕಾಶವನ್ನು ಪಡೆದುಕೊಳ್ಳಲಾರಂಭಿಸಿದೆ. ಸರ್ಕಾರವೂ ಸಹ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಸಲುವಾಗಿ ರಸಗೊಬ್ಬರಗಳ ಸಮತೋಲನ ಬಳಕೆ ಮಾಡುವಂತೆ ರೈತರನ್ನು ಉತ್ತೇಜಿಸುತ್ತಿದೆ. ಸರ್ಕಾರದ ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೂಲಕ ಮಣ್ಣನ್ನು ನಿಯತಕಾಲಿಕವಾಗಿ ಪರೀಕ್ಷಿಸಲು ಮತ್ತು ಅದರ ಫಲಿತಾಂಶದ ಆಧಾರದ ಮೇಲೆ ಮಣ್ಣಿನಲ್ಲಿ ಕಡಿಮೆಯಿರುವ ಪೋಷಕಾಂಶಗಳನ್ನು ಸರಿದೂಗಿಸಲು ಅಗತ್ಯವಾದಷ್ಟೇ ರಸಗೊಬ್ಬರಗಳನ್ನು ಬಳಸಲೂ ರೈತರನ್ನು ಪ್ರೋತ್ಸಾಹಿಸಲಾಗುತ್ತಿದೆ. ಈ ಸಂಬಂಧವಾಗಿ ಪ್ರಸ್ತುತ ಅಧ್ಯಯನವು ಕರ್ನಾಟಕ ರಾಜ್ಯದಲ್ಲಿ ಆಯ್ದ ಎರಡು ಬೆಳೆಗಳಲ್ಲಿ ಅಂದರೆ ಭತ್ತ ಮತ್ತು ಮುಸುಕಿನ ಜೋಳದ ಬೆಳೆಗಳಲ್ಲಿ ಬೆಳೆ ಉತ್ಪಾದಕತೆಯ ಮೇಲೆ ಮಣ್ಣು ಪರೀಕ್ಷಾ ತಂತ್ರಜ್ಞಾನದ ಅಳವಡಿಕೆ ಮಟ್ಟ ಹಾಗೂ ಶಿಫಾರಿತ ಪ್ರಮಾಣದ ರಸಗೊಬ್ಬರಗಳನ್ನು (ಮಣ್ಣು ಆರೋಗ್ಯ ವರದಿಯಲ್ಲಿ ಸೂಚಿಸಿರುವ) ಹಾಕುವುದರಲ್ಲಿರುವ ತೊಡಕುಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಿದೆ.

ಈ ಅಧ್ಯಯನದಲ್ಲಿ ೨೦೧೨–೧೩ರಲ್ಲಿ ಭತ್ತ ಮತ್ತು ಮುಸುಕಿನ ಜೋಳ ಬೆಳೆದ ಮಾದರಿ ರೈತರಿಂದ ಪ್ರಾಥಮಿಕ ದತ್ತಾಂಶವನ್ನು ಪಡೆದುಕೊಳ್ಳಲಾಗಿದೆ. ಪ್ರತಿ ಬೆಳೆಗೂ ೧೫೦ ಮಾದರಿ ರೈತರನ್ನು ಆಯ್ಕೆ ಮಾಡಲಾಯಿತು ಹಾಗೂ ಇವರುಗಳು ಬೆಳೆಗಳಿಗೆ ಹಾಕುವ ಶಿಫಾರಿತ ಪ್ರಮಾಣದ ರಸಗೊಬ್ಬರ ಮತ್ತು ಅದು ಬೆಳೆಗಳ ಉತ್ಪಾದನೆಯ ಮೇಲೆ ಬೀರುವ ಪರಿಣಾಮವನ್ನು ಅಂದಾಜಿಸಲಾಯಿತು. ಜೊತೆಗೆ ಈ ಅಧ್ಯಯನವು ಪ್ರತಿ ಬೆಳೆಗೂ ೧೦೦ ರೈತರ ನಿಯಂತ್ರಣ ಗುಂಪನ್ನೂ ಬಳಸಿಕೊಂಡಿತು ಹಾಗೂ ಬೆಳೆ ಉತ್ಪಾದನೆಯ ಮೇಲೆ ತಂತ್ರಜ್ಞಾನದ ಪರಿಣಾಮವನ್ನೂ ಮತ್ತು ರೈತರು ಆ ಮೂಲಕ ಗಳಿಸಿದ ಆದಾಯವನ್ನೂ ಅಂದಾಜಿಸಿತು.

ಸಮೀಕ್ಷೆಯ ದತ್ತಾಂಶವನ್ನು ವಿಶ್ಲೇಷಿಸಿದಾಗ ಸಾಕಷ್ಟು ದೊಡ್ಡ ಸಂಖ್ಯೆಯ ಭತ್ತ ಮತ್ತು ಮುಸುಕಿನ ಜೋಳ ಬೆಳೆಯುವ ಸಣ್ಣ ಮತ್ತು ಮಧ್ಯಮ ಹಿಡುವಳಿ ರೈತರು ತಮ್ಮ ಜಮೀನುಗಳಲ್ಲಿನ ಮಣ್ಣನ್ನು ಕಳೆದ ಮೂರು ವರ್ಷಗಳಲ್ಲಿ ಪರೀಕ್ಷಿಸಿಯೇ ಇಲ್ಲ ಎಂದು ತಿಳಿದುಬಂತು. ಈ ಮಣ್ಣುಗಳ ಮಾದರಿಗಳನ್ನು ಬಹುತೇಕ ಕೃಷಿ ಇಲಾಖೆಯ ಸಿಬ್ಬಂದಿಯೇ ಸಂಗ್ರಹಿಸಿದ್ದರೆಂದು ವರದಿಯಾಗಿತ್ತು. ಮಣ್ಣು ಪರೀಕ್ಷೆ ಮಾಡಿಸಿರುವ ರೈತರ ಪೈಕಿ ಭತ್ತ ಮತ್ತು ಮುಸುಕಿನ ಜೋಳ ಬೆಳೆದಿರುವ ಶೇ.೮೯ರಷ್ಟು ರೈತರು ಬೆಳೆಯ ಇಳುವರಿ ಹೆಚ್ಚಿಸಿಕೊಳ್ಳುವುದಕ್ಕಾಗಿ ಮಣ್ಣು ಪರೀಕ್ಷೆಯನ್ನು ಮಾಡಿಸಿಕೊಳ್ಳಲಾಯಿತೆಂದು ತಿಳಿಸಿದರು. ನಿಯಂತ್ರಣ ಗುಂಪಿನಲ್ಲಿದ್ದ ಶೇ.೭೧ರಷ್ಟು ರೈತರು ಮಣ್ಣು ಪರೀಕ್ಷೆಯ ಬಗ್ಗೆ ತಿಳಿದುಕೊಳ್ಳಲು ಯಾರನ್ನು ಸಂಪರ್ಕಿಸಬೇಕು ಎಂಬ ಬಗ್ಗೆ ತಿಳುವಳಿಕೆ ಇಲ್ಲದಿದ್ದ ಕಾರಣ ಮಣ್ಣು ಪರೀಕ್ಷೆ ಮಾಡಿಸಲು ಆಗಲಿಲ್ಲ ಎಂದರು. ಮುಸುಕಿನ ಜೋಳದ ನಿಯಂತ್ರಣ ಗುಂಪಿನ ರೈತರಲ್ಲಿ ಅರ್ಧಕ್ಕೂ ಹೆಚ್ಚು ಜನರು ಮಣ್ಣು ಪರೀಕ್ಷಾ ಪ್ರಯೋಗಾಲಯಗಳು ತಮ್ಮ ಗ್ರಾಮದಿಂದ ಬಹುದೂರ ಇರುವ ಕಾರಣ ಮಣ್ಣು ಪರೀಕ್ಷೆಯನ್ನು ಮಾಡಿಸಲು ಆಗಲಿಲ್ಲವೆಂದರು. ಆಸಕ್ತಿದಾಯಕ ಅಂಶವೆಂದರೆ ಭತ್ತದ ಬೆಳೆಗಾರರ ಪೈಕಿ ಕೇವಲ ಶೇ.೨೩ರಷ್ಟು ರೈತರು ಹಾಗೂ ಮುಸುಕಿನ ಜೋಳದ ಬೆಳೆಗಾರರ ಪೈಕಿ ಕೇವಲ ಶೇ.೧೧ರಷ್ಟು ಮಣ್ಣು ಪರೀಕ್ಷೆ ಮಾಡಿಸಿದ ರೈತರು ಮಾತ್ರ ತಾವುಗಳು ಶಿಫಾರಿತ ಪ್ರಮಾಣದ ರಸಗೊಬ್ಬರಗಳನ್ನು (ಆರ್‌ಡಿಎಫ್) ಹಾಕಿದ್ದೇವೆಂದು ತಿಳಿಸಿದರು. ಹೀಗಿದ್ದರೂ ಸಹ ಆರ್‌ಡಿಎಫ್ ಅನ್ನು ಅಳವಡಿಸಿಕೊಂಡಿದ್ದೇವೆಂದು ಸಾಧಿಸಿದ ಶೇ.೬೪ರಷ್ಟು ಭತ್ತದ ಬೆಳೆಗಾರರು ಮತ್ತು ಶೇ.೫೯ರಷ್ಟು ಮುಸುಕಿನ ಜೋಳದ ಬೆಳೆಗಾರರು ಮುಂದೆಯೂ ಸಹ ಆರ್‌ಡಿಎಫ್ ಅನ್ನು ಅಳವಡಿಸುತ್ತೇವೆಂದು ತಿಳಿಸಿದರು. ಹಿಡುವಳಿ ಗಾತ್ರವನ್ನಾಧರಿಸಿ ರಚಿಸಿದ ತಂಡಗಳ ಪೈಕಿ ಮಧ್ಯಮ ಗಾತ್ರದ ಹಿಡುವಳಿ ಹೊಂದಿರುವ ಹೆಚ್ಚಿನ ಸಂಖ್ಯೆಯ ಭತ್ತದ ಬೆಳೆಗಾರರು ಹಾಗೂ ದೊಡ್ಡ ಗಾತ್ರದ ಹಿಡುವಳಿ ಹೊಂದಿರುವ ಮುಸುಕಿನ ಜೋಳದ ಬೆಳೆಗಾರರು ಇನ್ನು ಮುಂದೆ ಮಣ್ಣು ಪರೀಕ್ಷೆಯನ್ನು ಆಧರಿಸಿ ರಸಗೊಬ್ಬರವನ್ನು ಬಳಸುವ ಬಗ್ಗೆ ತಮ್ಮ ಇಚ್ಛೆ ಇರುವುದನ್ನು ವ್ಯಕ್ತಪಡಿಸಿದರು. ಆರ್‌ಡಿಎಫ್ ಅನ್ನು ಅಳವಡಿಸಲು ಇರುವ ಮುಖ್ಯ ತೊಡಕುಗಳು ಈ ರೀತಿ ಇತ್ತು: ರಸಗೊಬ್ಬರಗಳನ್ನು ಯಾವಾಗ ಮತ್ತು ಹೇಗೆ ಬಳಸಬೇಕೆಂಬ ಬಗ್ಗೆ ತಾಂತ್ರಿಕ ಸಲಹೆಯ ಕೊರತೆ, ಶಿಫಾರಿತ ಪ್ರಮಾಣದ ಬಗ್ಗೆ ತಿಳಿದುಕೊಳ್ಳುವುದರಲ್ಲಿನ ಮತ್ತು ಅನುಸರಿಸುವುದರಲ್ಲಿನ ಕಷ್ಟ ಹಾಗೂ ರಸಗೊಬ್ಬರಗಳ ಅಧಿಕ ಬೆಲೆ. ವಾಸ್ತವವಾಗಿ ಬಳಸಿದ ರಸಗೊಬ್ಬರದ ಬಗ್ಗೆ ವಿಶ್ಲೇಷಿಸಿದಾಗ ಭತ್ತ ಮತ್ತು ಮುಸುಕಿನ ಜೋಳದ ನಿಯಂತ್ರಣ ಗುಂಪಿನ ಬೆಳೆಗಾರರು ಮಣ್ಣು ಪರೀಕ್ಷೆ ಮಾಡಿಸಿದ ರೈತರಿಗಿಂತ ಹೆಚ್ಚು ಪ್ರಮಾಣದ ರಸಗೊಬ್ಬರಗಳನ್ನು ಬಳಸಿದ್ದುದು ಕಂಡು ಬಂದಿತು. ಅಂತಿಮವಾಗಿ ಮಣ್ಣು ಪರೀಕ್ಷೆ ಆಧರಿತ ಆರ್‌ಡಿಎಫ್ ಅಳವಡಿಕೆಯಿಂದಾಗಿ ನಿಯಂತ್ರಣ ಗುಂಪಿನ ರೈತರಿಗಿಂತ ಭತ್ತದಲ್ಲಿ ಶೇ.೮.೩೫ರಷ್ಟು ಮತ್ತು ಮುಸುಕಿನ ಜೋಳದಲ್ಲಿ ಶೇ.೩.೮೪ರಷ್ಟು ಹೆಚ್ಚು ಇಳುವರಿಯನ್ನು ಪಡೆದಿದ್ದು ಕಂಡುಬಂದಿತು.

ಈ ಅಧ್ಯಯನವು ರೈತರಲ್ಲಿ ಮಣ್ಣು ಪರೀಕ್ಷೆಯ ಬಗ್ಗೆ ಹೆಚ್ಚಿನ ತಿಳುವಳಿಕೆ ಇರುವುದನ್ನು ಗುರುತಿಸಿತಾದರೂ ಸಹ ಮಣ್ಣು ಪರೀಕ್ಷಾ ಸೌಲಭ್ಯಗಳು ಅವರಿಗೆ ಸುಲಭವಾಗಿ ದೊರಕುವುದಿಲ್ಲವೆಂಬುದನ್ನೂ ಸಹ ಗಮನಿಸಿತು. ಜೊತೆಗೆ ಮಣ್ಣು ಪರೀಕ್ಷೆ ಮಾಡಿಸಿದ ರೈತರಿಗೆ ಸಕಾಲದಲ್ಲಿ ಮಣ್ಣು ಆರೋಗ್ಯ



ಚೀಟಿಗಳು ತಲುಪುತ್ತಿರಲಿಲ್ಲ. ಅಧ್ಯಯನದ ಅವಧಿಯಲ್ಲಿ ರಾಜ್ಯ ಸರ್ಕಾರದ ಜಿಲ್ಲಾ ಮಟ್ಟದ ಎಲ್ಲಾ ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನೂ (ಎಸ್‌ಟಿಎಲ್) ಅಗತ್ಯ ಸಿಬ್ಬಂದಿ ಮತ್ತು ಆಧುನಿಕ ಸೌಲಭ್ಯಗಳು ಇಲ್ಲದ ಕಾರಣ ಮುಚ್ಚಲಾಗಿತ್ತು. ಆದ್ದರಿಂದ ಈ ಪ್ರಯೋಗಾಲಯಗಳನ್ನು ಪೂರ್ಣ ಪ್ರಮಾಣದ ಸಿಬ್ಬಂದಿಯೊಂದಿಗೆ ಮತ್ತೆ ಪ್ರಾರಂಭಿಸಲೂ ಹಾಗೂ ಅವುಗಳನ್ನು ನಾಜೂಕಾದ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಸುಸಜ್ಜಿತಗೊಳಿಸಲೂ ವರದಿಯಲ್ಲಿ ಸಲಹೆ ಮಾಡಲಾಗಿದೆ. ಆ ಪ್ರಕಾರವಾಗಿಯೇ ಮಣ್ಣು ಆರೋಗ್ಯ ಅಭಿಯಾನ ಮತ್ತು ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮಗಳ ಮೂಲಕ ರಾಜ್ಯ ಸರ್ಕಾರವು ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಮಣ್ಣು ಆರೋಗ್ಯ ಚೀಟಿಗಳನ್ನು ರೈತರಿಗೆ ಸಕಾಲದಲ್ಲಿ ತಲುಪಿಸಲೂ ಯೋಜಿಸುತ್ತಿದೆ.

## ಕರ್ನಾಟಕದಲ್ಲಿ ಭೂ ಚೇತನ ಕಾರ್ಯಕ್ರಮದ ಪರಿಣಾಮದ ಮೌಲ್ಯಮಾಪನ

***ಡಾ. ಏಳುಮಲೈ ಕಣ್ಣನ್ ಹಾಗೂ ಡಾ. ರಾಮಪ್ಪ ಕೆ.ಬಿ.***

ಈ ಅಧ್ಯಯನವು ಕರ್ನಾಟಕದ ವಿವಿಧ ಕೃಷಿ ಹವಾಮಾನ ವಲಯಗಳಲ್ಲಿ ಬೆಳೆಯುವ ಖುಷ್ಕಿ ಬೆಳೆಗಳ ಉತ್ಪಾದಕತೆಯ ಮೇಲೆ ಭೂ ಚೇತನ ಕಾರ್ಯಕ್ರಮದ ತಾಂತ್ರಿಕ ಅಂಶಗಳು ಬೀರಿರುವ ಪರಿಣಾಮವನ್ನು ಅಂದಾಜಿಸುವ ಗುರಿ ಹೊಂದಿದೆ.

ಒಂದು ವಿವರವಾದ ಕ್ಷೇತ್ರ ಸಮೀಕ್ಷೆಯನ್ನು ೨೦೧೩-೧೪ರಲ್ಲಿ ಪೂರ್ವ ಪರೀಕ್ಷಿತ ಪ್ರಶ್ನಾವಳಿಯನ್ನು ಬಳಸಿ ನಡೆಸಲಾಯಿತು ಮತ್ತು ಅನುಷ್ಠಾನ ಮಾಡುವ ಸಂಸ್ಥೆಯ ಅಧಿಕಾರ ಸಿಬ್ಬಂದಿ ಹಾಗೂ ರೈತರಿಂದ ಅಗತ್ಯ ಮಾಹಿತಿಯನ್ನು ಪಡೆಯಲಾಯಿತು. ರೈತರ ಸಮೀಕ್ಷೆಯನ್ನು ಕರ್ನಾಟಕದ ಎಲ್ಲ ೧೦ ಕೃಷಿ ಹವಾಮಾನ ವಲಯಗಳ ವ್ಯಾಪ್ತಿಯಲ್ಲಿ ಬರುವ ೧೩ ಜಿಲ್ಲೆಗಳಲ್ಲಿ ಮಾಡಲಾಯಿತು ಮತ್ತು ಮಾದರಿ ಜಿಲ್ಲೆಗಳಾದ್ಯಂತ ೧೩ ಒಣ ಬೆಳೆಗಳನ್ನು ವ್ಯಾಪಿಸಿತ್ತು. ಸಮೀಕ್ಷೆಯು ಈ ಒಣಬೆಳೆಗಳನ್ನು ಭೂ ಚೇತನ ಕಾರ್ಯಕ್ರಮದ ಅವಧಿಯಲ್ಲಿ (೨೦೦೯-೧೦ ರಿಂದ ೨೦೧೩-೧೪) ಬೆಳೆದ ೧೫೦೦ ಮಾದರಿ ರೈತರನ್ನು ಒಳಗೊಂಡಿತ್ತು. ಭೂ ಚೇತನ ಕಾರ್ಯಕ್ರಮದ ಅನುಷ್ಠಾನ ಕ್ರಿಯೆಯನ್ನು ಪರೀಕ್ಷಿಸಲು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯ (ಕೃಷಿ ಇಲಾಖೆ) ವಿವಿಧ ಮಟ್ಟಗಳಲ್ಲಿನ ೭೧ ಅಧಿಕಾರ ಸಿಬ್ಬಂದಿಯನ್ನೂ ಸಹ ಸಂದರ್ಶಿಸಲಾಯಿತು.

ಮುಸುಕಿನ ಜೋಳದ ಬೆಳೆಯಲ್ಲಿ ಶೇ.೩೨ರಷ್ಟು ಮಾದರಿ ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದರು. ಆದರೆ ವಾಸ್ತವವಾಗಿ ಮಣ್ಣು ಆರೋಗ್ಯ ಚೀಟಿಗಳನ್ನು ಪಡೆದ ರೈತರ ಸಂಖ್ಯೆ ನಗಣ್ಯವಾಗಿತ್ತು. ಜಿಪ್ಸಂ, ಸತುವಿನ ಸಲ್ಫೇಟ್ ಹಾಗೂ ಬೋರಾಕ್ಸ್ ಪೋಷಕಾಂಶಗಳನ್ನು ಬಳಸಿದ ಮಾದರಿ ರೈತರ ಸಂಖ್ಯೆಯು ೨೦೦೯-೧೦ರಿಂದ ೨೦೧೩-೧೪ರ ವೇಳೆಯಲ್ಲಿ ಹೆಚ್ಚಿತ್ತು. ಸೂಕ್ಷ್ಮ ಪೋಷಕಾಂಶ ಬಳಕೆ ತಂತ್ರಜ್ಞಾನವನ್ನು ಬಳಸಿಕೊಂಡವರು ಬಳಸಿಕೊಳ್ಳದೆ ಇದ್ದವರಿಗಿಂತ ಶೇ.೨೮.೬೧ರಷ್ಟು ಹೆಚ್ಚಿನ ಧಾನ್ಯ ಇಳುವರಿಯನ್ನು ಪಡೆದುಕೊಂಡಿದ್ದರು. ಜೋಳದ ಬೆಳೆಯಲ್ಲಿ ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿಕೊಂಡವರಲ್ಲಿ ಮಧ್ಯಮ ಹಾಗೂ ದೊಡ್ಡ ಪ್ರಮಾಣದ ಹಿಡುವಳಿ ಹೊಂದಿರುವ ರೈತರೇ ಹೆಚ್ಚಾಗಿದ್ದರು. ಅಳವಡಿಕೆದಾರರು ಹಾಗೂ ಅಳವಡಿಸಿಕೊಳ್ಳದೆ ಇರುವವರ ನಡುವಿನ ಇಳುವರಿ ವ್ಯತ್ಯಾಸವು ಶೇ.೧೮.೫ರಷ್ಟಿತ್ತು. ಸಜ್ಜೆಗೆ ಸಂಬಂಧಿಸಿದಂತೆ ಶೇ.೧೫.೭ರಷ್ಟು ಮಾದರಿ ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಲು ಸಕಾಲದಲ್ಲಿ ಮಣ್ಣು ಆರೋಗ್ಯ ಚೀಟಿಗಳು ದೊರೆಯದೆ ಇರುವುದು ಒಂದು ಪ್ರಮುಖ ಸಮಸ್ಯೆಯಾಗಿದೆ. ಸಜ್ಜೆಯಲ್ಲಿ ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ ರೈತರು ಅಳವಡಿಸದೆ ಇದ್ದ ರೈತರಿಗಿಂತ ಶೇ.೫.೪೮ರಷ್ಟು ಹೆಚ್ಚಿನ ಇಳುವರಿಯನ್ನು ಪಡೆದಿದ್ದಾರೆ. ರಾಗಿ ಬೆಳೆಯಲ್ಲಿ ಶೇ.೨೬ರಷ್ಟು ಮಾದರಿ ರೈತರು ಶೇ.೧೮.೩ರಷ್ಟು ನಿವ್ವಳ ಸಾಗುವಳಿ ಕ್ಷೇತ್ರದಲ್ಲಿ ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದಾರೆ. ಮಾದರಿ ರೈತರು ಇಂಡಾಫ್-೭ ತಳಿಯನ್ನು ಇಷ್ಟ ಪಟ್ಟಿದ್ದರು. ಸೂಕ್ಷ ಪೋಷಕಾಂಶ ತಂತ್ರಜ್ಞಾನಕ್ಕೆ ಸೂಕ್ಷ್ಮ ಪ್ರತಿಕ್ರಿಯೆ ದೊರಕಿ ಇಳುವರಿ ಶೇ.೬.೪೨ರಷ್ಟು ಹೆಚ್ಚಿತು.

ನೆಲಗಡಲೆ ಬೆಳೆದ ಮಾದರಿ ರೈತರ ಪೈಕಿ ಸುಮಾರು ಶೇ.೨೨.೭ರಷ್ಟು ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದರು. ನೆಲಗಡಲೆ ತಳಿಗಳ ಪೈಕಿ ಟಿಎಂವಿ-೨ ತಳಿಯನ್ನು ಶೆ.೫೦ಕ್ಕಿಂತಲೂ ಹೆಚ್ಚಿನ ಮಾದರಿ ರೈತರು ಬೆಳೆದಿದ್ದರು. ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿಕೊಂಡ ರೈತರು ಅಳವಡಿಸಿಕೊಳ್ಳದ ರೈತರಿಗಿಂತ ಸ್ವಲ್ಪ ಹೆಚ್ಚು ಅಂದರೆ ಶೇ.೬.೨೪ರಷ್ಟು ಹೆಚ್ಚಿನ ಇಳುವರಿಯನ್ನು ಪಡೆದಿದ್ದರು. ಸೂರ್ಯಕಾಂತಿ ಬೆಳೆಯಲ್ಲಿ ಸುಮಾರು ಶೇ.೨೩ರಷ್ಟು ಮಾದರಿ ಸೂರ್ಯಕಾಂತಿ ಬೆಳೆಗಾರರು ನಿವ್ವಳ ಸಾಗುವಳಿ ಪ್ರದೇಶದ ಶೇ.೮.೪ರಷ್ಟು ಜಮೀನಿನಲ್ಲಿ ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ್ದ ಸೂರ್ಯಕಾಂತಿ ಬೆಳೆಗಾರರು ಅಳವಡಿಸಿಲ್ಲದ ರೈತರಿಗಿಂತ ಶೇ.೫೮.೦೫ರಷ್ಟು ಹೆಚ್ಚಿನ ಸೂರ್ಯಕಾಂತಿ ಇಳುವರಿಯನ್ನು ಪಡೆದರು. ಸುಮಾರು ಶೇ.೧೮ರಷ್ಟು ಮಾದರಿ ಸೋಯಾ ಅವರೆ ಬೆಳೆಗಾರರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಸೋಯಾ ಅವರೆಯ ಜೆಎಸ್-೩೩೫ ತಳಿಗೆ ರೈತರು ಅತಿ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ ರೈತರು ಅಳವಡಿಸದೆ ಇದ್ದ ರೈತರಿಗಿಂತ ಕೇವಲ ಶೇ.೦.೫೪ರಷ್ಟು ಮಾತ್ರ ಹೆಚ್ಚಿನ ಇಳುವರಿಯನ್ನು ಪಡೆದರು.

ಕಡಲೆ ಬೆಳೆಯಲ್ಲಿ ಶೇ.೧೧.೯ರಷ್ಟು ಮಾದರಿ ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಅಣ್ಣಿಗೇರಿ-೧ ತಳಿಯು ಆದ್ಯತಾ ತಳಿಯಾಗಿದ್ದು, ಶೇ.೯೩ರಷ್ಟು ಮಾದರಿ ರೈತರು ಈ ತಳಿಯನ್ನು ಬೆಳೆದಿದ್ದರು. ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ ಕಡಲೆ ಬೆಳೆಗಾರರು ತಂತ್ರಜ್ಞಾನವನ್ನು ಅಳವಡಿಸದೆ ಇದ್ದ ರೈತರಿಗಿಂತ ಶೇ.೫.೧೭ರಷ್ಟು ಹೆಚ್ಚಿನ ಇಳುವರಿಯನ್ನು ಪಡೆದಿದ್ದರು. ಉದ್ದಿನ ಬೆಳೆಗಾರರ ಪೈಕಿ ಶೇ.೩೮ರಷ್ಟು ಮಾದರಿ ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಟಿಎಯು-೯ ಎಂಬ ಉದ್ದಿನ ತಳಿಯು ಬಹಳ ಜನಪ್ರಿಯ ತಳಿಯಾಗಿತ್ತು. ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ ಉದ್ದಿನ ಬೆಳೆಗಾರರು ಅಳವಡಿಸಿಲ್ಲದ ರೈತರಿಗಿಂತ ಶೇ.೯.೮೮ರಷ್ಟು ಹೆಚ್ಚಿನ ಇಳುವರಿಯನ್ನು ಪಡೆದಿದ್ದರು. ಹೆಸರು ಬೆಳೆಗಾರರ ಪೈಕಿ ಶೇ.೨೨.೮ರಷ್ಟು ಮಾದರಿ ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಶೇ.೫೦ಕ್ಕಿಂತ ಹೆಚ್ಚಿನ ಮಾದರಿ ರೈತರು ಚೈನಾ ಹೆಸರನ್ನು ಬೆಳೆದಿದ್ದರು. ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ ಹೆಸರು ಬೆಳೆಗಾರರು ಅಳವಡಿಸಿಲ್ಲದೆ ಇದ್ದ ರೈತರಿಗಿಂತ ಶೇ.೧೦.೭ರಷ್ಟು ಹೆಚ್ಚಿನ ಇಳುವರಿ ಪಡೆದಿದ್ದರು. ತೊಗರಿ ಬೆಳೆಯಲ್ಲಿ ಶೇ.೨೫ರಷ್ಟು ಮಾದರಿ ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಈ ಬೆಳೆಯಲ್ಲಿ ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ ರೈತರು ಅಳವಡಿಸದೆ ಇದ್ದ ರೈತರಿಗಿಂತ ಕೇವಲ ಶೇ.೩.೪೧ರಷ್ಟು ಮಾತ್ರ ಹೆಚ್ಚಿನ ಇಳುವರಿ ಪಡೆದಿದ್ದರು.

ಹತ್ತಿ ಬೆಳೆಯಲ್ಲಿ ಶೇ.೨೨.೩ರಷ್ಟು ಮಾದರಿ ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಯೋಜನಾ ಅವಧಿಯ ಪೂರ್ತಿ ಮಣ್ಣು ಮತ್ತು ನೀರು ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗಿರಲಿಲ್ಲ. ಹತ್ತಿ ಬೆಳೆಯಲ್ಲಿ ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ ರೈತರು ಅಳವಡಿಸದೆ ಇದ್ದ ರೈತರಿಗಿಂತ ಶೇ.೧೭.೯ರಷ್ಟು ಹೆಚ್ಚಿನ ಇಳುವರಿಯನ್ನು ಪಡೆದಿದ್ದರು. ಮಳೆಯಾಶ್ರಿತ ಭತ್ತದ ಬೆಳೆಯಲ್ಲಿ ಶೇ.೪೩ರಷ್ಟು ಮಾದರಿ ರೈತರು ಮಣ್ಣು ಪರೀಕ್ಷಾ ತಂತ್ರಜ್ಞಾನವನ್ನು ಅಳವಡಿಸಿದ್ದರು. ಈ ಬೆಳೆಯಲ್ಲಿ ಸೂಕ್ಷ್ಮ ಪೋಷಕಾಂಶ ತಂತ್ರಜ್ಞಾನವನ್ನು ಅಳವಡಿಸಿದ್ದರಿಂದ ಶೇ.೧೦.೮ರಷ್ಟು ಹೆಚ್ಚಿನ ಇಳುವರಿ ಪಡೆಯಲಾಯಿತು.

ಭೂ ಚೇತನ ಕಾರ್ಯಕ್ರಮದ ಅನುಷ್ಠಾನ ವಿಧಾನದ ಬಗ್ಗೆ ಅನೇಕ ಪಾಲುದಾರರು ಕೆಲವು ಆತಂಕಗಳನ್ನು ವ್ಯಕ್ತಪಡಿಸಿದರು. ಅವು ಹೀಗಿವೆ: (೧) ವಾರ್ಷಿಕ ಕ್ರಿಯಾ ಯೋಜನೆಯ ತಯಾರಿಕೆ ಮತ್ತು ಅನುಷ್ಠಾನ, (೨) ಸೂಕ್ಷ್ಮ ಪೋಷಕಾಂಶಗಳ ಸಕಾಲಿಕ ಪೂರೈಕೆ, (೩) ಸಮುಚ್ಚಯ ಉಗ್ರಾಣಗಳ ಕಾರ್ಯನಿರ್ವಹಣೆ, (೪) ರೈತ ಅನುವುಗಾರರ ಪಾತ್ರ, (೫) ರೈತರ ಕ್ಷೇತ್ರ ಪಾಠಶಾಲೆಗಳ ಪರಿಣಾಮಕಾರಿತ್ವ, (೬) ಬೆಳೆ ಕಟಾವು ಪ್ರಯೋಗಗಳ ಸಂಯೋಜನೆ ಮತ್ತು ಕಾರ್ಯಾನುಷ್ಠಾನ ಹಾಗೂ (೭) ಪ್ರಚಾರ ಕಾರ್ಯಕ್ರಮಗಳ ಪರಿಣಾಮಕಾರಿತ್ವ. ಒಟ್ಟಿನಲ್ಲಿ ಹೇಳುವುದಾದರೆ ಭೂ ಚೇತನ ಕಾರ್ಯಕ್ರಮದ ತಂತ್ರಜ್ಞಾನದ ಬಗ್ಗೆ ಚೆನ್ನಾಗಿ ಗ್ರಹಿಸಿಕೊಂಡರೂ ಸಹ ಅದನ್ನು ಒಂದು ಸಮಷ್ಟಿ ಕಾರ್ಯಕ್ರಮದ ರೀತಿಯಲ್ಲಿ ಪೂರ್ಣೋತ್ಸಾಹದಿಂದ ಅನುಷ್ಠಾನಗೊಳಿಸಲಾಗಿಲ್ಲ. ನಿರ್ದಿಷ್ಟವಾಗಿ ಯುವ ಮತ್ತು ಪ್ರಗತಿಪರ ರೈತರಿಗೆ ಮಣ್ಣು ಪರೀಕ್ಷೆಯ ಬಗ್ಗೆ ತಿಳುವಳಿಕೆ ಹೆಚ್ಚಿದೆ ಮತ್ತು ಮಣ್ಣು ಪರೀಕ್ಷೆಯ ಅಗತ್ಯತೆ ಅವರಿಗೆ ಹೆಚ್ಚಾಗಿ ಮನಗಂಡಿದೆ. ಕ್ಷೇತ್ರದಲ್ಲಿನ ಸಾಕ್ಷಿ ಪುರಾವೆಗಳು ಕಾರ್ಯಕ್ರಮದ ಪ್ರಾರಂಭದಲ್ಲಿ ಇಕ್ರಿಸ್ಯಾಟ್ ಸಂಸ್ಥೆಯು ನೀಡಿದ್ದ ಮಣ್ಣು ಆರೋಗ್ಯ ಚೀಟಿಗಳನ್ನು ರೈತರು ಸ್ವೀಕರಿಸಿರುವುದನ್ನು ತೋರಿಸುತ್ತವೆ. ಆದರೆ ನಂತರದಲ್ಲಿ ಮಣ್ಣನ್ನು ಪರೀಕ್ಷೆಗಾಗಿ ನೀಡಿದ ರೈತರಿಗೆ ಮಣ್ಣು ಆರೋಗ್ಯ ಚೀಟಿಯನ್ನು ನೀಡುವಲ್ಲಿ ವಿಳಂಬವಾಗಿದೆ. ಜೊತೆಗೆ ೨೦೦೯-೧೦ ರಿಂದ ೨೦೧೩-೧೪ರ ವರೆಗಿನ ೫ ವರ್ಷಗಳ ಅವಧಿಯಲ್ಲಿ ಎಷ್ಟು ಬೆಳೆ ಪ್ರದೇಶದಲ್ಲಿ ಮಣ್ಣು ಪರೀಕ್ಷೆಯನ್ನು ಮಾಡಬಹುದಿತ್ತೋ ಅಷ್ಟನ್ನು ಮಾಡಲಾಗಿಲ್ಲ. ಸೂಕ್ಷ್ಮ ಪೋಷಕಾಂಶಗಳ ಬಗ್ಗೆ ರೈತರ ತಿಳುವಳಿಕೆಯು ಕಾಲಾನುಕ್ರಮದಲ್ಲಿ ಹೆಚ್ಚಿದ್ದರೂ ಸಹ, ಸೂಕ್ಷ್ಮ ಪೋಷಕಾಂಶಗಳ ಅಳವಡಿಕೆ ಮತ್ತು ಇಳುವರಿ ಸುಧಾರಣೆಯ ಮೇಲೆ ಅದರ ಪ್ರಭಾವ ಎಷ್ಟು ಸುಸ್ಥಿರವಾಗಿರಬಲ್ಲದು ಎಂಬ ಆತಂಕವೂ ಇದೆ. ಏಕೆಂದರೆ ಮಣ್ಣು ಮತ್ತು ನೀರಿನ ಸಂರಕ್ಷಣಾ ಕ್ರಮಗಳು, ಜೈವಿಕ ಗೊಬ್ಬರಗಳು ಮತ್ತು ಸಾವಯವ ಪರಿಕರಗಳು ಮುಂತಾದ ಪೂರಕ ತಂತ್ರಜ್ಞಾನಗಳ ಉತ್ತೇಜನೆಗೆ ಅಗತ್ಯವಾದಷ್ಟು ಗಮನವನ್ನು ನೀಡಲಾಗುತ್ತಿಲ್ಲ.

## ಹವಾಮಾನ ವ್ಯತ್ಯಾಸ ಮತ್ತು ಬದಲಾವಣೆಗಳನ್ನು ಎದುರಿಸಲು ಜೀವನೋಪಾಯ ಮಾರ್ಗಗಳಲ್ಲಿ, ವೈಪರೀತ್ಯಕ್ಕೆ ಪಕ್ಕಾಗುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಹಾಗೂ ಆ ವ್ಯತ್ಯಾಸ ಅಥವಾ ಬದಲಾವಣೆಯನ್ನು ಅಳವಡಿಸಿಕೊಳ್ಳುವುದಕ್ಕಾಗಿ ಕಾರ್ಯತಂತ್ರ ರೂಪಿಸಿಕೊಳ್ಳುವಿಕೆ: ಭಾರತದ ಎರಡು ಸೂಕ್ಷ್ಮ ಪ್ರದೇಶಗಳಲ್ಲಿ (ಜೀವ ವೈವಿಧ್ಯತೆ ವಿನಾಶ ಸಾಧ್ಯತೆಯ) ಹವಾಮಾನ ಬದಲಾವಣೆ ಪರಿಣಾಮಗಳನ್ನು ಅನುಕರಿಸುವ ಸಲುವಾಗಿ ಕೆಳಗಿನಿಂದ ಮೇಲೆ ಹೋಗುವ ಕಾರ್ಯವಿಧಾನ

***– ಪ್ರೊ. ಸುನಿಲ್ ನೌಟಿಯಾಲ್, ಡಾ. ಕೆ.ಎಸ್.ರಾವ್ ಮತ್ತು ಪ್ರೊ. ಕೆ.ವಿ.ರಾಜು***

ಹವಾಮಾನ ಬದಲಾವಣೆಯ ಸನ್ನಿವೇಶದಲ್ಲಿ ಕೃಷಿ, ಜೀವ ವೈವಿಧ್ಯತೆ ಹಾಗು ಜೀವನೋಪಾಯ ಮಾರ್ಗಗಳ ಮೇಲೆ ಉಂಟಾಗುವ ಪರಿಣಾಮವನ್ನು ಸೂಕ್ಷ್ಮ ಮಟ್ಟದಲ್ಲಿ ಅರ್ಥ ಮಾಡಿಕೊಳ್ಳಲು ಹಾಗೂ ಈ ಬದಲಾವಣೆಯ ವೈಪರೀತ್ಯಕ್ಕೆ ತುತ್ತಾಗುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಾದ ಅಳವಡಿಕೆ ಕಾರ್ಯತಂತ್ರವನ್ನು ರೂಪಿಸುವುದಕ್ಕಾಗಿ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಅಧ್ಯಯನವನ್ನು ಭಾರತದ ಎರಡು ಮುಖ್ಯ ಜೀವ ವೈವಿಧ್ಯತೆ ವಿನಾಶ ಸಾಧ್ಯತೆ ಪ್ರದೇಶಗಳಾದ್ಯಂತ ಕಾರ್ಯಗತಗೊಳಿಸಲಾಗಿದೆ. ಅವು ಯಾವುವೆಂದರೆ (ಅ) ಹಿಮಾಲಯದ ಪ್ರದೇಶಗಳು ಹಾಗೂ



(ಆ) ಪಶ್ಚಿಮ ಘಟ್ಟಗಳು. ಈ ಅಧ್ಯಯನವು ಮುಖ್ಯವಾಗಿ ಜೈವಿಕ–ಭೌತಿಕ ದುರ್ಬಲತೆಗೆ ಈಡಾಗುವುದನ್ನು ಸೂಚಿಸುವ ಸೂಚಿಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ, ಭೂ ಬಳಕೆಯನ್ನು ವಿಶ್ಲೇಷಿಸುವುದಕ್ಕೆ, ಭೂಮಿಯ ಮೇಲ್ಮೈ ಹೊದಿಕೆಯಲ್ಲಿನ ಬದಲಾವಣೆ ಮತ್ತು ಅದಕ್ಕೆ ಸಂಬಂಧಿಸಿದ ಅಂಶಗಳನ್ನು ವಿಶ್ಲೇಷಿಸುವುದಕ್ಕೆ ಹಾಗೂ ಸೂಕ್ಷ್ಮ ಮಟ್ಟದಲ್ಲಿ ಆಗಬಹುದಾದ ಬದಲಾವಣೆಗಳನ್ನು ಮುನ್ಸೂಚಿಸುವುದಕ್ಕಾಗಿ ಸಮಗ್ರ ಭೂಬಳಕೆ ಮಾದರಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಗಮನವನ್ನು ಕೇಂದ್ರೀಕರಿಸಿದೆ.

ಹವಾಮಾನ ಬದಲಾವಣೆಯ ಜೊತೆಗೆ ಹೊಂದಿಕೊಂಡಿರುವ ನಿರ್ದಿಷ್ಟ ಅಂಶಗಳನ್ನು ವಿಶ್ಲೇಷಿಸಲು ಈ ಅಧ್ಯಯನವು ಒಂದು ನಿಯಮಬದ್ಧವಾದ ವೈಜ್ಞಾನಿಕ ಸಂಶೋಧನಾ ಕಾರ್ಯವಿಧಾನವನ್ನು ಅನುಸರಿಸಿತು. ಜನರು ತಮ್ಮನ್ನು ತಾವೇ ಹವಾಮಾನ ಬದಲಾವಣೆಗಳಿಗೆ (ಜೀವನೋಪಾಯಕ್ಕೆ ಸಂಬಂಧಿಸಿದಂತೆ) ಅಳವಡಿಸಿಕೊಳ್ಳುತ್ತಿರುವ ವಿಧಾನದ ಬಗ್ಗೆ ಆಳವಾದ ಸಂಶೋಧನೆಯನ್ನು ಮಾಡಲಾಯಿತು. ಈ ರೀತಿಯ ಅಳವಡಿಕೆಗೆ ವಿಧವಿಧವಾದ ಕಾರಣಗಳಿದ್ದು ಅಂದರೆ ಪರಿಸರದ, ಕಾರ್ಯನೀತಿಯ, ಸಾಮಾಜಿಕ–ಆರ್ಥಿಕ ಕಾರಣಗಳನ್ನು ಉದಹರಿಸಬಹುದು. ಇದೇ ರೀತಿಯಾಗಿ ಮನುಷ್ಯರ ಬದಲಾಗುತ್ತಿರುವ ಚಟುವಟಿಕೆಗಳಿಂದಾಗಿ ನೈಸರ್ಗಿಕ ಪರಿಸರವೂ ಹೇಗೆ ಬದಲಾವಣೆ ಹೊಂದುತ್ತಿದೆ ಎಂಬುದರ ಬಗ್ಗೆಯೂ ಅಧ್ಯಯನ ನಡೆಸಲಾಯಿತು. ಜೊತೆಗೆ ದೂರ ಸಂವೇದಿ ದತ್ತಾಂಶದ ಆಧಾರದ ಮೇರೆಗೆ ಸ್ಪೇಷಿಯೋ ಟೆಂಪೋರಲ್ ವಿಶ್ಲೇಷಣೆಯನ್ನು ಜಿಐಎಸ್ ಹಾಗೂ ಇಆರ್‌ಡಿಎಎಸ್ ಇಮೇಜ್ ಸಾಫ್ಟ್‌ವೇರ್ ಅನ್ನು ಬಳಸಿಕೊಂಡು ಮಾಡಲಾಯಿತು. ಭೂಬಳಕೆ ಹಾಗೂ ಭೂ ಹೊದಿಕೆ ನಕ್ಷೆಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಕಾಲ ಸರಣಿ ವಿಶ್ಲೇಷಣೆಯನ್ನೂ (ಮೂರು ದಶಕಗಳ) ಮಾಡಲಾಯಿತು. ಹವಾಮಾನ ವ್ಯತ್ಯಾಸಗಳಿಗಾಗಿ ಮಳೆ ಬರುವ ರೀತಿ ಮತ್ತು ಪ್ರವೃತ್ತಿಯನ್ನೂ ಸಹ ಕಳೆದ ೫ ದಶಕಗಳ ಹಂಗಾಮುವಾರು ದತ್ತಾಂಶಕ್ಕನುಸಾರವಾಗಿ ವಿಶ್ಲೇಷಿಸಲಾಯಿತು. ಈ ವಿಶ್ಲೇಷಣೆಯನ್ನು ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) ದತ್ತಾಂಶವನ್ನು ಬಳಸಿಕೊಂಡು ಮಾಡಲಾಯಿತು.  ಐಎಂಡಿ ವರ್ಗೀಕರಣದ ರೀತ್ಯಾ ಮುಂಗಾರು ಹಂಗಾಮಿನಲ್ಲಿ ಬಿಆರ್‌ಟಿಟಿಆರ್ ೨೮ ವರ್ಷಗಳ ವಾಡಿಕೆ ಮಳೆಯನ್ನು (ಅಂದರೆ ಶೇ.೧೯ರಷ್ಟು ಹೆಚ್ಚು ಅಥವಾ ಶೇ.೧೯ರಷ್ಟು ಕಡಿಮೆ ಪ್ರಮಾಣದ ಮಿತಿಯೊಳಗೆ) ದಾಖಲಿಸಿದೆ ಹಾಗೂ ೧೨ ವರ್ಷಗಳ ಕೊರತೆ ಮಳೆಯನ್ನು ದಾಖಲಿಸಿದೆ. ಕಾಲಾನುಕ್ರಮದಲ್ಲಿ ಮಳೆ ಹಂಗಾಮಗಳಲ್ಲಿ ಬೀಳುವ ಮಳೆ ಪ್ರಮಾಣ ಕಡಿಮೆಯಾಗುತ್ತಿರುವುದನ್ನು ಇದು ಸೂಚಿಸುತ್ತಿದ್ದು, ಕೃಷಿ ಚಟುವಟಿಕೆಗಳಿಗೆ ಅತಿ ಅಗತ್ಯವಾದ ಮಳೆ ಬೀಳದಿದ್ದರೆ ಆಗುವ ಪರಿಣಾಮಗಳ ಬಗ್ಗೆ ಆತಂಕ ಉಂಟಾಗುತ್ತದೆ.

ಉಷ್ಣಾಂಶವು ಹವಾಮಾನದ ಒಂದು ಅತಿ ಮುಖ್ಯ ಅಂಶವಾಗಿದ್ದು, ಸ್ಥಳೀಯ ವಾತಾವರಣದ ರೀತಿಯ ಬದಲಾವಣೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಉಷ್ಣಾಂಶದ ಕನಿಷ್ಠತೆ ಹಾಗೂ ಗರಿಷ್ಠತೆಗಳು ಮಳೆ ಬೀಳುವಿಕೆಯ ರೀತಿಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅದೇ ರೀತಿ ಮಳೆ ಬೀಳುವಿಕೆಯ ರೀತಿ ನೀತಿಗಳು ಉಷ್ಣಾಂಶದ ಏರಿಳಿಕೆಗಳಿಗೂ ಕಾರಣವಾಗುತ್ತದೆ. ಮಳೆ ಮತ್ತು ಉಷ್ಣಾಂಶಗಳೆರಡೂ ನೀರಿನ ಲಭ್ಯತೆ ಮತ್ತು ಬೆಳೆ ಉತ್ಪಾದಕತೆಗಳಲ್ಲಿ ಮೂಲಭೂತ ಪಾತ್ರವನ್ನು ವಹಿಸುತ್ತವೆ.  ಅಧ್ಯಯನ ಪ್ರದೇಶದಲ್ಲಿ ಉಷ್ಣಾಂಶದ ಏರಿಳಿಯುವಿಕೆಯ ಬಗ್ಗೆ ಉತ್ತಮ ತಿಳುವಳಿಕೆಯನ್ನು ಪಡೆಯುವ ಸಲುವಾಗಿ ಅಲ್ಲಿಯ ಸುಮಾರು ೪೦ ವರ್ಷಗಳ ಗರಿಷ್ಟ, ಕನಿಷ್ಟ ಹಾಗೂ ಸರಾಸರಿ ಉಷ್ಣಾಂಶದ ಬಗೆಗಿನ ದತ್ತಾಂಶವನ್ನು ವಿಶ್ಲೇಷಿಸಲಾಗಿದೆ. ದಿವಸದಲ್ಲಿ ದಾಖಲಾಗುವ ಉಷ್ಣಾಂಶದ ದತ್ತಾಂಶವನ್ನು ಒಂದು ನಿರ್ದಿಷ್ಟ ಸಾಲಿಗಾಗಿ ಸರಾಸರಿ ಮಾಡಲಾಗುತ್ತದೆ (ಐಎಂಡಿಯಿಂದ ಅಗತ್ಯ ದತ್ತಾಂಶವನ್ನು ಪಡೆದುಕೊಳ್ಳಲಾಗಿದೆ). ಗರಿಷ್ಟ, ಕನಿಷ್ಟ ಹಾಗೂ ಸರಾಸರಿ ಉಷ್ಣಾಂಶಗಳನ್ನು ವಿಶ್ಲೇಷಿಸಲು ೧೯೭೧ನೇ ಸಾಲನ್ನು ಎಲ್ಲೆಗೆರೆ ವರ್ಷವೆಂದು ಭಾವಿಸಲಾಗಿದೆ. ಕಳೆದ ನಾಲ್ಕು ದಶಕಗಳಲ್ಲಿ ಅಧ್ಯಯನ ಕೈಗೊಳ್ಳಲಾಗಿರುವ ಸಂಪೂರ್ಣ ಪ್ರದೇಶದಲ್ಲಿ ಕನಿಷ್ಟ ಹಾಗೂ ಗರಿಷ್ಟ ಉಷ್ಣಾಂಶಗಳೆರಡರಲ್ಲೂ ೦.೩೮ ಸೆಲ್ಸಿಯಸ್‌ನಷ್ಟು ಏರಿಕೆ ಕಂಡುಬಂದಿದೆ.

ವ್ಯತ್ಯಾಸಗಳು ಸ್ವಾಭಾವಿಕ ಸಸ್ಯ ಸಂಪತ್ತಿನ ಆಧಾರದ ಮೇಲೆ ಉಂಟಾಗುತ್ತಿವೆ. ಇದಕ್ಕಾಗಿ ಅಧ್ಯಯನ ಪ್ರದೇಶದ ವಿವಿಧ ವಲಯಗಳಿಗಾಗಿ ಅಂದರೆ ಮಧ್ಯದ ಪ್ರದೇಶ ಹಾಗೂ ಸುತ್ತುವರಿದಿರುವ ಪ್ರದೇಶ ೧ ಮತ್ತು ೨ ಗಳಿಗಾಗಿ ಜೈವಿಕ–ಭೌತಿಕ ಸೂಚಿಗಳನ್ನು ಅಂದರೆ ಜನಸಂಖ್ಯಾ ಸೂಚಿ, ಭೂ ಬಳಕೆ ಸೂಚಿ, ವೃತ್ತಿ ಸೂಚಿ ಹಾಗೂ ಜೀವನೋಪಾಯ ಸೂಚಿಗಳನ್ನು ಅಭಿವೃದ್ಧಿ ಪಡಿಸಲಾಯಿತು. ಒಟ್ಟುಗೂಡಿತ ದುರ್ಬಲತೆ ಸೂಚಿಗಳ ಆಧಾರದ ಮೇಲೆ ಸುತ್ತುವರಿದ ಪ್ರದೇಶ ೨ ಅತಿ ಹೆಚ್ಚಿನ ದುರ್ಬಲತೆಗೊಳಗಾಗುವ ಸಾಧ್ಯತೆ ಇದೆಯೆಂದೂ, ನಂತರದಲ್ಲಿ ಸುತ್ತುವರಿದ ಪ್ರದೇಶ ೧ ಮತ್ತು ಮಧ್ಯದ ಪ್ರದೇಶಗಳಲ್ಲಿ ಈ ಸಾಧ್ಯತೆ ಇದೆಯೆಂದೂ ಗಮನಿಸಲಾಯಿತು. ಕಳೆದ ಮೂರು ದಶಕಗಳ ಭೂ ಬಳಕೆ ಮತ್ತು ಭೂ ಹೊದಿಕೆ ಬದಲಾವಣೆಗಳನ್ನೂ ಸಹ ವಿಶ್ಲೇಷಿಸಲಾಯಿತು. ಅಧ್ಯಯನ ಪ್ರದೇಶದಲ್ಲಿನ ಬೆಳೆ ಪದ್ಧತಿ ಮತ್ತು ಅರಣ್ಯದ ಹೊದಿಕೆಯಲ್ಲಿ ಬದಲಾವಣೆ ಆಗಿರುವುದು ಕಂಡು ಬಂದಿದೆ. ಒಟ್ಟಾರೆ ಬೆಳೆ ಆವೃತ ಪ್ರದೇಶದ ವಿಸ್ತೀರ್ಣ ಸಾಕಷ್ಟು ಹೆಚ್ಚಾಗಿದ್ದು, ಆ ಪ್ರದೇಶದ ಸುಮಾರು ಶೇ.೪೨.೭೪ರಷ್ಟನ್ನು ಆವರಿಸಿಕೊಂಡಿದೆ. ಇದರಲ್ಲಿ ಸಾಗುವಳಿಯಾದ ನಿವ್ವಳ ಪ್ರದೇಶವು ಶೇ.೮೫.೦೧ರಷ್ಟಿದ್ದು, ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾದ ಪ್ರದೇಶವು ಶೇ.೧೫ರಷ್ಟು ಇದೆ. ಒಟ್ಟಾರೆ ವ್ಯಕ್ತಿಯೊಬ್ಬ ಸಾಗುವಳಿ ಮಾಡುವ ವಿಸ್ತೀರ್ಣವು ಶೇ.೦.೧೪ರಷ್ಟಿದ್ದರೂ, ಇದರಲ್ಲಿ ನಿವ್ವಳ ಸಾಗುವಳಿ ಪ್ರದೇಶವು ಶೇ.೦.೧೧ರಷ್ಟು ಮಾತ್ರ ಇರುವುದು ಸ್ವಾರಸ್ಯಕರವಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ಬಹಳ ಹೆಚ್ಚಾಗಿದೆ. ಬಿಆರ್‌ಟಿ ಪ್ರದೇಶದಲ್ಲಿ ಶೇ.೬೯.೧೨ರಷ್ಟು ಅತಿ ಸಣ್ಣ ರೈತರು ವಾಸವಿದ್ದಾರೆ. ಕಳೆದ ಎರಡು ದಶಕಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ಶೇ.೧೪.೨೨ರಷ್ಟು ಹೆಚ್ಚಳ ಕಂಡಿದೆ.

ಅಧ್ಯಯನ ಪ್ರದೇಶದಲ್ಲಿನ ಬೆಳೆ ಪದ್ಧತಿಯು ಕಾಲಾನುಕ್ರಮದಲ್ಲಿ ಅನೇಕ ಕಾರಣಗಳಿಗಾಗಿ ಬದಲಾವಣೆಯನ್ನು ಕಂಡಿದೆ. ಉದಾಹರಣೆಗಾಗಿ ಕೆಲವು ನಿರ್ಣಾಯಕ ಫಲಿತಾಂಶಗಳನ್ನು ಈ ಮುಂದೆ ನಿರೂಪಿಸಲಾಗಿದೆ: (ಅ) ಮಣ್ಣಲ್ಲಿ ಫಲವತ್ತತೆ ಇಲ್ಲದಿರುವುದು (ಶೇ.೩೨), (ಆ) ಬೆಳೆ ವಿಸ್ತೀರ್ಣದಲ್ಲಿ ಕಡಿತ ಉಂಟಾಗಿರುವುದು (ಶೇ.೩೧), (ಇ) ಒಟ್ಟಾರೆ ಉತ್ಪಾದನೆಯಲ್ಲಿ ನಷ್ಟ ಉಂಟಾಗಿರುವುದು (ಶೇ.೨೪), (ಈ) ಬೆಳೆ ಆವರ್ತನೆ ಮತ್ತು ಬೆಳೆ ಪದ್ಧತಿಗಳಲ್ಲಿನ ಬದಲಾವಣೆ (ಶೇ.೪೩), (ಉ) ಪರಿಕರಗಳ ಬೆಲೆಗಳಲ್ಲಿ ಏರಿಕೆ ಆಗಿರುವುದು. ವಾತಾವರಣದಲ್ಲಿನ ಬದಲಾವಣೆಯೂ ಇದಕ್ಕೆ ಕಾರಣವಾಗಿರಬಹುದು. ಏಕೆಂದರೆ ಅಧ್ಯಯನ ಪ್ರದೇಶದಲ್ಲಿ ಶೇ ೩೪ ರಷ್ಟು ವ್ಯತ್ಯಾಸವು ಮಳೆ ಬೀಳುವಿಕೆಯಲ್ಲಿ ಕಂಡುಬಂದಿದೆ. ಬದಲಾಗುತ್ತಿರುವ ವಾತಾವರಣಕ್ಕೆ ಹೊಂದಿಕೊಳ್ಳುವ ಪ್ರವೃತ್ತಿ ಈ ಪ್ರದೇಶದಲ್ಲಿ ಕಂಡು ಬರುತ್ತಿದೆ. ಆದರೆ ಜೀವನೋಪಾಯಕ್ಕೆ ಅವಲಂಬಿಸುವ ಚಟುವಟಿಕೆಗಳು ಬದಲಾವಣೆ ಹೊಂದುತ್ತಲೇ ಇದ್ದು, ಇದು ಕೃಷಿಯೇತರ ಚಟುವಟಿಕೆಗಳಲ್ಲೂ ಕಂಡು ಬಂದಿದೆ. ಸಾಮಾಜಿಕ ಮತ್ತು ಪರಿಸರ ಪದ್ಧತಿಗಳ ಅಭಿವೃದ್ಧಿಯ ಮೇಲೆ ಇದು ಪ್ರಭಾವ ಬೀರಿದೆ. ಹವಾಮಾನ ಬದಲಾವಣೆಯ ಬಗ್ಗೆ ಸೂಕ್ಷ್ಮ ಮಟ್ಟದ ಅಧ್ಯಯನಗಳು ಮುಖ್ಯವಾಗಿ ಈಗ ಬೇಕಾಗಿದ್ದು, ಇವುಗಳ ಫಲಿತಾಂಶಗಳು ಅಧ್ಯಯನ ಪ್ರದೇಶದ ಸಾಮಾಜಿಕ–ಪರಿಸರಗಳ ಸುಸ್ಥಿರ ಅಭಿವೃದ್ಧಿಗಾಗಿ ಸೂಕ್ತ ಕಾರ್ಯತಂತ್ರಗಳನ್ನು ರೂಪಿಸಲು ನೆರವಾಗಬಹುದಾಗಿದೆ.

## ವ್ಯಾಪಾರ ವಹಿವಾಟು ಸೌಲಭ್ಯಗಳು ಮತ್ತು ಕಾರ್ಯದಕ್ಷತೆ: ಭಾರತದ ಕೆಲವು ಆಯ್ದ ವಿಶೇಷ ಆರ್ಥಿಕ ವಲಯಗಳಿಗೆ ಸಂಬಂಧಿಸಿದಂತೆ ಒಂದು ಮೌಲ್ಯೀಕರಣ

**– ಡಾ. ಮಾಲಿನಿ ಎಲ್. ತಂತ್ರಿ**

ರಾಷ್ಟ್ರದ ವ್ಯಾಪಾರ ವಹಿವಾಟಿನ ಕಾರ್ಯದಕ್ಷತೆಯನ್ನು ಹೆಚ್ಚಿಸಿ, ಆ ಮೂಲಕ ಉದಾರೀಕರಣದ ಅನುಕೂಲತೆಗಳನ್ನು ಪಡೆದುಕೊಳ್ಳುವುದಕ್ಕಾಗಿ ವ್ಯಾಪಾರ ವಹಿವಾಟುಗಳಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಕಾರ್ಯನೀತಿ ನಿರೂಪಿಸುವ ಮಾರ್ಗವು ಇನ್ನೂ ಶೈಶವಾವಸ್ಥೆಯಲ್ಲೇ ಇದೆ. ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಎಂದರೆ ಯಾವ ರೀತಿಯಲ್ಲಿ ಮತ್ತು ಅದನ್ನು ಹೇಗೆ ಮಾಡುವುದು ಎಂಬುದರ ಬಗ್ಗೆ ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ರಾಷ್ಟ್ರಗಳು ಇನ್ನೂ ಒಮ್ಮತಕ್ಕೆ ಬರುವುದರಲ್ಲೇ ಇವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಮಟ್ಟಿಗೆ ಹೇಳುವುದಾದರೆ ಖಂಡಿತವಾಗಿಯೂ ಇದು ಬೊಕ್ಕಸದ ಮೇಲೆ ಹೆಚ್ಚಿನ ಹೊರೆ ಉಂಟುಮಾಡುತ್ತದೆ. ಏಕೆಂದರೆ ಮೂಲಭೂತ ಸೌಕರ್ಯಗಳಿಗಾಗಿ ಭಾರೀ ಬಂಡವಾಳವನ್ನೇ ಹೂಡಬೇಕಾಗುತ್ತದೆ ಮತ್ತು ಪ್ರಸ್ತುತದಲ್ಲಿ ಇರುವ ಸಾಂಸ್ಥಿಕ ವ್ಯವಸ್ಥೆಯನ್ನು ಬದಲಾಯಿಸಲೂ ಸಹ ಖರ್ಚು ವಿಪರೀತವಾಗುತ್ತದೆ. ಇವುಗಳ ಜೊತೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಗುಣಮಟ್ಟದ ಪ್ರಮಾಣದ ಹೆಸರಿನಲ್ಲಿ ವಿಧಿಸುವ ಅನೇಕ ತಾಂತ್ರಿಕ ನಿಯಂತ್ರಣಗಳು ವ್ಯಾಪಾರ ವಹಿವಾಟುಗಳಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಮೂಲಭೂತ ಉದ್ದೇಶದ ಜೊತೆಗೆ ಸಂಘರ್ಷಿಸುತ್ತವೆ. ಉದಾಹರಣೆಗೆ ಹೇಳುವುದಾದರೆ ಈಚೆಗೆ (೨೦೧೩) ವಿಶ್ವ ವ್ಯಾಪಾರ ಸಂಸ್ಥೆಯು ಬಾಲಿಯಲ್ಲಿ ನಡೆಸಿದ ಸಚಿವರುಗಳ ಮಟ್ಟದ ಸಮಾವೇಶದಲ್ಲಿ ಭಾರತವು ಒಂದು ವಿಷಯದ ಬಗ್ಗೆ ಒತ್ತಾಯಿಸಿತು. ಅದೇನೆಂದರೆ ರಫ್ತು ಮಾಡುವ ಯಾವುದೇ ಉತ್ಪನ್ನವನ್ನು ಯಾವುದೇ ಕಾರಣಕ್ಕೆ ತಿರಸ್ಕರಿಸಿದ ಪಕ್ಷದಲ್ಲಿ, ಅದನ್ನು ಪೂರ್ಣವಾಗಿ ರದ್ದುಗೊಳಿಸುವ ಬದಲಾಗಿ ಗಡಿ ಪ್ರದೇಶದಲ್ಲೇ ತಿರಸ್ಕೃತ ಉತ್ಪನ್ನವನ್ನು ವಾಪಸ್ಸು ಪಡೆದುಕೊಳ್ಳಲು ರಫ್ತುದಾರರಿಗೆ ಸುಂಕದ ಅಧಿಕಾರಿಗಳು ವಿಶ್ವಾದ್ಯಂತ ಅನುಮತಿ ನೀಡುವುದನ್ನು ಕಡ್ಡಾಯ ಮಾಡಬೇಕೆಂಬುವುದಾಗಿದೆ. ಅದೂ ಅಲ್ಲದೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ದೇಶದ ಒಳಗೆ ವ್ಯಾಪಾರ ವಹಿವಾಟಿನ ಸುಧಾರಣೆ ಯಾವ ಹಂತಕ್ಕೆ ತಲುಪಿದೆ ಎಂಬುದೂ ಸಹ ಆದ್ಯತೆ ನೀಡಬೇಕಾದ ವಿಷಯಗಳ ಬಗ್ಗೆ ಈ ದೇಶಗಳ ಪೈಕಿಯೇ ಭಿನ್ನಾಭಿಪ್ರಾಯ ಉಂಟು ಮಾಡುತ್ತದೆ. ಒಂದು ನಿರ್ದಿಷ್ಟ ದೇಶದಲ್ಲಿಯೇ ಪ್ರಧಾನ ರಫ್ತು ವಲಯಗಳ ಪೈಕಿಯೇ ವಿವಿಧ ಅಂಶಗಳು ಮತ್ತು ಆದ್ಯತೆಗಳಲ್ಲಿ ಭಿನ್ನತೆ ಉಂಟಾಗುತ್ತದೆ. ಒಂದು ನಿರ್ದಿಷ್ಟವಲಯವು ಯಾವುದೇ ಅಂಶವನ್ನು ಮುಂದೆ ಮಾಡಿದಾಗ, ಆ ಅಂಶವು ವಿಶ್ವವ್ಯಾಪಾರ ಸಂಸ್ಥೆಯ (ಡಬ್ಲ್ಯುಟಿಓ) ವ್ಯಾಪ್ತಿಗೆ ನೇರವಾಗಿ ಬರದಿದ್ದಾಗ್ಯೂ ಸಹ ವಲಯ ನಿರ್ದಿಷ್ಟ ಸುಧಾರಣೆಗಳನ್ನು ಮಾಡಬೇಕಾದ ಅಗತ್ಯತೆಗಳನ್ನು ಸೂಚಿಸುತ್ತದೆ ಹಾಗೂ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ ಪದ್ಧತಿಗಳು ಮತ್ತು ಕ್ರಮಗಳನ್ನು ಸಾಮರಸ್ಯಗೊಳಿಸಲು ಇದು ಅಗತ್ಯವಾಗುತ್ತದೆ.

ಈ ಹಿನ್ನೆಲೆಯನ್ನಿಟ್ಟುಕೊಂಡು ಪ್ರಸ್ತುತ ಅಧ್ಯಯನವು ವಿಶೇಷ ಆರ್ಥಿಕ ವಲಯಗಳಿಗೆ (ಎಸ್‌ಸಿಜಡ್) ಮತ್ತು ಅವಕ್ಕೆ ಸಂಬಂಧಿಸಿದ ಅಂಶಗಳಿಗೆ ಹೆಚ್ಚಿನ ಒತ್ತನ್ನು ನೀಡಿ ಭಾರತದಲ್ಲಿ ಕೈಗೊಳ್ಳಲಾಗಿರುವ ವ್ಯಾಪಾರ ವಹಿವಾಟು ಸುಧಾರಣೆಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದೆ. ದೇಶದ ಒಟ್ಟು ರಫ್ತಿನ ಪೈಕಿ ಸುಮಾರು ಶೇ.೩೦ರಷ್ಟು ಪಾಲು ಹೊಂದಿರುವ ವಲಯವಾದ್ದರಿಂದ ಈ ಅಧ್ಯಯನದಲ್ಲಿ ಎಸ್‌ಇಜಡ್‌ಗಳ ಪ್ರಕರಣವನ್ನು ಕೈಗೆತ್ತಿಕೊಳ್ಳಲಾಗಿದೆ. ಅಧ್ಯಯನದ ಪ್ರಸ್ತುತತೆಯನ್ನು ಈ ಸನ್ನಿವೇಶದಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಈಗಾಗಲೇ ಹಲವಾರು ಅಧ್ಯಯನಗಳು ಭಾರತದ ಎಸ್‌ಇಜಡ್ ಕಾರ್ಯನೀತಿಯನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸಿದ್ದರೂ ಸಹ, ಇನ್ನೂ ಸಾಕಷ್ಟು ಮುಖ್ಯ ಅಂಶಗಳನ್ನು ವಿಶ್ಲೇಷಿಸಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ಈ ಗೂಡುಕಟ್ಟಿದ ನಿರ್ದಿಷ್ಟತೆಗಳನ್ನು (ಕಡಿಮೆ ನಿರ್ಬಂಧಿತ ಕಾರ್ಯಾಚರಣೆ ಸಂಹಿತಿಗಳಿದ್ದರೂ ಕೂಡ ಈಗ ಹೆಚ್ಚು ತೊಡಕಿನಿಂದ ಕೂಡಿರುವ) ಅಧ್ಯಯನ ಮಾಡಲು ಪ್ರಜ್ಞಾಪೂರ್ವಕ ಪ್ರಯತ್ನಗಳು ನಡೆದಿಲ್ಲದಿರುವುದು.

# ಐಸೆಕ್



ಮುಂಚಿನ ಅಧ್ಯಯನಗಳು ಭಾರತೀಯ ಎಸ್‌ಇಜಡ್‌ಗಳನ್ನು ಕಾಲಾನುಕ್ರಮದಲ್ಲಿ ಅವುಗಳ ಕಾರ್ಯದಕ್ಷತೆಯಲ್ಲಾದ ಬದಲಾವಣೆಗಳನ್ನು ವಿಶ್ಲೇಷಿಸುವತ್ತ ಗಮನವನ್ನು ಕೇಂದ್ರೀಕರಿಸಿದ್ದವೇ ಹೊರತು ಈ ಗೂಡುಕಟ್ಟಿದ ನಿರ್ದಿಷ್ಟತೆಗಳ ಒಳಗೆ ಕಾರ್ಯದಕ್ಷತೆಯಲ್ಲಾದ ಬದಲಾವಣೆಗಳ ಹಿಂದಿನ ಕಾರಣವನ್ನು ವಿವರಿಸಿಲ್ಲ. ಜೊತೆಗೆ ವಾಸ್ತವ ಉದ್ದಿಮೆ ಪದ್ಧತಿಗಳು ಅಥವಾ ಕಾರ್ಯನೀತಿಯಲ್ಲಿ ನೀಡಲಾಗಿರುವ ಭರವಸೆಗಳಿಂದ ದೂರ ಸರಿಯಲಾಗಿದೆಯೇ ಎಂಬ ಬಗ್ಗೆ ವಿವರಿಸುವ ಅಧ್ಯಯನಗಳೂ ನಡೆದಿಲ್ಲ. ಈ ಅಧ್ಯಯನದಿಂದ ದೊರೆತ ಫಲಿತಾಂಶವು ಸಾಂಪ್ರದಾಯಿಕ ಇಪಿಜಡ್‌ಗಳಿಗಿಂತ ಚೀನಾ ಮಾದರಿಯ ವ್ಯಾಪಾರ ಕಾರ್ಯನೀತಿಯ ಅನುಕರಿಸುವಿಕೆಯು ಸುಧಾರಣೆ ಎಂದು ತೋರಿತು – ಏಕೆಂದರೆ ಅದು ಗುಣಾತ್ಮಕ ಸ್ಥಿತ್ಯಂತರ ತರುವುದಾಗಿ ನೀಡಿದ್ದ ಭರವಸೆಯನ್ನು ಈಡೇರಿಸುವ ಪ್ರಯತ್ನ ಮಾಡಿತು – ಎಂದು ಮನದಟ್ಟು ಮಾಡಿಸಬಲ್ಲ ವಾದಕ್ಕೆ ನೆರವಾಗಿದೆ. ಆದ್ದರಿಂದ, ಒಂದು ರೀತಿಯಲ್ಲಿ ಎಸ್‌ಇಜಡ್‌ಗಳ ಮೂಲಕ ಸರ್ಕಾರವು ವ್ಯಾಪಾರ ವಹಿವಾಟು ಸುಧಾರಣೆಗೆ ಸಂಬಂಧಿಸಿದ ಅಂಶಗಳನ್ನು ಅನುಷ್ಠಾನಗೊಳಿಸಲು ಯತ್ನಿಸುತ್ತಿದೆ ಎನ್ನಬಹುದಾಗಿದೆ ಮತ್ತು ಆ ಮೂಲಕ ಸಣ್ಣಸಣ್ಣ ಕಾರ್ಯಾಚರಣೆ ಮಾರ್ಗವನ್ನು ಹಿಡಿದಿದ್ದರೂ ಸಹ ಒಟ್ಟಿನಲ್ಲಿ ಕಾರ್ಯನಿರತವಾಗಿದೆ ಎಂದು ಹೇಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದೂ ಹೇಳಬಹುದಾಗಿದೆ.

ಕಾರ್ಯಾದಕ್ಷತೆಗೆ ಸಂಬಂಧಿಸಿದಂತೆ ಹೇಳುವುದಾದರೆ ಸಾಂಪ್ರದಾಯಿಕ ಇಪಿಜಡ್‌ಗಳ ಬದಲಾಗಿ ಎಸ್‌ಇಜಡ್ ಕಾರ್ಯನೀತಿಯನ್ನು ಪರಿಚಯಿಸಿರುವುದು ವ್ಯಾಪಾರ ವಹಿವಾಟಿನ ಮೇಲೆ ಸಕಾರಾತ್ಮಕ ಹಾಗೂ ಗಣನೀಯ ಪ್ರಭಾವವನ್ನು ಬೀರಿದೆ ಎಂದು ಈ ಅಧ್ಯಯನದಿಂದ ತಿಳಿದುಬಂದಿದೆ. ಪ್ರಸ್ತುತದಲ್ಲಿ ರಾಷ್ಟ್ರದ ಒಟ್ಟಾರೆ ರಫ್ತಿನಲ್ಲಿ ಇದರ ಕೊಡುಗೆ ಶೇ.೨೯ ಕ್ಕಿಂತ ಹೆಚ್ಚಿದೆ. ಜೊತೆಗೆ ವ್ಯಾಪಾರ ವಹಿವಾಟಿನ ಕಾರ್ಯದಕ್ಷತೆಯಲ್ಲಿನ ಸುಧಾರಣೆಯು ಸಂಪೂರ್ಣ ಮೌಲ್ಯಾಧಾರಿತವಾಗಿದ್ದು, ಸುಧಾರಿತ ಕಾರ್ಯದಕ್ಷತೆಯು ರಫ್ತು ಘಟಕಗಳ ಹೆಚ್ಚಳದಲ್ಲಿ ಪ್ರತಿಬಿಂಬಿತವಾಗಿದೆ. ಆದರೂ ಸಹ ಎಸ್‌ಇಜಡ್ ಕಾರ್ಯನೀತಿಯು ರಾಷ್ಟ್ರದ ರಫ್ತಿನ ಬುಟ್ಟಿಯನ್ನು ವೈವಿಧ್ಯೀಕರಿಸುವಲ್ಲಿ ವಿಫಲವಾಗಿದೆಯೆನ್ನಬಹುದಾಗಿದೆ. ಎಸ್‌ಇಜಡ್ ಕಾರ್ಯನೀತಿಯು ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ ಅಂಶಗಳಿಗೆ ವಿಳಂಬ ತಗ್ಗಿಸಲು ಮತ್ತು ವಹಿವಾಟು ವೆಚ್ಚವನ್ನು ಕಡಿಮೆಗೊಳಿಸಲು ಶಾಸನ ಬದ್ಧವಾಗಿ ರೂಪಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಗುರುತಿಸಲು ಮತ್ತು ಅನುಷ್ಠಾನಗೊಳಿಸಲು ಪ್ರಾರಂಭಿಕ ಪ್ರಯತ್ನವನ್ನು ಕೈಗೊಂಡಿದೆ ಎಂಬುದನ್ನಂತೂ ನಿಸ್ಸಂದೇಹವಾಗಿ ಹೇಳಬಹುದಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಓಬಿಯುವನ್ನು ಸ್ಥಾಪಿಸಲು ಅದು ಮಾಡಿರುವ ಪ್ರಯತ್ನಗಳು, ಎಸ್‌ಇಜಡ್ ಆನ್‌ಲೈನ್, ಇಪಿಸಿ ಎಸ್‌ಇಜಡ್ – ಇಓಯು ಗಳನ್ನು ಸ್ಥಾಪಿಸಲು ಮಾಡಿರುವ ಪ್ರಯತ್ನಗಳು, ಆದ್ಯತೆಯ ಮೇರೆಗೆ ಸುಂಕದ ವಹಿವಾಟನ್ನು ಇತ್ಯರ್ಥಗೊಳಿಸುವುದು ಹಾಗೂ ವ್ಯವಸ್ಥೆಯ ವಿಕೇಂದ್ರೀಕರಣ ಯತ್ನ ಇವುಗಳೂ ಸಹ ಎಸ್‌ಇಜಡ್‌ನ ಸಕಾರಾತ್ಮಕ ಪರಿಣಾಮಗಳಾಗಿವೆ. ಎಸ್‌ಇಜಡ್‌ಗಳ ಒಳಗೇ ರಫ್ತು ಮಾಡುವುದಕ್ಕೆ ತೆಗೆದುಕೊಳ್ಳುವ ಕಾಲಾವಕಾಶ ಹಾಗೂ ವಹಿವಾಟು ವೆಚ್ಚಗಳು ರಾಷ್ಟ್ರೀಯ ಸರಾಸರಿಗಿಂತ ತುಲನಾತ್ಮಕವಾಗಿ ಕಡಿಮೆಯಿದೆ. ಸಾಂಪ್ರದಾಯಿಕ ಎಸ್‌ಇಜಡ್‌ಗಳು ಜಿಲ್ಲಾಧಿಕಾರಿಗಳ ಕಛೇರಿಗೆ ಇರುವ ಸಾಮೀಪ್ಯತೆ, ಸುಂಕದ ಅಧಿಕಾರಿಗಳಿಗೆ ಇರುವ ಸಾಮೀಪ್ಯತೆ ಹಾಗೂ ಇತರ ವ್ಯಾಪಾರ ಸುಲಲಿತೀಕರಣ ಸಂಸ್ಥೆಗಳಿಗೆ ಇರುವ ಸಾಮೀಪ್ಯತೆಯಿಂದಾಗಿ ಹೊಸ ತಲೆಮಾರಿನ ಎಸ್‌ಇಜಡ್‌ಗಳಿಗಿಂತ ವ್ಯಾಪಾರ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ಉತ್ತಮ ಸ್ಥಿತಿಯಲ್ಲಿವೆ. ಇದೆಲ್ಲದರ ಹೊರತಾಗಿಯೂ ಎಸ್‌ಇಜಡ್ ರಫ್ತುದಾರರು ದಾಖಲೀಕರಣಕ್ಕೆ ಸಂಬಂಧಿಸಿದಂತೆ, ಅನುಸರಣಾ ವಿಧಿ ವಿಧಾನಗಳಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದರ ಪರಿಣಾಮವಾಗಿ ವ್ಯಾಪಾರಕ್ಕೆ ತಗುಲುವ ದಿನಗಳು ಹೆಚ್ಚಾಗುವಿಕೆ, ಸ್ಪಷ್ಟ ಹಾಗೂ ಸೂಚಿತ ವ್ಯಾಪಾರ ಖರ್ಚಿನ ಹೆಚ್ಚಳ ಇತ್ಯಾದಿಗಳು ಉಂಟಾಗುತ್ತಿದ್ದು, ಈ ಬಗ್ಗೆ ಶಾಸನ ರೂಪಿಸಲು ತುರ್ತು ಗಮನ ಹರಿಸಬೇಕಾಗಿದೆ.

## ಬೆಂಗಳೂರು ನಗರ ಸಮೀಕ್ಷೆಗಳು–೨: ಒಂದು ವಾರ್ಡಿನ ಮುಂಚೂಣಿ ಅಧ್ಯಯನ

***– ಪ್ರೊ. ಕಲಾ ಎಸ್.ಶ್ರೀಧರ್, ಡಾ. ಎಸ್.ಮಾನಸಿ ಮತ್ತು ಡಾ. ಕೆ.ಸಿ.ಸ್ಮಿತಾ***

ಈ ಮುಂಚೂಣಿ ಅಧ್ಯಯನದಿಂದಾಗಿ ನಾವು ಈ ಕೆಳಕಂಡ ಸಂಶೋಧನಾ ಪ್ರಶ್ನೆಗಳಿಗೆ ಉತ್ತರಿಸಬಲ್ಲವರಾಗಿದ್ದೇವೆ.

ಬೆಂಗಳೂರಿನ ಕಾರ್ಯನಿರತ ಕಾರ್ಮಿಕ ಮಾರುಕಟ್ಟೆಯು ಅದರ ಸಾಮೀಪ್ಯತೆ ಮತ್ತು ಕೆಲಸಕ್ಕೆ ಹೋಗುವುದಕ್ಕೆ ತಗುಲುವ ಸಮಯದ ದೃಷ್ಟಿಯಿಂದ ತನ್ನ ವ್ಯಾಪ್ತಿಯನ್ನು ಹೊಂದಿದೆ?

ಬೆಂಗಳೂರಿಗರ ಹಿತದೃಷ್ಟಿಯಲ್ಲಿ ಕೆಲಸಗಳು ವೃದ್ಧಿಗೊಳ್ಳುತ್ತಿವೆಯೇ?

ಬೆಂಗಳೂರಿನ ಸಾರ್ವಜನಿಕ ಸೇವೆಗಳ ಮಟ್ಟವು ೧೯೯೦ರ ದಶಕದಲ್ಲಿ ಸುಧಾರಣೆಗೊಂಡಿತೇ?

ಬೆಂಗಳೂರು ನಗರದಲ್ಲಿನ ಪ್ರಾಥಮಿಕ ಶಿಕ್ಷಣ ಮತ್ತು ಆರೋಗ್ಯದ ಸ್ಥಿತಿಗತಿಗಳು ಹೇಗಿವೆ?

ಮೇಲಿನ ಪ್ರಶ್ನೆಗಳಿಗೆ ಉತ್ತರಿಸಲು ಈ ಅಧ್ಯಯನವು ವಾರ್ಡ್ ಸಂಖ್ಯೆ ೧೨೮, ನಾಗರಬಾವಿಯಲ್ಲಿನ ಕುಟುಂಬಗಳ ಪ್ರಾಥಮಿಕ ಸಮೀಕ್ಷೆಗಳನ್ನು ಮಾಡಿದೆ. ಸಮೀಕ್ಷೆಗಳಿಗಾಗಿ ಹಲವಾರು ಸೂಚಿಗಳನ್ನು ಬಳಸಲಾಗಿದೆ. ಅವು ಹೀಗಿವೆ: (೧) ಜನಸಂಖ್ಯೆ, ಸಾಮಾಜಿಕ, ಆರ್ಥಿಕ ಮತ್ತು ಪರಿಸರ;

(೨) ವಾಸದ ಮನೆಗಳು ಮತ್ತು ವಾಸದ ಸ್ಥಿತಿಗತಿಗಳು; (೩) ನಗರದಲ್ಲಿನ ಸಂಚಲನ, ಚಲನಶೀಲತೆ, ವಲಸೆ, ಮನೆ–ಕೆಲಸದ ಸ್ಥಳಕ್ಕೆ ಹೋಗುವಿಕೆ ಹಾಗೂ ಅದರ ಬೆಳವಣಿಗೆಯ ರೀತಿಗಳು.

ಈ ಮುಂಚೂಣಿ ಪ್ರಾತ್ಯಕ್ಷಿಕೆಯು ಮಹಾನಗರದ ಒಂದು ವಾರ್ಡಿನ ೨೦೦ ಪ್ರತಿಕ್ರಿಯೆದಾರರ ಒಂದು ಸಣ್ಣ ಮಾದರಿಯಾದರೂ ಸಹ, ಮುಂದಿನ ಸಂಶೋಧನಾ ಕಾರ್ಯಕ್ರಮಗಳಿಗೆ ಅನುಕೂಲವಾಗುತ್ತದಲ್ಲದೆ ವರದಿ ಮಾಡಲು ಯೋಗ್ಯವಾದ ಸಾಕಷ್ಟು ಆಸಕ್ತಿದಾಯಕ ಅಂಶಗಳನ್ನೂ ಒಳಗೊಂಡಿದೆ.

ಅಧ್ಯಯನದ ವರದಿಯ ಪ್ರಕಾರ ಮಾಸಿಕ ಕಾಯ್ದಿರಿಸಿದ ವೇತನವು ರೂ.೨೦,೫೦೦/– ಆಗಿದ್ದು, ಇದು ಮಾಸಿಕ ಸರಾಸರಿ ವೇತನವಾದ ರೂ.೨೮,೫೦೦/–ಗಳಿಗಿಂತ ಸ್ವಲ್ಪ ಕಡಿಮೆಯಾಗಿದೆ. ಹೀಗಾಗಿ ಕೆಲಸವೊಂದರ ಸರಾಸರಿ ನಿವ್ವಳ ಲಾಭ ತಿಂಗಳಿಗೆ ರೂ.೮,೦೦೦/–ಗಳಾಗುತ್ತವೆ. ಆದರೆ ಹೆಚ್ಚು ಮಾಸಿಕ ಕಾಯ್ದಿರಿಸಿದ ವೇತನವನ್ನು ಇಟ್ಟುಕೊಂಡಿದ್ದು, ಕಡಿಮೆ ವೇತನ ಪಡೆಯುವವರಿಗೆ ಕೆಲಸದಿಂದ ದೊರಕುವ ನಿವ್ವಳ ಲಾಭವು ನಿಷೇಧಾತ್ಮಕವಾಗಿರುತ್ತದೆ. ಹಾಗೆ ನೋಡಿದರೆ ಕೆಲಸದಿಂದ ದೊರಕುವ ನಿವ್ವಳ ಲಾಭವನ್ನು ಕೆಳಗಿನ ಮಟ್ಟದಿಂದ ನೋಡುತ್ತಾ ಬಂದರೆ, ನಿಷೇಧಾತ್ಮಕ ನಿವ್ವಳ ಲಾಭವು ರೂ.೫೪,೦೦೦/–ಗಳಾಗುತ್ತವೆ. ಪ್ರತಿಕ್ರಿಯೆದಾರರ ಪೈಕಿ ನಾಲ್ಕನೆಯ ಒಂದು ಭಾಗದಷ್ಟು ಜನರು ತಮ್ಮ ಕೆಲಸಗಳಿಂದ ನಿಷೇಧಾತ್ಮಕ ನಿವ್ವಳ ಲಾಭ ಪಡೆಯುತ್ತಿದ್ದಾರೆ. ಇನ್ನೂ ಶೇ.೧೬ರಷ್ಟು ಜನರಿಗೆ ತಮ್ಮ ಕೆಲಸಗಳಿಂದ ದೊರಕುವ ನಿವ್ವಳ ಲಾಭವು ಶೂನ್ಯವಾಗಿತ್ತು. ಇಂತಹವರಿಗೆ ಕನಿಷ್ಠಪಕ್ಷ ಅವರು ಅಂದುಕೊಂಡಿದ್ದಷ್ಟಾದರೂ ವೇತನ ಸಿಕ್ಕಿದೆಯೆನ್ನಬಹುದಾಗಿದೆ. ಉಳಿದ ಶೇ.೫೯ರಷ್ಟು ಪ್ರತಿಕ್ರಿಯೆದಾರರಿಗೆ ಅವರ ಕೆಲಸಗಳಲ್ಲಿನ ನಿವ್ವಳ ಲಾಭವು ಸಕಾರಾತ್ಮಕವಾಗಿತ್ತು. ಈ ಬಹುಮತದ ದೃಷ್ಟಿಕೋನದಿಂದ ಒಟ್ಟಿನಲ್ಲಿ ಬೆಂಗಳೂರಿಗರು ಅಭಿವೃದ್ಧಿಗೆ ಪೂರಕವಾದ ಸರಾಸರಿ ವೇತನವನ್ನು ಪಡೆಯುತ್ತಿದ್ದಾರೆ ಎಂದು ಅಭಿಪ್ರಾಯ ಪಡಬಹುದಾಗಿದೆ.

ನಗರದ ಕಾರ್ಯನಿರತ ಕಾರ್ಮಿಕ ಮಾರುಕಟ್ಟೆಯ ವ್ಯಾಪ್ತಿ ಎಷ್ಟಿರಬಹುದು? ಬರ್ಟಾಡನ (೨೦೧೪) ವ್ಯಾಖ್ಯಾನದ ಪ್ರಕಾರ ಅರ್ಧ ಘಂಟೆ ಅಥವಾ ಅದಕ್ಕಿಂತ ಕಡಿಮೆ ವೇಳೆಯ ಪ್ರಯಾಣವನ್ನು ಕೆಲಸದ ಸ್ಥಳಕ್ಕೆ ಹೋಗುವುದಕ್ಕೆ ಮಾಡಬೇಕಾಗಿದ್ದಾಗ ಅದನ್ನು ನಗರ ವ್ಯಾಪ್ತಿಯ ಕಾರ್ಮಿಕ ಮಾರುಕಟ್ಟೆ ಎಂದು ಪರಿಗಣಿಸ ಬಹುದಾಗಿದೆ. ಆ ಪ್ರಕಾರ ನೋಡಿದರೆ ೧೬೪ರ ಪೈಕಿ ೬೬ರಷ್ಟು ಜನರು ಅಂದರೆ ಶೇ.೩೮ರಷ್ಟು ಜನರು ನಗರ ವ್ಯಾಪ್ತಿಯ ಕಾರ್ಮಿಕ ಮಾರುಕಟ್ಟೆಯೊಳಗೆ ಇದ್ದಾರೆ. ಅರ್ಧಕ್ಕಿಂತಲೂ ಹೆಚ್ಚಿನ ಜನರು ನಗರ ಕಾರ್ಮಿಕ ಮಾರುಕಟ್ಟೆಯ ವ್ಯಾಪ್ತಿಯಿಂದ ಹೊರಗೇ ಇದ್ದಾರೆ. ಹೀಗಾಗಿ ಅವರೆಲ್ಲಾ ಅಷ್ಟೇನೂ ಲಾಭದಾಯಕವಲ್ಲದ ಪ್ರಯಾಣದಲ್ಲಿ ವೇಳೆ ಕಳೆಯುತ್ತಿದ್ದಾರೆ ಮತ್ತು ನಗರದ ಆರ್ಥಿಕ ಉತ್ಪಾದಕತೆಗೆ ಕಾಣಿಕೆ ನೀಡುತ್ತಿಲ್ಲ.

ಕೆಲಸಕ್ಕೆ ಹೋಗಿ ಬರಲು ಸಾಮಾನ್ಯ ಕುಟುಂಬಗಳಿಗೆ ಒಂದು ಕಡೆಯ ಪ್ರಯಾಣಕ್ಕೆ ಸರಾಸರಿ ೪೨ ನಿಮಿಷಗಳು ತಗುಲುತ್ತಿದ್ದು, ೨೦೦೧ನೇ ಇಸವಿಯಿಂದ ಇಲ್ಲಿಯವರೆಗೆ ಈ ಅವಧಿ ಕೇವಲ ಒಂದು ನಿಮಿಷದಷ್ಟು ಮಾತ್ರ ಹೆಚ್ಚಿದೆ. ಬಹುಶ: ಇದು ಎಲ್ಲಾ ಬೆಂಗಳೂರಿಗರಿಗೆ ಅನ್ವಯವಾಗದಿರಬಹುದು. ಏಕೆಂದರೆ ನಮ್ಮ ದತ್ತಾಂಶವು ಕೇವಲ ಒಂದು ವಾರ್ಡಿನದ್ದು ಮಾತ್ರ ಆಗಿದೆ.

ಮೂಲಭೂತ ಸೇವೆಗಳ ವಿತರಣೆಗೆ ಸಂಬಂಧಿಸಿದಂತೆ ಪ್ರತಿ ಕುಟುಂಬದ ದಿನದ ಸರಾಸರಿ ನೀರಿನ ಬಳಕೆ ೩೨೧.೫ ಲೀಟರ್ ಆಗಿದ್ದು, ಸರಾಸರಿ ೫.೯ ಘಂಟೆಗಳಿಗೆ ವ್ಯಕ್ತಿಯೊಬ್ಬನಿಗೆ ೮೨.೮೬ ಲೀಟರ್ ನೀರು ಸಿಗುತ್ತಿದೆ. ಕೊಳಚೆ ಪ್ರದೇಶದ ಕುಟುಂಬಗಳಲ್ಲಿ ಈ ಪ್ರಮಾಣ ಕಡಿಮೆಯಿದ್ದು, ಪ್ರತಿ ವ್ಯಕ್ತಿಗೆ ೫೯ ಲೀಟರ್ ಸಿಗುತ್ತಿತ್ತು. ನಗರಾಭಿವೃದ್ಧಿ ಸಚಿವಾಲಯದ ಸೇವಾಮಟ್ಟದ ಎಲ್ಲೆಗೆರೆಗಳ (೨೦೧೦) ಪ್ರಕಾರ ರಾಷ್ಟ್ರೀಯ ನಗರೀಕರಣ ಆಯೋಗವು ಶಿಫಾರಸು ಮಾಡಿರುವ ಆದರೆ ಅಪ್ರಚಲಿತವಾದ ೧೩೫ ಲೀಟರ್‌ಗಳಿಗಿಂತಲೂ ಸಹ ಇದು ಕಡಿಮೆಯೇ ಆಗಿದೆ.

ಕೊಳಚೆ ಪ್ರದೇಶದ ವಾಸಿಗಳಿಗೆ ನೀರು ಪೂರೈಕೆಗೆ ಮಾಸಿಕ ೧೯೧ ರೂಪಾಯಿಗಳು ತಗಲುತ್ತಿದ್ದು, ಇದು ಇತರ ಎಲ್ಲಾ ಕುಟುಂಬವಾಸಿಗಳ ನೀರು ಪೂರೈಕೆಗಿಂತ (ರೂ ೧೦೨.೫೦) ದುಬಾರಿಯಾಗಿದೆ. ಕೊಳಚೆ ವಾಸಿಗಳ ಸ್ಥಿತಿಯು ದುರ್ಬಲವಾಗಿದ್ದು, ಖಾಸಗಿ ನೀರಿನ ಟ್ಯಾಂಕುಗಳನ್ನು ಆಶ್ರಯಿಸಬೇಕಾಗಿದೆ.

ಹೆಚ್ಚಿನ ಪ್ರತಿಕ್ರಿಯೆದಾರರಿಗೆ ಚರಂಡಿ ವ್ಯವಸ್ಥೆ ಸೌಲಭ್ಯ ಸಿಕ್ಕಿದೆ. ಕೇವಲ ಶೇ.೨ರಷ್ಟು ಜನ ಮಾತ್ರ ಸಾರ್ವಜನಿಕ ಶೌಚಾಲಯವನ್ನು ಉಪಯೋಗಿಸಬೇಕಾಗಿದೆ. ಘನತ್ಯಾಜ್ಯಕ್ಕೆ ಸಂಬಂಧಿಸಿದಂತೆ ಶೇ.೯೫ ಕ್ಕಿಂತಲೂ ಹೆಚ್ಚಿನ ಜನರು ಸ್ಥಳೀಯ ಆಡಳಿತ ವ್ಯವಸ್ಥೆಯು ಘನ ತ್ಯಾಜ್ಯವನ್ನು ಸಂಗ್ರಹಿಸುತ್ತಿದೆಯೆಂದರು.

ಆರೋಗ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಹೆಚ್ಚಿನ ಜನರು ಹೃದಯದ ಸಮಸ್ಯೆ, ರಕ್ತದ ಏರೊತ್ತಡ, ಮಧುಮೇಹ, ಉಸಿರಾಟದ ಸಮಸ್ಯೆಗಳು ಮತ್ತು ತಲೆನೋವಿನಿಂದ ಬಳಲುತ್ತಿದ್ದರು. ಇವುಗಳ ಪರಿಹಾರಕ್ಕಾಗಿ ಹೆಚ್ಚಿನ ಜನರು ಖಾಸಗಿ ಆಸ್ಪತ್ರೆ ಮತ್ತು ಖಾಸಗಿ ಔಷಧಾಲಯಗಳನ್ನು ಆಶ್ರಯಿಸಿದ್ದರು. ಸ್ವಲ್ಪ ಜನರು ಮಾತ್ರ ಸರ್ಕಾರಿ ಆಸ್ಪತ್ರೆಗಳನ್ನು ಆಶ್ರಯಿಸಿದ್ದರು.



ಹೆಚ್ಚಿನ ಸಂಖ್ಯೆಯ ಬಾಲಕರು ಮತ್ತು ಬಾಲಕಿಯರು ಶಾಲೆಗೆ ಸೇರಿದ್ದರು. ಹೆಚ್ಚಿನ ವಿದ್ಯಾರ್ಥಿಗಳು ಆಂಗ್ಲ ಮಾಧ್ಯಮದ ಶಾಲೆಗಳಿಗೆ ಸೇರಿದ್ದು, ಸ್ವಲ್ಪ ವಿದ್ಯಾರ್ಥಿಗಳು ಮಾತ್ರ ಕನ್ನಡ ಮಾಧ್ಯಮ ಶಾಲೆಗಳಿಗೆ ಸೇರಿದ್ದರು. ಆಂಗ್ಲ ಮಾಧ್ಯಮದ ಶಿಕ್ಷಣಕ್ಕೆ ಇರುವ ಬಲವಾದ ಆದ್ಯತೆಯನ್ನು ಇದು ತೋರಿಸುತ್ತದೆ. ಸುಮಾರು ನಾಲ್ಕನೆಯ ಒಂದು ಭಾಗದಷ್ಟು ಪೋಷಕರು ಉತ್ತಮ ಶಿಕ್ಷಣ ಹಾಗೂ ಶಿಸ್ತು ಇರುವ ಶಾಲೆಗಳನ್ನು ಆರಿಸಿಕೊಂಡಿದ್ದರು.

ಈ ಪ್ರಾರಂಭಿಕ ಫಲಿತಾಂಶಗಳನ್ನು ಆಧರಿಸಿ ಮಾಡಬಹುದಾದ ಶಾಸನಗಳು ಈ ರೀತಿ ಇವೆ: (೧) ನಗರದಲ್ಲಿ ಸಂಚಾರ ವ್ಯವಸ್ಥೆಯನ್ನು ಸುಧಾರಿಸುವುದು, (೨) ನಗರದ ಆರ್ಥಿಕ ಉತ್ಪಾದಕತೆಯನ್ನು ಹೆಚ್ಚಿಸುವುದು, (೩) ಸರ್ಕಾರಿ ಶಾಲೆಗಳು ಮತ್ತು ಆಸ್ಪತ್ರೆಗಳ ಗುಣಮಟ್ಟವನ್ನು ಹೆಚ್ಚಿಸಿ ಜನರು ಅವುಗಳನ್ನು ಹೆಚ್ಚಾಗಿ ಅವಲಂಬಿಸುವಂತೆ ಮಾಡುವುದು, (೪) ಉತ್ತಮ ಆರೋಗ್ಯ ಮತ್ತು ಗುಣಮಟ್ಟದ ಜೀವನಕ್ಕಾಗಿ ನಗರದ ಮೂಲಭೂತ ಸೇವೆಗಳನ್ನು ಮತ್ತು ಪರಿಸರವನ್ನು ಅನುಕೂಲಕರವಾಗಿ ಮಾಡುವುದು.

## ಬೆಂಗಳೂರು ನಗರದ ರಸ್ತೆಬದಿಯ ಮಹಿಳಾ ವ್ಯಾಪಾರಸ್ಥರ ಒಂದು ಅಧ್ಯಯನ

**– *ಪ್ರೊ. ಆರ್.ಮುತ್ತುರಾಯಪ್ಪ ಮತ್ತು ಡಾ. ಚನ್ನಮ್ಮ ಕಂಬಾರ***

ಈ ಅಧ್ಯಯನದ ಮುಖ್ಯ ಉದ್ದೇಶವು ರಸ್ತೆ ಬದಿಯ ಮಹಿಳಾ ವ್ಯಾಪಾರಸ್ಥರ ಕಾರ್ಯನಿರತ ಬದುಕನ್ನು ವಿಶ್ಲೇಷಿಸುವುದಾಗಿದೆ ಮತ್ತು ಅವರ ಸಮಸ್ಯೆಗಳು ಹಾಗೂ ಯಾವ ಪರಿಸ್ಥಿತಿಗಳು ಅವರನ್ನು ರಸ್ತೆ ಬದಿಯ ವ್ಯಾಪಾರಕ್ಕೆ ತಳ್ಳಿದವು ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಇದಕ್ಕಾಗಿ ಅಧ್ಯಯನವು ಪ್ರಾಥಮಿಕ ಹಾಗೂ ಉಪ ಮಾಹಿತಿ ಇವೆರಡನ್ನೂ ಬಳಸಿಕೊಂಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಯ ೨೦ ವಾರ್ಡ್‌ಗಳಲ್ಲಿನ ರಸ್ತೆ ಬದಿಯ ಮಹಿಳಾ ವ್ಯಾಪಾರಸ್ಥರಿಂದ ಪ್ರಾಥಮಿಕ ಮಾಹಿತಿಯನ್ನು ಪಡೆಯಲಾಗಿದೆ. ರಸ್ತೆ ಬದಿಯ ಮಹಿಳಾ ವ್ಯಾಪಾರಸ್ಥರನ್ನು ಸಂಪರ್ಕಿಸಲು ಸ್ನೋಬಾಲ್ ಪದ್ಧತಿಯನ್ನು ಬಳಸಲಾಯಿತು ಹಾಗೂ ಒಟ್ಟಾರೆಯಾಗಿ ೩೧೬ ಮಹಿಳೆಯರಿಂದ ದತ್ತಾಂಶವನ್ನು ಪಡೆಯಲು ಸಾಧ್ಯವಾಯಿತು.

ಈ ಅಧ್ಯಯನದ ಮೂಲಕ ಬೆಂಗಳೂರು ನಗರದ ರಸ್ತೆ ಬದಿಯ ವ್ಯಾಪಾರಸ್ಥರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲಾಗಿದೆ. ವ್ಯಾಪಾರಸ್ಥರು ಎದುರಿಸುವ ಸಮಸ್ಯೆಗಳು ಹಾಗೂ ಅವರ ಜೀವನದ ಸ್ಥಿತಿಗತಿಗಳನ್ನು ಅಧ್ಯಯನವು ವಿಶ್ಲೇಷಿಸಿದೆ. ಈ ವಿಶ್ಲೇಷಣೆಯು ಖಾಸಗಿ ಸಾಲ ನೀಡುವವರ ಮೇಲೆ ವ್ಯಾಪಾರಸ್ಥರು ಹೊಂದಿರುವ ಅವಲಂಬನೆಯನ್ನು ತಿಳಿಸುವುದಲ್ಲದೆ, ಜೀವನೋಪಾಯ ಚಟುವಟಿಕೆಯನ್ನು ಪ್ರಾರಂಭಿಸಲು ಪ್ರಚಲಿತದಲ್ಲಿರುವ ಅನೌಪಚಾರಿಕ ಬೆಂಬಲ ಪದ್ಧತಿಯ ಬಗ್ಗೆಯೂ ಬೆಳಕು ಚೆಲ್ಲುತ್ತದೆ. ಒಂದು ಫಲಿತಾಂಶವೇನೆಂದರೆ ಹೆಚ್ಚು ಕಾಲ ವ್ಯಾಪಾರ ಮಾಡಿದ ಮಾತ್ರಕ್ಕೆ ಅದಕ್ಕನುಗುಣವಾಗಿ ಲಾಭ ಸಿಕ್ಕಿಲ್ಲ ಎನ್ನುವುದು. ರಸ್ತೆಯಲ್ಲಿ ಅವರು ಅನೇಕ ಸಮಸ್ಯೆಗಳನ್ನು ಎದುರಿಸಿದರೂ ಸಹ, ವೃತ್ತಿಯನ್ನು ಮಾತ್ರ ಮುಂದುವರಿಸಿಯೇ ಮುಂದುವರಿಸುತ್ತಾರೆ. ಏಕೆಂದರೆ ಅವರಿಗೆ ಜೀವನೋಪಾಯಕ್ಕಾಗಿ ಬೇರೆ ಯಾವ ಉತ್ತಮ ಪರ್ಯಾಯ ಮಾರ್ಗವೂ ಇರುವುದಿಲ್ಲ. ಅವರ ವ್ಯಾಪಾರದಿಂದಲೇ ಕುಟುಂಬದ ನಿರ್ವಹಣೆ ಆಗಬೇಕಿರುತ್ತದೆ. ಈ ಎಲ್ಲ ಅಡ್ಡಿ ಆತಂಕಗಳ ನಡುವೆಯೂ ಅಧ್ಯಯನದ ವ್ಯಾಪ್ತಿಗೆ ಬಂದಿರುವ ಮಹಿಳಾ ವ್ಯಾಪಾರಸ್ಥರು ಒಳ್ಳೆಯ ಮಾರ್ಗದಲ್ಲಿ ಜೀವನೋಪಾಯ ಮಾಡುತ್ತಿದ್ದೇವೆಂಬ ತೃಪ್ತಿಯಲ್ಲಿದ್ದಾರೆ.

ನಗರದ ವಾತಾವರಣದಲ್ಲಿ ಅವರನ್ನು ಇರಿಸುವುದಕ್ಕೆ ಹಾಗೂ ಜೀವನಕ್ಕಾಗಿ ದುಡಿಯುವುದಕ್ಕಾಗಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಅದರಿಂದಾಗಿ ಅವರು ಕಾನೂನಿಗೆ ಅನುಗುಣವಾಗಿ ಮತ್ತು ಮರ್ಯಾದೆಯಿಂದ ತಮ್ಮ ವೃತ್ತಿಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಗರದ ಯೋಜನೆ ರೂಪಿಸುವಲ್ಲಿ ಅವರನ್ನೂ ಸೇರಿಸಿಕೊಳ್ಳಬೇಕಾಗುತ್ತದೆ. ಖಾಸಗಿ ಲೇವಾದೇವಿಗಾರರಿಂದ ಹಣ ಪಡೆಯಲು ಅವರು ಕೊಡಬೇಕಾದ ಯದ್ವಾತದ್ವಾ ಬಡ್ಡಿಯಿಂದ ಪಾರುಮಾಡುವುದಕ್ಕಾಗಿ ಅವರುಗಳಿಗೆ ಸಾಂಸ್ಥಿಕ ಹಣಕಾಸು ನೆರವಿನ ಸೌಕರ್ಯ ಒದಗಿಸಬೇಕು. ವ್ಯಾಪಾರಸ್ಥರನ್ನು ವ್ಯಾಪಾರದ ಸ್ಥಳದಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳುವ ಹೊಣೆಗಾರಿಕೆಗೆ ಬಾಧ್ಯಸ್ಥರನ್ನಾಗಿ ಮಾಡಬೇಕು. ನಗರ ಹಾಗೂ ಸಾರ್ವಜನಿಕರ ಬಗ್ಗೆ ಅವರ ಹೊಣೆಗಾರಿಕೆ ಮತ್ತು ವಹಿಸಬೇಕಾದ ಪಾತ್ರದ ಕುರಿತು ಅವರುಗಳಿಗೆ ತಿಳುವಳಿಕೆ ನೀಡುವ ಸಲುವಾಗಿ ಸರ್ಕಾರೇತರ ಸಂಸ್ಥೆಗಳ ಪರಿಣಾಮಕಾರಿ ಮಧ್ಯಂತರ ಪ್ರವೇಶ ಇರಬೇಕು.

ಜೊತೆಗೆ ಈ ಅಧ್ಯಯನವು ನಗರದಲ್ಲಿನ ಅನೌಪಚಾರಿಕ ವಲಯದಲ್ಲಿನ ಕಾರ್ಮಿಕರ ಬವಣೆಯನ್ನು ತಿಳಿದುಕೊಳ್ಳುವ ಪ್ರಾರಂಭಿಕ ಹೆಜ್ಜೆಯಾಗಬಹುದಾಗಿದೆ. ಮುಂದೆ ಈ ವಿಷಯದ ಬಗ್ಗೆ ತೆಗೆದುಕೊಳ್ಳಬಹುದಾದ ಅಧ್ಯಯನಗಳ ವ್ಯಾಪ್ತಿಯನ್ನು ಪ್ರಸ್ತುತ ಅಧ್ಯಯನವು ವಿಸ್ತರಿಸಿದೆ. ಅನೌಪಚಾರಿಕ ವಲಯದ ಕಾರ್ಮಿಕರ ಇತರ ಸಮಸ್ಯೆಗಳಾದ ಸಾರ್ವಜನಿಕ ಸ್ಥಳಗಳನ್ನು ಆಕ್ರಮಿಸಿಕೊಳ್ಳುವುದು, ಖಾಸಗಿ ಲೇವಾದೇವಿಗಾರರ ಮುಷ್ಟಿಗೆ ಸಿಕ್ಕುವುದು ಹಾಗೂ ಇತರ ಸಂಬಂಧಿತ ವಿಷಯಗಳನ್ನು ಸಾಮಾನ್ಯವಾಗಿ ಪುರುಷರೂ ಒಳಗೊಂಡಂತಹ ಆದರೆ ಮಹಿಳೆಯರನ್ನು ಪ್ರಧಾನವಾಗಿಸಿಕೊಂಡು ಮುಂದಿನ ಅಧ್ಯಯನಗಳನ್ನು ಮಾಡಬಹುದಾಗಿದೆ.

## ಕರ್ನಾಟಕದಲ್ಲಿ ಎಚ್‌ಎಂಐಎಸ್ ದತ್ತಾಂಶದ ಗುಣಮಟ್ಟ: ಜಿಲ್ಲಾಮಟ್ಟದ ಒಂದು ವಿಶ್ಲೇಷಣೆ

*ಡಾ. ಸಿ.ಎಂ.ಲಕ್ಷ್ಮಣ ಮತ್ತು ಡಾ. ಪಿ.ಪ್ರಭುಸ್ವಾಮಿ*

ಈ ಅಧ್ಯಯನದ ಮುಖ್ಯ ಉದ್ದೇಶವು ಆಯ್ದ ಕೆಲವು ಆರ್‌ಸಿಎಚ್ ಸೂಚಿಗಳನ್ನು ವಿಶ್ಲೇಷಿಸಿ ಕರ್ನಾಟಕದಲ್ಲಿ ಪಡೆಯಲಾದ ಎಚ್‌ಎಂಐಎಸ್ ದತ್ತಾಂಶದ ವ್ಯಾಪ್ತಿ ಮತ್ತು ಗುಣಮಟ್ಟವನ್ನು ತಿಳಿದುಕೊಳ್ಳುವುದಾಗಿದೆ. ರಾಜ್ಯದ ಜಿಲ್ಲೆಗಳಾದ್ಯಂತ ಆರೋಗ್ಯ ಸೇವೆಯ ಗುಣಮಟ್ಟವನ್ನು ತಿಳಿದುಕೊಳ್ಳುವುದು ಮತ್ತು ಆಗುತ್ತಿರುವ ತಪ್ಪುಗಳ ರೀತಿಯನ್ನು ತಿಳಿಯುವುದಕ್ಕಾಗಿ ಮುಖ್ಯವಾಗಿ ಈ ಪ್ರಯತ್ನ ಮಾಡಲಾಗಿದೆ. ವಿಶ್ಲೇಷಣೆಯಲ್ಲಿ ಹೋಲಿಕೆಯ ಉದ್ದೇಶಕ್ಕಾಗಿ ೨೦೧೧ರ ಜನಗಣತಿ ದತ್ತಾಂಶ ಮತ್ತು ಡಿಎಲ್‌ಎಚ್‌ಎಸ್-೪ ದತ್ತಾಂಶಗಳನ್ನು ಬಳಸಿಕೊಳ್ಳಲಾಗಿದೆ. ಎಚ್‌ಎಂಐಎಸ್ ದತ್ತಾಂಶ ಹಾಗೂ ಗುಣಮಟ್ಟದಲ್ಲಿ ಕಾಲಾನುಕ್ರಮದಲ್ಲಿ ಗಣನೀಯ ಸುಧಾರಣೆಯಾಗಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅನುಷ್ಠಾನಗೊಳಿಸುತ್ತಿರುವ ವಿವಿಧ ಆರೋಗ್ಯ ಕಾರ್ಯಕ್ರಮಗಳ ಉಸ್ತುವಾರಿಗಾಗಿ ಈ ದತ್ತಾಂಶವನ್ನು ಈಗ ಹೆಚ್ಚು ಹೆಚ್ಚಾಗಿ ಉಪಯೋಗಿಸಲಾಗುತ್ತಿದೆ.

ವಿಶ್ಲೇಷಣೆಯ ಪ್ರಕಾರ ರಾಜ್ಯಮಟ್ಟದಲ್ಲಿ ಪಡೆಯಲಾಗಿರುವ ಎಚ್‌ಎಂಐಎಸ್ ದತ್ತಾಂಶವು ಜನನ ಪ್ರಮಾಣದ ನಾಲ್ಕನೇ ಒಂದು ಭಾಗವನ್ನು ದಾಖಲಿಸಿಲ್ಲ. ಮುಖ್ಯವಾಗಿ ದೊಡ್ಡ ಆಸ್ಪತ್ರೆಗಳು ಹಾಗೂ ಖಾಸಗಿ ಆರೋಗ್ಯ ಸಂಸ್ಥೆಗಳು ಜನನ ಪ್ರಮಾಣವನ್ನು ಸರಿಯಾಗಿ ದಾಖಲಿಸಿಲ್ಲದೆ ಇರುವುದು ಇದಕ್ಕೆ ಕಾರಣವಾಗಿದೆ. ಎಎನ್‌ಸಿ ನೋಂದಣಿಗೆ ಸಂಬಂಧಿಸಿದಂತೆ ಜನಗಣತಿ ಅಂದಾಜು ಮತ್ತು ಡಿಎಲ್‌ಎಚ್‌ಎಸ್-೪ಗಳ ಅಂದಾಜಿಗಿಂತ ಹೆಚ್ಚಿನ ಪ್ರಮಾಣ ವರದಿಯಾಗಿದೆ. ಆರೋಗ್ಯ ಕೇಂದ್ರದ ಮಟ್ಟದಲ್ಲಿಯೇ ನೋಂದಣಿಯ ಪುನರಾವರ್ತನೆಗೊಂಡಿರುವ ಸಾಧ್ಯತೆ ಇದೆ. ಜಿಲ್ಲೆಗಳು ಶೇ.೧೦೦ರಷ್ಟು ನೋಂದಣಿಯನ್ನು ತೋರಿಸಿದ್ದು, ಗರ್ಭಿಣಿ ಸ್ತ್ರೀಯರ ನೋಂದಣಿ ಒಂದಕ್ಕಿಂತ ಹೆಚ್ಚು ಆರೋಗ್ಯ ಕೇಂದ್ರಗಳಲ್ಲಿ ನಡೆದಿರಬಹುದಾಗಿದೆ. ಇದರ ಬದಲಾಗಿ ಎಎನ್‌ಸಿ ನೋಂದಣಿಯು ಪೂರ್ಣ ಪ್ರಮಾಣದಲ್ಲಿ ಆಗಿಲ್ಲದೆಯೂ ಇರುವ ಸಾಧ್ಯತೆಯಿದೆ. ಹೀಗಿದ್ದ ಪಕ್ಷದಲ್ಲಿ ಅದನ್ನು ಸರಿಪಡಿಸುವ ಅಗತ್ಯವೂ ಇದೆ. ಒಟ್ಟಾರೆ ಎಎನ್‌ಸಿ ನೋಂದಣಿ ಹಾಗೂ ಮೊದಲ ಮೂರು ತಿಂಗಳಲ್ಲಿನ ಎಎನ್‌ಸಿಗಳೂ ಸಹ ಇದೇ ಸಮಸ್ಯೆಯನ್ನು ಎದುರಿಸುತ್ತಿವೆ.

ರಕ್ತಹೀನತೆಯಿಂದ ಬಳಲುವ ಗರ್ಭಿಣಿಯರ ಬಗೆಗಿನ ದತ್ತಾಂಶವು ಸ್ವಲ್ಪಮಟ್ಟಿಗೆ ಉತ್ತಮವಾಗಿದ್ದರೂ, ಪುನರಾವರ್ತನೆಯ ಸಮಸ್ಯೆ ಇಲ್ಲೂ ಕಾಡಿದೆ. ಈ ದತ್ತಾಂಶವು ಕೆಲವು ಜಿಲ್ಲೆಗಳಲ್ಲಿ ಶೇ ೧೦೦ಕ್ಕಿಂತ ಹೆಚ್ಚಿನ ಪ್ರಗತಿಯನ್ನು ತೋರಿಸಿದ್ದು, ಒಬ್ಬಳೇ ಗರ್ಭಿಣಿ ಸ್ತ್ರೀಯು ಹಲವಾರು ಬಾರಿ ರಕ್ತಹೀನತೆ ಪರೀಕ್ಷೆಯನ್ನು ಮಾಡಿಸಿಕೊಂಡಿರಬಹುದಾಗಿದ್ದು, ಎಚ್‌ಎಂಐಎಸ್ ದತ್ತಾಂಶವೂ ಸಹ ಈ ಪುನರಾವರ್ತನೆಯನ್ನು ಪ್ರತಿಬಿಂಬಿಸಿರಬಹುದಾಗಿದೆ. ಎಂಟಿಪಿಯ ಬಗೆಗಿನ ದತ್ತಾಂಶ, ಪ್ರಸವದ ಸ್ಥಳ, ಸಿ-ಸೆಕ್ಷನ್ ಪ್ರಸವ ಹಾಗೂ ನವಜಾತ ಶಿಶುಗಳ ಆರೈಕೆಯ ಬಗೆಗಿನ ದತ್ತಾಂಶವು ಸ್ವಲ್ಪಮಟ್ಟಿಗೆ ತೃಪ್ತಿಕರವಾಗಿದೆ. ಹೆರಿಗೆಯಾದ ೪೮ ಗಂಟೆಗಳ ಒಳಗಿನ ಪರೀಕ್ಷೆ ಹಾಗೂ ೪೮ ಗಂಟೆಗಳಿಂದ ೧೪ ದಿವಸಗಳ ಒಳಗಿನ ಪರೀಕ್ಷೆಯ ದತ್ತಾಂಶವು ಸಮಂಜಸವಾಗಿದ್ದರೂ ಸಹ, ಇಲ್ಲಿಯೂ ಪುನರೆಣಿಕೆಯ ಸಾಧ್ಯತೆ ಇರಬಹುದಾಗಿದೆ.

## ಕರ್ನಾಟಕದ ದಲಿತ ಕುಟುಂಬಗಳ ಸಾಮಾಜಿಕ-ಆರ್ಥಿಕ ಸಾಮರ್ಥ್ಯಗಳ ಒಂದು ಅಂದಾಜು

*- ಡಾ. ಐ.ಮಾರುತಿ ಮತ್ತು ಡಾ. ಪೆಸಲ ಬೂಸೆಣ್ಣ*

ಭಾರತ ಸರ್ಕಾರವು ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ಸೌಲಭ್ಯ ವಂಚಿತ ಜನರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳನ್ನು ಅಭಿವೃದ್ಧಿ ಪಡಿಸಲು ಮಹತ್ವವನ್ನು ನೀಡಿದೆ. ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯ ಅತಿ ಮಹತ್ವದ ಗುರಿಯು ರಾಷ್ಟ್ರದ ಮುಖ್ಯ ವಾಹಿನಿಯಲ್ಲಿ ಕಡು ಬಡವರು ಮತ್ತು ಸೌಲಭ್ಯ ವಂಚಿತ ಜನರನ್ನು ತರುವುದಕ್ಕಾಗಿ ಅವರ ಸಾಮಾಜಿಕ-ಆರ್ಥಿಕ ಸಮಾನತೆಯನ್ನು ದೃಢ ಪಡಿಸಿಕೊಳ್ಳುವುದಾಗಿತ್ತು. ಈ ದೂರದೃಷ್ಟಿಯನ್ನು ಒಳಗೊಂಡು ಯೋಜನೆಯನ್ನು ಹಲವು ದಾರಿಗಳಲ್ಲಿ ಮುನ್ನಡೆಸಿದರೂ ಸಹ, ಆರ್ಥಿಕ ಪ್ರಗತಿಯು ವೈವಿಧ್ಯಮಯ ಸಮಸ್ಯೆಗಳ ತೊಡಕಿನಿಂದೊಡ-ಗೂಡಿರುವುದರಿಂದ ಹೆಚ್ಚಿನ ಪೂರ್ವ ಸಿದ್ಧತೆಯ ಅಗತ್ಯವಾಗಿತ್ತು. ನಮ್ಮ ದೇಶದಲ್ಲಿ ವಂಚಿತ ಸಮುದಾಯಗಳನ್ನು ಮುಖ್ಯ ವಾಹಿನಿಯಲ್ಲಿ ಸೇರ್ಪಡೆಗೊಳಿಸುವ ಗುರಿಯನ್ನು ಭಾರತದಲ್ಲಿ ದಲಿತರ ಅಸಮಾನತೆಗೆ ಐತಿಹಾಸಿಕ ಹಿನ್ನೆಲೆಯಿರುವುದರಿಂದಲೇ ಇಟ್ಟುಕೊಳ್ಳಲಾಗಿದೆ.

### ಅಧ್ಯಯನದ ಉದ್ದೇಶಗಳು

ಅಧ್ಯಯನದ ಮುಖ್ಯ ಉದ್ದೇಶಗಳು ಈ ರೀತಿ ಇವೆ:

೧. ದಲಿತರಿಗಾಗಿರುವ ವಂಚನೆ ಸಮಸ್ಯೆಯನ್ನು ಜಾತಿ, ಬಡತನ, ಮಾನವ ಸಾಮರ್ಥ್ಯ ಇತ್ಯಾದಿಗಳ ಆಧಾರದ ಮೇಲೆ ಸಿದ್ಧಾಂತೀಕರಿಸುವುದು ಹಾಗೂ ಸಾಂದರ್ಭಿಕತೆಯನ್ನು ಉಂಟುಮಾಡುವುದು;



೨. ದಲಿತ ಗುಂಪುಗಳಿಗೆ ಆಗಿರುವ ವಂಚನೆಗಳ ತೀವ್ರತೆಯನ್ನು ಮೂಲಭೂತ ಸಂಶೋಧನೆಯ ಮೂಲಕ ತಿಳಿದುಕೊಳ್ಳುವುದು; ಹೆಚ್ಚಿನ ಮಾನವ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ದಲಿತ ಸಾಮರ್ಥ್ಯದ ಅಪಹರಣದ ಸಮಸ್ಯೆಯನ್ನು ತುರ್ತು ಶಾಸನದ ಮೂಲಕ ಬಗೆಹರಿಸುವ ಅಗತ್ಯತೆಯನ್ನು ಎತ್ತಿ ತೋರಿಸುವುದು;

೩. ದಲಿತ ವಂಚನೆಯ ಸಮಸ್ಯೆಯ ಪರಿಹಾರದಲ್ಲಿ ಪಾಲುದಾರರಾಗಿರುವ ಸರ್ಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು (ಎನ್‌ಜಿಓಗಳು), ಮಹಿಳಾ ಗುಂಪುಗಳು ಸಂಶೋಧನಾ ಸಂಸ್ಥೆಗಳೊಡನೆ ಜೊತೆಗೂಡುವುದು; ದಲಿತರ ಸಮಸ್ಯೆಗಳು ಮತ್ತು ವಂಚನೆಯ ಬಗೆಗಿನ ಇಡೀ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಮೇಲಿನ ಎಲ್ಲಾ ಪಾಲುದಾರರ ಜೊತೆ ಬುದ್ಧಿಮತ್ತೆ, ಮಾನವ ಸಂಪನ್ಮೂಲ ಹಾಗೂ ಕಾರ್ಯನಿರತೆಯಿಂದ ಲಭ್ಯವಾಗಿರುವ ತಿಳುವಳಿಕೆಯನ್ನು ಹಂಚಿಕೊಳ್ಳುವುದು;

೪. ದಲಿತರ ಸಾಮರ್ಥ್ಯವನ್ನು ಪುನರ್ ಸ್ಥಾಪಿಸಲು ಅಗತ್ಯವಾದ ಶಾಸನಗಳನ್ನು ರೂಪಿಸಲು ಅಗತ್ಯವಾದ ಅರ್ಥಪೂರ್ಣ ಸಲಹೆಗಳನ್ನು ಸರ್ಕಾರಿ ಸಂಸ್ಥೆಗಳಿಗೆ ಮತ್ತು ನೀತಿ ನಿರೂಪಕರಿಗೆ ಒದಗಿಸುವುದು.

## ಸಂಶೋಧನಾ ಕಾರ್ಯವಿಧಾನ ಮತ್ತು ದತ್ತಾಂಶ

ಮಾದರಿ ಆಯ್ಕೆ ವಿಧಾನದಲ್ಲೆಲ್ಲಾ ಅತಿ ಸುಲಭ ವಿಧಾನವಾಗಿರುವ ಬಹುಹಂತದ ಮಾದರಿ ಆಯ್ಕೆ ವಿಧಾನದ ಮೂಲಕ ಪ್ರಾತಿನಿಧಿಕ ದಲಿತರನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಮೊದಲ ಹಂತದಲ್ಲಿ ರಾಜ್ಯವನ್ನು ಮೂರು ಮುಖ್ಯ ಪ್ರದೇಶಗಳಾಗಿ ಅಂದರೆ ಉತ್ತರ, ಮಧ್ಯ ಹಾಗೂ ದಕ್ಷಿಣ ಕರ್ನಾಟಕಗಳೆಂದು ವಿಂಗಡಣೆ ಮಾಡಿಕೊಳ್ಳಲಾಯಿತು. ಎರಡನೆಯ ಹಂತದಲ್ಲಿ ಈ ಮೂರೂ ಪ್ರದೇಶಗಳಲ್ಲಿ ಅತಿ ಹೆಚ್ಚು ಪರಿಶಿಷ್ಟ ಜಾತಿ ಜನಸಂಖ್ಯೆ ಇರುವ ತಲಾ ಎರಡು ಜಿಲ್ಲೆಗಳನ್ನು ಆರಿಸಿಕೊಳ್ಳಲಾಯಿತು. ಆಯ್ದ ಜಿಲ್ಲೆಗಳು ಈ ರೀತಿ ಇವೆ:

ಉತ್ತರ ಕರ್ನಾಟಕದ ಪ್ರದೇಶದಿಂದ ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳು, ಮಧ್ಯ ಕರ್ನಾಟಕ ಪ್ರದೇಶದಿಂದ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು ಹಾಗೂ ದಕ್ಷಿಣ ಕರ್ನಾಟಕ ಪ್ರದೇಶದಿಂದ ಮೈಸೂರು ಮತ್ತು ತುಮಕೂರು ಜಿಲ್ಲೆಗಳು, ಮೂರನೆಯ ಹಂತದಲ್ಲಿ ಪ್ರತಿ ಜಿಲ್ಲೆಯಲ್ಲೂ ಅತಿ ಹೆಚ್ಚು ಪರಿಶಿಷ್ಟ ಜಾತಿ ಜನಸಂಖ್ಯೆ ಇರುವ ತಲಾ ಎರಡು ಗ್ರಾಮಗಳನ್ನು ಆರಿಸಿಕೊಳ್ಳಲಾಯಿತು. ಅಂತಿಮ ಹಂತದಲ್ಲಿ ಆಯ್ದ ಎಲ್ಲಾ ಗ್ರಾಮಗಳಲ್ಲೂ ಯಾದೃಚ್ಛಿಕ ಆಧಾರದ ಮೇಲೆ ತಲಾ ೧೫೦ ಮಾದರಿ ಕುಟುಂಬಗಳನ್ನು ಆಯ್ದುಕೊಳ್ಳಲಾಯಿತು. ಈ ರೀತಿಯಾಗಿ ಒಟ್ಟು ೧೮೦೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು.

## ಅಧ್ಯಯನದ ಫಲಿತಾಂಶಗಳು

ಆಯ್ಕೆ ಮಾಡಲಾದ ಗ್ರಾಮಗಳಿಂದ ಸಂಗ್ರಹಿಸಲಾದ ಮಾಹಿತಿಯ ಪ್ರಕಾರ ಸೋಸಲೆ ಮತ್ತು ಮೂಗೂರು ಗ್ರಾಮಗಳನ್ನು ಹೊರತುಪಡಿಸಿ ಉಳಿದೆಲ್ಲ ಕಡೆಗಳಲ್ಲೂ ದಲಿತರ ಸಾಮಾಜಿಕ–ಆರ್ಥಿಕ ಸಾಮರ್ಥ್ಯ ಅತಿ ಕಡಿಮೆಯಿತ್ತು. ಸೋಸಲೆ ಮತ್ತು ಮೂಗೂರು ಗ್ರಾಮಗಳಲ್ಲಿನ ದಲಿತರ ಆರ್ಥಿಕ ಸಾಮರ್ಥ್ಯ ಉಳಿದ ಗ್ರಾಮಗಳ ದಲಿತರ ಸಾಮರ್ಥ್ಯಕ್ಕಿಂತ ಉತ್ತಮವಾಗಿತ್ತು. ಪ್ರಾಥಮಿಕ ದತ್ತಾಂಶದ ಪ್ರಕಾರ ತಿಳಿದ ವಿಷಯವೇನೆಂದರೆ, ದಕ್ಷಿಣ ಕರ್ನಾಟಕ ಪ್ರದೇಶದಲ್ಲಿನ ದಲಿತರು ಹಾಗೂ ಹೀಗೂ ಸ್ವಂತ ಮನೆಗಳನ್ನು ಹೊಂದಿರುತ್ತಾರೆ ಎಂಬುದಾಗಿದೆ. ಜೊತೆಗೆ ಮೈಸೂರು ಜಿಲ್ಲೆಯಲ್ಲಿ ಸುಮಾರು ಶೇ.೯೯ರಷ್ಟು ದಲಿತರು ಸ್ವಂತ ಮನೆಗಳನ್ನು ಹೊಂದಿದ್ದಾರೆ ಎಂಬುದು ಕಂಡುಬಂದಿದೆ.

ಗ್ರಾಮೀಣ ಕುಟುಂಬಗಳಲ್ಲಿ ವೃತ್ತಿಯಲ್ಲಿನ ವೈವಿಧ್ಯತೆಗೆ ಸಂಬಂಧಿಸಿದಂತೆ ಲಿಂಗ ಪ್ರಬೇಧವು ಮುಖ್ಯ ಪಾತ್ರವನ್ನು ವಹಿಸುತ್ತದೆ. ಹೆಚ್ಚಿನ ಕುಟುಂಬಗಳ ಮುಖ್ಯಸ್ಥರು ಪುರುಷರೇ ಆಗಿದ್ದಾರೆ ಮತ್ತು ಕೇವಲ ಶೇ.೨೧ರಷ್ಟು ಕುಟುಂಬಗಳಲ್ಲಿ ಮಾತ್ರ ಮಹಿಳೆಯರು ಕುಟುಂಬಗಳ ಮುಖ್ಯಸ್ಥರಾಗಿದ್ದಾರೆ. ಮುಗಲ್‌ಕೋಡಾ ಮತ್ತು ಹಾರುಗೇರಿ ಗ್ರಾಮಗಳ ಸಾಕಷ್ಟು ಸಂಖ್ಯೆಯ ದಲಿತರು ದೇವದಾಸಿ ಪದ್ಧತಿಯನ್ನು ಆಚರಿಸುತ್ತಾರೆ. ಆಯ್ದ ಕುಟುಂಬಗಳಲ್ಲಿ ಬೆಲೆಬಾಳುವ ಸ್ವತ್ತುಗಳು ಬಹಳ ಕಡಿಮೆಯಿದ್ದವು. ಕೆಲವು ವಂಚನೆಗಳು ಈ ರೀತಿ ಇವೆ: ಶೇ.೬೩ರಷ್ಟು ಕುಟುಂಬಗಳು ನೀರಿನಿಂದ ಹರಡುವ ರೋಗಗಳ ಬಗ್ಗೆ ತಿಳುವಳಿಕೆ ಹೊಂದಿಲ್ಲ; ಶೇ.೫೩ರಷ್ಟು ದಲಿತ ಕುಟುಂಬಗಳು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಅಜ್ಞಾನಿಗಳಾಗಿದ್ದಾರೆ; ಸುಮಾರು ಶೇ.೨ರಷ್ಟು ಕುಟುಂಬಗಳಲ್ಲಿ ವಿಕಲತೆಯನ್ನು ಹೊಂದಿರುವ ಮಕ್ಕಳಿದ್ದಾರೆ.

ಈ ದಲಿತ ಕುಟುಂಬಗಳಲ್ಲಿ ಅರ್ಧದಷ್ಟು ಜನರಿಗೆ ನಿಯತವಾದ ಉದ್ಯೋಗ ಇಲ್ಲ ಎಂಬುದು ಅಧ್ಯಯನದಿಂದ ಗೊತ್ತಾಗಿದೆ. ಸ್ವಸಹಾಯ ಗುಂಪುಗಳಲ್ಲಿ ಶೇ.೪೮ರಷ್ಟು ಕುಟುಂಬಗಳು ಭಾಗಿಯಾಗಿವೆ. ಈ ಗುಂಪುಗಳ ಸದಸ್ಯರು ಬ್ಯಾಂಕಿನಲ್ಲಿ ಹಣ ಇಡಲು ಮುಖ್ಯ ಆದಾಯ ಮೂಲವೆಂದರೆ ಕೂಲಿ ಕೆಲಸವೇ ಆಗಿದೆ. ಹುಡುಗರ ಮೇಲೆ ಖರ್ಚು ಮಾಡುವ ಸರಾಸರಿ ಹಣವು ಹುಡುಗಿಯರ ಮೇಲೆ ಖರ್ಚು ಮಾಡುವ ಸರಾಸರಿ ಹಣಕ್ಕಿಂತ ಹೆಚ್ಚಾಗಿದೆ. ಹೆಚ್ಚೂ ಕಡಿಮೆ ಎಲ್ಲಾ ಕುಟುಂಬಗಳೂ ಸಹ ತಮ್ಮ ಮಕ್ಕಳ ಶೈಕ್ಷಣಿಕ ಖರ್ಚನ್ನು ತಮ್ಮ ಸ್ವಂತ ಗಳಿಕೆಯಿಂದಲೇ ಭರಿಸುತ್ತಿವೆ. ಹೆಚ್ಚಿನ ಜನರು ತಮ್ಮ ಸ್ಥಳೀಯ ರಾಜಕೀಯ ಧುರೀಣರ ಬಗ್ಗೆ ತಿಳುವಳಿಕೆಯನ್ನು ಹೊಂದಿರಲಿಲ್ಲ.

ನಮ್ಮ ಪ್ರಾಥಮಿಕ ಸಮೀಕ್ಷೆಯ ಪ್ರಕಾರ ಶೇ.೩೪ರಷ್ಟು ದಲಿತ ಕುಟುಂಬಗಳು ಗ್ರಾಮಗಳಲ್ಲಿ ಈಗಲೂ ಜಾತಿ ತಾರತಮ್ಯ ಇದೆ ಎಂದೇ ಭಾವಿಸಿದ್ದಾರೆ. ಸುಮಾರು ಅರ್ಧದಷ್ಟು ಕುಟುಂಬಗಳು (೮೫೩) ಕಾರ್ಯಸ್ಥಳಗಳಲ್ಲಿ ಎರಡು ವರ್ಗ ಪದ್ಧತಿ ಇದೆ ಎಂದು ದೂರಿದರು. ಸಾಮಾನ್ಯವಾಗಿ ಹೆಚ್ಚಿನ ಇತರೆ ಜಾತಿಗಳ ಮತ್ತು ಹಿಂದುಳಿದ ಜಾತಿಗಳ ಜನರು ದಲಿತರ ಮನೆಗಳಲ್ಲಿ ಆಹಾರ ಸ್ವೀಕರಿಸುವುದಿಲ್ಲ. ಹೆಚ್ಚಿನ ಕುಟುಂಬಗಳು (೪೧೫) ಇತರ ಜಾತಿಗಳ ಕೇವಲ ಪುರುಷರು ಮಾತ್ರ ದಲಿತರ ಮನೆಗಳಿಗೆ ಬರುತ್ತಾರೆಂದು ವರದಿ ಮಾಡಿದವು. ದುರದೃಷ್ಟವಶಾತ್ ಶೇ.೫೪ರಷ್ಟು ಕುಟುಂಬಗಳು ದಲಿತರಲ್ಲದವರು ಅವರ ಮನೆಗಳಿಗೆ ತಮ್ಮನ್ನು ಸೇರಿಸುವುದಿಲ್ಲವೆಂದು ತಿಳಿಸಿದವು. ಕೆಲವು ದಲಿತ ಕುಟುಂಬಗಳು ಧೋಭಿಗಳು ತಮ್ಮ ಬಟ್ಟೆಗಳನ್ನು ಒಗೆಯುವುದಿಲ್ಲವೆಂದರು. ಹೆಚ್ಚಿನ ಗ್ರಾಮಗಳಲ್ಲಿ ಪುರುಷರಿಗಾಗಿ ಕ್ಷೌರಿಕರು ಇದ್ದಾರೆ.

ಹೆಚ್ಚಿನ ಕುಟುಂಬಗಳಿಗೆ ತಮ್ಮ ಕಾಲೋನಿ ಅಥವಾ ಪ್ರದೇಶದಲ್ಲಿಯೇ ಕುಡಿಯುವ ನೀರಿನ ಮೂಲಗಳು ಇದ್ದರೂ ಸಹ, ಸಾಕಷ್ಟು ಜನರಿಗೆ ನೀರಿನ ಸಂಪರ್ಕ ಇರಲಿಲ್ಲ. ಸುಮಾರು ಶೇ.೮೨ರಷ್ಟು ದಲಿತರಿಗೆ ತಮ್ಮ ಮನೆಗಳಲ್ಲಿ ಶೌಚಾಲಯಗಳಿಲ್ಲ. ಇದಕ್ಕೆ ಪ್ರಮುಖವಾಗಿ ಪ್ರಧಾನ ಕಾರಣಗಳು ಬಡತನ ಮತ್ತು ಜಾಗದ ಕೊರತೆಗಳಾಗಿವೆ.

ಭಾರತದಲ್ಲಿ ಕೃಷಿ ಕಾರ್ಯಗಳಿಲ್ಲದಿರುವ ಅವಧಿಯಲ್ಲಿ ಗ್ರಾಮೀಣ ಜನರು ಇತರ ಗ್ರಾಮಗಳಿಗೆ ಹಾಗೂ ನಗರಗಳಿಗೆ ವಲಸೆ ಹೋಗುತ್ತಾರೆ. ಈ ಅಧ್ಯಯನದ ಪ್ರಕಾರ ಶೇ.೭ರಷ್ಟು ಕುಟುಂಬಗಳು ಉದ್ಯೋಗಕ್ಕಾಗಿ ಇತರ ಪ್ರದೇಶಗಳಿಗೆ ವಲಸೆ ಹೋಗಿದ್ದವು. ಪ್ರಾಥಮಿಕ ಸಮೀಕ್ಷೆಯ ಪ್ರಕಾರ ಎಲ್ಲಾ ಗ್ರಾಮಗಳಲ್ಲೂ ವಿವಿಧ ರೀತಿಯ ದೇವಾಲಯಗಳಿದ್ದವು. ಸುಮಾರು ೬೭೧ ಕುಟುಂಬಗಳು ತಮ್ಮನ್ನು ಹನುಮಾನ್ ದೇವಾಲಯದೊಳಗೆ ಹೋಗಲು ಬಿಡುವುದಿಲ್ಲವೆಂದು ತಿಳಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಜಾತಿ ತಾರತಮ್ಯ ಅಸ್ತಿತ್ವದಲ್ಲಿದೆಯೆಂದು ಇದು ತೋರಿಸುತ್ತದೆ. ದಲಿತರಿಗೆ ಚರ್ಚ್ ಒಂದು ಆಧ್ಯಾತ್ಮಿಕ ಆಸ್ತಿಯಾಗಿದೆ. ಆಯ್ದ ಗ್ರಾಮಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಿನವುಗಳಲ್ಲಿ ಅಂದರೆ ಹಾರುಗೇರಿ, ಮುಗಲ್‌ಕೋಡಾ, ಶ್ರೀನಿವಾಸ ಸರದಗಿ, ತೌಡೂರ್, ಸೋಸಲೆ ಹಾಗೂ ಮಡಲೂರ್ ಇವುಗಳಲ್ಲಿ ಚರ್ಚುಗಳಿವೆ. ಸುಮಾರು ಶೇ ೩೬ ರಷ್ಟು ಕುಟುಂಬಗಳು ತಮ್ಮ ಗ್ರಾಮಗಳಲ್ಲಿ ಚರ್ಚುಗಳು ಅಸ್ತಿತ್ವದಲ್ಲಿದೆಯೆಂದರು. ಸಾಮಾನ್ಯವಾಗಿ ಹೇಳುವುದಾದರೆ, ಅದರಲ್ಲೂ ನಿರ್ದಿಷ್ಟವಾಗಿ ಆಯ್ಕೆ ಮಾಡಿದ ಈ ಗ್ರಾಮಗಳಲ್ಲಿ, ದಲಿತರು ದನದ ಮಾಂಸವನ್ನು ಹೆಚ್ಚಾಗಿ ತಿನ್ನುತ್ತಾರೆ. ದನದ ಮಾಂಸ ನಮ್ಮ ಉತ್ತಮ ಉಡುಗೊರೆಯೆಂದೂ ಮತ್ತು ಮಾಂಸವನ್ನು ಶ್ರೇಷ್ಠ ಪದಾರ್ಥವೆಂದೂ ದಲಿತರು ಭಾವಿಸುತ್ತಾರೆ. ದಲಿತರು ತಮಗೆ ಇಷ್ಟ ಪಡುವಂತಹ ವಿವಿಧ ಬಟ್ಟೆಗಳನ್ನು ಧರಿಸುತ್ತಾರೆ, ಹಾಗೂ ತಮ್ಮ ಮನೆಗಳಲ್ಲಿ ಲಭ್ಯವಿರುವ ಬಟ್ಟೆಗಳನ್ನು ಧರಿಸುತ್ತಾರೆ. ಇದರಲ್ಲಿ ಹೆಚ್ಚಿನ ಕುಟುಂಬಗಳು ದಿನ ಬಿಟ್ಟು ದಿನ ಬಟ್ಟೆಗಳನ್ನು ಬದಲಿಸಿಕೊಳ್ಳುವುದಾಗಿ ತಿಳಿಸಿದರು.

## ಕರ್ನಾಟಕದಲ್ಲಿ ಈರುಳ್ಳಿ ಮತ್ತು ದ್ರಾಕ್ಷಿ ಬೆಳೆದ ಬೆಳೆಗಾರರಿಗೆ ದೊರಕಿದ ಬೆಲೆಗಳು, ಸಗಟು ಬೆಲೆಗಳು ಮತ್ತು ಚಿಲ್ಲರೆ ಬೆಲೆಗಳಲ್ಲಿನ ವ್ಯತ್ಯಾಸ

***– ಡಾ. ಪರಮೋದ್ ಕುಮಾರ್***

ಒಂದು ನಿರ್ದಿಷ್ಟ ಉತ್ಪನ್ನಕ್ಕೆ ಮಾರುಕಟ್ಟೆಯಲ್ಲಿ ಇರುವ ಅಧಿಕ ಬೇಡಿಕೆ ಅಥವಾ ಕಡಿಮೆ ಬೇಡಿಕೆಯಂತಹ ಉಪಯುಕ್ತ ಮಾಹಿತಿಯನ್ನು ಸದರಿ ಉತ್ಪನ್ನವು ಉತ್ಪಾದಕರಿಂದ ಗ್ರಾಹಕರಿಗೆ ತಲಪುವವರೆಗಿನ ಅವಧಿಯ ಬೆಲೆ ವ್ಯತ್ಯಾಸವು ಒದಗಿಸುತ್ತದೆ. ಈ ಅಧ್ಯಯನವು ಉತ್ಪಾದನೆ ಮತ್ತು ಬಳಕೆಯ ನಡುವೆ ಅಥವಾ ಬೇಡಿಕೆ ಮತ್ತು ಪೂರೈಕೆಯ ನಡುವೆ ಸಂಬಂಧವನ್ನು ಸ್ಥಾಪಿಸುವುದಕ್ಕೆ, ಅದರಲ್ಲೂ ನಿರ್ದಿಷ್ಟವಾಗಿ ದ್ರಾಕ್ಷಿ ಮತ್ತು ಈರುಳ್ಳಿ ಬೆಳೆಗಳಿಗೆ ಸಂಬಂಧಿಸಿದಂತೆ ಯತ್ನಿಸುತ್ತದೆ. ಇದಕ್ಕಾಗಿ ಈ ಎರಡು ಉತ್ಪನ್ನಗಳಿಗೆ ಉತ್ಪಾದನಾ ಕೇಂದ್ರಗಳಲ್ಲಿ, ವ್ಯಾಪಾರ ಕೇಂದ್ರಗಳಲ್ಲಿ ಮತ್ತು ಗ್ರಾಹಕ ಕೇಂದ್ರಗಳಲ್ಲಿ ಪ್ರಚಲಿತದಲ್ಲಿರುವ ಬೆಲೆಗಳನ್ನು ಈ ಅಧ್ಯಯನದಲ್ಲಿ ಗಮನಿಸಲಾಗುತ್ತಿದೆ. ಈ ಅಧ್ಯಯನವು ಮುಖ್ಯವಾಗಿ ಪ್ರಾಥಮಿಕ ಸಮೀಕ್ಷಾ ದತ್ತಾಂಶವನ್ನು ಅವಲಂಬಿಸಿದ್ದು, ರೈತರು ಪಡೆದ ಬೆಲೆ, ಸಗಟು ವರ್ತಕರು ಉತ್ಪನ್ನಗಳನ್ನು ಯಾವ ಬೆಲೆ ಕೊಟ್ಟು ಖರೀದಿಸಿದರು, ಚಿಲ್ಲರೆ ವರ್ತಕರು ಈ ಉತ್ಪನ್ನಗಳನ್ನು ಖರೀದಿಸಿದ ಬೆಲೆ ಹಾಗೂ ಉತ್ಪನ್ನಗಳು ರಫ್ತಾಗಿದ್ದ ಪಕ್ಷದಲ್ಲಿ ಎಷ್ಟು ಬೆಲೆಗೆ ರಫ್ತಾಯಿತು ಇತ್ಯಾದಿ ವಿವರಗಳನ್ನು ದ್ರಾಕ್ಷಿ ಮತ್ತು ಈರುಳ್ಳಿ ಬೆಳೆಗಳ ವಿವಿಧ ತಳಿಗಳಿಗೆ ಸಂಬಂಧಿಸಿದಂತೆ ವಿಶ್ಲೇಷಿಸಿದೆ. ಈ ಎರಡು ಉತ್ಪನ್ನಗಳಿಗೆ ಸಂಬಂಧಿಸಿದಂತೆ ಸದರಿ ಅಧ್ಯಯನವು ಬೆಲೆಗಳಲ್ಲಿನ ಸಾಮರಸ್ಯ ಅಥವಾ ವೈರುಧ್ಯದ ಬಗ್ಗೆ ನೀತಿ ನಿರೂಪಕರಿಗೆ ಉತ್ತಮ ಮಾಹಿತಿಯನ್ನು ಒದಗಿಸುತ್ತದೆ.

ಕರ್ನಾಟಕವು ಅನುಕೂಲಕರ ಕೃಷಿ ವಾತಾವರಣವನ್ನು ಹೊಂದಿದ್ದು, ತೋಟಗಾರಿಕಾ ಬೆಳೆಗಳ ವಿವಿಧ ತಳಿಗಳನ್ನು ಇಲ್ಲಿ ಬೆಳೆಯಬಹುದಾಗಿದೆ. ಆದರೂ ಸಹ ಒಟ್ಟಾರೆ ತೋಟಗಾರಿಕಾ ವಲಯ ಹಾಗೂ ನಿರ್ದಿಷ್ಟವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿರುವ ಬೆಳೆಗಳ ಕೃಷಿಯನ್ನು ಸದೃಢಗೊಳಿಸಲು ಪ್ರಚಲಿತದಲ್ಲಿರುವ ಅನೇಕ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾಗಿದೆ. ಬೆಳೆಗಾರರು ಎದುರಿಸುತ್ತಿರುವ ಸವಾಲುಗಳನ್ನು ಎದುರಿಸುವ ಸಲುವಾಗಿ ಈ ಕೆಳಕಂಡ ಅಂಶಗಳಿಗೆ ಒತ್ತು ನೀಡಬೇಕಾಗಿದೆ: (೧) ಕಟಾವಿನ ನಂತರ ಬೇಕಾದ ಮೂಲಭೂತ ಸೌಕರ್ಯಗಳು ಹಾಗೂ ಸಂಸ್ಕರಣೆಗೆ ಬೇಕಾದ ಮೂಲ ಸೌಕರ್ಯಗಳು; (೨) ಆ ಮೂಲಕ ತೋಟಗಾರಿಕಾ ಉತ್ಪನ್ನಗಳ ಉತ್ತಮ ಮೌಲ್ಯವರ್ಧನೆ; (೩) ವಿಸ್ತರಣಾ ಸೇವೆಗಳು ಹೆಚ್ಚಿನ ಜವಾಬ್ದಾರಿಯಿಂದ ತಂತ್ರಜ್ಞಾನ ವರ್ಗಾವಣೆ ಮಾಡುವಿಕೆ ಹಾಗೂ ಈ ಸೇವೆಗಳು ರೈತರಿಗೆ ಸುಲಭವಾಗಿ ದೊರಕುವಂತೆ



ಮಾಡುವುದು; (೪) ಕರಾರುವಾಕ್ಕಾದ ಕೃಷಿ; (೫) ತೋಟಗಾರಿಕಾ ಬೆಳೆಗಳಲ್ಲಿ ಅನುವಂಶೀಯ ಸುಧಾರಣೆಯ (ಜಿಎಂಓ) ಮೂಲಕ ಹೊಸ ಅವಕಾಶಗಳನ್ನು ಕಲ್ಪಿಸುವುದು; ಇತ್ಯಾದಿ. ಹೆಚ್ಚಿನ ಸಂಖ್ಯೆಯ ರೈತರು ಮಾರುಕಟ್ಟೆ ಸೌಲಭ್ಯಗಳ ಬಗ್ಗೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರು. ದ್ರಾಕ್ಷಿ ಬೆಳೆಯನ್ನು ಮಾರಾಟ ಮಾಡಲು ರೈತರು ಮಧ್ಯವರ್ತಿಗಳು ಮತ್ತು ವ್ಯಾಪಾರಸ್ಥರ ಮೇಲೆ ಅವಲಂಬಿತವಾಗಬೇಕಾಗಿದ್ದು ಅವರುಗಳು ಇವರನ್ನು ಶೋಷಣೆ ಮಾಡುವ ಸ್ವಭಾವವನ್ನು ಹೊಂದಿರುವುದು ಕಂಡುಬಂದಿದೆ. ಇದನ್ನು ತಪ್ಪಿಸುವ ಸಲುವಾಗಿ ತೋಟಗಾರಿಕಾ ಉತ್ಪಾದನೆ ಹೆಚ್ಚಾಗಿರುವ ಪ್ರದೇಶದ ಸುತ್ತಮುತ್ತ ಇರುವ ದೊಡ್ಡ ಪಟ್ಟಣಗಳು ಮತ್ತು ನಗರಗಳಲ್ಲಿ ತೋಟಗಾರಿಕಾ ಉತ್ಪನ್ನಗಳ ಮಾರಾಟಕ್ಕೆ ಅನುಕೂಲವಾಗುವಂತಹ ಉಗ್ರಾಣ ಮತ್ತು ಶೀತಲ ಸರಣಿಯನ್ನೊಳಗೊಂಡ ಸೂಕ್ತ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಗಳನ್ನು ಪ್ರಾರಂಭಿಸಬೇಕಾಗಿದೆ. ಜೊತೆಗೆ ಈ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಗಳಿಗೆ ಉತ್ಪನ್ನಗಳನ್ನು ಪೂರೈಸುವ ಸಲುವಾಗಿ ಗ್ರಾಮೀಣ ಪ್ರದೇಶಗಳಲ್ಲಿ ರೈತರ ಉತ್ಪನ್ನಗಳನ್ನು ಸಂಗ್ರಹಿಸುವ ಕೇಂದ್ರಗಳ ಸರಣಿಯನ್ನು ಸ್ಥಾಪಿಸುವ ಅಗತ್ಯವೂ ಇದೆ.

ಈರುಳ್ಳಿಗೆ ಸಂಬಂಧಿಸಿದಂತೆ ಅದರ ಬೆಲೆಯಲ್ಲಿನ ಏರಿಳಿತವು ಬೆಳೆಗಾರರು ಹಾಗೂ ಗ್ರಾಹಕರು – ಇವರಿಬ್ಬರನ್ನೂ ಬಾಧಿಸುವುದರಿಂದ ವಿವಿಧ ಆಯಾಮಗಳುಳ್ಳ ಕಾರ್ಯತಂತ್ರವನ್ನು ಈ ಬಗ್ಗೆ ರೂಪಿಸಬೇಕಾಗಿದೆ. ಸಗಟು ಮತ್ತು ಚಿಲ್ಲರೆ ವರ್ತಕರು – ಇವರುಗಳ ಬೆಲೆಗಳಲ್ಲಿನ ಊಹಾಪೋಹಗಳು ಪರಿಸ್ಥಿತಿಯನ್ನು ಗಂಭೀರಗೊಳಿಸುತ್ತದೆ. ಪ್ರಸ್ತುತ ಅಧ್ಯಯನವನ್ನೇ ನೋಡಿದಾಗ ಈರುಳ್ಳಿಗೆ ಸಂಬಂಧಿಸಿದಂತೆ ಸಗಟು ಮಾರಾಟದಲ್ಲಿದ್ದಕ್ಕಿಂತ, ಚಿಲ್ಲರೆ ಮಾರಾಟದಲ್ಲಿಯೇ ಊಹಾಪೋಹಗಳು ಜಾಸ್ತಿಯಾಗಿತ್ತು. ಆದ್ದರಿಂದ ಚಿಲ್ಲರೆ ಮಾರುಕಟ್ಟೆಯನ್ನು ದಾಸ್ತಾನು ನಿಯಂತ್ರಣ ಮತ್ತು ಸಡಿಲ ವ್ಯಾಪಾರ ಪದ್ಧತಿಗಳನ್ನು ನಿಯಂತ್ರಿಸಲು ಸೂಕ್ಷ್ಮವಾಗಿ ಉಸ್ತುವಾರಿ ಮಾಡಬೇಕಲ್ಲದೆ ಒಟ್ಟಾರೆಯಾಗಿ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಗಳೆರಡನ್ನೂ ಈ ವಿಷಯದಲ್ಲಿ ಉಸ್ತುವಾರಿ ಮಾಡಬೇಕಾಗಿದೆ. ಈರುಳ್ಳಿಯ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಹೆಚ್ಚಿನ ಬೆಲೆ ಕೊಡಿಸಬೇಕಾಗಿದೆ ಮತ್ತು ಉತ್ತಮ ಮಾರುಕಟ್ಟೆ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗಿದೆ. ಸೂಕ್ತ ಮಾರುಕಟ್ಟೆ ಗುಪ್ತವಾರ್ತಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಬೇಕಾಗಿದ್ದು, ಇದು ಆಮದು ಮತ್ತು ರಫ್ತಿನ ವಿಷಯದಲ್ಲೂ ಹಾಗೂ ಚಿಲ್ಲರೆ ಮಾರುಕಟ್ಟೆಯಲ್ಲಿನ ಬೆಲೆ ಏರಿಳಿತಗಳನ್ನು ತಪ್ಪಿಸಲೂ ಹಾಗೂ ಸೂಕ್ತ ಶಾಸನ ರೂಪಿಸಲೂ ನೆರವಾಗುತ್ತದೆ. ಕ್ಷೇತ್ರಮಟ್ಟದಲ್ಲಿ ಉತ್ತಮ ದಾಸ್ತಾನು ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಈರುಳ್ಳಿಯ ಸಂಸ್ಕರಣೆಗೆ ಹೆಚ್ಚು ಪ್ರೋತ್ಸಾಹ ನೀಡಿ ಶುಷ್ಕೀಕರಿಸಿದ ಈರುಳ್ಳಿ ಹಾಗೂ ಅರೆ ಘನ ಈರುಳ್ಳಿ ಮುಂತಾದ ಪದಾರ್ಥಗಳನ್ನು ತಯಾರಿಸಿದರೆ ಅವುಗಳನ್ನು ಹೆಚ್ಚು ಅವಧಿಯವರೆಗೆ ಕೆಡದಂತೆ ಇಟ್ಟು ಉಪಯೋಗಿಸಬಹುದಾಗಿದ್ದು, ಈರುಳ್ಳಿ ಬೆಲೆಯಲ್ಲಿನ ಏರಿಳಿತಗಳನ್ನು ತಪ್ಪಿಸಬಹುದಾಗಿದೆ.

## ಭಾರತದಲ್ಲಿ ಸಾರ್ವತ್ರಿಕ ವೃದ್ಧಾಪ್ಯ ವೇತನ: ಆರ್ಥಿಕ ಬೇಡಿಕೆಯ ಅಂದಾಜು, ಸಾರ್ವಜನಿಕ ಖರ್ಚು ಹಾಗೂ ಸಹಾಯಧನದ ಐಚ್ಛಿಕತೆಗಳು

*– ಪ್ರೊ. ಎಂ.ಆರ್.ನಾರಾಯಣ*

ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯವೇತನ ಯೋಜನೆ (ಐಜಿಎನ್‌ಓಎಪಿಎಸ್)ಯು ಪ್ರಚಲಿತದಲ್ಲಿರುವ ಸಾಮಾಜಿಕ (ಅಥವಾ ನಾಗರಿಕ) ವೃದ್ಧಾಪ್ಯ ವೇತನ ಯೋಜನೆಯಾಗಿದ್ದು, ಭಾರತದಲ್ಲಿ ೧೯೯೫ರಿಂದ ಸಾರ್ವಜನಿಕ ಹಣದ ನೆರವಿನೊಂದಿಗೆ ಅನುಷ್ಠಾನಗೊಳ್ಳುತ್ತಿದೆ. ಈ ಯೋಜನೆಯು ಸಾರ್ವತ್ರಿಕ ವ್ಯಾಪ್ತಿಯನ್ನು ಹೊಂದಿಲ್ಲದಿದ್ದು, ಸಾಕಷ್ಟು ಸಾರ್ವಜನಿಕ ಸಂಪನ್ಮೂಲ ಲಭ್ಯತೆ ಇಲ್ಲದಿರುವುದು, ಸರ್ಕಾರಿ ನೌಕರರಿಗೆ ಹಾಗೂ ಇತರ ವ್ಯವಸ್ಥಿತ ವಲಯಗಳ ನೌಕರರಿಗೆ ನಿವೃತ್ತಿ ವೇತನ ದೊರಕುವಿಕೆ ಮತ್ತು ಯೋಜನೆಯಲ್ಲೇ ಸೇರಿಕೊಂಡಿರುವ ಇತರ ಹೊರತುಪಡಿಸುವಿಕೆ ಕಲಮುಗಳು ಇತ್ಯಾದಿಗಳು ಇದಕ್ಕೆ ಕಾರಣಗಳಾಗಿವೆ. ವೃದ್ಧರಿಗೆ ಆದಾಯ ಒದಗಿಸುವುದು ಅಥವಾ ವ್ಯಾಪಕ ಸಾಮಾಜಿಕ ಭದ್ರತೆಯನ್ನೊದಗಿಸುವುದರೊಂದಿಗೆ ಐಜಿಎನ್‌ಓಎಪಿಎಸ್ ಯೋಜನೆಯು ವಿತರಣೆಗೆ ಅನುವುಗೊಂಡಿದೆ. ಏಕೆಂದರೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ವೃದ್ಧರನ್ನು ಇದು ಗುರಿಯಾಗಿಸಿಕೊಂಡಿದೆ. ಈ ಸಂದರ್ಭದಲ್ಲಿ ಪ್ರಸ್ತುತ ಸಂಶೋಧನಾ ಲೇಖನವು ಭಾರತದಲ್ಲಿ ರಾಷ್ಟ್ರಮಟ್ಟದ ಸಾರ್ವತ್ರಿಕ ವೃದ್ಧಾಪ್ಯ ವೇತನ ಯೋಜನೆಯನ್ನು (ಯುಓಎಪಿಎಸ್) ಪ್ರಾರಂಭಿಸುವುದರ ಪರಿಣಾಮಗಳು ಮತ್ತು ಆ ಬಗ್ಗೆ ಆಗುತ್ತಿರುವ ಆರ್ಥಿಕ ಚರ್ಚೆಯನ್ನು ವಿಶ್ಲೇಷಿಸುತ್ತದೆ. ಯುಓಎಪಿಎಸ್ ಪರವಾಗಿನ ಒಂದು ಮುಖ್ಯ ವಾದವೇನೆಂದರೆ ಇದು ಐಜಿಎನ್‌ಓಎಪಿಎಸ್‌ನಲ್ಲಿನ ಬಡತನ ಕಮ್ಮಿ ಮಾಡುವ ಪರಿಣಾಮಗಳನ್ನು ಆಧರಿಸಿದೆ ಎಂಬುದಾಗಿದೆ. ಈ ವಾದಕ್ಕೆ ಕೊಟ್ಟಿರುವ ಸಾಕ್ಷ್ಯಾಧಾರವೇನೆಂದರೆ ವ್ಯಕ್ತಿಗತ ಮಟ್ಟದಲ್ಲಿ ವೃದ್ಧರ ಬಡತನ ಹಾಗೂ ಐಜಿಎನ್‌ಓಎಪಿಎಸ್‌ನಲ್ಲಿನ ಅನುಕೂಲತೆಗಳಿಂದ ಆ ಬಡತನವನ್ನು ಕಡಿಮೆಗೊಳಿಸಬಹುದಾಗಿರುವ ಬಗ್ಗೆ ಒಂದು ಮಾದರಿಯನ್ನು ಅಭಿವೃದ್ಧಿಪಡಿಸಿ, ಪ್ರಮಾಣಗಳನ್ನು ಅಂದಾಜು ಮಾಡಿರುವುದು. ಯುಓಎಪಿಎಸ್‌ನ ಎರಡು ರೀತಿಯ ಖರ್ಚಿನ ವಿವರಗಳನ್ನು ಇಲ್ಲಿ ನಿರೂಪಿಸಲಾಗಿದೆ: (೧) ಐಜಿಎನ್‌ಓಎಪಿಎಸ್ ಅನ್ನು ಎಲ್ಲಾ ವೃದ್ಧರಿಗೂ ವಿಸ್ತರಿಸುವುದು; (೨) ನಿವೃತ್ತಿ ವೇತನ ಪರಿಷತ್ತಿನ ಪಿಂಚಣಿ ಪ್ರಸ್ತಾವನೆಯನ್ನು ಎಲ್ಲಾ ವೃದ್ಧರಿಗೂ ಅನ್ವಯಿಸುವುದು. ಈ ಯುಓಎಪಿಎಸ್‌ನ ಮೇಲಿನ ಎರಡು ಮಾರ್ಗಗಳನ್ನು ಅನುಸರಿಸುವುದಕ್ಕೆ ಅಗತ್ಯವಾದ ಖರ್ಚಿನ ಅಗತ್ಯತೆಗಳನ್ನು ಅಲ್ಪಾವಧಿಗೆ ಅಂದರೆ ೨೦೦೪–೦೫ ರಿಂದ ೨೦೧೩–೧೪ರ ಅವಧಿಗೆ ಲೆಕ್ಕ ಹಾಕಲಾಗಿದೆ. ಹೀಗೆ ಲೆಕ್ಕ ಹಾಕುವಾಗ ನಾಲ್ಕು ಅಂಶಗಳನ್ನು ಪರಿಗಣಿಸಲಾಗಿದೆ. ಅವೆಂದರೆ (ಅ) ವೃದ್ಧರ ಒಟ್ಟಾರೆ ವ್ಯಕ್ತಿಗತ ಆದಾಯ; (ಆ) ವಾರ್ಷಿಕ ಹಣದುಬ್ಬರ; (ಇ) ಅಧಿಕೃತ ಬಡತನ ರೇಖೆ ಹಾಗೂ (ಈ) ಪಿಂಚಣಿಗಾಗಿ

ಮಾಡುವ ಸಾರ್ವಜನಿಕ ಹಣದ ಆದಾಯ ಮೂಲದ ಹೊಂದಿಕೊಳ್ಳುವ ಸ್ವಭಾವ (ಮೇಲೆ ಹೇಳಿದ ಖರ್ಚಿನ ಅಗತ್ಯತೆಗಳನ್ನು ಈ ನಾಲ್ಕು ಅಂಶಗಳಿಗೆ ಹೊಂದಿಸಿ ಅಥವಾ ಹೊಂದಿಸಿಲ್ಲದೆಯೂ ಲೆಕ್ಕ ಹಾಕಲಾಗಿದೆ). ಜೊತೆಗೆ ರಾಷ್ಟ್ರೀಯ ಹಣದ ಲೆಕ್ಕಗಳ ವರ್ಗಾವಣೆಯ ಕಾರ್ಯಪದ್ಧತಿಯನ್ನನುಸರಿಸಿ ವ್ಯಕ್ತಿಗತ ವೃದ್ಧರು ಪಾವತಿಸುವ ತೆರಿಗೆ ಮೊತ್ತಕ್ಕೆ ಪಿಂಚಣಿ ಖರ್ಚನ್ನು ಹೊಂದಿಸುವಂತಹ ನಿವ್ವಳ ಸಾರ್ವಜನಿಕ ಹಣದ ಖರ್ಚಿನ ರೀತಿಯನ್ನೂ ಲೆಕ್ಕಹಾಕಲಾಗಿದೆ. ಭಾರತದ ಜನಸಂಖ್ಯೆಯಲ್ಲಿ ವೃದ್ಧರ ಸಂಖ್ಯೆ ಏರುವಿಕೆಯನ್ನು ೨೧೦೦ರ ವರೆಗೆ ಲೆಕ್ಕಹಾಕಿ ಖರ್ಚಿನ ಲೆಕ್ಕ ಮಾಡುವ ಕಾರ್ಯವಿಧಾನದ ಮೂಲಕ ಐಜಿಎನ್‌ಓಎಪಿಎಸ್ ಹಾಗೂ ಯುಓಎಪಿಎಸ್‌ನ ಎರಡು ಮಾರ್ಗಗಳ ದೀರ್ಘಾವಧಿ ಸುಸ್ಥಿರತೆಯನ್ನು ಪರೀಕ್ಷಿಸಲಾಗಿದೆ.

ವಿಶ್ಲೇಷಣೆಯಿಂದ ದೊರೆತ ಮುಖ್ಯ ಫಲಿತಾಂಶವೇನೆಂದರೆ ಈಗಿನ ವೃದ್ಧಾಪ್ಯ ವೇತನ ಯೋಜನೆಯು ಬಡತನವನ್ನು ಹೋಗಲಾಡಿಸುವ ಪರಿಣಾಮವನ್ನು ಹೊಂದಿದೆ ಎಂಬುದಾಗಿದೆ. ಈ ಫಲಿತಾಂಶವು ಈಗಿನ ಐಜಿಎನ್‌ಓಎಪಿಎಸ್ ಯೋಜನೆಯ ಸಾರ್ವತ್ರಿಕ ವ್ಯಾಪ್ತಿ ಅಥವಾ ಯುಓಎಪಿಎಸ್ – ಈ ಎರಡು ಮಾರ್ಗಗಳ ಪ್ರಾರಂಭಿಸುವಿಕೆಯ ಬಗೆಗಿನ ಬೇಡಿಕೆಯನ್ನು ಬಲವಾಗಿ ಸಮರ್ಥಿಸುತ್ತದೆ. ಈಗ ಚಾಲ್ತಿಯಲ್ಲಿರುವ ಐಜಿಎನ್‌ಓಎಪಿಎಸ್ ಯೋಜನೆಗೆ ಆಗುತ್ತಿರುವ ಖರ್ಚಿಗಿಂತ ಹೊಸದಾಗಿ ಪ್ರಸ್ತಾಪಿಸುತ್ತಿರುವ ಯುಓಎಪಿಎಸ್ ಯೋಜನೆಗೆ ಇನ್ನೂ ಅಪಾರವಾಗಿ ಸಾರ್ವಜನಿಕ ಹಣ ಖರ್ಚಾಗುತ್ತದೆ. ಈ ಖರ್ಚು (ಅ) ವೃದ್ಧರ ಒಟ್ಟಾರೆ ವ್ಯಕ್ತಿಗತ ಆದಾಯ ಹಾಗೂ ತೆರಿಗೆ ಪಾವತಿಗಳೊಡನೆ ಹೊಂದಿಸಿದರೆ ಕಡಿಮೆಯಾಗುತ್ತದೆ ಮತ್ತು (ಆ) ಅಧಿಕೃತ ಬಡತನ ರೇಖೆ, ವಾರ್ಷಿಕ ಹಣದುಬ್ಬರ ಹಾಗೂ ಸಾರ್ವಜನಿಕ ಹಣದ ಆದಾಯ ಮೂಲದ ಹೊಂದಿಕೊಳ್ಳುವಿಕೆಯ ಜೊತೆಗೆ ಹೊಂದಿಸಿದರೆ ಹೆಚ್ಚಾಗುತ್ತದೆ. ಈ ಫಲಿತಾಂಶಗಳು ಶಾಸನಕರ್ತರಿಗೆ ಸಾರ್ವಜನಿಕ ಹಣದಿಂದ ಅನುಷ್ಠಾನಗೊಳಿಸುವ ಯುಓಎಪಿಎಸ್ ಯೋಜನೆಯಲ್ಲಿನ ಸಾರ್ವಜನಿಕ ಹಣದ ಖರ್ಚಿನ ವಿವಿಧ ಪರಿಣಾಮಗಳು ಮತ್ತು ಸಾಮಾನ್ಯ ತೆರಿಗೆಯ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸುವ ಐಚ್ಛಿಕತೆಗಳನ್ನು ನಿರೂಪಿಸುತ್ತವೆ. ಜೊತೆಗೆ ಐಜಿಎನ್‌ಓಎಪಿಎಸ್ ಹಾಗೂ ಯುಓಎಪಿಎಸ್‌ನ ಎರಡು ಮಾರ್ಗಗಳೂ ಸಹ ಪಿಂಚಣಿಯ ಮೇಲಿನ ಸಾರ್ವಜನಿಕ ವೆಚ್ಚದ ಒಂದು ಸಾಮಾನ್ಯ ಮೇರೆಯ ಬಗ್ಗಿಕೆಗೆ ದೀರ್ಘಾವಧಿಯಲ್ಲಿ ಆರ್ಥಿಕವಾಗಿ ಸುಸ್ಥಿರವಾಗಿ ಹೊಂದಿಕೊಳ್ಳುತ್ತವೆ. ಹಣಕಾಸು ಲೆಕ್ಕಾಚಾರದ ಉತ್ಪತ್ತಿಯ ಮೂಲಕ ದೊರೆತ ಫಲಿತಾಂಶಗಳು ವಿತರಣಾ ಆಧಾರದ ಮೇಲೆ ಮತ್ತು ದೀರ್ಘಾವಧಿ ಆರ್ಥಿಕ ಸುಸ್ಥಿರತೆ ಆಧಾರದ ಮೇಲೆ ಯುಓಎಪಿಎಸ್ ಯೋಜನೆಯ ಕಾರ್ಯನೀತಿಯನ್ನು ಬಲವಾಗಿ ಸಮರ್ಥಿಸುತ್ತದೆ.

ಐಜಿಎನ್‌ಓಎಪಿಎಸ್ ಯೋಜನೆಯಲ್ಲಿನ ಹೊರತುಪಡಿಸುವಿಕೆ ಕಲಮುಗಳನ್ನು ಗಮನದಲ್ಲಿಟ್ಟು–ಕೊಂಡರೂ ಸಹ, ಭಾರತದಲ್ಲಿ ವೃದ್ಧಾಪ್ಯ ವೇತನವನ್ನು ಸಾರ್ವತ್ರಿಕವಾಗಿ ವೃದ್ಧರಿಗೆ ಅನ್ವಯಿಸುವ ಸಲುವಾಗಿ ಮರುವ್ಯಾಖ್ಯಾನ ಮಾಡುವುದು ಅಪೇಕ್ಷಣೀಯವಾಗಿದೆ. ಉದಾಹರಣೆಗೆ, ಒಂದು ಸಂಭವನೀಯ ಮರುವ್ಯಾಖ್ಯಾನವನ್ನು ಈ ರೀತಿ ಮಾಡಬಹುದಾಗಿದೆ. ಈ ಯೋಜನೆಯನ್ನು ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಮಾತ್ರ ಅನ್ವಯಿಸುವುದು, ವ್ಯಕ್ತಿಗತ ಆದಾಯದ ಮಿತಿಗಿಂತ ಕಡಿಮೆ ಸಂಪಾದಿಸುವವರಿಗೆ ಅನ್ವಯಿಸುವುದು, ವ್ಯಕ್ತಿಗತ ಆದಾಯ ತೆರಿಗೆ ಕಟ್ಟದಿರುವವರಿಗೆ ಅನ್ವಯಿಸುವುದು ಹಾಗೂ ಸರ್ಕಾರಿ ಅಥವಾ ಇತರ ವ್ಯವಸ್ಥಿತ ವಲಯಗಳಿಂದ ನಿವೃತ್ತಿ ವೇತನ ಪಡೆಯವದರಿಗೆ ಅನ್ವಯಿಸುವುದು. ಇದರ ಸಾರಾಂಶವೇನೆಂದರೆ ಈ ಮರುವ್ಯಾಖ್ಯಾನವು ವೃದ್ಧಾಪ್ಯ ವೇತನದ ಸೌಲಭ್ಯವನ್ನು ಪಡೆಯಬೇಕಾದವರಿಗೇ ನೇರವಾಗಿ ತಟ್ಟುತ್ತದೆ. ಉಳಿದೆಲ್ಲಾ ಅಂಶಗಳಲ್ಲೂ ಏರುಪೇರಿಲ್ಲದಿದ್ದರೆ ಆರ್ಥಿಕ ಸುಸ್ಥಿರತೆಯನ್ನೂ ಗಳಿಸಿಕೊಳ್ಳುತ್ತದೆ. ಇಂತಹ ವಿಧಾನವನ್ನು ಭಾರತದ ಗುರಿ ನಿಶ್ಚಿತ, ಸುಸ್ಥಿರ, ಸಾರ್ವತ್ರಿಕ ವೃದ್ಧಾಪ್ಯ ವೇತನ ಯೋಜನೆಯೆಂದು ಕರೆಯಬಹುದಾಗಿದೆ.

ಸಾರ್ವಜನಿಕ ಹಣದಿಂದ ಅನುಷ್ಠಾನಗೊಳ್ಳಬೇಕಾಗಿರುವ ಯುಓಎಪಿಎಸ್ ಯೋಜನೆಯ ವಿನ್ಯಾಸದ ಬಗ್ಗೆ ಭಾರತದಲ್ಲಿ ಸದ್ಯದಲ್ಲಿ ನಡೆಯುತ್ತಿರುವ ಕಾರ್ಯನೀತಿಯ ಬಗೆಗಿನ ಚರ್ಚೆಗಳಿಗೆ ಈಗಾಗಲೇ ಲಭ್ಯವಿರುವ ಮೂಲ ತಿಳುವಳಿಕೆಯ ಜೊತೆಗೆ ಈ ಸಂಶೋಧನಾ ಲೇಖನದ ಕಾರ್ಯಪಥ, ಫಲಿತಾಂಶ ಹಾಗೂ ಪರಿಣಾಮಗಳೂ ಸಹ ತಮ್ಮ ಕೊಡುಗೆಯನ್ನು ನೀಡಿವೆ. ವಿನ್ಯಾಸದ ಅಂಶಗಳು ಈ ರೀತಿ ಇವೆ: (ಅ) ಫಲಾನುಭವಿಗಳನ್ನು ಸಾಮಾಜಿಕ–ಆರ್ಥಿಕ ಹೊರತುಪಡಿಸುವಿಕೆ ಕಲಮುಗಳಿಗೆ ಹೊಂದಿಕೊಂಡಂತೆ ನಿಗದಿತ ವಯಸ್ಸು ಹಾಗೂ ಹಕ್ಕು ಪ್ರತಿಪಾದನೆಯ ಮೂಲಕ ಗುರುತಿಸುವುದು; (ಆ) ವೃದ್ಧಾಪ್ಯ ವೇತನದ ಮೊತ್ತವನ್ನು ನಿಗದಿ ಪಡಿಸುವುದು ಹಾಗೂ ಹಣದುಬ್ಬರದ ಸೂಚಿಯನ್ನು ಗೊತ್ತುಪಡಿಸುವುದು ಹಾಗೂ (ಇ) ಪರ್ಯಾಯ ಯುಓಎಪಿಎಸ್‌ನ ಆರ್ಥಿಕ ಸುಸ್ಥಿರತೆಗಾಗಿನ ಷರತ್ತುಗಳನ್ನು ವಿಧಿಸುವುದು.

## ಮಧ್ಯಪ್ರದೇಶದಲ್ಲಿ ವಾತಾವರಣಕ್ಕೆ ಹೊಂದಿಕೊಳ್ಳುವಂತಹ ಸೂಕ್ತ ಕೃಷಿ ಪದ್ಧತಿಗಳ ಅಳವಡಿಕೆಗಾಗಿ ತಾಂತ್ರಿಕತೆಗಳ ಆದ್ಯತೀಕರಣ

***– ಡಾ. ಬರುನ್ ದೇಬ್ ಪಾಲ್***

ಮಧ್ಯಪ್ರದೇಶ ರಾಜ್ಯವು ೨೦೧೦ ರಿಂದೀಚೆಗೆ ಉತ್ಪನ್ನದ ವಾಸ್ತವ ಮೌಲ್ಯದ ಪ್ರಕಾರ ಕೃಷಿ ವಲಯದಲ್ಲಿ ಶೇ.೨೦ಕ್ಕಿಂತ ಹೆಚ್ಚಿನ ಪ್ರಮಾಣದ ಬೆಳವಣಿಗೆಯನ್ನು ಸಾಧಿಸುತ್ತಿದೆ. ಈ ಬೆಳವಣಿಗೆಗೆ ಪ್ರಧಾನ ಕೊಡುಗೆ ಇವುಗಳಿಂದ ಬಂದಿದೆ: ಎಣ್ಣೆಕಾಳುಗಳು (ಮುಖ್ಯವಾಗಿ ಸೋಯಾ ಅವರೆ), ದ್ವಿದಳ ಧಾನ್ಯಗಳು (ಮುಖ್ಯವಾಗಿ ಕಡಲೆ) ಹಾಗೂ ನಂತರದಲ್ಲಿ ಏಕದಳ ಧಾನ್ಯಗಳು (ಮುಖ್ಯವಾಗಿ ಗೋಧಿ). ಈ ರಾಜ್ಯದಲ್ಲಿ ಸೋಯಾ ಅವರೆಯ



ಉತ್ಪಾದನೆಯು ಒಟ್ಟಾರೆ ಉತ್ಪಾದನೆಯ ಶೇ.೫೪ರಷ್ಟು ಆಗಿರುವುದಲ್ಲದೆ ಭಾರತದ ಪ್ರಮುಖ ವಿದೇಶಿ ವಿನಿಮಯ ಮೂಲಗಳಲ್ಲೂ ಒಂದಾಗಿದೆ. ಜೊತೆಗೆ ಭಾರತದ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚಿನ ಕಡಲೆ ಉತ್ಪಾದನೆಯು ಈ ರಾಜ್ಯದಿಂದಾಗುತ್ತಿದೆ. ಇದೂ ಅಲ್ಲದೆ ಮಧ್ಯಪ್ರದೇಶ ರಾಜ್ಯವು ದೇಶದ ಹೆಚ್ಚೂಕಡಿಮೆ ಶೇ.೧೩ರಷ್ಟು ಗೋಧಿ ಉತ್ಪಾದನೆಯನ್ನೂ ಮಾಡುತ್ತಿದೆ.  ಇವುಗಳ ಜೊತೆಯಲ್ಲೇ ಪಶುಸಂಗೋಪನೆಯನ್ನೂ ಒಳಗೊಂಡಂತೆ ಕೃಷಿ ವಲಯವು ರಾಜ್ಯದ ಜಿಡಿಪಿಗೆ (ಒಟ್ಟಾರೆ ಆಂತರಿಕ ಉತ್ಪನ್ನ) ಹೆಚ್ಚೂಕಡಿಮೆ ಶೇ.೨೭ರಷ್ಟು ಕೊಡುಗೆಯನ್ನು ನೀಡುತ್ತಿದೆ ಹಾಗೂ ಶೇ.೬೫ರಷ್ಟು ಜನಸಂಖ್ಯೆಯು ಜೀವನೋಪಾಯಕ್ಕಾಗಿ ಈ ವಲಯದ ಮೇಲೆ ಅವಲಂಬಿತವಾಗಿದೆ. ಇವೆಲ್ಲವೂ ಇದ್ದರೂ ಸಹ, ಮುಖ್ಯ ಬೆಳೆಗಳಾದ ಸೋಯಾ ಅವರೆ, ಕಡಲೆ, ಗೋಧಿ ಮತ್ತು ಭತ್ತದ ಬೆಳೆಗಳ ಉತ್ಪಾದಕತಾ ಮಟ್ಟವು ರಾಷ್ಟ್ರಮಟ್ಟಕ್ಕಿಂತ ಗಮನಾರ್ಹವಾಗಿ ಕಡಿಮೆ ಪ್ರಮಾಣದಲ್ಲಿವೆ. ಉದಹರಿಸಿ ಹೇಳುವುದಾದರೆ ರಾಷ್ಟ್ರಮಟ್ಟದಲ್ಲಿ ಕಡಲೆ ಬೆಳೆಯಲ್ಲಿ ಅತಿ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಮಧ್ಯಪ್ರದೇಶವು ಉತ್ಪಾದಕತೆಗೆ ಸಂಬಂಧಿಸಿದಂತೆ ಎಂಟನೆಯ ಸ್ಥಾನದಲ್ಲಿದೆ. ಇದೇ ರೀತಿ ಸೋಯಾ ಅವರೆ ಬೆಳೆಯಲ್ಲಿ ಉತ್ಪಾದನೆಗೆ ಸಂಬಂಧಿಸಿದಂತೆ ಮೊದಲ ಸ್ಥಾನದಲ್ಲಿದ್ದರೂ ಸಹ ಉತ್ಪಾದಕತೆಯಲ್ಲಿ ಹತ್ತನೆಯ ಸ್ಥಾನದಲ್ಲಿದೆ. ರಾಜ್ಯದಲ್ಲಿ ಉತ್ಪಾದಕತೆಯನ್ನು ಕಡಿಮೆಗೊಳಿಸುತ್ತಿರುವ ಪ್ರಮುಖ ಕಾರಣಗಳು ಈ ರೀತಿ ಇವೆ:

೧. ವಾತಾವರಣ ಬದಲಾವಣೆಯ ಪರಿಣಾಮ ಹಾಗೂ ವಾತಾವರಣದಲ್ಲಿನ ಏರುಪೇರು.

೨. ನೀರಾವರಿ ಸೌಲಭ್ಯದ ಕೊರತೆ

೩. ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದೆ ಇರುವಂತಹ ಹೋಳಾದ ಭೂಮಿಗಳು ಹಾಗೂ

೪. ಅಗತ್ಯಕ್ಕೆ ತಕ್ಕಷ್ಟು ಸಾಲ ಪೂರೈಕೆ ಆಗದಿರುವಿಕೆ.

ಜೊತೆಗೆ ರಸಗೊಬ್ಬರ ಬಳಕೆಯಲ್ಲಿನ ದಕ್ಷತೆಯು ರಾಷ್ಟ್ರೀಯ ಸರಾಸರಿಗಿಂತ ವೇಗವಾಗಿ ಕುಸಿಯುತ್ತಿದೆ.

ರಸಗೊಬ್ಬರಗಳ ಬಳಕೆಯಲ್ಲಿನ ದಕ್ಷತೆಯು ೨೦೧೦ರ ಅಂತ್ಯದಲ್ಲಿ (೧ ಕಿಲೋಗ್ರಾಂ ಸಾರಜನಕ, ರಂಜಕ ಹಾಗೂ ಪೊಟಾಷ್‌ಗಳಿಗೆ ಪ್ರತಿಯಾಗಿ ಉತ್ಪಾದಿಸುವ ಧಾನ್ಯಗಳು – ಕಿಲೋಗ್ರಾಂಗಳಲ್ಲಿ). ರಾಜ್ಯದಲ್ಲಿ ೮ ಕಿ.ಗ್ರಾಂ ಧಾನ್ಯ/೧ ಕಿ.ಗ್ರಾಂ ಎನ್.ಪಿ.ಕೆ. ಗಳಷ್ಟಿತ್ತು. ಆದರೆ ರಾಷ್ಟ್ರೀಯ ಸರಾಸರಿ ಮಟ್ಟವು ೧೦ ಕಿ.ಗ್ರಾಂ. ಧಾನ್ಯಗಳಾಗಿತ್ತು. ಇದೇ ರೀತಿಯಲ್ಲಿ ೨೦೧೦ ಇಸವಿಯಲ್ಲಿ ೧ ಕಿ.ಗ್ರಾಂ. ಎನ್.ಪಿ.ಕೆ.ಗೆ ಪ್ರತಿಯಾಗಿ ೧೫ ಕಿ.ಗ್ರಾಂ. ದೊರಕುತ್ತಿದ್ದು, ಅದೇ ವೇಳೆಯಲ್ಲಿ ರಾಷ್ಟ್ರೀಯ ಸರಾಸರಿ ಮಟ್ಟವು ೧೨ ಕಿ.ಗ್ರಾಂ.ಗಳಾಗಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯದ ಪ್ರಮುಖ ಕಾರ್ಯನೀತಿ ಆದ್ಯತೆಗಳು ಉತ್ಪಾದಕತೆಯನ್ನು ಹೆಚ್ಚಿಸುವುದಾಗಿದೆ ಹಾಗೂ ಪರಿಕರಗಳ ಬಳಕೆಯ ದಕ್ಷತೆಯನ್ನೂ ಸಹ ಹೆಚ್ಚು ಮಾಡುವುದಾಗಿದೆ.

ಏನೇ ಆದರೂ ಸಹ, ಮೇಲೆ ಹೇಳಲಾದ ಕಾರ್ಯನೀತಿಗೆ ಸಂಬಂಧಿಸಿದ ಅಂಶಗಳು ರಾಜ್ಯಕ್ಕೆ ಹೊಸದಲ್ಲ ಅಥವಾ ದೇಶದ ಕೃಷಿವಲಯಕ್ಕೂ ಸಹ ಹೊಸದಲ್ಲ. ಏಕೆಂದರೆ, ಈ ಅಂಶಗಳು ಸ್ವಾತಂತ್ರ್ಯ ಬಂದಾಗಿನಿಂದ ಸರ್ಕಾರದ ಒಟ್ಟಾರೆ ಆದ್ಯತೆಗಳಾಗಿವೆ. ಆದರೆ ಈಚಿನ ಹವಾಮಾನ ಏರುಪೇರು ಮತ್ತು ಹವಾಮಾನ ಬದಲಾವಣೆಯ ಪರಿಣಾಮಗಳು ರಾಜ್ಯದ ಶೇಕಡ ೫೦ಕ್ಕಿಂತ ಹೆಚ್ಚಿನ ಜಿಲ್ಲೆಗಳಲ್ಲಿ ಕೃಷಿ ಉತ್ಪಾದನೆ, ಉತ್ಪಾದಕತೆ ಹಾಗೂ ಸಂಪನ್ಮೂಲಗಳ ಲಭ್ಯತೆಯ ವಿಷಯದಲ್ಲಿ ದುರ್ಬಲಗೊಳಿಸಿವೆ.  ಜೊತೆಗೆ, ಈ ರಾಜ್ಯದ ಕೃಷಿ ವಲಯವು ಜನಸಂಖ್ಯೆಯ ಶೇಕಡ ೬೦ ಕ್ಕಿಂತಲೂ ಹೆಚ್ಚಿನ ಪ್ರಮಾಣಕ್ಕೆ ಜೀವನೋಪಾಯ ಅವಕಾಶಗಳನ್ನು ಕಲ್ಪಿಸಿರುವುದರಿಂದ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸಿ ಲಕ್ಷಾಂತರ ಜನರಿಗೆ ಆಹಾರ ಭದ್ರತೆಯನ್ನು ಒದಗಿಸುವುದು ನಿರ್ಣಾಯಕ ಸವಾಲಾಗಿದೆ. ಸರ್ಕಾರದ ಐತಿಹಾಸಿಕ ಕಾರ್ಯನೀತಿ ದೃಷ್ಟಿಕೋನವೂ ಸಹ ಈ ಸವಾಲಿಗೆ ಪೂರಕವಾಗಿದೆ. ಆದ್ದರಿಂದ ರೈತರ ಅಳವಡಿಕೆ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿಯೂ ಮತ್ತು ಸುಸ್ಥಿರವಾಗಿಸುವುದಕ್ಕಾಗಿಯೂ ಭವಿಷ್ಯದ ವಾತಾವರಣ ಬದಲಾವಣೆಯ ಪರಿಣಾಮಗಳನ್ನು ಎದುರಿಸುವುದು ಶಾಸನಕರ್ತರಿಗೆ ಸವಾಲಿನ ವಿಷಯವಾಗಿದ್ದರೂ ಸಹ, ಈ ರಾಜ್ಯಕ್ಕೆ ಅದು ಅಗತ್ಯವಾಗಿದೆ.

## ಸಮಾಜ ವಿಜ್ಞಾನ ಜ್ಞಾನೋತ್ಪಾದನೆಯಲ್ಲಿ ಆಗಿರುವ ಮುನ್ನಡೆ: ಕಾರ್ಯವಿಧಾನಗಳು ಹಾಗೂ ಪದ್ಧತಿಗಳು

***– ಡಾ. ಸೋಬಿನ್ ಜಾರ್ಜ್ ಮತ್ತು ಡಾ. ಎಂ. ಲಿಂಗರಾಜು***

(* ಈ ಸಂಶೋಧನಾ ಅಧ್ಯಯನದ ವಿವರಗಳಿಗಾಗಿ ಪುಟ ೬೧ ರಲ್ಲಿನ "ಸಮಾಜ ವಿಜ್ಞಾನ ಜ್ಞಾನೋತ್ಪಾದನೆಯಲ್ಲಿ ಆಗಿರುವ ಮುನ್ನಡೆ: ಕಾರ್ಯ ವಿಧಾನಗಳು ಮತ್ತು ಮುನ್ನಡೆ" ಎಂಬ ಲೇಖನವನ್ನು ಓದಿ)

## ಕರ್ನಾಟಕದಲ್ಲಿನ ನಗರಗಳ ಅಭಿವೃದ್ಧಿಯಲ್ಲಿನ ಜಾಗದ ಅಸಮಾನತೆ: ಒಲವುಗಳು, ಮಟ್ಟಗಳು ಮತ್ತು ಪರಿಣಾಮಗಳು

***– ಡಾ. ಸಿ.ಎಂ. ಲಕ್ಷ್ಮಣ***

ಜನಗಣತಿಯ ೧೯೭೧ರಿಂದ ೨೦೧೧ರ ವರೆಗಿನ ದತ್ತಾಂಶವನ್ನು ಆಧರಿಸಿ ಕರ್ನಾಟಕದ ಜನಸಂಖ್ಯೆಯ ಬೆಳವಣಿಗೆಯ ವಿವರವಾದ

ಅನ್ವೇಷಣೆಯನ್ನು ಮಾಡಿದಾಗ ತೀರಪ್ರದೇಶಗಳು ಮತ್ತು ದಕ್ಷಿಣದ ಪ್ರದೇಶಗಳು ರಾಜ್ಯದ ನಾಲ್ಕು ಪ್ರದೇಶಗಳ ಪೈಕಿ, ನಗರ ಪ್ರದೇಶಗಳ ಸಂಖ್ಯೆಗಳಲ್ಲಿ ಮತ್ತು ಪಟ್ಟಣಗಳ ಜನಸಂಖ್ಯೆಯಲ್ಲಿ ಮೇಲುಗೈಯನ್ನು ಸಾಧಿಸಿದ್ದವು. ಆದ್ದರಿಂದ ಈ ಪ್ರದೇಶಗಳ ನಗರಾಭಿವೃದ್ಧಿಯ ಮುಖ್ಯ ಅಂಶವು ಪಟ್ಟಣ ಜನಗಣತಿ ಹಾಗೂ ನಗರ ಪ್ರದೇಶದ ಜನಗಣತಿಯಲ್ಲಿನ ಬೆಳವಣಿಗೆಯಾಗಿರುತ್ತದೆ. ಇದೇ ಸಮಯದಲ್ಲಿ ಪಟ್ಟಣಗಳಲ್ಲಿನ ಜನಸಂಖ್ಯೆಯಲ್ಲಿನ ಶಾಸನಬದ್ಧ ಬೆಳವಣಿಗೆಯು ನಗರಾಭಿವೃದ್ಧಿಯನ್ನು ಬಲಪಡಿಸಿರುವುದನ್ನೂ ಸಹ ಕಾಣಬಹುದಾಗಿದೆ. ಇನ್ನೊಂದು ದಿಕ್ಕಿನಲ್ಲಿ ನೋಡುವುದಾದರೆ ಮಧ್ಯದ ಪ್ರದೇಶ ಹಾಗೂ ಉತ್ತರ ಪ್ರದೇಶಗಳಲ್ಲಿನ ಶಾಸನಬದ್ಧ ಪಟ್ಟಣಗಳ ಸತತ ಬೆಳವಣಿಗೆಯೂ ನಗರದ ಜನಸಂಖ್ಯೆಯನ್ನು ಹೆಚ್ಚಿಸುವಲ್ಲಿ ಪ್ರಧಾನ ಕೊಡುಗೆಯಾಗಿದೆ. ಜೊತೆಗೆ ಜನಗಣತಿ ಪಟ್ಟಣಗಳ ಹಾಗೂ ನಗರ ಪ್ರದೇಶಗಳಲ್ಲಿನ ಜನಸಂಖ್ಯಾ ಪ್ರಗತಿಯು ಖಂಡಿತವಾಗಿಯೂ ಈ ಪ್ರದೇಶಗಳ ನಗರಾಭಿವೃದ್ಧಿಯನ್ನು ಕುಂಟಿತಗೊಳಿಸಿದೆ. ಈ ಅಧ್ಯಯನದ ಪ್ರಕಾರ ಗೊತ್ತಾಗುವುದೇನೆಂದರೆ, ಅಧ್ಯಯನಕ್ಕೆ ಆರಿಸಿಕೊಂಡ ದಶಕಗಳ ಅವಧಿಯಲ್ಲಿ ಕರ್ನಾಟಕದ ಮೊದಲ ಹಾಗೂ ಎರಡನೆಯ ದರ್ಜೆಯ ನಗರಗಳಿಗೆ ನಾಲ್ಕನೆಯ ಮತ್ತು ಐದನೆಯ ದರ್ಜೆಯ ಪಟ್ಟಣಗಳಿಂದ ಸತತವಾಗಿ ಜನರ ವಲಸೆ ಆಗುತ್ತಿದೆ ಎಂಬುದಾಗಿದೆ.

ಜನಸಾಂದ್ರತೆ ಸೂಚಿಯ ಪ್ರಕಾರ ರಾಜ್ಯದ ನಾಲ್ಕು ಪ್ರದೇಶಗಳ ಪೈಕಿ ತೀರ ಪ್ರದೇಶದ ಜನಸಾಂದ್ರತೆಯು ಅತಿ ಹೆಚ್ಚಿನದಾಗಿದೆ. ಮಧ್ಯದ ಪ್ರದೇಶದ ಹಾಗೂ ದಕ್ಷಿಣದ ಪ್ರದೇಶದ ಪಟ್ಟಣಗಳ ಜನಸಾಂದ್ರತೆ ಸೂಚಿಯು (ಬೆಂಗಳೂರನ್ನು ಹೊರತುಪಡಿಸಿ) ಕಡಿಮೆ ಪ್ರಮಾಣದಲ್ಲಿತ್ತು. ಕಳೆದ ೨೦ ವರ್ಷಗಳಲ್ಲಿ ದಕ್ಷಿಣದ ಪ್ರದೇಶದಲ್ಲಿ ಜನಸಂಖ್ಯೆಯ ವ್ಯತ್ಯಾಸದ ಸಹಪ್ರಮಾಣವು (ಸಿವಿ) ಅತಿ ಹೆಚ್ಚಿನದಾಗಿತ್ತು. ಸಿವಿಯ ಪ್ರಕಾರ ಎರಡು ದಶಕಗಳಲ್ಲೂ ಸಹ ಹೆಚ್ಚಿನ ಅಥವಾ ಮಧ್ಯಮ ಬೆಳವಣಿಗೆಯ ಪಟ್ಟಣಗಳಲ್ಲಿ ಪ್ರಾಥಮಿಕ ವಲಯವು ನಗರೀಕರಣದ ಕಾರ್ಯ ವಿಧಾನವನ್ನು ಬಾಧಿಸಿಲ್ಲ. ಹಾಗೆಯೇ ೧೯೯೧–೨೦೦೧ ಮತ್ತು ೨೦೦೧–೨೦೧೧ ಈ ಎರಡು ದಶಕಗಳಲ್ಲಿ ಹೆಚ್ಚು ಬೆಳವಣಿಗೆ ಉಳ್ಳ ಪಟ್ಟಣಗಳಲ್ಲಿ ಉಪವಲಯದ ಉದ್ಯೋಗದ ಪರಿಣಾಮವು ನಗಣ್ಯವಾಯಿತು. ಹೆಚ್ಚು ಬೆಳವಣಿಗೆ ಗತಿಯುಳ್ಳ ಪಟ್ಟಣಗಳಲ್ಲಿನ ಜನಸಂಖ್ಯಾ ಅಭಿವೃದ್ಧಿಯು ಕಳೆದ ಎರಡು ದಶಕಗಳ ಅಭಿವೃದ್ಧಿಯಲ್ಲಿ ಉಪಾಂತ ಉದ್ಯೋಗದ ಸ್ಥಾನವನ್ನು ಭದ್ರಪಡಿಸಿದೆ. ಆದರೂ ಸಹ ೨೦೦೧ ಮತ್ತು ೨೦೧೧ರ ದತ್ತಾಂಶದ ಪ್ರಕಾರ, ಕಡಿಮೆ ಬೆಳವಣಿಗೆ ಗತಿಯುಳ್ಳ ಪಟ್ಟಣಗಳಲ್ಲಿನ ನಗರೀಕರಣವನ್ನು ಉಪಾಂತ ವಲಯದ ಉದ್ಯೋಗವು ಉತ್ತೇಜಿಸಿಲ್ಲ. ಕಳೆದ ಎರಡು ದಶಕಗಳಲ್ಲಿ (೧೯೯೧–೨೦೧೧) ಗಣನೀಯ ಸಂಖ್ಯೆಯ ಶಾಸನ ಬದ್ಧ ಮತ್ತು ಜನಗಣತಿ ಪಟ್ಟಣಗಳನ್ನು ದಕ್ಷಿಣ ಕನ್ನಡ, ಮೈಸೂರು, ಬೆಳಗಾವಿ ಮತ್ತು ಬೆಂಗಳೂರು ನಗರ ಜಿಲ್ಲೆಗಳು ವರದಿ ಮಾಡಿದವು.

ಉಳಿದ ಪ್ರದೇಶಗಳಿಗೆ ಹೋಲಿಸಿದಾಗ ರಾಜ್ಯದ ಮಧ್ಯದ ಪ್ರದೇಶವು ಶಾಸನಬದ್ಧ ಪಟ್ಟಣಗಳ ಜನಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳವನ್ನು ಹೊಂದಿರುವುದನ್ನು ಈ ಅಧ್ಯಯನವು ಕಂಡುಹಿಡಿದಿದೆ. ಇದೇ ರೀತಿಯಲ್ಲಿ ಈ ಪ್ರದೇಶವು ಕಳೆದ ೨೦ ವರ್ಷ ಅವಧಿಯಲ್ಲಿ ಶಾಸನಬದ್ಧ ಜನಸಂಖ್ಯಾ ಗಾತ್ರದಲ್ಲಿಯೂ ಸಹ ಮೊದಲ ಸ್ಥಾನವನ್ನು ಪಡೆದಿದೆ. ದಕ್ಷಿಣದ ಪ್ರದೇಶವು (ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ) ಶಾಸನಬದ್ಧ ಜನಸಂಖ್ಯೆಗೆ ಸಂಬಂಧಿಸಿದಂತೆ ಮಧ್ಯದ ಪ್ರದೇಶದ ನಂತರ ಎರಡನೆಯ ಸ್ಥಾನದಲ್ಲಿತ್ತು. ಇತ್ತೀಚಿನ ಜನಗಣತಿ ವರ್ಷದಲ್ಲಿ (೨೦೧೧) ಶಾಸನಬದ್ಧ ಪಟ್ಟಣಗಳ ಸಂಖ್ಯೆಗೆ ಸಂಬಂಧಿಸಿದಂತೆ ಧಾರವಾಡವು (ಮಧ್ಯದ ಪ್ರದೇಶ) ಮೊದಲ ಸ್ಥಾನದಲ್ಲಿತ್ತು. ವಿಜಯಪುರವು (ಉತ್ತರದ ಪ್ರದೇಶ) ಶಾಸನಬದ್ಧ ಪಟ್ಟಣಗಳ ಜನಸಂಖ್ಯೆಗೆ ಸಂಬಂಧಿಸಿದಂತೆ ಮೊದಲ ಸ್ಥಾನದಲ್ಲಿತ್ತು. ದಕ್ಷಿಣದ ಪ್ರದೇಶವು (ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ) ೨೦೧೧ರ ಜನಗಣತಿಯ ಪ್ರಕಾರ ಜನಸಂಖ್ಯೆಯ ವಿಷಯದಲ್ಲಿ ಅತಿ ಕಡಿಮೆ ಸಾಂದ್ರತೆ ಸೂಚಿಯನ್ನು (೦.೧೫೭) ಹೊಂದಿತ್ತು. ಹೀಗಿರುವಾಗ ದಕ್ಷಿಣದ ಪ್ರದೇಶದ ಮೈಸೂರು ಒಟ್ಟಾರೆ ಜನಸಂಖ್ಯಾ ಗಾತ್ರಕ್ಕೆ ಸಂಬಂಧಿಸಿದಂತೆ ಮುಂದಾಳು ಜಿಲ್ಲೆಗಳಲ್ಲೊಂದಾಗಿದೆ. ೨೦೧೧ರ ಜನಗಣತಿಯ ಪ್ರಕಾರ ಪಟ್ಟಣಗಳ ಸಾಂದ್ರತಾ ಸೂಚಿಯ ಪಟ್ಟಿಯಲ್ಲಿ ಮಧ್ಯದ ಪ್ರದೇಶವು ಅಗ್ರಸ್ಥಾನದಲ್ಲಿದೆ.

**ಕಾರ್ಯನೀತಿ ಪರಿಣಾಮಗಳು**

ಕರ್ನಾಟಕದಲ್ಲಿ ಮೊದಲ ದರ್ಜೆ ಪಟ್ಟಣಗಳಲ್ಲಿ ಜನಸಂಖ್ಯೆಯು ಹೆಚ್ಚಾಗುತ್ತಿರುವುದರಿಂದ ಉಪ ಹಾಗೂ ಉಪಾಂತ ಪಟ್ಟಣಗಳಿಂದ ಇಲ್ಲಿಗೆ ವಲಸೆ ಬರುವುದನ್ನು ಕೂಡಲೇ ತಪ್ಪಿಸಬೇಕಾಗಿದೆ. ರಾಜ್ಯದ ಮೂರನೆಯ, ನಾಲ್ಕನೆಯ ಹಾಗೂ ಐದನೆಯ ದರ್ಜೆಯ ಪಟ್ಟಣಗಳಿಗೆ ಅಗತ್ಯವಾದ ನಾಗರಿಕ ಸೌಲಭ್ಯಗಳನ್ನು ಒದಗಿಸಬೇಕೆಂದೂ ಮತ್ತು ಮೊದಲನೆಯ ದರ್ಜೆಯ ಪಟ್ಟಣಗಳಿಗೆ ಇಲ್ಲಿಂದ ವಲಸೆ ಹೋಗುವುದನ್ನು ತಪ್ಪಿಸಿ ಅದರ ಬದಲಾಗಿ ಅಲ್ಲಿಂದ ಇಲ್ಲಿಗೆ ವಲಸೆ ಬರುವಂತೆ ಈ ಪಟ್ಟಣಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸಿ ಆಕರ್ಷಿಸಬೇಕೆಂದೂ ಈ ಅಧ್ಯಯನವು ಶಿಫಾರಸ್ಸು ಮಾಡುತ್ತದೆ. ಜೊತೆಗೆ ಈ ಪಟ್ಟಣಗಳಿಂದ ಜನರು ಮೇಲ್ದರ್ಜೆಯ ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ಒಟ್ಟಿನಲ್ಲಿ ಶೈಕ್ಷಣಿಕ ಮತ್ತು ಆರೋಗ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು, ಉಪ ಹಾಗೂ ಉಪಾಂತ ಉದ್ಯೋಗಗಳ ಅವಕಾಶ ಕಲ್ಪಿಸುವುದು ಇತ್ಯಾದಿಗಳು ಈ ಕಡಿಮೆ ದರ್ಜೆಯ ಪಟ್ಟಣಗಳಿಗೆ ಮೇಲ್ದರ್ಜೆಯ ಪಟ್ಟಣಗಳಿಂದ ಜನರನ್ನು ಮರುವಲಸೆ ಬರುವಂತೆ ಸೆಳೆಯುವ ತಂತ್ರಗಳಾಗಬಹುದಾಗಿದೆ. ಸರ್ಕಾರದ ಪ್ರಯತ್ನಗಳು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳನ್ನು ಅದರಲ್ಲೂ ನಿರ್ದಿಷ್ಟವಾಗಿ ತಯಾರಿಕಾ ಮತ್ತು ನಿರ್ಮಾಣ ಉದ್ದಿಮೆ ಸಂಸ್ಥೆಗಳನ್ನು ಅಗತ್ಯ ಮೂಲಭೂತ ಸೌಕರ್ಯಗಳು ಮತ್ತು ಪ್ರೋತ್ಸಾಹಗಳನ್ನು ಕೊಟ್ಟು ಎರಡನೆಯ ಮತ್ತು ಮೂರನೆಯ ದರ್ಜೆಯ ಪಟ್ಟಣಗಳಲ್ಲಿ ನೆಲೆಗೊಳ್ಳುವಂತೆ



ಮಾಡುವತ್ತ ಸಾಗಬೇಕು. ಹೀಗೆ ಮಾಡುವುದರಿಂದ ಸಾಮಾಜಿಕ–ಆರ್ಥಿಕ ಪ್ರಗತಿಯನ್ನು ದೃಢಪಡಿಸಲು ಮತ್ತು ಪ್ರದೇಶಗಳು ಹಾಗೂ ಜಿಲ್ಲೆಗಳಾದ್ಯಂತ ನಗರಗಳ ಜನಸಂಖ್ಯಾಭಿವೃದ್ಧಿಯಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನಿಸಬಹುದಾಗಿದೆ.

ದೊಡ್ಡ ಪಟ್ಟಣಗಳಲ್ಲಿ ಅದರಲ್ಲೂ ವಿಶೇಷವಾಗಿ ಮೊದಲ ಮತ್ತು ಎರಡನೆಯ ದರ್ಜೆಯ ಪಟ್ಟಣಗಳಲ್ಲಿ ಜನಸಂಖ್ಯೆಯ ಅತಿ ಹೆಚ್ಚಿನ ಕ್ರೋಢೀಕರಣದಿಂದ ಹೆಚ್ಚಿನ ವಸತಿ ಸೌಕರ್ಯ, ಶೈಕ್ಷಣಿಕ ಹಾಗೂ ಆರೋಗ್ಯ ಸೌಕರ್ಯಗಳ ಅನಿವಾರ್ಯತೆ ಉಂಟಾಗುತ್ತದೆ. ಸರ್ಕಾರವು ಆದ್ಯತೆಯ ಮೇರೆಗೆ ಮಹಿಳೆಯರು ಮತ್ತು ಮಕ್ಕಳಿಗಾಗಿ ಹೆಚ್ಚು ಪ್ರಸೂತಿ ಮತ್ತು ಆರೋಗ್ಯ ಸೇವೆಗಳನ್ನು ಪ್ರಾರಂಭಿಸಬೇಕಾಗುತ್ತದೆ. ಜೊತೆಗೆ ದಕ್ಷಿಣದ ಹಾಗೂ ತೀರದ ಪ್ರದೇಶಗಳಲ್ಲಿ ನಗರಗಳ ಜನಸಂಖ್ಯೆಯಲ್ಲಿ ಅಪಾರ ಪ್ರಮಾಣದ ಹೆಚ್ಚಳ ಉಂಟಾಗುತ್ತಿರುವುದರಿಂದ ಅಪರಾಧಗಳ ಸಂಖ್ಯೆಯೂ ಸಹ ಹೆಚ್ಚಾಗುತ್ತಿರುವುದನ್ನು ಗಮನಿಸಬೇಕಾಗುವುದು ಅತಿ ಮುಖ್ಯವಾಗುತ್ತದೆ. ಆದ್ದರಿಂದ ಜನರ ಭದ್ರತೆ ಹಾಗೂ ಸುರಕ್ಷತೆಗಾಗಿ, ಅದರಲ್ಲೂ ನಿರ್ದಿಷ್ಟವಾಗಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರ ಭದ್ರತೆ ಹಾಗೂ ಸುರಕ್ಷತೆಗಾಗಿ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಅಧ್ಯಯನವು ಬಲವಾಗಿ ಶಿಫಾರಸ್ಸು ಮಾಡುತ್ತದೆ.

## ಭಾರತದಲ್ಲಿ ಕುಟುಂಬ ಕಲ್ಯಾಣ ಹಾಗೂ ಮಹಿಳೆಯರ ಉದ್ಯೋಗಶೀಲತೆ

*ಡಾ. ಟಿ.ಎನ್.ಭಟ್*

ಈ ಅಧ್ಯಯನವು ಮಹಿಳೆಯರು ಉದ್ಯೋಗದಲ್ಲಿ ತೊಡಗಿಕೊಳ್ಳುವುದನ್ನು, ಆ ತೊಡಗಿಕೊಳ್ಳುವುದರಲ್ಲಿ ಆಗುವ ಬದಲಾವಣೆಗಳು ಇವುಗಳನ್ನು ಪರೀಕ್ಷಿಸುತ್ತದೆ. ಕುಟುಂಬ ಕಲ್ಯಾಣ ವಿಧಾನವನ್ನು ಮಹಿಳೆಯರು ಅಳವಡಿಸಿಕೊಳ್ಳುವುದರಿಂದ ಉದ್ಯೋಗದಲ್ಲಿ ಅವರು ತೊಡಗಿಕೊಳ್ಳುವುದರ ಮೇಲಾಗುವ ಪರಿಣಾಮಗಳನ್ನೂ ವಿಶ್ಲೇಷಿಸುತ್ತದೆ. ಕಳೆದ ಮೂರು ದಶಕಗಳಲ್ಲಿ ಅಂದರೆ ೧೯೮೧ರಿಂದ ೨೦೧೧ರ ವರೆಗಿನ ಅವಧಿಯಲ್ಲಿ ಗರ್ಭಿಣಿಯಾಗುವ ವಯಸ್ಸಿನಲ್ಲಿ ಮಹಿಳೆಯರು ಉದ್ಯೋಗದಲ್ಲಿ ತೊಡಗಿಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದೆ. ನಗರಗಳಲ್ಲಿ ಈ ಪ್ರವೃತ್ತಿಯಲ್ಲಿ ಹೆಚ್ಚಳ ಕಂಡು ಬರುತ್ತಲೇ ಇದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯ ಕೃಷಿ ಚಟುವಟಿಕೆಗಳು ಹಾಗೂ ಉಪಕೃಷಿ ಕಸುಬುಗಳು ಕಡಿಮೆಯಾಗುತ್ತಿರುವುದರಿಂದ ಅಲ್ಲಿಯ ಮಹಿಳೆಯರ ಉದ್ಯೋಗದಲ್ಲಿ ತೊಡಗಿಕೊಳ್ಳುವ ಪ್ರವೃತ್ತಿಯೂ ಕಡಿಮೆಯಾಗುತ್ತಿದೆ. ದಶಕಗಳಲ್ಲಿನ ವಾರ್ಷಿಕ ಬೆಳವಣಿಗೆಯ ಗತಿಯನ್ನು ಗಮನಿಸಿದಾಗ ಈ ನಿರಾಶಾದಾಯಕ ಪ್ರವೃತ್ತಿಯು ಕಂಡು ಬಂದಿದೆಯಲ್ಲದೆ ೨೦೦೧ ರಿಂದ ೨೦೧೧ ರ ಅವಧಿಯಲ್ಲಿ ಕುಂಠಿತ ಬೆಳವಣಿಗೆಯು ಬಹಳ ಜಾಸ್ತಿಯಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಮಹಿಳೆಯರ ನಡುವಿನ ಉದ್ಯೋಗದಲ್ಲಿ ತೊಡಗಿಕೊಳ್ಳುವ ಪ್ರವೃತ್ತಿಯಲ್ಲಿ ಅನೇಕ ಭಿನ್ನತೆಗಳಿದ್ದು, ಅವರ ವಾಸಸ್ಥಳ, ಮಾಡುವ ಮುಖ್ಯ ಹಾಗೂ ಉಪಕಸುಬುಗಳು, ಕೆಲಸದ ಪ್ರಮಾಣ ಇವುಗಳಲ್ಲಿ ಅದು ವ್ಯಕ್ತವಾಗುತ್ತದೆ.

ಈ ಅಧ್ಯಯನವು ಮಹಿಳೆಯರ ಉದ್ಯೋಗ ಪ್ರವೃತ್ತಿಯ (ಗ್ರಾಮೀಣ ಪ್ರದೇಶಗಳಲ್ಲಿ) ಕ್ಷೀಣತೆಯ ಬಗ್ಗೆ ಕಾರಣಗಳನ್ನು ಕಂಡು ಹಿಡಿಯುವ ಸಲುವಾಗಿ ಮಹಿಳಾ ವಿದಾಭ್ಯಾಸದಲ್ಲಿ ಆಗಿರುವ ಪ್ರಗತಿ, ಕೃಷಿ ವಲಯದಲ್ಲಿ ಮಹಿಳೆಯರಿಗೆ ದೊರಕುತ್ತಿರುವ ಉದ್ಯೋಗದಲ್ಲಿ ಆಗಿರುವ ಬದಲಾವಣೆ ಇತ್ಯಾದಿಗಳನ್ನು ವಿಶ್ಲೇಷಿಸಿದೆ. ಕಳೆದ ಮೂರು ದಶಕಗಳಲ್ಲಿ ಶಾಲೆಗೆ ಹೋಗುವ ಬಾಲಕಿಯರ ಸಂಖ್ಯೆಯು ನಿಯತವಾಗಿಯೂ ಮತ್ತು ವೇಗವಾಗಿಯೂ ಹೆಚ್ಚುತ್ತಲೇ ಇದೆ. ಶಾಲೆಗೆ ಹೋಗುವ ೧೫ರಿಂದ ೧೯ ವರ್ಷಗಳ ವಯಸ್ಸಿನ ಬಾಲಕಿಯರ ಸಂಖ್ಯೆಯು ಸುಮಾರು ನಾಲ್ಕು ಪಟ್ಟುಗಳಷ್ಟು ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇದು ನಗರ ಪ್ರದೇಶಗಳಿಗಿಂತ ಹೆಚ್ಚು ನಾಟಕೀಯವಾಗಿ ಆಗಿದೆ. ಕಳೆದ ಮೂರು ದಶಕಗಳಲ್ಲಿ ಗರ್ಭಧರಿಸುವ ವಯಸ್ಸಿನ ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಗಮನಾರ್ಹವಾಗಿ ಕಡಿಮೆಯಾಗಿದ್ದರೂ ಸಹ, ಕೃಷಿಯೇತರ ಚಟುವಟಿಕೆಗಳಲ್ಲಿ ಅವರು ತೊಡಗಿಕೊಳ್ಳುವುದು ಹೆಚ್ಚಾಗಿದೆ. ಒಟ್ಟಿನಲ್ಲಿ ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರು ತೊಡಗಿಕೊಳ್ಳುವ ಸಾಧ್ಯತೆ ಅಷ್ಟೇನೂ ಆಶಾದಾಯಕವಾಗಿಲ್ಲ. ಕಳೆದ ಮೂರು ದಶಕಗಳಲ್ಲಿ ೧೫ರಿಂದ ೨೪ ವರ್ಷ ವಯಸ್ಸಿನ ಮಹಿಳೆಯರು ಪ್ರೌಢಶಾಲೆ ಹಾಗೂ ಕಾಲೇಜು ಮಟ್ಟದ ವಿದ್ಯಾಭ್ಯಾಸವನ್ನು ಪಡೆಯುತ್ತಿರುವುದು ಹೆಚ್ಚಾಗುತ್ತಿದೆ. ಈ ಅಧ್ಯಯನದ ದತ್ತಾಂಶವು ಮಹಿಳೆಯರ ವಿದ್ಯಾಭ್ಯಾಸದ ಮಟ್ಟವು ಹೆಚ್ಚಿದಂತೆಲ್ಲಾ ಕೃಷಿ ಚಟುವಟಿಕೆಗಳಲ್ಲಿ ಅವರು ತೊಡಗಿಕೊಳ್ಳುವುದೂ ಕಡಿಮೆಯಾಗುತ್ತಾ ಹೋಗಿರುವುದನ್ನು ತೋರಿಸುತ್ತದೆ. ಕೃಷಿ ವಲಯದಲ್ಲಿ ಅವರು ತೊಡಗಿಕೊಳ್ಳುತ್ತಿರುವುದು ಕಡಿಮೆಯಾಗುತ್ತಾ ಹೋಗಿರುವುದಲ್ಲದೆ, ತೊಡಗಿಕೊಳ್ಳುವ ಬೆಳವಣಿಗೆ ಗತಿಯೂ ಕಡಿಮೆಯಾಗುತ್ತಿದೆ.

ಎನ್‌ಎಫ್‌ಎಚ್‌ಎಸ್ ೧ ಮತ್ತು ೩ನೇ ಸುತ್ತಿನ ದತ್ತಾಂಶದ ಪ್ರಕಾರ ಕುಟುಂಬ ಕಲ್ಯಾಣ ವಿಧಾನವನ್ನು ಅಳವಡಿಸಿಕೊಳ್ಳುವವರು ಅಳವಡಿಸಿಕೊಳ್ಳದೆ ಇರುವವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗದಲ್ಲಿ ತೊಡಗಿಕೊಳ್ಳುತ್ತಾರೆ. ಕುಟುಂಬ ಕಲ್ಯಾಣ ವಿಧಾನವನ್ನು ಅಳವಡಿಸಿಕೊಳ್ಳದೆ ಇರುವವರಲ್ಲಿ ಉದ್ಯೋಗದಲ್ಲಿ ತೊಡಗಿಕೊಳ್ಳುವ ಪ್ರವೃತ್ತಿ ನಿಂತಲ್ಲೇ ನಿಂತಿದೆ. ಕುಟುಂಬ ಕಲ್ಯಾಣ ವಿಧಾನವನ್ನು ಅಳವಡಿಸಿಕೊಳ್ಳುವ ಮಹಿಳೆಯರೆಲ್ಲರೂ ಉದ್ಯೋಗದಲ್ಲಿ ತೊಡಗಿಕೊಳ್ಳುತ್ತಾರೆ ಎಂದು ಹೇಳಲಾಗುವುದಿಲ್ಲ. ಆದರೆ ಸಮಾಜದಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಪೈಕಿ ಈ ಪ್ರವೃತ್ತಿ ಹೆಚ್ಚಾಗಿ ಕಂಡು ಬಂದಿದೆ.

# ಐಸೆಕ್

## ಅಂತಿಮ ಪರಿಷ್ಕರಣೆಯಲ್ಲಿರುವ ಯೋಜನಾ ವರದಿಗಳು

೧. ಭಾರತದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ (ಆರ್‌ಕೆವಿವೈ) ಪರಿಣಾಮದ ಕುರಿತು ಮೌಲ್ಯಮಾಪನ ಅಧ್ಯಯನ (ಪ್ರೊ. ಪರಮೋದ್ ಕುಮಾರ್, ಡಾ. ಎ.ವಿ.ಮಂಜುನಾಥ, ಡಾ. ಏಳುಮಲೈ ಕಣ್ಣನ್, ಡಾ. ಎಂ.ಜೆ.ಬೆಂಡೆ ಮತ್ತು ಡಾ. ಕೆ.ಬಿ.ರಾಮಪ್ಪ}.

೨. ಕರ್ನಾಟಕದಲ್ಲಿ ಆಹಾರ ಸಂಸ್ಕರಣಾ ಘಟಕಗಳ ಯಶೋಗಾಥೆಗಳ ದಾಖಲೀಕರಣ (ಡಾ. ಐ.ಮಾರುತಿ).

೩. ಕರ್ನಾಟಕ ರಾಜ್ಯ ಸಾಕ್ಷರತಾ ಅಭಿಯಾನ ಪ್ರಾಧಿಕಾರದ ೨೦೧೩-೧೪ರ ಮೌಲ್ಯಮಾಪನಾ ಕಾರ್ಯಕ್ರಮ (ಡಾ. ಐ.ಮಾರುತಿ).

೪. ಕರ್ನಾಟಕದಲ್ಲಿ ಟೊಮಾಟೊ ಮರುಕಟ್ಟೆ ಪದ್ಧತಿಗಳ ಮೌಲ್ಯವರ್ಧನಾ ಸರಪಳಿಯ ವಿಶ್ಲೇಷಣೆ (ಡಾ. ಕೆ.ಬಿ.ರಾಮಪ್ಪ ಮತ್ತು ಡಾ. ಎ.ವಿ.ಮಂಜುನಾಥ).

೫. ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ನಿಯತಕಾಲಿಕೆಗಳು (ಡಾ. ಎ.ವಿ.ಮಂಜುನಾಥ ಮತ್ತು ಶ್ರೀ ಬಿ.ಬಿ.ಚಾಂದ್).

೬. ಸಹಾಯಧನ ಬೆಂಬಲ ಲೆಕ್ಕಾಚಾರ ಚೌಕಟ್ಟು (ಸೂಕ್ಷ್ಮ ನೀರಾವರಿ ಕಾರ್ಯನೀತಿ ಅನುಷ್ಠಾನದ ಮಾರ್ಗ ನಕ್ಷೆಯ ಭಾಗವಾಗಿ) (ಡಾ. ಎ.ವಿ.ಮಂಜುನಾಥ).

೭ ಸಂಸ್ಥೆಗಳು, ಆಡಳಿತ ಮತ್ತು ಅಭಿವೃದ್ಧಿ: ಕರ್ನಾಟಕದಲ್ಲಿನ ಆಯ್ದ ಗ್ರಾಮಪಂಚಾಯಿತಿಗಳ ಅಧ್ಯಯನ (ಪ್ರೊ. ಡಿ.ರಾಜಶೇಖರ್ ಹಾಗೂ ಡಾ. ಎಂ.ದೇವೇಂದ್ರ ಬಾಬು).

೮. ನಗರ ಪರಿಸರದ ಸೇವೆಗಳ ಹೊಣೆಗಾರಿಕೆ: ಬೆಂಗಳೂರಿನ ಒಂದು ಪ್ರಕರಣ (ಡಾ. ಎಂ.ಬಾಲಸುಬ್ರಮಣಿಯನ್).

೯. ಬಡವರು ಹಾಗೂ ವೃದ್ಧರ ಆರೋಗ್ಯ ವಿಮೆ: ಆರ್‌ಎಸ್‌ಬಿವೈ ಉತ್ತರವಾಗಬಲ್ಲದೇ? (ಪ್ರೊ. ಮೀನಾಕ್ಷಿ ರಾಜೀವ್ ಮತ್ತು ಶ್ರೀಮತಿ ಬಿ.ಪಿ.ವಾಣಿ).

೧೦. ಹೊಸ ಸೇವಾ ಆರ್ಥಿಕತೆಯಲ್ಲಿ ಕೆಲಸ ಮತ್ತು ಕಾರ್ಮಿಕರು (ಪ್ರೊ. ಸುಪ್ರಿಯಾ ರಾಯ್‌ಚೌಧರಿ ಮತ್ತು ಶ್ರೀಮತಿ ಬಿ.ಪಿ.ವಾಣಿ).

೧೧. ಲಿಂಗ ಪ್ರಭೇಧ ಮತ್ತು ಜೀವದ ದುರ್ಬಲತೆ: ಲಿಂಗ ಪ್ರಭೇಧದ ದೃಷ್ಟಿಯಿಂದ ಮಹಿಳೆಯರ ಆರೋಗ್ಯದ ಅಧ್ಯಯನ (ಪ್ರೊ. ಆರ್.ಮುತ್ತುರಾಯಪ್ಪ ಮತ್ತು ಡಾ. ಚನ್ನಮ್ಮ ಕಂಬಾರ).

೧೨. ಕರ್ನಾಟಕದ ಆಯ್ದ ಹಳ್ಳಿಗಳಲ್ಲಿ ದಲಿತ ಹಾಗೂ ಮುಸ್ಲಿಂ ಸಮುದಾಯಗಳ ಆರೋಗ್ಯ ದಕ್ಕಿಸಿಕೊಳ್ಳುವ ವರ್ತನೆಯ ರೀತಿ ವಿನ್ಯಾಸಗಳು ಮತ್ತು ಇರುವ ತಾರತಮ್ಯಗಳು (ಡಾ. ಸೋಬಿನ್ ಜಾರ್ಜ್).

೧೩. ರಾಷ್ಟ್ರೀಯ ಜನಸಂಖ್ಯಾ ನೋಂದಣಿ ಪುಸ್ತಕವನ್ನು (ಎನ್‌ಪಿಆರ್) ಇತ್ತೀಚಿನ ಮಾಹಿತಿಯೊಂದಿಗೆ ನವೀಕರಿಸುವ ಪ್ರಯತ್ನಕ್ಕೆ ನೆರವಾಗುವುದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ನಿಯತವಾಗಿ ನಾಗರಿಕ ನೋಂದಣಿ ಪದ್ಧತಿಯ (ಸಿಆರ್‌ಎಸ್) ದತ್ತಾಂಶದ ಗುಣಮಟ್ಟವನ್ನು ಅಂದಾಜು ಮಾಡುವುದು (ಪ್ರೊ. ಕೆ.ಎಸ್.ಜೇಮ್ಸ್, ನವದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಡಾ. ಪಿ.ಎಂ.ಕುಲಕರ್ಣಿ).

೧೪. ಜಾಗತೀಕೃತ ವಿಶ್ವದಲ್ಲಿ ವೃದ್ಧಾಪ್ಯ ಹಾಗೂ ಶ್ರೇಯೋಭಿವೃದ್ಧಿ (ಪ್ರೊ. ಕೆ.ಎಸ್.ಜೇಮ್ಸ್, ಡಾ. ಟಿ.ಎಸ್.ಶ್ಯಾಮಲ ಮತ್ತು ಡಾ. ಲೇಖಾ ಸುಬ್ಬಯ್ಯ).

## ಪ್ರಗತಿಯಲ್ಲಿರುವ ಸಂಶೋಧನಾ ಕಾರ್ಯಕ್ರಮಗಳು

೧. ಭಾರತದಲ್ಲಿ ಬಳಕೆಯ ರೀತಿಯಲ್ಲಿನ ಬದಲಾವಣೆ: ಉತ್ಪಾದನೆ ಮತ್ತು ಮಾರುಕಟ್ಟೆ ಸಂಪರ್ಕಗಳ ಮೂಲಕ ಅಧಿಕ ಮೌಲ್ಯದ ಉತ್ಪನ್ನಗಳತ್ತ ವಿಕೇಂದ್ರಿತವಾಗಲು ಇರುವ ಅವಕಾಶಗಳು (ಪ್ರೊ. ಪಿ.ಜಿ.ಚೆಂಗಪ್ಪ)
ಪ್ರಾರಂಭದ ದಿನಾಂಕ: ಮೇ ೨೦೧೧.

೨. ಕೃಷಿ ಸೂಚಿಗಳು (ಡಾ. ಎ.ವಿ.ಮಂಜುನಾಥ)
ಪ್ರಾರಂಭದ ದಿನಾಂಕ: ಏಪ್ರಿಲ್ ೨೦೧೨

೩. ಸುಸ್ಥಿರ ಸಂರಕ್ಷಣೆ, ಸಮಗ್ರ ಅಭಿವೃದ್ಧಿ ಮತ್ತು ಜೀವನೋಪಾಯಗಳ ಉತ್ತೇಜನೆ: ಭಾರತದಲ್ಲಿ ಚಿಟ್ಟೆ ಕೃಷಿಗೆ ಇದರ ಅನ್ವಯಿಕತೆ (ಪ್ರೊ. ಪಿ.ಜಿ.ಚೆಂಗಪ್ಪ)
ಪ್ರಾರಂಭದ ದಿನಾಂಕ: ಜುಲೈ ೨೦೧೨

# ಐಸೆಕ್



೪. ಕೃಷಿಯ ಬಗೆಗಿನ ದೃಷ್ಟಿಕೋನ (ಪ್ರೊ. ಪರಮೋದ್ ಕುಮಾರ್)
ಪ್ರಾರಂಭದ ದಿನಾಂಕ: ಜುಲೈ ೨೦೧೨ (ಆಗಸ್ಟ್ ೨೦೧೫)

೫. ಭಾರತದಲ್ಲಿ ಪರಿಕರಗಳ ಬಳಕೆ, ಉತ್ಪಾದನೆ, ಉತ್ಪಾದಕತೆ ಹಾಗೂ ಆದಾಯದ ಮೇಲೆ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನವು ಬೀರಿರುವ ಪರಿಣಾಮ (ಕ್ರೋಢೀಕೃತ ವರದಿ) (ಡಾ. ಎ.ವಿ.ಮಂಜುನಾಥ ಮತ್ತು ಪ್ರೊ. ಪರಮೋದ್ ಕುಮಾರ್)
ಪ್ರಾರಂಭದ ದಿನಾಂಕ: ಆಗಸ್ಟ್ ೨೦೧೫.

೬. ಭಾರತೀಯ ರೈತರು ಮಣ್ಣು ಪರೀಕ್ಷೆ ಆಧಾರದ ಮೇಲೆ ಶಿಫಾರಿತ ಪ್ರಮಾಣದ ರಸಗೊಬ್ಬರಗಳ ಬಳಕೆಯನ್ನು ಅಳವಡಿಸಿಕೊಳ್ಳುವಿಕೆ (ಕ್ರೋಢೀಕೃತ ವರದಿ)
(ಡಾ, ಕೆ.ಬಿ. ರಾಮಪ್ಪ ಮತ್ತು ಡಾ. ಏಳುಮಲೈ ಕಣ್ಣನ್)
ಪ್ರಾರಂಭದ ದಿನಾಂಕ: ಸೆಪ್ಟಂಬರ್ ೨೦೧೫

೭. ಜೀವಂತ ಸೂಕ್ಷ್ಮಾಣುಗಳ (ಎಲ್‌ಓಎಂಗಳು) ಸಾಮಾಜಿಕ–ಆರ್ಥಿಕ ಪರಿಣಾಮಗಳನ್ನು ಅಂದಾಜಿಸುವುದು (ಡಾ. ಎ.ವಿ.ಮಂಜುನಾಥ ಮತ್ತು ಡಾ. ಏಳುಮಲೈ ಕಣ್ಣನ್)
ಪ್ರಾರಂಭದ ದಿನಾಂಕ: ಮಾರ್ಚ್ ೨೦೧೫

೮. ಮಾಹಿತಿ, ಮಾರುಕಟ್ಟೆ ಕಲ್ಪಿಸುವಿಕೆ ಹಾಗೂ ಕೃಷಿ ಬೆಳವಣಿಗೆ
(ಪ್ರೊ. ಪರಮೋದ್ ಕುಮಾರ್)
ಪ್ರಾರಂಭದ ದಿನಾಂಕ: ಸೆಪ್ಟೆಂಬರ್ ೨೦೧೫

೯. ಭಾರತಕ್ಕಾಗಿ ಭತ್ತದ ಕಾರ್ಯತಂತ್ರ (ಪ್ರೊ. ಪಿ.ಜಿ.ಚೆಂಗಪ್ಪ, ಡಾ. ಏಳುಮಲೈ ಕಣ್ಣನ್ ಹಾಗೂ ಡಾ. ಎ.ವಿ.ಮಂಜುನಾಥ)
ಪ್ರಾರಂಭದ ದಿನಾಂಕ: ಜೂನ್ ೨೦೧೫

೧೦. ಕರ್ನಾಟಕದಲ್ಲಿ ಉತ್ಪಾದನೆ, ಉತ್ಪಾದಕತೆ ಹಾಗೂ ಮಣ್ಣು ಆರೋಗ್ಯ ಇವುಗಳ ಮೇಲೆ ಬೇವು ಲೇಪಿತ ಯೂರಿಯಾದ ಪರಿಣಾಮ
(ಡಾ. ಕೆ.ಬಿ.ರಾಮಪ್ಪ ಮತ್ತು ಡಾ. ಎ.ವಿ.ಮಂಜುನಾಥ)
ಪ್ರಾರಂಭದ ದಿನಾಂಕ: ಜನವರಿ ೨೦೧೬

೧೧. ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳು (ಡಾ. ಎ.ವಿ.ಮಂಜುನಾಥ ಮತ್ತು ಡಾ. ಕೆ.ಬಿ.ರಾಮಪ್ಪ)
ಪ್ರಾರಂಭದ ದಿನಾಂಕ: ಜನವರಿ ೨೦೧೬

೧೨. ಸ್ಥಳೀಯ ಹಾಗೂ ಆಮದು ಮಾಡಿಕೊಂಡ ತಾಳೆ ಸಸಿಗಳ ಕಾರ್ಯದಕ್ಷತೆ
(ಪ್ರೊ. ಪರಮೋದ್ ಕುಮಾರ್)
ಪ್ರಾರಂಭದ ದಿನಾಂಕ: ಜನವರಿ ೨೦೧೬

೧೩. ಭಾರತದಲ್ಲಿ ಆಹಾರ ಭದ್ರತೆ: ವಾತಾವರಣ ಬದಲಾವಣೆ, ಆರ್ಥಿಕತೆ, ರಾಜಕೀಯ ಹಾಗೂ ವ್ಯಾಪಾರ ವಹಿವಾಟುಗಳ ನಡುವಿನ ಸಂವಹನೆ

(ಡಾ ಎ.ವಿ.ಮಂಜುನಾಥ ಮತ್ತು ಪ್ರೊ. ಪಿ.ಜಿ.ಚೆಂಗಪ್ಪ)
ಪ್ರಾರಂಭದ ದಿನಾಂಕ: ಫೆಬ್ರವರಿ ೨೦೧೬

೧೪. ಸಂಸ್ಥೆಗಳನ್ನು ಬಡವರ ಪರವಾಗಿನ ಬೆಳವಣಿಗೆಗಾಗಿ ಸುಧಾರಿಸುವುದು (ಪ್ರೊ. ಡಿ.ರಾಜಶೇಖರ್)
ಪ್ರಾರಂಭದ ದಿನಾಂಕ: ಜೂನ್ ೨೦೦೭

೧೫. ರಾಮನಗರದ ಜಿಲ್ಲಾ ಮಾನವ ಅಭಿವೃದ್ಧಿ ವರದಿ (ಡಾ. ಎಂ.ದೇವೇಂದ್ರ ಬಾಬು)
ಪ್ರಾರಂಭದ ದಿನಾಂಕ: ಫೆಬ್ರವರಿ ೨೦೧೩

೧೬. ವಿಕೇಂದ್ರೀಕರಣ ಮತ್ತು ಸಾಮಾಜಿಕ ಭದ್ರತೆ: ಅಸಂಘಟಿತ ಕಾರ್ಮಿಕರಿಗಾಗಿರುವ ಏಕ ಗವಾಕ್ಷಿ ಸೇವಾ ಕೇಂದ್ರಗಳ ಅಧ್ಯಯನ
(ಪ್ರೊ. ಡಿ. ರಾಜಶೇಖರ್)
ಪ್ರಾರಂಭದ ದಿನಾಂಕ: ಡಿಸೆಂಬರ್ ೨೦೧೪

೧೭. ಕರ್ನಾಟಕದಲ್ಲಿ ವಿಕೇಂದ್ರೀಕರಣ ಮತ್ತು ಶಿಕ್ಷಣ (ಪ್ರೊ. ಡಿ.ರಾಜಶೇಖರ್)
ಪ್ರಾರಂಭದ ದಿನಾಂಕ: ಏಪ್ರಿಲ್ ೨೦೧೫

೧೮. ದೀರ್ಘಾವಧಿ ಪಿಂಚಣಿ ಯೋಜನೆಗೆ ನೋಂದಣಿಯನ್ನು ಹೆಚ್ಚಿಸುವುದು ಮತ್ತು ಉಳಿತಾಯವನ್ನೂ ಹೆಚ್ಚು ಮಾಡುವುದು
(ಪ್ರೊ. ಡಿ.ರಾಜಶೇಖರ್)
ಪ್ರಾರಂಭದ ದಿನಾಂಕ: ಫೆಬ್ರವರಿ ೨೦೧೬

೧೯. ಕೃಷಿ–ಜೀವ ವೈವಿಧ್ಯತೆಯನ್ನು ಸಂರಕ್ಷಿಸುವುದು ಮತ್ತು ಪರಿಸರ ನಿರ್ವಹಣೆ ಮಾಡುವುದು: ಭಾರತೀಯ ಕೃಷಿ–ಹವಾಮಾನ ಉಪವಲಯಗಳಲ್ಲಿನ ಒಂದು ಅಧ್ಯಯನ
(ಪ್ರೊ. ಸುನಿಲ್ ನೌಟಿಯಾಲ್)
ಪ್ರಾರಂಭದ ದಿನಾಂಕ: ಅಕ್ಟೋಬರ್ ೨೦೧೪

೨೦. ಭೂ ಬಳಕೆಯಲ್ಲಿನ ಬದಲಾವಣೆ ಮತ್ತು ಮಣ್ಣಿನ ಫಲವತ್ತತೆ
(ಪ್ರೊ. ಸುನಿಲ್ ನೌಟಿಯಾಲ್)
ಪ್ರಾರಂಭದ ದಿನಾಂಕ: ಜನವರಿ ೨೦೧೬

೨೧. ಹವಾಮಾನ ಬದಲಾವಣೆ ಮತ್ತು ಬೆಂಗಳೂರು ಹಾಗೂ ನ್ಯೂಯಾರ್ಕ್ ನಗರಗಳಲ್ಲಿನ ನಗರ ನೀರು ಪೂರೈಕೆ ಮತ್ತು ಬೇಡಿಕೆ ನಿರ್ವಹಣೆಯಲ್ಲಿನ ದಕ್ಷತೆ: ಒಂದು ತುಲನಾತ್ಮಕ ಅಧ್ಯಯನ (ಡಾ. ಕೃಷ್ಣ ರಾಜ್)
ಪ್ರಾರಂಭದ ದಿನಾಂಕ: ಅಕ್ಟೋಬರ್ ೨೦೧೩

೨೨. ಗ್ರಾಮೀಣ ಭಾರತದಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿನ ಬೆಸುಗೆಯು ನಕ್ಷೆ ತಯಾರಿಕೆ (ಪ್ರೊ. ಮೀನಾಕ್ಷಿ ರಾಜೀವ್)
ಪ್ರಾರಂಭದ ದಿನಾಂಕ: ಅಕ್ಟೋಬರ್ ೨೦೧೪

೨೩. ಕರ್ನಾಟಕದಲ್ಲಿ ಕೊಳಚೆ ಪ್ರದೇಶಗಳ ಆಡಳಿತ: ಒಲವುಗಳು, ಸಮಸ್ಯೆಗಳು, ಹಾಗೂ ಮಾರ್ಗನಕ್ಷೆ (ವಸ್ತುಸ್ಥಿತಿ ಲೇಖನ)
(ಪ್ರೊ. ಎಸ್.ಮಾದೇಶ್ವರನ್ ಮತ್ತು ಶ್ರೀಮತಿ ಬಿ.ಪಿ.ವಾಣಿ)
ಪ್ರಾರಂಭದ ದಿನಾಂಕ: ಮೇ ೨೦೧೫.

೨೪. ಕೃಷಿ ಸಾಲದ ಬಡ್ಡಿ ಮನ್ನಾ ಮಾಡುವಿಕೆ: ಉದ್ದೇಶವನ್ನು ಇದು ನೆರವೇರಿಸುತ್ತದೆಯೇ?
(ಪ್ರೊ. ಮೀನಾಕ್ಷಿ ರಾಜೀವ್ ಮತ್ತು ಶ್ರೀಮತಿ ಬಿ.ಪಿ.ವಾಣಿ)
ಪ್ರಾರಂಭದ ದಿನಾಂಕ: ಏಪ್ರಿಲ್ ೨೦೧೫

೨೫. ಉದಯಿಸುತ್ತಿರುವ ಮಾರುಕಟ್ಟೆಗಳಲ್ಲಿ ಆಹಾರ ವಿತರಣೆ: ಭಾರತೀಯ ಸಮುದ್ರ ಆಹಾರದ ಪ್ರಕರಣ
(ಮೌಲ್ಯೀಕೃತ ಆಹಾರ ಸರಪಳಿಯಲ್ಲಿ ವ್ಯಾಪಾರಸ್ಥರು) (ಪ್ರೊ. ಮೀನಾಕ್ಷಿ ರಾಜೀವ್)
ಪ್ರಾರಂಭದ ದಿನಾಂಕ: ಏಪ್ರಿಲ್ ೨೦೧೫

೨೬. ಬೆಂಗಳೂರು–ಮೈಸೂರು ಒಳಹಂದರ ಸೃಷ್ಟಿ ಯೋಜನೆಯ ಸಾಮಾಜಿಕ–ಆರ್ಥಿಕ ವಿಶ್ಲೇಷಣೆ (ಡಾ. ಕೃಷ್ಣರಾಜ್)
ಪ್ರಾರಂಭದ ದಿನಾಂಕ: ಜೂನ್ ೨೦೧೫

೨೭. ಬೆಂಗಳೂರು ಪ್ರದೇಶದ ಆರ್ಥಿಕತೆ: ಪುನರ್ ರಚನೆಗಾಗಿ ಒಂದು ವಿನ್ಯಾಸ
(ಪ್ರೊ. ಕೆ.ಗಾಯಿತ್ರಿ ಹಾಗೂ ಪ್ರೊ. ಎಸ್.ಮಾದೇಶ್ವರನ್)
ಪ್ರಾರಂಭದ ದಿನಾಂಕ: ಏಪ್ರಿಲ್ ೨೦೧೫

೨೮. ವ್ಯಾಪಾರದಲ್ಲಿನ ಲಿಂಗ ಪ್ರಬೇಧ ಮತ್ತು ಆಹಾರ ಭದ್ರತೆ: ನೀಲಗಿರಿ ಬೆಟ್ಟಗಳಲ್ಲಿನ ಟೀ ತೋಟಗಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು
(ಡಾ. ಮಾಲಿನಿ ಎಲ್. ತಂತ್ರಿ)
ಪ್ರಾರಂಭದ ದಿನಾಂಕ: ಡಿಸೆಂಬರ್ ೨೦೧೪



೨೯. ಭಾರತದಲ್ಲಿ ಸಮಾಜ ವಿಜ್ಞಾನ ಸಂಶೋಧನೆಗೆ ಇರುವ ಧನಸಹಾಯದ ಮೂಲ: ಹರಿವು, ಸಾಕಷ್ಟು ಲಭ್ಯವಾಗಿರುವಿಕೆ ಹಾಗೂ ಆದ್ಯತೆಗಳು
(ಪ್ರೊ. ಕೆ.ಗಾಯಿತ್ರಿ ಮತ್ತು ಡಾ. ಇಂದ್ರಜಿತ್ ಬೈರಾಗ್ಯ)
ಪ್ರಾರಂಭದ ದಿನಾಂಕ: ಆಗಸ್ಟ್ ೨೦೧೫

೩೦. ಬಹು ಆಯಾಮದ ಸೌಖ್ಯತೆ: ಸೈದ್ಧಾಂತಿಕ, ಕಾರ್ಯ ವಿಧಾನೀಯ ಮತ್ತು ವಿಶ್ಲೇಷಣಾತ್ಮಕ ದೃಷ್ಟಿಕೋನಗಳು (ಪ್ರೊ. ಎಸ್.ಮಾದೇಶ್ವರನ್, ಪ್ರೊ. ಕೆ.ಎಸ್.ಜೇಮ್ಸ್, ಶ್ರೀಮತಿ ಬಿ.ಪಿ.ವಾಣಿ ಮತ್ತು ಡಾ. ಎಂ.ಬಾಲಸುಬ್ರಮಣಿಯನ್)

ಪ್ರಾರಂಭದ ದಿನಾಂಕ: ಆಗಸ್ಟ್ ೨೦೧೫

೩೧. ಭಾರತೀಯ ನಗರಗಳಲ್ಲಿನ ಕಾರ್ಮಿಕ ಮಾರುಕಟ್ಟೆಯಲ್ಲಿನ ಜಾತಿ ತಾರತಮ್ಯತೆಯ ಗೂಢಾರ್ಥವನ್ನು ಬಿಡಿಸುವಿಕೆ: ವೇತನದ ಅಂದಾಜು ಮಾಡುವಿಕೆ ಮತ್ತು ಉದ್ಯೋಗ ತಾರತಮ್ಯತೆ
(ಪ್ರೊ. ಎಸ್.ಮಾದೇಶ್ವರನ್ ಮತ್ತು ಶ್ರೀಮತಿ ಬಿ.ಪಿ.ವಾಣಿ)
ಪ್ರಾರಂಭದ ದಿನಾಂಕ: ಡಿಸೆಂಬರ್ ೨೦೧೫

೩೨. ಕರ್ನಾಟಕದಲ್ಲಿ ಬೆಳೆ ವಿಮೆ (ಪ್ರೊ. ಮೀನಾಕ್ಷಿ ರಾಜೀವ್ ಮತ್ತು ಪ್ರೊ. ಪರಮೋದ್ ಕುಮಾರ್) ಪ್ರಾರಂಭದ ದಿನಾಂಕ: ಏಪ್ರಿಲ್ ೨೦೧೬

೩೩. ಭಾರತದಲ್ಲಿ ಡಿಪ್ಲೊಮಾ ವ್ಯಾಧಿಯ ಸ್ವರೂಪ, ವ್ಯಾಪ್ತಿ ಮತ್ತು ಪರಿಣಾಮಗಳು
(ಡಾ. ಇಂದ್ರಜಿತ್ ಬೈರಾಗ್ಯ)
ಪ್ರಾರಂಭದ ದಿನಾಂಕ: ಆಗಸ್ಟ್ ೨೦೧೫

೩೪. ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ನಗರಾಡಳಿತ ಕಾರ್ಯನೀತಿ ಮತ್ತು ಯೋಜನೆ
(ಡಾ. ವಿ.ಅನಿಲ್ ಕುಮಾರ್)
ಪ್ರಾರಂಭದ ದಿನಾಂಕ: ಮಾರ್ಚ್ ೨೦೧೩

೩೫. ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ನಗರಾಡಳಿತ ಮತ್ತು ಸ್ಥಳೀಯ ಪ್ರಜಾಪ್ರಭುತ್ವ
(ಡಾ. ವಿ.ಅನಿಲ್ ಕುಮಾರ್)
ಪ್ರಾರಂಭದ ದಿನಾಂಕ: ಜನವರಿ ೨೦೧೫

೩೬. ಕ್ರಿಯೆಯ ಹಿಂದಿನ ತತ್ವಶಾಸ್ತ್ರ: ಹನ್ನಾ ಅರೆಂಡ್ಟ್ ಮತ್ತು ಆಧುನಿಕತೆ
(ಡಾ. ವಿ.ಅನಿಲ್ ಕುಮಾರ್)
ಪ್ರಾರಂಭದ ದಿನಾಂಕ: ಜನವರಿ ೨೦೧೫

೩೭. ಯಾದಗಿರಿ ಜಿಲ್ಲೆಯಲ್ಲಿ ಯೋಜನಾ ವ್ಯಾಪ್ತಿಯ ಗ್ರಾಮಗಳ ಫಲಾನುಭವಿಗಳ ನಿರ್ಧರಣೆ: ಪರಿಣಾಮದ ಒಂದು ಅಧ್ಯಯನ
(ಪ್ರೊ. ಎನ್.ಶಿವಣ್ಣ)
ಪ್ರಾರಂಭದ ದಿನಾಂಕ: ಮಾರ್ಚ್ ೨೦೧೬

೩೮. ಈಶಾನ್ಯ ಭಾರತದ ಪರಿಶಿಷ್ಟ ಪಂಗಡಗಳ ಆರ್ಥಿಕತೆಯ ಮೇಲೆ ಶಿಕ್ಷಣ ಮತ್ತು ಉದ್ಯೋಗದ ಪರಿಣಾಮಗಳು
(ಡಾ. ಮಾರ್ಚಂಗ್ ರಿಮೀಂಗಂ)
ಪ್ರಾರಂಭದ ದಿನಾಂಕ: ಮಾರ್ಚ್ ೨೦೧೩ (ಜೂನ್ ೨೦೧೩)

೩೯. ಕರ್ನಾಟಕದಲ್ಲಿನ ಗ್ರಾಮ ಪಂಚಾಯಿತಿಗಳು: ಮೀಸಲಾತಿ ಮತ್ತು ಪ್ರತಿನಿಧಿಗಳ ಭಾಗವಹಿಸುವಿಕೆ
(ಡಾ. ಆನಂದ್ ಇನ್ಬನಾಥನ್)
ಪ್ರಾರಂಭದ ದಿನಾಂಕ: ಏಪ್ರಿಲ್ ೨೦೧೪

೪೦. ಕರ್ನಾಟಕದಲ್ಲಿನ ಕುಡುಬಿ ಸಮುದಾಯ: ಒಂದು ಜನಾಂಗೀಯ ಅಧ್ಯಯನ
(ಪ್ರೊ. ಮನೋಹರ್ ಎಸ್. ಯಾದವ್)
ಪ್ರಾರಂಭದ ದಿನಾಂಕ: ಸೆಪ್ಟೆಂಬರ್ ೨೦೧೫

೪೧. ಭಾರತದಲ್ಲಿ ರೋಗ ನಿವಾರಣೆ ಮತ್ತು ಆರೋಗ್ಯ ಚಿಕಿತ್ಸೆಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಅಭಿವೃದ್ಧಿ (ಆರ್& ಡಿ): ಸಾರ್ವಜನಿಕ ಆರೋಗ್ಯದ ಮೇಲಿನ ಪರಿಣಾಮಗಳು (ಡಾ. ಸೊಬಿನ್ ಜಾರ್ಜ್)
ಪ್ರಾರಂಭದ ದಿನಾಂಕ: ಮಾರ್ಚ್ ೨೦೧೬

೪೨. ನೈರ್ಮಲ್ಯದ ದಾರಿಗಳು: ನಗರಗಳ ಬಡವರಿಗೆ ಎದುರಾಗುತ್ತಿರುವ ಸವಾಲುಗಳು ಹಾಗೂ ಅವಕಾಶಗಳು (ಡಾ. ಎಸ್.ಮಾನಸಿ)
ಪ್ರಾರಂಭದ ದಿನಾಂಕ: ಸೆಪ್ಟೆಂಬರ್ ೨೦೧೪

೪೩. ಕರ್ನಾಟಕದಲ್ಲಿ ಟಿಜಿಐ ಸೂಚಿ ಉಪಕರಣ ಚೀಲದ ಮುಂಚೂಣಿ ಪರೀಕ್ಷೆ (ಪ್ರೊ. ಕಲಾ ಎಸ್. ಶ್ರೀಧರ್)
ಪ್ರಾರಂಭದ ದಿನಾಂಕ: ಸೆಪ್ಟೆಂಬರ್ ೨೦೧೫

೪೪. ಬೆಂಗಳೂರು ಸುಲಕ್ಷ್ಮಣ ಅಥವಾ ಜೀವಿಸುವ ಸಾಧ್ಯತೆಯುಳ್ಳದ್ದಾಗುತ್ತದೆಯೇ?
(ಪ್ರೊ. ಕಲಾ ಎಸ್.ಶ್ರೀಧರ್ ಮತ್ತು ಡಾ. ಎಸ್.ಮಾನಸಿ)
ಪ್ರಾರಂಭದ ದಿನಾಂಕ: ಡಿಸೆಂಬರ್ ೨೦೧೫

೪೫. ಭಾರತೀಯ ಮಹಾನಗರಿಯೊಂದರ ಮರುಭೇಟಿಯ ಕತೆ (ಪ್ರೊ. ಕಲಾ ಎಸ್. ಶ್ರೀಧರ್)
ಪ್ರಾರಂಭದ ದಿನಾಂಕ: ಏಪ್ರಿಲ್ ೨೦೧೬

೪೬. ಭಾರತದಲ್ಲಿ ವಯಸ್ಸಾಗುವಿಕೆಯ ಬಗ್ಗೆ ಜ್ಞಾನ ಸಂಪತ್ತನ್ನು ಹೆಚ್ಚಿಸುವಿಕೆ – ವೃದ್ಧರ ಸೇವೆಗಳ ಗುಣಮಟ್ಟ, ಆ ಬಗೆಗಿನ ತಿಳುವಳಿಕೆ ಮತ್ತು ಅವಕಾಶಗಳು ಹೆಚ್ಚಾಗಿರುವಿಕೆ
(ಪ್ರೊ. ಕೆ.ಎಸ್.ಜೇಮ್ಸ್ ಮತ್ತು ಡಾ. ಟಿ.ಎಸ್.ಶ್ಯಾಮಲ)
ಪ್ರಾರಂಭದ ದಿನಾಂಕ: ಜನವರಿ ೨೦೧೩

೪೭. ಕರ್ನಾಟಕದಲ್ಲಿ ಆಯುಷ್ ಕೇಂದ್ರಗಳ ಕಾರ್ಯನಿರ್ವಹಣೆ: ಒಂದು ಮೇಲ್ನೋಟ (ಡಾ. ಸಿ.ಎಂ.ಲಕ್ಷ್ಮಣ)
ಪ್ರಾರಂಭದ ದಿನಾಂಕ: ಜುಲೈ ೨೦೧೫

೪೮. ಕುಟುಂಬ ಕಲ್ಯಾಣ ಪದ್ಧತಿಗಳ ಬಗೆಗಿನ ಮನೋಭಾವದ ಬಗ್ಗೆ ತಿಳಿದುಕೊಳ್ಳುವಿಕೆ: ಆಯ್ದ ರಾಜ್ಯಗಳಲ್ಲಿ ಒಂದು ತುಲನಾತ್ಮಕ ವಿಶ್ಲೇಷಣೆ (ಡಾ. ಸಿ.ಎಂ.ಲಕ್ಷ್ಮಣ)
ಪ್ರಾರಂಭದ ದಿನಾಂಕ: ಜುಲೈ ೨೦೧೫

೪೯. ಭಾರತದಲ್ಲಿ ಡಿಪ್ಲೊಮಾ ವ್ಯಾಧಿಯ ಸ್ವರೂಪ, ವ್ಯಾಪ್ತಿ ಮತ್ತು ಪರಿಣಾಮಗಳು (ಡಾ. ಇಂದ್ರಜಿತ್ ಬೈರಾಗ್ಯ)
ಪ್ರಾರಂಭದ ದಿನಾಂಕ: ಆಗಸ್ಟ್ ೨೦೧೫



# ೫. ಶೈಕ್ಷಣಿಕ ಚಟುವಟಿಕೆಗಳು

## ಏರ್ಪಡಿಸಿದ ವಿಚಾರ ಸಂಕಿರಣಗಳು, ಸಮಾವೇಶಗಳು, ಕಾರ್ಯಾಗಾರಗಳು, ತರಬೇತಿ ಕಾರ್ಯಕ್ರಮಗಳು ಹಾಗೂ ಪುನಶ್ಚೇತನ ತರಬೇತಿಗಳು

### ಕರ್ನಾಟಕಕ್ಕಾಗಿ ಕ್ಷೇತ್ರ ಸಿಬ್ಬಂದಿಯ ತರಬೇತಿ, ಡಬ್ಲ್ಯುಎಚ್‌ಓ ಸೇಜ್ ಇಂಡಿಯಾ ಅಲೆ – ೨

ಸಂಸ್ಥೆಯ ಜನಸಂಖ್ಯಾ ಸಂಶೋಧನಾ ಕೇಂದ್ರವು ೨೦೧೫ರ ಏಪ್ರಿಲ್‌ನಲ್ಲಿ ಡಬ್ಲ್ಯುಎಚ್‌ಓ ಸೇಜ್ ಇಂಡಿಯ ಅಲೆ–೨ ರನ್ವಯ ಕ್ಷೇತ್ರ ಸಿಬ್ಬಂದಿಗೆ ತರಬೇತಿಯನ್ನು ಏರ್ಪಡಿಸಿತ್ತು. ಸುಮಾರು ೨೫ ಕ್ಷೇತ್ರ ಸಿಬ್ಬಂದಿಯು ತರಬೇತಿಯ ಭಾಗವಾಗಿದ್ದರು. ಸಮೀಕ್ಷೆಯ ಮುಖ್ಯ ಉದ್ದೇಶವು ಕಾಲಾನುಕ್ರಮದಲ್ಲಿ ವಿಶಾಲ ವ್ಯಾಪ್ತಿಯಲ್ಲಿ ಆರೋಗ್ಯ ಮತ್ತು ಸೌಖ್ಯದ ಬಗ್ಗೆ ಆದ ಸ್ವಯಂ ಅಂದಾಜು ವರದಿಯ ದತ್ತಾಂಶವನ್ನು ಸಂಗ್ರಹಿಸುವುದಾಗಿತ್ತು. ಈ ಸಮೀಕ್ಷೆಯನ್ನು ೨೦೧೫ರ ಜುಲೈನಲ್ಲಿ ೪೮ ಪಿಎಸ್‌ಯುಗಳಲ್ಲಿ ಮಾಡಲಾಯಿತು. ಸಮೀಕ್ಷೆಯಲ್ಲಿ ಗೊತ್ತುಪಡಿಸಿದ ೧೨೦೦ ಕುಟುಂಬಗಳ ಪೈಕಿ ಶೇ.೯೦ರಷ್ಟನ್ನು ತಲುಪಲು ಸಾಧ್ಯವಾಯಿತು. ಈ ಯೋಜನೆಯನ್ನು ಮುಂಬಯಿಯ ಅಂತರ‍್ರಾಷ್ಟ್ರೀಯ ಜನಸಂಖ್ಯಾ ವಿಜ್ಞಾನದ ಸಂಸ್ಥೆಯು ಜಿನೀವಾದ ವಿಶ್ವ ಆರೋಗ್ಯ ಸಂಸ್ಥೆಯ ಒಡಗೂಡಿ ಪುರಸ್ಕರಿಸಿತ್ತು. ಯೋಜನೆಯನ್ನು ಪಿಆರ್‌ಸಿ ಕೇಂದ್ರದ ಡಾ. ಸಿ.ಎಂ.ಲಕ್ಷ್ಮಣರವರು ಸಂಯೋಜಿಸಿದ್ದರು.

### ಐಎಸ್‌ಎಸ್ ಪರೀಕ್ಷಾರ್ಥ ಸೇವಾವಧಿಯಲ್ಲಿನ ಅಧಿಕಾರಿಗಳಿಗಾಗಿ ಉನ್ನತ ಅರ್ಥಮಾಪನ ಶಾಸ್ತ್ರದ ಬಗ್ಗೆ ತರಬೇತಿ ಕಾರ್ಯಕ್ರಮ

ಐಸೆಕ್‌ನ ಆರ್ಥಿಕ ಮತ್ತು ಕಾರ್ಯನೀತಿ ಅಧ್ಯಯನ ಕೇಂದ್ರವು (ಸಿಇಎಸ್‌ಪಿ) ಈ ತರಬೇತಿಯನ್ನು ೨೦೧೫ರ ಏಪ್ರಿಲ್ ೨೫ ರಿಂದ ಮೇ ೧ ರವರೆಗೆ ಏರ್ಪಡಿಸಿತ್ತು. ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು ೪೦ ಅಧಿಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಮೊದಲ ಹಂತದಲ್ಲಿ ಶಿಕ್ಷಾರ್ಥಿಗಳಿಗೆ ಪ್ರಾಥಮಿಕ ಅರ್ಥಮಾಪನ ತಾಂತ್ರಿಕತೆಗಳನ್ನು ಪರಿಚಯಿಸಲಾಯಿತು; ಎರಡನೆಯ ಹಂತದಲ್ಲಿ ಉನ್ನತ ಕಾಲಸರಣಿ ತಾಂತ್ರಿಕತೆಗಳ ಬಗೆಗೆ ತರಬೇತಿ ನೀಡಲಾಯಿತು. ತರಬೇತಿಯನ್ನು ಐಸೆಕ್‌ನ ಸಂಪನ್ಮೂಲ ವ್ಯಕ್ತಿಗಳಲ್ಲದೆ ಮದ್ರಾಸ್ ಸ್ಕೂಲ್ ಆಫ್ ಇಕನಾಮಿಕ್ಸ್ ಮತ್ತು ಪಾಂಡಿಚೆರಿ ವಿಶ್ವವಿದ್ಯಾಲಯಗಳ ತಜ್ಞರೂ ನೀಡಿದರು.

ಮದ್ರಾಸ್ ಸ್ಕೂಲ್ ಆಫ್ ಇಕನಾಮಿಕ್ಸ್ ಸಂಸ್ಥೆಯ ನಿರ್ದೇಶಕರಾದ ಪ್ರೊ. ಕೆ.ಆರ್.ಷಣ್ಮುಗಂ ರವರು ಸಮಾರೋಪ ಭಾಷಣವನ್ನು ಮಾಡಿದರು ಮತ್ತು ಭಾಗವಹಿಸಿದ ಅಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ತರಬೇತಿಯ ಬಗ್ಗೆ ಶೈಕ್ಷಣಿಕ ದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಅನಿಸಿಕೆಗಳನ್ನು ಶಿಕ್ಷಣಾರ್ಥಿಗಳಿಂದ ಈ ಉದ್ದೇಶಕ್ಕಾಗಿಯೇ ಸಿದ್ಧಪಡಿಸಿದ ನಮೂನೆಯ ಮೂಲಕ ಸಂಗ್ರಹಿಸಲಾಯಿತು. ತರಬೇತಿಯ ಕಾರ್ಯಕ್ರಮವನ್ನು ಪ್ರೊ. ಎಸ್.ಮಾದೇಶ್ವರನ್, ಶ್ರೀಮತಿ ಬಿ.ಪಿ.ವಾಣಿ ಮತ್ತು ಪ್ರೊ. ಮೀನಾಕ್ಷಿ ರಾಜೀವ್ ಸಂಯೋಜಿಸಿದ್ದರು.

### ಹದಿನಾಲ್ಕನೆಯ ಹಣಕಾಸು ಆಯೋಗದ ಶಿಫಾರಸ್ಸುಗಳ ಬಗ್ಗೆ ವಿಚಾರ ಗೋಷ್ಠಿ

ಐಸೆಕ್‌ನ ಆರ್ಥಿಕ ಅಧ್ಯಯನಗಳು ಮತ್ತು ಕಾರ್ಯನೀತಿ ಕೇಂದ್ರವು ೨೦೧೫ರ ಏಪ್ರಿಲ್ ೨೮ರಂದು ಹದಿನಾಲ್ಕನೆಯ ಹಣಕಾಸು ಆಯೋಗದ ಶಿಫಾರಸ್ಸುಗಳ ಬಗ್ಗೆ ಒಂದು ಮುಖ್ಯ ಕಾರ್ಯನೀತಿ ಪ್ರಸರಣ ವಿಚಾರ ಗೋಷ್ಠಿಯನ್ನು ಏರ್ಪಡಿಸಿತ್ತು. ಆಯೋಗದಲ್ಲಿ ಆ ಮೊದಲು ಸದಸ್ಯರಾಗಿದ್ದ ಪ್ರೊ. ಎಂ.ಗೋವಿಂದ ರಾವ್‌ರವರು ಆಯೋಗದ ಕಾರ್ಯವಿಧಾನ ಮತ್ತು ಶಿಫಾರಸ್ಸುಗಳ ಬಗ್ಗೆ ಮುಖ್ಯ ಭಾಷಣ ಮಾಡಿದರು. ಕರ್ನಾಟಕ ಸರ್ಕಾರದ ಆಯವ್ಯಯ ಮತ್ತು ಸಂಪನ್ಮೂಲಗಳ ಕಾರ್ಯದರ್ಶಿಗಳಾದ ಶ್ರೀ ಅರವಿಂದ್ ಶ್ರೀವಾಸ್ತವ್‌ರವರು ಕರ್ನಾಟಕಕ್ಕೆ ವಿಶೇಷವಾಗಿ ಸಂಬಂಧಿಸಿದಂತೆ ಶಿಫಾರಸ್ಸುಗಳ ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲಿದರು. ಈ ವಿಚಾರ ಗೋಷ್ಠಿಯಲ್ಲಿ ಐಸೆಕ್‌ನ ನಾಲ್ವರು ಅಧ್ಯಾಪಕ ಸದಸ್ಯರು ಅಂದರೆ ಪ್ರೊ. ಕಲಾ ಸೀತಾರಾಂ ಶ್ರೀಧರ್, ಡಾ. ಕೆ.ಗಾಯಿತ್ರಿ, ಡಾ. ದೇವೇಂದ್ರ ಬಾಬು ಮತ್ತು ಡಾ. ಬಾಲಸುಬ್ರಮಣಿಯನ್‌ರವರುಗಳೂ ಸಹ ವಿಚಾರಗಳನ್ನು ಮಂಡಿಸಿದರು. ಪ್ರೊ. ಎಂ.ಆರ್.ನಾರಾಯಣರವರು ಪ್ರಾರಂಭಿಕ ಪ್ರಸ್ತಾವನೆಯನ್ನು ಮಾಡಿದರು. ಐಸೆಕ್ ಸಂಸ್ಥೆಯ ಆಗಿನ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದ ಪ್ರೊ. ತಿಮ್ಮಯ್ಯರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದಲ್ಲದೆ ತಮ್ಮ ಮೌಲಿಕ ವಿಚಾರಧಾರೆಯನ್ನು ನಿರೂಪಿಸಿದರು. ಈ ವಿಚಾರ ಗೋಷ್ಠಿಯಲ್ಲಿ ಬಹಳಷ್ಟು ಆಡಳಿತಗಾರರು, ಶಿಕ್ಷಣವೇತ್ತರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ. ಕೆ.ಗಾಯಿತ್ರಿರವರು ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

# ಐಸೆಕ್

## ಅಂತರ್ರಾಷ್ಟ್ರೀಯ ಸಮಾವೇಶ – "ಹವಾಮಾನ ಬದಲಾವಣೆ ಮತ್ತು ಸಾಮಾಜಿಕ ಪರಿಸರಾತ್ಮಕ – ಆರ್ಥಿಕ ಪರಸ್ಪರ ಸಂವಹನೆಯ ಅಭಿವೃದ್ಧಿ: ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಜೀವನೋಪಾಯ ಅಭಿವೃದ್ಧಿಗಾಗಿ ಸುಸಾಮರ್ಥ್ಯ ಅಳವಡಿಕೆ ಕಾರ್ಯತಂತ್ರಗಳನ್ನು ಅನ್ವೇಷಿಸುವುದಕ್ಕಾಗಿ ಮಾದರಿ ಅಭಿವೃದ್ಧಿ ವಿಧಾನ

ಈ ಅಂತರ್ರಾಷ್ಟ್ರೀಯ ಸಮಾವೇಶವನ್ನು ಐಸೆಕ್‌ನ ಪರಿಸರ ಅರ್ಥಶಾಸ್ತ್ರ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೇಂದ್ರವು ಜರ್ಮನಿಯ ಕಾಸಲ್ ವಿಶ್ವವಿದ್ಯಾನಿಲಯದ ಪರಿಸರ ಪದ್ಧತಿ ಸಂಶೋಧನಾ ಕೇಂದ್ರದ ಜೊತೆಗೆ ೨೦೧೫ರ ಮೇ ೨೦ ಮತ್ತು ೨೧ ಗಳಂದು ಬೆಂಗಳೂರಿನಲ್ಲಿ ಐಸೆಕ್ ಸಂಸ್ಥೆಯಲ್ಲಿ ಏರ್ಪಡಿಸಿತ್ತು. ಭವಿಷ್ಯದಲ್ಲಿ ಮಾನವ ಜನಾಂಗಕ್ಕೆ ಎದುರಾಗುವ ಅತಿ ದೊಡ್ಡ ಸವಾಲುಗಳು ಹವಾಮಾನ, ನಗರೀಕರಣ, ನೀರಿನ ಲಭ್ಯತೆ ಮತ್ತು ಜೈವಿಕ ವೈವಿಧ್ಯತೆ ಇತ್ಯಾದಿಗಳಿಂದಾಗುವ ಜಾಗತಿಕ ಪರಿಸರ ಬದಲಾವಣೆಗಳಾಗಿವೆ. ಪರಿಸರ ಬದಲಾವಣೆಯು ಅತಿ ಪ್ರಬಲ ಸವಾಲಾಗಿದ್ದು, ಉಳಿದವುಗಳ ಮೇಲೂ ಇನ್ನಷ್ಟು ವ್ಯತಿರಿಕ್ತ ಪರಿಣಾಮ ಬೀರಲಿದೆ. ಹವಾಮಾನ ಬದಲಾವಣೆ ಮತ್ತು ಅದರ ವ್ಯಕ್ತ ರೂಪಗಳು ಅಂದರೆ ನಿರ್ದಿಷ್ಟವಾಗಿ ತಾಪಮಾನ ಏರಿಕೆ, ಮಳೆ ಬೀಳುವಿಕೆಯಲ್ಲಿನ ಬದಲಾವಣೆಗಳು, ಸಮುದ್ರ ಮಟ್ಟದಲ್ಲಿ ಏರುವಿಕೆ, ಹೆಚ್ಚುತ್ತಿರುವ ಬರಗಾಲ ಮತ್ತು ಪ್ರವಾಹಗಳು ನೈಸರ್ಗಿಕ ಪರಿಸರದ ಮೇಲೆ (ಅಂದರೆ ಅರಣ್ಯಗಳು, ಹುಲ್ಲುಗಾವಲುಗಳು, ನದಿಗಳು ಹಾಗೂ ಕಡಲುಗಳು ಇತ್ಯಾದಿ) ಹಾಗೂ ಸಾಮಾಜಿಕ ಆರ್ಥಿಕತೆಯ ಮೇಲೆ (ಅಂದರೆ ಆಹಾರೋತ್ಪಾದನೆ, ಮೀನುಗಾರಿಕೆ ಹಾಗೂ ತೀರ ಪ್ರದೇಶದ ವಸತಿಗಳು) ವ್ಯತಿರಿಕ್ತ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿವೆ. ಗ್ರಾಮೀಣ ಬಡಜನರ ಆದಾಯದ ಗಣನೀಯ ಮೂಲವಾದ ಪರಿಸರದ ಮೇಲೆ ಹೆಚ್ಚಿನ ಒತ್ತಡವನ್ನು ಇದು ಬೀರುತ್ತಿದೆ. ಸಹಸ್ರಮಾನದ ಎಂಟು ಅಭಿವೃದ್ಧಿ ಗುರಿಗಳ (ಎಂಡಿಜಿ) ಮೇರೆಯೊಳಗೆ ಬರುವ ಸೌಖ್ಯತೆ, ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆ ಇವುಗಳಿಗೆ ಪರಿಸರವು ಜೊತೆಗೂಡಿದ್ದು, ಇದರ ರಕ್ಷಣೆಯು ಅತಿ ತುರ್ತಾಗಿ ಆಗಬೇಕಾಗಿದೆ. ಹವಾಮಾನ ಬದಲಾವಣೆ ಸಮಸ್ಯೆಯನ್ನು ಎದುರಿಸಬೇಕಾದರೆ ರಾಷ್ಟ್ರ ಮಟ್ಟದಲ್ಲಿ, ಪ್ರಾದೇಶಿಕ ಮಟ್ಟದಲ್ಲಿ ಹಾಗೂ ಸ್ಥಳೀಯ ಮಟ್ಟದಲ್ಲಿ ಕಾರ್ಯನೀತಿ ರೂಪಿಸುವಿಕೆ, ಸಂಶೋಧನೆ, ತಂತ್ರಜ್ಞಾನ ವರ್ಗಾವಣೆ ಮತ್ತು ಪ್ರಸರಣೆ, ಆರ್ಥಿಕ ಸಹಾಯ ಮಾಡುವಿಕೆ ಹಾಗೂ ಬಡವರ ಅಳವಡಿಕೆ ಸಾಮರ್ಥ್ಯವನ್ನು ಹೆಚ್ಚಿಸುವಿಕೆ ಇತ್ಯಾದಿಗಳನ್ನು ಮಾಡಬೇಕಾಗುತ್ತದೆ. ಯುಎನ್‌ಎಫ್‌ಸಿಸಿ ಯ ಸಿಓಪಿಯು ಹೇಳಿರುವುದೇನೆಂದರೆ ನಿರ್ದಿಷ್ಟವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ತೊಂದರೆಗೆ ಸುಲಭವಾಗಿ ಸಿಕ್ಕಿಕೊಳ್ಳುವ ಗುಂಪುಗಳು ಅದರಲ್ಲೂ ವಿಶೇಷವಾಗಿ ಭೂ ಬಳಕೆ ಪದ್ಧತಿಗಳಿಂದ ಜೀವನೋಪಾಯ ಕಂಡುಕೊಳ್ಳುತ್ತಿರುವವರು ಈಗಿನ ಪ್ರಪಂಚದಲ್ಲಿ ಹವಾಮಾನ ಬದಲಾವಣೆಯ ವೈಪರೀತ್ಯಗಳಿಗೆ ಅತಿ ಹೆಚ್ಚು ಬಲಿಯಾಗುತ್ತಿದ್ದಾರೆ. ಏಕೆಂದರೆ ಅತಿ ಹೆಚ್ಚಿನ ಪ್ರಸಂಗಗಳಲ್ಲಿ ಅವರ ಚಟುವಟಿಕೆಗಳು ಹವಾಮಾನದ ಮೇಲೆ ಅವಲಂಬಿತವಾಗಿರುತ್ತವೆ. ಆದ್ದರಿಂದ ಹವಾಮಾನ ಬದಲಾವಣೆಯಿಂದುಂಟಾಗುವ ಸಂಕಷ್ಟಗಳನ್ನು ನಿವಾರಣಾ ವಿಧಾನಗಳಿಂದ ಹಾಗೂ ವೈಜ್ಞಾನಿಕ ಸಂಶೋಧನೆಯ ಮೂಲಕ ಪರಿಹರಿಸಬೇಕಾಗಿರುವುದು ನೈತಿಕ ಕಳಕಳಿಯ ವಿಷಯವಾಗಿದೆ.

ಈ ಅಂತರ್ರಾಷ್ಟ್ರೀಯ ಸಮಾವೇಶವನ್ನು ೧೦ ತಾಂತ್ರಿಕ ಅಧಿವೇಶನಗಳಾಗಿ ವಿಭಜಿಸಲಾಗಿತ್ತು. ಅವು ಈ ರೀತಿ ಇವೆ: ಬದಲಾಗುತ್ತಿರುವ ಹವಾಮಾನಕ್ಕೆ ಅನುಗುಣವಾಗಿ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಮಾಡುವುದು; ಹವಾಮಾನದ ಬಗೆಗಿನ ಸಂಶೋಧನೆಯಲ್ಲಿನ ಕಾರ್ಯ ವಿಧಾನದ ಅಂಶಗಳು; ಜೀವ ವೈವಿಧ್ಯತೆ ಸಂರಕ್ಷಣೆ, ಉಸ್ತುವಾರಿ ಮತ್ತು ನಕ್ಷೆ ತಯಾರಿಕೆ; ನೈಸರ್ಗಿಕ ಬಂಡವಾಳ: ಸಂಪನ್ಮೂಲಗಳ ಬಳಕೆ ಮತ್ತು ಸುಸ್ಥಿರ ಜೀವನೋಪಾಯ ನಿರ್ವಹಣೆ; ಜಾಗತಿಕ ಹವಾಮಾನ ಬದಲಾವಣೆ, ಉಪಶಮನ ಮಾಡುವಿಕೆ ಮತ್ತು ಅಳವಡಿಕೆ; ಪರಿಸರ ಸೇವೆಗಳು: ಉಸ್ತುವಾರಿ ಮತ್ತು ನಕ್ಷೆ ತಯಾರಿಕೆ; ದೂರ ಸಂವೇದನೆ, ಜಿಐಎಸ್ ಮತ್ತು ಭೂ ಅಂಕಿ ಅಂಶಗಳು; ಇತ್ಯಾದಿ. ಈ ಸಮಾವೇಶದಲ್ಲಿ ಭಾರತ, ಜರ್ಮನಿ, ಶ್ರೀಲಂಕಾ, ಉಗಾಂಡ ಇತ್ಯಾದಿ ದೇಶಗಳಿಂದ ಒಟ್ಟು ೧೦೧ ತಜ್ಞರು ಭಾಗವಹಿಸಿದ್ದರು ಮತ್ತು ಸಮಾವೇಶದ ವಿವಿಧ ವಿಷಯಗಳ ಬಗೆಗೆ ತಮ್ಮ ಸಂಶೋಧನಾ ಫಲಿತಾಂಶಗಳನ್ನು ಮಂಡಿಸಿದರು.

ತಾಂತ್ರಿಕ ಅಧಿವೇಶನಗಳಲ್ಲದೆ "ಬದಲಾಗುತ್ತಿರುವ ಹವಾಮಾನದಲ್ಲಿ ೨೦೧೫ ಮತ್ತು ನಂತರದಲ್ಲಿ ಇಂಧನದ ಸ್ಥಿತ್ಯಂತರದ ಬಗ್ಗೆ ಮಾತುಕತೆ" ಎಂಬ ಕಾರ್ಯಾಗಾರವನ್ನು ಸಮಾವೇಶದ ವಿಶಾಲ ಚೌಕಟ್ಟಿನಲ್ಲಿಯೇ ಏರ್ಪಡಿಸಲಾಗಿತ್ತು ಮತ್ತು ಕಾರ್ಯಾಗಾರದ ಅಧ್ಯಕ್ಷತೆಯನ್ನು ಶ್ರೀಮತಿ ಚಿತ್ರಾ ವಿಶ್ವನಾಥ್ ರವರು ವಹಿಸಿದ್ದರು.

ಈ ಅಂತರ್ರಾಷ್ಟ್ರೀಯ ಸಮಾವೇಶದ ಉದ್ಘಾಟನೆಯನ್ನು ಐಸೆಕ್‌ನ್ ಆಗಿನ ಆಡಳಿತ ಮಂಡಳಿಯ ಮುಖ್ಯಸ್ಥರಾಗಿದ್ದ ಪ್ರೊ. ಜಿ. ತಿಮ್ಮಯ್ಯನವರು ಮಾಡಿದರು. ಆಗಿನ ಪ್ರಭಾರ ನಿರ್ದೇಶಕರಾಗಿದ್ದ ಪ್ರೊ. ಎಂ.ಆರ್.ನಾರಾಯಣರವರು ಭಾಗವಹಿಸಿದ ತಜ್ಞರನ್ನು ಸ್ವಾಗತಿಸಿದರು ಮತ್ತು ಐಸೆಕ್‌ನ ಅಧ್ಯಾದೇಶವನ್ನು ಮತ್ತು ಸಂಶೋಧನಾ ಚಟುವಟಿಕೆಗಳನ್ನು ವಿವರಿಸಿದರು. ಉಧ್ಘಾಟನಾ ಅಧಿವೇಶನದಲ್ಲಿ ಡಾ. ಸುನಿಲ್ ನೌಟಿಯಾಲ್‌ರವರು ಸಮಾವೇಶದ ಉದ್ದೇಶಗಳು ಮತ್ತು ಗುರಿಗಳ ಬಗ್ಗೆ ನಿರೂಪಿಸಿದರು. ಶ್ರೇಷ್ಠ ವಿದ್ವಾಂಸರುಗಳಾದ ಪ್ರೊ. ಡಾ. ರುಡೆಜರ್ ಶ್ಲಾಡಾಕ್ (ಸಿಇಎಸ್‌ಆರ್, ಕಾಸಲ್ ವಿಶ್ವವಿದ್ಯಾಲಯ), ಪ್ರೊ. ಕೆ.ವಿ. ರಾಜು ಮತ್ತು ಪ್ರೊ. ಸುಹಾಸ್ ಪಿ.ವಾಣಿ (ಇಕ್ರಿಸ್ಯಾಟ್), ಡಾ. ಡಿ.ವಿ.ಎ.ರಾಘವಮೂರ್ತಿ (ಇಸ್ರೋ, ಬೆಂಗಳೂರು), ಹಾಗೂ ಪ್ರೊ. ಜಿ.ಎಲ್.ಪಂಡಿತ್ (ದೆಹಲಿ ವಿಶ್ವವಿದ್ಯಾಲಯ) – ಇವರುಗಳು ಮುಖ್ಯ ಪ್ರವಚನಗಳನ್ನು ನೀಡಿದರು. ಈ ಸಮಾವೇಶವನ್ನು ಐಸೆಕ್‌ನ ಸಿಇಇಎನ್‌ಆರ್ ಕೇಂದ್ರದ ಮುಖ್ಯಸ್ಥರಾದ ಪ್ರೊ. ಸುನಿಲ್ ನೌಟಿಯಾಲ್‌ರವರು ಸಂಯೋಜಿಸಿದ್ದರು.

# ಐಸೆಕ್



## ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿಗಾಗಿ ಪಂಚಾಯತ್‌ರಾಜ್ ಸಂಸ್ಥೆಗಳ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಕಾರ್ಯವಿಧಾನದ ಬಗ್ಗೆ ಅಂತರ್ರಾಷ್ಟ್ರೀಯ ತರಬೇತಿ ಕಾರ್ಯಕ್ರಮ

ವಿಕೇಂದ್ರೀಕರಣವು ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸಲು ತ್ವರಿತ ಸೇವೆಯನ್ನು ನೀಡುತ್ತದೆಂದು ಭಾವಿಸಲಾಗಿದೆ. ಈ ಕಾರಣಕ್ಕಾಗಿ ಅನೇಕ ದೇಶಗಳು, ಗ್ರಾಮೀಣ ಅಭಿವೃದ್ಧಿಗಾಗಿ ವಿಕೇಂದ್ರೀಕರಣ ಮಾರ್ಗವನ್ನು ಅಳವಡಿಸಿಕೊಂಡಿವೆ. ಈ ಐದು ದಿವಸಗಳ ತರಬೇತಿ ಕಾರ್ಯಕ್ರಮವನ್ನು ವಿಎಎಂಎನ್‌ಐಸಿಓಎಂ, ಸಿಐಸಿಟಿಎಬಿ ಮತ್ತು ಐಸೆಕ್ ಸಂಸ್ಥೆಗಳು ಸಾರ್ಕ್ ದೇಶಗಳ ೨೧ ಶಿಕ್ಷಣಾರ್ಥಿಗಳಿಗೆ ೨೦೧೫ರ ಮೇ ೨೫ರಿಂದ ೨೯ರವರೆಗೆ ಜಂಟಿ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದವು. ಇದರ ಉದ್ದೇಶವು ಭಾರತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ವಿಕೇಂದ್ರೀಕರಣದ ಭರವಸೆಯ ಬಗ್ಗೆ ಚರ್ಚಿಸುವುದಾಗಿತ್ತು. ನಂತರ ಈ ಚರ್ಚೆಯ ಫಲಶ್ರುತಿಯಾಗಿ ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿಗಾಗಿ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಅಳವಡಿಸಬಹುದಾದ ಅತ್ಯುತ್ತಮ ಪದ್ಧತಿಗಳನ್ನು ಗುರುತಿಸುವ ಉದ್ದೇಶವೂ ಸಹ ಈ ತರಬೇತಿ ಕಾರ್ಯಕ್ರಮಕ್ಕಿತ್ತು. ಕೆಳಕಂಡ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಲಾಯಿತು: (೧) ವಿಕೇಂದ್ರಿತ ಆಡಳಿತ ಪದ್ಧತಿಯ ಉಗಮ; (೨) ಸ್ಥಳೀಯ ಸರ್ಕಾರಗಳ ವಿಶಿಷ್ಟ ಅಂಶಗಳು; (೩) ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅನಾನುಕೂಲಕ್ಕೊಳಗಾದ ಗುಂಪುಗಳು ಮತ್ತು ಮಹಿಳೆಯರನ್ನು ಒಳಗೊಳ್ಳುವುದು; (೪) ರಾಜಕೀಯ, ಆಡಳಿತ ಮತ್ತು ಆರ್ಥಿಕ ವಿಕೇಂದ್ರೀಕರಣ; (೫) ಪಂಚಾಯಿತಿಗಳು, ಯೋಜನೆ ಮತ್ತು ಅಭಿವೃದ್ಧಿ; (೬) ಪಂಚಾಯಿತಿಗಳು ಮತ್ತು ಮೂಲಭೂತ ಸೇವೆಗಳನ್ನು ಒದಗಿಸುವಿಕೆ; (೭) ಪಂಚಾಯಿತಿಗಳು ಹಾಗೂ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು; ಮತ್ತು (೮) ಪಂಚಾಯಿತಿಗಳು ಹಾಗೂ ಸಹಕಾರ ಸಂಸ್ಥೆಗಳ ನಡುವೆ ಸಂವಹನೆ. ಕ್ಷೇತ್ರ ಮಟ್ಟದಲ್ಲಿ ಯಾವ ರೀತಿ ಸೇವಾ ಸೌಕರ್ಯ ಇದೆ ಎಂಬುದನ್ನು ಶಿಕ್ಷಣಾರ್ಥಿಗಳಿಗೆ ಪರಿಚಯ ಮಾಡಿಸುವ ಸಲುವಾಗಿ ಒಂದು ದಿವಸದ ಮಟ್ಟಿಗೆ ಕ್ಷೇತ್ರ ಭೇಟಿಯನ್ನೂ ಸಹ ಏರ್ಪಡಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮವನ್ನು ಐಸೆಕ್‌ನ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಕೇಂದ್ರದ ಪ್ರೊ. ಡಿ.ರಾಜಶೇಖರ್ ಮತ್ತು ಡಾ. ಎಂ.ದೇವೇಂದ್ರ ಬಾಬುರವರು ಸಂಯೋಜಿಸಿದ್ದರು.

## ಐಸೆಕ್ ಮತ್ತು ಎನ್‌ಸಿಐಗಳ ಸ್ನಾತಕೋತ್ತರ ಶಿಕ್ಷಣ ಕಾರ್ಯಕ್ರಮ – "ಭಾರತದಲ್ಲಿ ಪರಿಸರವನ್ನು ತಲುಪುವಿಕೆ – ಪ್ರಕೃತಿ – ಆರ್ಥಿಕತೆ – ಸಮಾಜ ಇವುಗಳ ಸಂವಹನೆಯಲ್ಲಿ ಕಂಡು ಬರುವ ಅಂಶಗಳು ಮತ್ತು ಕಾರ್ಯಪದ್ಧತಿಗಳು"

ಐಸೆಕ್ ಸಂಸ್ಥೆಯ ಪರಿಸರ ಅರ್ಥಶಾಸ್ತ್ರ ಮತ್ತು ಸ್ವಾಭಾವಿಕ ಸಂಪನ್ಮೂಲಗಳ ಅಧ್ಯಯನ ಕೇಂದ್ರವು (ಸಿಇಇಎನ್‌ಆರ್) ಸ್ವೀಡನ್ನಿನ ನಾರ್ಡಿಕ್ ಸೆಂಟರ್ ಇನ್ ಇಂಡಿಯಾ (ಎನ್‌ಸಿಐ) ಸಂಸ್ಥೆಯ ಸಹಭಾಗಿತ್ವದಲ್ಲಿ ಮೇಲಿನ ವಿಷಯದ ಬಗ್ಗೆ ನಾಲ್ಕು ವಾರಗಳ ಅಂತರ್ರಾಷ್ಟ್ರೀಯ ಶಿಕ್ಷಣ ಕಾರ್ಯಕ್ರಮವನ್ನು ೨೦೧೫ರ ಜೂನ್ ೨೮ರಿಂದ ಜುಲೈ ೨೫ರವರೆಗೆ ನಾರ್ಡಿಕ್ ದೇಶಗಳ ಅಂದರೆ ಫಿನ್‌ಲ್ಯಾಂಡ್, ಡೆನ್ಮಾರ್ಕ್, ಐಸ್‌ಲ್ಯಾಂಡ್ ಮತ್ತು ನಾರ್ವೆ ದೇಶಗಳ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿತ್ತು.

ಈ ಶಿಕ್ಷಣ ಕಾರ್ಯಕ್ರಮವನ್ನು ಐದು ಅಧಿವೇಶನಗಳಾಗಿ ವಿಂಗಡಿಸಲಾಗಿತ್ತು – ಅವುಗಳು ಈ ರೀತಿ ಇವೆ: (೧) ಪರಿಚಯಾತ್ಮಕ ಅಧಿವೇಶನ; (೨) ಭಾರತದಲ್ಲಿನ ಪರಿಸರ: ಒಂದು ಮೇಲ್ನೋಟ; (೩) ನಗರ–ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬರುವ ಅಂಶಗಳು; (೪) ಸ್ವಾಭಾವಿಕ ಸಂಪನ್ಮೂಲ ನಿರ್ವಹಣೆ ಮತ್ತು (೫) ಹವಾಮಾನ ಬದಲಾವಣೆ. ಕ್ಷೇತ್ರ ಭೇಟಿಗಳನ್ನು ಸ್ಥಳೀಯ ವಾರ್ಡ್ ಸಂಖ್ಯೆ (೧೨೮) (ನಾಗರಬಾವಿ), ಬೆಂಗಳೂರು ನಗರ, ರೇಷ್ಮೆ ಮಂಡಳಿ (ತಲಘಟ್ಟಪುರ) ಹಾಗೂ ಹಸಿರು ಮನೆಗಳಿಗೆ ಏರ್ಪಡಿಸಲಾಗಿತ್ತು. ಈ ಭೇಟಿಗಳ ಉದ್ದೇಶವು ಶಿಕ್ಷಣಾರ್ಥಿಗಳಿಗೆ ಪ್ರಾಯೋಗಿಕ ಅನುಭವವನ್ನು ದೊರಕಿಸುವುದು ಮತ್ತು ವಿವಿಧ ಪರಿಸರ ಸಮಸ್ಯೆಗಳ ಬಗ್ಗೆ ಪರಿಚಯಿಸುವುದಾಗಿತ್ತು.

ಈ ಶಿಕ್ಷಣ ಕಾರ್ಯಕ್ರಮವು ೧೦ ಯೂರೋಪಿಯನ್ ಕ್ರೆಡಿಟ್ ವರ್ಗಾವಣೆ ಮತ್ತು ಸಂಚಯನ ಪದ್ಧತಿಗೆ (ಇಸಿಟಿಎಸ್) ಸಮನಾಗಿದ್ದು, ಶಿಕ್ಷಣಾರ್ಥಿಗಳನ್ನು ಅವರುಗಳ ಹಾಜರಾತಿ, ವಿಚಾರ ಸಂಕಿರಣಗಳಲ್ಲಿನ ನಿರೂಪಣಾ ದಕ್ಷತೆ, ಆಯಾ ಕಾಲಾವಧಿಗಳ ಲೇಖನಗಳು, ಕ್ಷೇತ್ರ ಭೇಟಿಯಲ್ಲಿನ ಅವರ ವೈಯುಕ್ತಿಕ ಅನಿಸಿಕೆಗಳು ಇತ್ಯಾದಿಗಳನ್ನು ಆಧರಿಸಿ ಮೌಲ್ಯಮಾಪನ ಮಾಡಲಾಯಿತು. ಶೈಕ್ಷಣಿಕ ಕಾರ್ಯಕ್ರಮದ ಯಶಸ್ವೀ ಮುಕ್ತಾಯದ ನಂತರ ಸಮಾರೋಪ ಸಮಾರಂಭದಲ್ಲಿ ಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಐಸೆಕ್‌ನ ಸಿಇಇಎನ್‌ಆರ್ ಕೇಂದ್ರದ ಡಾ. ಸುನಿಲ್ ನೌಟಿಯಾಲ್‌ರವರು ಶಿಕ್ಷಣ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

## ಸಮಾಜ ವಿಜ್ಞಾನಗಳ ಅಧ್ಯಾಪನ ವೃಂದಕ್ಕೆ ಮಹಿಳಾ ಅಧ್ಯಯನದ ಸಂಶೋಧನಾ ಕಾರ್ಯವಿಧಾನದ ಬಗ್ಗೆ ಎರಡು ವಾರಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಈ ಕಾರ್ಯಕ್ರಮವನ್ನು ಬೆಂಗಳೂರಿನ ಐಸೆಕ್‌ನಲ್ಲಿ ಮಹಿಳಾ ಮತ್ತು ಲಿಂಗ ಪ್ರಬೇಧ ಅಧ್ಯಯನಗಳ ಕೇಂದ್ರವು ೨೦೧೫ರ ಆಗಸ್ಟ್ ೧ರಿಂದ ೧೪ರ ವರೆಗೆ ಏರ್ಪಡಿಸಿತ್ತು. ಐಸೆಕ್‌ನ ಆಗಿನ ಆಡಳಿತ ಮಂಡಳಿಯ ಮುಖ್ಯಸ್ಥರಾದ ಪ್ರೊ. ಜಿ.ತಿಮ್ಮಯ್ಯನವರು ಕಾರ್ಯಕ್ರಮವನ್ನು ಉದ್ಘಾಟಿಸಿದರು ಮತ್ತು ಆಗಿನ ಪ್ರಭಾರ ನಿರ್ದೇಶಕರಾಗಿದ್ದ ಪ್ರೊ. ಎಂ.ಆರ್.ನಾರಾಯಣ ರವರು ಶಿಕ್ಷಣಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

# ಐಸೆಕ್

ಈ ಕಾರ್ಯಕ್ರಮವು ವಸತಿ ಶಾಲಾ ಕಾರ್ಯಕ್ರಮವಾಗಿದ್ದು, ನವದೆಹಲಿಯ ಐಸಿಎಸ್ಎಸ್ಆರ್ ಸಂಸ್ಥೆಯು ಇದನ್ನು ಪುರಸ್ಕರಿಸಿತ್ತು. ಕಾರ್ಯಕ್ರಮದಲ್ಲಿ ಒಟ್ಟು ೪೬ ಅಧಿವೇಶನಗಳಿದ್ದವು. ಈ ಅಧಿವೇಶನಗಳು ಮಹಿಳೆಯರು ಮತ್ತು ಲಿಂಗ ಪ್ರಬೇಧ ಅಧ್ಯಯನಗಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಸಂಶೋಧನಾ ಕಾರ್ಯವಿಧಾನಗಳ ಬಗ್ಗೆ ಬೆಳಕು ಚೆಲ್ಲಿದವು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಪಾಂಡಿಚೆರಿ ವಿಶ್ವವಿದ್ಯಾಲಯ, ನ್ಯಾಷನಲ್ ಕಾಲೇಜ್ (ಸ್ವಾಯತ್ತವಿಶ್ವವಿದ್ಯಾಲಯ), ರಾಷ್ಟ್ರೀಯ ಕಾನೂನು ಶಾಲೆ ಇತ್ಯಾದಿಗಳಿಂದ ಕರೆಸಲಾಗಿತ್ತು. ಕಾಲೇಜು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿ ಸಿಬ್ಬಂದಿಯು ವೀಕ್ಷಕರಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಬಂದ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಇತಿಹಾಸ ಹಾಗೂ ನಿರ್ವಹಣಾ ಶಾಸ್ತ್ರಗಳ ಒಟ್ಟು ೨೬ ಅಧ್ಯಾಪಕರು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಸಿಡಬ್ಲ್ಯುಜಿಎಸ್ ಕೇಂದ್ರದ ಮುಖ್ಯಸ್ಥರಾದ ಪ್ರೊ. ಆರ್.ಮುತ್ತುರಾಯಪ್ಪ ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ. ಕೆ.ಸಿ.ಚನ್ನಮ್ಮ ಇವರುಗಳು ಏರ್ಪಡಿಸಿದ್ದರು.

## ಸಮಾಜ ವಿಜ್ಞಾನ ಪ್ರತಿಭಾ ಅನ್ವೇಷಣೆ ಯೋಜನೆ: ಮಾರ್ಗ ಪ್ರವರ್ತನೆ ಮತ್ತು ವಿದ್ಯಾರ್ಥಿವೇತನ ವಿತರಣೆ

ಸಮಾಜ ವಿಜ್ಞಾನ ಪ್ರತಿಭಾ ಅನ್ವೇಷಣೆ ಯೋಜನೆಯು (ಎಸ್ಎಸ್‌ಟಿಎಸ್ಎಸ್) ಐಸೆಕ್‌ನ ಒಂದು ಚಾಲ್ತಿ ಯೋಜನೆಯಾಗಿ ಜನವರಿ ೨೦೧೧ರಿಂದ ಅಸ್ತಿತ್ವದಲ್ಲಿದೆ. ಈ ಯೋಜನೆಯನ್ವಯ ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಕ್ರಿಸ್ತ ವಿಶ್ವವಿದ್ಯಾಲಯಗಳು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುತ್ತವೆ ಹಾಗೂ ಸರ್ ರತನ್ ಟಾಟಾ ಪ್ರತಿಷ್ಠಾನವು (ಎಸ್ಆರ್‌ಟಿಟಿ) ಧನ ಸಹಾಯವನ್ನೊದಗಿಸುತ್ತದೆ. ಈ ಯೋಜನೆಯು ಪದವಿ ಕಾರ್ಯಕ್ರಮಗಳಲ್ಲಿ ಸಮಾಜ ವಿಜ್ಞಾನ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಕುಂದುತ್ತಿರುವ ಆಸಕ್ತಿಯನ್ನು ಮತ್ತೆ ಕುದುರಿಸುವ ಗುರಿಯನ್ನು ಹೊಂದಿದೆ.

ಎಸ್ಎಸ್‌ಟಿಎಸ್ಎಸ್ ಯೋಜನೆಯು ಪದವಿ ಪೂರ್ವ ಶಿಕ್ಷಣವನ್ನು ಪೂರೈಸಿರುವ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯೊಂದನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸುತ್ತದೆ. ಈ ಪರೀಕ್ಷೆಯಲ್ಲಿ ಮೊದಲ ೩೫ ಸ್ಥಾನಗಳನ್ನು ಗಿಟ್ಟಿಸುವ ವಿದ್ಯಾರ್ಥಿಗಳು (ಬೆಂಗಳೂರು ವಿಶ್ವವಿದ್ಯಾಲಯದ ೨೫ ವಿದ್ಯಾರ್ಥಿಗಳು ಮತ್ತು ಕ್ರಿಸ್ತ ವಿಶ್ವವಿದ್ಯಾಲಯದ ೧೦ ವಿದ್ಯಾರ್ಥಿಗಳು) "ಸಮಾಜ ವಿಜ್ಞಾನಕ್ಕಿರುವ ಅವಕಾಶಗಳು ಹಾಗೂ ಸುಸಂಗತತೆ" ಎಂಬ ಮಾರ್ಗಪ್ರವರ್ತನ ಅಧಿವೇಶನದಲ್ಲಿ ಭಾಗವಹಿಸಲು ಅರ್ಹರಾಗುತ್ತಾರೆ ಮತ್ತು ಅವರುಗಳ ಮೂರು ವರ್ಷಗಳ ಪದವಿ ಕಾರ್ಯಕ್ರಮದ ಅವಧಿಯಲ್ಲಿ ವಿದ್ಯಾರ್ಥಿ ವೇತನವನ್ನೂ ಪಡೆಯುತ್ತಾರೆ.

ಅರ್ಧವಾರ್ಷಿಕ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭವನ್ನು ಐಸೆಕ್‌ನಲ್ಲಿ ೨೦೧೫ರ ಆಗಸ್ಟ್ ೨೯ ಮತ್ತು ೩೦ರಂದು ಏರ್ಪಡಿಸಲಾಗಿತ್ತು. ಐಸೆಕ್‌ನ ಆಡಳಿತ ಮಂಡಳಿಯ ಮುಖ್ಯಸ್ಥರಾದ ಡಾ. ಎ.ರವೀಂದ್ರ, ಪ್ರಭಾರ ನಿರ್ದೇಶಕರಾದ ಪ್ರೊ. ಕೆ.ಎಸ್.ಜೇಮ್ಸ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಕೆ.ಕೆ.ಸೀತಮ್ಮ, ಐಸೆಕ್‌ನ ಸಿಇಎಸ್‌ಪಿ ಕೇಂದ್ರದ ಪ್ರೊ. ಎಸ್.ಮಾದೇಶ್ವರನ್, ಕ್ರಿಸ್ತ ಕಿರಿಯ ಕಾಲೇಜಿನ ಅಧ್ಯಾಪಕ ವೃಂದ ಹಾಗೂ ಇತರ ಗಣ್ಯರು ವಿದ್ಯಾರ್ಥಿ ವೇತನ ವಿತರಣೆಯಲ್ಲಿ ಭಾಗವಹಿಸಿದ್ದರು ಹಾಗೂ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.ಈ ಎಸ್ಎಸ್‌ಟಿಎಸ್ಎಸ್ ಕಾರ್ಯಕ್ರಮವನ್ನು ಐಸೆಕ್‌ನ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಡಾ. ಎಂ.ಲಿಂಗರಾಜುರವರು ಸಂಯೋಜಿಸಿದ್ದರು.

## ಭಾರತದಲ್ಲಿ ಎಲ್ಲರಿಗೂ ವಸತಿ ಸೌಕರ್ಯ ಒದಗಿಸಲು ಪರಿಣಾಮಕಾರಿ ಅನುಷ್ಠಾನದ ಸಲುವಾಗಿ ಕಾರ್ಯತಂತ್ರಗಳನ್ನು ರೂಪಿಸುವ ಬಗ್ಗೆ ತರಬೇತಿ ಕಾರ್ಯಕ್ರಮ

ಈ ಕಾರ್ಯಕ್ರಮವನ್ನು ಬೆಂಗಳೂರಿನ ಐಸೆಕ್ ಸಂಸ್ಥೆ, ಮಾನವ ವಸತಿ ನಿರ್ವಹಣಾ ಸಂಸ್ಥೆ (ಎಚ್ಎಸ್ಎಂಐ), ನವದೆಹಲಿಯ ವಸತಿ ಮತ್ತು ನಗರಾಭಿವೃದ್ಧಿ ನಿಗಮ (ಹುಡ್ಕೋ), ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯ ಇವುಗಳು ಸಂಯುಕ್ತವಾಗಿ ೨೦೧೫ರ ಸೆಪ್ಟೆಂಬರ್ ೨೮ರಿಂದ ೩೦ರ ವರೆಗೆ ಆಯೋಜಿಸಿದ್ದವು. ಕಾರ್ಯಕ್ರಮವನ್ನು ಐಸೆಕ್ ಆಡಳಿತ ಮಂಡಳಿಯ ಮುಖ್ಯಸ್ಥರಾದ ಡಾ. ಎ.ರವೀಂದ್ರರವರು ಉದ್ಘಾಟಿಸಿದರು ಹಾಗೂ ಪ್ರಭಾರ ನಿರ್ದೇಶಕರಾದ ಪ್ರೊ. ಕೆ.ಎಸ್.ಜೇಮ್ಸ್‌ರವರು ಉದ್ಘಾಟನಾ ಭಾಷಣವನ್ನು ಮಾಡಿದರು.

ಈ ತರಬೇತಿ ಕಾರ್ಯಕ್ರಮವು ಭಾರತ ಸರ್ಕಾರದ ಪ್ರತಿಷ್ಠಿತ ಕಾರ್ಯಕ್ರಮವಾದ "ಪ್ರಧಾನ ಮಂತ್ರಿ ಆವಾಸ್ ಯೋಜನಾ (ಪಿಎಂಎವೈ) – ಎಲ್ಲರಿಗೂ ವಸತಿ"ಯ ಬಗ್ಗೆ ನಗರ ಸ್ಥಳೀಯ ಸಂಸ್ಥೆಗಳು (ಯುಎಲ್‌ಬಿಗಳು) ಅಥವಾ ವಿವಿಧ ಪೌರಸಭೆಗಳ ಅಧಿಕಾರಿ ಸಿಬ್ಬಂದಿಯನ್ನು ಮಾರ್ಗಪ್ರವರ್ತನಗೊಳಿಸುವ ಉದ್ದೇಶವನ್ನು ಹೊಂದಿತ್ತು. ಸಂಪನ್ಮೂಲ ವ್ಯಕ್ತಿಗಳನ್ನು ಐಸೆಕ್ ಹಾಗೂ ಇತರ ಸಂಸ್ಥೆಗಳಿಂದ ಆಯ್ಕೆ ಮಾಡಲಾಗಿತ್ತು. ಇವರುಗಳು ಬೋಧಿಸಿದ ವಿಷಯಗಳು ಈ ರೀತಿ ಇತ್ತು: (೧) ಭೂಮಿಯನ್ನು ಸಂಪನ್ಮೂಲವಾಗಿ ಬಳಸಿ ಖಾಸಗಿ ಕಟ್ಟಡ ನಿರ್ಮಾಪಕರ



ಭಾಗವಹಿಸುವಿಕೆಯೊಂದಿಗೆ ಕೊಳಚೆ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವುದು, (೨) ಸಾಲದೊಂದಿಗೆ ಸಂಪರ್ಕಿಸಿದ ಸಹಾಯಧನದ ಮೂಲಕ ದುರ್ಬಲವರ್ಗಗಳಿಗೆ ವಸತಿ ಕಲ್ಪಿಸುವುದನ್ನು ಉತ್ತೇಜಿಸುವುದು, (೩) ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಭಾಗೀದಾರಿಕೆಯೊಂದಿಗೆ ವಸತಿ ಕಲ್ಪಿಸುವುದು, (೪) ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ಫಲಾನುಭವಿಗಳಿಗೆ ಸಹಾಯಧನ ಒದಗಿಸುವುದು ಇತ್ಯಾದಿ.

ಈ ಕಾರ್ಯಕ್ರಮವನ್ನು ಐಸೆಕ್‌ನ ಆರ್ಥಿಕ ಅಧ್ಯಯನಗಳು ಮತ್ತು ಕಾರ್ಯನೀತಿ ಕೇಂದ್ರದ ಮುಖ್ಯಸ್ಥರೂ ಹಾಗೂ ಸಹ ಪ್ರಾಧ್ಯಾಪಕರೂ ಆಗಿರುವ ಡಾ. ಕೃಷ್ಣರಾಜ್‌ರವರು ಸಂಯೋಜಿಸಿದ್ದರು. ಹುಡ್ಕೋವಿನ ಬೆಂಗಳೂರು ಪ್ರಾದೇಶಿಕ ಕಚೇರಿಯಲ್ಲಿ ಉಪ ಪ್ರಧಾನ ವ್ಯವಸ್ಥಾಪಕರಾಗಿರುವ ಡಾ. ರವಿಶಂಕರ್‌ರವರು ಹಾಗೂ ನವದೆಹಲಿಯ ಎಚ್‌ಎಸ್‌ಎಂಐ ಸಂಸ್ಥೆಯ ಶ್ರೀಮತಿ ನೀಲಾ ಪಾಂಡಿಯನ್‌ರವರೂ ಸಹ ಡಾ. ಕೃಷ್ಣರಾಜ್‌ರವರ ಜೊತೆಯಲ್ಲಿ ಕಾರ್ಯಕ್ರಮ ಸಂಯೋಜನೆ ಮಾಡಿದರು.

## "ನೈರ್ಮಲ್ಯದ ದಾರಿಗಳು: ಹೆಚ್ಚುತ್ತಿರುವ ಸವಾಲುಗಳು ಮತ್ತು ನಗರದ ಬಡಜನರನ್ನು ತಲುಪುವಿಕೆ – ಬೆಂಗಳೂರು ನಗರದ ಒಂದು ಅಧ್ಯಯನ" ಎಂಬ ಪ್ರಸರಣಾ ಕಾರ್ಯಾಗಾರ

ಈ ಕಾರ್ಯಾಗಾರವನ್ನು ಐಸೆಕ್‌ನಲ್ಲಿ ೨೦೧೫ರ ಸೆಪ್ಟೆಂಬರ್ ೩೦ರಂದು ಏರ್ಪಡಿಸಲಾಗಿತ್ತು. ಉದ್ಘಾಟನಾ ಅಧಿವೇಶನವು ಪ್ರಭಾರ ನಿರ್ದೇಶಕರಾಗಿದ್ದ ಪ್ರೊ. ಕೆ.ಎಸ್.ಜೇಮ್ಸ್‌ರವರ ಸ್ವಾಗತ ಭಾಷಣದೊಂದಿಗೆ ಪ್ರಾರಂಭವಾಯಿತು. ಅಧಿವೇಶನದ ಅಧ್ಯಕ್ಷತೆಯನ್ನು ಐಸೆಕ್‌ನ ಆಡಳಿತ ಮಂಡಳಿಯ ಮುಖ್ಯಸ್ಥರಾದ ಡಾ. ಎ.ರವೀಂದ್ರರವರು ವಹಿಸಿದ್ದರು. ಕಾರ್ಯಾಗಾರದಲ್ಲಿ ಒಟ್ಟು ೨೪ ಜನರು ಭಾಗವಹಿಸಿದ್ದರು. ಅವರಲ್ಲಿ ಮುಖ್ಯವಾಗಿ ಕರ್ನಾಟಕ ಸರ್ಕಾರದ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಭುದಯಾಳ್ ಮೀನಾರವರು ಮತ್ತು ರಾಜ್ಯ ಸರ್ಕಾರದ ವಿವಿಧ ಇತರ ಇಲಾಖೆಗಳ ಹಿರಿಯ ಅಧಿಕಾರಿಗಳಿದ್ದರು. ಉಳಿದಂತೆ ಕರ್ನಾಟಕ ಕೊಳಚೆ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ನಗರ ಸಭೆಯ ಅಧಿಕಾರಿಗಳು, ಶಿಕ್ಷಣವೇತ್ತರು, ವೃತ್ತಿಪರರು, ಖಾಸಗಿ ವಲಯದ ಪ್ರತಿನಿಧಿಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಎಚ್‌ಎಸ್‌ಎಂಐ ಸಂಸ್ಥೆಯವರು ಇದ್ದರು. ಅಧ್ಯಯನದ ಫಲಿತಾಂಶಗಳನ್ನು ಡಾ. ಮಾನಸಿಯವರು ನಿರೂಪಿಸಿದರು. ಈ ಕಾರ್ಯಾಗಾರವು ಕಾರ್ಯನೀತಿ ರೂಪಿಸಲು ಅಗತ್ಯವಾದ ಪರಿಕರಗಳನ್ನು ಹಾಗೂ ಸಲಹೆಗಳನ್ನು ಪಡೆಯಲು ಮತ್ತು ಮುಂದಿನ ಸಂಶೋಧನೆಯ ಗುರಿಯನ್ನು ನಿರ್ಧರಿಸುವ ಉದ್ದೇಶವನ್ನು ಹೊಂದಿತ್ತು. ತನ್ಮೂಲಕ ಸರ್ಕಾರಿ ಸಂಸ್ಥೆಗಳಿಗೆ ಕ್ಷೇತ್ರಮಟ್ಟದ ಸತ್ಯಗಳನ್ನು ಮನವರಿಕೆ ಮಾಡಿಸಲು ಮತ್ತು ಬಡವರು ಸುಧಾರಿತ ನೈರ್ಮಲ್ಯದ ದಾರಿಗಳನ್ನು ಕಂಡುಕೊಳ್ಳುವುದಕ್ಕೆ ಅಗತ್ಯವಾದ ಒಳನೋಟವನ್ನು ತೋರಿಸಲು ಕಾರ್ಯಾಗಾರವು ನೆರವಾಯಿತು.

ಈ ಅಧ್ಯಯನವು ಬೆಂಗಳೂರು ನಗರದ ಬಡವರಿಗೆ ಇರುವ ಶೌಚಾಲಯ ಸಮಸ್ಯೆಯನ್ನು ಬಗೆಹರಿಸಲು ಯತ್ನಿಸಿದೆ. ಹೆಚ್ಚಿದ ನಗರೀಕರಣದಿಂದುಂಟಾದ ಒಂದು ಪರಿಣಾಮವೆಂದರೆ ಹೆಚ್ಚುತ್ತಲೇ ಇರುವ ಕೊಳಚೆ ಪ್ರದೇಶಗಳು ಮತ್ತು ಎಲ್ಲೆಂದರಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳುವಿಕೆ. ನಗರಗಳ ನೈರ್ಮಲ್ಯದ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಎರಡು ಆಯಾಮಗಳಿದ್ದು, ಬಡಜನರ ಈ ವಿಷಯದಲ್ಲಿನ ಘನತೆಯನ್ನು ಕಾಪಾಡುವುದು ಹಾಗೂ ರೋಗಗಳು ಹರಡದಂತೆ ಪರಿಸರದ ಕಲುಷಿತತೆಯನ್ನು ತಡೆಯುವುದು. ಅಧ್ಯಯನದಿಂದ ದೊರೆತಿರುವ ಫಲಿತಾಂಶಗಳು ೮ ವಲಯಗಳಾದ್ಯಂತ ಇದ್ದ ೨೦ ಕೊಳಚೆ ಪ್ರದೇಶಗಳ ಸಮೀಕ್ಷೆಯಿಂದ ದೊರೆತಿದೆ. ಈ ಸಮೀಕ್ಷೆಯು ಸಮಸ್ಯೆಗಳ ಪರಿಹಾರಕ್ಕೆ ಆಗಿರುವ ಮಧ್ಯಂತರ ಪ್ರವೇಶಗಳು, ಶೌಚಾಲಯಗಳ ಲಭ್ಯತೆ, ಉಪಯೋಗಿಸುವಿಕೆ, ಉಪಯೋಗಿಸದೆ ಇರುವಿಕೆ ಹಾಗೂ ಮಹಿಳೆಯರ ಮುಂದಿರುವ ಸವಾಲುಗಳ ಮೇಲೆ ಬೆಳಕು ಚೆಲ್ಲಿದೆ. ಜೊತೆಗೆ ಬೆಂಗಳೂರಿಗೆ ಈ ವಿಷಯದಲ್ಲಿ ಪರಿಹಾರ ದೊರಕಿಸುವ ಸಲುವಾಗಿ ಇತರ ದೇಶಗಳ ಹಾಗೂ ಭಾರತದಾದ್ಯಂತದ ಸಂಬಂಧಿತ ಪ್ರಕರಣಗಳ ದಾಖಲೀಕರಣವನ್ನೂ ಸಹ ಮಾಡಲಾಗಿದೆ. ಜೊತೆಗೆ ಈ ಕಾರ್ಯಾಗಾರದಲ್ಲಿ ಕೊಳಚೆ ಪ್ರದೇಶದ ಜನರು ಬಯಲಲ್ಲಿ ಮಲ ಮೂತ್ರ ವಿಸರ್ಜನೆ ಮಾಡುವುದರ ಹಿಂದಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ತಾಂತ್ರಿಕ ಕಾರಣಗಳು ಮತ್ತು ಇದನ್ನು ತಪ್ಪಿಸಲು ಮಾಡಿರುವ ಪ್ರಯತ್ನಗಳು ಇತ್ಯಾದಿಗಳೆಲ್ಲವನ್ನೂ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು. ನವದೆಹಲಿಯ ಹುಡ್ಕೋವಿನ ಮಾನವ ವಸಾಹತುಗಳ ಸಂಶೋಧನಾ ಸಂಸ್ಥೆಯು ಈ ಅಧ್ಯಯನಕ್ಕೆ ಧನ ಸಹಾಯವನ್ನು ನೀಡಿತ್ತು. ಈ ಕಾರ್ಯಾಗಾರವನ್ನು ಸಿಆರ್‌ಯುಎ ಕೇಂದ್ರದ ಡಾ. ಮಾನಸಿಯವರು ಏರ್ಪಡಿಸಿದ್ದರು.

## "ಅನೌಪಚಾರಿಕ ವಲಯದಲ್ಲಿ ಮಹಿಳೆಯರು – ಗಮ್ಯ ಅಂಶಗಳು ಮತ್ತು ಸವಾಲುಗಳು" ಎಂಬ ವಿಷಯದ ಬಗೆಗಿನ ರಾಷ್ಟ್ರೀಯ ವಿಚಾರ ಸಂಕಿರಣ

ಮಹಿಳೆಯರು ಅನಾದಿ ಕಾಲದಿಂದಲೂ ಕಾರ್ಯನಿರತರಾಗಿದ್ದಾರೆ. ಆದರೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅದು ಅಗೋಚರವಾಗಿರುತ್ತದೆ. ಮಹಿಳೆಯರ ಹೆಚ್ಚಿನ ಕೆಲಸಗಳು ಅನೌಪಚಾರಿಕವಾಗಿಯೇ ಇದ್ದು, ಅದನ್ನು ಗುರುತಿಸುವುದೂ ಇಲ್ಲ ಮತ್ತು ಸಂಭಾವನೆಯನ್ನೂ ನೀಡುವುದಿಲ್ಲ. ಹೀಗಾಗಿ ಅದು ಉದ್ಯೋಗ ಸೂಚಿಗಳಲ್ಲೇ ಆಗಲಿ ಅಥವಾ ಪ್ರಮಾಣನಗಳಲ್ಲೇ ಆಗಲಿ ದಾಖಲಿಸಲ್ಪಡುವುದಿಲ್ಲ. ಭಾರತದಲ್ಲಿ ಒಟ್ಟು ಕಾರ್ಮಿಕ ಬಲವು ೪೫೮ ದಶಲಕ್ಷಗಳಾಗಿದ್ದು, ಈ ಪೈಕಿ ಶೇ.೯೨ರಷ್ಟು ಅನೌಪಚಾರಿಕ ವಲಯದಲ್ಲೇ ಇದ್ದಾರೆ. ಜೊತೆಗೆ ಶೇ.೯೦ಕ್ಕಿಂತಲೂ ಹೆಚ್ಚು ಮಹಿಳಾ ಕಾರ್ಮಿಕರು

ಅನೌಪಚಾರಿಕ ವಲಯದಲ್ಲೇ ಸಾಂದ್ರೀಕೃತವಾಗಿದ್ದಾರೆ. ಮಹಿಳೆಯರು ಅನೌಪಚಾರಿಕ ವಲಯಕ್ಕೆ ಅದರ ಸುಲಭವಾಗಿ ಹೊಂದಿಕೊಳ್ಳುವ ಗುಣಕ್ಕಾಗಿ, ಅದರಲ್ಲೂ ವಿಶೇಷವಾಗಿ ಮನೆಯಲ್ಲೇ ಮಾಡುವ ಕೆಲಸಗಳಿಂದಾಗಿ ಆಕರ್ಷಿತರಾಗುತ್ತಾರೆ. ಏಕೆಂದರೆ ಅವರ ಇತರ ಅಗತ್ಯತೆಗಳು ಹಾಗೂ ವೇತನರಹಿತ ದುಡಿಮೆಗಳಿಗೆ ಹೊಂದಿಕೊಳ್ಳುವ ನಿಟ್ಟಿನಲ್ಲಿ ಇದು ಲಾಭದಾಯಕವಾಗಿರುತ್ತದೆ. ಮಹಿಳೆಯರು ಸಾಮಾನ್ಯವಾಗಿ ಕೌಶಲ್ಯರಹಿತರಾಗಿದ್ದು, ಆ ದೆಸೆಯಿಂದ ಅವರನ್ನು ಕಡಿಮೆ ವೇತನಕ್ಕೆ ಸುಲಭವಾಗಿ ದೊರಕುವ ಕಾರ್ಮಿಕರೆಂದು ಪರಿಗಣಿಸಲಾಗುತ್ತದೆ.

ಅನೌಪಚಾರಿಕ ಆರ್ಥಿಕತೆಯಲ್ಲಿನ ಉದ್ಯೋಗ ಸ್ಥಿತಿಗತಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ (೧) ನೋಂದಾಯಿಸದಿರುವ ಸಣ್ಣ ಉದ್ಧಿಮೆಗಳಲ್ಲಿ ಸ್ವಯಂ ಉದ್ಯೋಗದಲ್ಲಿರುವವರು; ಹಾಗೂ (೨) ಅಭದ್ರತೆಯ ಹಾಗೂ ಅಸಂರಕ್ಷಿತ ಉದ್ಯೋಗಗಳಲ್ಲಿ ಕೆಲಸ ಮಾಡುವ ವೇತನಸಹಿತ ಕಾರ್ಮಿಕರು. ಅನೌಪಚಾರಿಕ ವಲಯದಲ್ಲಿ ಮಹಿಳೆಯರ ಉದ್ಯೋಗಗಳು ಈ ರೀತಿ ಇವೆ: ಚಿಲ್ಲರೆ ವ್ಯಾಪಾರ, ಆಹಾರ ಸಂಸ್ಕರಣೆ, ಸಾಂಪ್ರದಾಯಿಕ ಉದ್ಯೋಗಗಳ ಕೌಟುಂಬಿಕ ಘಟಕಗಳು, ತಯಾರಿಕಾ ಘಟಕಗಳು – ಇವೆಂದರೆ ಭೌಗೋಳಿಕವಾಗಿ ಚದುರಿದಂತಹ ಸಣ್ಣ ಕಾರ್ಖಾನೆಗಳು ಅಥವಾ ವಿವಿಧ ರೀತಿಯ ಉತ್ಪನ್ನಗಳ ತಯಾರಿಕಾ ಘಟಕಗಳು. ಕೈಗಾರಿಕೀಕರಣ ಹಾಗೂ ಯಾಂತ್ರೀಕರಣಗಳು ರಭಸದಿಂದ ಸಾಂಪ್ರದಾಯಿಕ ಕೈಕಸುಬುಗಳನ್ನು ನಾಶಪಡಿಸಿರುವುದರಿಂದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಬಡ ಮಹಿಳೆಯರು ವ್ಯಾಪಕ ಹಾಗೂ ತೀವ್ರ ನಿರುದ್ಯೋಗವನ್ನು ಎದುರಿಸುತ್ತಿದ್ದಾರೆ. ಪುರುಷರು ವಿದ್ಯಾಭ್ಯಾಸದ ಮೂಲಕ ಮೇಲ್ಮಟ್ಟದ ಉದ್ಯೋಗಗಳನ್ನು ಸಾಧಿಸಿಕೊಳ್ಳುತ್ತಾರೆ. ಆದರೆ ಮಹಿಳೆಯರು ಕುಟುಂಬದ ಮೂಲಭೂತ ಜೀವನೋಪಾಯವನ್ನಾದರೂ ದೃಢ ಪಡಿಸಿಕೊಳ್ಳಲು ಸಾಂಪ್ರದಾಯಿಕ ವೃತ್ತಿಗಳಿಗೆ ಜೋತುಬಿದ್ದು ಮುಂದುವರಿಯುತ್ತಾರೆ. ಜೊತೆಗೆ ಪರ್ಯಾಯ ಉದ್ಯೋಗಾವಕಾಶಗಳು ದೊರೆಯುವಂತಿದ್ದರೆ ಅವುಗಳನ್ನು ಪುರುಷರು ಕೂಡಲೇ ದಕ್ಕಿಸಿಕೊಳ್ಳುತ್ತಾರೆ. ಹೀಗಿದ್ದರೂ ಸಹ, ಮಹಿಳೆಯರ ಚಿಲ್ಲರೆ ವೃತ್ತಿಗಳೇ ಪುರುಷರು ಹಾಗೂ ಒಟ್ಟಾರೆ ಸಮಾಜಕ್ಕೆ ನಿರುದ್ಯೋಗ, ಕಾಯಿಲೆ, ಹಣದುಬ್ಬರ, ಸಂಬಳ ಕಡಿತ ಮುಂತಾದ ಸಂದರ್ಭಗಳಲ್ಲಿ ಆಪದ್ಧನವಾಗಿ ಪರಿಣಮಿಸುತ್ತದೆ.

ಈ ರೀತಿಯಾಗಿ ಅಭಿವೃದ್ಧಿ ಹೊಂದುತ್ತಿರುವ ವಿಶ್ವದಲ್ಲಿ ಅನೌಪಚಾರಿಕ ಉದ್ಯೋಗವು ಸಾಧಾರಣವಾಗಿ ಪುರುಷರಿಗಿಂತ ಮಹಿಳೆಯರಿಗೆ ಉದ್ಯೋಗದ ದೊಡ್ಡ ಮೂಲವಾಗಿದೆ. ಭಾರತದ ಸಂದರ್ಭದಲ್ಲಿ ಹೇಳುವುದಾದರೆ ಮಹಿಳೆಯರ ದುಡಿಯುವ ಸಾಮರ್ಥ್ಯವು ಆವಳು, ಅವಳ ಮಕ್ಕಳು ಮತ್ತು ಕುಟುಂಬವನ್ನು ನಿರ್ವಹಿಸುವುದಕ್ಕೆ ಮಾತ್ರ ಸೀಮಿತವಾಗಿದೆಯೇ ಹೊರತು ವಾಸ್ತವವಾಗಿ ಅವಳಿಗೆ ಆರ್ಥಿಕ ಸ್ವಾತಂತ್ರ್ಯ ತಂದುಕೊಡುವುದಕ್ಕಾಗಿಲ್ಲ. ಕುಟುಂಬದ ಬಗೆಗಿನ ಅವಳ ಬಾಧ್ಯತೆಯು ಅಗತ್ಯದ ಸಂದರ್ಭದಲ್ಲಿ ಅದನ್ನು ದುಡಿಮೆಯ ಮೂಲಕ ಬೆಂಬಲಿಸುವುದೂ ಆಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಐಸೆಕ್‌ನಲ್ಲಿ ೨೦೧೫ರ ಅಕ್ಟೋಬರ್ ೫ ಮತ್ತು ೬ ಗಳಂದು ಏರ್ಪಡಿಸಲಾಗಿತ್ತು. ಈ ವಿಚಾರ ಸಂಕಿರಣವು ಮಹಿಳೆಯರ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹರಿಸುವುದರತ್ತ ಕೇಂದ್ರಿತವಾಗಿತ್ತಲ್ಲದೆ ಅವರ ಉದ್ಯೋಗದ ಸ್ಥಿತಿಗತಿಗಳನ್ನು ಸುಧಾರಿಸುವುದರ ಬಗ್ಗೆಯೂ ಆಗಿತ್ತು.

ವಿಚಾರ ಸಂಕಿರಣದ ಉದ್ದೇಶಗಳು ಈ ರೀತಿ ಇದ್ದವು: (೧) ಸಾಮಾಜಿಕ ಭದ್ರತೆ ಮತ್ತು ಅನೌಪಚಾರಿಕ ಉದ್ಯೋಗಗಳ ಬಗ್ಗೆ ತಿಳಿದುಕೊಳ್ಳುವುದು; (೨) ಮಹಿಳೆಯರು ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುವುದಕ್ಕೆ ಕಾರಣವಾದ ಅಂಶಗಳ ಬಗ್ಗೆ ತಿಳಿದುಕೊಳ್ಳುವುದು; (೩) ಅನೌಪಚಾರಿಕ ವಲಯದಲ್ಲಿ ಮಹಿಳೆಯರ ಜೀವನವನ್ನು ಬಾಧಿಸುತ್ತಿರುವ ಅಂಶಗಳನ್ನು ಪರೀಕ್ಷಿಸುವುದು; (೪) ಅನೌಪಚಾರಿಕ ವಲಯದಲ್ಲಿ ಮಹಿಳೆಯರ ವಿದ್ಯಾಭ್ಯಾಸ ಮತ್ತು ಭಾಗವಹಿಸುವಿಕೆಯ ಬಗ್ಗೆ ತಿಳಿದುಕೊಳ್ಳುವುದು.

ಒಟ್ಟಿನಲ್ಲಿ ಅನೌಪಚಾರಿಕ ವಲಯದಲ್ಲಿನ ಮಹಿಳೆಯರ ವಿವಿಧ ಕ್ಷೇತ್ರಗಳನ್ನೊಳಗೊಂಡಂತೆ ೨೪ ಸಂಶೋಧನಾ ಲೇಖನಗಳನ್ನು ಮಂಡಿಸಲಾಯಿತು. ಈ ರಾಷ್ಟ್ರೀಯ ವಿಚಾರ ಸಂಕಿರಣಕ್ಕಾಗಿ ದೇಶದಾದ್ಯಂತದಿಂದ ಬಂದಿದ್ದ ೧೫೦ ಸಂಕ್ಷಿಪ್ತ ಸಂಶೋಧನಾ ಲೇಖನಗಳ ಪೈಕಿ ೩೩ ಲೇಖನಗಳನ್ನು ಅಂತಿಮಗೊಳಿಸಲಾಯಿತು.

ಪ್ರತಿ ಅಧಿವೇಶನದಲ್ಲೂ ಸಂಶೋಧನಾ ಲೇಖನಗಳ ಬಗ್ಗೆ ಗಂಭೀರವಾಗಿ ಚರ್ಚಿಸಲಾಯಿತು. ಚರ್ಚೆಯ ಸಮಯದಲ್ಲಿ ಬಹಳಷ್ಟು ಪ್ರಶ್ನೆಗಳನ್ನು ಕೇಳಲಾಯಿತು. ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರು ಸಂಶೋಧನಾ ನಿರೂಪಕರುಗಳಿಗೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದರು. ಭಾಗವಹಿಸಿದ್ದವರೆಲ್ಲರೂ ವಸತಿ ಮತ್ತು ಊಟದ ಬಗ್ಗೆ ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದರು.

## ಸೂಕ್ಷ್ಮ ಹಾಗೂ ವ್ಯಾಪ್ತ ಆರ್ಥಿಕ ಸಿದ್ಧಾಂತಗಳ ಬಗೆಗಿನ ತರಬೇತಿ ಕಾರ್ಯಕ್ರಮ

"ಸೂಕ್ಷ್ಮ ಹಾಗೂ ವ್ಯಾಪ್ತ ಆರ್ಥಿಕ ಸಿದ್ಧಾಂತ"ಗಳ ಬಗೆಗಿನ ಐದು ದಿವಸಗಳ ತರಬೇತಿ ಕಾರ್ಯಕ್ರಮವೊಂದನ್ನು ಐಸೆಕ್‌ನ ಆರ್ಥಿಕ ಅಧ್ಯಯನಗಳು ಮತ್ತು ಕಾರ್ಯನೀತಿ ಕೇಂದ್ರವು (ಸಿಇಎಸ್‌ಪಿ) ಕಾರ್ಯನಿರತ ಐಎಸ್‌ಎಸ್ (ಭಾರತೀಯ ಸಾಂಖ್ಯಿಕ/ಆರ್ಥಿಕ ಸೇವೆ) ಅಧಿಕಾರಿಗಳಿಗೆ ಹಾಗೂ ವಿವಿಧ ರಾಜ್ಯಗಳ/ಕೇಂದ್ರಾಡಳಿತ ಪ್ರದೇಶಗಳ ಅಧಿಕಾರಿಗಳಿಗೆ ಐಸೆಕ್‌ನಲ್ಲಿ ೨೦೧೫ರ ಅಕ್ಟೋಬರ್ ೧೨ರಿಂದ ೧೬ರ ವರೆಗೆ ಏರ್ಪಡಿಸಿತ್ತು.



ಈ ಕಾರ್ಯಕ್ರಮವನ್ನು ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ದೆಹಲಿಯ ರಾಷ್ಟ್ರೀಯ ಸಾಂಖ್ಯಿಕ ಪದ್ಧತಿಗಳ ತರಬೇತಿ ಅಕಾಡೆಮಿ (ಎನ್‌ಎಸ್‌ಎಸ್‌ಟಿಎ)ಯ ಮೂಲಕ ಪುರಸ್ಕರಿಸಿತ್ತು. ಈ ಕಾರ್ಯಕ್ರಮವನ್ನು ಪ್ರಭಾರ ನಿರ್ದೇಶಕರಾಗಿದ್ದ ಪ್ರೊ. ಕೆ.ಎಸ್.ಜೇಮ್ಸ್ ರವರು ಉದ್ಘಾಟಿಸಿದರು ಮತ್ತು ಉದ್ಘಾಟನಾ ಭಾಷಣವನ್ನೂ ಸಹ ಮಾಡಿದರು. ಪ್ರೊ. ಮೀನಾಕ್ಷಿ ರಾಜೀವ್‌ರವರು ಈ ತರಬೇತಿ ಕಾರ್ಯಕ್ರಮದ ಮೂಲಕ ಏನೇನು ತಿಳುವಳಿಕೆ ಪಡೆಯಬಹುದು ಎಂಬುದನ್ನು ವಿವರಿಸಿದರು.

ವಿಖ್ಯಾತ ಅರ್ಥಮಾಪನ ಶಾಸ್ತ್ರಜ್ಞರುಗಳಾದ ಡಾ. ಚರಣ್ ಸಿಂಗ್ (ಐಐಎಂಬಿ) ಹಾಗೂ ಡಾ. ರೂಪಾ ಚಂದ್ರ (ಐಐಎಂಬಿ)ರವರು ಅತಿ ಮುಖ್ಯ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಮಾಡಿದರು. ಇವರ ಜೊತೆಗೆ ಪ್ರೊ. ಎಂ.ಆರ್.ನಾರಾಯಣ, ಪ್ರೊ. ಮೀನಾಕ್ಷಿ ರಾಜೀವ್, ಡಾ.ಇಂದ್ರಜಿತ್ ಮುಂತಾದವರುಗಳೂ ಸಹ ಪ್ರವಚನಗಳನ್ನು ನೀಡಿದರು. ತರಬೇತಿ ಕಾರ್ಯಕ್ರಮವನ್ನು ಐಸೆಕ್‌ನ ಸಿಇಎಸ್‌ಪಿ ಕೇಂದ್ರದ ಆರ್‌ಬಿಐ ಪೀಠ ಪ್ರಾಧ್ಯಾಪಕರಾದ ಪ್ರೊ. ಮೀನಾಕ್ಷಿ ರಾಜೀವ್‌ರವರು ಏರ್ಪಡಿಸಿದ್ದರು.

## ಸಮಾಜ ವಿಜ್ಞಾನ ಸಂಶೋಧನೆಯ ಪದ್ಧತಿಗಳು ಮತ್ತು ಆನ್ವಯಿಕತೆಗಳ ಬಗೆಗಿನ ಪ್ರಮಾಣ ಪತ್ರ ಶಿಕ್ಷಣ ಕಾರ್ಯಕ್ರಮ

ಐಸೆಕ್ ಸಂಸ್ಥೆಯು ನೀಡುವ ಈ ಶಿಕ್ಷಣ ಕಾರ್ಯಕ್ರಮವು ಬಹುವಿಷಯಗಳನ್ನೊಳಗೊಂಡ ಸಮಾಜ ವಿಜ್ಞಾನ ಸಂಶೋಧನಾ ಮಾರ್ಗದ ಕುರಿತಾಗಿದೆ. ಈ ಕಾರ್ಯಕ್ರಮವನ್ನು ಐಸೆಕ್‌ನ ಎಸ್‌ಆರ್‌ಟಿಟಿ ನಿಧಿಯು ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಭಾಗಶ: ಪುರಸ್ಕರಿಸುತ್ತಿದ್ದು, ಉಳಿದ ಆರ್ಥಿಕ ಅಗತ್ಯತೆಯನ್ನು ಶಿಕ್ಷಣಾರ್ಥಿಗಳಿಂದ ಅತ್ಯಲ್ಪ ಶುಲ್ಕವನ್ನು ಪಡೆಯುವುದರ ಮೂಲಕ ಪೂರೈಸಿಕೊಳ್ಳಲಾಗುತ್ತದೆ. ಪ್ರಸ್ತುತ ವರ್ಷದಲ್ಲಿ ೧೭ ಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಮತ್ತು ಇದನ್ನು ೨೦೧೫ರ ಅಕ್ಟೋಬರ್ ೨೬ ರಿಂದ ನವೆಂಬರ್ ೬ ರವರೆಗೆ ಏರ್ಪಡಿಸಲಾಗಿತ್ತು. ಈ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಭಾರತದ ವಿವಿಧ ಪ್ರಾಂತಗಳಿಂದ ಬಂದವರಾಗಿದ್ದರು ಹಾಗೂ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಾರ್ವಜನಿಕ ಕಾರ್ಯನೀತಿ, ಕಾನೂನು, ಅಭಿವೃದ್ಧಿ ನಿರ್ವಹಣೆ ಹಾಗೂ ಲಿಂಗ ಪ್ರಭೇಧ ಮತ್ತು ಅಭಿವೃದ್ಧಿ ಮುಂತಾದ ಶಾಸ್ತ್ರಗಳನ್ನು ವ್ಯಾಸಂಗ ಮಾಡಿದ್ದರು. ಶಿಕ್ಷಣವನ್ನು ಐಸೆಕ್ ಸಂಸ್ಥೆಯ ಪರಿಣತರಲ್ಲದೆ ಭಾರತೀಯ ವಿಜ್ಞಾನ ಸಂಸ್ಥೆ, ಪಾಂಡಿಚೆರಿ ವಿಶ್ವವಿದ್ಯಾಲಯ, ಭಾರತದ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ ಇತ್ಯಾದಿಗಳ ಪರಿಣತರೂ ಸಹ ನೀಡಿದರು. ಶಿಕ್ಷಣದ ವಿಷಯಗಳು ಈ ರೀತಿ ಇತ್ತು: (೧) ಸಮಾಜ ವಿಜ್ಞಾನ ಸಂಶೋಧನೆಗೆ ಇರುವ ವಿವಿಧ ಮಾರ್ಗಗಳು – ಗುಣಾತ್ಮಕ ಮತ್ತು ಪರಿಮಾಣಾತ್ಮಕ ಪದ್ಧತಿಗಳು, (೨) ಎಸ್‌ಪಿಎಸ್‌ಎಸ್ ಹಾಗೂ ಎಸ್‌ಟಿಎಟಿಎ ಸಾಫ್ಟ್‌ವೇರ್‌ಗಳ ಪ್ರಾಯೋಗಿಕ ಬಳಕೆ, ಮತ್ತು (೩) ದೊಡ್ಡ ಪ್ರಮಾಣದ ಎನ್‌ಎಸ್‌ಎಸ್‌ಓ ಘಟಕ ಮಟ್ಟದ ದತ್ತಾಂಶವನ್ನು ಎಸ್‌ಪಿಎಸ್‌ಎಸ್ ಹಾಗೂ ಎಸ್‌ಟಿಎಟಿಎಗಳನ್ನು ಬಳಸಿಕೊಂಡು ವಿಶ್ಲೇಷಿಸುವುದು. ಐಸೆಕ್‌ನ ಪ್ರಭಾರ ನಿರ್ದೇಶಕರಾದ ಪ್ರೊ. ಕೆ.ಎಸ್.ಜೇಮ್ಸ್‌ರವರು ಶಿಕ್ಷಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ರಾಜನ್ ಗುರುಕ್ಕಲ್‌ರವರು ಸಮಾರೋಪ ಭಾಷಣವನ್ನು ಮಾಡಿದರು. ಈ ಶಿಕ್ಷಣ ಕಾರ್ಯಕ್ರಮವನ್ನು ಐಸೆಕ್‌ನ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಇಂದ್ರಜಿತ್ ಬೈರಾಗ್ಯರವರು ಸಂಯೋಜಿಸಿದ್ದರು.

## ಸೂಕ್ಷ್ಮ ನೀರಾವರಿ ಕಾರ್ಯನೀತಿಯ ಅನುಷ್ಠಾನಕ್ಕಾಗಿ ಕರ್ನಾಟಕಕ್ಕೆ ಮಾರ್ಗಸೂಚಿ ತಯಾರಿಸುವ ಸಲುವಾಗಿನ ಕಾರ್ಯಗಾರ

ದಕ್ಷಿಣ ಕೊರಿಯಾ ದೇಶದ "ದಿ ಗ್ಲೋಬಲ್ ಗ್ರೀನ್ ಗ್ರೋತ್ ಇನ್ಸ್‌ಟಿಟ್ಯೂಟ್" ಸಂಸ್ಥೆಯು ಐಸೆಕ್‌ನ ಎಡಿಆರ್‌ಟಿ ಕೇಂದ್ರಕ್ಕೆ "ಸಹಾಯಧನ ನೀಡಿಕೆ ಗಣಕ ಯಂತ್ರದ ಚೌಕಟ್ಟಿನ ಅಭಿವೃದ್ಧಿ" ಹಾಗೂ "ಉಸ್ತುವಾರಿ ಮತ್ತು ಮೌಲ್ಯಮಾಪನ ಸೂಚ್ಯಂಕಗಳು" ಎಂಬ ಯೋಜನೆಯನ್ನು ವಹಿಸಿತ್ತು. ಇದಕ್ಕೆ ಸಂಬಂಧಿಸಿದಂತೆ ಮೇಲಿನ ಕಾರ್ಯಾಗಾರವನ್ನು ಆ ಸಂಸ್ಥೆಯ ಸಹಯೋಗದೊಂದಿಗೆ ಎಡಿಆರ್‌ಟಿ ಕೇಂದ್ರವು ೨೦೧೫ರ ನವೆಂಬರ್ ೫ರಂದು ಆಯೋಜಿಸಿತ್ತು.

ಈ ಕಾರ್ಯಾಗಾರದ ಉದ್ದೇಶವು ಸಹಯೋಗಿ ಸಂಸ್ಥೆಗಳು ತಮ್ಮ ತಮ್ಮ ಅಂತಿಮ ವರದಿಗಳನ್ನು ಮಂಡಿಸುವುದು ಮತ್ತು ಸೂಕ್ತ ಸಲಹೆಗಳನ್ನು ಪಡೆಯುವುದಾಗಿತ್ತು. ಐಸೆಕ್‌ನ ಡಾ. ಎ.ವಿ.ಮಂಜುನಾಥ ಮತ್ತು ಪ್ರೊ. ಆರ್.ಎಸ್.ದೇಶಪಾಂಡೆ ರವರು ಸೂಕ್ಷ್ಮ ನೀರಾವರಿ ಸಾಮರ್ಥ್ಯ, ಬಂಡವಾಳದ ಅಗತ್ಯತೆ ಹಾಗೂ ಸಹಾಯಧನ ಬೆಂಬಲ ಗಣಕ ಯಂತ್ರ ಚೌಕಟ್ಟಿನ ಬಗ್ಗೆ ವಿಷಯ ನಿರೂಪಣೆ ಮಾಡಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಪ್ರೊ. ಎಂ.ಜಿ.ಚಂದ್ರಕಾಂತ್‌ರವರು ಉಸ್ತುವಾರಿ ಮತ್ತು ಮೌಲ್ಯಮಾಪನ ಚೌಕಟ್ಟಿನ ವರದಿಯನ್ನು ನಿರೂಪಿಸಿದರು. ಆನಂದ್‌ನಲ್ಲಿರುವ ಅಂತರ್‌ರಾಷ್ಟ್ರೀಯ ನೀರು ನಿರ್ವಹಣಾ ಸಂಸ್ಥೆಯ ಶ್ರೀ ಶಿಲ್ಪ್‌ವರ್ಮರವರು "ಕರ್ನಾಟಕದಲ್ಲಿ ಸೂಕ್ಷ್ಮ ನೀರಾವರಿಯನ್ನು ಉತ್ತೇಜಿಸುವಿಕೆ: ಯಶಸ್ಸಿಗೆ ಮಾರ್ಗನಕ್ಷೆ" ಎಂಬ ವರದಿಯನ್ನು ಮಂಡಿಸಿದರು.

ಕರ್ನಾಟಕ ಸರ್ಕಾರದ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಪ್ರತಿನಿಧಿಗಳು ಹಾಗೂ ಎಡಿಆರ್‌ಟಿಸಿ ಯೋಜನಾ ತಂಡ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಐಸೆಕ್‌ನಿಂದ ಡಾ. ಪಿ.ತಿಪ್ಪಯ್ಯ, ನವದೆಹಲಿಯ ಜಿಜಿಜಿಐ ಸಂಸ್ಥೆಯಿಂದ ಡಾ. ಸಿದ್ಧಾರ್ಥನ್

ಬಾಲಸುಬ್ರಮಣಿಯನ್ ಮತ್ತು ಡಾ. ಅಜಿತ್ ರಾಧಾಕೃಷ್ಣನ್‌ರವರು ಭಾಗವಹಿಸಿದ್ದರು. ಈ ಕಾರ್ಯಾಗಾರವನ್ನು ಎಡಿಆರ್‌ಟಿಸಿ ಯ ಡಾ. ಎ.ವಿ. ಮಂಜುನಾಥರವರು ಏರ್ಪಡಿಸಿದ್ದರು.

## “ವಯಸ್ಸಾಗುವಿಕೆ ಮತ್ತು ಸೌಖ್ಯತೆ: ಆರೋಗ್ಯ ಮತ್ತು ಸಾಮಾಜಿಕ ಪಾಲನೆಯ ಬಗ್ಗೆ ಅಂತರ್–ಸಾಂಸ್ಕೃತಿಕ ದೃಷ್ಟಿಕೋನಗಳು” ಎಂಬ ವಿಷಯದ ಬಗೆಗಿನ ಅಂತರ್‍ರಾಷ್ಟ್ರೀಯ ವಿಚಾರ ಸಂಕಿರಣ

ಬೆಂಗಳೂರಿನ ಐಸೆಕ್‌ನಲ್ಲಿ ಈ ಅಂತರ್‍ರಾಷ್ಟ್ರೀಯ ವಿಚಾರ ಸಂಕಿರಣವನ್ನು ೨೦೧೫ರ ಡಿಸೆಂಬರ್ ೧೭ ಮತ್ತು ೧೮ಗಳಂದು ಏರ್ಪಡಿಸಲಾಗಿತ್ತು. ಈ ವಿಚಾರ ಸಂಕಿರಣವು ಒಂದು ಜಂಟಿ ಸಂಶೋಧನಾ ಅಧ್ಯಯನದ ಭಾಗವಾಗಿತ್ತು. ಭಾರತ–ಯೂರೋಪ್ ಸಂಶೋಧನಾ ಜಾಲದ ಒಂದು ಯೋಜನೆಯಾದ ಇದರಲ್ಲಿ ನೆದರ್ಲ್ಯಾಂಡ್ಸ್‌ನ ಗ್ರೋನಿಂಗೆನ್ ವಿಶ್ವವಿದ್ಯಾಲಯ, ಇಂಗ್ಲೆಂಡಿನ ಸೌಥಾಂಪ್ಟನ್ ವಿಶ್ವವಿದ್ಯಾಲಯ, ತಿರುವನಂತಪುರದ ಅಭಿವೃದ್ಧಿ ಅಧ್ಯಯನಗಳ ಕೇಂದ್ರ ಹಾಗೂ ಬೆಂಗಳೂರಿನ ಐಸೆಕ್ ಸಂಸ್ಥೆಗಳು ಭಾಗವಹಿಸಿದ್ದವು. ಈ ವಿಚಾರ ಸಂಕಿರಣವು ಭಾರತ ಹಾಗೂ ಯೂರೋಪ್ ದೇಶಗಳ ವಿದ್ವಾಂಸರು ಒಂದೆಡೆ ಸೇರಿ ವಯಸ್ಸಾಗುವಿಕೆ ಮತ್ತು ಸೌಖ್ಯತೆಯ ಅಂಶಗಳನ್ನು ಅಂತರ್ ಸಂಸ್ಕೃತಿ ದೃಷ್ಟಿಕೋನದಲ್ಲಿ ಚರ್ಚಿಸುವಂತೆ ಮಾಡಿತು. ಐಸೆಕ್‌ನ ಆಡಳಿತ ಮಂಡಳಿಯ ಮುಖ್ಯಸ್ಥರಾದ ಡಾ. ಎ.ರವೀಂದ್ರರವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಭಾಷಣವನ್ನು ಇಂಗ್ಲೆಂಡಿನ ಸೌಥಾಂಪ್ಟನ್ ವಿಶ್ವವಿದ್ಯಾಲಯದ ಅಂತರ್‍ರಾಷ್ಟ್ರೀಯ ಸಾಮಾಜಿಕ ಕಾರ್ಯನೀತಿ ಮತ್ತು ಜನಸಂಖ್ಯಾ ಶಾಸ್ತ್ರದ ಪ್ರಾಧ್ಯಾಪಕರೂ ಹಾಗೂ ಸಾಮಾಜಿಕ, ಮಾನವಶಾಸ್ತ್ರ ಹಾಗೂ ಗಣಿತ ವಿಜ್ಞಾನಗಳ ಡೀನ್ ಆದ ಜೇನ್ ಫಾಲ್ಕಿಂಗಮ್ ಅವರು ಮಾಡಿದರು. ವಿಚಾರ ಸಂಕಿರಣದಲ್ಲಿ ಚರ್ಚಿಸಲಾದ ನಾಲ್ಕು ಮುಖ್ಯ ಅಂಶಗಳು ಈ ರೀತಿಯಿತ್ತು: (೧) ಜನಸಂಖ್ಯಾ ಪರಿವರ್ತನೆ, (೨) ವೃದ್ಧರ ವಸತಿ ವ್ಯವಸ್ಥೆ, ಶುಶ್ರೂಷಾ ಅಗತ್ಯಗಳು, ಆರೋಗ್ಯ ಸ್ಥಿತಿಗತಿಗಳು, (೩) ವಯಸ್ಸಾಗುವಿಕೆ: ಹೊಸ ಕಾರ್ಯವಿಧಾನಗಳು ಹಾಗೂ ದತ್ತಾಂಶ, ಮತ್ತು (೪) ವಯಸ್ಸಾಗುವಿಕೆ, ಲಿಂಗ ಪ್ರಭೇಧ ಮತ್ತು ಸಾಮಾಜಿಕ ಭದ್ರತೆ. “ಸಾಂಸ್ಥಿಕ ಸಂದರ್ಭಗಳಲ್ಲಿ ವೃದ್ಧಾಪ್ಯ: ಭಾರತ ಮತ್ತು ನೆದರ್‌ಲ್ಯಾಂಡ್ಸ್” ಎಂಬ ವಿಷಯದ ಬಗ್ಗೆ ಸ್ಥಿರ ಚಿತ್ರಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ಸಮಾರೋಪ ಭಾಷಣವನ್ನು ಹೇಗ್‌ನ ರಾಷ್ಟ್ರೀಯ ಜನಸಂಖ್ಯಾ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಲಿಯೋ ವಾನ್ ವೀಸೆನ್‌ರವರು ಮಾಡಿದರು.

## ಸಮಾಜ ವಿಜ್ಞಾನ ಪ್ರತಿಭಾ ಅನ್ವೇಷಣೆ ಯೋಜನೆಯ ಕಾರ್ಯಕ್ರಮ

ಈ ಕಾರ್ಯಕ್ರಮದ ಬಗ್ಗೆ ಹಿಂದೆಯೇ ವಿವರಿಸಲಾಗಿದ್ದು, ಹೊಸ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು (ಎರಡನೆಯ ಪಿಯುಸಿಯಲ್ಲಿ ಓದುತ್ತಿರುವ) ಪ್ರತಿ ವರ್ಷ ಜನವರಿ ತಿಂಗಳ ಕಡೆಯ ಭಾನುವಾರ ಅಥವಾ ಫೆಬ್ರವರಿ ತಿಂಗಳ ಮೊದಲ ಭಾನುವಾರ ಪರೀಕ್ಷೆಯನ್ನು ನಡೆಸಲಾಗುತ್ತದೆ.

ಈ ಕಾರ್ಯಕ್ರಮದ ಒಂದು ಅಂಗವಾಗಿ, ಅರ್ಧವಾರ್ಷಿಕ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭವನ್ನು ಐಸೆಕ್‌ನಲ್ಲಿ ೨೦೧೬ರ ಜನವರಿ ೯ ಮತ್ತು ೧೦ಗಳಂದು ಏರ್ಪಡಿಸಲಾಗಿತ್ತು. ಮುಂದಿನ ತಂಡದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ವಾರ್ಷಿಕ ಪರೀಕ್ಷೆಯನ್ನು ೨೦೧೬ರ ಜನವರಿ ೩೧ರಂದು ಇಟ್ಟುಕೊಳ್ಳಲಾಗಿತ್ತು. ವಿದ್ಯಾರ್ಥಿ ವೇತನ ವಿತರಣಾ ಸಮಾರಂಭದಲ್ಲಿ ಐಸೆಕ್‌ನ ಆಡಳಿತ ಮಂಡಳಿಯ ಮುಖ್ಯಸ್ಥರಾದ ಡಾ. ಎ.ರವೀಂದ್ರ, ಪ್ರಭಾರ ನಿರ್ದೇಶಕರಾದ ಡಾ. ಕೆ.ಎಸ್.ಜೇಮ್ಸ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಕೆ.ಕೆ.ಸೀತಮ್ಮ, ಐಸೆಕ್‌ನ ಸಿಇಎಸ್‌ಪಿ ಕೇಂದ್ರದ ಪ್ರೊ. ಎಸ್.ಮಾದೇಶ್ವರನ್, ಕ್ರಿಸ್ತ ಕಿರಿಯ ಮಹಾವಿದ್ಯಾಲಯದ ಅಧ್ಯಾಪಕ ವೃಂದ ಮತ್ತು ಇತರ ಗಣ್ಯರು ವಿದ್ಯಾರ್ಥಿ ವೇತನಗಳನ್ನು ವಿತರಿಸಿದರು ಮತ್ತು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಈ ಸಮಾರಂಭದಲ್ಲಿ ಸಲಹಾ ಸಮಿತಿಯ ಸದಸ್ಯರು, ಪರೀಕ್ಷಾ ನಿಯಂತ್ರಣಾಧಿಕಾರಿಗಳು ಹಾಗೂ ಎಸ್‌ಎಸ್‌ಟಿಎಸ್‌ಎಸ್‌ನ ಸಹ ಸಂಯೋಜಕರೂ ಆದ ಪ್ರೊ. ಎಚ್.ಕೆ.ಮೌಲೇಶ್, ಸಂಪನ್ಮೂಲ ವ್ಯಕ್ತಿಗಳಾದ ಪ್ರೊ. ಪಿ.ಎಚ್.ರಾಯಪ್ಪ, ಪ್ರೊ. ಸಿದ್ಧಾನಂದ ಮತ್ತಿತರರೂ ಸಹ ಭಾಗವಹಿಸಿದ್ದರು. ಐಸೆಕ್‌ನ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಡಾ. ಎಂ.ಲಿಂಗರಾಜುರವರು ಎಸ್‌ಎಸ್‌ಟಿಎಸ್‌ಎಸ್ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

## ಅಂತರ್‍ರಾಷ್ಟ್ರೀಯ ಕಾರ್ಯಾಗಾರ – ಭಾರತದಲ್ಲಿ ಆಹಾರ ಭದ್ರತೆ; ಹವಾಮಾನ ಬದಲಾವಣೆ, ಆರ್ಥಿಕತೆ, ರಾಜಕೀಯ ಹಾಗೂ ವ್ಯಾಪಾರ ವಹಿವಾಟುಗಳ ನಡುವಿನ ಸಂವಹನೆ (ಎಫ್‌ಓಡಿಎಸ್‌ಇಸಿ)

ಮೇಲಿನ ವಿಷಯದ ಮುಖ್ಯ ಯೋಜನೆಯ ಅಂಗವಾಗಿ ನಾರ್ವೆ ದೇಶದ ರಾಷ್ಟ್ರೀಯ ಬಳಕೆದಾರ ಸಂಶೋಧನಾ ಸಂಸ್ಥೆಯು (ಎಸ್‌ಐಎಫ್‌ಓ) ಐಸೆಕ್‌ನ ಎಡಿಆರ್‌ಟಿಸಿ ಕೇಂದ್ರಕ್ಕೆ ಉಪ ಯೋಜನೆಯೊಂದನ್ನು ವಹಿಸಿತ್ತು. ಎಫ್‌ಓಡಿಎಸ್‌ಇಸಿ ತಂಡದ ವ್ಯಾಪ್ತಿಯಲ್ಲಿ ಅಂತರ್‍ರಾಷ್ಟ್ರೀಯ ಆಹಾರ ಕಾರ್ಯನೀತಿ ಸಂಶೋಧನಾ ಸಂಸ್ಥೆ (ಭಾರತ), ರಾಷ್ಟ್ರೀಯ ಬಳಕೆದಾರರ ಸಂಶೋಧನಾ ಸಂಸ್ಥೆ (ಎಸ್‌ಐಎಫ್‌ಓ), ನಾರ್ವೆ ಹಾಗೂ ಅಂತರ್‍ರಾಷ್ಟ್ರೀಯ ವ್ಯವಹಾರಗಳ ನಾರ್ವೆಜಿಯನ್ ಸಂಸ್ಥೆ (ಎನ್‌ಯುಪಿಐ, ನಾರ್ವೆ)ಗಳು ಒಳಗೊಂಡಿವೆ.

ಈ ಉಪಯೋಜನೆಯ ಅಂಗವಾಗಿ ೨೦೧೬ರ ಜನವರಿ ೧೯ರಂದು ಐಸೆಕ್‌ನಲ್ಲಿ ಅಂತರ್‍ರಾಷ್ಟ್ರೀಯ ಕಾರ್ಯಾಗಾರವೊಂದನ್ನು ಎಸ್‌ಐಎಫ್‌ಓ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಾಗಾರದಲ್ಲಿ ಎಫ್‌ಓಡಿಎಸ್‌ಇಸಿ ಯೋಜನೆಯ ಪ್ರಗತಿಯನ್ನು ಚರ್ಚಿಸಲಾಯಿತು ಹಾಗೂ ಸಹಭಾಗಿ



ಸಂಸ್ಥೆಗಳ ಅಂದರೆ ಓಸ್ಲೋ ವಿಶ್ವವಿದ್ಯಾಲಯದ ಎನ್‌ಯುಪಿಐ, ಕಟ್ಸ್ ಇಂಟರ್‌ನ್ಯಾಷನಲ್, ಎಸ್‌ಐಎಫ್‌ಓ ಹಾಗೂ ಐಸೆಕ್ ಸಂಸ್ಥೆಗಳ ಪ್ರತಿನಿಧಿಗಳು ಯೋಜನೆಯ ಗುರಿಗೆ ಸಂಬಂಧಿಸಿದಂತೆ ಸಿದ್ಧಪಡಿಸಿಕೊಂಡಿದ್ದ ಸಂಶೋಧನಾ ಲೇಖನಗಳನ್ನು ಮಂಡಿಸಿದರು. ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆಯನ್ನು ಐಸೆಕ್‌ನ ಪ್ರಭಾರ ನಿರ್ದೇಶಕರಾಗಿದ್ದ ಪ್ರೊ. ಕೆ.ಎಸ್.ಜೇಮ್ಸ್‌ರವರು ವಹಿಸಿದ್ದರು. ತಾಂತ್ರಿಕ ಅಧಿವೇಶನಗಳ ಅಧ್ಯಕ್ಷತೆಯನ್ನು ಪ್ರೊ. ಪರಮೋದ್ ಕುಮಾರ್ ಹಾಗೂ ಪ್ರೊ. ಪಿ.ಜಿ.ಚೆಂಗಪ್ಪರವರು ವಹಿಸಿದ್ದರು.

ಮೊದಲ ತಾಂತ್ರಿಕ ಅಧಿವೇಶನದಲ್ಲಿ ಕೆಳಕಂಡ ಸಂಶೋಧನಾ ನಿರೂಪಣೆಗಳನ್ನು ಮಾಡಲಾಯಿತು: (೧) ಎನ್‌ಯುಪಿಐನ ಪ್ರೊಫೆಸರ್ ಆರ್ನಿ ಮೆಲ್ಚಿಯೋರ್‌ರವರು "ಭಾರತದಲ್ಲಿ ಆಹಾರದ ಬೆಲೆಗಳು: ಅಂತರ ರಾಜ್ಯ ಬೆಲೆ ಏರಿಳಿತ ಮತ್ತು ಆಂತರಿಕ ವ್ಯಾಪಾರ ವಹಿವಾಟು" ವಿಷಯದ ಬಗ್ಗೆ ಮಾತನಾಡಿದರು; (೨) ಡಾ. ಉನ್ನಿ ಕಜನ್ಸ್ಟ್ ರವರು (ಎಸ್‌ಐಎಫ್‌ಓ) "ಬಿಹಾರದಲ್ಲಿ ಕೌಟುಂಬಿಕ ಆಹಾರ ಭದ್ರತೆ" ವಿಷಯದ ಬಗ್ಗೆ ಮಾತನಾಡಿದರು, (೩) ಡಾ. ಪಿ.ಜಿ.ಚೆಂಗಪ್ಪನವರು "ಭಾರತದಲ್ಲಿ ಆಹಾರ ಭದ್ರತಾ ಅಧಿನಿಯಮದಿಂದಾದ ಪರಿಣಾಮಗಳು" ಎಂಬ ವಿಷಯದ ಬಗ್ಗೆ ನಿರೂಪಣೆ ಮಾಡಿದರು. ಎರಡನೆಯ ತಾಂತ್ರಿಕ ಅಧಿವೇಶನದಲ್ಲಿ ಡಾ. ಪಿ.ತಿಪ್ಪಯ್ಯ ಮತ್ತು ಡಾ. ಎ.ವಿ.ಮಂಜುನಾಥರವರು "ಬೆಂಗಳೂರಿನ ಕೊಳಚೆ ಪ್ರದೇಶಗಳ ಮೇಲ್ನೋಟ" ಎಂಬ ವಿಷಯದ ಬಗ್ಗೆಯೂ, ಕಟ್ಸ್ ಇಂಟರ್‌ನ್ಯಾಷನಲ್‌ನ ಡಾ. ವೀಣಾ ವಿದ್ಯಾಧರನ್ ರವರು "ಬಿಹಾರದಲ್ಲಿ ಕೌಟುಂಬಿಕ ಆಹಾರ ಭದ್ರತೆ" ಎಂಬ ವಿಷಯದ ಬಗ್ಗೆಯೂ ಮತ್ತು ಓಸ್ಲೋ ವಿಶ್ವವಿದ್ಯಾಲಯದ ಶ್ರೀಮತಿ ಲೀಸೆ ಬಿಜೆಕ್ಕೆರವರು "ವಲಸೆ ಬಂದಿರುವ ನಗರ ಜನಸಂಖ್ಯೆಯ ಆಹಾರ ಭದ್ರತೆ" ಎಂಬ ವಿಷಯದ ಬಗ್ಗೆಯೂ ಮಾತನಾಡಿದರು. ಕಾರ್ಯಾಗಾರವನ್ನು ಎಡಿಆರ್‌ಟಿಸಿ ಕೇಂದ್ರದ ಪ್ರೊ. ಪಿ.ಜಿ.ಚೆಂಗಪ್ಪ ಮತ್ತು ಡಾ. ಎ.ವಿ.ಮಂಜುನಾಥ ಅವರು ಏರ್ಪಡಿಸಿದ್ದರು.

### ಐಸೆಕ್ ಸಂಸ್ಥಾಪಕರ ದಿನಾಚರಣೆ

ಸಂಸ್ಥೆಯ ಸಂಸ್ಥಾಪಕರ ದಿನಾಚರಣೆಯನ್ನು ೨೦೧೬ರ ಜನವರಿ ೨೦ರಂದು ಆಚರಿಸಲಾಯಿತು. ಆಡಳಿತ ಮಂಡಳಿಯ ಮುಖ್ಯಸ್ಥರಾದ ಡಾ. ಎ. ರವೀಂದ್ರ ಮತ್ತು ಪ್ರಭಾರ ನಿರ್ದೇಶಕರಾದ ಪ್ರೊ. ಕೆ.ಎಸ್. ಜೇಮ್ಸ್ ರವರು ಡಾ. ವಿ.ಕೆ.ಆರ್.ವಿ. ರಾವ್ ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ನಂತರ ಪಿಎಚ್‌ಡಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗವು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಆ ಮೊದಲೇ ನಡೆಸಿದ್ದ ಕ್ರೀಡಾ ಪಂದ್ಯಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ದಿನಾಚರಣೆಯನ್ನು ಸ್ಮರಣೀಯವಾಗಿಸಲು ಡಾ. ವಿ.ಕೆ.ಆರ್.ವಿ. ರಾವ್ ಸ್ಮರಣಾರ್ಥ ಉಪನ್ಯಾಸವನ್ನೂ ಏರ್ಪಡಿಸಲಾಗಿತ್ತು. ನವದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕರಾದ ಪ್ರೊ. ಅಮಿತ್ ಭಾಧುರಿ ರವರು "ರಾಷ್ಟ್ರೀಯತೆ ಮತ್ತು ಭಾರತದ ಆರ್ಥಿಕ ಅಭಿವೃದ್ಧಿ" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಡಾ. ಡಿ.ಎಂ.ನಂಜುಂಡಪ್ಪ ದತ್ತಿ ಬಹುಮಾನಗಳನ್ನು ೨೦೧೫–೧೬ ಸಾಲಿನಲ್ಲಿ ಪಿಎಚ್‌ಡಿ ವ್ಯಾಸಂಗದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಶ್ರೀಮತಿ ಅನೀಷಾ ಚಿಟಗುಪ್ಪಿ (ಅರ್ಥಶಾಸ್ತ್ರ) ಮತ್ತು ಶ್ರೀಮತಿ ವಿಜಿತಾ ರಾಜನ್ (ಅರ್ಥಶಾಸ್ತ್ರದ ಹೊರತಾಗಿ) ಎಂಬ ವಿದ್ಯಾರ್ಥಿಗಳಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಐಸೆಕ್ ಅಧ್ಯಾಪಕ ವೃಂದ ಬರೆದ ಅಥವಾ ಸಹ ಗ್ರಂಥಕರ್ತೃವಾಗಿದ್ದ ಐದು ಗ್ರಂಥಗಳನ್ನು ಮತ್ತು ೧೧ ಐಸೆಕ್ ನೀಳ ಲೇಖನಗಳನ್ನೂ ಬಿಡುಗಡೆ ಮಾಡಲಾಯಿತು.

ರೂಢಿಯಲ್ಲಿರುವಂತೆ ಸಂಸ್ಥೆಯಲ್ಲಿ ೨೫ ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ ಅಧ್ಯಾಪಕ ವೃಂದ ಮತ್ತು ಸಿಬ್ಬಂದಿಯನ್ನು ಸಂಸ್ಥಾಪಕರ ದಿನಾಚರಣೆಯಂದು ಸನ್ಮಾನಿಸಲಾಯಿತು. ಅವರೆಂದರೆ (೧) ಡಾ. ಎನ್. ಶಿವಣ್ಣ, ಅಪ್ರಧಾನ ಪ್ರಾಧ್ಯಾಪಕರು, ಸಿಪಿಐಜಿಡಿ, (೨) ಡಾ. ಕೆ. ಗಾಯಿತ್ರಿ, ಸಹ ಪ್ರಾಧ್ಯಾಪಕರು, ಸಿಇಎಸ್‌ಪಿ, (೩) ಶ್ರೀ ಬಿ.ಕೆ. ಜಗದೀಶ್, ಸಹ ಕುಲಸಚಿವರು (ಆಸ್ತಿಪಾಸ್ತಿ ಮತ್ತು ಉಗ್ರಾಣ), (೪) ಶ್ರೀಮತಿ ಬಿ. ಅಖಿಲ, ಹಿರಿಯ ಆಪ್ತ ಸಹಾಯಕರು, ಸಿಇಇಎನ್‌ಆರ್.

ಐಸೆಕ್‌ನ ಆಡಳಿತ ಮಂಡಳಿಯ ಮುಖ್ಯಸ್ಥರಾದ ಡಾ. ಎ. ರವೀಂದ್ರ ರವರು ಅಧ್ಯಕ್ಷೀಯ ಅನಿಸಿಕೆಗಳನ್ನು ನಿರೂಪಿಸಿದರು ಮತ್ತು ವಂದನಾರ್ಪಣೆಯನ್ನು ಕುಲಸಚಿವರಾದ ಪ್ರೊ. ಮನೋಹರ್ ಯಾದವ್ ಅವರು ಮಾಡಿದರು.

### ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧಿಕಾರಿಗಳಿಗೆ ಎರಡು ದಿವಸಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ

ಸಾಮರ್ಥ್ಯದ ಅಭಿವೃದ್ಧಿಯು ವ್ಯಕ್ತಿಗಳು, ವೃತ್ತಿಪರರು ಹಾಗೂ ವೃತ್ತಿನಿರತರನ್ನು ಹೊಣೆಗಾರಿಕೆಯಿಂದ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಅಗತ್ಯವಾದ ಕೌಶಲ್ಯ ನೀಡುವ ಮೂಲಕ ಹಾಗೂ ಮಾಹಿತಿ ಮತ್ತು ತಿಳುವಳಿಕೆಯನ್ನು ದೊರಕಿಸಿಕೊಡಲು ನಡೆಸುವ ಕಾರ್ಯ

ವಿಧಾನವಾಗಿದೆ. ಈ ಹಿನ್ನೆಲೆಯನ್ನಿಟ್ಟುಕೊಂಡು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ (ಡಿಬಿಸಿಡಿಸಿ) ಅಧಿಕಾರಿಗಳಿಗೆ ೨೦೧೬ರ ಫೆಬ್ರವರಿ ೧ ಮತ್ತು ೨ ಗಳಂದು ಸಂಸ್ಥೆಯಲ್ಲಿ ಎರಡು ದಿವಸಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮೂಲಭೂತ ಅಂಶಗಳಾದ ಕಾರ್ಯಕ್ರಮಗಳನ್ನು ರೂಪಿಸುವಿಕೆ ಮತ್ತು ಅನುಷ್ಠಾನಗೊಳಿಸುವಿಕೆಯ ಬಗ್ಗೆ ಅಧಿಕಾರಿಗಳಿಗೆ ಪರಿಚಯಿಸಲಾಯಿತು. ನಂತರ ನಿಗಮದ ಕಾರ್ಯಕ್ರಮಗಳನ್ನು ರೂಪಿಸುವಿಕೆ ಮತ್ತು ಅನುಷ್ಠಾನಗೊಳಿಸುವಿಕೆಯ ಬಗ್ಗೆ ಹೇಳಿಕೊಡಲಾಯಿತು. ಅವರುಗಳ ಸಂಘಟನಾ ಮತ್ತು ಕಾರ್ಯನಿರ್ವಹಣಾ ಕೌಶಲ್ಯಗಳನ್ನು ಮುಂದಾಳತ್ವ, ಯೋಜಿಸುವಿಕೆ, ಹೊಂದಾಣಿಕೆ, ಜಾಲ ಹೆಣೆಯುವಿಕೆ, ಒತ್ತಡಕ್ಕೆ ಸಂಬಂಧಿಸಿದ ಅಂಶಗಳನ್ನು ಪರಿಹರಿಸುವಿಕೆ ಇತ್ಯಾದಿಗಳಿಗೆ ಅನುಕೂಲವಾಗುವಂತೆ ಹೆಚ್ಚಿಸಿಕೊಳ್ಳಲು ತರಬೇತಿ ನೀಡಲಾಯಿತು. ನಿಗಮದ ಎಲ್ಲ ೩೦ ಜಿಲ್ಲೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಡಿಬಿಸಿಡಿಸಿ ಯ ಅಧ್ಯಕ್ಷರಾದ ಶ್ರೀ ರಾಮಚಂದ್ರಪ್ಪನವರು ಉದ್ಘಾಟಿಸಿದರು. ಐಸೆಕ್‌ನ ಪ್ರಭಾರ ನಿರ್ದೇಶಕರಾದ ಪ್ರೊ. ಕೆ.ಎಸ್. ಜೇಮ್ಸ್ ರವರು ಮುಖ್ಯ ಅತಿಥಿಗಳಾಗಿದ್ದರು. ಸಭೆಯನ್ನುದ್ದೇಶಿಸಿ ಡಿಬಿಸಿಡಿಸಿ ಯ ಕಾರ್ಯ ನಿರ್ವಹಣಾ ನಿರ್ದೇಶಕರಾದ ಡಾ. ಎಂ.ಆರ್. ಏಕಾಂತಪ್ಪನವರು ಮಾತನಾಡಿದರು. ಸಮಾರೋಪ ಸಮಾರಂಭದಲ್ಲಿ ಡಾ. ಎಂ.ಆರ್. ಏಕಾಂತಪ್ಪನವರು ಹಾಗೂ ಐಸೆಕ್‌ನ ಕುಲಸಚಿವರಾದ ಪ್ರೊ. ಮನೋಹರ್ ಎಸ್. ಯಾದವ್‌ರವರು ಸಭಿಕರನ್ನುದ್ದೇಶಿಸಿ ಭಾಷಣ ಮಾಡಿದರು. ಈ ಕಾರ್ಯಕ್ರಮವನ್ನು ಪ್ರೊ. ಮನೋಹರ್ ಎಸ್. ಯಾದವ್ ಮತ್ತು ಐಸೆಕ್‌ನ ಅಪ್ರಧಾನ ಪ್ರೊಫೆಸರ್ ಡಾ. ಎನ್. ಶಿವಣ್ಣರವರು ಸಂಯೋಜಿಸಿದ್ದರು.

## ಗ್ರಾಮೀಣ ಭಾರತದಲ್ಲಿ ಕೃಷಿ ಮತ್ತು ಕೃಷಿಯೇತರ ವಲಯಗಳಲ್ಲಿನ ಸಂಪರ್ಕದ ನಕ್ಷೆ ತಯಾರಿಸುವಿಕೆಯ ಬಗೆಗಿನ ಕಾರ್ಯಾಗಾರ

ಐಸೆಕ್‌ನ ಸಿಇಎಸ್‌ಪಿ ಕೇಂದ್ರವು ೨೦೧೬ರ ಫೆಬ್ರವರಿ ೫ರಂದು ಮೇಲಿನ ವಿಷಯದ ಬಗ್ಗೆ ಒಂದು ಕಾರ್ಯಾಗಾರವನ್ನು ಏರ್ಪಡಿಸಿತ್ತು. ಪ್ರಭಾರ ನಿರ್ದೇಶಕರಾದ ಪ್ರೊ. ಕೆ.ಎಸ್. ಜೇಮ್ಸ್‌ರವರ ಸ್ವಾಗತ ಭಾಷಣದ ನಂತರ ಸಿಇಎಸ್‌ಪಿ ಕೇಂದ್ರದ ಪ್ರಾಧ್ಯಾಪಕರಾದ ಮೀನಾಕ್ಷಿ ರಾಜೀವ್‌ರವರು ವಿಷಯದ ಬಗ್ಗೆ ಸಂಕ್ಷಿಪ್ತ ಮೇಲ್ನೋಟವನ್ನು ನೀಡುವ ಮೂಲಕ ಚರ್ಚೆಯನ್ನು ಪ್ರಾರಂಭಿಸಿದರು. ನಂತರ ಸಂತ ಜೋಸೆಫರ ಮಹಾವಿದ್ಯಾಲಯದ ಡಾ.ಮನೋಜಿತ್ ಭಟ್ಟಾಚಾರ್ಜಿಯವರು ಉಪ ದತ್ತಾಂಶ ವಿಶ್ಲೇಷಣೆಯಿಂದ ದೊರೆತ ಫಲಿತಾಂಶಗಳ ವಿವರವಾದ ನಿರೂಪಣೆಯನ್ನು ಮಾಡಿದರು. ಶ್ರೀ ದೇವರಾಜ ಜಿ.ರವರು ಮತ್ತು ಪ್ರೊ. ಮೀನಾಕ್ಷಿ ರಾಜೀವ್‌ರವರು ಕ್ರಮವಾಗಿ ಕರ್ನಾಟಕ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಕ್ಷೇತ್ರ ಅನುಭವದ ಆಧಾರದ ಮೇಲೆ ತಮ್ಮ ಫಲಿತಾಂಶಗಳನ್ನು ಮತ್ತು ಅನಿಸಿಕೆಗಳನ್ನು ನಿರೂಪಿಸಿದರು. ದೆಹಲಿಯ ದಕ್ಷಿಣ ಏಷ್ಯಾ ವಿಶ್ವವಿದ್ಯಾಲಯದ ಪ್ರೊ. ಅನಿರ್ಬನ್ ದಾಸ್‌ಗುಪ್ತರವರು ಮತ್ತು ವಿಶ್ವಭಾರತಿ ವಿಶ್ವವಿದ್ಯಾಲಯದ ಪ್ರೊ. ಸೌಮ್ಯ ಚಕ್ರಬರ್ತಿಯವರು ಈ ಬಗ್ಗೆ ಟೀಕೆಗಳು, ಸಲಹೆಗಳು ಹಾಗೂ ಸಂಶೋಧನೆಗೆ ಇರುವ ಅವಕಾಶಗಳ ಬಗ್ಗೆ ಮಾತನಾಡಿದರು. ನಂತರ ಸಂತ ಜೋಸೆಫರ ಮಹಾವಿದ್ಯಾಲಯದ ಡಾ. ಅನಿರ್ಬನ್ ಕುಂದುರವರೂ ಸಹ ವಿಷಯದ ಬಗೆಗಿನ ತಮ್ಮ ದೃಷ್ಟಿಕೋನವನ್ನು ತಿಳಿಸಿದರು.

## ಸಮಾಜ ವಿಜ್ಞಾನ ವಿಷಯಗಳಲ್ಲಿನ ಜ್ಞಾನೋತ್ಪಾದನೆಯಲ್ಲಿ ಆಗಿರುವ ಮುಂದುವರಿಕೆ: ಕಾರ್ಯವಿಧಾನಗಳು ಮತ್ತು ಪದ್ಧತಿಗಳ ಬಗ್ಗೆ ತರಬೇತಿ ಕಾರ್ಯಕ್ರಮ

ಪ್ರೌಢ ವ್ಯಾಸಂಗದಲ್ಲಿನ ಬೋಧನಾ ಕ್ರಮ ಮತ್ತು ಸಂಶೋಧನೆಯ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಕೇರಳ ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಯು ಶೈಕ್ಷಣಿಕ ರಂಗದಲ್ಲಿನ ಹೊಸ ಶೋಧನೆ ಮತ್ತು ಸಂಶೋಧನೆಗಳ ನಡುವೆ ಸಂಪರ್ಕಗಳನ್ನು ಪೋಷಿಸಲು (ಫ್ಲೇರ್) ಉಪಕ್ರಮಿಸಿದೆ. ಐಸೆಕ್ ಸಂಸ್ಥೆಯು ಈ ಉಪಕ್ರಮದನ್ವಯ ಮೇಲಿನ ವಿಷಯದ ಬಗ್ಗೆ ಕೇರಳದ ವಿಶ್ವವಿದ್ಯಾಲಯಗಳು ಮತ್ತು ಮಹಾ ವಿದ್ಯಾಲಯಗಳ ಉಪನ್ಯಾಸಕರಿಗಾಗಿ ೨೦೧೬ರ ಫೆಬ್ರವರಿ ೧೫ರಿಂದ ೨೭ರ ವರೆಗೆ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಈ ಕಾರ್ಯಕ್ರಮದ ಉದ್ದೇಶವು ಸಾಮಾಜಿಕ ಬದಲಾವಣೆ, ಸಾಮಾಜಿಕ ಕಾರ್ಯನೀತಿ ಮತ್ತು ಪದ್ಧತಿಗಳನ್ನು ಅರ್ಥ ಮಾಡಿಕೊಳ್ಳಲು ಸಮಾಜ ವಿಜ್ಞಾನ ಶಾಸ್ತ್ರಗಳು ಅನುಸರಿಸುತ್ತಿರುವ ಕಾರ್ಯವಿಧಾನಗಳಲ್ಲಿನ ಇತ್ತೀಚಿನ ಬೆಳವಣಿಗೆಯನ್ನು ಯುವ ಅಧ್ಯಾಪಕ ವೃಂದಕ್ಕೆ ಪರಿಚಯಿಸುವುದಾಗಿತ್ತು. ಜೊತೆಗೆ ಈ ಕಾರ್ಯವಿಧಾನಗಳ ಪೈಕಿ ಭಾರತದ ಸನ್ನಿವೇಶಕ್ಕೆ ಸೂಕ್ತವಾದವುಗಳ ಬಗ್ಗೆ ಅವರಿಗೆ ತಿಳಿಸುವುದಲ್ಲದೆ, ಅವರುಗಳು ಕೈಗೊಳ್ಳುವ ಸಂಶೋಧನೆಗೆ ಸೂಕ್ತವಾಗುವ ಹೊಸ ಕಾರ್ಯವಿಧಾನಗಳು ಮತ್ತು ತಾಂತ್ರಿಕತೆಗಳ ಬಗ್ಗೆ ತರಬೇತಿಯನ್ನು ನೀಡುವ ನಿರ್ದಿಷ್ಟ ಉದ್ದೇಶವೂ ಇತ್ತು.

ಈ ೧೨ ದಿವಸಗಳ ತರಬೇತಿ ಕಾರ್ಯಕ್ರಮದಿಂದ ಕೇರಳದ ೧೬ ಸಮಾಜ ವಿಜ್ಞಾನ ಉಪನ್ಯಾಸಕರು ಪ್ರಯೋಜನ ಪಡೆದುಕೊಂಡರು. ತರಬೇತಿಯು ೪೨ ಅಧಿವೇಶನಗಳನ್ನು ಹೊಂದಿತ್ತು ಮತ್ತು ವಿವಿಧ ವಿಷಯಗಳ ವ್ಯಾಪಕತೆಯನ್ನು ಹೊಂದಿತ್ತು. ವಿಶೇಷವಾದ ಗಮನವನ್ನು ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಅಭಿವೃದ್ಧಿ ಪಡಿಸಲಾಗಿರುವ ಇತ್ತೀಚಿನ ವಿವಿಧ ತಾಂತ್ರಿಕತೆಗಳು, ಪದ್ಧತಿಗಳು, ಕಾರ್ಯ ವಿಧಾನಗಳು, ಸಿದ್ಧಾಂತಗಳು, ಜ್ಞಾನೋತ್ಪಾದನೆಯಲ್ಲಿ ಆಗಿರುವ ಮುಂದುವರಿಕೆ ಇತ್ಯಾದಿಗಳ ಬಗ್ಗೆ ಕೇಂದ್ರೀಕರಿಸಲಾಗಿತ್ತು. ತರಬೇತಿಯಲ್ಲಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣ, ಜನಸಂಖ್ಯಾಶಾಸ್ತ್ರ, ಪರಿಸರಶಾಸ್ತ್ರ, ಲಿಂಗ ಪ್ರಭೇಧ ಮತ್ತು ನಿಬಿಡತೆ ಶಾಸ್ತ್ರಗಳು ಒಳಗೊಂಡಿದ್ದವು. ಭಾರತೀಯ ಸಮಾಜದಲ್ಲಿನ ಪ್ರಸಕ್ತ ಕಳಕಳಿಗಳು ಹಾಗೂ ಕಾರ್ಯನೀತಿಯ ಆಜ್ಞಾಪಕತ್ವಗಳು, ಸೂಕ್ತ ಸಮಾಜ ವಿಜ್ಞಾನ ಸಿದ್ಧಾಂತ ಮತ್ತು ಸಂಶೋಧನೆಗಳೊಡನೆ ಸಂಪರ್ಕ ಇತ್ಯಾದಿ ವಿಷಯಗಳನ್ನು



ತರಬೇತಿಗೆ ಆರಿಸಿಕೊಳ್ಳಲಾಗಿತ್ತು. ಕಾರ್ಯಕ್ರಮವು ಸಂವಹನಾತ್ಮಕ ಸ್ವರೂಪವುಳ್ಳದ್ದಾಗಿದ್ದು, ತಜ್ಞರಿಂದ ಉಪನ್ಯಾಸಗಳು, ಗುಂಪು ಚರ್ಚೆಗಳು, ಶಿಕ್ಷಣಾರ್ಥಿಗಳಿಂದ ನಿರೂಪಣೆಗಳು ಇತ್ಯಾದಿಗಳಿಂದ ಕೂಡಿತ್ತು. ಎಸ್‌ಟಿಎಟಿಎ ಮತ್ತು ಎಸ್‌ಪಿಎಸ್‌ಎಸ್ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ದತ್ತಾಂಶ ವಿಶ್ಲೇಷಣೆ ಮಾಡುವಂತಹ ಪ್ರಾಯೋಗಿಕ ಅಧಿವೇಶನಗಳೂ ಸಹ ಇದ್ದವು. ತರಬೇತಿ ಕಾರ್ಯಕ್ರಮದ ಕಡೆಯ ದಿವಸ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಶಿಕ್ಷಣಾರ್ಥಿಗಳು ಆಯ್ದ ತಜ್ಞರ ಸಮ್ಮುಖದಲ್ಲಿ ತಮ್ಮ ತಮ್ಮ ಸಿದ್ಧಪಡಿಸಿದ ಲೇಖನಗಳನ್ನು ನಿರೂಪಿಸಿದರು. ಕಾರ್ಯಕ್ರಮವನ್ನು ಡಾ. ಸೊಬಿನ್ ಜಾರ್ಜ್ ಮತ್ತು ಡಾ. ಎಂ. ಲಿಂಗರಾಜು ಅವರು ಸಂಯೋಜಿಸಿದ್ದರು.

## ಎರಡು ದಿವಸಗಳ ರಾಷ್ಟ್ರೀಯ ಕಾರ್ಯಾಗಾರ ಹಾಗೂ ತರಬೇತಿ ಕಾರ್ಯಕ್ರಮ – ಪುನರ್ ನವೀಕರಿಸಬಲ್ಲ ಇಂಧನ – ಕಾನೂನು, ಕಾರ್ಯನೀತಿ ಹಾಗೂ ಹವಾಮಾನ ಬದಲಾವಣೆ: ಭಾರತೀಯ ದೃಷ್ಟಿಕೋನ

ಐಸೆಕ್‌ನ ಪರಿಸರ ಅರ್ಥಶಾಸ್ತ್ರ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೇಂದ್ರವು (ಸಿಇಇಎನ್‌ಆರ್) ಸುಸ್ಥಿರ ಅಭಿವೃದ್ಧಿ ಕೇಂದ್ರ (ಸಿಎಸ್‌ಡಿ) ದೊಡಗೂಡಿ ಭಾರತ ಸರ್ಕಾರದ ಹೊಸ ಹಾಗೂ ಪುನರ್ ನವೀಕರಿಸಬಲ್ಲ ಇಂಧನ ಸಚಿವಾಲಯದ ಸಹಯೋಗದಲ್ಲಿ ಈ ಕಾರ್ಯಾಗಾರವನ್ನು ೨೦೧೬ರ ಫೆಬ್ರವರಿ ೨೬ ಮತ್ತು ೨೭ಗಳಂದು ಏರ್ಪಡಿಸಿತ್ತು. ಈ ಕಾರ್ಯಾಗಾರದಲ್ಲಿ ಭಾರತದಾದ್ಯಂತ ಬಂದ ೩೦ಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗವಹಿಸಿದ್ದರು. ಈ ಕ್ಷೇತ್ರದ ತಜ್ಞರನ್ನು ಉಪನ್ಯಾಸಕಾರರಾಗಿ ಆಹ್ವಾನಿಸಲಾಗಿತ್ತು. ಇಂಧನ ಕ್ಷೇತ್ರದಲ್ಲಿ ಕಾರ್ಯನಿರತರಾಗಿರುವ ಕೆಲವು ಯುವ ಸಂಶೋಧನಾ ವಿದ್ವಾಂಸರು ತಮ್ಮ ಲೇಖನಗಳನ್ನು ನಿರೂಪಿಸಿದರು.

ಕಾರ್ಯಾಗಾರವು ಐಸೆಕ್‌ನ ಆಡಳಿತ ಮಂಡಳಿಯ ಮುಖ್ಯಸ್ಥರಿಂದ ಉದ್ಘಾಟಿಸಲ್ಪಟ್ಟಿತು ಹಾಗೂ ಪ್ರಭಾರ ನಿರ್ದೇಶಕರಾದ ಪ್ರೊ. ಕೆ.ಎಸ್. ಜೇಮ್ಸ್‌ರವರು ಸ್ವಾಗತ ಭಾಷಣವನ್ನು ಮಾಡಿದರು. ಸಿಎಸ್‌ಡಿ ಕೇಂದ್ರವು ಪ್ರಾರಂಭವಾದಾಗಿನಿಂದ ಮಾಡಿರುವ ಕೆಲಸ ಕಾರ್ಯಗಳ ಬಗ್ಗೆ ಸಿಎಸ್‌ಡಿಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಆರ್. ಶ್ರೀನಿವಾಸ್‌ರವರು ತಮ್ಮ ಪ್ರಾರಂಭಿಕ ಅನಿಸಿಕೆಗಳಲ್ಲಿ ಬೆಳಕು ಚೆಲ್ಲಿದರು. ಡಾ. ಸುನಿಲ್ ನೌಟಿಯಾಲ್‌ರವರು ಸಿಇಇಎನ್‌ಆರ್ ಕೇಂದ್ರದ ಬಗ್ಗೆ ಒಂದು ಮೇಲ್ನೋಟವನ್ನು ಬೀರಿದರು ಮತ್ತು ಕೇಂದ್ರವು ಕಾಲಾನುಕ್ರಮದಲ್ಲಿ ನಡೆಸಿರುವ ನಿರ್ಣಾಯಕ ಸಂಶೋಧನಾ ಕಾರ್ಯಗಳ ಬಗ್ಗೆ ಒತ್ತು ನೀಡಿದರು.

ಈ ಕಾರ್ಯಾಗಾರ ಹಾಗೂ ತರಬೇತಿ ಕಾರ್ಯಕ್ರಮದಲ್ಲಿ ಇಂಧನ ಕಾನೂನು ಮತ್ತು ಪರಿಸರ ಬದಲಾವಣೆಯ ಹಲವಾರು ಅಂಶಗಳ ಬಗ್ಗೆ ಬಹಳಷ್ಟು ವಿಖ್ಯಾತ ಪ್ರವಚನಕಾರರು ನಿರೂಪಣೆಗಳನ್ನು ಮಾಡಿದರು. ಸಿಎಸ್‌ಡಿ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಆರ್. ಶ್ರೀನಿವಾಸ್‌ರವರು ತಂತ್ರಜ್ಞಾನದ ಅಭಿವೃದ್ಧಿ ಮತ್ತು ವರ್ಗಾವಣೆಯ ಬಗ್ಗೆ ಹಾಗೂ ಬದಲಾವಣಾ ಕ್ರಮದ ಅಗತ್ಯತೆಗಳನ್ನು ಪೂರೈಸುವಲ್ಲಿ ಅದರ ಪಾತ್ರದ ಬಗ್ಗೆ ಬೆಳಕು ಚೆಲ್ಲಿದರು. ಇಂಧನ ತಜ್ಞರಾದ ಶ್ರೀ ಯು.ಎಚ್. ಸುಬ್ರಮಣ್ಯರವರು ಭಾರತದಲ್ಲಿನ ಇಂಧನ ಕಾನೂನಿನ ನಿಯಂತ್ರಣಾ ಚೌಕಟ್ಟಿನ ಬಗ್ಗೆ ಆಳವಾದ ನಿರೂಪಣೆಯನ್ನು ಮಾಡಿದರು.

ನಂತರ ಹವಾಮಾನ ಬದಲಾವಣೆ, ಪರಿಸರ, ಇಂಧನ ಅಭಿವೃದ್ಧಿ ಮತ್ತು ಭದ್ರತೆಯ ಅಗತ್ಯತೆಗಳ ನಡುವಿನ ಪರಸ್ಪರ ಸಂಪರ್ಕವನ್ನು ಪ್ರತಿಪಾದಿಸುವ ಕೆಲವು ನಿರೂಪಣೆಗಳನ್ನು ತಜ್ಞರು ಮಾಡಿದರು. ಐಸೆಕ್, ಐಐಎಸ್‌ಟಿ ಮತ್ತು ಸಿಎಸ್‌ಐಆರ್ ಮುಂತಾದ ಸಂಸ್ಥೆಗಳಿಂದ ಬಂದ ಪ್ರಾಧ್ಯಾಪಕರು, ಈ ನಿರೂಪಣೆಗಳನ್ನು ಮಾಡಿದರು.

ಡಾ. ಸುನಿಲ್ ನೌಟಿಯಾಲ್‌ರವರು ಜೈವಿಕ ಇಂಧನಕ್ಕಾಗಿ ಸೌದೆಯನ್ನು ಬಳಸುವುದನ್ನು ತಪ್ಪಿಸಲು ಹಿಮಾಲಯದ ದೂರದ ಗ್ರಾಮಗಳಲ್ಲಿ ಎಲ್‌ಪಿಜಿಯನ್ನು ಬಳಸಿದರೆ ಆಗುವ ಸಕಾರಾತ್ಮಕ ಪರಿಣಾಮವನ್ನು ನಿರೂಪಿಸಿದರು. ಡಾ. ಎಂ. ಚಂದ್ರಶೇಖರನ್‌ರವರು ಬಣ್ಣ ಪ್ರತಿರೋಧಿ ಸೌರಕಣ ತಂತ್ರಜ್ಞಾನದ ಸಂಶೋಧನೆಯು ಸಿಎಸ್‌ಐಆರ್ ಸಂಸ್ಥೆಯಲ್ಲಿ ನಡೆಯುತ್ತಿದ್ದು, ಅದರ ಒಂದು ಮೇಲ್ನೋಟವನ್ನು ಒದಗಿಸಿದರು. ಐಐಎಸ್‌ಟಿ ಸಂಸ್ಥೆಯ ಡಾ. ಆರ್.ಆರ್. ನಿಡಮೂರಿಯವರು ಹವಾಮಾನ ಬದಲಾವಣೆ ಅಧ್ಯಯನಗಳಲ್ಲಿ ವಿದೂರ ಸಂವೇದನೆಯನ್ನು ತಂತ್ರಜ್ಞಾನವಾಗಿ ಬಳಸುವ ಕಾರ್ಯವಿಧಾನದ ಬಗ್ಗೆ ಮಾತನಾಡಿದರು. ಡಾ. ಪರಮೋದ್ ಕುಮಾರ್‌ರವರು ಪಂಜಾಬ್ ಸರ್ಕಾರದ ಕೃಷಿ ಕಾರ್ಯನೀತಿಯ ಬಗ್ಗೆ ಹಾಗೂ ವಾಯುಮಾಲಿನ್ಯ ನಿಯಂತ್ರಣದ ಚೌಕಟ್ಟಿನ ಬಗ್ಗೆ ಭಾಷಣ ಮಾಡಿದರು. ಎಆರ್‌ಟಿಐ ಸಂಸ್ಥೆಯ ಶ್ರೀ ಜೆಂಡೆಯವರು ಪುನರ್‌ನವೀಕರಿಸಬಲ್ಲ ಇಂಧನ ಮೂಲಗಳಿಂದ ಇಂಧನ ಉತ್ಪಾದನೆಯನ್ನು ಹೆಚ್ಚಿಸಲು ಆ ಸಂಸ್ಥೆಯು ಅಭಿವೃದ್ಧಿ ಪಡಿಸಿರುವ ತಂತ್ರಜ್ಞಾನದ ಬಗ್ಗೆ ವಿವರಿಸಿದರು.

ರಾಷ್ಟ್ರೀಯ ಕಾನೂನು ಶಾಲೆಯ ಅಧ್ಯಾಪಕ ವೃಂದದ ಸದಸ್ಯರು "ಇಂಧನ ಕಾನೂನು: ಇಂಧನ ಖರೀದಿ ಒಪ್ಪಂದಗಳು ಹಾಗೂ ಒಪ್ಪಂದದ ಅಂಶಗಳು" ಎಂಬ ವಿಷಯದ ಬಗ್ಗೆ ಹಾಗೂ ಇತ್ತೀಚೆಗೆ ಆಚರಣೆಗೆ ತಂದಿರುವ ಪುನರ್ನವೀಕರಿಸಬಲ್ಲ ಇಂಧನದ ಮಸೂದೆ (ಭಾರತ ಸರ್ಕಾರವು ಪ್ರತಿಕ್ರಿಯೆಗಾಗಿ ಮಂಡಿಸಿರುವ) ಇವುಗಳ ಬಗ್ಗೆ ವಿವರವಾದ ನಿರೂಪಣೆಯನ್ನು ಮಾಡಿದರು. ಜೊತೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜಾರಿಗೆ

ತಂದಿರುವ ವಿವಿಧ ಯೋಜನೆಗಳಿಂದ ವ್ಯಕ್ತಿಗಳು ಅಥವಾ ಗುಂಪುಗಳು ಪಡೆದುಕೊಳ್ಳಬಹುದಾದ ಅನುಕೂಲಗಳ ಬಗ್ಗೆ ಕರ್ನಾಟಕ ಪುನರ್ನವೀಕರಿಸಬಲ್ಲ ಇಂಧನ ಅಭಿವೃದ್ಧಿ ಲಿಮಿಟೆಡ್ ಸಂಸ್ಥೆಯ (ಕೆ.ಆರ್.ಇ.ಡಿ.ಎಲ್) ಶ್ರೀಮತಿ ವಿದ್ಯಾರಾಣಿಯವರೊಂದಿಗೆ ವಿವರವಾದ ಚರ್ಚೆಯನ್ನು ನಡೆಸಲಾಯಿತು.

ಮುಕ್ತಾಯ ಅಧಿವೇಶನದಲ್ಲಿ ೨೧ನೆಯ ಭಾಗೀದಾರರ ಸಮಾವೇಶದ ಬಗ್ಗೆ (ಸಿಓಪಿ ೨೧) ಆಳವಾದ ಚರ್ಚೆ ನಡೆಯಿತು. ಇದರಲ್ಲಿ ಹವಾಮಾನ ಬದಲಾವಣೆ ಕುರಿತಾದ ವಿಷಯವು ಪ್ರಧಾನವಾಗಿದ್ದು ಸಿಓಪಿ ೨೧ ಸಮಾವೇಶದ ನಡವಳಿಗಳ ಆಧಾರದ ಮೇಲೆ ಅದರಲ್ಲಿನ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳ ಬಗ್ಗೆ ವಿವಿಧ ವಿದ್ವಾಂಸರು ಬೆಳಕು ಚೆಲ್ಲಿದರು. ಈ ರಾಷ್ಟ್ರೀಯ ಕಾರ್ಯಾಗಾರವನ್ನು ಡಾ. ಸುನಿಲ್ ನೌಟಿಯಾಲ್ ಮತ್ತು ಡಾ. ಆರ್. ಶ್ರೀನಿವಾಸ್‌ರವರು ಸಂಯೋಜಿಸಿದ್ದರು.

## ಕರ್ನಾಟಕದ ನಾಲ್ಕನೆಯ ರಾಜ್ಯ ಆರ್ಥಿಕ ಆಯೋಗದ ಬಗ್ಗೆ ಚರ್ಚಾಕೂಟ

ಐಸೆಕ್ ಸಂಸ್ಥೆಯು ಕರ್ನಾಟಕ ಸರ್ಕಾರದ ನಾಲ್ಕನೆಯ ರಾಜ್ಯ ಆರ್ಥಿಕ ಆಯೋಗದ ಅನುಕೂಲಕ್ಕಾಗಿ ೨೦೧೬ರ ಮಾರ್ಚ್ ೯ ರಂದು ಅರ್ಧ ದಿವಸದ ಚರ್ಚಾಕೂಟವನ್ನು ಏರ್ಪಡಿಸಿತ್ತು.

ಆಯೋಗದ ಮುಖ್ಯಸ್ಥರಾದ ಶ್ರೀ ಸಿ.ಜಿ. ಚಿನ್ನಸ್ವಾಮಿ ಅವರು ಹಾಗೂ ಆಯೋಗದ ಇತರ ಸದಸ್ಯರು, ಡಾ. ಎಚ್. ಶಶಿಧರ್ ಮತ್ತು ಶ್ರೀ ಎಚ್.ಡಿ. ಅಮರನಾಥನ್‌ರವರು ಭಾಗವಹಿಸಿದ್ದರು. ಐಸೆಕ್ ಸಂಸ್ಥೆಯಿಂದ ಪ್ರೊ. ಅಬ್ದುಲ್ ಅಜೀಜ್, ಪ್ರೊ. ಡಿ. ರಾಜಶೇಖರ್, ಪ್ರೊ. ಮನೋಹರ್ ಎಸ್. ಯಾದವ್, ಪ್ರೊ. ಕಲಾ ಶ್ರೀಧರ್, ಡಾ. ಎಂ. ದೇವೇಂದ್ರ ಬಾಬು, ಡಾ. ಅನಿಲ್ ಕುಮಾರ್ ಮತ್ತು ಡಾ. ಎನ್. ಶಿವಣ್ಣರವರು ಚರ್ಚಾಕೂಟದಲ್ಲಿ ಭಾಗವಹಿಸಿದ್ದರು.

ಆಯೋಗವು ಐಸೆಕ್‌ನ ಅಧ್ಯಾಪಕ ವೃಂದದೊಡನೆ ಬಹಳ ವಿಸ್ತೃತ ಚರ್ಚೆಯನ್ನು ಮಾಡಿತು. ಕರ್ನಾಟಕದ ಪಿಆರ್‌ಐಗಳಲ್ಲಿ ಮತ್ತು ನಗರಸಭೆಗಳಲ್ಲಿ ಕಾಣುವಂತೆ ಆರ್ಥಿಕ ವಿಕೇಂದ್ರೀಕರಣ ವಿಧಾನವನ್ನು ಅನುಸರಿಸುವ ಕುರಿತಂತೆ ಈ ಚರ್ಚೆಯಿದ್ದಿತು. ಈ ಚರ್ಚಾಕೂಟವನ್ನು ಐಸೆಕ್‌ನ ಅಪ್ರಧಾನ ಪ್ರಾಧ್ಯಾಪಕರಾದ ಡಾ. ಎನ್. ಶಿವಣ್ಣ ಅವರು ಸಂಯೋಜಿಸಿದ್ದರು.

## ಐಸಿಎಸ್‌ಎಸ್‌ಆರ್ ಮಾರ್ಗ ಪ್ರವರ್ತನ ಕಾರ್ಯಕ್ರಮ – ಅಧ್ಯಾಪಕ ವೃಂದದ ಸದಸ್ಯರಿಗೆ ಮತ್ತು ಸಂಶೋಧನಾ ವಿದ್ವಾಂಸರಿಗೆ (ಪರಿಶಿಷ್ಟ ಪಂಗಡ ಮತ್ತು ಇನ್ನಿತರ ಅಂಚಿಗೆ ತಳ್ಳಿದ ಗುಂಪುಗಳ)

ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಪರಿಷತ್ತು (ಐಸಿಎಸ್‌ಎಸ್‌ಆರ್) ಒಂದು ವಿಶಿಷ್ಟ ಸಂಸ್ಥೆಯಾಗಿದೆ. ಈ ಸಂಸ್ಥೆಯು ಎಲ್ಲರನ್ನೂ ಒಳಗೊಳ್ಳುವ ಮಾರ್ಗ ಅನುಸರಿಸುವ ಮೂಲಕ ಸಮಾಜ ವಿಜ್ಞಾನಿಗಳ ಸಂಶೋಧನೆಯಿಂದ ಶಿಕ್ಷಣ ಮತ್ತು ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶವನ್ನು ಹೊಂದಿದೆ. ಸಮಾಜ ವಿಜ್ಞಾನಗಳಲ್ಲಿ ಉನ್ನತ ಕಲಿಕೆ ಮತ್ತು ಸಂಶೋಧನೆಗಾಗಿ ರಾಷ್ಟ್ರಮಟ್ಟದ ಸಂಸ್ಥೆಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವ ಕಾರ್ಯದ ಜೊತೆಗೆ ಈಚಿನ ದಿನಗಳಲ್ಲಿ ಸಂಸ್ಥೆಯ ಅಧ್ಯಕ್ಷರ ದೂರದೃಷ್ಟಿಯ ಫಲವಾಗಿ ದುರ್ಬಲ ಹಿನ್ನೆಲೆ ಹಾಗೂ ಸಮುದಾಯಗಳಿಂದ ಬಂದಂತಹ ಯುವ ಅಧ್ಯಾಪಕ ವೃಂದ ಹಾಗೂ ಸಂಶೋಧನಾ ವಿದ್ವಾಂಸರ ಅನುಕೂಲಕ್ಕಾಗಿಯೇ ಪ್ರತ್ಯೇಕವಾದ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಐಸೆಕ್ ಸಂಸ್ಥೆಯು ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವ ಅನುಕೂಲವನ್ನು ಹೊಂದಿದೆ. ಪ್ರಸ್ತುತ ಮಾರ್ಗ ಪ್ರವರ್ತನ ಕಾರ್ಯಕ್ರಮವೂ ಸಹ ಐಸಿಎಸ್‌ಎಸ್‌ಆರ್ ಸಂಸ್ಥೆಯು ಪುರಸ್ಕರಿಸುವ ವಿಶೇಷ ಘಟಕ (ಪಪಂ) ಯೋಜನೆಯಡಿ ರಾಜ್ಯ ಹಾಗೂದೇಶದಾದ್ಯಂತ ಇರುವ ಸಮಾಜ ವಿಜ್ಞಾನದ ಯುವ ಅಧ್ಯಾಪಕ ವೃಂದ ಮತ್ತು ಸಂಶೋಧನಾ ವಿದ್ವಾಂಸರಿಗೆ ಮೀಸಲಾಗಿದೆ. ಈ ಕಾರ್ಯಕ್ರಮಗಳು ಸಮಾಜ ವಿಜ್ಞಾನ ಸಂಶೋಧನೆ ಬಗ್ಗೆ ಶಿಕ್ಷಣಾರ್ಥಿಗಳಿಗೆ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ವಿಷಯಗಳ ಬಗ್ಗೆ ಪ್ರಖ್ಯಾತ ವಿದ್ವಾಂಸರ ಮೂಲಕ ಐಸೆಕ್ ಸಂಸ್ಥೆಯ ಒಳಗೆ ಹಾಗೂ ಹೊರಗೆ ಅನೇಕ ಪ್ರಯೋಗಗಳ ಮೂಲಕ ತರಬೇತಿಯನ್ನು ನೀಡುವ ಉದ್ದೇಶವನ್ನು ಹೊಂದಿವೆ. ಈ ಮಾರ್ಗ ಪ್ರವರ್ತನ ಕಾರ್ಯಕ್ರಮದ ಒಟ್ಟಾರೆ ಉದ್ದೇಶವು ಶಿಕ್ಷಣಾರ್ಥಿಗಳನ್ನು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಐತಿಹಾಸಿಕ ಮತ್ತು ಸಂಬಂಧಿತ ವಿಷಯಗಳಲ್ಲಿ ಸಂಶೋಧನೆಯನ್ನು ನಡೆಸಲು ಪ್ರಗತಿಪರ ಕಾರ್ಯವಿಧಾನಗಳನ್ನು ಶಿಕ್ಷಣಾರ್ಥಿಗಳಿಗೆ ಪರಿಚಯಿಸುತ್ತದೆ. ಜೊತೆಗೆ ಶಿಕ್ಷಣಾರ್ಥಿಗಳ ಮನಸ್ಸಿನಲ್ಲಿ ಸಂಶೋಧನೆ ಎಂದರೇನು, ವೈಜ್ಞಾನಿಕ ಸಂಶೋಧನೆ ಎಂದರೇನು, ಸಂಶೋಧನೆಯ ವಿನ್ಯಾಸ, ಸಂಶೋಧನೆಯ ಅಂತಿಮ ಫಲಿತಾಂಶ ಹಾಗೂ ಆ ಫಲಿತಾಂಶವು ಸಮಾಜಕ್ಕೆ ಹಾಗೂಸಾಮಾಜಿಕ ಕಾರ್ಯನೀತಿಗೆ ಯಾವ ರೀತಿಯಲ್ಲಿ ಕೊಡುಗೆಯನ್ನು ನೀಡುತ್ತದೆ ಎಂಬುದರ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡುವ ಉದ್ದೇಶ ಹೊಂದಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಂಘಟಿತ ಪ್ರಯತ್ನದಿಂದ ಶಿಕ್ಷಣಾರ್ಥಿಗಳಿಗೆ ಪ್ರಗತಿಪರ ಚಿಂತನೆ ಮತ್ತು ಪ್ರಚಲಿತ ಸಂಶೋಧನಾ ಕಾರ್ಯವಿಧಾನಗಳ ಬಗ್ಗೆ ತಿಳುವಳಿಕೆಯನ್ನು ನೀಡಲು ಯತ್ನಿಸಲಾಗಿದೆ. ಅಂದರೆ, ಈ ಮೇಲೆ ತಿಳಿಸಿದ ವಿವಿಧ ಸಮಾಜ ವಿಜ್ಞಾನಗಳ ಹಾಗೂ ಅವುಗಳ ನಡುವಿನ ಸಂಶೋಧನೆಯ ಕಾರ್ಯವಿಧಾನಗಳು ಮತ್ತು ಮಾರ್ಗಗಳ ಬಗ್ಗೆ ತಿಳಿಸಿ ಹೇಳುವ ಪ್ರಯತ್ನ ಮಾಡಲಾಗಿದೆ.

# ಐಸೆಕ್



ಈ ಮಾರ್ಗಪ್ರವರ್ತನ ಕಾರ್ಯಕ್ರಮವನ್ನು ಐಸೆಕ್ ಸಂಸ್ಥೆಯಲ್ಲಿ ನಾಲ್ಕು ದಿವಸಗಳ ಕಾಲ, ಅಂದರೆ ೨೦೧೬ರ ಮಾರ್ಚ್ ೧೪ರಿಂದ ೧೭ರ ವರೆಗೆ ನಡೆಸಲಾಯಿತು. ಕಾರ್ಯಕ್ರಮಕ್ಕೆ ೨೬ ಶಿಕ್ಷಣಾರ್ಥಿಗಳು ಪ್ರವೇಶವನ್ನು ಪಡೆದಿದ್ದರು. ಇವರುಗಳು ವಿವಿಧ ಸಮಾಜ ವಿಜ್ಞಾನ ವಿಷಯಗಳನ್ನು ಪ್ರತಿನಿಧಿಸಿದ್ದರು. ಅರ್ಥಶಾಸ್ತ್ರದ ಏಳು ಶಿಕ್ಷಣಾರ್ಥಿಗಳು, ಸಮಾಜ ಶಾಸ್ತ್ರದ ಹತ್ತು ಶಿಕ್ಷಣಾರ್ಥಿಗಳು, ರಾಜ್ಯಶಾಸ್ತ್ರದ ಮೂರು ಶಿಕ್ಷಣಾರ್ಥಿಗಳು, ಇತಿಹಾಸದ ಎರಡು ಶಿಕ್ಷಣಾರ್ಥಿಗಳು, ಶಿಕ್ಷಣ ಶಾಸ್ತ್ರದ ಒಬ್ಬ ಶಿಕ್ಷಣಾರ್ಥಿ, ಮನಶ್ಶಾಸ್ತ್ರದ ಒಬ್ಬ ಶಿಕ್ಷಣಾರ್ಥಿ, ಭೂಗೋಳ ಶಾಸ್ತ್ರದ ಒಬ್ಬ ಶಿಕ್ಷಣಾರ್ಥಿ ಹಾಗೂ ಗ್ರಂಥಾಲಯ ಶಾಸ್ತ್ರದ ಒಬ್ಬ ಶಿಕ್ಷಣಾರ್ಥಿಯು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇವರುಗಳು ತುಮಕೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ರಾಜ್ಯದ ವಿವಿಧ ಪದವಿ ಮಹಾವಿದ್ಯಾಲಯಗಳನ್ನು ಪ್ರತಿನಿಧಿಸಿದ್ದರು. ಈ ಕಾರ್ಯಕ್ರಮದ ಇನ್ನೊಂದು ವೈಶಿಷ್ಟ್ಯವೆಂದರೆ ಇದು ಕೇವಲ ನಾಲ್ಕು ದಿವಸಗಳ ಸಂಕ್ಷಿಪ್ತ ಕಾರ್ಯಕ್ರಮ ಆಗಿದ್ದುದರಿಂದ ಸಮಾಜ ವಿಜ್ಞಾನ ಸಂಶೋಧನಾ ಕಾರ್ಯವಿಧಾನಗಳ ಪ್ರಧಾನ ಅಂಶಗಳ ಬಗ್ಗೆ ಮಾತ್ರ ಬೆಳಕು ಚೆಲ್ಲಲು ಸಾಧ್ಯವಾಯಿತು. ಹೀಗಾಗಿ ಉಪನ್ಯಾಸಗಳ ವಿಷಯಗಳು ಮತ್ತು ಚರ್ಚೆಗಳು ಸಮಗ್ರವಾಗಿದ್ದವು ಮತ್ತು ಮಿತ ಸಂಖ್ಯೆಯಲ್ಲಿದ್ದವು. ಪ್ರಾಯೋಗಿಕ ಅಧಿವೇಶನಗಳು ಹಾಗೂ ಗ್ರಂಥಾಲಯ ಕಾರ್ಯವು ಇರಲಿಲ್ಲ. ಆದರೆ ಶಿಕ್ಷಣಾರ್ಥಿಗಳು ಐಸೆಕ್ ಸಂಸ್ಥೆಯ ಹಾಗೂ ಹೊರಗಿನ ಪ್ರಖ್ಯಾತ ವಿದ್ವಾಂಸರ ಪ್ರವಚನದಿಂದ ಅಪಾರ ಲಾಭವನ್ನು ಪಡೆದುಕೊಂಡರು. ಈ ಮಾರ್ಗಪ್ರವರ್ತನ ಕಾರ್ಯಕ್ರಮವನ್ನು ಐಸೆಕ್‌ನ ಸಿ.ಎಚ್.ಆರ್.ಡಿ. ಕೇಂದ್ರದ ಡಾ. ಎಂ.ಲಿಂಗರಾಜು ರವರು ಸಂಯೋಜಿಸಿದ್ದರು.

## ಸ್ವಕ್ಷೇತ್ರದ ಹೊರಗಿನ ಚಟುವಟಿಕೆಗಳು

### "ಶಿಕ್ಷಣ: ಪ್ರಾಬಲ್ಯ, ವಿಮೋಚನೆ ಮತ್ತು ಘನತೆ" ಎಂಬ ವಿಷಯದ ಮೇಲೆ ಭಾರತದ ಹೋಲಿಕೆ ಶಿಕ್ಷಣ ಸಂಘದ ಆರನೆಯ ವಾರ್ಷಿಕ ಅಂತರ್‍ರಾಷ್ಟ್ರೀಯ ಸಮಾವೇಶ

ಈ ಸಮಾವೇಶವನ್ನು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ (ಎಪಿಯು) ೨೦೧೫ರ ಡಿಸೆಂಬರ್ ೧೪ರಿಂದ ೧೬ ರವರೆಗೆ ಏರ್ಪಡಿಸಲಾಗಿತ್ತು. ಸಮಾವೇಶವನ್ನು ಏರ್ಪಡಿಸಲು ಸದರಿ ವಿಶ್ವವಿದ್ಯಾಲಯದೊಡನೆ ಐಸೆಕ್ ಸಂಸ್ಥೆಯು ಜೊತೆಗೂಡಿತ್ತು. ಡಾ. ಇಂದ್ರಜಿತ್ ಬೈರಾಗ್ಯ (ಐಸೆಕ್ ನ ಸಹಾಯಕ ಪ್ರಾಧ್ಯಾಪಕರು) ಸಮಾವೇಶವನ್ನು ನಡೆಸಲು ಎಪಿಯು ನೊಡನೆ ಜೊತೆಗೂಡಿದ್ದರು.

### "ಪರಿಸರ, ಆರ್ಥಿಕತೆ ಹಾಗೂ ಮಾನವ ಸೌಖ್ಯತೆ" ಎಂಬ ವಿಷಯದ ರಾಷ್ಟ್ರೀಯ ಸಮಾವೇಶ

ವಾತಾವರಣ, ಆರ್ಥಿಕತೆಗೆ ಜೀವಿ ಪರಿಸರದಿಂದ ದೊರೆಯುವ ಸೇವೆಗಳು ಹಾಗೂ ಮಾನವ ಸೌಖ್ಯತೆ – ಇವುಗಳು ವೈವಿಧ್ಯಮಯ, ಸಂಕೀರ್ಣ ಹಾಗೂ ಅನಿಶ್ಚಿತತೆಗಳಿಂದ ಕೂಡಿವೆ. ವಾತಾವರಣದಲ್ಲಿನ ಯಾವುದೇ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಬದಲಾವಣೆಗಳು ಅಸಹಜ ರೀತಿಯಲ್ಲಿ ಆರ್ಥಿಕತೆ ಮತ್ತು ಮಾನವ ಸೌಖ್ಯತೆಗಳನ್ನು ಬಾದಿಸಬಹುದು. ಈ ಹಿನ್ನೆಲೆಯಲ್ಲಿ ಕ್ರಿಸ್ತ ವಿಶ್ವವಿದ್ಯಾಲಯ ಹಾಗೂ ಐಸೆಕ್ ಒಟ್ಟಾಗಿ ಮೇಲಿನ ವಿಷಯದ ರಾಷ್ಟ್ರೀಯ ಸಮಾವೇಶವನ್ನು ೨೦೧೬ರ ಮಾರ್ಚ್ ೧ ಮತ್ತು ೨ ಗಳಂದು ಆಯೋಜಿಸಿದ್ದವು. ಸಮಾವೇಶವು ಐದುಮುಖ್ಯ ವಿಷಯಗಳ ಮೇಲೆ ಗಮನವನ್ನು ಕೇಂದ್ರೀಕರಿಸಿತ್ತು. ಅವೆಂದರೆ: (೧) ವಾತಾವರಣ ಮತ್ತು ಮಾನವ ಸೌಖ್ಯತೆಗೆ ಸಂಬಂಧಿಸಿದಂತಹ ಸೈದ್ಧಾಂತಿಕ ಮತ್ತು ಕಾರ್ಯಪದ್ಧತಿಗಳು, (೨) ಜೀವಿ ಪರಿಸರ ಸೇವೆಗಳು ಮತ್ತು ಮಾನವ ಸೌಖ್ಯತೆ, (೩) ಪರಿಸರ ಹಾಗೂ ಬಡತನದ ನಡುವಿನ ಸಂಪರ್ಕಗಳು, (೪) ಲಿಂಗ ಪ್ರಬೇಧ ಮತ್ತು ಪರಿಸರ, (೫) ಪರಿಸರದ ಆರ್ಥಿಕ ಅಂದಾಜು.

ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ಮದ್ರಾಸಿನ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಮಾನವ ಶಾಸ್ತ್ರ ಮತ್ತು ಸಮಾಜ ವಿಜ್ಞಾನ ವಿಭಾಗದ ಮಾಜಿ ಮುಖ್ಯಸ್ಥರಾದ ಪ್ರೊ. ಸುಧೀರ್ ಚೆಲ್ಲರಾಜನ್‌ರವರು ವಾತಾವರಣ ಬದಲಾವಣೆಯೇ ಸದ್ಯದಲ್ಲಿ ಪ್ರಪಂಚವು ನಿಜವಾಗಿ ಎದುರಿಸುತ್ತಿರುವ ಸವಾಲು ಎಂದು ಹೇಳಿದರು. ಎಲ್ಲಾ ವಲಯಗಳಲ್ಲೂ ಸಹ ಹಸಿರು ಮನೆ ಅನಿಲ ಪ್ರಸರಣೆಯನ್ನು ಸುಸ್ಥಿರ ಅಭಿವೃದ್ಧಿ ಹಾಗೂ ತಂತ್ರಜ್ಞಾನದ ಹಿಂಸ್ಥಗಿತತೆಗಳು ತಗ್ಗಿಸಬಲ್ಲವು ಎಂದೂ ಸಹ ತಿಳಿಸಿದರು. ಡಾ. ಅದ್ವೈನಾ ಕೆ.ಸಿ.ರವರು ಸ್ವಾಗತಿಸಿದರು ಮತ್ತು ಪ್ರಾರಂಭಿಕ ಪ್ರಸ್ತಾವನೆಯನ್ನು ಮಾಡಿದರು. ಕ್ರಿಸ್ತ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಫಾದರ್ ಡಾ. ಥಾಮಸ್ ಸಿ. ಮಾಥ್ಯೂರವರು ಅಧ್ಯಕ್ಷೀಯ ಭಾಷಣವನ್ನು ಮಾಡಿದರು. ಐಸೆಕ್‌ನ ಸಿಇಎಸ್‌ಪಿ ಕೇಂದ್ರದ ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರಾದ ಡಾ. ಕೃಷ್ಣ ರಾಜ್‌ರವರು ಮತ್ತು ಚೆನ್ನೈನ ಮದ್ರಾಸ್ ಆರ್ಥಿಕ ಶಾಲೆಯ ಗೌರವ ಪ್ರಾಧ್ಯಾಪಕರಾದ ಪ್ರೊ. ಮರಿಯಾ ಸಾಲೆತ್‌ರವರು ತಜ್ಞರ ಚರ್ಚಾಕೂಟದಲ್ಲಿ ಭಾಗವಹಿಸಿದ್ದರು. ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಮಾಜಿ ಪ್ರಾಧ್ಯಾಪಕರಾದ ಪ್ರೊ. ಬಿ.ಎಸ್.ಶ್ರೀಕಂಠಾರಾಧ್ಯರವರ ಸಮಾರೋಪ ಭಾಷಣದೊಂದಿಗೆ ವಿಚಾರ ಸಂಕಿರಣವು ಮುಕ್ತಾಯಗೊಂಡಿತು.

### ಕೃಷಿ–ಜೀವಿ ವೈವಿಧ್ಯತೆಯ ಸಂರಕ್ಷಣೆ, ಸಂಪನ್ಮೂಲಗಳ ಬಳಕೆ ಮತ್ತು ಜೀವಿ ಪರಿಸರ ನಿರ್ವಹಣೆಯ ಬಗ್ಗೆ ರೈತರ ಪರಸ್ಪರ ಮುಖಾಮುಖಿ ಕಾರ್ಯಾಗಾರ

ಈ ಕಾರ್ಯಾಗಾರವನ್ನು ಐಸೆಕ್‌ನ ಜೀವಿ ಪರಿಸರ ಅರ್ಥಶಾಸ್ತ್ರ ಮತ್ತು ಸ್ವಾಭಾವಿಕ ಸಂಪನ್ಮೂಲ ಕೇಂದ್ರವು (ಸಿಇಇಎನ್‌ಆರ್) ಹಾಸನದ

# ಐಸೆಕ್

ಪುಣ್ಯಭೂಮಿ ಸಂಸ್ಥೆಯ ಸಹಯೋಗದೊಡನೆ ಹಾಸನ ಜಿಲ್ಲೆಯ ಗೌರಿಪುರ ಗ್ರಾಮದಲ್ಲಿ ೨೦೧೬ರ ಮಾರ್ಚ್ ೧೧ರಂದು ಏರ್ಪಡಿಸಿತ್ತು. ಈ ಕಾರ್ಯಾಗಾರವನ್ನು ಭಾರತ ಸರ್ಕಾರದ ನವದೆಹಲಿಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ (ಡಿಎಸ್‌ಟಿ) ತಂತ್ರಜ್ಞಾನ, ಮಾಹಿತಿ ಮತ್ತು ಮುನ್ಸೂಚನೆ ನಿರ್ಧರಣೆ ಪರಿಷತ್ತು (ಟಿಐಎಫ್‌ಎಸಿ) ಪುರಸ್ಕರಿಸಿತ್ತು.

ಕಾರ್ಯಾಗಾರದ ಮುಖ್ಯ ಉದ್ದೇಶಗಳು ಈ ರೀತಿ ಇವೆ: (೧) ರೈತರ ಬದಲಾಗುತ್ತಿರುವ ಬೆಳೆ ಪದ್ಧತಿಗಳಿಗೆ ಇರುವ ಕಾರಣವನ್ನು ಸರಿಯಾಗಿ ತಿಳಿದುಕೊಳ್ಳುವುದು; (೨) ಬದಲಾಗುತ್ತಿರುವ ಬೆಳೆ ಪದ್ಧತಿಯಿಂದ ಸ್ಥಳೀಯ ಪರಿಸರದ ಮೇಲಾಗುತ್ತಿರುವ ಪರಿಣಾಮದ ಬಗ್ಗೆ ರೈತರಲ್ಲಿ ತಿಳುವಳಿಕೆ ಮೂಡಿಸುವುದು; (೩) ರೈತರ ಪರಸ್ಪರ ಮುಖಾಮುಖಿ ಸಂವಹನವನ್ನು ಪ್ರೋತ್ಸಾಹಿಸುವುದು ಮತ್ತು ಆ ಮೂಲಕ ಪರಿಸರ ಸ್ನೇಹಿ ಬೆಳೆ ಪದ್ಧತಿಗಳನ್ನು ಅನುಸರಿಸುತ್ತಿರುವ ರೈತರು ಇತರರನ್ನೂ ಅದೇ ರೀತಿ ಮಾಡುವಂತೆ ಪ್ರೇರೇಪಿಸುವ ಹಾಗೆ ಮಾಡುವುದು. ಹಾಸನ ಜಿಲ್ಲೆಯ ಒಳಗಿನ ಮತ್ತು ಹೊರಗಿನ ೩೦ಕ್ಕೂ ಹೆಚ್ಚಿನ ಗ್ರಾಮಗಳ ೧೨೦ಕ್ಕೂ ಹೆಚ್ಚಿನ ರೈತರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಭಾಗವಹಿಸಿದ ರೈತರ ಭೂ ಹಿಡುವಳಿಯ ಗಾತ್ರದಲ್ಲಿ ಬಹಳ ವ್ಯತ್ಯಾಸವಿದ್ದು, ೩ ರಿಂದ ೫ ಎಕರೆ ಹೊಂದಿರುವ ಸಣ್ಣ ರೈತರಿಂದ ಹಿಡಿದು ೧೦೦ ಎಕರೆಗಿಂತಲೂ ಹೆಚ್ಚು ಭೂ ಹಿಡುವಳಿ ಹೊಂದಿರುವ ರೈತರೂ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಪುಣ್ಯಭೂಮಿ ಸಂಸ್ಥೆಯ ಶ್ರೀ ವಿಜಯ್ ಅಂಗಡಿಯವರು ಕಾರ್ಯಾಗಾರ ನಡೆದ ಸ್ಥಳದ ಸುತ್ತಮುತ್ತಲಿನ ಜಮೀನುಗಳಿಗೆ ರೈತರನ್ನು ಕರೆದೊಯ್ದಿದ್ದರು. ಐಸೆಕ್‌ನ ಸಿಇಇಎನ್‌ಆರ್ ಕೇಂದ್ರದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಸುನಿಲ್ ನೌಟಿಯಾಲ್ ರವರು ಕಾರ್ಯಾಗಾರದಲ್ಲಿ ಭಾಗಿಯಾದವರನ್ನು ಸ್ವಾಗತಿಸಿದರು ಮತ್ತು ಯೋಜನೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ನಂತರ ಡಿಎಸ್‌ಟಿಯ ಟಿಐಎಫ್‌ಎಸಿ ಯಲ್ಲಿ ವಿಜ್ಞಾನಿಯಾಗಿರುವ ಡಾ. ಸಂಗೀತಾ ಭಕ್ಷಿಯವರು ತಮ್ಮ ಸಂಸ್ಥೆಯು ಕಾಲಾನುಕ್ರಮದಲ್ಲಿ ಕೈಗೊಂಡ ಕೆಲಸಗಳ ಮೇಲೆ ಬೆಳಕು ಚೆಲ್ಲಿದರು. ಶ್ರೀ ಎಸ್.ಕೆ.ಮಂಜುನಾಥ್‌ರವರು ಮಾತನಾಡಿ ೨೫ ವರ್ಷಗಳ ಹಿಂದೆಯೇ ರೈತರು ತಮ್ಮ ಜಮೀನಿನ ಮಣ್ಣನ್ನು ಕೆಡಿಸಿಕೊಳ್ಳುತ್ತಿದ್ದದ್ದನ್ನು ತಾವು ಗಮನಿಸಿದ್ದಾಗಿಯೂ ಹಾಗೂ ಅದರಿಂದಾಗಿ ಈಗ ಜೈವಿಕ ಕೃಷಿ ಅರಣ್ಯೀಕರಣದ ಬಗ್ಗೆ ಸಲಹೆ ನೀಡುತ್ತಿರುವುದಾಗಿಯೂ ತಿಳಿಸಿದರು. ನಿವೃತ್ತ ಐಎಫ್‌ಎಸ್ ಅಧಿಕಾರಿಯಾದ ಡಾ. ದೇವೇಂದ್ರ ಕುಮಾರ್ ಪಾಂಡೆಯವರು ಸುಸ್ಥಿರ ಅಭಿವೃದ್ಧಿಯ ಅಗತ್ಯತೆಯ ಬಗ್ಗೆ ತಿಳಿಸಿದರಲ್ಲದೆ ಹವಾಮಾನ ಬದಲಾವಣೆಯಿಂದಾಗಿ ಜೀವ ವೈವಿಧ್ಯತೆಯ ನಷ್ಟವೂ ಒಳಗೊಂಡಂತೆ ಆಗುವ ವಿವಿಧ ಪರಿಣಾಮಗಳ ಬಗ್ಗೆ ವಿವರಿಸಿದರು. ಖರಗ್‌ಪುರ್‌ನ ಐಐಟಿ ಯ ಪ್ರಾಧ್ಯಾಪಕರಾದ ಡಾ. ಪಿ.ಬಿ.ಎಸ್.ಭಡೋರಿಯಾರವರು ಭತ್ತದ ಸಾಗುವಳಿಯ ಬಗೆಗಿನ ತಮ್ಮ ಅಧ್ಯಯನದ ಬಗ್ಗೆ ತಿಳಿಸಿದರು ಹಾಗೂ ಭತ್ತದ ಹೊಸ ತಳಿಗಳು ಹೆಚ್ಚು ಇಳುವರಿಯನ್ನು ನೀಡಿದ್ದಾಗಿಯೂ ತಿಳಿಸಿದರು. ರೈತರಿಗೆ ನೆರವಾಗುವಂತಹ ಕೃಷಿಯಲ್ಲಿನ ತಾಂತ್ರಿಕ ಪ್ರಗತಿಯನ್ನು ಪ್ರೋತ್ಸಾಹಿಸಲು ಸ್ಥಳೀಯ ಲಾಭೋದ್ದೇಶವಿಲ್ಲದ ಸಂಸ್ಥೆಗಳ ನೆರವನ್ನು ತಾವು ಯಾವ ರೀತಿ ಪಡೆದುಕೊಂಡರು ಎಂಬುದನ್ನೂ ಸಭೆಗೆ ಅವರು ವಿವರಿಸಿದರು. ಕೃಷಿ ವಿಶ್ವವಿದ್ಯಾಲಯದ ಹಾಸನ ಕೇಂದ್ರದ ಡಾ. ಎ.ಬಿ.ಪಾಟೀಲರು ತೋಟಗಾರಿಕಾ ಬೆಳೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದರು ಮತ್ತು ತೋಟಗಾರಿಕೆಯ ಲಾಭಗಳನ್ನು ತಿಳಿಸಿದರು. ಕಡೆಯದಾಗಿ ಹಾಸನದ ಕೃಷಿ ಮಹಾವಿದ್ಯಾಲಯದ ಡಾ. ಬಾಲಕೃಷ್ಣಗೌಡರವರು ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಯ ಡಾ. ಬಸವರಾಜ್ ಹುಂಬರವಾಡಿಯವರು ಮಾತನಾಡಿದರು. ಇವರುಗಳು ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸಂಯೋಜನೆಯ ಮಹತ್ವವನ್ನು ಮತ್ತು ಮಾರುಕಟ್ಟೆ ಕಾರ್ಯತಂತ್ರಗಳು ಯಾವ ರೀತಿ ರೈತರ ಲಾಭದ ಪ್ರಮಾಣವನ್ನು ಹೆಚ್ಚಿಸುತ್ತವೆಂಬುದನ್ನು ವಿವರಿಸಿದರು.

ಕೊನೆಯಲ್ಲಿ ಯಾವಾಗ ರೈತರು ತಮ್ಮ ಆತಂಕಗಳನ್ನು ಮತ್ತು ಸಮಸ್ಯೆಗಳನ್ನು ತೋಡಿಕೊಂಡರೋ, ಆಗ ಭಾಗವಹಿಸಿದ್ದ ತಜ್ಞರು ಮತ್ತು ಅಧ್ಯಾಪಕ ಸಿಬ್ಬಂದಿಯು ರೈತರೊಡನೆ ಸಂವಹಿಸಿದರು. ಪ್ರಕೃತಿಗೆ ಅನುಗುಣವಾಗಿ ಕೃಷಿ ಕಾರ್ಯಗಳನ್ನು ಮಾರ್ಪಡಿಸಿಕೊಳ್ಳಬೇಕೆನ್ನುವುದನ್ನು ರೈತರು ಒಪ್ಪಿದರು. ಆದರೆ ಹೆಚ್ಚಿನ ಆರ್ಥಿಕ ಲಾಭಕ್ಕಾಗಿ ಪ್ರಕೃತಿಯನ್ನು ಮೀರುವ ದೌರ್ಬಲ್ಯಕ್ಕೆ ತಾವು ತುತ್ತಾಗುತ್ತಿರುವುದನ್ನು ತಿಳಿಸಿದರು. ಅವರ ಸಮಸ್ಯೆಗಳು ಅನೇಕವಿದ್ದವು. ಅವರುಗಳು ತಮ್ಮ ಜಮೀನುಗಳಲ್ಲಿ ಬೆಳೆದ ಗಂಧದ ಮರಗಳನ್ನು ರಕ್ಷಿಸಲೂ ಬೇಕಿತ್ತು ಹಾಗೂ ಬೆಳೆ ಬೆಳೆಯಲುಬೇಕಾದ ನೀರನ್ನು ದೊರಕಿಸಿಕೊಳ್ಳುವ ಸಮಸ್ಯೆಯನ್ನೂ ಎದುರಿಸಬೇಕಿತ್ತು. ಇದರ ಜೊತೆಗೆ ಮಣ್ಣಿನ ಫಲವತ್ತತೆ ಹೆಚ್ಚಿಸಬೇಕಿತ್ತು ಮತ್ತು ಕಾಲಾನುಕ್ರಮದಲ್ಲಿ ನಷ್ಟವಾಗುವ ಮಣ್ಣಿನ ಫಲವತ್ತತೆಯನ್ನು ಸಂರಕ್ಷಿಸಬೇಕಿತ್ತು. ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಸೂಕ್ತ ಬೆಲೆಯನ್ನು ಪಡೆಯುವ ಸಮಸ್ಯೆಯೂ ಅವರೆದುರಿಗಿತ್ತು. ಒಟ್ಟಿನಲ್ಲಿ ಈ ಕಾರ್ಯಾಗಾರದ ಮೂಲ ತಿರುಳಾಗಿದ್ದ ಬದಲಾಗುತ್ತಿರುವ ಬೆಳೆ ಪದ್ಧತಿಗಳಿಂದ ಸ್ಥಳೀಯ ಪರಿಸರದ ಮೇಲಾಗುತ್ತಿರುವ ಪರಿಣಾಮಗಳ ಬಗ್ಗೆ ರೈತರಲ್ಲಿ ಅರಿವು ಮೂಡಿಸುವುದು ಹಾಗೂ ಬೆಳೆ ಪದ್ಧತಿಯ ಬದಲಾವಣೆಗೆ ಕಾರಣಗಳನ್ನು ತಿಳಿದುಕೊಳ್ಳುವುದು – ಈ ಎರಡೂ ಅಂಶಗಳನ್ನು ಯಶಸ್ವಿಯಾಗಿ ಕಾರ್ಯಾಗಾರದಲ್ಲಿ ಸಾಧಿಸಲಾಯಿತು.

ಕಾರ್ಯಾಗಾರವನ್ನು ಐಸೆಕ್‌ನ ಸಿಇಇಎನ್‌ಆರ್ ಕೇಂದ್ರದ ಡಾ. ಸುನಿಲ್ ನೌಟಿಯಾಲ್‌ರವರು ಏರ್ಪಡಿಸಿದ್ದರು.

# ಐಸೆಕ್



## ಉಪನ್ಯಾಸಗಳು

### ಪ್ರೊ. ಎಲ್.ಎಸ್. ವೆಂಕಟರಮಣನ್ ಸ್ಮಾರಕ ಉಪನ್ಯಾಸ–೧೩

ಹದಿಮೂರನೆಯ ಪ್ರೊ. ಎಲ್.ಎಸ್. ವೆಂಕಟರಮಣನ್ ಸ್ಮಾರಕ ಉಪನ್ಯಾಸವನ್ನು ಕ್ಯಾನ್‌ಬೆರಾದ ದಿ ಆಸ್ಟ್ರೇಲಿಯನ್ ರಾಷ್ಟ್ರೀಯ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಮತ್ತು ಸರ್ಕಾರದ ಕ್ರಾಫರ್ಡ್ ಶಾಲೆಯ ಅಂತರರಾಷ್ಟ್ರೀಯ ಹಾಗೂ ಅಭಿವೃದ್ಧಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾದ ಪ್ರೊ. ಕಾಳಿಯಪ್ಪ ಕಾಳಿರಾಜನ್ ರವರು ೨೦೧೫ರ ಜೂನ್ ೧೨ ರಂದು ನೀಡಿದರು. ಅವರು "ಭಾರತದ ವ್ಯಾಪಾರ ವಹಿವಾಟು ಕೊರತೆಯನ್ನು ಭಾರತ ಮತ್ತು ಚೀನಾಗಳ ನಡುವಿನ ಮುಕ್ತ ವ್ಯಾಪಾರ ವಹಿವಾಟು ಒಪ್ಪಂದವು ತಗ್ಗಿಸಬಲ್ಲದೇ" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಪ್ರೊ. ಕಾಳಿರಾಜನ್‌ರವರು ಭಾರತ ಮತ್ತು ಚೀನಾಗಳ ನಡುವಿನ ವ್ಯಾಪಾರ ವಹಿವಾಟು ಯಾವುದೇ ಸಮರ್ಥನೆ ಇಲ್ಲದ ರೀತಿಯಲ್ಲಿ ಹೆಚ್ಚುತ್ತಿರುವುದನ್ನು ತಮ್ಮ ಉಪನ್ಯಾಸದ ಪ್ರಾರಂಭದಲ್ಲಿ ಪ್ರಸ್ತಾಪಿಸಿದರು. ವ್ಯಾಪಾರ ವಹಿವಾಟು ಹೆಚ್ಚುತ್ತಿದ್ದರೂ ಸಹ ಭಾರತದ ವ್ಯಾಪಾರ ವಹಿವಾಟಿನ ಕಂದಕ ಅಗಲವಾಗುತ್ತಿದೆ. ಈ ಬಗ್ಗೆ ಕೆಲವು ಉದ್ದಿಮೆಗಳು ಎಚ್ಚರಿಕೆಯ ಘಂಟೆಯನ್ನು ಮೊಳಗಿಸಿವೆ. ಕೆಲವು ಭಾರತೀಯ ಸಂಸದರು ಚೀನಾವನ್ನು ನ್ಯಾಯಯುತವಲ್ಲದ ವ್ಯಾಪಾರ ಪದ್ಧತಿಗಳನ್ನು ಅನುಸರಿಸುತ್ತಿರುವುದಾಗಿ ಟೀಕಿಸಿದ್ದಾರೆ. ಎರಡು ದೇಶಗಳೂ ಸಹ ತಮ್ಮೊಳಗಿನ ಪರಿಪೂರಕತೆಯ ಆಧಾರದ ಮೇಲೆ ಪರಸ್ಪರ ಮುಕ್ತ ವ್ಯಾಪಾರ ವ್ಯವಸ್ಥೆಯನ್ನು ಮಾಡಿಕೊಳ್ಳಲು ಉದ್ದೇಶಿಸಿ ವ್ಯವಹರಿಸಿವೆ. ಇದನ್ನು ಬೆರಳುಮಾಡಿ ತೋರಿಸಿದ ಉಪನ್ಯಾಸಕರು ತಮ್ಮ ಉಪನ್ಯಾಸದಲ್ಲಿ ಸ್ಟೊಕಾಸ್ಟಿಕ್ ಫ್ರಾಂಟಿಯರ್ ಗುರುತ್ವಾಕರ್ಷಣ ಮಾದರಿಯನ್ನು ಉಪಯೋಗಿಸಿ, ಪರಿಭಾವಿತ ಸಂಪೂರ್ಣ ರಫ್ತು ಸಾಮರ್ಥ್ಯದ ದೃಶ್ಯಾವಳಿಯಲ್ಲಿ ವಿವಿಧ ಆದ್ಯತಾ ವ್ಯಾಪಾರ ವ್ಯವಸ್ಥೆಗಳ ಮೂಲಕ ಎಷ್ಟರ ಮಟ್ಟಿಗೆ ವ್ಯಾಪಾರ ಕೊರತೆಯನ್ನು ತಗ್ಗಿಸಬಹುದು ಎಂಬುದನ್ನು ವಿವರಿಸಿದರು. ಅವರು ತೋರಿಸಿದ ಮಾದರಿಯು ಭಾರತದ ಪ್ರಚಲಿತ ಗಡಿ ಸಮಸ್ಯೆಯನ್ನು ಪರಿಹರಿಸಿಕೊಂಡಾಗ ಭಾರತಕ್ಕಾಗುವ ಸಂಭಾವ್ಯ ಲಾಭವನ್ನು ತೋರಿಸಿಕೊಟ್ಟಿತು. ಗಡಿ ಸಮಸ್ಯೆಯನ್ನು ಪರಿಹರಿಸದೆಯೇ ಮುಕ್ತ ವ್ಯಾಪಾರ ವ್ಯವಸ್ಥೆಯನ್ನು ಮುಂದುವರಿಸಿದ ಪಕ್ಷದಲ್ಲಿ ಲಾಭವು ಚೀನಾ ದೇಶಕ್ಕೆ ಆಗುತ್ತದೆ ಮತ್ತು ಭಾರತದ ವ್ಯಾಪಾರ ವಹಿವಾಟಿನ ಕೊರತೆ ತಗ್ಗುವುದಿಲ್ಲ ಎಂದು ಅವರು ಹೇಳಿದರು.

### ಕರ್ನಾಟಕ ರಾಜ್ಯೋತ್ಸವ ವಿಸ್ತರಣಾ ಉಪನ್ಯಾಸ

ಬೆಂಗಳೂರಿನ 'ಮೈಂಡ್ ಟ್ರೀ' ಸಂಸ್ಥೆಯ ಸಹ ಸಂಸ್ಥಾಪಕ ಮತ್ತು ಮುಖ್ಯಸ್ಥರಾದ ಶ್ರೀ ಸುಬ್ರತೋ ಬಾಗ್ಚಿಯವರು ಕರ್ನಾಟಕ ರಾಜ್ಯೋತ್ಸವ ವಿಸ್ತರಣಾ ಉಪನ್ಯಾಸವನ್ನು "ವೇದಿಕೆ ಮತ್ತು ಉದ್ದೇಶ" ಎಂಬ ವಿಷಯದ ಬಗ್ಗೆ ಐಸೆಕ್ ನಲ್ಲಿ ೨೦೧೫ರ ನವೆಂಬರ್ ೧೭ರಂದು ನೀಡಿದರು. ಐಸೆಕ್‌ನ ಆಡಳಿತ ಮಂಡಳಿಯ ಮುಖ್ಯಸ್ಥರಾದ ಡಾ. ಎ. ರವೀಂದ್ರರವರು ಅಧ್ಯಕ್ಷತೆಯನ್ನು ವಹಿಸಿದ್ದರು.

### ಸಂದರ್ಶಕರು ನಿರೂಪಿಸಿದ ವಿಚಾರ ಸಂಕಿರಣಗಳು

ಜನಸಂಖ್ಯಾ ಸ್ಥಿತ್ಯಂತರ ಮತ್ತು ನಗರೀಕರಣ

–ಪ್ರೊ. ಟಿಮ್ ಡೈಸನ್, ಲಂಡನ್ ಅರ್ಥಶಾಸ್ತ್ರ ಮತ್ತು ರಾಜಕೀಯ ವಿಜ್ಞಾನ ಶಾಲೆ, ಇಂಗ್ಲೆಂಡ್ (ಏಪ್ರಿಲ್ ೧, ೨೦೧೫).

### ಥಾಮಸ್ ಪಿಕೆಟ್ಟಿಯ ಕೊಡುಗೆ: ಇಪ್ಪತ್ತೊಂದನೆಯ ಶತಮಾನದಲ್ಲಿ ಬಂಡವಾಳ

–ಪ್ರೊ. ಫ್ರಾಂಕ್ ಥಾಂಪ್ಸನ್, ಅರ್ಥಶಾಸ್ತ್ರ ವಿಭಾಗ, ಮಿಚಿಗನ್ ವಿಶ್ವವಿದ್ಯಾಲಯ, ಯುಎಸ್‌ಎ (ಏಪ್ರಿಲ್ ೮, ೨೦೧೫)

### ಭಾರತ ಮತ್ತು ಚೀನಾಗಳ ಕೃಷಿ ಕ್ಷಮತೆ: ಒಂದು ತುಲನಾತ್ಮಕ ಅಧ್ಯಯನ

–ಡಾ, ಕ್ಸ್ಯು ಜಿಮಿನ್, ಸಹ ಪ್ರಾಧ್ಯಾಪಕರು, ಸಮಾಜ ವಿಜ್ಞಾನಗಳ ಸಿಚುಯನ್ ಅಕಾಡೆಮಿ, ಅಧ್ಯಾಪಕ ಹಾಗೂ ಪ್ರಧಾನ ಕಾರ್ಯದರ್ಶಿ, ಭಾರತೀಯ ಅಧ್ಯಯನಗಳ ಕೇಂದ್ರ, ಎಸ್‌ಎ ಎಸ್‌ಎಸ್, ಚೀನಾ (ಮೇ ೫, ೨೦೧೫).

### ಏಷಿಯಾದಲ್ಲಿನ ಭತ್ತದ ವಲಯವನ್ನು ಪುನರ್ ರಚಿಸುವಿಕೆ: ಜಾಗತಿಕ ಆಹಾರ ಭದ್ರತೆಗೆ ಸಂಬಂಧಿಸಿದಂತೆ ಇದು ಏನನ್ನು ಸೂಚಿಸುತ್ತದೆ?

–ಡಾ. ಸಮರೇಂದು ಮೊಹಂತಿ, ಅಂತರರಾಷ್ಟ್ರೀಯ ಭತ್ತದ ಸಂಶೋಧನಾ ಸಂಸ್ಥೆ (ಐಆರ್‌ಆರ್‌ಐ), ಲಾಸ್ ಬಾನೋಸ್, ಫಿಲಿಫೀನ್ಸ್ (ಮೇ ೧೪, ೨೦೧೫).

# ಐಸೆಕ್

**ಬೆಂಗಳೂರು ಅಭಿವೃದ್ಧಿಯ ಆಡಳಿತಾತ್ಮಕ ಅಂಶಗಳು**

–ಶ್ರೀಮತಿ ಕಾತ್ಯಾಯಿನಿ ಚಾಮರಾಜ್, ಕಾರ್ಯನಿರ್ವಾಹಕ ಧರ್ಮದರ್ಶಿ, ಸಿಐವಿಐಸಿ, ಬೆಂಗಳೂರು (ಜೂನ್ ೫, ೨೦೧೫).

**ಕಾವೇರಿಯಲ್ಲಿನ ಒಂದು ತಿರುವು: ಕಾವೇರಿ ಜಲ ವಿವಾದದ ಒಂದು ಕಾರಣ**

–ಡಾ. ಎ. ರವೀಂದ್ರ, ಭಾಆಸೇ (ನಿವೃತ್ತ) ಮುಖ್ಯಸ್ಥರು, ಸುಸ್ಥಿರ ಅಭಿವೃದ್ಧಿ ಕೇಂದ್ರ, ಬೆಂಗಳೂರು ಹಾಗೂ ನಿವೃತ್ತ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು (ಜೂನ್ ೩೦, ೨೦೧೫).

**ಈಶಾನ್ಯ ಭಾರತವನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಆಯ್ದ ಉದ್ದಿಮೆಗಳಲ್ಲಿನ ಕಾರ್ಮಿಕರ ಆರೋಗ್ಯ ಮತ್ತು ಆರ್ಥಿಕ ಸೌಖ್ಯತೆಯನ್ನು ಅಧ್ಯಯಿಸುವುದು**

–ಡಾ. ಅಮೃತಾ ಘಾಟಕ್, ಸಹಾಯಕ ಪ್ರಾಧ್ಯಾಪಕರು, ಗುಜರಾತಿನ ಅಭಿವೃದ್ಧಿ ಅಧ್ಯಯನ ಸಂಸ್ಥೆ, ಅಹಮದಾಬಾದ್ (ಜನವರಿ ೮, ೨೦೧೬).

**ಭೂ ಸುಧಾರಣೆಯೋ ಅಥವಾ ಭೂಮಿಯನ್ನು ಅಲ್ಲಾಡಿಸುವಿಕೆಯೋ: ಭಾರತದ ಭೂ ಕಾರ್ಯನೀತಿಯ ಬಗ್ಗೆ ಒಂದು ಟೀಕೆ**

–ಡಾ. ಪ್ರದೀಪ್ ನಾಯಕ್, ಒಡಿಷಾ ಆಡಳಿತ ಸೇವೆಯ ಅಧಿಕಾರಿ ಹಾಗೂ ಶಿಮ್ಲಾದ ಭಾರತೀಯ ಪ್ರೌಢ ಅಧ್ಯಯನ ಸಂಸ್ಥೆಯ ಸದಸ್ಯರು (ಫೆಬ್ರವರಿ ೮, ೨೦೧೬).

**ಕಾರ್ಯಸ್ಥಳದಲ್ಲಿ ಲೈಂಗಿಕ ಕಿರುಕುಳ, ಮಹಿಳೆಯರ ಮಾನವ ಹಕ್ಕುಗಳ ಉಲ್ಲಂಘನೆ**

–ಪ್ರೊ. ವಿ.ಎಸ್. ಎಲಿಜಬೆತ್, ಪ್ರಾಧ್ಯಾಪಕರು, "ಮಕ್ಕಳು, ಅವರ ಬಗೆಗಿನ ಕಾನೂನು ಹಾಗೂ ಅವರಿಗೆ ಸ್ಥಳ ನಿಯೋಜನೆ ಕೇಂದ್ರ"ದ ಅಧಿಕಾರಿ, ಭಾರತದ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ಬೆಂಗಳೂರು (ಮಾರ್ಚ್ ೮, ೨೦೧೬).

**ಪ್ರಜಾಪ್ರಭುತ್ವದ ಒಗಟು: ವಾದಗ್ರಸ್ತ ಕಲ್ಪನೆಯ ಜೀವನ ವೃತ್ತಿಯ ಚಿಂತನೆಗಳು**

–ಡಾ. ಬಿಷ್ಣು ಮೊಹಾಪಾತ್ರ, ಮಾಜಿ ಪ್ರಾಧ್ಯಾಪಕರು, ಅಭಿವೃದ್ಧಿ ಶಾಲೆ, ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರು (ಮಾರ್ಚ್ ೧೦, ೨೦೧೬)

**ಭಾರತಕ್ಕಾಗಿ ಒಂದು ಅಭಿವೃದ್ಧಿ ದರ್ಶನ**

–ಡಾ. ಆರ್. ಬಾಲಸುಬ್ರಮಣಿಯನ್, ಸಂಸ್ಥಾಪಕರು ಹಾಗೂ ಅಧ್ಯಕ್ಷರು, ಸ್ವಾಮಿ ವಿವೇಕಾನಂದ ಯುವ ಆಂದೋಲನ ಹಾಗೂ ಸಂಸ್ಥಾಪಕರು ಮತ್ತು ಮುಖ್ಯಸ್ಥರು, ತಳಮಟ್ಟದ ಸಂಶೋಧನೆ ಮತ್ತು ಸಲಹಾ ಆಂದೋಲನ (ಮಾರ್ಚ್ ೧೫, ೨೦೧೬).

**ಮಹಿಳಾ ಆಂದೋಲನಕ್ಕೆ ಸಮಕಾಲೀನ ಸವಾಲುಗಳು**

–ಶ್ರೀಮತಿ ಮಧು ಭೂಷಣ್, ವಿಮೋಚನಾ (ಮಾರ್ಚ್ ೧೬, ೨೦೧೬).

**ಅಧ್ಯಾಪಕ ವೃಂದವು ನಿರೂಪಿಸಿದ ವಿಚಾರ ಸಂಕಿರಣಗಳು**

ಬೆಂಗಳೂರು ನಗರದ ಸಮೀಕ್ಷೆಗಳು–೨ – ಪ್ರೊ. ಕಲಾ ಎಸ್. ಶ್ರೀಧರ್, ಪ್ರಾಧ್ಯಾಪಕರು, ಡಾ.ಎಸ್. ಮಾನಸಿ, ಸಹ ಪ್ರಾಧ್ಯಾಪಕರು, ಸಿಆರ್‌ಯುಐ ಹಾಗೂ ಡಾ. ಕೆ.ಸಿ. ಸ್ಮಿತಾ, ಸಂಶೋಧನಾ ಶಿಷ್ಯರು, ಸಿಇಇಎನ್‌ಆರ್, ಐಸೆಕ್, ಬೆಂಗಳೂರು (ಜುಲೈ ೧೩, ೨೦೧೫).

ಕರ್ನಾಟಕದಲ್ಲಿನ ನಗರಗಳ ಬೆಳವಣಿಗೆಯಲ್ಲಿನ ಸ್ಥಳ ಅಸಮಾನತೆ: ಒಲವುಗಳು, ಮಟ್ಟಗಳು ಹಾಗೂ ಪರಿಣಾಮಗಳು – ಡಾ. ಸಿ.ಎಂ. ಲಕ್ಷ್ಮಣ, ಸಹ ಪ್ರಾಧ್ಯಾಪಕರು, ಜನಸಂಖ್ಯಾ ಸಂಶೋಧನಾ ಕೇಂದ್ರ, ಐಸೆಕ್, ಬೆಂಗಳೂರು (ಜನವರಿ ೨೮, ೨೦೧೬).

ಪರಿಸರ ಹಾಗೂ ಅತ್ಯಂತ ತಳಸ್ತರದ ಕಾರ್ಮಿಕರು: ಹೆಚ್ಚಿನ ಗಮನದ ಅಗತ್ಯತೆ? ಡಾ. ಅನಿಲ್ ಕುಮಾರ್ ವಡ್ಡಿರಾಜು, ಸಹ ಪ್ರಾಧ್ಯಾಪಕರು, ರಾಜಕೀಯ ಸಂಸ್ಥೆಗಳು, ಆಡಳಿತ ಮತ್ತು ಅಭಿವೃದ್ಧಿ ಕೇಂದ್ರ, ಐಸೆಕ್, ಬೆಂಗಳೂರು (ಮಾರ್ಚ್ ೩೦, ೨೦೧೬)

**ವಿದ್ಯಾರ್ಥಿಗಳ ವಿಚಾರ ಸಂಕಿರಣಗಳು**

ಇ–ಕಲಿಕೆಯ ಮೂಲಕ ಸಮಾನತೆಯನ್ನು ನಾವು ಪ್ರೋತ್ಸಾಹಿಸಬಲ್ಲೆವೇ ಮತ್ತು ಪ್ರೌಢ ಶಿಕ್ಷಣ ಹೊಂದಬಲ್ಲೆವೇ? ಭಾರತದಲ್ಲಿ ಆನ್‌ಲೈನ್

# ಐಸೆಕ್



ಶಿಕ್ಷಣದ ಹರಡುವಿಕೆಯನ್ನು ಒಪ್ಪಿಕೊಳ್ಳುವಿಕೆ ಹಾಗೂ ಅದಕ್ಕಾಗಿ ಮಾಡುವ ಖರ್ಚಿನಲ್ಲಿನ ಸಮರ್ಥ ಅನುಕೂಲತೆಗಳನ್ನು ಕಂಡು ಹಿಡಿಯುವಿಕೆ – ಡಾ. ರೂಪಾ ಬಸು, ಡಾಕ್ಟೊರಲ್ ಪದವಿಯ ನಂತರದ ಶಿಷ್ಯವೃತ್ತಿ, ಸಿಇಎಸ್‌ಪಿ. ಐಸೆಕ್, ಬೆಂಗಳೂರು (ಮೇ ೨೧, ೨೦೧೫).

ಸ್ವಾಧೀನ ರಾಹಿತ್ಯ ಹಾಗೂ ಅಲ್ಪಾಭಿವೃದ್ಧಿಯ ರಾಜಕೀಯದ ಅಧ್ಯಯನ: ಜಾರ್ಖಂಡ್‌ನ ಪಶ್ಚಿಮ ಸಿಂಗ್‌ಭೂಮ್‌ನಲ್ಲಿನ ಸ್ಥಳೀಯ ಸ್ವಾಧೀನ ಪ್ರಕ್ರಿಯೆ – ಶ್ರೀ ಸುಜಿತ್ ಕುಮಾರ್, ಸಿಪಿಐಜಿಡಿ, ಐಸೆಕ್, ಬೆಂಗಳೂರು (ಜುಲೈ ೨೦, ೨೦೧೫).

ಭಾರತದಲ್ಲಿ ಮಕ್ಕಳ ಆರೋಗ್ಯ ಮತ್ತು ಸಾಮಾಜಿಕ ಭಿನ್ನತೆ: ಜಾತಿ ಮತ್ತು ನೆರೆಹೊರೆಯ ಪರಿಣಾಮ – ಶ್ರೀ ರಾಜೇಶ್ ರೋಷನ್, ಪಿಆರ್‌ಸಿ, ಐಸೆಕ್, ಬೆಂಗಳೂರು (ಸೆಪ್ಟೆಂಬರ್ ೧೪, ೨೦೧೫).

ಭಾರತದ ಮುಖ್ಯ ಆರ್ಥಿಕ ವಲಯಗಳನ್ನು ಗುರುತಿಸುವುದಕ್ಕಾಗಿ ಸಂಪರ್ಕಗಳ ಅಳೆಯುವಿಕೆ: ಒಂದು ಪರಿಕರ – ಉತ್ಪನ್ನ ವಿಶ್ಲೇಷಣೆ – ಶ್ರೀಮತಿ ತೂಲಿಕಾ ಭಟ್ಟಾಚಾರ್ಯ, ಸಿಇಎಸ್‌ಪಿ, ಐಸೆಕ್, ಬೆಂಗಳೂರು (ಸೆಪ್ಟೆಂಬರ್ ೨೩, ೨೦೧೫).

ಭಾರತೀಯ ಜವಳಿ ಉದ್ದಿಮೆಯ ಅಂತರ್‍ರಾಷ್ಟ್ರೀಯ ವ್ಯಾಪಾರ ವಹಿವಾಟಿನ ಸ್ಪರ್ಧಾತ್ಮಕತೆ: ಒಂದು ಮೂಲಭೂತ ಅಧ್ಯಯನ, – ಶ್ರೀ ತರುಣ್ ಅರೋರಾ, ಸಿಇಎಸ್‌ಪಿ, ಐಸೆಕ್, ಬೆಂಗಳೂರು (ಡಿಸೆಂಬರ್ ೧೧, ೨೦೧೫).

ಕರ್ನಾಟಕದಲ್ಲಿ ಗ್ರಾಮೀಣ ಮೂಲ ಸೌಕರ್ಯ ಮತ್ತು ಕೃಷಿ ಅಭಿವೃದ್ಧಿ: ಒಂದು ಜಿಲ್ಲಾಮಟ್ಟದ ವಿಶ್ಲೇಷಣೆ – ಶ್ರೀಮತಿ ಸೌಮ್ಯ ಮಂಜುನಾಥ್, ಎಡಿಆರ್‌ಟಿಸಿ, ಐಸೆಕ್, ಬೆಂಗಳೂರು (ಡಿಸೆಂಬರ್ ೨೧, ೨೦೧೫).

## ವಿದ್ಯಾರ್ಥಿಗಳ ಅರ್ಧ ವಾರ್ಷಿಕ ವಿಚಾರ ಸಂಕಿರಣ ಸರಣಿಗಳು

ಮೂವತ್ತೆರಡನೆಯ ಅರ್ಧವಾರ್ಷಿಕ ವಿಚಾರ ಸಂಕಿರಣಗಳನ್ನು ಐಸೆಕ್‌ನಲ್ಲಿ ೨೦೧೫ರ ಜೂನ್ ೮ ರಿಂದ ೧೯ ರವರೆಗೆ ನಡೆಸಲಾಯಿತು. ಒಟ್ಟಾರೆಯಾಗಿ ೬೭ ನಿರೂಪಣೆಗಳು ನಡೆದವು. ಅವುಗಳ ಪೈಕಿ ಪ್ರೌಢ ಪ್ರಬಂಧ ಸಲ್ಲಿಕೆಯ ಪೂರ್ವದ ೫ ನಿರೂಪಣೆಗಳು, ೩೨ ಪ್ರಗತಿ ನಿರೂಪಣೆಗಳು ಹಾಗೂ ೭ ಪ್ರಸ್ತಾವನಾ ನಿರೂಪಣೆಗಳಿದ್ದವು. ಜೊತೆಗೆ ೨೩ ವಿಷಯಾಧಾರಿತ ನಿರೂಪಣೆಗಳಿದ್ದವು. ಪ್ರೊ. ಕಾಳಿಯಪ್ಪ ಕಾಳಿರಾಜನ್ ಅವರು ಈ ವಿಚಾರ ಸಂಕಿರಣಗಳಲ್ಲಿ ವಿಶೇಷ ಚರ್ಚಾರ್ಥಿಯಾಗಿ ಭಾಗವಹಿಸಿದ್ದರು.

ಮೂವತ್ಮೂರನೆಯ ಅರ್ಧವಾರ್ಷಿಕ ವಿಚಾರ ಸಂಕಿರಣಗಳು ೨೦೧೫ರ ಡಿಸೆಂಬರ್ ೧೦ ರಿಂದ ೨೨ರ ವರೆಗೆ ನಡೆದವು. ಒಟ್ಟಾರೆಯಾಗಿ ೬೨ ನಿರೂಪಣೆಗಳು ನಡೆದವು. ಅವುಗಳ ಪೈಕಿ ಪ್ರೌಢ ಪ್ರಬಂಧ ಸಲ್ಲಿಕೆಯ ಪೂರ್ವದ ೨ ನಿರೂಪಣೆಗಳು, ೪೦ ಪ್ರಗತಿ ನಿರೂಪಣೆಗಳು, ಹಾಗೂ ೨೦ ಪ್ರಸ್ತಾವನಾ ನಿರೂಪಣೆಗಳಿದ್ದವು. ಡಾ. ಕೆ.ಎನ್. ಮೂರ್ತಿ, ಭಾಆಸೇ ರವರು ಮತ್ತು ಪ್ರೊ. ಬಿ.ಎಸ್. ಭಾರ್ಗವ ರವರು ಈ ವಿಚಾರ ಸಂಕಿರಣಗಳಲ್ಲಿ ವಿಶೇಷ ಚರ್ಚಾರ್ಥಿಗಳಾಗಿ ಭಾಗವಹಿಸಿದ್ದರು.

## ಐಸೆಕ್ ಪಿಎಚ್‌ಡಿ ಕಾರ್ಯಕ್ರಮ ೨೦೧೫–೧೬

ಐಸೆಕ್‌ನ ೨೦೧೫–೧೬ ಸಾಲಿನ ಪಿಎಚ್‌ಡಿ ಕಾರ್ಯಕ್ರಮಕ್ಕಾಗಿ ೨೪೨ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು.ಆ ಪೈಕಿ ೧೩೭ ಅಭ್ಯರ್ಥಿಗಳನ್ನು ಪ್ರವೇಶ ಪರೀಕ್ಷೆಗೆ ಕರೆಯಲಾಗಿತ್ತು. ಈ ಪೈಕಿ ೭೭ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ ೪೨ ಅಭ್ಯರ್ಥಿಗಳು ಕೇಂದ್ರಮಟ್ಟದ ಸಂದರ್ಶನಗಳಿಗೆ ಅರ್ಹತೆಯನ್ನು ಗಳಿಸಿದರು. ಅಂತಿಮವಾಗಿ ಆಯ್ಕೆ ಸಮಿತಿಯು ೨೦೧೫–೧೬ರ ಪಿಎಚ್‌ಡಿ ಕಾರ್ಯಕ್ರಮಕ್ಕೆ ೩೨ ಅಭ್ಯರ್ಥಿಗಳನ್ನು ಆಯ್ಕೆ ಮಾಡಿತು.

ಪಿಎಚ್‌ಡಿ ಕಾರ್ಯಕ್ರಮದ ಪಠ್ಯ ಅಧ್ಯಯನದ ಉದ್ಘಾಟನಾ ಸಮಾರಂಭವನ್ನು ೨೦೧೫ರ ಆಗಸ್ಟ್ ೧೮ ರಂದು ಏರ್ಪಡಿಸಲಾಗಿತ್ತು. ಐಸೆಕ್‌ನ ಪ್ರಭಾರ ನಿರ್ದೇಶಕರಾದ ಪ್ರೊ. ಕೆ.ಎಸ್. ಜೇಮ್ಸ್‌ರವರು ೨೦೧೪–೧೫ ತಂಡದ ಯಶಸ್ವಿ ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪೂರ್ವದ ಪಠ್ಯ ಅಧ್ಯಯನದ ಪ್ರಮಾಣ ಪತ್ರಗಳನ್ನು ವಿತರಿಸಿದರು. ೨೦೧೫–೧೬ ತಂಡದ ವಿದ್ಯಾರ್ಥಿಗಳಿಗೆ ಪಠ್ಯ ಅಧ್ಯಯನವು ೨೦೧೫ರ ಆಗಸ್ಟ್ ೧೮ ರಂದು ಪ್ರಾರಂಭವಾಯಿತು.

## ನೀಡಿದ ಪಿಎಚ್‌ಡಿ ಪದವಿ ಪ್ರಶಸ್ತಿಗಳು

ಮೈಸೂರು ವಿಶ್ವವಿದ್ಯಾಲಯವು ಕೆಳಕಂಡ ವಿದ್ಯಾರ್ಥಿಗಳಿಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಪ್ರೌಢ ಪ್ರಬಂಧಗಳಿಗಾಗಿ ಪಿಎಚ್‌ಡಿ ಪ್ರಶಸ್ತಿಯನ್ನು ಪ್ರದಾನ ಮಾಡಿತು. ಈ ವಿದ್ಯಾರ್ಥಿಗಳ ಮೇಲ್ವಿಚಾರಕರ ಹೆಸರುಗಳನ್ನು ಆವರಣದೊಳಗೆ ನೀಡಲಾಗಿದೆ:

ಡಾ. ಕೌಶಿಕ್ ಬಸು: ಪ್ರೌಢ ಪ್ರಬಂಧ: "ಭಾರತೀಯ ತಯಾರಿಕಾ ವಲಯದಲ್ಲಿನ ಬಂಡವಾಳದ ರಚನೆ: ಸ್ವರೂಪ, ನಿರ್ಧಾರಕಗಳು ಹಾಗೂ ನಿಯಂತ್ರಕ ಬದಲಾವಣೆಗಳು" (ಮೇಲ್ವಿಚಾರಕರು: ಪ್ರೊ. ಮೀನಾಕ್ಷಿ ರಾಜೀವ್).

ಡಾ. ಅಮಿತ್ ಕುಮಾರ್ ಸಾಹೂ: ಪ್ರೌಢ ಪ್ರಬಂಧ: "ಆರೋಗ್ಯ ಸೇವೆಯ ಬಳಕೆ ಮತ್ತು ಆರ್ಥಿಕ ಸಂರಕ್ಷಣೆ: ಆರೋಗ್ಯ ವಿಮೆಯ ಪಾತ್ರ" (ಮೇಲ್ವಿಚಾರಕರು: ಪ್ರೊ. ಎಸ್. ಮಾದೇಶ್ವರನ್).

ಡಾ. ಬೆನ್ಸನ್ ಥಾಮಸ್: ಪ್ರೌಢ ಪ್ರಬಂಧ: "ಸಾಂಕ್ರಾಮಿಕಗಳ ಸ್ಥಿತ್ಯಂತರ ಮತ್ತು ಸರ್ಕಾರದ ಆರೋಗ್ಯ ವೆಚ್ಚ: ಭಾರತದ ಕೇರಳದಲ್ಲಿನ ಒಂದು ಅಧ್ಯಯನ" (ಮೇಲ್ವಿಚಾರಕರು: ಪ್ರೊ. ಕೆ.ಎಸ್. ಜೇಮ್ಸ್).

ಡಾ. ಕ್ರಿಷನು ಪ್ರಧಾನ್: ಪ್ರೌಢ ಪ್ರಬಂಧ: "ಭಾರತದ ಆರ್ಥಿಕ ನೀತಿಯ ಸುಸ್ಥಿರತೆ: ಒಂದು ಮೂಲಭೂತ ಅಧ್ಯಯನ" (ಮೇಲ್ವಿಚಾರಕರು: ಪ್ರೊ. ಎಂ.ಆರ್. ನಾರಾಯಣ).

ಡಾ. ಲಾವಣ್ಯ ಸುರೇಶ್: ಪ್ರೌಢ ಪ್ರಬಂಧ: ವಿಕೇಂದ್ರೀಕೃತ ಆಡಳಿತ ಹಾಗೂ ಅರಣ್ಯ ಸಂಪನ್ಮೂಲಗಳ ನಿರ್ವಹಣೆ: ಭಾರತದ ತಮಿಳುನಾಡಿನಲ್ಲಿನ ಒಂದು ಅಧ್ಯಯನ" (ಮೇಲ್ವಿಚಾರಕರು: ಪ್ರೊ. ಎನ್. ಶಿವಣ್ಣ).

## ಡಾ. ಡಿ.ಎಂ. ನಂಜುಂಡಪ್ಪ ದತ್ತಿ ಬಹುಮಾನಗಳು

ಈ ಬಹುಮಾನಗಳನ್ನು ೨೦೧೫-೧೬ರ ಪಿಎಚ್‌ಡಿ ಪಠ್ಯ ಅಧ್ಯಯನದಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಗಳಿಸಿದ್ದಕ್ಕಾಗಿ ಶ್ರೀಮತಿ ಅನೀಶಾ ಚಿಟಗುಪ್ಪಿ (ಅರ್ಥಶಾಸ್ತ್ರ) ಮತ್ತು ಶ್ರೀಮತಿ ವಿಜಿತಾ ರಾಜನ್ (ಶಿಕ್ಷಣ ಶಾಸ್ತ್ರ) ರವರುಗಳಿಗೆ ನೀಡಲಾಯಿತು.

## ಶೈಕ್ಷಣಿಕ ಜಾಲ ವ್ಯವಸ್ಥೆ

ಐಸೆಕ್ ಸಂಸ್ಥೆಯು ಭಾರತದಲ್ಲಿನ ನಾರ್ಡಿಕ್ ಕೇಂದ್ರದೊಡನೆ (೨೩ ಸ್ಕ್ಯಾಂಡಿನೇವಿಯನ್ ವಿಶ್ವವಿದ್ಯಾಲಯಗಳ ಒಂದು ಸಂಘಟನೆ) ಸಂಶೋಧನೆ, ತರಬೇತಿ ಹಾಗೂ ವಿನಿಮಯ ಕಾರ್ಯಕ್ರಮಗಳ ಜಾಲ ವ್ಯವಸ್ಥೆಗಾಗಿ ಒಪ್ಪಂದ ಪತ್ರವೊಂದಕ್ಕೆ ಸಹಿ ಮಾಡಿದೆ.

ಇದೇ ರೀತಿಯ ಜಾಲ ವ್ಯವಸ್ಥೆಯನ್ನು ಆಯಾ ಯೋಜನೆಗಳಿಗನುಸಾರವಾಗಿ ಎನ್ಐಆರ್‌ಡಿ, ಎನ್‌ಎಚ್‌ಆರ್‌ಸಿ, ಐಎಲ್‌ಓ, ಯುಎನ್‌ಡಿಪಿ, ಡಬ್ಲ್ಯುಬಿ, ಐಎಫ್‌ಪಿಆರ್‌ಐ, ಐಐಪಿಎಸ್, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳೊಡನೆಯೂ ಮಾಡಿಕೊಂಡಿದೆ.

# ಎಸ್‌ಆರ್‌ಟಿಟಿ ಬೆಂಬಲಿತ ಚಟುವಟಿಕೆಗಳು

## ಆರ್ಥಿಕ ನೆರವಿನೊಂದಿಗೆ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ ಅಧ್ಯಾಪಕ ವೃಂದ/ ಪಿಎಚ್‌ಡಿ ವಿದ್ಯಾರ್ಥಿಗಳು

೧. ಶ್ರೀ ತರುಣ್ ಅರೋರಾ (ಪಿಎಚ್‌ಡಿ ವಿದ್ಯಾರ್ಥಿ) ರವರು ೨೦೧೫ರ ಜೂನ್ ೧೭ ಮತ್ತು ೧೮ ಗಳಂದು ಪೋರ್ಚುಗಲ್‌ನ ಬ್ರಾಗಾದಲ್ಲಿನ ಮಿನ್ಹೋ ವಿಶ್ವವಿದ್ಯಾಲಯದಲ್ಲಿ ನಡೆದ ಪಿಎಚ್‌ಡಿ ವಿದ್ಯಾರ್ಥಿಗಳ ಅರ್ಥಶಾಸ್ತ್ರದ ಕಾರ್ಯಾಗಾರದಲ್ಲಿ "ಜವಳಿ ಉತ್ಪನ್ನಗಳ ರಫ್ತಿನ ಸ್ಪರ್ಧಾತ್ಮಕತೆ: ತಜ್ಞ ದತ್ತಾಂಶದ ವಿಧಾನ" ಎಂಬ ವಿಷಯದ ಬಗ್ಗೆ ತಮ್ಮ ಲೇಖನವನ್ನು ಮಂಡಿಸಿದರು.

೨. ಶ್ರೀ ಅನೂಪ್ ಬಾಲು ಹೀರಾಲೆ (ಪಿಎಚ್‌ಡಿ ವಿದ್ಯಾರ್ಥಿ) ರವರು ೨೦೧೫ರ ಜೂನ್ ೨೮ರಿಂದ ಜುಲೈ ೪ ರವರೆಗೆ ನೆದರ್‌ಲ್ಯಾಂಡ್ಸಿನ ಗ್ರೋನಿಂಗನ್ ವಿಶ್ವವಿದ್ಯಾಲಯದಲ್ಲಿ "ಭಾರತೀಯ ಬುಡಕಟ್ಟು ಸಂಸ್ಕೃತಿಯ ಅಧ್ಯಯನ" ಎಂಬ ವಿಷಯದ ಬಗೆಗೆ ನಡೆದ ಬೇಸಿಗೆ ಶಾಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

೩. ಶ್ರೀಮತಿ ಮಾಧವಿ ಮಾರ್ವಾ (ಪಿಎಚ್‌ಡಿ ವಿದ್ಯಾರ್ಥಿ) ರವರು ೨೦೧೫ರ ಜೂನ್ ೩೦ ರಿಂದ ಜುಲೈ ೪ ರವರೆಗೆ ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಸೈನ್ಸಸ್ ಪೊ (ಪ್ಯಾರಿಸ್) ನ ಸುಸ್ಥಿರ ಅಭಿವೃದ್ಧಿ ಮತ್ತು ಅಂತರಾಷ್ಟ್ರೀಯ ಸಂಬಂಧಗಳ ಸಂಸ್ಥೆ (ಐಡಿಡಿಆರ್‌ಐ) ಯಲ್ಲಿ "ನೀರು, ಆಹಾರ ಮತ್ತು ಶಕ್ತಿ: ಪರಸ್ಪರಾವಲಂಬನೆಗಳು ಮತ್ತು ಬಿಗಿತಗಳು" ಎಂಬ ವಿಷಯದ ಬಗೆಗಿನ ಬೇಸಿಗೆ ಶಾಲೆಯಲ್ಲಿ ಭಾಗವಹಿಸಿದ್ದರು.

೪. ಪ್ರೊ. ಆರ್. ಮುತ್ತುರಾಯಪ್ಪ ಮತ್ತು ಡಾ. ಕೆ.ಸಿ. ಚನ್ನಮ್ಮ ಇವರುಗಳು ೨೦೧೫ರ ಅಕ್ಟೋಬರ್ ೫ ಮತ್ತು ೬ ಗಳಂದು ಐಸೆಕ್‌ನಲ್ಲಿ "ಅನೌಪಚಾರಿಕ ವಲಯದಲ್ಲಿ ಮಹಿಳೆಯರು – ಗಮ್ಯ ಅಂಶಗಳು ಮತ್ತು ಸವಾಲುಗಳು" ಎಂಬ ವಿಷಯದ ಬಗ್ಗೆ ರಾಷ್ಟ್ರೀಯ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿದ್ದರು.

# ಐಸೆಕ್



## ಸಮಾಜ ವಿಜ್ಞಾನ ಪ್ರತಿಭಾನ್ವೇಷಣೆ ಯೋಜನೆ (ಎಸ್‌ಎಸ್‌ಟಿಎಸ್‌ಎಸ್)

ಈ ಯೋಜನೆಯು ಐಸೆಕ್‌ನ ಒಂದು ಚಾಲ್ತಿ ಯೋಜನೆಯಾಗಿದ್ದು, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಕ್ರಿಸ್ತ ವಿಶ್ವವಿದ್ಯಾಲಯ ಇವುಗಳ ಸಹಭಾಗಿತ್ವದೊಡನೆ ಅನುಷ್ಠಾನಗೊಳ್ಳುತ್ತಿದೆ. ಈ ಎರಡು ವಿಶ್ವವಿದ್ಯಾಲಯಗಳು ಸದರಿ ಯೋಜನೆಯ ಮೂಲಕ ಆಯಾ ವಿಶ್ವವಿದ್ಯಾಲಯಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುತ್ತಿವೆ. ಐಸೆಕ್ ಸಂಸ್ಥೆಯಲ್ಲಿ ನಡೆಯುವ ಶೈಕ್ಷಣಿಕ ಮತ್ತು ಪಾಂಡಿತ್ಯಪೂರ್ಣ ಚಟುವಟಿಕೆಗಳಿಗಾಗಿ ಸರ್ ರತನ್ ಟಾಟಾ ದತ್ತಿಯು (ಎಸ್‌ಆರ್‌ಟಿಟಿ) ಒದಗಿಸುವ ಧನ ಸಹಾಯದಿಂದ ಈ ಯೋಜನೆಯು ಆರ್ಥಿಕ ಬೆಂಬಲ ದೊರಕಿಸಿಕೊಂಡಿದೆ. ಈ ಕಾರ್ಯಕ್ರಮವು ೨೦೧೧ರ ಜನವರಿಯಲ್ಲಿ ಪ್ರಾರಂಭವಾಗಿದ್ದು, ಪದವಿ ವ್ಯಾಸಂಗದ ವಿದ್ಯಾರ್ಥಿಗಳಲ್ಲಿ ಸಮಾಜ ವಿಜ್ಞಾನ ವಿಷಯಗಳಲ್ಲಿ ಕ್ಷೀಣಿಸುತ್ತಿರುವ ಆಸಕ್ತಿಯನ್ನು ಮತ್ತೆ ಉಜ್ವಲಗೊಳಿಸುವ ಉದ್ದೇಶವನ್ನು ಹೊಂದಿದೆ.

ಐಸೆಕ್‌ನ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಡಾ. ಎಂ. ಲಿಂಗರಾಜುರವರು ಎಸ್‌ಎಸ್‌ಟಿಎಸ್‌ಎಸ್ ಯೋಜನೆಯ ಸಂಯೋಜಕರಾಗಿದ್ದಾರೆ.

## ಐಸೆಕ್‌ನ ಬೇಸಿಗೆ ಶಿಷ್ಯವೃತ್ತಿ ಕಾರ್ಯಕ್ರಮ

ಐಸೆಕ್‌ನ ವಾರ್ಷಿಕ ಬೇಸಿಗೆ ಶಿಷ್ಯವೃತ್ತಿ ಕಾರ್ಯಕ್ರಮವು ಸಂಶೋಧನಾ ಸಾಮರ್ಥ್ಯಾಭಿವೃದ್ಧಿಗಾಗಿ ಇರುವ ಸರ್ ರತನ್ ಟಾಟಾ ದತ್ತಿ ನಿಧಿಯ (ಎಸ್‌ಆರ್‌ಟಿಟಿ) ಆರ್ಥಿಕ ಬೆಂಬಲವನ್ನು ಪಡೆದಿದೆ. ಈ ಕಾರ್ಯಕ್ರಮವು ಸಮಾಜ ವಿಜ್ಞಾನ ವಿಷಯಗಳಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಸ್ನಾತಕೋತ್ತರ ಯುವ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಉದ್ದೇಶವನ್ನು ಹೊಂದಿದೆ.

ಪ್ರಸ್ತುತ ಸಾಲಿನಲ್ಲಿ ಐಸೆಕ್‌ನ ಒಂಭತ್ತು ಶೈಕ್ಷಣಿಕ ಕೇಂದ್ರಗಳಾದ್ಯಂತ ಇರುವ ೩೦ ಶಿಷ್ಯವೃತ್ತಿ ವೇತನಗಳಿಗಾಗಿ ೨೦೬ ಅರ್ಜಿಗಳು ಬಂದಿದ್ದವು. ಈ ಅರ್ಜಿಗಳನ್ನು ಪರಿಶೀಲಿಸಿದ ನಂತರ ಎರಡು ತಿಂಗಳ ಅವಧಿಯ ತರಬೇತಿ ಕಾರ್ಯಕ್ರಮಕ್ಕಾಗಿ ಆಯಾ ಕೇಂದ್ರಗಳೇ ಶಿಷ್ಯವೃತ್ತಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದವು.

ಈ ಕಾರ್ಯಕ್ರಮವು ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ಸಂಶೋಧನಾ ತರಬೇತಿಯನ್ನು ನೀಡುವುದಲ್ಲದೆ ಅಗತ್ಯ ಮೂಲಭೂತ ಹಾಗೂ ಇತರ ಸೌಲಭ್ಯಗಳನ್ನು ಅಂದರೆ ಉಚಿತ ವಸತಿ, ಆಹಾರ, ಪ್ರಯಾಣ ಭತ್ಯೆ ಹಾಗೂ ತಿಂಗಳಿಗೆ ೫೦೦೦ ರೂ ಗಳನ್ನು ವಿದ್ಯಾರ್ಥಿವೇತನವಾಗಿ ನೀಡುತ್ತಿದೆ. ಶಿಷ್ಯವೃತ್ತಿ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯು ಯಶಸ್ವಿಯಾಗಿ ಮುಗಿದ ನಂತರ ಮತ್ತು ಶಿಷ್ಯವೃತ್ತಿ ವರದಿಯನ್ನು ಸಲ್ಲಿಸಿದ ನಂತರ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

ಡಾ. ಸೊಬಿನ್ ಜಾರ್ಜ್‌ರವರು ೨೦೧೬ರ ಶಿಷ್ಯವೃತ್ತಿ ಕಾರ್ಯಕ್ರಮದ ಸಂಯೋಜಕರಾಗಿದ್ದಾರೆ.

## ಸಮಾಜ ವಿಜ್ಞಾನ ಸಂಶೋಧನೆಯ ಕಾರ್ಯವಿಧಾನಗಳು ಮತ್ತು ಆನ್ವಯಿಕತೆಗಳ ಬಗೆಗಿನ ಪ್ರಮಾಣ ಪತ್ರ ಪಠ್ಯ ಕಾರ್ಯಕ್ರಮ (ಸಿಸಿಎಂಎಎಸ್‌ಎಸ್‌ಆರ್)

ಈ ಕಾರ್ಯಕ್ರಮವನ್ನು ಐಸೆಕ್ ಸಂಸ್ಥೆಯು ಪ್ರತಿ ವರ್ಷವೂ ಏರ್ಪಡಿಸುತ್ತದೆ. ಸಮಾಜ ವಿಜ್ಞಾನ ಸಂಶೋಧನಾ ಕಾರ್ಯವಿಧಾನಗಳನ್ನೊಳಗೊಂಡ ಇದು ವಿವಿಧ ವಿಷಯಗಳನ್ನೊಳಗೊಂಡಿದೆ. ಈ ಪಠ್ಯ ಕಾರ್ಯಕ್ರಮವನ್ನು ನಡೆಸಲು ಬೇಕಾದ ಖರ್ಚು ವೆಚ್ಚಗಳ ಪೈಕಿ ಭಾಗವೊಂದನ್ನು ಸರ್ ರತನ್ ಟಾಟಾ ದತ್ತಿ ನಿಧಿಯು (ಎಸ್‌ಆರ್‌ಟಿಟಿ) ಸಂಶೋಧನಾ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ನೀಡುತ್ತದೆ. ಉಳಿದ ಹಣದ ಅಗತ್ಯತೆಯನ್ನು ಶಿಕ್ಷಣಾರ್ಥಿಗಳಿಗೆ ನಾಮಮಾತ್ರದ ಶುಲ್ಕವನ್ನು ವಿಧಿಸಿ ಪಡೆದುಕೊಳ್ಳಲಾಗುತ್ತದೆ.

ಪ್ರಸ್ತುತ ಸಾಲಿನಲ್ಲಿ ೨೦೧೫ರ ಅಕ್ಟೋಬರ್ ೨೬ರಿಂದ ನವೆಂಬರ್ ೬ ರವರೆಗೆ ನಡೆಸಲಾದ ಈ ಪಠ್ಯ ಕಾರ್ಯಕ್ರಮದಲ್ಲಿ ೧೭ ಶಿಕ್ಷಣಾರ್ಥಿಗಳು ಭಾಗವಹಿಸಿದ್ದರು. ಐಸೆಕ್ ಸಂಸ್ಥೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಇಂದ್ರಜಿತ್ ಬೈರಾಗ್ಯ ರವರು ಇದರ ಸಂಯೋಜಕರಾಗಿದ್ದರು.

## ಪ್ರಕಟಣೆಗಳು – ನೀಳ ಲೇಖನ ಸರಣಿ

ಕೆ.ವಿ. ರಾಜು, ಎಸ್. ಮಾನಸಿ, ಸುನಿಲ್ ನೌಟಿಯಾಲ್ ಮತ್ತು ಕೆ.ಪಿ. ರಶ್ಮಿ (ಮಾರ್ಚ್ ೨೦೧೫). "ನಗರ ಪರಿಸರಗಳನ್ನು ಸಂಸ್ಕೃತಿಯ ಮೂಲಕ ಸಂರಕ್ಷಿಸುವಿಕೆ: ಭಾರತದ ಬೆಂಗಳೂರಿನ ಒಂದು ಅಧ್ಯಯನ ಪ್ರಕರಣ". ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೩೬, ಬೆಂಗಳೂರು: ಐಸೆಕ್.

# ಐಸೆಕ್

ಸುನಿಲ್ ನೌಟಿಯಾಲ್, ಎಸ್. ಮಾನಸಿ, ಎಂ.ಎಸ್. ಉಮೇಶ್ ಬಾಬು ಮತ್ತು ಕೆ.ಎಸ್. ರಾವ್ (ಏಪ್ರಿಲ್ ೨೦೧೫). "ಭಾರತದಲ್ಲಿ ದ್ವಿದಳಧಾನ್ಯಗಳು ಮತ್ತು ಅವರೆ ಉತ್ಪಾದನೆ ಹಾಗೂ ಉತ್ಪಾದಕತೆಯ ಬಗೆಗಿನ ಅಧ್ಯಯನ – ಕರ್ನಾಟಕದ ಒಂದು ಅಧ್ಯಯನ ಪ್ರಕರಣ", ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೩೭, ಬೆಂಗಳೂರು: ಐಸೆಕ್.

ವೀರಶೇಖರಪ್ಪ ಮತ್ತು ಬಿ.ಪಿ. ವಾಣಿ (ಜೂನ್ ೨೦೧೫). "ಜೀವನೋಪಾಯಕ್ಕೆ ಆರ್ಥಿಕ ಸೇರ್ಪಡೆ: ಲಾಭಕ್ಕಾಗಿ ತೊಡಕಿನಲ್ಲಿ ಸಿಕ್ಕಿಕೊಳ್ಳುವಿಕೆ". ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೩೮, ಬೆಂಗಳೂರು: ಐಸೆಕ್.

ಎಸ್. ಮಾನಸಿ, ಎನ್. ಲತಾ ಮತ್ತು ಬಿಭು ಪ್ರಸಾದ್ ನಾಯಕ್ (ಜುಲೈ ೨೦೧೫). "ನಗರಗಳಲ್ಲಿನ ಇ–ತ್ಯಾಜ್ಯದ ನಿರ್ವಹಣೆ: ಬೆಂಗಳೂರಿನ ವಸ್ತುಸ್ಥಿತಿಯ ಒಂದು ವಿಶ್ಲೇಷಣೆ". ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೩೯, ಬೆಂಗಳೂರು: ಐಸೆಕ್.

ಮೀನಾಕ್ಷಿ ರಾಜೀವ್, ಬಿ.ಪಿ. ವಾಣಿ ಮತ್ತು ವೀರಶೇಖರಪ್ಪ (ಅಕ್ಟೋಬರ್ ೨೦೧೫). "ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ಸೇರ್ಪಡೆ: ಕರ್ನಾಟಕ ರಾಜ್ಯದಲ್ಲಿ ಸ್ವಸಹಾಯ ಗುಂಪುಗಳ ಗುಣಮಟ್ಟ ಮತ್ತು ಸುಸ್ಥಿರತೆಯನ್ನು ತಿಳಿದುಕೊಳ್ಳುವಿಕೆ", ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೪೦, ಬೆಂಗಳೂರು: ಐಸೆಕ್.

ಸುನಿಲ್ ನೌಟಿಯಾಲ್, ಎನ್.ಪಿ. ವರ್ಷ, ಶ್ರಾವಣಿ ಮನ್ನಂ ಮತ್ತು ಸಿ. ರಾಜಶೇಖರನ್ (ಅಕ್ಟೋಬರ್ ೨೦೧೫). "ವೈಜ್ಞಾನಿಕ ಮತ್ತು ತಾಂತ್ರಿಕ ಮಧ್ಯಪ್ರವೇಶದ ಮೂಲಕ ಔಷಧೀಯ ಸಸ್ಯಗಳು ಮತ್ತು ಪುರಾತನ ಸಸ್ಯಗಳ ಸಂರಕ್ಷಣೆ", ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೪೧, ಬೆಂಗಳೂರು: ಐಸೆಕ್.

ಎಸ್. ಮಾನಸಿ, ಬಿ.ಆರ್. ಹೇಮಲತ, ಎನ್. ಶಿವಣ್ಣ, ಆರ್.ಜಿ. ನಡದೂರ್ ಮತ್ತು ಪಿ.ಜಿ. ಚೆಂಗಪ್ಪ (ಅಕ್ಟೋಬರ್ ೨೦೧೫). "ಕರ್ನಾಟಕದಲ್ಲಿನ ಭೂ ನೀತಿ ಮತ್ತು ಆಡಳಿತ: ಭೂಮಿ–ಕಾವೇರಿ–ಮೋಜಿಣಿಗಳ ಸಮೀಕರಣ", ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೪೨, ಬೆಂಗಳೂರು: ಐಸೆಕ್.

ಎಸ್. ಮಾನಸಿ, ಕೆ.ಸಿ. ಸ್ಮಿತಾ, ಎನ್. ಶಿವಣ್ಣ, ಪಿ.ಜಿ. ಚೆಂಗಪ್ಪ ಮತ್ತು ಆರ್.ಜಿ. ನಡದೂರ್ (ನವೆಂಬರ್ ೨೦೧೫). "ಕರ್ನಾಟಕದಲ್ಲಿನ ಭೂ ನೀತಿ ಮತ್ತು ಆಡಳಿತ:  ನಗರದಲ್ಲಿನ ಆಸ್ತಿ ಹಕ್ಕುದಾರಿಕೆ ದಾಖಲೆಗಳು" – ಕರ್ನಾಟಕದ ಅನುಭವ. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೪೩, ಬೆಂಗಳೂರು: ಐಸೆಕ್.

ಪಿ.ಜೆ. ದಿಲೀಪ್ ಕುಮಾರ್ (ಜನವರಿ ೨೦೧೬). "ವನ ಸಾಮ್ರಾಜ್ಯದ ಸಮರ್ಥನೆ:  ಭಾರತದ ೧೯೮೦ರ ಅರಣ್ಯ ಸಂರಕ್ಷಣಾ ಅಧಿನಿಯಮದ ಸಿದ್ಧಾಂತ ಮತ್ತು ಅನುಷ್ಠಾನ", ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ನೀಳ ಲೇಖನ ಸರಣಿ ಸಂಖ್ಯೆ ೪೪, ಬೆಂಗಳೂರು: ಐಸೆಕ್.



# ೬. ಪ್ರಕಟಣೆಗಳು

## ಪ್ರಕಟಿಸಿದ/ಸಂಪಾದಿಸಿದ ಗ್ರಂಥಗಳು

"ಪಟ್ಟಣಗಳ ಮತ್ತು ಪಟ್ಟಣಗಳ ಸುತ್ತಲಿನ ಪರಿಧಿಯಲ್ಲಿನ ಕೃಷಿಯ ಅಭಿವೃದ್ಧಿ ಪ್ರವೃತ್ತಿ" (ಸಂಪಾದಿತ). ನವದೆಹಲಿ: ವೆಸ್ಟ್‌ವಿಲ್ಲೆ ಪ್ರಕಟನಾ ಮಂದಿರ, ೨೦೧೫, ಸಂಪಾದಿಸಿದವರು: ಏಳುಮಲೈ ಕಣ್ಣನ್, ಆರ್. ಎಸ್. ದೇಶಪಾಂಡೆ, ಪ್ರೇಮ್‌ನಾಥ್, ಪಿ.ಜಿ. ಚೆಂಗಪ್ಪ, ಕೆ.ಆರ್.ಎಂ. ಸ್ವಾಮಿ ಮತ್ತು ಸಿ.ಪಿ.ಎ. ಅಯ್ಯರ್.

ಭಾರತದ ಉತ್ತರ ದಕ್ಷಿಣ ವಿಭಜನೆಯ ವಿಪರ್ಯಾಸ. ನವದೆಹಲಿ: ಸೇಜ್ ಪ್ರಕಟಣೆಗಳು, ಜೂನ್ ೨೦೧೫, ಸಾಮುಯೆಲ್ ಪಾಲ್ ಮತ್ತು ಕಲಾ ಎಸ್. ಶ್ರೀಧರ್.

"ಅರೆ ಒಣ ಪ್ರದೇಶಗಳಲ್ಲಿನ ಜೀವ ವೈವಿಧ್ಯತೆ: ಪರಿಸರದ ಮೇಲೆ ಮಾನವ ಅಭಿವೃದ್ಧಿಯ ಪರಿಣಾಮಗಳನ್ನು ತಿಳಿದುಕೊಳ್ಳುವ ಸಲುವಾಗಿನ ಎಲ್ಲೆಗೆರೆ ಅಧ್ಯಯನ", ಸ್ವಿಟ್ಜರ್ಲೆಂಡ್: ಸ್ಪ್ರಿಂಗರ್ ಅಂತರ್‌ರಾಷ್ಟ್ರೀಯ ಪ್ರಕಟಣೆ, ಐಎಸ್‌ಬಿಎನ್: ೯೭೮-೩-೩೧೯-೧೫೪೬೩-೩, ೨೦೧೫, ಸುನಿಲ್ ನೌಟಿಯಾಲ್, ಭಾಸ್ಕರ್, ಕೆ., ಮತ್ತು ವೈ.ಡಿ. ಇಮ್ರಾನ್ ಖಾನ್.

"ಜನರು ಮತ್ತು ಪೀಪಲ್ ಮರ: ಪಟ್ಟಣ ಪ್ರದೇಶಗಳಲ್ಲಿ ಪವಿತ್ರ ಮರಗಳ ಬಗ್ಗೆ ಇರುವ ಸಾಂಸ್ಕೃತಿಕ ಮನೋಭಾವ ಹಾಗೂ ಅದರ ಸಂರಕ್ಷಣೆ". ಅಮೇರಿಕಾ ಸಂಯುಕ್ತ ಸಂಸ್ಥಾನ: ಪೇಟ್ರಿಡ್ಜ್ ಪ್ರಕಟಣೆಗಳು, ಐಎಸ್‌ಬಿಎನ್: ೯೭೮-೧-೪೮೨೮-೫೮೭೬, ೨೦೧೫, ಕೆ.ವಿ. ರಾಜು, ಎಸ್. ಮಾನಸಿ, ಸುನಿಲ್ ನೌಟಿಯಾಲ್ ಮತ್ತು ಕೆ.ಪಿ. ರಶ್ಮಿ.

"ಅನೌಪಚಾರಿಕ ಆರ್ಥಿಕತೆಯಲ್ಲಿ ಕೆಲಸ ಹಾಗೂ ಆರೋಗ್ಯ: ದೆಹಲಿಯಲ್ಲಿನ ರಫ್ತು ಉದ್ದೇಶಿತ ಸಿದ್ಧಪಡಿಸಿದ ಉಡುಪು ವಲಯದೊಡನೆ ಇರುವ ಸಂಪರ್ಕಗಳು". ಡಾನಿಷ್ ಪುಸ್ತಕಗಳು, ಫೆಬ್ರವರಿ ೨೦೧೬ – ಸೋಬಿನ್ ಜಾರ್ಜ್.

"ಎಂಜಿಎನ್‌ಆರ್‌ಇಜಿಎ: ಉದ್ಯೋಗ, ವೇತನ ಹಾಗೂ ಗ್ರಾಮೀಣ ಭಾರತದಲ್ಲಿನ ವಲಸೆ". ಲಂಡನ್ ಮತ್ತು ನ್ಯೂಯಾರ್ಕ್: ರೌಟ್ಲೆಡ್ಜ್, ೨೦೧೬, ಪರಮೋದ್ ಕುಮಾರ್ ಹಾಗೂ ದೀಪಾನ್ವಿತಾ ಚಕ್ರಬೊರ್ತಿ.

"ಭಾರತೀಯ ಕೃಷಿ: ಕಾರ್ಯಕ್ಷಮತೆ, ಬೆಳವಣಿಗೆ ಮತ್ತು ಸವಾಲುಗಳು: ರಮೇಶ್ ಕುಮಾರ್ ಶರ್ಮ ಗೌರವಾರ್ಥಕ್ಕಾಗಿನ ಪ್ರಬಂಧಗಳು" (ಸಂಪಾದಿತ). ಲಂಡನ್ ಮತ್ತು ನ್ಯೂಯಾರ್ಕ್: ರೌಟ್ಲೆಡ್ಜ್, ೨೦೧೬, ಪರಮೋದ್ ಕುಮಾರ್ ಮತ್ತು ಎಸ್. ಮೋಹನ್ ಕುಮಾರ್.

## ಐಸೆಕ್‌ನ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ನಿಯತಕಾಲಿಕೆ

ಈ ನಿಯತಕಾಲಿಕೆಯು ಈಗ ಐಸೆಕ್ ಮತ್ತು ಸ್ಪ್ರಿಂಗರ್ – ಇವೆರಡರ ಸಹ ಪ್ರಕಟಣೆಯಾಗಿದೆ. ಹೊಸ ವ್ಯವಸ್ಥೆಯನುಸಾರ ಇದುವರೆಗೆ ಈ ನಿಯತಕಾಲಿಕೆಯ ಎರಡು ಸಂಚಿಕೆಗಳು ಅಂದರೆ ಸಂಪುಟ ೧೭ರ ಒಂದು ಮತ್ತು ಎರಡನೆಯ ಸಂಚಿಕೆಗಳು ಹೊರ ಬಂದಿವೆ. ನಿಯತ ಕಾಲಿಕೆಯ ಮುಂದಿನ ಸಂಚಿಕೆಯು (ಸಂಪುಟ ೧೮, ಸಂಚಿಕೆ ೧) ಮುದ್ರಣಾಲಯದಲ್ಲಿ ಮುದ್ರಿತವಾಗುತ್ತಿದೆ.

ಸಂಶೋಧನಾ ಲೇಖನಗಳು/ಬರಹಗಳು, ಸಂಶೋಧನಾ ಟಿಪ್ಪಣಿಗಳು ಇತ್ಯಾದಿಗಳನ್ನು ಪ್ರಕಟಣೆಗಾಗಿ ಈಗ ಆನ್‌ಲೈನ್ ಮುಖಾಂತರವೇ ಅಂದರೆ ಎಚ್‌ಟಿಟಿಪಿ://ಡಬ್ಲ್ಯುಡಬ್ಲ್ಯುಡಬ್ಲ್ಯು.ಸ್ಪ್ರಿಂಗರ್.ಕಾಮ್/ ಇಕನಾಮಿಕ್ಸ್/ಗ್ರೋತ್/ಜರ್ನಲ್/೪೦೮೪೭ ಮೂಲಕವೇ ಸಲ್ಲಿಸಬೇಕಾಗಿದೆ.

## ಐಸೆಕ್ ನೀಳ ಲೇಖನ ಸರಣಿ

ಈ ಸರಣಿಯ ಪೂರ್ಣ ವಿವರಗಳನ್ನು ಈಗಾಗಲೇ ಪುಟ ಸಂಖ್ಯೆ ೯೧ ರಲ್ಲಿ ನೀಡಲಾಗಿದೆ.

# ಐಸೆಕ್

## ಐಸೆಕ್‌ನ ಕಾರ್ಯನಿರತ ಸಂಶೋಧನಾ ಲೇಖನಗಳು

**ಶೀರ್ಷಿಕೆ** : ಅಸಮಾನತೆಯ ಮೇಲೆ ಮೂಲಭೂತ ಸೌಕರ್ಯಗಳನ್ನೊದಗಿಸಿದ್ದರಿಂದಾದ ಪರಿಣಾಮಗಳು: ಭಾರತದ ಸಾಕ್ಷ್ಯ

**ಲೇಖಕರು** : ಸುಮೇಧಾ ಬಾಜರ್ ಮತ್ತು ಮೀನಾಕ್ಷಿ ರಾಜೀವ್

**ಸಂಖ್ಯೆ** : ೩೩೭

ಈ ಸಂಶೋಧನಾ ಲೇಖನವು ಭೌತಿಕ ಮೂಲಭೂತ ಸೌಕರ್ಯಗಳು ಮತ್ತು ಅಸಮಾನತೆ – ಇವುಗಳ ನಡುವಿನ ಸಂಪರ್ಕದ ಬಗ್ಗೆ ವಿಶ್ಲೇಷಿಸುತ್ತದೆ ಮತ್ತು ಭಾರತದ ೧೭ ಪ್ರಧಾನ ರಾಜ್ಯಗಳಲ್ಲಿ ಈ ಸಂಪರ್ಕದ ಸ್ವರೂಪವನ್ನು ನಿರ್ಧರಿಸುತ್ತದೆ. ಜೊತೆಗೆ ಬಳಿಕೆ ಅಸಮಾನತೆಯ ಮೇಲೆ ಮೂಲಭೂತ ಸೌಕರ್ಯದ ಪರಿಣಾಮವು (ಪರಿಶೀಲನೆಯಲ್ಲಿರುವ ಮೂಲಭೂತ ಸೌಕರ್ಯದ ಮಾದರಿಗನುಗುಣವಾಗಿ) ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ. ಇದೂ ಅಲ್ಲದೆ ಮೂಲಭೂತ ಸೌಕರ್ಯ ಹಾಗೂ ಅಸಮಾನತೆಗಳ ಸಂಬಂಧವು ಯಾವಾಗಲೂ ನಕಾರಾತ್ಮಕವಾಗಿಯೇ ಇರಬೇಕಾಗಿಲ್ಲವೆಂದೂ ಸಂಶೋಧನೆಯು ತಿಳಿಸುತ್ತದೆ. ಈ ಸಂಶೋಧನೆಯ ಫಲಿತಾಂಶಗಳ ಪ್ರಕಾರ ಮೂಲಭೂತ ಸೌಕರ್ಯಗಳ ಕೆಲವು ಅಂಶಗಳು, ಅದರಲ್ಲೂ ಮುಖ್ಯವಾಗಿ ವಿದ್ಯುಚ್ಛಕ್ತಿ ಮತ್ತು ರಸ್ತೆಗಳು, ಪ್ರಾದೇಶಿಕ ಮಟ್ಟದಲ್ಲಿ ವ್ಯಕ್ತಿಗಳ ನಡುವಿನ ಹೆಚ್ಚುತ್ತಿರುವ ಅಸಮಾನತೆಯ ಜೊತೆಗೆ ಒಡಗೂಡಿದೆ. ಸದರಿ ಲೇಖನವು ಈ ಫಲಿತಾಂಶಕ್ಕೂ ಕೆಲವು ವಿವರಣೆಗಳನ್ನು ನೀಡುತ್ತಿದೆ. ಹಾಗೆಂದ ಕೂಡಲೇ ಈ ಅಧ್ಯಯನವು ಸಾರಿಗೆ ಯೋಜನೆಗಳನ್ನೇ ಆಗಲಿ ಅಥವಾ ಮೂಲಭೂತ ಸೌಕರ್ಯ ಯೋಜನೆಗಳನ್ನೇ ಆಗಲಿ ಕೈ ಬಿಡಬೇಕೆಂದು ಹೇಳುತ್ತಿಲ್ಲ. ಆದರೆ ಈ ಯೋಜನೆಗಳ ಜೊತೆ ಜೊತೆಗೇ ಪೂರಕ ಕಾರ್ಯನೀತಿಗಳಿಗಾಗಿಯೂ ಸರ್ಕಾರವು ಬಂಡವಾಳವನ್ನು ವಿನಿಯೋಗಿಸಬೇಕೆಂದು ಶಿಫಾರಸ್ಸು ಮಾಡುತ್ತದೆ. ಮೂಲಭೂತ ಸೌಕರ್ಯಗಳು ಅವಕಾಶಗಳನ್ನೊದಗಿಸುವುದು ನಿಜವಾದರೂ, ಈ ಸೌಕರ್ಯಗಳನ್ನೆಲ್ಲಾ ಯಾರು ಇವುಗಳ ಲಾಭವನ್ನು ಪಡೆದುಕೊಳ್ಳಲು ಶಕ್ತರಾಗಿದ್ದಾರೋ ಅವರೇ ದೋಚಿಕೊಳ್ಳುವುದಕ್ಕೆ ಅವಕಾಶ ಕೊಡಬಾರದಾಗಿದೆ.

**ಶೀರ್ಷಿಕೆ** : ಉತ್ಪನ್ನದ ಮಟ್ಟದಲ್ಲಿ ರಫ್ತು ಸ್ಪರ್ಧಾತ್ಮಕತೆಯನ್ನು ಅಂದಾಜು ಮಾಡುವಿಕೆ : ಒಂದು ಅಧ್ಯಯನ ಪ್ರಕರಣವಾಗಿ ಭಾರತೀಯ ಜವಳಿ ಉದ್ದಿಮೆ.

**ಲೇಖಕರು** : ತರುಣ್ ಅರೋರಾ

**ಸಂಖ್ಯೆ** : ೩೩೮

ತರುಣ್ ಅರೋರಾರವರ ಈ ಸಂಶೋಧನಾ ಲೇಖನವು ಭಾರತವು ರಫ್ತು ಮಾಡುತ್ತಿರುವ ಮೇಲ್ತುದಿಯ ಹದಿನೈದು ಜವಳಿ ಉತ್ಪನ್ನಗಳ ರಫ್ತು ಸ್ಪರ್ಧಾತ್ಮಕತೆಯನ್ನು ಅಂದಾಜು ಮಾಡುತ್ತದೆ. ಈ ಹದಿನೈದು ಉತ್ಪನ್ನಗಳನ್ನು ಮೇಲ್ತುದಿಯ ಆರು ಜವಳಿ ರಫ್ತು ಗಮ್ಯ ಸ್ಥಾನಗಳಿಗೆ ತಲುಪಿಸಲಾಗುತ್ತಿದೆ (ಪ್ರತಿ ರಫ್ತು ಗಮ್ಯಸ್ಥಾನಕ್ಕೂ ಪ್ರತ್ಯೇಕವಾಗಿ). ಅಂದಾಜು ಮಾಡುವಿಕೆಯು ರಫ್ತಿನ ಜಗ್ಗುವಿಕೆಯನ್ನನುಸರಿಸಿದ ಬೆಲೆ ಮತ್ತು ಆದಾಯಗಳನ್ನು ಬಳಸಿಕೊಂಡು ೬ ಸಂಖ್ಯಾ ಮಟ್ಟದ ಎಚ್‌ಎಸ್ ವರ್ಗೀಕರಣದ ಪ್ರಕಾರ ಆಗುತ್ತಿದೆ. ರಫ್ತು ಜಗ್ಗುವಿಕೆಯನ್ನು ಪ್ರತಿ ರಾಷ್ಟ್ರಕ್ಕೂ ಪ್ರತ್ಯೇಕವಾಗಿ ಚಲನಶೀಲ ತಜ್ಞ ದತ್ತಾಂಶವನ್ನು ಬಳಸಿ ಅಂದಾಜು ಮಾಡಲಾಗುತ್ತಿದೆ. ಆಯಾ ನಿರ್ದಿಷ್ಟ ರಫ್ತು ಗಮ್ಯಸ್ಥಾನಗಳಿಗೆ ರಫ್ತು ಮಾಡಲಾಗುವ ಉತ್ಪನ್ನಗಳ ಮುನ್ಸೂಚನೆಯನ್ನು ನೀಡುವ ಸಲುವಾಗಿ ಉತ್ಪನ್ನ ನಿರ್ದಿಷ್ಟ ಜಗ್ಗುವಿಕೆ ಅಂದಾಜುಗಳನ್ನು ಬಳಸಲಾಗುತ್ತಿದೆ. ಭಾರತಕ್ಕಾಗಿ ಗಮ್ಯಸ್ಥಾನ ನಿರ್ದಿಷ್ಟ ರಫ್ತು ಅಭಿವೃದ್ಧಿ ನೀತಿಗಳನ್ನು ರೂಪಿಸಲು ಫಲಿತ ಅಂದಾಜುಗಳು ನೆರವಾಗುತ್ತವೆ.

**ಶೀರ್ಷಿಕೆ** : ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ (ಎಂಜಿಎನ್‌ಆರ್‌ಇಜಿಎಸ್) ಪರಿಶಿಷ್ಟ ಜಾತಿ (ಎಸ್ ಸಿ) ಕುಟುಂಬಗಳ ಭಾಗವಹಿಸುವಿಕೆ: ಕರ್ನಾಟಕದ ಸಾಕ್ಷ್ಯ

**ಲೇಖಕರು** : ಆರ್. ಮಂಜುಳ ಮತ್ತು ಡಿ. ರಾಜಶೇಖರ್

**ಸಂಖ್ಯೆ** : ೩೩೯

ಈ ಸಂಶೋಧನಾ ಲೇಖನವು ಪ್ರಾಥಮಿಕ ದತ್ತಾಂಶ ಹಾಗೂ ಉಪ ದತ್ತಾಂಶಗಳೆರಡರ ನೆರವಿನಿಂದ ಕರ್ನಾಟಕದಲ್ಲಿ ಎಂಜಿಎನ್‌ಆರ್‌ಇಜಿಎಸ್ ಯೋಜನೆಯಲ್ಲಿ ಎಸ್ ಸಿ ಕುಟುಂಬಗಳು ಯಾವ ಪ್ರಮಾಣದಲ್ಲಿ ಭಾಗವಹಿಸಿವೆ ಮತ್ತು ಎಷ್ಟರ ಮಟ್ಟಿಗೆ ಪ್ರಯೋಜನವನ್ನು ಪಡೆದುಕೊಂಡಿವೆ ಎಂಬುದನ್ನು ವಿಶ್ಲೇಷಿಸುತ್ತದೆ. ಪರಿಶಿಷ್ಟ ಜಾತಿ ಜನಸಂಖ್ಯೆಯು ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಎಂಜಿಎನ್‌ಆರ್‌ಇಜಿಎಸ್ ಉದ್ಯೋಗಕ್ಕಾಗಿನ ಬೇಡಿಕೆ ಮತ್ತು ಎಸ್ ಸಿ ಕುಟುಂಬಗಳ ಭಾಗವಹಿಸುವಿಕೆ – ಇವೆರಡೂ ಹೆಚ್ಚಾಗಿದ್ದುದು ಅಧ್ಯಯನದಿಂದ ಕಂಡು ಬಂದಿತು. ಆದರೂ ಸಹ, ಎಸ್ ಸಿ ಕುಟುಂಬಗಳು ಉದ್ಯೋಗ ಪಡೆದುಕೊಂಡ ದಿವಸಗಳ ಸಂಖ್ಯೆಯು ತುಲನಾತ್ಮಕವಾಗಿ ಕಡಿಮೆಯೇ ಇತ್ತು. ಕರ್ನಾಟಕದಲ್ಲಿ ಎಂಜಿಎನ್‌ಆರ್‌ಇಜಿಎಸ್ ಉದ್ಯೋಗ ಹಂಚುವಿಕೆಯಲ್ಲಿ ಎಸ್ ಸಿ ಕುಟುಂಬಗಳಿಗೆ ತಾರತಮ್ಯವನ್ನೆಸಗಲಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ಈ ಲೇಖನವು ಎಂಜಿಎನ್‌ಆರ್‌ಇಜಿಎಸ್ ಯೋಜನೆಯಲ್ಲಿ ಭಾಗವಹಿಸಲು ಎಸ್ ಸಿ ಕುಟುಂಬಗಳನ್ನು ನಿರ್ಬಂಧಿಸಿದ ಅಂಶಗಳ ಬಗ್ಗೆಯೂ ಚರ್ಚಿಸುತ್ತದೆ.

# ಐಸೆಕ್



**ಶೀರ್ಷಿಕೆ** : ಭಾರತದಲ್ಲಿ ಸೇವೆಗಳ ವ್ಯಾಪಾರ ವಹಿವಾಟು, ಆರ್ಥಿಕ ಅಭಿವೃದ್ಧಿ ಮತ್ತು ಬಾಹ್ಯ ಸ್ಥಿರೀಕರಣ: ಒಂದು ಮೂಲಭೂತ ಅನ್ವೇಷಣೆ
**ಲೇಖಕರು** : ಪಿ. ಮಿನಿ ಥಾಮಸ್
**ಸಂಖ್ಯೆ** : ೩೪೦

ಈ ಸಂಶೋಧನಾ ಲೇಖನವು ಸುಧಾರಣಾ ನಂತರದ ಅವಧಿಯಲ್ಲಿನ ಭಾರತೀಯ ಆರ್ಥಿಕತೆಯಲ್ಲಿ ಸೇವಾ ವ್ಯಾಪಾರ ವಹಿವಾಟು, ಆರ್ಥಿಕ ಅಭಿವೃದ್ಧಿ ಮತ್ತು ಬಾಹ್ಯ ಸ್ಥಿರೀಕರಣಗಳ ನಡುವಿನ ಪರಸ್ಪರ ಸಂಬಂಧವನ್ನು ಅರಿತುಕೊಳ್ಳುವ ಪ್ರಯತ್ನವನ್ನು ನಡೆಸಿದೆ. ಭಾರತದ ಆರ್ಥಿಕ ಅಭಿವೃದ್ಧಿ ಮತ್ತು ಚಾಲ್ತಿ ಖಾತೆ ಸ್ಥಿರೀಕರಣಕ್ಕಾಗಿ ಗಮ್ಯ ಅಂಶವಾಗಿ ಪರಿಗಣಿಸದ ಅಂಶಗಳು ಮತ್ತು ಇತರ ಅಗೋಚರ ಅಂಶಗಳ ಮೇಲೆ ಅಂತರ್‍ರಾಷ್ಟ್ರೀಯ ವ್ಯಾಪಾರ ವಹಿವಾಟು ಯಾವ ರೀತಿ ಕೊಡುಗೆ ನೀಡಿವೆ ಎಂಬುದನ್ನು ಈ ಅಧ್ಯಯನದಲ್ಲಿ ವಿವರಣಾತ್ಮಕವಾಗಿ ಪರೀಕ್ಷಿಸಲಾಗಿದೆ. ಮೂರು ವ್ಯಾಪ್ತ ಆರ್ಥಿಕ ಅಂಶಗಳ ನಡುವಿನ ಸಂಬಂಧವನ್ನು ಸಹ ಸಮಗ್ರತೆಗಾಗಿ ಎಆರ್‌ಡಿಎಲ್ ಕಾರ್ಯತಂತ್ರವನ್ನು ಬಳಸಿ ಅಂದಾಜು ಮಾಡಲಾಗಿದೆ – (೧೯೯೬–೯೭ ರಿಂದ ೨೦೧೧–೧೨; ಕ್ಯೂ ೪ ರ ನಡುವಿನ ಅವಧಿಗಾಗಿ). ಈ ಅಧ್ಯಯನವು ಭಾರತೀಯ ಆರ್ಥಿಕತೆಗಾಗಿ ಚಾಲ್ತಿ ಖಾತೆ ಶಿಲ್ಕು, ಜಿಡಿಪಿ ಮತ್ತು ಸೇವಾ ವ್ಯಾಪಾರ ವಹಿವಾಟುಗಳ ನಡುವೆ ಸಹ ಸಮಗ್ರ ಸಂಬಂಧ ಇದೆಯೆಂಬುದನ್ನು ಕಂಡುಹಿಡಿದಿದೆ. ಜೊತೆಗೆ ಭಾರತೀಯ ಆರ್ಥಿಕತೆಯಲ್ಲಿ ನಿವ್ವಳ ಸೇವಾ ರಫ್ತಿಗೆ ಹೋಲಿಸಿದರೆ, ಕಾರ್ಮಿಕರ ಪಾವತಿಗಳು ಹೆಚ್ಚು ಸಂಕಷ್ಟಕ್ಕೆ ಈಡಾಗಿವೆ ಎಂಬ ಮೂಲಭೂತ ಸಾಕ್ಷ್ಯವನ್ನೂ ಈ ಅಧ್ಯಯನವು ಕಂಡುಹಿಡಿದಿದೆ.

**ಶೀರ್ಷಿಕೆ** : ಉತ್ತರ ಬಂಗಾಳದ ಮಹಿಳಾ ಟೀ ಕಾರ್ಮಿಕರ ಐತಿಹಾಸಿಕ ಹಿನ್ನೆಲೆಯನ್ನು ಗುರುತಿಸುವಿಕೆ
**ಲೇಖಕರು** : ಪ್ರಿಯಾಂಕಾ ದತ್ತ
**ಸಂಖ್ಯೆ** : ೩೪೧

ಈ ಸಂಶೋಧನಾ ಲೇಖನವು ಉತ್ತರ ಬಂಗಾಳದ ಮಹಿಳಾ ಟೀ ಕಾರ್ಮಿಕರ ಐತಿಹಾಸಿಕ ಹಿನ್ನೆಲೆಯನ್ನು ಇದುವರೆಗೂ ನಿರ್ಲಕ್ಷಿಸಿದ್ದ ಅಂಶಗಳಾದ ಕಾರ್ಮಿಕ ನೇಮಕಾತಿಯಲ್ಲಿನ ಲಿಂಗ ಪ್ರಬೇಧ ಸ್ವರೂಪ, ವಲಸೆ, ಕಾರ್ಮಿಕ ನಿಯಂತ್ರಣ ಪದ್ಧತಿಗಳು ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಕಂಡುಹಿಡಿಯುವುದಕ್ಕೆ ಪ್ರಯತ್ನಿಸಿದೆ. ಈ ಪ್ರಯತ್ನವನ್ನು ಸದರಿ ಪ್ರಕ್ರಿಯೆಯಲ್ಲಿ ತೊಡಗಿರುವ ಕರ್ಮಚಾರಿಗಳ ಜನಾಂಗ, ವರ್ಗ, ಹಿನ್ನೆಲೆ, ಲೈಂಗಿಕತೆ ಇತ್ಯಾದಿಗಳ ಪರಸ್ಪರ ಜಾಲವನ್ನು ಹೆಣೆಯುವಿಕೆಯ ಮೂಲಕ ಮಾಡಲಾಗಿದೆ.

ಪ್ರಸ್ತುಕ ಕಾಲಮಾನದ ಅವಧಿಯಲ್ಲಿ ಉತ್ತರ ಬಂಗಾಳದ ಟೀ ಉದ್ದಿಮೆಯಲ್ಲಿ ಮಹಿಳಾ ಕಾರ್ಯಪಡೆಯನ್ನು ಮೂಲೆಗುಂಪು ಮಾಡಿರುವುದರ ಹಿಂದಿನ ಕೆಲವು ಬಲವಾದ ಕಾರಣಗಳು ಹಿಂದಿನ ವಸಾಹತುಷಾಹಿ ಕಾಲಮಾನದ ವಿವಿಧ ಪದ್ಧತಿಗಳು ಮತ್ತು ಕಾರ್ಯವಿಧಾನಗಳಲ್ಲಿ ತನ್ನ ಬೇರುಗಳನ್ನು ಅಡಗಿಸಿಕೊಂಡಿದೆಯೆಂಬ ಫಲಿತಾಂಶ ನಿರೂಪಣೆಯನ್ನು ಅಧ್ಯಯನದ ಕೊನೆಯಲ್ಲಿ ಮಾಡಲಾಗಿದೆ.

**ಶೀರ್ಷಿಕೆ** : ಮಣಿಪುರದಲ್ಲಿ ಕೊರಿಯಾದ ಮಾಧ್ಯಮ ಬಳಕೆ: ಕೊರಿಯಾ ಸಂಸ್ಕೃತಿಯೊಂದಿಗೆ ಬೆರೆಯುವುದಕ್ಕೆ ಒಂದು ವೇಗವರ್ಧಕ
**ಲೇಖಕರು** : ಮಾರ್ಚಂಗ್ ರಿಮೀಂಗಮ್
**ಸಂಖ್ಯೆ** : ೩೪೨

ಈ ಕಾರ್ಯನಿರತ ಸಂಶೋಧನಾ ಲೇಖನವು ಈಚಿನ ದಶಕದಲ್ಲಿ ಕೊರಿಯಾ ಮತ್ತು ಐರೋಪ್ಯ ಸಂಸ್ಕೃತಿಗಳ ಸಂಮಿಶ್ರಣವಾದ ಕೊರಿಯಾ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಮಣಿಪುರದ ಯುವ ಜನತೆಗೆ ಕೊರಿಯಾ ಮಾಧ್ಯಮದ ಬಳಕೆಯು ಹೇಗೆ ವೇಗವರ್ಧಕವಾಗಿ ಕೆಲಸ ಮಾಡಿತು ಎಂಬುದನ್ನು ಚರ್ಚಿಸಿದೆ. ಮಣಿಪುರದ ಯುವ ಜನತೆಯು ಅವರುಗಳ ಕುಟುಂಬದ ಆರ್ಥಿಕ ಹಿನ್ನೆಲೆ, ಶೈಕ್ಷಣಿಕ ಮಟ್ಟ, ಧರ್ಮ, ವೃತ್ತಿ ಮತ್ತು ಜನಾಂಗ ಇದಾವುದೂ ಗಣನೆಯಲ್ಲಿಲ್ಲದಂತೆ ಕೊರಿಯಾ ಸಂಸ್ಕೃತಿಯನ್ನು ಅಳವಡಿಸಿ ಕೊಂಡಿದ್ದಾರೆ. ಈ ಯುವ ಜನತೆಯು ಕೊರಿಯಾದ ಮಾಧ್ಯಮದಿಂದ ಅದರಲ್ಲೂ ವಿಶೇಷವಾಗಿ ಚಲನ ಚಿತ್ರಗಳು ಮತ್ತು ನಾಟಕಗಳಿಂದ ಪ್ರೇರೇಪಿತರಾಗಿದ್ದಾರೆ. ಕೊರಿಯಾ ಸಂಸ್ಕೃತಿಯ ಕೆಲವು ಅಂಶಗಳನ್ನು ಅಂದರೆ ಆಹಾರ, ಕೇಶ ವಿನ್ಯಾಸ, ಅಲಂಕಾರ, ಚಲನಚಿತ್ರಗಳು, ಬಟ್ಟೆಬರೆ ಹಾಗೂ ಭಾಷೆಯು ಅವರಿಗೆ ಹೊಂದಿಕೆಯಾದ್ದರಿಂದ ಮತ್ತು ಇಷ್ಟವಾದ್ದರಿಂದ ಅದು ಯಾವ ದೇಶದ್ದು ಎಂಬುದು (ದಕ್ಷಿಣ ಕೊರಿಯಾ) ಬಹಳಷ್ಟು ಜನರಿಗೆ ಗೊತ್ತಿಲ್ಲದಿದ್ದರೂ ಸಹ ಯುವ ಜನತೆಯು ಅವುಗಳನ್ನು ಅಳವಡಿಸಿಕೊಂಡಿದ್ದಾರೆ. ಮಣಿಪುರದ ಜನತೆಯು ಹೊಸ ಅಥವಾ ಆಧುನಿಕ ಸಂಸ್ಕೃತಿಯ ಅಳವಡಿಕೆಗೆ ತೆರೆದ ಮನಸ್ಸುಳ್ಳವರಾಗಿದ್ದರೂ, ತಮ್ಮ ಹುಟ್ಟಿನಿಂದ ಬಂದ ಸಂಸ್ಕೃತಿಯನ್ನೂ ಸಹ ಉಳಿಸಿಕೊಂಡಿದ್ದಾರೆ.

**ಶೀರ್ಷಿಕೆ** : ಭಾರತದಲ್ಲಿ ಶಿಕ್ಷಿತರ ನಿರುದ್ಯೋಗದ ಸಾಮಾಜಿಕ–ಆರ್ಥಿಕ ನಿರ್ಧಾರಕಗಳು
**ಲೇಖಕರು** : ಇಂದ್ರಜಿತ್ ಬೈರಾಗ್ಯ
**ಸಂಖ್ಯೆ** : ೩೪೩

# ಐಸೆಕ್

ಈ ಸಂಶೋಧನಾ ಲೇಖನದಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ (ಎನ್‌ಎಸ್‌ಎಸ್‌ಓ) ವಿವಿಧ ಸುತ್ತುಗಳನ್ನು ಬಳಸಿಕೊಂಡು ಭಾರತದಲ್ಲಿ ಶಿಕ್ಷಿತರ ನಿರುದ್ಯೋಗಕ್ಕೆ ಕಾರಣವಾದ ಸಾಮಾಜಿಕ–ಆರ್ಥಿಕ ಮತ್ತು ಪ್ರಾದೇಶಿಕ ಅಂಶಗಳನ್ನು ಕಂಡು ಹಿಡಿಯುವ ಪ್ರಯತ್ನವನ್ನು ಮಾಡಲಾಗಿದೆ. ಈ ಅಧ್ಯಯನದಿಂದ ಕಂಡು ಬಂದದ್ದೇನೆಂದರೆ ತಾಂತ್ರಿಕ ಶಿಕ್ಷಣವನ್ನು ಹೊಂದಿದ್ದ ಮಾತ್ರಕ್ಕೆ ಉದ್ಯೋಗ ಖಾತರಿಯಾಗುವುದಿಲ್ಲ. ಆದರೆ ಭಾರತ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ತಾಂತ್ರಿಕ ಶಿಕ್ಷಣವನ್ನು ಉತ್ತೇಜಿಸುವ ಕ್ರಮಗಳನ್ನು ಕೈಗೊಂಡಿದ್ದು, ಅಧ್ಯಯನದ ಫಲಿತಾಂಶಗಳನ್ನು ನೋಡಿದಾಗ ಇದು ಸರಿಯೇ ಎಂದು ಪ್ರಶ್ನಿಸುವಂತಾಗಿದೆ. ಹೆಚ್ಚು ಕೈಗಾರಿಕೆಗಳನ್ನು ಹೊಂದಿರುವ ರಾಜ್ಯಗಳು ಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತವಾದರೂ, ಈ ರಾಜ್ಯಗಳು ಉತ್ಪಾದನಾ ಕಾರ್ಯದಲ್ಲಿ ಎಲ್ಲ ಶಿಕ್ಷಿತರನ್ನೂ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಜೊತೆಗೆ ಶಿಕ್ಷಿತರು ಹಾಗೂ ಶಿಕ್ಷಿತರಲ್ಲದವರಲ್ಲಿನ ನಿರುದ್ಯೋಗಿಗಳಲ್ಲಿ ಹೆಚ್ಚಿನ ಜನರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳದೆ ಇರುವುದರಿಂದ ಸೂಕ್ತ ಉದ್ಯೋಗಕ್ಕೆ ಸೂಕ್ತ ಜನರನ್ನು ಹೊಂದಿಸುವುದೂ ಸಮಸ್ಯೆಯಾಗುತ್ತದೆ ಮತ್ತು ಭಾರತದಲ್ಲಿನ ಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆಗೆ ಇದೂ ಒಂದು ಮುಖ್ಯ ಕಾರಣವಾಗಿರಬಹುದಾಗಿದೆ. ಇದೂ ಅಲ್ಲದೆ ಸಾಮಾಜಿಕ ಗುಂಪುಗಳು, ಲಿಂಗ ಪ್ರಬೇಧ, ಧರ್ಮಗಳು, ಪ್ರದೇಶಗಳು ಹಾಗೂ ಇನ್ನಿತರ ಸಾಮಾಜಿಕ–ಆರ್ಥಿಕ ಅಂಶಗಳಾದ್ಯಂತವೂ ಈ ಸಮಸ್ಯೆಯ ಪ್ರಮಾಣದಲ್ಲಿ ವ್ಯತ್ಯಾಸವಿರುವುದು ಅಧ್ಯಯನದಿಂದ ಕಂಡು ಬಂದಿದೆ.

**ಶೀರ್ಷಿಕೆ** : ಸೇವಾ ವಲಯದ ತೆರಿಗೆ ಕೊಡುಗೆ: ಭಾರತದಲ್ಲಿ ಸೇವೆಗಳಿಗೆ ತೆರಿಗೆ ಹಾಕುವಿಕೆಯ ಬಗ್ಗೆ ಒಂದು ಪ್ರಾಯೋಗಿಕ ಅಧ್ಯಯನ
**ಲೇಖಕರು** : ಪಿ. ಮಿನಿ ಥಾಮಸ್
**ಸಂಖ್ಯೆ** : ೩೪೪

ಈ ಸಂಶೋಧನಾ ಲೇಖನದಲ್ಲಿ ಭಾರತದಲ್ಲಿ ಸೇವೆಗಳ ಮೇಲೆ ತೆರಿಗೆ ಹಾಕುವುದನ್ನು ವ್ಯಾಪ್ತ ಆರ್ಥಿಕ ದೃಷ್ಟಿಕೋನದಿಂದ ನೋಡಲಾಗಿದ್ದು, "ಸಕಾರಾತ್ಮಕ ಪಟ್ಟಿ ಕಾರ್ಯಮಾರ್ಗ"ದ ಅವಧಿಯಾಗಿದ್ದ ೧೯೯೪–೯೫ ರಿಂದ ೨೦೧೧–೧೨ರ ವರೆಗಿನ ಸೇವಾ ತೆರಿಗೆ ಆದಾಯದ ಮಟ್ಟ ಮತ್ತು ಸಂಯೋಜನೆಯಂತಹ ವಿಶಾಲ ಅಂಶಗಳ ಮೇಲೆ ಗಮನವನ್ನು ಕೇಂದ್ರೀಕರಿಸಲಾಗಿದೆ. ಭಾರತದ ಅರ್ಥ ವ್ಯವಸ್ಥೆಗಾಗಿ ಸೇವಾ ತೆರಿಗೆ ಆದಾಯ ಸಂಗ್ರಹಣೆಯ ಜಗ್ಗುವಿಕೆಯನ್ನು ಒಗ್ಗೂಡಿಸಿದ ಎಫ್‌ಜಿಎಲ್‌ಎಸ್ ಮೂಲಕ ಅಂದಾಜು ಮಾಡಲಾಗಿದ್ದು, ಇದಕ್ಕಾಗಿ ದತ್ತಾಂಶವನ್ನು ಸೇವಾ ತೆರಿಗೆ ನಿರ್ದೇಶನಾಲಯ ಮತ್ತು ರಾಷ್ಟ್ರೀಯ ಲೆಕ್ಕ ಪತ್ರ ಅಂಕಿ ಅಂಶಗಳ ಮೂಲಕ ಪಡೆಯಲಾಗಿದೆ. ಬಳಕೆ ಆಧಾರಿತ ತೆರಿಗೆಯಾಗಿ ಸೇವಾ ತೆರಿಗೆಯ ಪ್ರಾಮುಖ್ಯತೆಯನ್ನೂ ಸಹ ವಿವರವಾಗಿ ವಿಶ್ಲೇಷಿಸಲಾಗಿದೆ. ಈ ಸಂಶೋಧನೆಯಿಂದ ವ್ಯಕ್ತವಾದದ್ದೇನೆಂದರೆ ಭಾರತದ ಜಿಡಿಪಿಯಲ್ಲಿನ ಹೆಚ್ಚಿನ ಪಾಲನ್ನು ಹೊಂದಿರುವುದಕ್ಕೆ ತಕ್ಕ ಹಾಗೆ ಕೇಂದ್ರದ ತೆರಿಗೆ ಆದಾಯಕ್ಕೆ ಸೇವಾ ತೆರಿಗೆಯಿಂದ ಆದಾಯ ಬರುತ್ತಿಲ್ಲ ಎಂಬುದಾಗಿದೆ. ಜೊತೆಗೆ ಸೇವಾ ತೆರಿಗೆ ಆದಾಯ ಸಂಗ್ರಹಣೆಯ ಜಗ್ಗುವಿಕೆಯು ೧ಕ್ಕಿಂತ ಕಡಿಮೆಯಿದ್ದು, ಭಾರತದ ಕಡಿಮೆ ತೆರಿಗೆ – ಜಿಡಿಪಿ ಅನುಪಾತಕ್ಕೆ ಹೋಲಿಸಿದಾಗ ರಾಷ್ಟ್ರದ ಸೇವಾ ತೆರಿಗೆ ಹಾಕುವಿಕೆ ಕಾರ್ಯದಲ್ಲಿ ಪ್ರಯತ್ನಿಸದ ಆದಾಯ ಸಾಮರ್ಥ್ಯ ಬಹಳವಾಗಿದೆ ಎಂದು ಈ ಅಧ್ಯಯನವು ಕಂಡುಹಿಡಿದಿದೆ.

**ಶೀರ್ಷಿಕೆ** : ಕೃಷಿ ಅಭಿವೃದ್ಧಿಯ ಮೇಲೆ ಗ್ರಾಮೀಣ ಮೂಲಭೂತ ಸೌಕರ್ಯದ ಪರಿಣಾಮ: ಕರ್ನಾಟಕದಲ್ಲಿನ ಜಿಲ್ಲಾ ಮಟ್ಟದ ವಿಶ್ಲೇಷಣೆ
**ಲೇಖಕರು** : ಸೌಮ್ಯ ಮಂಜುನಾಥ್ ಮತ್ತು ಏಳುಮಲೈ ಕಣ್ಣನ್
**ಸಂಖ್ಯೆ** : ೩೪೫

ಈ ಸಂಶೋಧನಾ ಲೇಖನವು ಕರ್ನಾಟಕ ರಾಜ್ಯದಲ್ಲಿ ಕೃಷಿ ಉತ್ಪಾದಕತೆ ಮತ್ತು ಗ್ರಾಮೀಣ ಮೂಲಭೂತ ಸೌಕರ್ಯಗಳ ನಡುವಿನ ಸಂಬಂಧವನ್ನು ಪ್ರಾಯೋಗಿಕವಾಗಿ ಅನ್ವೇಷಿಸಿದೆ. ಈ ವಿಶ್ಲೇಷಣೆಯನ್ನು ಕರ್ನಾಟಕದ ಜಿಲ್ಲೆಗಳಲ್ಲಿ ೧೯೮೦ ರಿಂದ ೨೦೧೦ ರ ಅವಧಿಗಾಗಿ ಮಾಡಲಾಗಿದೆ. ಈ ಸಂಶೋಧನೆಯ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿನ ಮೂಲಭೂತ ಸೌಕರ್ಯಗಳು ಕೃಷಿ ಉತ್ಪಾದಕತೆಯನ್ನು ಹೆಚ್ಚು ಮಾಡಲು ಸಹಕರಿಸಿವೆ. ಮೂಲಭೂತ ಸೌಕರ್ಯ ಬಳಕೆ ಸೂಚ್ಯಂಕವೂ ಸಹ ಕೃಷಿ ಉತ್ಪಾದಕತೆಯ ಧನಾತ್ಮಕ ನಿರ್ಧಾರಕವಾಗಿ ಪರಿಣಮಿಸಿದೆ. ಮೂಲಭೂತ ಸೌಕರ್ಯಗಳ ಜೊತೆಗೆ ರಸಗೊಬ್ಬರ ಬಳಕೆಯು ಕೃಷಿ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತಲೇ ಇದೆ. ದತ್ತಾಂಶದ ಅಲಭ್ಯತೆಯು ಇತರ ಅಂಶಗಳನ್ನೂ ಪರಿಗಣಿಸುವುದಕ್ಕೆ ಅಡ್ಡಿ ಪಡಿಸಿದರೂ, ಈ ಅಧ್ಯಯನವು ಲಭ್ಯ ಸಂಪನ್ಮೂಲಗಳ ಗರಿಷ್ಠ ಬಳಕೆಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯತೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹೆಚ್ಚಿನ ಬಂಡವಾಳವನ್ನು ತೊಡಗಿಸುವ ಅಗತ್ಯತೆಯನ್ನು ಸಾಕ್ಷ್ಯಾಧಾರ ಸಮೇತವಾಗಿ ಪ್ರತಿಪಾದಿಸುತ್ತದೆ. ಆದ್ದರಿಂದ ಪ್ರಾದೇಶಿಕ ಅಸಮಾನತೆಗಳನ್ನು ಹೋಗಲಾಡಿಸಲು ಪ್ರದೇಶ ನಿರ್ದಿಷ್ಟ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬಂಡವಾಳ ತೊಡಗಿಸುವುದು ಮುಖ್ಯವಾಗಿದೆ.

**ಶೀರ್ಷಿಕೆ** : ಮೋರೆ–ನ್ಯಾಂಫಲಾಂಗ್ ಗಡಿ ವ್ಯಾಪಾರ ವಹಿವಾಟು
**ಲೇಖಕರು** : ಮಾರ್ಚಂಗ್ ರಿಮೀಂಗಮ್
**ಸಂಖ್ಯೆ** : ೩೪೬

# ಐಸೆಕ್



ಈ ಸಂಶೋಧನಾ ಲೇಖನವು ಇಂಡೋ–ಮ್ಯಾನ್ಮಾರ್ ಗಡಿಯುದ್ದಕ್ಕೂ ಮೋರೆ–ನ್ಯಾಂಫಲಾಂಗ್ ಮಾರುಕಟ್ಟೆಗಳಲ್ಲಿ ನಡೆಯುತ್ತಿರುವ ಗಡಿ ವ್ಯಾಪಾರ ವಹಿವಾಟಿನ (ಬಿಟಿ) ಮಟ್ಟವು ಚೀನಾದಂತಹ ಮೂರನೆಯ ಆರ್ಥಿಕ ಶಕ್ತಿಗಳ ಜೊತೆಗೆ ಬಹಳವಾಗಿ ಸಂಪರ್ಕ ಹೊಂದಿದೆ ಮತ್ತು ಚೀನಾವು ವಾಸ್ತವವಾಗಿ ಸರಕುಗಳನ್ನು ಪೂರೈಸುತ್ತಿದೆ ಎಂಬುದನ್ನು ಗಮನಿಸಿದೆ. ಮೋರೆ ಬಿಟಿಯು ಭಾರತ–ಮ್ಯಾನ್ಮಾರ್‌ಗಳ ಒಟ್ಟಾರೆ ವ್ಯಾಪಾರ ವಹಿವಾಟಿನ ಶೇ.೨ ರಷ್ಟಾಗುತ್ತದೆ. ಈ ವ್ಯಾಪಾರ ವಹಿವಾಟು ಬಂದ್‌ಗಳು ಮತ್ತು ಮುಷ್ಕರಗಳು, ಬಂಡುಕೋರರು, ದುಡ್ಡಿನ ವಿನಿಮಯದಲ್ಲಿನ ಅಸ್ಥಿರತೆ, ಕಳ್ಳ ವ್ಯಾಪಾರ ಇತ್ಯಾದಿಗಳಿಂದ ಭಾಧಿತವಾಗಿ ವ್ಯಾಪಾರಗಾರರಿಗೆ ಆರ್ಥಿಕ ನಷ್ಟ ಉಂಟು ಮಾಡಿರುವುದಲ್ಲದೆ ಒಟ್ಟಾರೆಯಾಗಿ ಅರ್ಥವ್ಯವಸ್ಥೆಗೂ ಹಾನಿ ಮಾಡಿದೆ. ಮೋರೆಯಲ್ಲಿ ಸುಸಮರ್ಥ ರಫ್ತು ಉತ್ಪನ್ನಗಳು ಉತ್ಪತ್ತಿಯಾಗದಿರುವುದರಿಂದ ಭಾರತವು ನಕಾರಾತ್ಮಕ ಬಿಟಿ ಶಿಲ್ಕನ್ನು ಅನುಭವಿಸುತ್ತಿದೆ. ಮೋರೆಯಲ್ಲಿ ಬಿಟಿ ಯನ್ನು ಪ್ರಾರಂಭಿಸಿರುವುದು ಸ್ಥಳೀಯ ಗಡಿ ಜನರಿಗೆ ಉದ್ಯೋಗ ಸೃಷ್ಟಿ, ಮೂಲಭೂತ ಸೌಕರ್ಯಾಭಿವೃದ್ಧಿ, ವ್ಯಾಪಾರ ವಹಿವಾಟಿನ ಸುಧಾರಣೆ ಹಾಗೂ ಭಾರತ–ಮ್ಯಾನ್ಮಾರ್ ನಡುವಿನ ಇತರ ಸಂಬಂಧಗಳನ್ನು ಸುಧಾರಿಸಲು ನೆರವಾಗಿದೆ. ಮ್ಯಾನ್ಮಾರ್ ಭಾರತಕ್ಕೆ ಬಿಟಿ ಜೊತೆಗಾರನಾಗಿ ಮಾತ್ರವಲ್ಲದೆ, ಭಾರತದ "ಪೂರ್ವದತ್ತ ನೋಡಿ ನೀತಿ (ಎಲ್‌ಇಪಿ)" ಯ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಈ ಎಲ್‌ಇಪಿ ಯು ಪೂರ್ವ ಹಾಗೂ ಆಗ್ನೇಯ ಏಷ್ಯಾ ದೇಶಗಳೊಡನೆ ಕಾರ್ಯತಂತ್ರಾತ್ಮಕ ಮತ್ತು ಆರ್ಥಿಕ ಸಂಬಂಧಗಳ ಅಭಿವೃದ್ಧಿಗಾಗಿದೆ.

**ಶೀರ್ಷಿಕೆ** : ಭಾರತದ ಕೃಷಿ ಕಾರ್ಮಿಕ ಬಲದ ಹೊರಹೊಮ್ಮುತ್ತಿರುವ ಪ್ರವೃತ್ತಿಗಳು ಮತ್ತು ಮಾದರಿಗಳು: ಜನಗಣತಿಯ ಸಾಕ್ಷ್ಯ
**ಲೇಖಕರು** : ಎಸ್. ಸುಬ್ರಮಣಿಯನ್
**ಸಂಖ್ಯೆ** : ೩೪೭

ಈ ಸಂಶೋಧನಾ ಲೇಖನವು ಗ್ರಾಮೀಣ ಭಾರತದಲ್ಲಿನ ಕಾರ್ಮಿಕ ವರ್ಗದ ಬದಲಾಗುತ್ತಿರುವ ಪ್ರವೃತ್ತಿಗಳು ಮತ್ತು ಮಾದರಿಗಳನ್ನು ನಿರೂಪಿಸುತ್ತದೆ. ಜನಗಣತಿ ದತ್ತಾಂಶವನ್ನು ಬಳಸಿಕೊಂಡು ಈ ಲೇಖನವು ನಾಲ್ಕು ಮುಖ್ಯ ವಿದ್ಯಾಮಾನಗಳ ಮೇಲೆ ಬೆಳಕು ಚೆಲ್ಲಿದೆ. ಅವೆಂದರೆ ಗ್ರಾಮೀಣ ಕಾರ್ಮಿಕರನ್ನು ಮೂಲೆಗುಂಪು ಮಾಡಿರುವುದು; ಕೃಷಿಯು ಮಹಿಳೆಯರ ಕೈಗೆ ಬಂದಿರುವುದು; ವಿವಿಧ ಪೂರಕ ಚಟುವಟಿಕೆಗಳಿಗೆ ಹೆಚ್ಚಿನ ಮಹತ್ವ ಸಿಕ್ಕುತ್ತಿರುವುದು; ಹಾಗೂ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಆಗುತ್ತಿರುವ ಚಾಲ್ತಿ ರಚನಾತ್ಮಕ ಬದಲಾವಣೆಗಳು. ಈ ಹೊರಹೊಮ್ಮುತ್ತಿರುವ ವಿದ್ಯಮಾನವು ಭಾರತೀಯ ಕೃಷಿಯ ಭವಿಷ್ಯದ ಪ್ರವೃತ್ತಿಗಳೊಡನೆ ವಿವಿಧ ರೀತಿಯ ಸಂಪರ್ಕಗಳನ್ನು ಹೊಂದಿದೆ.

**ಶೀರ್ಷಿಕೆ** : ಸೇವಾ ವ್ಯಾಪಾರ ವಹಿವಾಟಿನ ಪ್ರಮುಖ ಆರ್ಥಿಕ ನಿರ್ಧಾರಕಗಳನ್ನು ಅಂದಾಜು ಮಾಡುವಿಕೆ: ಭಾರತದ ಸಾಕ್ಷ್ಯ
**ಲೇಖಕರು** : ಪಿ. ಮಿನಿ ಥಾಮಸ್
**ಸಂಖ್ಯೆ** : ೩೪೮

ಈ ಸಂಶೋಧನಾ ಲೇಖನವು ಸುಧಾರಣಾ ನಂತರದ ಅವಧಿಯಾದ ೧೯೯೬–೯೭ ರಿಂದ ೨೦೧೧–೧೨ರ ವರೆಗಿನ ಭಾರತದ ಅಂತರ್ರಾಷ್ಟ್ರೀಯ ಸೇವಾ ವ್ಯಾಪಾರ ವಹಿವಾಟುಗಳ ಪ್ರಮುಖ ಆರ್ಥಿಕ ನಿರ್ಧಾರಕಗಳನ್ನು ಅಂದಾಜು ಮಾಡಿದೆ. ಸಹ ಸಮಗ್ರತೆಗಾಗಿ ಎಆರ್‌ಡಿಎಲ್ ಕಾರ್ಯವಿಧಾನವನ್ನು ಬಳಸಿಕೊಂಡು ಭಾರತದ ಸೇವಾ ವ್ಯಾಪಾರ ವಹಿವಾಟಿನ ಆದಾಯ ಮತ್ತು ಬೆಲೆ ಜಗ್ಗುವಿಕೆಗಳನ್ನು ಸಹ ಈ ಅಧ್ಯಯನವು ಅಂದಾಜು ಮಾಡಿದೆ. ಈ ಲೇಖನದಲ್ಲಿ ಓಇಸಿಡಿ ದೇಶಗಳ ಜಿಡಿಪಿಯನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳ ಜಿಡಿಪಿಗೆ ಬದಲಿಯಾಗಿ ಪರಿಗಣಿಸಿದ ಪಕ್ಷದಲ್ಲಿ, ದೀರ್ಘಾವಧಿಯಲ್ಲಿ ಭಾರತದ ಸೇವಾ ರಫ್ತುಗಳ ಆದಾಯ ಜಗ್ಗುವಿಕೆಯು ಸಾಕಷ್ಟು ಹೆಚ್ಚುತ್ತದೆ ಮತ್ತು ಸಾಂಖ್ಯಿಕವಾಗಿ ಗಣನೆಗೆ ಬರುತ್ತದೆ ಎಂದು ವಾದಿಸಲಾಗಿದೆ. ಸೇವಾ ರಫ್ತಿನ ಬೆಲೆ ಜಗ್ಗುವಿಕೆಯು ನಿಷೇಧಾತ್ಮಕವಾಗಿದ್ದರೂ ಸಹ ಸಾಂಖ್ಯಿಕವಾಗಿಯೂ ಗಣನೆಗೆ ಬಂದಿಲ್ಲವೆಂದು ಅಧ್ಯಯನವು ಕಂಡು ಹಿಡಿದಿದೆ. ಭಾರತದ ಸೇವಾ ಆಮದಿನಲ್ಲಿ ಆದಾಯ ಹಾಗೂ ಬೆಲೆಗಳ ಬೇಡಿಕೆ ಜಗ್ಗುವಿಕೆಯು ಧನಾತ್ಮಕವಾಗಿಯೂ ಮತ್ತು ಸಾಂಖ್ಯಿಕವಾಗಿ ಗಣನೆಗೆ ಬರುವಂತಹದ್ದೂ ಆಗಿದೆ. ಸೇವೆಗಳ ಆಮದು ಆದಾಯದಲ್ಲಿನ ಬದಲಾವಣೆಗೆ ಸಂಬಂಧಿತ ಬೆಲೆಗಳಿಗಿಂತ ಹೆಚ್ಚು ಸ್ಪಂದಿಸುತ್ತಿವೆ. ಜೊತೆಗೆ ಭಾರತದ ಚಾಲ್ತಿ ಖಾತೆ ಕೊರತೆಯ ಬಗೆಗಿನ ಪ್ರಾಯೋಗಿಕ ಫಲಿತಾಂಶಗಳ ಪರಿಣಾಮಗಳನ್ನೂ ಸಹ ಈ ಅಧ್ಯಯನವು ಅನ್ವೇಷಿಸಿದೆ.

**ಶೀರ್ಷಿಕೆ** : ಭಾರತೀಯ ಜವಳಿ ಉದ್ದಿಮೆಗಾಗಿ ಉದ್ಯೋಗ – ರಫ್ತು ಜಗ್ಗುವಿಕೆಗಳು
**ಲೇಖಕರು** : ತರುಣ್ ಅರೋರಾ
**ಸಂಖ್ಯೆ** : ೩೪೯

ಈ ಸಂಶೋಧನಾ ಲೇಖನವು ೧೯೮೮ ರಿಂದ ೨೦೧೩ರ ಅವಧಿಯಲ್ಲಿದ್ದ ಭಾರತೀಯ ಜವಳಿ ಉದ್ದಿಮೆಯಲ್ಲಿನ ಉದ್ಯೋಗ ಉತ್ಪಾದನಾ ಸುಸಾಮರ್ಥ್ಯವನ್ನು ಅಂದಾಜು ಮಾಡಿದೆ. ೧೯೮೮ ರಿಂದ ೨೦೧೩ ರ ಅವಧಿಯ ಒಡಂಬಡಿಕೆ ಕಾಲ ಸರಣಿ ದತ್ತಾಂಶವನ್ನು ಹಾಗೂ ಉಪವಲಯ ಮಟ್ಟದ ಜಗ್ಗುವಿಕೆ ಅಂದಾಜುಗಳನ್ನು ಪಡೆದುಕೊಳ್ಳಲು ಉದ್ಯೋಗ ಮತ್ತು ರಫ್ತು ದತ್ತಾಂಶಗಳನ್ನು ಕೇಂದ್ರೀಯ ಉತ್ಪನ್ನ ವರ್ಗೀಕರಣ (ಆವೃತ್ತಿ

೨) ವನ್ನು ಬಳಸಿಕೊಂಡು ಹೊಂದಿಸಲಾಯಿತು. ಪೂರ್ಣವಾಗಿ ಮಾರ್ಪಡಿಸಿದ ಓಎಲ್‌ಎಸ್ (ಎಫ್‌ಎಂಓಎಲ್‌ಎಸ್) ಅನ್ನು ದೀರ್ಘಾವಧಿಯಲ್ಲಿ ಉದ್ಯೋಗ – ರಫ್ತು ಜಗ್ಗುವಿಕೆಗಳನ್ನು ಅಂದಾಜು ಮಾಡಲು ಬಳಸಲಾಯಿತು. ಅರೀಮಾ ಮಾದರಿ ತಂತ್ರವನ್ನು ಬಳಸಿಕೊಂಡು ೨೦೨೦ರ ವರೆಗಿನ ಉದ್ಯೋಗದ ಮುನ್ಸೂಚನೆಯನ್ನು ನೀಡಲು ಜಗ್ಗುವಿಕೆಗಳನ್ನು ಮತ್ತೂ ಮುಂದುವರೆದು ಬಳಸಲಾಯಿತು. ದೊರೆತ ಫಲಿತಾಂಶಗಳ ಪ್ರಕಾರ ಉಪವಲಯ ೧೮೭ ರಲ್ಲಿ (ಇತರ ಜವಳಿ ತಯಾರಿಕೆ) ಉಪವಲಯ ೧೩೧ ಕ್ಕಿಂತ (ನೂಲುವುದು, ನೇಯುವುದು, ಜವಳಿ ತಯಾರಿಸುವುದು) ಗಮನಾರ್ಹವಾಗಿ ಹೆಚ್ಚಿನ ಉದ್ಯೋಗ ಉತ್ಪತ್ತಿಯಾದದ್ದು ಕಂಡು ಬಂದಿತು. ಈ ರೀತಿಯ ವಿಶ್ಲೇಷಣೆಯು ಕೈಗಾರಿಕಾ ವಲಯದಲ್ಲಿ ಉಪ ವಲಯ ನಿರ್ದಿಷ್ಟ ಉದ್ಯೋಗ ಉತ್ಪತ್ತಿಗಾಗಿ ಕಾರ್ಯನೀತಿ ರೂಪಿಸಲು ಉಪಯುಕ್ತವಾಗಿದೆ.

**ಶೀರ್ಷಿಕೆ** : ಜಾತಿ ಮತ್ತು ಶುಶ್ರೂಷೆ: ಭಾರತೀಯ ಆರೋಗ್ಯ ರಕ್ಷಣೆ ನೀಡುವ ಪದ್ಧತಿಯು ದಲಿತರಿಗೆ ಅನುಕೂಲಕರವಾಗಿದೆಯೇ?
**ಲೇಖಕರು** : ಸೋಬಿನ್ ಜಾರ್ಜ್
**ಸಂಖ್ಯೆ** : ೩೫೦

ಸಾರ್ವಜನಿಕ ಸೇವೆಗಳನ್ನು ಒದಗಿಸುವುದರಲ್ಲಿ ಈಗಾಗಲೇ ರೂಢಿಗತವಾಗಿರುವ ಜಾತಿ ಆಧಾರಿತ ತಾರತಮ್ಯತೆಯನ್ನು ಗಮನದಲ್ಲಿಟ್ಟುಕೊಂಡು ಗ್ರಾಮೀಣ ಭಾರತದಲ್ಲಿ ಆರೋಗ್ಯ ಸೇವೆ ನೀಡುವುದರಲ್ಲಿ ದಲಿತ ಜಾತಿಗಳಿಗೆ ತಾರತಮ್ಯವೆಸಗಲಾಗುತ್ತಿದೆಯೇ ಎಂಬುದನ್ನು ಈ ಸಂಶೋಧನಾ ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ಅಧಿಕೃತ ದತ್ತಾಂಶಗಳ ಪ್ರಕಾರ ಆರೋಗ್ಯ ಸೇವಾ ಕ್ಷೇತ್ರದಲ್ಲಿ ದಲಿತರಲ್ಲದವರ ಒಟ್ಟಾರೆ ಮೇಲುಗೈ ಇರುವುದನ್ನು ಅಧ್ಯಯನವು ಎತ್ತಿ ತೋರಿಸುತ್ತದೆ. ಇದನ್ನು ಮತ್ತಷ್ಟು ಸ್ಪಷ್ಟ ಪಡಿಸಲು ಲೇಖನವು ಎರಡು ದೃಶ್ಯಾವಳಿಯನ್ನು ಶ್ರುತ ಪಡಿಸುತ್ತದೆ. ಮೊದಲನೆಯದು ಬಿಹಾರ ಮತ್ತು ತಮಿಳುನಾಡುಗಳಲ್ಲಿನ ಎಸ್‌ಸಿಗಳು ಹಾಗೂ ಎಸ್‌ಸಿ/ಎಸ್‌ಟಿ ಗಳಲ್ಲದವರ ಆರೋಗ್ಯ ಸೇವೆಗಳಲ್ಲಿನ ತಾರತಮ್ಯದಲ್ಲಿ ಹೋಲಿಕೆ ಇರುವುದು. ಈ ಎರಡೂ ರಾಜ್ಯಗಳಲ್ಲಿ ಆರೋಗ್ಯ ಸೇವೆ ನೀಡುವವರ ಪೈಕಿ ಮಹತ್ವದ ಸ್ಥಾನಗಳನ್ನು ಆಕ್ರಮಿಸಿಕೊಂಡಿರುವವರು ಗಮನಾರ್ಹ ಪ್ರಮಾಣದ ಎಸ್‌ಸಿ/ಎಸ್‌ಟಿ ಗಳಲ್ಲದವರೇ ಆಗಿದ್ದಾರೆ. ಎರಡನೆಯದು ಅವಿಭಜಿತ ಆಂಧ್ರ ಪ್ರದೇಶದ ಪ್ರಕರಣ. ಈ ರಾಜ್ಯದಲ್ಲಿ ಗುಂಪುಗಳ ನಡುವಿನ ತಾರತಮ್ಯತೆಯು ಕಡಿಮೆಯಿದೆ. ಜೊತೆಗೆ ಆರೋಗ್ಯ ಸೇವೆಗಳ ಎಲ್ಲಾ ಮಟ್ಟಗಳಲ್ಲೂ ಸಹ ದಲಿತ ಜಾತಿಗಳ ಆರೋಗ್ಯ ಸಿಬ್ಬಂದಿಯ ಉತ್ತಮ ಹಂಚಿಕೆಯಾಗಿದೆ. ಈ ಪ್ರಕರಣಗಳು ಆರೋಗ್ಯ ಸೇವೆಗಳಲ್ಲಿ ದಲಿತರಲ್ಲದವರ ಮೇಲುಗೈ ಇರುವುದನ್ನೂ ಮತ್ತು ಇದರಿಂದಾಗಿ ದಲಿತರಿಗೆ ಅನಾನುಕೂಲ ವಾತಾವರಣ ಇದ್ದೇ ಇರುವುದನ್ನೂ ದೃಢಪಡಿಸುತ್ತವೆ.

**ಶೀರ್ಷಿಕೆ** : ಕರ್ನಾಟಕದಲ್ಲಿನ ಆಹಾರ ಭದ್ರತೆ: ಕಾರ್ಯಕ್ಷಮತೆಯಲ್ಲಿನ ವಿಪರ್ಯಾಸಗಳು
**ಲೇಖಕರು** : ಸ್ಟ್ಯಾಸಿ ಮೇ ಕೂಂಬರ್, ಮಾರ್ಕ್ ಆ್ಯಂಡ್ರೆ ಗೋಥಿಯರ್, ಮಾಲಿನಿ ಎಲ್. ತಂತ್ರಿ, ಜಹಾಬಿಯ ಜಿವಾಜಿ ಮತ್ತು ಮಿರಾಲ್ ಕಲ್ಯಾಣಿ
**ಸಂಖ್ಯೆ** : ೩೫೧

ಈ ಸಂಶೋಧನಾ ಲೇಖನವು ಆಹಾರ ಭದ್ರತೆ ಸೂಚಿಗಳಾದ ಲಭ್ಯತೆ, ಪಡೆದುಕೊಳ್ಳುವಿಕೆ (ಸಿಗುವಿಕೆ), ಹಾಗೂ ಪೌಷ್ಠಿಕತೆಯನ್ನು ವಿಶ್ಲೇಷಣಾ ಭೂತಗನ್ನಡಿಯ ರೀತಿಯಲ್ಲಿ ಬಳಸಿಕೊಂಡು, ಕರ್ನಾಟಕದ ಆರ್ಥಿಕ ಬೆಳವಣಿಗೆ ಗತಿಯ ಸಮಕ್ಷಮದಲ್ಲಿ ಅಸ್ಥಿರ ಮಾನವ ಅಭಿವೃದ್ಧಿ ಮಾದರಿಯ ಪ್ರವೃತ್ತಿಯನ್ನು ಪರೀಕ್ಷಿಸುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ ಮಾನವ ಅಭಿವೃದ್ಧಿಯ ಆಯಾಮಗಳು ಹಾಗೂ ಆಹಾರ ಭದ್ರತೆ – ಇವುಗಳು ಒಟ್ಟಾಗಿ ಸೇರುವ ಬಗ್ಗೆ ವಿಶ್ಲೇಷಿಸಲಾಗಿದೆ. ಕರ್ನಾಟಕವು ಕೃಷಿ ಉತ್ಪನ್ನಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಿದರೂ ಮತ್ತು ಆರ್ಥಿಕ ಬೆಳವಣಿಗೆಯ ಭರವಸೆಯನ್ನು ಮೂಡಿಸಿದರೂ ಸಹ, ಅಪೌಷ್ಟಿಕತೆ ಹಾಗೂ ಹಸಿವಿಗೆ ಕಾರಣವಾದ ಅಂಶಗಳು ಹಾಗೆಯೇ ಉಳಿದುಕೊಂಡಿರುವುದನ್ನು ಅಧ್ಯಯನವು ದೃಷ್ಟಾಂತ ಪೂರಕವಾಗಿ ನಿರೂಪಿಸುತ್ತದೆ.

**ಶೀರ್ಷಿಕೆ** : ಭೂಮಿ ಮತ್ತು ನೀರು ಬಳಕೆಯ ಪರಸ್ಪರ ಪ್ರತಿಕ್ರಿಯೆಗಳು: ತುಂಗಭದ್ರಾ ಮತ್ತು ಟ್ಯಾಗಸ್ ನದಿಗಳ ಜಲಾನಯನ ಪ್ರದೇಶಗಳಲ್ಲಿ ಭೂ ಬಳಕೆ ಬದಲಾವಣೆಯ ಹೊರಹೊಮ್ಮುತ್ತಿರುವ ಪ್ರವೃತ್ತಿ ಮತ್ತು ಪರಿಣಾಮ
**ಲೇಖಕರು** : ಫೆರ್ ಸ್ಟ್ಯಾಲ್‌ನಾಕಲ್, ಬೆಗೂರಿಯಾ ಸ್ಯಾಂಟಿಯಾಗೋ, ಮಾನಸಿ, ಎಸ್., ಕೆ.ವಿ. ರಾಜು, ನಗೋತು ಉದಯ ಶೇಖರ್, ಮರಿಯಾ ಮ್ಯಾನುವಿಲಾ ಪೋರ್ಟೆಲಾ, ಆ್ಯಂಟೋನಿಯೋ ಬೆಟಾಮಿಯೋ ಡಿ ಅಲ್ಮಿಡ, ಮಾರ್ಟ ಮಚಾಡೋ, ಲಾನಾ–ರೆನಾಲ್ಟ್, ನೊಯೆಮಿ, ವಿಸೆಂಟೆ–ಸೆರ್ರಾನೊ ಮತ್ತು ಸರ್ಜಿಯೊ
**ಸಂಖ್ಯೆ** : ೩೫೨

ಈ ಸಂಶೋಧನಾ ಲೇಖನವು ಭಾರತದ ತುಂಗಭದ್ರಾ ಉಪ ಜಲಾನಯನ ಪ್ರದೇಶ ಹಾಗೂ ಸ್ಪೇನ್ ಮತ್ತು ಪೋರ್ಚುಗಲ್‌ಗಳಲ್ಲಿನ ಟ್ಯಾಗಸ್ ಜಲಾನಯನ ಪ್ರದೇಶಗಳ ಮೇಲೆ ಭೂಮಿ ಮತ್ತು ನೀರು ನಿರ್ವಹಣೆಯ ಸಂಕೀರ್ಣ ಪರಸ್ಪರ ಸಂಬಂಧಗಳು, ಪ್ರಸ್ತುತ ಸ್ಥಿತಿಗತಿ, ಗಮ್ಯ ಅಂಶಗಳ

# ಐಸೆಕ್



ಸಮಗ್ರ ವಿಶ್ಲೇಷಣೆ, ಹೊರಹೊಮ್ಮುತ್ತಿರುವ ಪ್ರವೃತ್ತಿ ಮತ್ತು ಈ ಎರಡು ನದಿ ಜಲಾನಯನ ಪ್ರದೇಶಗಳ ಮೇಲೆ ಅದರ ಪರಿಣಾಮ ಇತ್ಯಾದಿಗಳ ಮೇಲೆ ಬೆಳಕು ಚೆಲ್ಲಿದೆ. ಜೊತೆಗೆ ಏರುಪೇರಿನ ಜಲಚಕ್ರದಿಂದಾಗಿ ಬದಲಾಗುತ್ತಿರುವ ನೀರಿನ ಬೇಡಿಕೆಗಳು, ಅರಣ್ಯಗಳನ್ನು ಮತ್ತೆ ಮತ್ತೆ ಬಾಧಿಸುವ ಕಾಳ್ಗಿಚ್ಚುಗಳು, ಜೀವ ವೈವಿಧ್ಯತೆ ಮತ್ತು ಮಣ್ಣು ಇತ್ಯಾದಿ ವ್ಯಾಪಕ ಶ್ರೇಣಿಯ ಅಂಶಗಳ ಬಗ್ಗೆ ಅಧ್ಯಯನ ಮಾಡಿ ಮೂಲೆಗುಂಪಾಗಿರುವ ಸಮುದಾಯಗಳ ಜೀವನ ಮಾರ್ಗದ ಮೇಲೆ ಪ್ರಭಾವ ಬೀರಿದೆ. ಇದೂ ಅಲ್ಲದೆ ವಲಯಗಳಾದ್ಯಂತ ಮತ್ತು ವಲಯಗಳೊಳಗಿನ ಕಳಪೆ ಸಮಗ್ರತೆಯ ದೃಷ್ಟಿಯಿಂದ ಈ ಅಧ್ಯಯನವು ಸಮಗ್ರ ನೀರು ನಿರ್ವಹಣೆಯ ಅಗತ್ಯತೆಯನ್ನು ಮುಂಚೂಣಿಯಲ್ಲಿ ನಿಲ್ಲಿಸಿದೆ.

**ಶೀರ್ಷಿಕೆ** : ಪರಿಸರ ತೆರಿಗೆಗಳು: ಭಾರತ ಮತ್ತು ಚೀನಾಗಳ ಒಂದು ತುಲನಾತ್ಮಕ ಅಧ್ಯಯನ
**ಲೇಖಕರು** : ರಜತ್ ವರ್ಮ
**ಸಂಖ್ಯೆ** : ೩೫೩

ಈ ಸಂಶೋಧನಾ ಲೇಖನವು ೨೦೨೦ರ ವೇಳೆಗೆ ಇಂಗಾಲ ಪ್ರಸರಣೆಯನ್ನು ತಗ್ಗಿಸಲು ಮತ್ತು ಇತರ ಪರಿಸರ ಸಮಸ್ಯೆಗಳನ್ನು ಬಗೆಹರಿಸಲು ಭಾರತ ಮತ್ತು ಚೀನಾ ದೇಶಗಳು ಅಳವಡಿಸಿಕೊಂಡಿರುವ ವಿವಿಧ ರೂಪದ ಪರಿಸರ ತೆರಿಗೆಗಳನ್ನು ಹೋಲಿಕೆ ಮಾಡಿದೆ. ಈ ಎರಡು ದೇಶಗಳಲ್ಲಿ ಓಇಸಿಡಿ–ಇಇಎ ದತ್ತಾಂಶದ ವ್ಯಾಖ್ಯಾನದ ಪ್ರಕಾರ ಕೇವಲ ೨೪ ಪರಿಸರ ಸಂಬಂಧಿ ತೆರಿಗೆಗಳು ಚಾಲ್ತಿಯಲ್ಲಿವೆ. ಈ ಪೈಕಿ ಚೀನಾದಲ್ಲಿ ೨೦೦೬ರ ನಂತರ ೭ ಪರಿಸರ ಸಂಬಂಧಿ ತೆರಿಗೆಗಳ ಪೈಕಿ ಐದನ್ನು ಪರಿಷ್ಕರಿಸಲಾಗಿದೆ. ಭಾರತದಲ್ಲಿ ಎಲ್ಲ ತೆರಿಗೆಗಳನ್ನೂ ೨೦೦೨ರ ನಂತರವೇ ವಿಧಿಸಲಾಗಿದೆ. ಜೊತೆಗೆ ಈ ಅಧ್ಯಯನದ ವ್ಯಾಖ್ಯಾನದ ಪ್ರಕಾರ ಭಾರತದ ೭ ಮತ್ತು ಚೀನಾದ ೫ ವಾತಾವರಣ ಸಂಬಂಧಿ ತೆರಿಗೆಗಳನ್ನು ಮಾತ್ರ ಪರಿಸರ ತೆರಿಗೆಗಳೆಂದು ಪರಿಗಣಿಸಬಹುದಾಗಿದೆ. ಪರಿಸರ ತೆರಿಗೆಗಳ ಕಾರ್ಯಕ್ಷಮತೆಯನ್ನು ವಿಶ್ಲೇಷಿಸುವ ಸಂಶೋಧನಾ ಲೇಖನಗಳ ತೀವ್ರ ಕೊರತೆ ಕಂಡು ಬರುತ್ತಿದೆ. ಲಭ್ಯವಿರುವ ಮಿತವಾದ ಸಂಶೋಧನಾ ಸಾಹಿತ್ಯದಲ್ಲಿಯೇ ಕಂಡುಬಂದದ್ದೇನೆಂದರೆ ಪರಿಸರ ತೆರಿಗೆಗಳಿಂದ ಉತ್ಪತ್ತಿಯಾದ ಆದಾಯವನ್ನು ನಿರ್ವಹಿಸುವ ಬಗ್ಗೆ ಭಾರತದಲ್ಲಿ ಅನೇಕ ಆಡಳಿತ ಸಂಬಂಧಿ ವಿವಾದಾಂಶಗಳಿವೆ. ಚೀನಾಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಬಳಕೆ ತೆರಿಗೆಯ ಉದ್ದೇಶವೇ ಸೋತಿದೆ. ಏಕೆಂದರೆ ಇದರಿಂದಾಗಿ ಒಟ್ಟಾರೆ ಇಂಧನ ಬಳಕೆ ಹೆಚ್ಚಾಗಿ ಸಾಮಾಜಿಕ ಕಲ್ಯಾಣಕ್ಕೆ ಅವನತಿಯುಂಟಾಗುತ್ತದೆ.

**ಶೀರ್ಷಿಕೆ** : ದಲಿತ ಮತ್ತು ಸ್ವಂತ ಮನೆ: ಕರ್ನಾಟಕ ರಾಜ್ಯದ ಆಯ್ದ ಗ್ರಾಮಗಳು
**ಲೇಖಕರು** : ಐ. ಮಾರುತಿ ಮತ್ತು ಪೆಸಲ ಬೂಸೆಣ್ಣ
**ಸಂಖ್ಯೆ** : ೩೫೪

ಈ ಸಂಶೋಧನಾ ಲೇಖನವು ಕರ್ನಾಟಕದ ದಲಿತರನ್ನು ವಿಶೇಷ ಪರಿಗಣನೆಯಲ್ಲಿಟ್ಟುಕೊಂಡು ವಾಸಯೋಗ್ಯ ಮನೆಯ ನಿರ್ಮಾಣವನ್ನು ನಿರ್ಧರಿಸುವ ಅಂಶಗಳ ಬಗ್ಗೆ ಬೆಳಕು ಚೆಲ್ಲಿದೆ. ಈ ಅಧ್ಯಯನದ ಫಲಿತಾಂಶಗಳು ಕೆಳಕಂಡಂತಿದೆ: ಎರಡೂ ಗ್ರಾಮಗಳಲ್ಲಿ ಉತ್ತಮ ಆರ್ಥಿಕ ಅವಕಾಶಗಳು ಹಾಗೂ ಸಾಕಷ್ಟು ಜಲ ಸಂಪನ್ಮೂಲ ಇತ್ತು. ಉತ್ತಮ ಮನೆಗಳ ನಿರ್ಮಾಣಕ್ಕೆ ಇವು ಮುಖ್ಯ ಕಾರಣಗಳಾಗಿದ್ದವು. ಆಯ್ದ ಗ್ರಾಮಗಳ ಪೈಕಿ ಕಲಬುರ್ಗಿ ಜಿಲ್ಲೆಯ ಶ್ರೀನಿವಾಸ ಸರದಗಿ ಗ್ರಾಮದ ದಲಿತರ ಮನೆಗಳ ಸ್ಥಿತಿಯು ಬಹಳ ದಯನೀಯವಾಗಿತ್ತು ಮತ್ತು ಬಹಳಷ್ಟು ದಲಿತರ ಮನೆಗಳು ನೀರು ಸೋರುವಿಕೆ, ನೆಲ ಮತ್ತು ಗೋಡೆ ಕಿತ್ತುಹೋಗಿರುವಿಕೆ, ಜಾಗದ ಅಭಾವ ಇತ್ಯಾದಿ ಕಾರಣಗಳಿಂದ ವಾಸಿಸಲು ಅಯೋಗ್ಯವಾಗಿದ್ದವು. ದಲಿತರಿಗಾಗಿ ಅನೇಕ ವಸತಿ ಕಾರ್ಯಕ್ರಮಗಳು ಜಾರಿಯಲ್ಲಿದ್ದರೂ ಸಹ ಆರ್ಥಿಕ ಬೆಂಬಲದ ಕೊರತೆಯು ವಾಸಯೋಗ್ಯ ಮನೆಗಳನ್ನು ಕಟ್ಟಿಕೊಳ್ಳಲು ದಲಿತರಿಗೆ ತೊಡಕನ್ನುಂಟು ಮಾಡಿದೆಯೆಂಬುದು ಅಧ್ಯಯನದಿಂದ ವ್ಯಕ್ತವಾಗಿದೆ.

**ಶೀರ್ಷಿಕೆ** : ಆರೋಗ್ಯ ಸೇವೆ ನೀಡಿಕೆಯಲ್ಲಿ ಪರ್ಯಾಯ ಔಷಧೀಯ ಮಾರ್ಗ: ನಗರ ಪ್ರದೇಶಗಳ ಹೊರವಲಯಗಳಲ್ಲಿ ಆಯುಷ್ ಕಾರ್ಯಕ್ರಮದ ಒಂದು ಅಧ್ಯಯನ ಪ್ರಕರಣ
**ಲೇಖಕರು** : ಮಾನಸಿ, ಎಸ್., ಕೆ.ವಿ. ರಾಜು, ಬಿ.ವಿ. ಹೇಮಲತಾ, ಎಸ್. ಪೂರ್ಣಿಮ, ಮತ್ತು ಕೆ.ಪಿ. ರಶ್ಮಿ
**ಸಂಖ್ಯೆ** : ೩೫೫

ಈ ಸಂಶೋಧನಾ ಲೇಖನವು ನಗರ ಪ್ರದೇಶಗಳ ಹೊರವಲಯಗಳಲ್ಲಿ ಸಾಂಪ್ರದಾಯಿಕ ಔಷಧೀಯ ಪದ್ಧತಿಗಳನ್ನು ಪುನರುಜ್ಜೀವಗೊಳಿಸುವ ಸಲುವಾಗಿ ಆಯುಷ್ ಕಾರ್ಯಕ್ರಮದಡಿಯಲ್ಲಿ ಸೌಖ್ಯ ಪ್ರತಿಷ್ಠಾನದ ಡಾ.ಮಥಾಯ್ ಗ್ರಾಮೀಣ ಆರೋಗ್ಯ ಸೇವಾ ಕೇಂದ್ರದ (ಡಿಎಂಆರ್‌ಸಿ) ಪಾತ್ರದ ಬಗ್ಗೆ ಚರ್ಚೆಗೆ ಗ್ರಾಸವನ್ನೊದಗಿಸುತ್ತದೆ. ಹೆಚ್ಚುತ್ತಿರುವ ಬೆಲೆಗಳು ಮತ್ತು ಕಳಪೆ ಮೂಲ ಸೌಕರ್ಯಗಳ ಹಿನ್ನೆಲೆಯಲ್ಲಿ, ಭಾರತದಲ್ಲಿ ಆರೋಗ್ಯ ಸೇವೆಯನ್ನು ಒದಗಿಸುವ ಸವಾಲನ್ನು ಎದುರಿಸುವ ಸಲುವಾಗಿ ಹಾಗೂ ಜನಸಮುದಾಯದ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಸಾಂಪ್ರದಾಯಿಕ ಔಷಧೀಯ ಪದ್ಧತಿಗಳನ್ನು ಧನಾತ್ಮಕ ಪರ್ಯಾಯವೆಂದು ಪರಿಗಣಿಸಬಹುದಾಗಿದೆಯೆಂದು ಅಧ್ಯಯನವು ಸೂಚಿಸುತ್ತದೆ.

# ಐಸೆಕ್

**ಶೀರ್ಷಿಕೆ** : ಎಎಸ್‌ಇಎಎನ್ ದೇಶಗಳ ಜೊತೆಗೆ ಭಾರತೀಯ ಕೃಷಿ ಉತ್ಪನ್ನಗಳ ರಫ್ತು ಸ್ಪರ್ಧಾತ್ಮಕತೆಯ ವಿಶ್ಲೇಷಣೆ.

**ಲೇಖಕರು** : ಸುಭಾಷ್ ಜಗದಾಂಬೆ

**ಸಂಖ್ಯೆ** : ೩೫೬

ಈ ಸಂಶೋಧನಾ ಲೇಖನವು ಒಟ್ಟಾರೆ ಮತ್ತು ವಿಘಟಿತ ಮಟ್ಟಗಳಲ್ಲಿ ಎಎಸ್‌ಇಎಎನ್ (ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ) ದೇಶಗಳೊಡನೆ ವ್ಯಾಪಾರ ವಹಿವಾಟು ನಡೆಸುವ ಸಂದರ್ಭದಲ್ಲಿ ಭಾರತದ ವ್ಯಾಪಾರ ವಹಿವಾಟಿನ ಸಾಂದ್ರತೆಯನ್ನು ಹಾಗೂ ಕೃಷಿ ವಲಯದ ಪ್ರಕಟಿತ ತುಲನಾತ್ಮಕ ಅನುಕೂಲ(ಆರ್‌ಸಿಎ)ವನ್ನು ಅಂದಾಜು ಮಾಡುವುದಕ್ಕೆ ಪ್ರಯತ್ನಿಸಿದೆ.ಈ ಅಂದಾಜಿನ ಪ್ರಕಾರ ಭಾರತದ ಒಟ್ಟಾರೆ ಕೃಷಿ ವ್ಯಾಪಾರ ವಹಿವಾಟಿನ ರಫ್ತು ಸಾಂದ್ರತೆಯು ವಿಶ್ವದ ಉಳಿದೆಡೆಗಳಿಗೆ ಮಾಡುವ ರಫ್ತಿಗಿಂತ ಎಎಸ್‌ಇಎಎಎನ್ ದೇಶಗಳಿಗೆ ಮಾಡುವ ರಫ್ತಿಗೆ ಸಂಬಂಧಿಸಿದಂತೆ ಹೆಚ್ಚುತ್ತಾ ಹೋಗಿದೆ. ಜೊತೆಗೆ ಅಧ್ಯಯನದ ಅವಧಿಯಲ್ಲಿ ಆಮದಿನ ಸಾಂದ್ರತೆಯು ಕುಗ್ಗುತ್ತಾ ಹೋಯಿತು. ಎಎಸ್‌ಇಎಎನ್ ದೇಶಗಳೊಡನೆಯ ರಫ್ತಿನ ಭಾರತದ ತುಲನಾತ್ಮಕ ಅನುಕೂಲತೆಯ ನಮೂನೆಯು ಒಂದೊಂದು ಕೃಷಿ ಉತ್ಪನ್ನಕ್ಕೂ ವ್ಯತ್ಯಾಸವಾಗುತ್ತಾ ಹೋದರೂ ಅಧ್ಯಯನದ ಅವಧಿಯುದ್ದಕ್ಕೂ ತುಲನಾತ್ಮಕ ಅನುಕೂಲತೆಯು ಕ್ರಮೇಣ ಕುಗ್ಗುತ್ತಲೇ ಹೋಯಿತು. ಈ ಹಿನ್ನೆಲೆಯಲ್ಲಿ ಸದರಿ ಸಂಶೋಧನೆಯು ಎಎಸ್‌ಇಎಎನ್ ಮಾರುಕಟ್ಟೆಗಳಿಗೆ ತುಲನಾತ್ಮಕ ಅನುಕೂಲವನ್ನು ಹೊಂದಿರುವಂತಹ ಉತ್ಪನ್ನಗಳನ್ನು ಅಂದರೆ ಮಾಂಸ, ತರಕಾರಿಗಳು ಮತ್ತು ಹಣ್ಣುಗಳು, ಟೀ, ಅಕ್ಕಿ ಹಾಗೂ ಏಕದಳ ಉತ್ಪನ್ನಗಳನ್ನು ರಫ್ತು ಮಾಡಲು ಭಾರತೀಯ ರಫ್ತುದಾರರು ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಲು ಸಲಹೆ ಮಾಡುತ್ತದೆ.

## ನಿಯತಕಾಲಿಕೆಗಳು/ಸಂಪಾದಿತ ಗ್ರಂಥಗಳಲ್ಲಿ ಪ್ರಕಟಿತವಾದ ಲೇಖನಗಳು

"ಭಾರತದಲ್ಲಿ ಕಬ್ಬಿನ ಸಾಗುವಳಿಯ ಬೆಳವಣಿಗೆ ನಮೂನೆ ಮತ್ತು ಲಾಭದಾಯಕತೆ: ಮಹಾರಾಷ್ಟ್ರ, ಕರ್ನಾಟಕ ಮತ್ತು ಉತ್ತರ ಪ್ರದೇಶ ರಾಜ್ಯಗಳ ಒಂದು ವಿಶ್ಲೇಷಣೆ". "ಭಾರತದ ಕೃಷಿ ಸ್ಥಿತಿಗತಿ", LXXII (೮), ನವೆಂಬರ್ ೨೦೧೫ –ಅಬ್ನೇವ್ ವಿಕಾಸ್ ಭಜರಂಗ್.

"ದಕ್ಷಿಣ ಭಾರತವನ್ನು ತಿಳಿದುಕೊಳ್ಳುವಿಕೆ: ಅದರ ರಾಜಕೀಯ ಆಡಳಿತ ಕ್ರಮಗಳು ಹಾಗೂ ಸಾಮಾಜಿಕ ಭದ್ರತೆ". "ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ನಿಯತಕಾಲಿಕೆ", ೧೬(೨), ಜುಲೈ–ಡಿಸೆಂಬರ್ ೨೦೧೪ – ಅನಿಲ್ ಕುಮಾರ್, ವಿ.

"ಎರಡು ಹೆಜ್ಜೆ ಮುಂದೆ, ಒಂದು ಹೆಜ್ಜೆ ಹಿಂದೆ: ಭಾರತದಲ್ಲಿ ನೀತಿ ಕಾರ್ಯವಿಧಾನವಾಗಿ ವಿಕೇಂದ್ರೀಕರಣ". "ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ನಿಯತಕಾಲಿಕೆ (ಸ್ಪ್ರಿಂಗರ್)", ೧ (೨) ನವೆಂಬರ್ ೨೦೧೫ – ಅನಿಲ್ ಕುಮಾರ್, ವಿ.

"ಕೃಷಿ ಕಾರ್ಮಿಕ ಮತ್ತು ಲಿಂಗ ಪ್ರಬೇಧ ಆಯಾಮ: ಟಿಪ್ಪಣಿ":, ಸಾಮಾಜಿಕ ಬದಲಾವಣೆ (ಸೇಜ್); ೪೫(೪) ಡಿಸೆಂಬರ್ ೨೦೧೫ – ಅನಿಲ್ ಕುಮಾರ್, ವಿ.

"ಭಾರತದ ಘನತ್ಯಾಜ್ಯದ ಅರ್ಥವ್ಯವಸ್ಥೆ", "ಆರ್ಥಿಕ ಮತ್ತು ರಾಜಕೀಯ ವಾರಪತ್ರಿಕೆ", ೫೦(೨೫); ೧೭–೨೦, ೨೦೧೫ – ಬಾಲಸುಬ್ರಮಣಿಯನ್, ಎಂ.

"ಭಾರತದ ಬೆಳವಣಿಗೆಯಲ್ಲಿ ಉತ್ಪಾದಕತೆ ಮತ್ತು ತಾಂತ್ರಿಕ ಬದಲಾವಣೆಯ ಪಾತ್ರ – ಪರಿಕರ – ಉತ್ಪನ್ನದ ಒಂದು ಮಾರ್ಗ", "ವಿಜ್ಞಾನ, ತಂತ್ರಜ್ಞಾನ ಮತ್ತು ಅಭಿವೃದ್ಧಿಯ ನಿಯತಕಾಲಿಕೆ", ೩೪(೨), ಜುಲೈ ೨೦೧೫ – ಬರುನ್ ದೇಬ್ ಪಾಲ್ ಮತ್ತು ಸಂಜಿಬ್ ಪೋಹಿತ್.

"ತೀವ್ರ ವಿಸರ್ಜನೆ ವಲಯದ ಉತ್ಪಾದನಾ ಸರಹದ್ದು ಬದಲಾದ ಪಕ್ಷದಲ್ಲಿ ಭಾರತದ ಅರ್ಥವ್ಯವಸ್ಥೆ ಮತ್ತು ವಾಯುಮಂಡಳಕ್ಕೆ ಯಾವ ರೀತಿ ಪರಿಣಾಮವುಂಟಾಗುತ್ತದೆ". "ಮಾರುಕಟ್ಟೆ ಸಮಗ್ರತೆ ವಿಮರ್ಶಾ ಪತ್ರಿಕೆ (ಸೇಜ್)", ೬(೩), ಡಿಸೆಂಬರ್ ೨೦೧೪ (೨೦೧೫ರ ಆಗಸ್ಟ್‌ನಲ್ಲಿ ಪ್ರಕಟಿತ) – ಬರುನ್ ದೇಬ್ ಪಾಲ್.

"ಭಾರತದ ಆರ್ಥಿಕ ಬೆಳವಣಿಗೆಯ ಜೊತೆಗೆ ಜಿಎಚ್‌ಜಿ ವಿಸರ್ಜನೆಯನ್ನು ಹೊರತು ಪಡಿಸುವುದಕ್ಕೆ ವಲಯಗಳನ್ನು ಆದ್ಯತೀಕರಿಸುವಿಕೆ: ಪರಿಸರದ ಸಾಮಾಜಿಕ ಹೊಣೆಗಾರಿಕೆ ಮ್ಯಾಟ್ರಿಕ್ಸ್ ಆಧಾರಿತ ಒಂದು ವಿಶ್ಲೇಷಣೆ". ಎ. ಗೋಸ್ವಾಮಿ ಮತ್ತು ಎ. ಮಿಶ್ರ ಸಂಪಾದಿತ ಗ್ರಂಥದಲ್ಲಿ "ಸುಸ್ಥಿರತೆಗಾಗಿ ಮಾದರೀಕರಣ, ವಿಶ್ಲೇಷಣೆ ಮತ್ತು ನೀತಿ ನಿರೂಪಣೆ", ಯುಎಸ್‌ಎ: ಐಜಿಐ ಗ್ಲೋಬಲ್ ಪಬ್ಲಿಷರ್, ೨೦೧೬ – ಬರುನ್ ದೇಬ್ ಪಾಲ್ ಮತ್ತು ಸಂಜಿಬ್ ಪೋಹಿತ್.

"ಅರ್ಥವ್ಯವಸ್ಥೆ ಮತ್ತು ಪರಿಸರದ ನಡುವೆ ಸಂಘರ್ಷ – ಭಾರತಕ್ಕಾಗಿ ಪರಿಸರದ ವಿಸ್ತೃತ ಸಾಮಾಜಿಕ ಹೊಣೆಗಾರಿಕೆ ಮ್ಯಾಟ್ರಿಕ್ಸ್" ಸುನಿಲ್ ನೌಟಿಯಾಲ್ ಮತ್ತಿತರರ "ಹವಾಮಾನ ಬದಲಾವಣೆ ಸವಾಲು (೩ಸಿ) ಮತ್ತು ಸಾಮಾಜಿಕ–ಆರ್ಥಿಕ – ಪರಿಸರಿಕ ಮುಖಾಮುಖಿ ಮಾಡುವಿಕೆ" ಗ್ರಂಥದಲ್ಲಿ. ಸ್ಪ್ರಿಂಗರ್, ೨೦೧೬ – ಬರುನ್ ದೇಬ್ ಪಾಲ್.

# ಐಸೆಕ್



"ನಗರ ಹಾಗೂ ನಗರದ ಹೊರವಲಯಗಳ ಕೃಷಿಯನ್ನು ಹೆಚ್ಚಿಸಲು ಕಾರ್ಯನೀತಿ ಬೆಂಬಲ (ಯುಪಿಎ)" – "ನಗರ ಹಾಗೂ ನಗರದ ಹೊರ ವಲಯಗಳ ಕೃಷಿ ಅಭಿವೃದ್ಧಿ" ಗ್ರಂಥದಲ್ಲಿ. ನವದೆಹಲಿ ವೆಸ್ಟ್‌ವಿಲೆ ಪ್ರಕಟಣಾ ಮಂದಿರ, ೨೦೧೫ – ಚೆಂಗಪ್ಪ, ಪಿ.ಜಿ., ಮತ್ತು ಎನ್.ಎನ್. ಪೂರ್ಣಿಮ.

"ರೈತರು ಹಾಗೂ ಆಹಾರ ಉತ್ಪನ್ನಗಳ ಚಿಲ್ಲರೆ ಮಾರಾಟ ಸರಪಳಿಗಳ ನಡುವೆ ಬೆಸುಗೆ ಸಾಧ್ಯವೇ?" – "ವ್ಯವಸ್ಥಿತ ಚಿಲ್ಲರೆ ವ್ಯಾಪಾರ ಮತ್ತು ಕೃಷಿ ಉದ್ದಿಮೆ: ಭಾರತೀಯ ಕೃಷಿ ಅರ್ಥವ್ಯವಸ್ಥೆಯಲ್ಲಿ ಹೊಸ ಪೂರೈಕೆ ಸರಪಳಿಗಳ ಪ್ರಭಾವ". ಸ್ಪ್ರಿಂಗರ್, ೨೦೧೫ – ಚೆಂಗಪ್ಪ, ಪಿ.ಜಿ., ಕೆ.ಪಿ. ಮಂಗಳ ಮತ್ತು ವಿಜಯಲಕ್ಷ್ಮಿ ದೇಗಾ.

"ಭಾರತದಲ್ಲಿ ಹೊರಹೊಮ್ಮುತ್ತಿರುವ ಪರ್ಯಾಯ ಕೃಷಿ ಮಾರುಕಟ್ಟೆ ಮಾದರಿಗಳು". ಎಂ.ವಿ. ಶ್ರೀನಿವಾಸ ಗೌಡ ಮತ್ತು ಬಿ.ಎಂ. ರಾಮಚಂದ್ರ ರೆಡ್ಡಿ ಸಂಪಾದಿತ "ಕೃಷಿ ಉದ್ದಿಮೆಯಲ್ಲಿ ಮುನ್ನಡೆ ಅಂಶಗಳು" ಗ್ರಂಥದಲ್ಲಿ. ಮೈಸೂರು: ಅಭಿವೃದ್ಧಿ ಅಧ್ಯಯನಗಳ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೨೦೧೫ – ಚೆಂಗಪ್ಪ, ಪಿ.ಜಿ., ಮತ್ತು ಪ್ರದೀಪ್ ಬಾಬು.

"ನಾನಿಗಾಗಿ ವೈವಿಧ್ಯಮಯ ಉತ್ಪನ್ನಗಳು ಮತ್ತು ಮಾರುಕಟ್ಟೆಗಳು: ಒಂದು ಜಾಗತಿಕ ದೃಷ್ಟಿಕೋನ". ಎರಡನೆಯ ವಿಶ್ವ ನಾನಿ ಕಾಂಗ್ರೆಸ್ ೨೦೧೫ರ ನಡವಳಿಗಳಲ್ಲಿ, ಕಟ್ಟನ್‌ಕುಲತ್ತೂರ್, ಚೆನ್ನೈ: ಎಸ್‌ಆರ್‌ಎಂ ವಿಶ್ವವಿದ್ಯಾಲಯ, ಮಾರ್ಚ್ ೧೯–೨೧, ೨೦೧೬ – ಚೆಂಗಪ್ಪ, ಪಿ.ಜಿ., ಮತ್ತು ಪ್ರದೀಪ್ ಬಾಬು.

"ವಿಕೇಂದ್ರೀಕೃತ ಯೋಜನೆ: ಕರ್ನಾಟಕದಲ್ಲಿನ ಅನುಷ್ಠಾನ" (ಕನ್ನಡದಲ್ಲಿ). ಎಸ್. ರವಿ ಪ್ರಕಾಶ್ ಸಂಪಾದಿತ "ಕರ್ನಾಟಕದ ಅಭಿವೃದ್ಧಿ: ಆರ್ಥಿಕ, ಸಾಮಾಜಿಕ ಮತ್ತು ಸುಸ್ಥಿರ ಅಭಿವೃದ್ಧಿ" ಎಂಬ ಗ್ರಂಥದಲ್ಲಿ. ಸದರನ್ ಇಕನಾಮಿಸ್ಟ್, ೨೦೧೬ – ದೇವೇಂದ್ರ ಬಾಬು, ಎಂ.

"ನಗರ ಹಾಗೂ ನಗರದ ಹೊರವಲಯದ ಕೃಷಿಯ ಬಗ್ಗೆ ಕಾರ್ಯನೀತಿ ಶಿಫಾರಸ್ಸುಗಳು", "ನಗರ ಹಾಗೂ ನಗರದ ಹೊರವಲಯದ ಕೃಷಿಯ ಅಭಿವೃದ್ಧಿ ಒಲವುಗಳು" ನಲ್ಲಿ, ನವದೆಹಲಿ: ವೆಸ್ಟ್‌ವಿಲೆ ಪ್ರಕಟಣಾ ಮಂದಿರ, ೨೦೧೫. ಏಳುಮಲೈ ಕಣ್ಣನ್, ಆರ್.ಎಸ್. ದೇಶಪಾಂಡೆ, ಪ್ರೇಮ್ನಾಥ್ ಹಾಗೂ ಪಿ.ಜಿ. ಚೆಂಗಪ್ಪ.

ಸಂಶೋಧನಾ ಟಿಪ್ಪಣಿ: "ಭಾರತದ ಮೂಲ ಸೌಕರ್ಯಾಭಿವೃದ್ಧಿಯಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವಗಳು", ಮೂಲ ಸೌಕರ್ಯಾಭಿವೃದ್ಧಿ ನಿಯತಕಾಲಿಕೆ", ೬(೨); ೧೧೧–೨೯ – ಗಾಯಿತ್ರಿ, ಕೆ. ಮತ್ತು ನಾಗೇಶ, ಜಿ.

"ಕರ್ನಾಟಕದಲ್ಲಿ ಎಚ್‌ಎಂಐಎಸ್ ದತ್ತಾಂಶದ ಗುಣಮಟ್ಟ: ಜಿಲ್ಲಾ ಮಟ್ಟದ ಒಂದು ವಿಶ್ಲೇಷಣೆ". ಸಿ.ಆರ್.ಕೆ. ನಾಯರ್ ಮತ್ತು ಕೆ.ಎಸ್. ಜೇಮ್ಸ್ ಸಂಪಾದಿಸಿದ "ಭಾರತದಲ್ಲಿ ಮಗು ಮತ್ತು ಬಾಣಂತಿಯ ಆರೋಗ್ಯ: ಜನಸಂಖ್ಯಾ ಸಂಶೋಧನಾ ಕೇಂದ್ರಗಳು ನಡೆಸಿದ ಅಧ್ಯಯನಗಳ ಸಂಗ್ರಹ". ನವದೆಹಲಿ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ, ೨೦೧೬ – ಜೇಮ್ಸ್, ಕೆ.ಎಸ್. ಹಾಗೂ ಪ್ರಭುಸ್ವಾಮಿ, ಪಿ.

"ನಗರಗಳ ಬಡವರ ಕೊಡುಗೆ: ಭಾರತದ ಚೆನ್ನೈನ ಒಂದು ಸಾಕ್ಷ್ಯ". "ಏಷಿಯಾ–ಪೆಸಿಫಿಕ್ ಅಭಿವೃದ್ಧಿ ನಿಯತಕಾಲಿಕೆ", ೨೧(೨): ೫೩–೭೬, ಡಿಸೆಂಬರ್ ೨೦೧೪ – ಕಲಾ ಸೀತಾರಾಂ ಶ್ರೀಧರ್ ಹಾಗೂ ಎ. ವೇಣುಗೋಪಾಲ ರೆಡ್ಡಿ.

"ನಗರಗಳಲ್ಲಿನ ಬಡತನ ಗ್ರಾಮೀಣ ಬಡತನಕ್ಕಿಂತ ಹೆಚ್ಚು ಸವಾಲಿನದೇ?" "ಪರಿಸರ ಮತ್ತು ನಗರೀಕೃತ ಏಷಿಯಾ" (ಸೇಜ್), ೬(೨): ೧–೧೪, ಸೆಪ್ಟೆಂಬರ್ ೨೦೧೫ – ಕಲಾ ಸೀತಾರಾಂ ಶ್ರೀಧರ್.

"ಐಸಿಟಿಯ ಮೂಲಕ ಭಾರತೀಯ ನಗರಗಳಲ್ಲಿನ ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣೆ". "ಯೋಜನಾ", ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ನಿಯತಕಾಲಿಕೆ, ಭಾರತ ಸರ್ಕಾರ, ೫೯: ೩೬–೩೯, ಸೆಪ್ಟೆಂಬರ್ ೨೦೧೫ – ಕಲಾ ಸೀತಾರಾಂ ಶ್ರೀಧರ್.

"ಭಾರತದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ: ಕರ್ನಾಟಕದ ಚಿತ್ರದುರ್ಗ ಜಿಲ್ಲೆಯಲ್ಲಿ ಬಡತನವನ್ನು ಅದು ಹೋಗಲಾಡಿಸಿದೆಯೇ?". "ನಿರ್ವಹಣೆ ಮತ್ತು ಕಾರ್ಮಿಕ ಅಧ್ಯಯನಗಳು (ಸೇಜ್)", ೪೦ (೩ ಮತ್ತು ೪); ೩೬೬–೮೪, ೨೦೧೫ – ಕಲಾ ಸೀತಾರಾಂ ಶ್ರೀಧರ್ ಮತ್ತು ಎ.ವಿ. ರೆಡ್ಡಿ.

"ಭಾರತದ ನಗರಗಳ ಉಪನಗರೀಕರಣ: ಗುಲ್ಬರ್ಗಾದಿಂದ ಯಾವ ಸಾಕ್ಷ್ಯವಿದೆ?" "ಪರಿಸರ ಮತ್ತು ನಗರೀಕೃತ ಏಷಿಯಾ (ಸೇಜ್)", ೭(೧): ೯೩–೧೧೨, ಜನವರಿ ೨೦೧೬ – ಕಲಾ ಸೀತಾರಾಂ ಶ್ರೀಧರ್ ಮತ್ತು ಪ್ರಿಯಾ ನಾರಾಯಣನ್.

“ಭಾರತದ ನಗರಗಳ ಮೇಲೆ ವಾತಾವರಣ ಬದಲಾವಣೆಯು ಬೀರಿರುವ ಆರ್ಥಿಕ ಪ್ರಭಾವ”. ಸುನಿಲ್ ನೌಟಿಯಾಲ್ ಮತ್ತಿತರರ “ವಾತಾವರಣ ಬದಲಾವಣೆ ಸವಾಲು (ಇಸಿ) ಮತ್ತು ಸಾಮಾಜಿಕ–ಆರ್ಥಿಕ–ಪರಿಸರ ಮುಖಾಮುಖಿಯನ್ನು ಬೆಳೆಸುವಿಕೆ” ಗ್ರಂಥದಲ್ಲಿ. ಸ್ಪ್ರಿಂಗರ್, ೨೦೧೬ – ಕಲಾ ಸೀತಾರಾಂ ಶ್ರೀಧರ್.

“ಏಷಿಯಾ – ಪೆಸಿಫಿಕ್ ನಲ್ಲಿ ಘನ ತ್ಯಾಜ್ಯ ನಿರ್ವಹಣೆ: ಅದರ ವ್ಯಾಪಕತೆಯನ್ನು ಯಾವುದು ವಿವರಿಸುತ್ತದೆ”. “ಸಾರ್ವಜನಿಕ ಕಾಮಗಾರಿ ನಿರ್ವಹಣೆ ಮತ್ತು ಕಾರ್ಯನೀತಿ (ಸೇಜ್)”, ೨೧(೧); ೫೩–೭೦, ಜನವರಿ ೨೦೧೬ – ಕಲಾ ಸೀತಾರಾಂ ಶ್ರೀಧರ್.

“ತೋಟಗಾರಿಕಾ ವಲಯದ ಬೆಳವಣಿಗೆ: ನಗರೀಕರಣದ ಹಾಗೂ ಒಟ್ಟಾರೆ ಅಭಿವೃದ್ಧಿಯ ಒಂದು ಸೂಚಿ”. “ನಗರ ಹಾಗೂ ನಗರದ ಹೊರವಲಯಗಳ ಕೃಷಿಯಲ್ಲಿನ ಬೆಳವಣಿಗೆ ಪ್ರವೃತ್ತಿ” ಗ್ರಂಥದಲ್ಲಿ. ನವದೆಹಲಿ: ವೆಸ್ಟ್‌ವಿಲ್ಲೆ ಪ್ರಕಟಣಾ ಮಂದಿರ, ೨೦೧೫ – ಕೊಮೊಲ್ ಸಿಂಘ, ರೋಹಿ ಚೌಧರಿ ಮತ್ತು ಕೇದಾರ್ ವಿಷ್ಣು.

“ನಗರೀಕರಣ ಹಾಗೂ ನೀರು ಪೂರೈಕೆ: ಭಾರತದ ಬೆಂಗಳೂರು ನಗರದಲ್ಲಿನ ವಿಶ್ವಾಸನೀಯವಲ್ಲದ ನೀರು ಪೂರೈಕೆಯ ಬಗ್ಗೆ ಒಂದು ವಿಶ್ಲೇಷಣೆ”. ನಿರಂಜನ್ ಘೋಷ್ ಮತ್ತಿತರರು ಸಂಪಾದಿಸಿರುವ “ನಿಸರ್ಗ, ಅರ್ಥ ವ್ಯವಸ್ಥೆ ಮತ್ತು ಸಮಾಜ: ಸಂಬಂಧಗಳನ್ನು ತಿಳಿದುಕೊಳ್ಳುವಿಕೆ” ಗ್ರಂಥದಲ್ಲಿ. ಸ್ಪ್ರಿಂಗರ್ ೨೦೧೫ – ಕೃಷ್ಣರಾಜ್.

ಪುಸ್ತಕ ವಿಮರ್ಶೆ: “ಅಂತರ್‌ರಾಷ್ಟ್ರೀಯ ವಿತ್ತ ಪದ್ಧತಿಯ ಸುಧಾರಣೆ – ಪಲಾಯಿಸ್ ರಾಜವಂಶದ ಉಪಕ್ರಮಿಕೆ.” “ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ನಿಯತಕಾಲಿಕೆ”, ೧೬ (೨), ಜುಲೈ–ಡಿಸೆಂಬರ್, ೨೦೧೪ – ಕೃಷ್ಣರಾಜ್ ಮತ್ತು ಅಮೀರಾ ತಾಟರ್.

“ಯುವ ಜನಾಂಗ: ಅವಕಾಶಗಳು ಮತ್ತು ಸವಾಲುಗಳು”. “ಯೋಜನಾ”, ವಿಶೇಷ ಸಂಚಿಕೆ, ಅಕ್ಟೋಬರ್ ೨೦೧೫ – ಲಕ್ಷ್ಮಣ, ಸಿ.ಎಂ.

“ವಯಸ್ಸಿನ ವಿನ್ಯಾಸದಲ್ಲಿ ಕದಲಿಕೆ ಮತ್ತು ದಕ್ಷಿಣ ಭಾರತದಲ್ಲಿ ಆರ್ಥಿಕ ಅಭಿವೃದ್ಧಿ”, “ಆರೋಗ್ಯ ಮತ್ತು ಜನಾಂಗೀಯ ಅಧ್ಯಯನದ ಐಇಆರ್ ನಿಯತಕಾಲಿಕೆ”, ೧ (೧), ಜುಲೈ ೨೦೧೫ – ಲಕ್ಷ್ಮಣ, ಸಿ.ಎಂ.

“ಭಾರತದಲ್ಲಿ ಸ್ತ್ರೀ ಸಬಲೀಕರಣ ಮತ್ತು ರಾಜಕೀಯದಲ್ಲಿ ಭಾಗವಹಿಸುವಿಕೆ”. ಮೋಹನ್ ದಾಸ್, ಎಂ. ಲಿಂಗರಾಜು ಮತ್ತು ನಾಗೇಶ್, ಆರ್. ಸಂಪಾದಿಸಿರುವ “ಸ್ತ್ರೀ ಸಬಲೀಕರಣ: ಇಪ್ಪತ್ತೊಂದನೆಯ ಶತಮಾನದ ಸವಾಲುಗಳು” ಎಂಬ ಗ್ರಂಥದಲ್ಲಿ. ವಾರಣಾಸಿ (ಉತ್ತರ ಪ್ರದೇಶ): ನೂತನ್ ಪ್ರಕಟಣೆಗಳು, ಜನವರಿ, ೨೦೧೫ – ಲಿಂಗರಾಜು ಎಂ, ಸಿದ್ಧರಾಜು ಸಿ. ಮತ್ತು ಮೋಹನ್ ದಾಸ್.

“ಬುಡಕಟ್ಟು ಅಲೆಮಾರಿ ಮಹಿಳೆಯರ ಜೀವನ ಕ್ರಮಗಳು: ಒಂದು ಅಧ್ಯಯನ”. ಮೋಹನ್ ದಾಸ್, ಎಂ. ಲಿಂಗರಾಜು ಮತ್ತು ಸುಧಾಕರ, ಎಚ್., ಸಂಪಾದಿಸಿರುವ “ಸಬಲೀಕರಣದ ಹಾದಿಯಲ್ಲಿ ಮಹಿಳೆ” ಗ್ರಂಥದಲ್ಲಿ. ವಾರಣಾಸಿ (ಉತ್ತರ ಪ್ರದೇಶ): ನೂತನ್ ಪ್ರಕಟಣೆಗಳು, ಜನವರಿ ೨೦೧೫ – ಲಿಂಗರಾಜು ಎಂ. ಮತ್ತು ಮೋಹನ್ ದಾಸ್.

“ಕಾರ್ಯಕ್ಷಮತೆಯ ನಿರ್ವಹಣೆ: ಚಾಲ್ತಿಯ ಮತ್ತು ಅತ್ಯುತ್ತಮ ಪದ್ಧತಿಗಳು”. ಕೆ. ಗಾಯಿತ್ರಿ ಮತ್ತು ಕೆ.ವಿ. ರಾಜು ಸಂಪಾದಿಸಿರುವ “ರಾಜ್ಯ, ಆಡಳಿತ ಮತ್ತು ಅಭಿವೃದ್ಧಿಯ ಆರ್ಥಿಕತೆ” ಗ್ರಂಥದಲ್ಲಿ. ಕೇಂಬ್ರಿಡ್ಜ್: ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಮುದ್ರಣಾಲಯ, ಡಿಸೆಂಬರ್ ೨೦೧೫ – ಮಾದೇಶ್ವರನ್, ಎಸ್.

“ಅಚ್ಚುಕಟ್ಟಾದ ನಗರಗಳಿಗೆ ಅಚ್ಚುಕಟ್ಟಾದ ಭೂ ಆಡಳಿತ – ನಗರ ಸ್ವತ್ತು ಒಡೆತನದ ದಾಖಲೆಗಳ ಬಗ್ಗೆ ಕರ್ನಾಟಕದಲ್ಲಾದ ಅನುಭವಗಳು”. “ಅಭಿವೃದ್ಧಿ, ನಿರ್ವಹಣೆ ಮತ್ತು ಸಂಪರ್ಕದ ನಿಯತಕಾಲಿಕೆ”, II (೧) ಜನವರಿ–ಮಾರ್ಚ್ ೨೦೧೫ – ಮಾನಸಿ ಎಸ್. ಮತ್ತು ಕೆ.ಸಿ. ಸ್ಮಿತಾ.

“ಸಮುದಾಯದ ಆರೋಗ್ಯವನ್ನು ಸುಧಾರಿಸಲು ಸಮಗ್ರತಾ ಮಾರ್ಗ – ಆಯುಷ್ ಮಾರ್ಗ – ಬೆಂಗಳೂರು ನಗರದ ಹೊರವಲಯಗಳಲ್ಲಿನ ಅನುಭವಗಳು”, “ಸಮಗ್ರ ಆರೋಗ್ಯ ಶುಶ್ರೂಷೆ ನಿಯತಕಾಲಿಕೆ”, ೧೨ (೨), ೨೦೧೫ – ಮಾನಸಿ ಎಸ್. ಮತ್ತು ಕೆ.ವಿ. ರಾಜು.

“ಭಾರತದ ಕರ್ನಾಟಕದಲ್ಲಿ ನೀರಾವರಿ ಹೊಂದಿದ ಕೃಷಿ ಕ್ಷೇತ್ರಗಳಲ್ಲಿ ಮೇಲ್ಮೈ ನೀರಿನ ತಾಂತ್ರಿಕ, ಹಂಚಿಕೆಯ ಹಾಗೂ ಆರ್ಥಿಕ ಕಾರ್ಯಕ್ಷಮತೆಯನ್ನು ಅಂದಾಜು ಮಾಡುವಿಕೆ ಮತ್ತು ವಿವರಿಸುವಿಕೆ”. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ನಿಯತಕಾಲಿಕೆ, ೧೬ (೨): ೧೮೭–೨೦೩, ಜುಲೈ–ಡಿಸೆಂಬರ್ ೨೦೧೪ – ಮಂಜುನಾಥ ಎ.ವಿ. ಮತ್ತು ಎಸ್. ಸ್ಪೀಲ್‌ಮನ್.

“ಭಾರತೀಯ ಕೃಷಿಯಲ್ಲಿ ಇಂಧನ – ನೀರು – ಮಣ್ಣು ಹಾಗೂ ಆಹಾರಗಳ ನಡುವಿನ ಸಂಬಂಧವನ್ನು ಅನಾವರಣಗೊಳಿಸುವಿಕೆ”. “ಪರಿಸರ, ವಾತಾವರಣ ಮತ್ತು ಸಂರಕ್ಷಣೆ ನಿಯತಕಾಲಿಕೆ”, ೨೦ (ಪೂರಕ): ೩೦೩–೧೨, ೨೦೧೪ – ಮಂಜುನಾಥ ಎ.ವಿ. ಮತ್ತು ಎಸ್. ಸುಬ್ರಮಣಿಯನ್.

# ಐಸೆಕ್



"ಭಾರತದ ಕರ್ನಾಟಕದಲ್ಲಿ ಮೇಲ್ಮೈ ನೀರಿನ ಮರುಪೂರಣದ ಮೇಲೆ ಅರಣ್ಯ ನಿರ್ವಹಣಾ ಸಂಸ್ಥೆಗಳ ಆರ್ಥಿಕ ಪ್ರಭಾವ". "ಭಾರತೀಯ ಅರಣ್ಯ ಸಂರಕ್ಷಕ", ೧೪೦(೧೧): ೧೯೫೫–೧೧೦೬, ೨೦೧೪ – ಮಂಜುನಾಥ, ಎ.ವಿ., ವಿಕ್ರಂ ಪಾಟೀಲ್, ಎಂ.ಜಿ. ಚಂದ್ರಕಾಂತ್, ಎನ್.ಆರ್. ಗಂಗಾಧರಪ್ಪ ಮತ್ತು ಶಿವನಗೌಡ.

"ಭಾರತದ ನೀರಾವರಿ ಕ್ಷೇತ್ರಗಳ ಮೇಲೆ ಮೇಲ್ಮೈ ನೀರಿನ ಅನೌಪಚಾರಿಕ ಮಾರುಕಟ್ಟೆಗಳ ಪ್ರಭಾವ: ದತ್ತಾಂಶ ವಿಶ್ಲೇಷಣೆಯನ್ನು ಬೂಟುಕಟ್ಟುವ ಮಾರ್ಗವನ್ನನುಸರಿಸಿ ಮಾಡುವಿಕೆ", "ನೀರಾವರಿ ವಿಜ್ಞಾನ (ಸ್ಪ್ರಿಂಗರ್)", ೩೪ (೧): ೪೧–೫೨, ೨೦೧೫ – ಮಂಜುನಾಥ, ಎ.ವಿ., ಎಸ್. ಸ್ಪೀಲ್ ಮನ್, ಶ್ರೀಜಿತ್ ಅರವಿಂದಾಕ್ಷನ್, ಟಿ.ಎಸ್. ಅಮ್ಜತ್ ಬಾಬು ಮತ್ತು ಪೂರನ್‌ಮಲ್.

"ಬಿಟಿ ಹತ್ತಿ ಅಳವಡಿಕೆಯನ್ನು ನಿರ್ಧರಿಸುವ ಅಂಶಗಳು ಮತ್ತು ಉತ್ಪಾದನಾ ಸ್ವರೂಪ ಮತ್ತು ಆರೋಗ್ಯದ ಮೇಲೆ ಅದರ ಪ್ರಭಾವ: ಭಾರತದ ಪ್ರಗತಿಪರ ಕೃಷಿ ರಾಜ್ಯಗಳಾದ ಪಂಜಾಬ್ ಮತ್ತು ಹರಿಯಾಣಗಳ ಒಂದು ಅಧ್ಯಯನ ಪ್ರಕರಣ". "ಏಷಿಯಾದ ಜೈವಿಕ ತಂತ್ರಜ್ಞಾನ ಮತ್ತು ಅಭಿವೃದ್ಧಿ ವಿಮರ್ಶೆ", ೧೭(೩): ೧–೧೫, ೨೦೧೫ – ಮಂಜುನಾಥ, ಎ.ವಿ., ಪೂರನ್ ಮಲ್, ಆರ್.ಕೆ. ಗ್ರೋವರ್, ಅಶೋಕ್ ಕುಮಾರ್ ಮತ್ತು ಎಸ್. ಬಾವರ್.

"ಚಾಲ್ತಿಯಲ್ಲಿನ ಸಾಗುವಳಿ ವೆಚ್ಚದ ಕಡಿಮೆ ಅಂದಾಜು ಮಾಡುವಿಕೆಗೆ ನೀರಾವರಿ ನೀರಿನ ಬೆಲೆಯನ್ನು ಸೇರಿಸುವಿಕೆ: ಒಂದು ಪ್ರಾಯೋಗಿಕ ಅಧ್ಯಯನ". "ಭಾರತೀಯ ಕೃಷಿ ಅರ್ಥಶಾಸ್ತ್ರ ನಿಯತಕಾಲಿಕೆ", ೭೦(೩): ೩೯೯–೩೨, ೨೦೧೫ – ಮಂಜುನಾಥ, ಎ.ವಿ, ಜಿ.ವಿ. ರೋಹಿತ್, ಎಸ್.ಎಸ್. ರಶ್ಮಿ, ಕೆ.ಆರ್. ಹಂಸ, ಯು. ದಿವ್ಯಲಕ್ಷ್ಮಿ, ಡಿ. ರಾಜೇಶ್ವರಿ, ಎನ್. ರಶ್ಮಿ ಮತ್ತು ಜಗನ್ನಾಥ್ ಓಲೇಕಾರ್.

"ಭಾರತದಲ್ಲಿ ಒಪ್ಪಂದ ಕೃಷಿಯ ಪ್ರಸಕ್ತ ಸ್ಥಿತಿಗತಿ ಮತ್ತು ಭವಿಷ್ಯದ ಅವಕಾಶಗಳು". ಕೃಷಿ ವಿಜ್ಞಾನಗಳ ಅಂತರ್‌ರಾಷ್ಟ್ರೀಯ ನಿಯತಕಾಲಿಕೆ, ೮(೭): ೧೦೭೨–೭೫, ೨೦೧೬ – ಮಂಜುನಾಥ, ಎ.ವಿ. ರಾಮಪ್ಪ, ಕೆ.ಬಿ., ಲಾವಣ್ಯ, ಬಿ.ಟಿ., ಮತ್ತು ಮಮತ, ಎನ್.ಸಿ.

"ದಮ ಮತ್ತು ಧರ್ಮಗಳ ಬಗ್ಗೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ದೃಷ್ಟಿಕೋನ". ಪ್ರಜ್ಞಾ, ೧(೧), ಡಿಸೆಂಬರ್ ೨೦೧೪ – ಮನೋಹರ್ ಯಾದವ್.

"ಈಶಾನ್ಯ ಭಾರತದಲ್ಲಿ ಮೋರೆ ಗಡಿಯ ವ್ಯಾಪಾರ ವಹಿವಾಟಿನ ಭವಿಷ್ಯ (ಚೀನಾ ಭಾಷೆಯಲ್ಲಿ)". ಗುಓ ಜಿಯೋಮಿಂಗ್‌ನಲ್ಲಿ (ಸಂಪಾದಿತ), "ಚೀನಾ–ಭಾರತ ವೇದಿಕೆ ೨೦೧೩: ತೆರೆದುಕೊಳ್ಳುವಿಕೆ, ಸಹಕಾರ ಮತ್ತು ಆರ್ಥಿಕ ಅಭಿವೃದ್ಧಿ", ಚೆಂಗ್ಡು (ಚೀನಾ ಜನತಾ ಗಣರಾಜ್ಯ): ಸಿಚುಯನ್ ಜನತಾ ಪ್ರಕಟಣೆಗಳ ಸಂಸ್ಥೆ, ೨೦೧೫ – ಮಾರ್ಚಂಗ್ ರಿಮೀಂಗಮ್.

"ಕೊರಿಯನ್ ಮಾಧ್ಯಮ: ಮಣಿಪುರದಲ್ಲಿ ಕೊರಿಯನ್ ಸಂಸ್ಕೃತಿಯ ಅಳವಡಿಕೆಗೆ ಒಂದು ವೇಗವರ್ಧಕ", ಈಶಾನ್ಯ ಭಾರತದ ಅಧ್ಯಯನ ನಿಯತಕಾಲಿಕೆ, ೫(೨), ೨೦೧೫ ಮಾರ್ಚಂಗ್ ರಿಮೀಂಗಮ್.

"ಸಿಕ್ಕಿಂನಲ್ಲಿ ಪರಿಶಿಷ್ಟ ಪಂಗಡಗಳ ಕಾರ್ಮಿಕರ ಬಡತನದ ಮೇಲೆ ಮಹಾತ್ಮಾಗಾಂಧಿ ರಾಷ್ಟ್ರೀಯ–ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ (ಎಂಜಿಎನ್‌ಆರ್‌ಇಜಿಎ) ಪ್ರಭಾವ". ಗ್ರಾಮೀಣಾಭಿವೃದ್ಧಿ ನಿಯತಕಾಲಿಕೆ, ೩೫(೧), ೨೦೧೬ – ಮಾರ್ಚಂಗ್ ರಿಮೀಂಗಮ್.

"ಖುಷ್ಕಿ ಕೃಷಿಯಲ್ಲಿನ ಸಣ್ಣ, ಅತಿ ಸಣ್ಣ ಮತ್ತು ದಲಿತ ರೈತರು – ಕರ್ನಾಟಕದ ಕಲಬುರಗಿ ಜಿಲ್ಲೆಯ ಶ್ರೀನಿವಾಸ ಸರದಗಿಯ ಒಂದು ಅಧ್ಯಯನ ಪ್ರಕರಣ". "ಸಾಮಾಜಿಕ ವಿಜ್ಞಾನಗಳ ಸಂಶೋಧನೆಯ ಅಂತರ್‌ರಾಷ್ಟ್ರೀಯ ನಿಯತಕಾಲಿಕೆ", ೫(೨): ೨೨೪೯–೯೬, ಮೇ ೨೦೧೫ – ಮಾರುತಿ, ಐ.

"ಕರ್ನಾಟಕದಲ್ಲಿನ ದಲಿತರ ಕುಡಿಯುವ ನೀರು ನೈರ್ಮಲ್ಯ, ಮತ್ತು ಸ್ವಚ್ಛತೆ ಪದ್ಧತಿಗಳು". ಸಾರ್ವಜನಿಕ ಕಾರ್ಯನೀತಿ ಮತ್ತು ಆಡಳಿತದ ನಿಯತಕಾಲಿಕೆ, ೫(೨): ೮೨–೧೦೨, ಜುಲೈ–ಡಿಸೆಂಬರ್ ೨೦೧೫ – ಮಾರುತಿ, ಐ ಮತ್ತು ಪೆಸಲ ಭೂಸಣ್ಣ.

"ಅಸ್ಸಾಂ ರಾಜ್ಯವನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಈಶಾನ್ಯ ಭಾರತದ ಪ್ರದೇಶದಲ್ಲಿ ಅಂತರ್ ರಾಜ್ಯ ಮತ್ತು ರಾಜ್ಯಗಳೊಳಗೆ ಇರುವ ಅಸಮಾನತೆಯ ಅಧ್ಯಯನ". ರಾಖಿ ಭಟ್ಟಾಚಾರ್ಯ ಸಂಪಾದಿಸಿರುವ "ಭಾರತದಲ್ಲಿ ಪ್ರಾದೇಶಿಕ ಅಭಿವೃದ್ಧಿ ಮತ್ತು ಸಾರ್ವಜನಿಕ ಕಾರ್ಯನೀತಿ ಸವಾಲು" ಗ್ರಂಥದಲ್ಲಿ. ಸ್ಪ್ರಿಂಗರ್ ಪ್ರಕಟಣೆ, ಜುಲೈ ೨೦೧೫ – ಮೀನಾಕ್ಷಿ ರಾಜೀವ್ ಮತ್ತು ಅಜರುದ್ದೀನ್ ಅಖ್ತರ್.

"ಆರ್ಥಿಕ ಸೇರ್ಪಡೆ ಮತ್ತು ತಾರತಮ್ಯತೆ: ಭಾರತದ ಒಂದು ಪ್ರಕರಣ" ಐಎಲ್‌ಓ ಪ್ರಕಟಣೆಗಳು, ಜುಲೈ ೨೦೧೫ – ಮೀನಾಕ್ಷಿ ರಾಜೀವ್.

# ಐಸೆಕ್

“ಕರ್ನಾಟಕದಲ್ಲಿನ ಬೆಳೆ ವಿಮೆ”, ಸಮಾವೇಶ ಸಂಪುಟದಲ್ಲಿ: ಮಧ್ಯಮಾವಧಿಯಲ್ಲಿ ಭಾರತದ ದಕ್ಷಿಣ ಪ್ರದೇಶಗಳ ಕೃಷಿಗೆ ಇರುವ ಪ್ರತೀಕ್ಷೆಗಳು: ಸವಾಲುಗಳನ್ನೆದುರಿಸುವ ಸಲುವಾಗಿ ಕಾರ್ಯತಂತ್ರವನ್ನು ರೂಪಿಸಲು ಕಾರ್ಯ ಸೂಚಿ ತಯಾರಿಕೆ”. ಅಭಿವೃದ್ಧಿ ಅಧ್ಯಯನಗಳ ಮದ್ರಾಸ್ ಸಂಸ್ಥೆ, ಜನವರಿ ೨೦೧೬ – ಮೀನಾಕ್ಷಿ ರಾಜೀವ್, ಮನೋಜಿತ್ ಭಟ್ಟಾಚಾರ್ಜಿ ಮತ್ತು ಬಿ.ಪಿ. ವಾಣಿ.

“ವಾತಾವರಣ ಬದಲಾವಣೆ, ಕಷ್ಟ ಸಾಧ್ಯತೆ, ಅನಿಶ್ಚಿತತೆ ಹಾಗೂ ಉಪಶಮನ ಮಾಡುವಿಕೆ: ಭಾರತದಲ್ಲಿ ಬೆಳೆ ವಿಮೆ”. “ಸಾಮಾಜಿಕ ವಿಜ್ಞಾನ ಸಂಶೋಧನಾ ಸಂಪರ್ಕಜಾಲ”, ೨೭೩೧೫೦೩, ಫೆಬ್ರವರಿ ೨೦೧೬ – ಮೀನಾಕ್ಷಿ ರಾಜೀವ್, ಬಿ.ಪಿ. ವಾಣಿ ಮತ್ತು ಮನೋಜಿತ್ ಭಟ್ಟಾಚಾರ್ಜಿ.

“ಸ್ವಸಹಾಯ ಗುಂಪುಗಳಿಗೆ (ಎಸ್‌ಹೆಚ್‌ಜಿ) ಸಾಲ ಪಡೆದುಕೊಳ್ಳುವ ಪರಿಣಾಮಕಾರಿ ಬೆಲೆಯು ತೀರಾ ದುಬಾರಿಯೇ?: ವ್ಯವಹಾರಗಳ ಬೆಲೆಯ ಪಾತ್ರವನ್ನು ತಿಳಿದುಕೊಳ್ಳುವಿಕೆ”. “ಸಾಮಾಜಿಕ ವಿಜ್ಞಾನ ಸಂಶೋಧನಾ ಸಂಪರ್ಕಜಾಲ”, ೨೭೪೭೭೭೮, ಮಾರ್ಚ್ ೨೦೧೬, ಮೀನಾಕ್ಷಿ ರಾಜೀವ್, ಬಿ.ಪಿ. ವಾಣಿ ಮತ್ತು ವೀರಶೇಖರಪ್ಪ.

“ಬೆಂಗಳೂರು ನಗರದಲ್ಲಿನ ಮೀನುಗಳ ಆಂತರಿಕ ಮಾರುಕಟ್ಟೆ ವಿಧಾನಗಳ ಅಧ್ಯಯನ”. “ಸಾಮಾಜಿಕ ವಿಜ್ಞಾನ ಸಂಶೋಧನಾ ಸಂಪರ್ಕಜಾಲ”, ೨೭೪೭೭೮೨, ಮಾರ್ಚ್ ೨೦೧೬, ಮೀನಾಕ್ಷಿ ರಾಜೀವ್ ಮತ್ತು ಸುಪ್ರಿಯ ಭಂಡಾರ್ಕರ್.

“ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಗ್ರಾಮೀಣ ಕೃಷಿಯೇತರ ಚಟುವಟಿಕೆಗಳು”. ಸಮಾವೇಶ ಸಂಪುಟದಲ್ಲಿ: “ಉದಾರೀಕರಣದಡಿಯಲ್ಲಿ ಭಾರತದ ಸಣ್ಣ ಉತ್ಪಾದಕರು: ಗಮ್ಯ ಅಂಶಗಳು ಮತ್ತು ಸವಾಲುಗಳು”. ಅಭಿವೃದ್ಧಿ ಅಧ್ಯಯನಗಳ ಸಂಸ್ಥೆ, ಮಾರ್ಚ್ ೨೦೧೬ – ಮೀನಾಕ್ಷಿ ರಾಜೀವ್ ಮತ್ತು ಮನೋಜಿತ್ ಭಟ್ಟಾಚಾರ್ಜಿ.

“ಪರಿಹಾರಾತ್ಮಕ ಶುಶ್ರೂಷೆಯಲ್ಲಿನ ಸಾಮಾಜಿಕ ತಾರತಮ್ಯತೆ: ಗ್ರಾಮೀಣ ಭಾರತದಲ್ಲಿ ಸಾಮಾಜಿಕ ಗುಂಪುಗಳಾದ್ಯಂತ ನಿರ್ಧಾರಕ ಅಂಶಗಳು”. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ನಿಯತ ಕಾಲಿಕೆ, ೧೬ (೨), ಜುಲೈ–ಡಿಸೆಂಬರ್ ೨೦೧೪, ಮುತ್ತುರಾಯಪ್ಪ ಆರ್. ಮತ್ತು ರಾಜೇಶ್ ರೋಶನ್.

“ಹದಿ ವಯಸ್ಕರು ಗರ್ಭಿಣಿಯರಾಗುವುದನ್ನು ಬಾಧಿಸುವ ಅಂಶಗಳು ಮತ್ತು ಭಾರತದಲ್ಲಿ ಬಾಣಂತಿ ಮತ್ತು ಮಕ್ಕಳ ಆರೋಗ್ಯದ ಮೇಲೆ ಅದರ ಪರಿಣಾಮಗಳು.” ಮಾನವ ಅಭಿವೃದ್ಧಿ ಮತ್ತು ಜೀವನೋಪಾಯದ ಏಷ್ಯಾ ನಿಯತ ಕಾಲಿಕೆ. ೪(೧), ಮಾರ್ಚ್–ಸೆಪ್ಟೆಂಬರ್ – ೨೦೧೫, ಮುತ್ತುರಾಯಪ್ಪ ಆರ್.

ಭಾರತ ಸರ್ಕಾರದ ಕೃಷಿ ಸಚಿವಾಲಯದ ಹೆಚ್ಚುವರಿ ಆಯುಕ್ತರು ೨೦೧೫ರ ಮೇ ೧೫ರಂದು ನವದೆಹಲಿಯ ಕೃಷಿ ಭವನದಲ್ಲಿ ಏರ್ಪಡಿಸಿದ್ದ ಪ್ರಸ್ತಾವನಾ ನಿರೂಪಣಾ ಸಭೆಯಲ್ಲಿ ಒಪ್ಪಂದ ಕೃಷಿ, ಜಮೀನು ಗುತ್ತಿಗೆ ನೀಡುವಿಕೆ ಮತ್ತು ಜಮೀನಿನ ಪಾಲು ಪಡೆಯುವ ಕಂಪನಿಗಳ ಬಗ್ಗೆ ನಿರೂಪಣೆ ಮಾಡಲಾಯಿತು.

ನವದೆಹಲಿಯಲ್ಲಿ ೨೦೧೫ರ ಮೇ ೨೭ರಂದು ಕೃಷಿ ಸಚಿವಾಲಯಕ್ಕೆ ಭಾರತೀಯ ಕೃಷಿಯ ನಸುದರ್ಶನದ ಪ್ರಕಟಣೆಯನ್ನು ತಯಾರಿಸುವ ಕಾರ್ಯಕ್ರಮದ ಸಭೆಯಲ್ಲಿ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗಕ್ಕಾಗಿ ಸಂಶೋಧಕರನ್ನು ಆಯ್ಕೆ ಮಾಡುವ ತಜ್ಞರ ತಂಡದ ಸಮಿತಿಯ ಸದಸ್ಯರಾಗಿ ೨೦೧೫ರ ಜುಲೈ ೨೦ ರಂದು ನಡೆದ ಸಭೆಯಲ್ಲಿ ಭಾಗವಹಿಸಿದ್ದರು.

ಐಸೆಕ್–ಎನ್‌ಸಿಐ ಅಂತರರಾಷ್ಟ್ರೀಯ ಸ್ನಾತಕೋತ್ತರ ಪದವಿ "ಭಾರತದ ಪರಿಸರವನ್ನು ತಲುಪುವಿಕೆ – ನಿಸರ್ಗ – ಆರ್ಥಿಕತೆ – ಸಮಾಜದ ಮುಖಾಮುಖಿಯ ಅಧ್ಯಯನದಲ್ಲಿ ಪರಿಗಣಿಸಬೇಕಾದ ಅಂಶಗಳು ಮತ್ತು ವಿಧಾನಗಳು" ಬಗೆಗಿನ ತಜ್ಞರ ತಂಡದ ೨೦೧೫ರ ಜುಲೈ ೨೪ರ ಸಭೆಯಲ್ಲಿ ಸದಸ್ಯರಾಗಿ ಭಾಗವಹಿಸಿದ್ದರು.

# ಐಸೆಕ್

ಐಎಫ್‌ಪಿಆರ್‌ಐ ಸಂಸ್ಥೆಗೆ ೨೦೧೫ರ ಆಗಸ್ಟ್ ೬ರಂದು ಭೇಟಿ ನೀಡಲಾಯಿತು ಹಾಗೂ ಅಲ್ಲಿಯ ನಿರ್ದೇಶಕರು ಮತ್ತು ಎಇಆರ್‌ಸಿ ಮೌಲ್ಯಮಾಪನ ಸಮಿತಿಯ ಸದಸ್ಯರೂ ಆದ ಪ್ರಾಧ್ಯಾಪಕ ಪಿ.ಕೆ. ಜೋಷಿಯವರೊಡನೆ ಎಇಆರ್‌ಸಿಯ ನಿಧಿಯ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

"ಭಾರತೀಯ ಕೃಷಿಯ ನಸುನೋಟ–II" ಪ್ರಕಟಣೆಯ ಬಗ್ಗೆ ೨೦೧೫ರ ಆಗಸ್ಟ್ ೨೦ರಂದು ನಡೆದ ಸಂಪಾದಕೀಯ ಮಂಡಳಿಯ ಸಭೆಯಲ್ಲಿ ಭಾಗವಹಿಸಲಾಯಿತು.

ಎನ್‌ಸಿಎಇಆರ್/ಎಫ್‌ಎಒ ದೃಷ್ಟಿಕೋನ ಯೋಜನೆಗಾಗಿ ೨೦೧೫ರ ಆಗಸ್ಟ್ ೩೦ರಂದು ಮಾದರಿ ಅಂದಾಜುಗಳನ್ನು ಸಲ್ಲಿಸಲಾಯಿತು.

ಎನ್‌ಸಿಎಇಆರ್‌ನಲ್ಲಿ ೨೦೧೫ರ ಸೆಪ್ಟೆಂಬರ್ ೧೪ರಂದು ನಡೆದ ದೃಷ್ಟಿಕೋನ ಯೋಜನೆಯ ಪ್ರಾರಂಭಿಸುವಿಕೆಯ ಬಗೆಗಿನ ಸಭೆಯಲ್ಲಿ ಭಾಗವಹಿಸಲಾಯಿತು.

ದೆಹಲಿಯಲ್ಲಿನ ಆರ್ಥಿಕ ಬೆಳವಣಿಗೆ ಸಂಸ್ಥೆ (ಐಇಜಿ) ಯಲ್ಲಿ ೨೦೧೫ರ ಅಕ್ಟೋಬರ್ ೧೨–೧೩ರಂದು ನಡೆದ ಮೂರನೆಯ ಎಇಆರ್‌ಸಿ ಪರಿಶೀಲನಾ ಸಮಿತಿಯ ಸಭೆಯಲ್ಲಿ ಭಾಗವಹಿಸಲಾಯಿತು ಮತ್ತು ಎಡಿಆರ್‌ಟಿಸಿ ಕಾರ್ಯನಿರ್ವಹಣೆಯ ಬಗ್ಗೆ ನಿರೂಪಿಸಲಾಯಿತು.

ನವದೆಹಲಿಯ ಕೃಷಿ ಭವನದಲ್ಲಿ ಭಾರತ ಸರ್ಕಾರದ ಕೃಷಿ ಸಚಿವಾಲಯದ ಜಂಟಿ ಕಾರ್ಯದರ್ಶಿಗಳು ೨೦೧೫ರ ಅಕ್ಟೋಬರ್ ೨೬ರಂದು ಏರ್ಪಡಿಸಿದ್ದ ಸಭೆಯಲ್ಲಿ ಭಾಗವಹಿಸಿ ಮುಂಬರುವ ಯೋಜನೆಯಾದ "ಒಪ್ಪಂದ ಕೃಷಿ, ಜಮೀನು ಗುತ್ತಿಗೆ ಮತ್ತು ಭೂಮಿಯ ಪಾಲು ಪಡೆಯುವ ಕಂಪನಿಗಳು" ಇದಕ್ಕಾಗಿ ಕಾರ್ಯವಿಧಾನವನ್ನು ನಿರೂಪಿಸಲಾಯಿತು.

ಪಂಜಾಬ್‌ನ ಪಟಿಯಾಲದಲ್ಲಿ ೨೦೧೫ರ ಅಕ್ಟೋಬರ್ ೨೭–೨೯ರ ಅವಧಿಯಲ್ಲಿ ಸುಬ್ರಮಣಿಯಮ್ ಜೊತೆಗೂಡಿ ಗ್ಲಾಸ್ಗೋ ವಿಶ್ವವಿದ್ಯಾಲಯದ "ಮಾಹಿತಿ ಮತ್ತು ಕೃಷಿ ಉತ್ಪಾದಕತೆ" ಎಂಬ ಅಧ್ಯಯನಕ್ಕಾಗಿ ಕ್ಷೇತ್ರ ಕಾರ್ಯವನ್ನು ಮಾಡಲಾಯಿತು.

ನವದೆಹಲಿಯಲ್ಲಿ ೨೦೧೫ರ ನವೆಂಬರ್ ೧೮ರಂದು ನಡೆದ ಸಿಸಿಓಎಸ್ ಸಭೆಯಲ್ಲಿ ಭಾಗವಹಿಸಲಾಯಿತು (ಕೃಷಿ ಸಚಿವಾಲಯವು ನವದೆಹಲಿಯ ಕೃಷಿ ಭವನದಲ್ಲಿ ೨೦೧೫–೧೬ರ ಸಾಲಿನ ಕಾರ್ಯಯೋಜನೆಗಾಗಿ ಹೊಸ ಯೋಜನೆಗಳನ್ನು ಸೇರಿಸಿಕೊಳ್ಳಲು ಸಿಸಿಓಎಸ್ ಸಭೆಯನ್ನು ಕರೆದಿತ್ತು).

ನವದೆಹಲಿಯ ಕೃಷಿ ಸಚಿವಾಲಯಕ್ಕಾಗಿ ಪ್ರಕಟಿಸಬೇಕಾದ "ಭಾರತೀಯ ಕೃಷಿಯ ನಸುನೋಟ" ಪ್ರಕಟಣೆಯ ಸಂಪಾದಕೀಯ ಮಂಡಳಿಯು ೨೦೧೬ರ ಫೆಬ್ರವರಿ ೧೮–೧೯ಗಳಂದು ಏರ್ಪಡಿಸಿದ್ದ ಸಭೆಯಲ್ಲಿ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿರುವ ಕರ್ನಾಟಕ ಕೃಷಿ ಬೆಲೆ ಆಯೋಗದ ಬೆಳೆ ವಿಮೆ ಅಧ್ಯಯನವನ್ನು ಅಂತಿಮಗೊಳಿಸುವುದಕ್ಕಾಗಿ ೨೦೧೬ರ ಫೆಬ್ರವರಿ ೨೪ರಂದು ಕರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದರು.

ನವದೆಹಲಿಯ ಲೋಧಿ ರಸ್ತೆಯಲ್ಲಿರುವ ಇಂಡಿಯಾ ಹ್ಯಾಬಿಟಾಟ್ ಸೆಂಟರ್‌ನ ಸಿಲ್ವರ್ ಓಕ್ ೨ ಸಭಾಂಗಣದಲ್ಲಿ ೨೦೧೬ರ ಮಾರ್ಚ್ ೩ ರಂದು ಭೂ ಸಂಪನ್ಮೂಲ ಇಲಾಖೆಯು ಕರೆದಿದ್ದ ಸಭೆಯಲ್ಲಿ ಭಾಗವಹಿಸಿ ಪ್ರಸ್ತಾವಿತ ಅಧ್ಯಯನವಾದ "ಡಿಜಿಟಲ್ ಇಂಡಿಯಾ ವ್ಯವಸ್ಥೆಯಲ್ಲಿ ಭೂ ದಾಖಲೆಗಳ ಆಧುನೀಕರಣ ಕಾರ್ಯಕ್ರಮ (ಡಿಐಎಲ್‌ಆರ್‌ಎಂಪಿ)ವನ್ನು ಸುಧಾರಿಸುವ ಕುರಿತು ಸಲಹೆಗಳು, ಮರು ಪ್ರತಿಕ್ರಿಯೆಗಳು ಹಾಗೂ ಪರಿಣಾಮ ಮೌಲ್ಯೀಕರಣವನ್ನು ಚರ್ಚಿಸಲಾಯಿತು.

### ಲಕ್ಷ್ಮಣ, ಸಿ.ಎಂ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ೨೦೧೫ರ ಆಗಸ್ಟ್ ೩೧ ಹಾಗೂ ಸೆಪ್ಟೆಂಬರ್ ೧೨ರಂದು ಕರೆದಿದ್ದ ತಜ್ಞರ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯು ಕರ್ನಾಟಕದ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ತಯಾರಿಕೆಯ ಕುರಿತಾಗಿತ್ತು.

ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಛೇರಿಯಲ್ಲಿ ಕರ್ನಾಟಕದ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ತಯಾರಿಕೆಯ ಕುರಿತಾಗಿ ೨೦೧೫ರ ಸೆಪ್ಟೆಂಬರ್ ೧೨–೧೩, ಅಕ್ಟೋಬರ್ ೨೦, ನವೆಂಬರ್ ೧೭ ಮತ್ತು ಡಿಸೆಂಬರ್ ೮ಗಳಂದು ಕರೆದಿದ್ದ ತಜ್ಞರ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದರು.

ಕರ್ನಾಟಕದ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ತಯಾರಿಕೆಯ ಕುರಿತಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ೨೦೧೬ರ ಫೆಬ್ರವರಿ ೧೮ರಂದು ಕರೆದಿದ್ದ ತಜ್ಞರ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದರು.



ಸಚಿವಾಲಯಕ್ಕೆ ತಮಿಳುನಾಡಿನ ತಿರುವಾರೂರ್ ಮತ್ತು ತೂತ್ತುಕುಡಿ ಜಿಲ್ಲೆಗಳಿಗೆ ಸಂಬಂಧಿಸಿದ ಎರಡು ಪಿಐಪಿ ವರದಿಗಳನ್ನು ಸಲ್ಲಿಸಲಾಯಿತು.

**ಮಾದೇಶ್ವರನ್, ಎಸ್.**

ಪ್ರಾಥಮಿಕ ಆರ್ಥಿಕ ಮಾಪನ ಹಾಗೂ ಆನ್ವಯಿಕ ಆರ್ಥಿಕ ಮಾಪನ – ಈ ಎರಡೂ ಪಠ್ಯಗಳನ್ನು ಶ್ರೀಮತಿ ಬಿ.ಪಿ.ವಾಣಿ ಅವರೊಡಗೂಡಿ ಸಂಯೋಜಿಸಲಾಯಿತು.

ಸ್ವಿಟ್ಜರ್ಲೆಂಡ್‌ನ ಲುಸಾನೆ ವಿಶ್ವವಿದ್ಯಾಲಯದಲ್ಲಿ ೨೦೧೫ರ ನವೆಂಬರ್ ೪ ರಿಂದ ೮ರವರೆಗೆ ನಡೆದ ಸಮಾವೇಶದಲ್ಲಿ "ವಿವಿಧ ಆಯಾಮಗಳಲ್ಲಿ ಯೋಗಕ್ಷೇಮ" ಎಂಬ ವಿಷಯದ ಯೋಜನೆಯನ್ನು ಪ್ರಾರಂಭಿಸುವ ಸಲುವಾಗಿ ಪರಿಕಲ್ಪನಾಟಿಪ್ಪಣಿ/ಕಾರ್ಯ ಯೋಜನೆಯೊಂದನ್ನು ನಿರೂಪಿಸಲಾಯಿತು.

ಜೂನ್ ೨೦೧೫ರಲ್ಲಿ ನವದೆಹಲಿಯ ನೀತಿ ಆಯೋಗ ಹಾಗೂ ಕರ್ನಾಟಕ ಸರ್ಕಾರದ "ಬಡತನದ ಅಳತೆಗೋಲು ಹಾಗೂ ಅದನ್ನು ಹೋಗಲಾಡಿಸಲು ಅನುಸರಿಸಬೇಕಾದ ಸಾಧನಾ ತಂತ್ರಗಳ" ಬಗ್ಗೆ ರಚಿಸಿದ್ದ ಕಾರ್ಯಭಾರ ತಂಡದ ಸಮಿತಿಗೆ ವರದಿಯೊಂದನ್ನು ಸಲ್ಲಿಸಲಾಯಿತು.

ಡಿಸೆಂಬರ್ ೨೦೧೫ರಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಎನ್‌ಯುಇಪಿಎ ಸಂಸ್ಥೆಗೆ ಉನ್ನತ ಶಿಕ್ಷಣ ಮತ್ತು ಸಮಾನತೆಯ ಬಗೆಗಿನ "ಪರಿಣಾಮದಲ್ಲಿನ ವೈವಿಧ್ಯತೆ: ಭಾರತದ ಪದವೀಧರ ಕಾರ್ಮಿಕ ಮಾರುಕಟ್ಟೆಯಲ್ಲಿ" ಎಂಬ ವರದಿಯನ್ನು ಸಲ್ಲಿಸಲಾಯಿತು.

**ಮಾನಸಿ, ಎಸ್.**

ಬೆಂಗಳೂರಿನ ಕರ್ನಾಟಕದ ನಗರಗಳ ಮೂಲಸೌಕರ್ಯ ಹಾಗೂ ಅಭಿವೃದ್ಧಿ ಧನಸಹಾಯ ನಿಗಮ (ಕೆಯುಐಡಿಎಫ್‌ಸಿ) ಹಾಗೂ ಪರಿಸರ ನಿರ್ವಹಣೆ ಮತ್ತು ಕಾರ್ಯನೀತಿ ಸಂಶೋಧನಾ ಸಂಸ್ಥೆ (ಇಎಂಪಿಆರ್‌ಐ) – ಇವುಗಳು ೨೦೧೫ರ ಏಪ್ರಿಲ್ ೧ರಂದು ಏರ್ಪಡಿಸಿದ್ದ "ನಗರಗಳ ಆಡಳಿತ ಮತ್ತು ಪಾಲನೆ" ಎಂಬ ತರಬೇತಿ ಕಾರ್ಯಕ್ರಮದಲ್ಲಿ "ಘನ ತ್ಯಾಜ್ಯ ನಿರ್ವಹಣೆ ಮತ್ತು ತ್ಯಾಜ್ಯ ಜಲ ನಿರ್ವಹಣೆಗಾಗಿ ಅನುಸರಿಸಬಹುದಾದ ಅತ್ಯುತ್ತಮ ಆಚರಣೆಗಳು" ಎಂಬ ಬಗ್ಗೆ ತರಬೇತಿ ನೀಡಲಾಯಿತು.

ಆರ್‌ಇಎಸ್‌ಯುಆರ್‌ಬಿಇ ಕಾರ್ಯಕ್ರಮದಲ್ಲಿ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಈ ಕಾರ್ಯಕ್ರಮವು ವಿಶ್ವಾದ್ಯಂತ ನಗರಾಭಿವೃದ್ಧಿ ಯೋಜನೆಗಳ ಸಾಮರ್ಥ್ಯಾಭಿವೃದ್ಧಿ ಮಾಡುತ್ತದೆ ಮತ್ತು ಈ ಬಗ್ಗೆ ಸಂಶೋಧನೆಯನ್ನೂ ಮಾಡುತ್ತದೆ. ಜೊತೆಗೆ ನಗರಗಳ ಸ್ಥಿತಿ ಸ್ಥಾಪಕತ್ವದ ಬಗ್ಗೆ ಬೆಂಬಲಾಧಾರಿತ ಕಾರ್ಯನೀತಿಯನ್ನೂ ಸಹ ರೂಪಿಸುತ್ತದೆ. ಡಾ. ಮಾನಸಿಯವರು ಇದರ ಸದಸ್ಯರಾಗಿ ಅಂತರ್ರಾಷ್ಟ್ರೀಯ ವೇದಿಕೆಯಲ್ಲಿ ಜಂಟಿ ಪ್ರಸ್ತಾವನೆಗಳನ್ನು ಜೊತೆಯಾಗಿ ಅಭಿವೃದ್ಧಿ ಪಡಿಸುವಲ್ಲಿ ನಿರತರಾಗಿರುತ್ತಾರೆ. ಈ ಕಾರ್ಯಕ್ರಮವು ಮುಖ್ಯವಾಗಿ ಯುನೈಟೆಡ್ ಕಿಂಗ್‌ಡಂನ ಬ್ರಾಡ್‌ಫರ್ಡ್ ವಿಶ್ವವಿದ್ಯಾಲಯ ಹಾಗೂ ಕೆಲವು ಇನ್ನಿತರ ಸಂಸ್ಥೆಗಳ ಸಂಯೋಜಿತ ಕಾರ್ಯಕ್ರಮವಾಗಿರುತ್ತದೆ.

ಕರ್ನಾಟಕ ಸರ್ಕಾರದ ಮೌಲ್ಯಮಾಪನ ಪ್ರಾಧಿಕಾರದ ತಜ್ಞರ ಸಮಿತಿಯ ಸದಸ್ಯರಾಗಿ ೨೦೧೫ರಲ್ಲೂ ಮುಂದುವರೆದರು ಮತ್ತು ಈ ಸಂಸ್ಥೆಯೊಡಗೂಡಿ ಐಸೆಕ್ ಸಂಸ್ಥೆಯ ತಜ್ಞತೆಗೆ ಸಂಬಂಧಿಸಿದ ದಾಖಲೀಕರಣ ಕಾರ್ಯವನ್ನು ಸಂಯೋಜಿಸಿದರು.

ನವದೆಹಲಿಯ ಎನ್‌ಎಎಂ, ಎಸ್ & ಟಿ ಕೇಂದ್ರದ ೨೦೧೪–೧೫ರ ಸಾಲಿನ ಆರ್‌ಟಿಎಫ್–ಡಿಸಿಎಸ್ ಶಿಷ್ಯತ್ವದಡಿಯಲ್ಲಿ ಶ್ರೀಮತಿ ಕಿಸ್ತಾ ಮವಾಯಿಸೋಲಾ ಅವರಿಗೆ ಮಾರ್ಗದರ್ಶನ ನೀಡಲಾಯಿತು. ಸಾಂಟಾ ಬಾರ್ಬರದಲ್ಲಿನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಮಾನವಶಾಸ್ತ್ರ ವಿಭಾಗದ ಪಿಎಚ್‌ಡಿ ವಿದ್ಯಾರ್ಥಿನಿಯಾದ ಶ್ರೀಮತಿ ಲಿಂಡ್ಸೆ ವೋಗಟ್‌ರವರಿಗೆ ಆತಿಥೇಯ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸಲಾಯಿತು.

ವಿಭಾಗದ ದೃಷ್ಟಿಕೋನ/ಮುನ್ನೋಟವನ್ನು ಅಂತಿಮಗೊಳಿಸಿ ೨೦೧೬ರ ಜನವರಿಯಲ್ಲಿ ನಿರ್ದೇಶಕರಿಗೆ ಕಳುಹಿಸಿಕೊಡಲಾಯಿತು.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ೨೦೧೬ರ ಜನವರಿಯಲ್ಲಿ ಭೇಟಿ ಮಾಡಲಾಯಿತು.

ವಿಭಾಗದ ಕಿರುಹೊತ್ತಿಗೆಯನ್ನು ಅಂತಿಮಗೊಳಿಸಿ, ನಿರ್ದೇಶಕರ ಅಭಿಪ್ರಾಯಗಳನ್ನು ಸೇರಿಸಿ ೨೦೧೬ರ ಫೆಬ್ರವರಿಯಲ್ಲಿ ಮುದ್ರಣಕ್ಕೆ ಕಳುಹಿಸಿಕೊಡಲಾಯಿತು.

**ಮಂಜುನಾಥ, ಎ.ವಿ.**

(ಶ್ರೀ ಪರಮೋದ್ ಕುಮಾರ್ ಅವರೊಡನೆ) ರಾಷ್ಟ್ರೀಯ ಆಹಾರ ಭದ್ರತೆ ಅಭಿಯಾನದ ಪರಿಣಾಮಕ್ಕೆ ಸಂಬಂಧಿಸಿದ ೯ ರಾಜ್ಯಗಳ ಮೌಲ್ಯಮಾಪನ ವರದಿಗಳನ್ನು ವಿಮರ್ಶಿಸಲಾಯಿತು.

# ಐಸೆಕ್

ಭಾರತ ಸರ್ಕಾರದ ಕೃಷಿ ಸಚಿವಾಲಯದಲ್ಲಿನ ಜಂಟಿ ಕಾರ್ಯದರ್ಶಿಗಳು ೨೦೧೫ರ ಅಕ್ಟೋಬರ್ ೨೬ರಂದು ನವದೆಹಲಿಯ ಕೃಷಿ ಭವನದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮುಂಬರುವ ಯೋಜನೆಯಾದ "ಒಪ್ಪಂದ ಕೃಷಿ, ಜಮೀನು ಗುತ್ತಿಗೆ ಮತ್ತು ಭೂಮಿಪಾಲು ಪಡೆಯುವ ಕಂಪನಿಗಳು" – ಇದಕ್ಕೆ ಸಂಬಂಧಿಸಿದಂತೆ ಕಾರ್ಯವಿಧಾನವನ್ನು ನಿರೂಪಿಸಲಾಯಿತು.

ನವದೆಹಲಿಯ ಐಸಿಎಸ್‌ಎಸ್‌ಆರ್ ಸಂಸ್ಥೆಯು ೨೦೧೫ರ ಡಿಸೆಂಬರ್ ೧೮ರಂದು ಕರಡು ಅಧ್ಯಾಯಗಳ ಬಗ್ಗೆ ಚರ್ಚಿಸಲು ಕರೆದಿದ್ದ ವಿಶೇಷ ಸಭೆಯಲ್ಲಿ "ಭಾರತದಲ್ಲಿನ ಸಾಮಾಜಿಕ ವಿಜ್ಞಾನಗಳ ಸಂಶೋಧನಾ ನಿಯತಕಾಲಿಕೆಗಳು" ಎಂಬ ಯೋಜನೆಯ ಕರಡು ವರದಿಯನ್ನು ನಿರೂಪಿಸಲಾಯಿತು.

ನವದೆಹಲಿಯಲ್ಲಿ ೨೦೧೬ರ ಜನವರಿ ೨೨ರಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಂಶೋಧನೆ ಮತ್ತು ಮಾಹಿತಿ ಪದ್ಧತಿಗಳ ಬಗೆಗಿನ ಸಮ್ಮೇಳನದಲ್ಲಿ "ಜೀವಂತ ಸೂಕ್ಷ್ಮಾಣುಗಳಿಂದಾಗುವ ಸಾಮಾಜಿಕ–ಆರ್ಥಿಕ ಪರಿಣಾಮಗಳ ನಿರ್ಧರಣೆ" ಎಂಬ ಯೋಜನೆಯ ಪ್ರಗತಿಯನ್ನು ನಿರೂಪಿಸಲಾಯಿತು.

ನವದೆಹಲಿಯ ಐಸಿಎಸ್‌ಎಸ್‌ಆರ್ ಸಂಸ್ಥೆಯು ೨೦೧೬ರ ಫೆಬ್ರವರಿ ೨೬ರಂದು ಏರ್ಪಡಿಸಿದ್ದ "ಭಾರತದಲ್ಲಿ ಸಾಮಾಜಿಕ ವಿಜ್ಞಾನಗಳ ಸಂಶೋಧನೆಯ ಸ್ಥಿತಿಗತಿಗಳು" ಎಂಬ ಐಸಿಎಸ್‌ಎಸ್‌ಆರ್–ಐಡಿಆರ್‌ಸಿ ಸಹಯೋಗದ ಅಧ್ಯಯನದ ಬಗೆಗಿನ ಸಭೆಯಲ್ಲಿ "ಭಾರತದ ಸಾಮಾಜಿಕ ವಿಜ್ಞಾನ ಸಂಶೋಧನಾ ನಿಯತಕಾಲಿಕೆಗಳು' ಎಂಬ ಬಗ್ಗೆ "ಅಂತಿಮ ಕರಡು ಅಧ್ಯಾಯಗಳನ್ನು" ನಿರೂಪಿಸಲಾಯಿತು.

## ಮುತ್ತುರಾಯಪ್ಪ, ಆರ್.

ಮೈಸೂರು ವಿಶ್ವವಿದ್ಯಾನಿಲಯವು ೨೦೧೫ರ ಏಪ್ರಿಲ್ ೨೩ರಂದು ಮೈಸೂರಿನಲ್ಲಿ ಮಾನವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಏರ್ಪಡಿಸಿದ್ದ ಪರೀಕ್ಷಾ ಮಂಡಳಿಯ ಸಭೆಯಲ್ಲಿ ಸದಸ್ಯರಾಗಿ ಭಾಗವಹಿಸಲಾಯಿತು.

## ನಾರಾಯಣ, ಎಂ.ಆರ್.

ಮೈಸೂರು ವಿಶ್ವವಿದ್ಯಾನಿಲಯವು ೨೦೧೫ರಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿಯನ್ನು ಪ್ರದಾನ ಮಾಡಿತು. ಪ್ರೌಢ ಪ್ರಬಂಧಗಳ ವಿಷಯಗಳು ಹೀಗಿದ್ದವು: (ಅ) ಭಾರತದಲ್ಲಿನ ಸಣ್ಣ ಪ್ರಮಾಣದ ಉದ್ದಿಮೆಗಳು: ಅಳತೆಗೋಲಿನ ಅಂಶಗಳು, ದಕ್ಷತೆ, ಉತ್ಪಾದಕತೆ ಮತ್ತು ಸ್ಪರ್ಧಾತ್ಮಕತೆ ಹಾಗೂ (ಆ) ಭಾರತದಲ್ಲಿ ಸಾರ್ವಜನಿಕ ಸಾಲದ ಸುಸ್ಥಿರತೆ: ಒಂದು ಪ್ರಾಯೋಗಿಕ ಅಧ್ಯಯನ. ವೃತ್ತಿಪರ ನಿಯತಕಾಲಿಕೆಗಳಿಗೆ ತೀರ್ಪುಗಾರರಾಗಿ ಕರ್ತವ್ಯ ನಿರ್ವಹಣೆ: ಆಕ್ಸ್‌ಫರ್ಡ್ ಅಭಿವೃದ್ಧಿ ಅಧ್ಯಯನಗಳು; ನಗರ ಹಾಗೂ ಪ್ರಾದೇಶಿಕ ಅಭಿವೃದ್ಧಿ ಕಾರ್ಯನೀತಿಯ ವಿಮರ್ಶೆ; ಮುಪ್ಪಡರುವಿಕೆಯ ಆರ್ಥಿಕತೆ ಬಗೆಗಿನ ನಿಯತಕಾಲಿಕೆ (ಎಲ್ಸಿವಿಯರ್); ಹಾಗೂ ಸರ್ವೇಕ್ಷಣ: ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆಯ ನಿಯತಕಾಲಿಕೆ.

## ನೌಟಿಯಾಲ್, ಸುನಿಲ್

ಅಮೆರಿಕಾ ಸಂಯುಕ್ತ ಸಂಸ್ಥಾನದ (ಯುಎಸ್‌ಎ)ರಟ್ಜರ್ಸ್ ವಿಶ್ವವಿದ್ಯಾನಿಲಯದ ಭೂಗೋಳ ಶಾಸ್ತ್ರ ವಿಭಾಗದ ಪಿಎಚ್‌ಡಿ ವಿದ್ಯಾರ್ಥಿನಿಯಾದ ಶ್ರೀಮತಿ ದಿಯಾ ಪೌಲ್‌ರವರ ಆರು ತಿಂಗಳ ಕ್ಷೇತ್ರಕಾರ್ಯದ ಮೇಲ್ವಿಚಾರಣೆ ಮಾಡಲಾಯಿತು. ಈ ಕ್ಷೇತ್ರಕಾರ್ಯವು ಆಂಧ್ರ ಪ್ರದೇಶದ ಚಿತ್ತೂರು ಅರಣ್ಯ ವಿಭಾಗದಲ್ಲಿ ನಡೆಯಿತು. ವರದಿಯನ್ನು ಸಲ್ಲಿಸಲಾಗಿದೆ.

ಶಿಷ್ಯವೃತ್ತಿ ಪಡೆದ ವಿದ್ಯಾರ್ಥಿಯಾದ ಶ್ರೀ ಕೆಮನೌ ರಿಚರ್ಡ್ ಸೆನಾಮಿ ಸೆಗುನ್‌ರವರಿಗೆ ಮಾರ್ಗದರ್ಶನ ನೀಡಲಾಯಿತು. ಸದರಿ ವಿದ್ಯಾರ್ಥಿಯು ಬೆನಿನ್‌ನಲ್ಲಿನ ಹೌಡೆಗ್ಬಿ ನಾರ್ತ್ ಅಮೆರಿಕನ್ ವಿಶ್ವವಿದ್ಯಾನಿಲಯದ ಸಂಶೋಧನಾ ಸಹಾಯಕರು ಹಾಗೂ ಅಧ್ಯಾಪಕರಾಗಿದ್ದು ಭಾರತ ಸರ್ಕಾರದ ನವದೆಹಲಿಯಲ್ಲಿನ ಎನ್‌ಎಎಂ & ಎಸ್‌ಟಿ ಕೇಂದ್ರವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ವಿಜ್ಞಾನಿಗಳಿಗೆ ನೀಡುವ ಸಂಶೋಧನಾ ತರಬೇತಿ ಶಿಷ್ಯ ವೃತ್ತಿಯನ್ನು ಶ್ರೀ ಕೆಮನೌರವರಿಗೆ ನೀಡಿತ್ತು. ಶ್ರೀ ಕೆಮನೌರವರು ೨೦೧೫ರ ಜುಲೈನಿಂದ ಅಕ್ಟೋಬರ್‌ವರೆಗೆ "ನೈಸರ್ಗಿಕ ಸಂಪನ್ಮೂಲಗಳು ಹಾಗೂ ಗಂಡು ಹೆಣ್ಣುಗಳಿಗೆ ಸಂಬಂಧಿಸಿದಂತೆ ವಹಿಸಿರುವ ಆರ್ಥಿಕ ಮೌಲ್ಯಗಳಲ್ಲಿನ ತಾರತಮ್ಯಗಳು: ವೋಲ್ಟಾ ಜಲಾನಯನ ಪ್ರದೇಶದಲ್ಲಿನ ಅಧ್ಯಯನ" ಎಂಬ ಸಂಶೋಧನಾ ಕಾರ್ಯವನ್ನು ಕಾರ್ಯಗತಗೊಳಿಸಿದರು. ವರದಿಯನ್ನು ಸಲ್ಲಿಸಲಾಗಿದೆ.

ಜರ್ಮನಿಯ ಬರ್ಲಿನ್‌ನಲ್ಲಿನ ಹಂಬೋಲ್ಟ್ ವಿಶ್ವವಿದ್ಯಾನಿಲಯದ ಶ್ರೀ ಅಜರ್ ಅಬ್ಬಾಸ್ ಎಂಬ ವಿದ್ಯಾರ್ಥಿಯ ಪಿಎಚ್‌ಡಿ ಪ್ರೌಢ ಪ್ರಬಂಧವಾದ "ಹವಾಮಾನ ವೈಪರೀತ್ಯಗಳ ಸಾಮಾಜಿಕ–ಆರ್ಥಿಕ ಪರಿಣಾಮಗಳು: ಪಾಕಿಸ್ತಾನದಲ್ಲಿನ ಪ್ರವಾಹಗಳ ಒಂದು ಸಾಂದರ್ಭಿಕ ಅಧ್ಯಯನ – ಉಪಶಮನ ಮಾಡುವಿಕೆ, ಹೊಂದಿಕೊಳ್ಳುವ ಸಾಧನಾ ತಂತ್ರಗಳು ಹಾಗೂ ಕೃಷಿ ವಲಯದಲ್ಲಿನ ಅಳವಡಿಕೆಯನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು" ಬಗ್ಗೆ ತೀರ್ಪು ಕೊಡಲಾಯಿತು (೨೦೧೬ರ ಜನವರಿಯಲ್ಲಿ).

# ಐಸೆಕ್



## ರಾಜನ್, ವಿಜಿತಾ

ಪುಸ್ತಕ ವಿಮರ್ಶೆ: "ಬಾಲ್ಯಾವಸ್ಥೆ: ವಸಾಹತು ಮುಕ್ತ ಭಾರತದಲ್ಲಿನ ಬಾಲಕರು, ಶ್ರಮ ಹಾಗೂ ವಿದ್ಯಾಭ್ಯಾಸ", ಟೇಲರ್ ಮತ್ತು ಫ್ರಾನ್ಸಿಸ್ ನಿಯತಕಾಲಿಕೆ, ಸಮಕಾಲೀನ ದಕ್ಷಿಣ ಏಷ್ಯಾ (ಡಿಒಐ: ೧೦, ೧೦೮೦/೦೯೫೮೪೯೩೫, ೨೦೧೫, ೧೦೩೪೯೫೫).

## ರಾಜ್, ಕೃಷ್ಣ

ಅಹಮದಾಬಾದ್ ವಿಶ್ವವಿದ್ಯಾನಿಲಯದ ಸಿಇಪಿಟಿ ಪ್ರೌಢ ಪ್ರಬಂಧವನ್ನು ವಿಮರ್ಶಿಸಲಾಯಿತು ಹಾಗೂ ಆ ಪ್ರೌಢ ಪ್ರಬಂಧದ ತಜ್ಞರ ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದರು.

ಪಿಎಚ್‌ಡಿ ಪೂರ್ವ ವಿದಾರ್ಥಿಗಳಿಗೆ ಸೂಕ್ಷ್ಮ ಅರ್ಥಶಾಸ್ತ್ರ ಪಠ್ಯವನ್ನು ಸಂಯೋಜಿಸಿದರು ಮತ್ತು ಬೋಧಿಸಿದರು.

## ರಾಜಶೇಖರ್, ಡಿ.

ಮುಂಬಯಿಯ ಐಜಿಐಡಿಆರ್ ಸಂಸ್ಥೆಯಲ್ಲಿನ ಪ್ರೌಢ ಪ್ರಬಂಧ ಮೌಲ್ಯ ಮಾಪನ ಹಾಗೂ ವೈವಾ ವೋಸಿ (ಅಂತಿಮ ನೇರ ಮೌಖಿಕ ಪರೀಕ್ಷೆ) ಗಳನ್ನು ನಡೆಸುವ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಣೆ.

## ರಾಜೀವ್, ಮೀನಾಕ್ಷಿ

ಜಾಧವ್‌ಪುರ ವಿಶ್ವವಿದ್ಯಾಲಯ ಹಾಗೂ ಕೊಲ್ಕೊತಾ ವಿಶ್ವವಿದ್ಯಾನಿಲಯಗಳಿಗೆ ಸಲ್ಲಿಸಬೇಕಾದ ಪ್ರೌಢ ಪ್ರಬಂಧಗಳ ಪರೀಕ್ಷಣೆ.

ವಿವಿಧ ನಿಯತಕಾಲಿಕೆಗಳಲ್ಲಿನ ಸಂಶೋಧನಾ ಪ್ರಕಟಣೆಗಳ ವಿಮರ್ಶೆ.

ಕಾಫಿ ಉತ್ಪಾದನೆಯ ಮೌಲ್ಯವರ್ಧಕ ಸರಣಿಗೆ ಧನಸಹಾಯ ಮಾಡುವ ಬಗ್ಗೆ ಕಾಸೆಲ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಕಾರ್ಯ ನಿರ್ವಹಣೆ.

ಚರ್ಚೆ: ಸೆಪ್ಟೆಂಬರ್ ೨೦೧೫ರಲ್ಲಿ ಜರ್ಮನಿಯ ಕಾಸೆಲ್ ವಿಶ್ವವಿದ್ಯಾಲಯದ ಐಸಿಡಿಡಿಯ "ಜಾಗತಿಕ ಕೃಷಿ ಉತ್ಪಾದನಾ ಪದ್ಧತಿಯಲ್ಲಿ ಸಭ್ಯಕಾರ್ಯ" ಎಂಬ ಯೋಜನೆಯ ಬಗ್ಗೆ.

ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿನ ಸಂಪನ್ಮೂಲ ವ್ಯಕ್ತಿ – ೨೦೧೫ ರ ನವೆಂಬರ್ ೨೮ ರಂದು.

ಬೆಂಗಳೂರಿನ ರಾಷ್ಟ್ರೀಯ ಭಾರತ ಕಾನೂನು ಶಾಲೆ ವಿಶ್ವವಿದ್ಯಾಲಯದ ಸಂಪನ್ಮೂಲ ವ್ಯಕ್ತಿ.

## ರಿಮೀಂಗಮ್, ಮಾರ್ಚಂಗ್

"ಸಾಮಾಜಿಕ–ಆರ್ಥಿಕ ಅಧ್ಯಯನ" ವಿಷಯದ ಬಗ್ಗೆ ಅರ್ಥಶಾಸ್ತ್ರದ ಡಾಕ್ಟೊರಲ್ ಪ್ರೌಢ ಪ್ರಬಂಧದ ಸಲ್ಲಿಕೆ ಪೂರ್ವ ನಿರೂಪಣೆಯಲ್ಲಿ ಬಾಹ್ಯ ಪರೀಕ್ಷಕರಾಗಿ ಕಾರ್ಯ ನಿರ್ವಹಿಸಿದರು.

ದಕ್ಷಿಣ ಕೊರಿಯಾದ ಸೂಕ್‌ಮ್ಯುಂಗ್ ಮಹಿಳಾ ವಿಶ್ವವಿದ್ಯಾಲಯದ ಏಷ್ಯಾ ಮಹಿಳೆಯರ ಸಂಶೋಧನಾ ಸಂಸ್ಥೆಯ "ಏಷಿಯನ್ ಮಹಿಳೆ"ಯ ವಿಮರ್ಶೆ.

"ಭಾರತೀಯ ವಿಶ್ವವಿದ್ಯಾಲಯಗಳ ಭವಿಷ್ಯ: ತುಲನಾತ್ಮಕವಾಗಿ ಮತ್ತು ಅಂತರ್ರಾಷ್ಟ್ರೀಯ ದೃಷ್ಟಿಯಲ್ಲಿ" ಎಂಬ ವರದಿಯ ಹಸ್ತ ಪ್ರತಿಯ ವಿಮರ್ಶನೆ, ದೆಹಲಿಯ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮುದ್ರಣಾಲಯ, ೨೦೧೫.

ಬಾಹ್ಯ ಪರೀಕ್ಷಕ: "ಬೆಂಗಳೂರಿಗೆ ವಲಸೆ: ಮಾಹಿತಿ ತಂತ್ರಜ್ಞಾನ ವೃತ್ತಿ ನಿರತರ ಹಿಮ್ಮುಖ ವಲಸೆಯ ಅಧ್ಯಯನ" ಎಂಬ ಬೆಂಗಳೂರಿನ ಕ್ರಿಸ್ತ ವಿಶ್ವವಿದ್ಯಾಲಯದ ಡಾಕ್ಟೊರಲ್ ಪ್ರೌಢ ಪ್ರಬಂಧದ ಸಲ್ಲಿಕೆ ಪೂರ್ವ ನಿರೂಪಣೆಯಲ್ಲಿ. ೨೦೧೬ರ ಜನವರಿ ೨೨ ರಂದು.

## ರಾಯ್‌ಚೌಧರಿ, ಸುಪ್ರಿಯಾ

ಪಿಎಚ್‌ಡಿ ವಿದ್ಯಾರ್ಥಿಗಳ ಮೇಲ್ವಿಚಾರಣೆ: ಶ್ರೀ ಸುಜಿತ್ ಕುಮಾರ್ (ಪ್ರೌಢ ಪ್ರಬಂಧ ಸಲ್ಲಿಸಲಾಗಿದೆ), ಶ್ರೀ ಟಾನೆನ್ ನೀಲ್ ಲಿಂಕನ್, ಶ್ರೀ ಜಿತಿನ್, ಜಿ.

# ಐಸೆಕ್

**ಶ್ರೀಧರ್, ಕಲಾ ಸೀತಾರಾಂ**

ಸಾಮಾಜಿಕ ವಿಜ್ಞಾನಗಳ ಸಂಶೋಧನಾ ಜಾಲದಲ್ಲಿನ (ಎಸ್‌ಎಸ್‌ಆರ್‌ಎನ್) ಅಗ್ರ ೧೦ ಸಂಶೋಧನೆಗಳನ್ನು ವಿಮರ್ಶಿಸಲಾಯಿತು: ಇಆರ್‌ಎನ್; ಮೂಲಸೌಕರ್ಯಗಳು; ಇತರ ಸಾರ್ವಜನಿಕ ಹೂಡಿಕೆ ಹಾಗೂ ಬಂಡವಾಳ ಶೇಖರಣೆ; ನಗರ ಮೂಲಸೌಕರ್ಯ (ವಿಷಯಗಳು), ಪಿಎಸ್‌ಎನ್: ಆರ್ಥಿಕ ಅಭಿವೃದ್ಧಿ (ವಿಷಯ) ಅಗ್ರ ಹತ್ತು ಪಿಎಸ್‌ಎನ್; ಮೂಲಸೌಕರ್ಯ (ವಿಷಯ) ಅಗ್ರ ಹತ್ತು ಪಿಎಸ್‌ಎನ್: ಟೆಲಿ ಸಂಪರ್ಕ/ದೂರ ಸಂಪರ್ಕ (ವಿಷಯ) ಅಗ್ರ ಹತ್ತು ಮತ್ತು ರಾಜಕೀಯ ಆರ್ಥಿಕತೆ – ಅಭಿವೃದ್ಧಿ: ಆಂತರಿಕ ಅಭಿವೃದ್ಧಿ ಸಾಧನಾ ತಂತ್ರಗಳು. ಇ–ನಿಯತಕಾಲಿಕೆ ಅಗ್ರ ಹತ್ತು, ೧೯೯೭ರ ಜನವರಿ ೨ರಿಂದ ೨೦೧೫ರ ಮೇ ೫ರವರೆಗೆ.

ಅನ್ವಯಿಕ ಸಿಸ್ಟಂಸ್ ವಿಶ್ಲೇಷಣೆಯ ಅಂತರ್‌ರಾಷ್ಟ್ರೀಯ ಸಂಸ್ಥೆ (ಐಐಎಎಸ್‌ಎ)ಯ ಪೆಕ್ಕಿ ಮತ್ತು ಮಿಖಾಲೆವಿಚ್ ಪ್ರಶಸ್ತಿಗಳ ವಿಮರ್ಶಕಿ, ೨೦೧೫ರ ಮೇ ತಿಂಗಳಿನಲ್ಲಿ ಎಸ್‌ಎಸ್‌ಆರ್‌ಎನ್ ನ ಅಗ್ರ ಹತ್ತು ಡೌನ್‌ಲೋಡ್‌ಗಳ ಪಟ್ಟಿ – ರಾಜಕೀಯ ಆರ್ಥಿಕತೆಗಾಗಿ – ಅಭಿವೃದ್ಧಿ. ಸಾರ್ವಜನಿಕ ಸೇವೆಗಳ ನೀಡಿಕೆ ಇ–ನಿಯತಕಾಲಿಕೆ, ೨೦೧೫ರ ಜೂನ್‌ನಲ್ಲಿ.

– ವಿಮರ್ಶಕಿ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮುದ್ರಣಾಲಯ, ಜೂನ್ ೨೦೧೫.
– ವಿಮರ್ಶಕಿ, ಸ್ಪ್ರಿಂಗರ್, ಜೂನ್ ೨೦೧೫.
– ತೀರ್ಪುಗಾರರು, ನಗರ ಹಾಗೂ ಪ್ರಾದೇಶಿಕ ಅಭಿವೃದ್ಧಿ ಅಧ್ಯಯನಗಳ ನಿಯತಕಾಲಿಕೆ, ಜೂನ್ ೨೦೧೫.
– ನಗರಗಳ ಸುಸ್ಥಿರ ಅಭಿವೃದ್ಧಿಯ ಬಗೆಗಿನ ಅಂತರ್‌ರಾಷ್ಟ್ರೀಯ ನಿಯತಕಾಲಿಕೆ (ಟೇಲರ್ ಮತ್ತು ಫ್ರಾನ್ಸಿಸ್) ಯ ವಿಮರ್ಶಕಿ, ಜನವರಿ ೨೦೧೫.
– ಡಾಕ್ಟೋರಲ್ ಸಮಿತಿ ಸದಸ್ಯರು. "ಭಾರತದಲ್ಲಿ ನಗರೀಕರಣ ಹಾಗೂ ಜನಸಂಖ್ಯಾ ಸಂಕ್ರಮಣಗಳ ನಡುವಿನ ಸಂಪರ್ಕ" – ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ ಪಿಎಚ್‌ಡಿ ವಿದ್ಯಾರ್ಥಿ ಶ್ರೀ ರಾಜು ಸರ್ಕಾರ್‌ರವರ ಪೌಢ ಪ್ರಬಂಧ – ಏಪ್ರಿಲ್, ೨೦೧೫.
– ಶಿಷ್ಯವೃತ್ತಿಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ – ಮದ್ರಾಸಿನ ಭಾರತೀಯ ತಾಂತ್ರಿಕ ಸಂಸ್ಥೆಯ ವಿದ್ಯಾರ್ಥಿನಿ ಶ್ರೀಮತಿ ನಿರುಪಮಾ ಜಯರಾಮನ್, ಜೂನ್ ೨೦೧೫; ಕರ್ನಾಟಕದ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಶ್ರೀಮತಿ ಷಹನಾಜ್ ಬಶೀರ್, ಜೂನ್ ೨೦೧೫.
– ಅಮೆರಿಕಾ ಸಂಯುಕ್ತ ಸಂಸ್ಥಾನದ ಮಸಾಚುಸೆಟ್ಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಶ್ರೀಮತಿ ತನುಶ್ರೀ ಬಾನ್ ಮತ್ತು ಇರ್ವಿನ್‌ನಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಶ್ರೀಮತಿ ದೇಬಪ್ರಿಯಾ ಚಕ್ರಬೊರ್ತಿರವರುಗಳಿಗೆ ಅವರ ಪೌಢ ಪ್ರಬಂಧಗಳ ಬಗ್ಗೆ ಪೂರಕ ಸಲಹೆಗಳನ್ನು ನೀಡಲಾಯಿತು.
– (ಪಾಲ್ ಸಾಮ್ಯುಯಲ್ ಅವರೊಡನೆ) ಪುಸ್ತಕ ವಿಮರ್ಶೆ: "ಭಾರತದ ಉತ್ತರ ದಕ್ಷಿಣ ವಿಭಜನೆಯ ವಿರೋಧಾಭಾಸ: ರಾಜ್ಯಗಳು ಮತ್ತು ಪ್ರದೇಶಗಳಿಂದ ದೊರೆತ ಪಾಠಗಳು", ಸಿವಿಲ್ ಸೊಸೈಟಿ, ನವದೆಹಲಿ: ಸೇಜ್, ಆಗಸ್ಟ್ ೨೦೧೫.
– "ಕರ್ನಾಟಕದ ನಗರಗಳಲ್ಲಿ ಹವಾಮಾನ ಬದಲಾವಣೆ: ಇದು ವಾಸ್ತವವೇ?" ಬೆಂಗಳೂರಿನ ಪರಿಸರ ನಿರ್ವಹಣೆ ಮತ್ತು ಕಾರ್ಯನೀತಿ ಸಂಶೋಧನಾ ಸಂಸ್ಥೆಯಲ್ಲಿ (ಇಎಂಪಿಆರ್‌ಐ) ೨೦೧೫ರ ಅಕ್ಟೋಬರ್ ೧೬ರಂದು ಪ್ರಸ್ತಾವನಾ ನಿರೂಪಣೆ.
– ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ನಿಯತಕಾಲಿಕೆ (ಐಸೆಕ್‌ನ ಸ್ಪ್ರಿಂಗರ್ ನಿಯತಕಾಲಿಕೆ)ಗಾಗಿ ಸಂಶೋಧನಾ ಪ್ರಕಟಣೆಗಳ ವಿಮರ್ಶೆ (ನವೆಂಬರ್ ೨೦೧೫), ಸೇಜ್ ಓಪನ್ (ನವೆಂಬರ್ ೨೦೧೫), ನಗರ ಹಾಗೂ ಪ್ರಾದೇಶಿಕ ಅಭಿವೃದ್ಧಿ ಅಧ್ಯಯನಗಳ ನಿಯತಕಾಲಿಕೆಗಾಗಿ ಸಂಶೋಧನಾ ಪ್ರಕಟಣೆಯ ವಿಮರ್ಶೆ (ನವೆಂಬರ್, ೨೦೧೫).
– ಇಟಲಿಯ ಈಸ್ಟರ್ನ್ ಪೀಡ್‌ಮಾಂಟ್ ವಿಶ್ವವಿದ್ಯಾಲಯದ ಪ್ರೊ. ಪಾವ್ಲೊ ಪೆರುಲ್ಲಿರವರ ಗ್ರಂಥದ ಏಷಿಯನ್ ಅಧ್ಯಾಯದ ಬಗ್ಗೆ ಅವರ ಕೋರಿಕೆಯ ಮೇರೆಗೆ ೨೦೧೫ರ ಡಿಸೆಂಬರ್‌ನಲ್ಲಿ ವ್ಯಾಖ್ಯಾನ ನೀಡಲಾಯಿತು.
– ಶ್ರೀಮತಿ ಕಲಾ ಎಸ್ ಶ್ರೀಧರ್ ಹಾಗೂ ದಿವಂಗತ ಪಾಲ್, ಸ್ಯಾಮ್ಯುಯಲ್‌ರವರು ಬರೆದ "ಭಾರತದ ಉತ್ತರ–ದಕ್ಷಿಣ ವಿಭಜನೆಯ ವಿರೋಧಾಭಾಸ: ರಾಜ್ಯಗಳು ಹಾಗೂ ಪ್ರದೇಶಗಳಿಂದ ಕಲಿತ ಪಾಠಗಳು, ನವದೆಹಲಿ: ಸೇಜ್ ೨೦೧೫" ಎಂಬ ಗ್ರಂಥದ ಬಗ್ಗೆ ೨೦೧೫ರ ಡಿಸೆಂಬರ್‌ನಲ್ಲಿ ವಿಮರ್ಶೆಯೊಂದನ್ನು "ಬುಕ್ ರಿವ್ಯೂ" ನಿಯತಕಾಲಿಕೆಯು ಪ್ರಕಟಿಸಿತು (ವಿಮರ್ಶಕ: ಕಾಮ್ಖಾನ್ ಸುಯಾನ್ ಹಾಸಿಂಗ್).
– ಶ್ರೀಮತಿ ಅಮೃತಾ ಮೇರಿ ವರ್ಗಜ್, ಶ್ರೀ ದೀಪಕ್ ಮಂಡಲ್ ಹಾಗೂ ಶ್ರೀಮತಿ ಜೀನತ್ ಹುಸೇನ್‌ರವರ ಡಾಕ್ಟೋರಲ್ ಸಮಿತಿಯ ಸದಸ್ಯರಾಗಿದ್ದರು, ಫೆಬ್ರವರಿ, ೨೦೧೬.

# ಐಸೆಕ್



## ಶ್ಯಾಮಲ, ಟಿ.ಎಸ್.

- ನವದೆಹಲಿಯಲ್ಲಿ ೨೦೧೫ರ ಆಗಸ್ಟ್ ೩೧ರಂದು ಪ್ರಾಕ್ಸಿಸ್ ಇಂಡಿಯಾದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಹಾಗೂ ಅದರ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದರು.
- ಬೆಂಗಳೂರಿನ ಭಾರತೀಯ ಆರೋಗ್ಯ ನಿರ್ವಹಣಾ ಸಂಶೋಧನಾ ಸಂಸ್ಥೆಯ ಅಧ್ಯಾಪನ ಸಲಹಾ ಪರಿಷತ್ತಿನ ಸಭೆಯಲ್ಲಿ ೨೦೧೫ರ ಸೆಪ್ಟೆಂಬರ್ ೧೫ರಂದು ಭಾಗವಹಿಸಲಾಯಿತು.
- ನಾಗಪುರದಲ್ಲಿ ೨೦೧೬ರ ಮಾರ್ಚ್ ೧೯ ರಂದು ನಡೆದ ಎನ್‌ಎಫ್‌ಎಚ್‌ಎಸ್–೪ ಮಹಾರಾಷ್ಟ್ರ ದತ್ತಾಂಶ ಪ್ರಸರಣಾ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.
- ಕೊಚ್ಚಿನ್‌ನಲ್ಲಿ ೨೦೧೬ರ ಮಾರ್ಚ್ ೨೮ ಹಾಗು ೨೯ಗಳಂದು ನಡೆದ ಜನಸಂಖ್ಯಾ ಸಂಶೋಧನಾ ಕೇಂದ್ರಗಳ ವಾರ್ಷಿಕ ಕ್ರಿಯಾ ಯೋಜನಾ ಸಭೆಯಲ್ಲಿ ಭಾಗವಹಿಸಿದ್ದರು.
- ಕೇರಳದ ಪಾಲಕ್ಕಾಡ್‌ನ ವಾಣಿಯಾಂಕುಲಂದಲ್ಲಿ ಪ್ರಾಕ್ಸಿಸ್ ತರಬೇತಿ ಕೇಂದ್ರ, ತರವಾಡ್‌ನಲ್ಲಿ ೨೦೧೬ರ ಏಪ್ರಿಲ್ ೩೧ರಂದು ನಡೆದ ಪ್ರಾಕ್ಸಿಸ್–ಇಂಡಿಯಾದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದರು.

## ತಂತ್ರಿ, ಮಾಲಿನಿ ಎಲ್.

- ಬೆಂಗಳೂರಿನ ಕ್ರಿಸ್ತ ವಿಶ್ವವಿದ್ಯಾಲಯದ ಎಂಎ ಪದವಿಯ ಪ್ರೌಢ ಪ್ರಬಂಧದ ಸಂಶೋಧನಾ ಪ್ರಸ್ತಾವನೆಯ ಮೌಲ್ಯಮಾಪನ ಮಾಡುವ ಬಾಹ್ಯ ತೀರ್ಪುಗಾರರಾಗಿದ್ದರು.
- ಕ್ರಿಸ್ತ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಎಂಎ ಪ್ರೌಢ ಪ್ರಬಂಧಗಳನ್ನು ಮೌಲ್ಯಮಾಪನ ಮಾಡುವ ಬಾಹ್ಯ ತೀರ್ಪುಗಾರರಾಗಿ ಕರ್ತವ್ಯ ನಿರ್ವಹಿಸಿದರು.

## ಉಮಾಮಣಿ, ಕೆ.ಎಸ್.

- ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗಾಗಿ ಗಣಿತ ಕಲಿಕಾ ಆಂದೋಲನದ ಪ್ರಸ್ತಾವನೆಯನ್ನು ಸಿದ್ಧಪಡಿಸಿದರು. ಆದರೆ ಆರ್ಥಿಕ ಕಾರಣಗಳಿಗಾಗಿ ಈ ಪ್ರಸ್ತಾವನೆಯನ್ನು ನಿರಾಕರಿಸಿದರು.
- ಯೋಜನಾ ಮುಕ್ತಾಯ ವಿಚಾರ ಸಂಕಿರಣ: ಬೆಂಗಳೂರಿನಲ್ಲಿನ ಕರ್ನಾಟಕ ಸರ್ಕಾರದ ಎಸ್‌ಎಸ್‌ಎ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯಲ್ಲಿ ೨೦೧೫ರ ಜುಲೈ ೨೮ರಂದು ಎಸ್‌ಎಸ್‌ಎ – ಆರ್‌ಟಿಇ ಹಾಗೂ ಎಂಡಿಎಂಗಳನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಿದ ಬಗ್ಗೆ ಎರಡನೆಯ ಅರ್ಧವಾರ್ಷಿಕ ಉಸ್ತುವಾರಿ ವರದಿಯ ಬಗ್ಗೆ.
- ನವದೆಹಲಿಯ ಶಾಸ್ತ್ರಿ ಭವನದಲ್ಲಿ ೨೦೧೬ರ ಫೆಬ್ರವರಿ ೫ರಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಏರ್ಪಡಿಸಿದ್ದ ಯೋಜನಾ ಅನುಮೋದನೆ ಮಂಡಳಿ (ಪಿಎಬಿ)ಯ ಸಭೆಯಲ್ಲಿ ಕೋಲಾರ, ಶಿವಮೊಗ್ಗ, ಬೆಳಗಾಂ, ಬೀದರ್, ದಾವಣಗೆರೆ, ಧಾರವಾಡ ಹಾಗೂ ಗದಗ ಜಿಲ್ಲೆಗಳನ್ನು ನಿರ್ದಿಷ್ಟವಾಗಿ ಗಮನದಲ್ಲಿಟ್ಟುಕೊಂಡು ಕರ್ನಾಟಕದ ಎಂಡಿಎಂ ಕಾರ್ಯಕ್ರಮದ ಬಗ್ಗೆ ಉಸ್ತುವಾರಿ ಸಂಸ್ಥೆಯ ಅಭಿಪ್ರಾಯಗಳನ್ನು ನಿರೂಪಿಸಲಾಯಿತು.

## ಯಾದವ್, ಮನೋಹರ್

ಮೈಸೂರಿನ ಟಿಆರ್‌ಐನಲ್ಲಿ ೨೦೧೫ರ ಜೂನ್ ೧೧ ಮತ್ತು ೧೨ಗಳಂದು ನಡೆದ ತಜ್ಞರ ಸಮಿತಿ ಸಭೆಯಲ್ಲಿ ಭಾಗವಹಿಸಲಾಯಿತು.

# ೯. ಸಭೆಗಳು

### ಅಧ್ಯಯನ ಕಾರ್ಯಕ್ರಮ ಸಮಿತಿ

ಐಸೆಕ್‌ನ ಅಧ್ಯಯನ ಕಾರ್ಯಕ್ರಮ ಸಮಿತಿಯು (ಎಪಿಸಿ) ೨೦೧೫ ರ ಜುಲೈ ೩೧ರಂದು ಮತ್ತು ೨೦೧೬ರ ಜನವರಿ ೨೯ ರಂದು ಸಭೆ ಸೇರಿತ್ತು.

### ಸಂಶೋಧನಾ ಕಾರ್ಯಕ್ರಮ ಸಮಿತಿ

ಐಸೆಕ್‌ನ ಸಂಶೋಧನಾ ಕಾರ್ಯಕ್ರಮ ಸಮಿತಿಯು (ಆರ್‌ಪಿಸಿ) ೨೦೧೫ರ ಜೂನ್ ೨೬ರಂದು, ಸೆಪ್ಟೆಂಬರ್ ೩೦ರಂದು, ಡಿಸೆಂಬರ್ ೨೯ರಂದು ಹಾಗೂ ೨೦೧೬ರ ಮಾರ್ಚ್ ೨೪ರಂದು ಸಭೆ ಸೇರಿತ್ತು.

### ವಾರ್ಷಿಕ ಸರ್ವ ಸದಸ್ಯರ ಸಭೆ

ಐಸೆಕ್ ಸಂಘದ ೪೩ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ೨೦೧೫ರ ಡಿಸೆಂಬರ್ ೩೦ರಂದು ಸಮಾವೇಶಗೊಂಡಿತ್ತು.

### ಆಡಳಿತ ಮಂಡಳಿ

ಸಂಸ್ಥೆಯ ೨೦೧೩–೧೫ರ ಅವಧಿಯ ಆಡಳಿತ ಮಂಡಳಿಯು ೨೦೧೫ರ ಆಗಸ್ಟ್ ೧ರಂದು, ಆಗಸ್ಟ್ ೧೭ರಂದು, ಸೆಪ್ಟೆಂಬರ್ ೧೯ರಂದು, ನವೆಂಬರ್ ೨ರಂದು ಮತ್ತು ಡಿಸೆಂಬರ್ ೩೦ರ ಬೆಳಿಗ್ಗೆ ೧೦ ಘಂಟೆಗೆ ಸಭೆ ಸೇರಿತ್ತು.

ಸಂಸ್ಥೆಯ ೨೦೧೬–೧೮ರ ಅವಧಿಯ (ಹೊಸದಾಗಿ ರಚಿಸಲಾದ) ಆಡಳಿತ ಮಂಡಳಿಯು ೨೦೧೫ರ ಡಿಸೆಂಬರ್ ೩೦ರಂದು ಮತ್ತು ೨೦೧೬ರ ಜನವರಿ ೨೭ರಂದು ಸಭೆ ಸೇರಿತ್ತು.

### ಹಣಕಾಸು ಸಮಿತಿ

ಐಸೆಕ್ ಸಂಸ್ಥೆಯ ಹಣಕಾಸು ಸಮಿತಿಯು ೨೦೧೫ರ ಸೆಪ್ಟೆಂಬರ್ ೧೧ರಂದು, ನವೆಂಬರ್ ೨೩ರಂದು ಮತ್ತು ೨೦೧೬ರ ಫೆಬ್ರವರಿ ೨೪ರಂದು ಸಭೆ ಸೇರಿತ್ತು.

### ಉಪದಾನ ಟ್ರಸ್ಟು

ಐಸೆಕ್ ಸಂಸ್ಥೆಯ ಉಪದಾನ ಟ್ರಸ್ಟಿನ ಟ್ರಸ್ಟಿಗಳ ಮಂಡಳಿಯು ೨೦೧೫ರ ಜುಲೈ ೨೧ರಂದು ಸಭೆ ಸೇರಿತ್ತು.

### ಭವಿಷ್ಯನಿಧಿ ಟ್ರಸ್ಟು

ಐಸೆಕ್ ಸಂಸ್ಥೆಯ ಭವಿಷ್ಯನಿಧಿ ಟ್ರಸ್ಟಿನ ಟ್ರಸ್ಟಿಗಳ ಮಂಡಳಿಯು ೨೦೧೫ರ ಸೆಪ್ಟೆಂಬರ್ ೭ರಂದು ಮತ್ತು ೨೦೧೬ರ ಮಾರ್ಚ ೩೧ರಂದು ಸಭೆ ಸೇರಿತ್ತು.



# ೧೦. ನೇಮಕಾತಿಗಳು, ನಿವೃತ್ತಿ, ರಾಜೀನಾಮೆ ಇತ್ಯಾದಿ

| ಕ್ರಮ ಸಂಖ್ಯೆ | ಹೆಸರು | ಹುದ್ದೆ | ದಿನಾಂಕ |
|---|---|---|---|
| **ನೇಮಕಾತಿಗಳು** | | | |
| ೧. | ಶ್ರೀ ವಿನೋಥ್ ಚಂದ್ರ ರಾಯ್ | ಹಿರಿಯ ಸಹಾಯಕರು (ಸಿಸ್ಟಂಸ್) | ೦೧.೦೪.೨೦೧೫ |
| ೨. | ಡಾ. ವಿ. ಅನಿಲ್ ಕುಮಾರ್ | ಸಹ ಪ್ರಾಧ್ಯಾಪಕರು, ಸಿಪಿಐಜಿಡಿ | ೧೨.೦೫.೨೦೧೫ |
| ೩. | ಪ್ರೊ. ಮನೋಹರ್ ಎಸ್ ಯಾದವ್ | ಕುಲಸಚಿವರು | ೨೧.೦೯.೨೦೧೫ |
| **ನಿವೃತ್ತಿ** | | | |
| ೧. | ಡಾ. ವೀರಶೇಖರಪ್ಪ | ಸಹ ಪ್ರಾಧ್ಯಾಪಕರು, ಸಿಇಎಸ್‌ಪಿ | ೩೦.೦೬.೨೦೧೫ |
| ೨. | ಶ್ರೀಮತಿ ಕೆ. ಲೀಲ | ಹಿರಿಯ ಸಹಾಯಕ ಗ್ರಂಥಪಾಲಕರು | ೩೦.೦೬.೨೦೧೫ |
| ೩. | ಶ್ರೀ ಎಸ್ ರಾಜಣ್ಣ | ಪರಿಚಾರಕರು | ೩೧.೦೭.೨೦೧೫ |
| ೪. | ಶ್ರೀ ಎಸ್.ಎ. ಸುದರ್ಶನ್ | ಸಹಾಯಕರು ದರ್ಜೆ ೧ | ೩೦.೦೯.೨೦೧೫ |
| ೫. | ಡಾ. ಟಿ.ಎನ್. ಭಟ್ | ಸಹಾಯಕ ಪ್ರಾಧ್ಯಾಪಕರು, ಪಿಆರ್‌ಸಿ | ೩೧.೧೨.೨೦೧೫ |
| ೬. | ಶ್ರೀ ಎನ್.ಎಸ್. ವಾಸುಕಿ | ಹಿರಿಯ ಆಪ್ತ ಸಹಾಯಕರು | ೩೧.೧೨.೨೦೧೫ |
| ೭. | ಶ್ರೀಮತಿ ಎಂ.ಎಸ್. ನಾಗವಲ್ಲಿ | ಸಹಾಯಕರು ದರ್ಜೆ ೧ | ೨೯.೦೨.೨೦೧೬ |
| **ರಾಜೀನಾಮೆ** | | | |
| ೧. | ಡಾ. ಕೊಮೊಲ್ ಸಿಂಘ | ಸಹಾಯಕ ಪ್ರಾಧ್ಯಾಪಕರು | ೨೪.೦೨.೨೦೧೬ |
| | | | |
| **ನಿಧನ** | | | |
| ೧. | ಡಾ. ಸುರೀಂದರ್ ಪಿ ಎಸ್ ಪೃಥಿ | ಆಜೀವ ಸದಸ್ಯರು | ೧೭.೦೪.೨೦೧೫ |
| ೨. | ಶ್ರೀ ಎಂ.ಎನ್. ಬಚ್ | ಆಜೀವ ಸದಸ್ಯರು | ೦೬.೦೬.೨೦೧೫ |
| ೩. | ಡಾ. ಸ್ಯಾಮ್ಯುಯಲ್ ಪಾಲ್ | ಅಜೀವ ಸದಸ್ಯರು | ೨೬.೧೦.೨೦೧೫ |
| ೪. | ಶ್ರೀ ಡಿ.ಪಿ. ಮೆಹ್ರ | ಆಜೀವ ಸದಸ್ಯರು | ೦೮.೧೧.೨೦೧೫ |

# ೧೧. ಡಾ. ವಿ.ಕೆ.ಆರ್.ವಿ. ರಾವ್ ಗ್ರಂಥಾಲಯ

ಡಾ. ವಿ.ಕೆ.ಆರ್.ವಿ. ರಾವ್ ಗ್ರಂಥಾಲಯವು ಭಾರತದ ಸಾಮಾಜಿಕ ವಿಜ್ಞಾನಗಳ ಸಂಶೋಧನಾ ಗ್ರಂಥಾಲಯಗಳ ಪೈಕಿ ಶ್ರೇಷ್ಠ ಗ್ರಂಥಾಲಯಗಳಲ್ಲೊಂದಾಗಿದೆ. ಈ ಗ್ರಂಥಾಲಯವನ್ನು ೧೯೭೨ರಲ್ಲಿ ಸ್ಥಾಪಿಸಿದ ನಂತರ ಇದು ಸಂಸ್ಥೆಯ ಒಂದು ಅವಿಭಾಜ್ಯ ಅಂಗವಾಗಿದ್ದು, ಸಂಸ್ಥೆಯ ಅಧ್ಯಾಪಕ ವೃಂದಕ್ಕೆ, ಸಂಶೋಧಕರಿಗೆ, ಪಿಎಚ್‌ಡಿ ಪಂಡಿತರಿಗೆ ಹಾಗೂ ನೀತಿ ನಿರೂಪಕರಿಗೆ, ಆಡಳಿತಗಾರರಿಗೆ, ಸಲಹೆಗಾರರಿಗೆ ಹಾಗೂ ರಾಷ್ಟ್ರದಾದ್ಯಂತ ವಿದ್ಯಾರ್ಥಿಗಳಿಗೆ ದಕ್ಷ ಹಾಗೂ ಸಕಾಲಿಕ ಬೆಂಬಲವನ್ನು ನೀಡುತ್ತಿದೆ. ಗ್ರಂಥಾಲಯವು “ಎಲ್‌ಐಬಿಎಸ್‌ವೈಎಸ್” ಸಾಫ್ಟ್‌ವೇರ್ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಸಂಪೂರ್ಣವಾಗಿ ಸ್ವಯಂಚಾಲಿತವಾಗಿದೆ. ಗ್ರಂಥಾಲಯದ ದತ್ತಾಂಶಾಧಾರಿತ ಮಾಹಿತಿಯು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ದೊರಕುತ್ತದೆ. ಈ ಗ್ರಂಥಾಲಯದ ಗಮನಾರ್ಹ ಸಂಪತ್ತೆಂದರೆ ಸರ್ ಎಂ. ವಿಶ್ವೇಶ್ವರಯ್ಯನವರು ಮತ್ತು ಡಾ. ವಿ.ಕೆ.ಆರ್.ವಿ. ರಾವ್ ಅವರ ಸಂಗ್ರಹಗಳಲ್ಲಿದ್ದ ಮೌಲಿಕ ಗ್ರಂಥಗಳು

## ಗ್ರಂಥಾಲಯದಲ್ಲಿನ ಸಂಗ್ರಹ

ಗ್ರಂಥಾಲಯದಲ್ಲಿನ ಸಂಗ್ರಹವು ೧,೩೪,೬೦೬ಕ್ಕೆ ಏರಿದ್ದು, ಪ್ರಸ್ತುತ ಸಾಲಿನಲ್ಲಿ ೮೧೧ ದಾಖಲೆಗಳು ಸೇರ್ಪಡೆಯಾಗಿವೆ (೩೫೯ ಗ್ರಂಥಗಳು, ೪೨೮ ವರದಿಗಳು ಮತ್ತು ೨೪ ಇತರೆ ದಾಖಲೆಗಳು). ಅಲ್ಲದೆ ಗ್ರಂಥಾಲಯವು ೨೯೩ ಮುದ್ರಿತ ನಿಯತಕಾಲಿಕೆಗಳನ್ನೂ ಮತ್ತು ಪತ್ರಿಕೆಗಳನ್ನೂ ವಂತಿಗೆಯ ಮೂಲಕವೂ ಹಾಗೂ ವಿನಿಮಯದ ಮೂಲಕವೂ ಸ್ವೀಕರಿಸುತ್ತದೆ. ಗ್ರಂಥಾಲಯವು ೧೨ ದಿನ ಪತ್ರಿಕೆಗಳನ್ನೂ ತರಿಸಿಕೊಳ್ಳುತ್ತಿದೆ.

## ಗ್ರಂಥಾಲಯ ಸೇವೆಗಳು

ಗ್ರಂಥಗಳನ್ನು ಎರವಲು ತೆಗೆದುಕೊಳ್ಳುವ ಸೌಲಭ್ಯವನ್ನು ಅಧ್ಯಾಪಕ ವೃಂದಕ್ಕೆ, ಸಂದರ್ಶಕ ಅಧ್ಯಾಪಕ ವೃಂದಕ್ಕೆ, ಆಡಳಿತ ಮಂಡಳಿಯ ಸದಸ್ಯರಿಗೆ, ಆಜೀವ ಸದಸ್ಯರಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಆಡಳಿತ ಸಿಬ್ಬಂದಿಗೆ ಒದಗಿಸಲಾಗಿದೆ. ಆಸಕ್ತಿಯುಳ್ಳ ಸದಸ್ಯರಿಗೆ ಗ್ರಂಥಾಲಯ ಸೇವೆಯನ್ನು ವಿಸ್ತರಿಸುವ ಸಲುವಾಗಿ ಸಾಂಸ್ಥಿಕ ಸದಸ್ಯತ್ವ ಹಾಗೂ ವಿಶೇಷ ಸದಸ್ಯತ್ವಗಳನ್ನೂ ಒದಗಿಸಲಾಗುತ್ತಿದೆ. ಓದುವ ಕೊಠಡಿ ಹಾಗೂ ನಕಲು ಪ್ರತಿ ಸೌಲಭ್ಯಗಳನ್ನು ಸಂದರ್ಶಕ ಸಂಶೋಧನಾ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ.

**ಪರಾಮರ್ಶನ ಸೇವೆ:** ಗ್ರಂಥಾಲಯವು ತನ್ನ ಬಳಕೆದಾರರಿಗೆ ಸಾಮಾನ್ಯ ಪರಾಮರ್ಶನ ಸೇವೆಯ ಜೊತೆಗೆ ವೈಯುಕ್ತಿಕ ಪರಾಮರ್ಶನ ಸೇವೆಯ ಸೌಲಭ್ಯವನ್ನೂ ಒದಗಿಸುತ್ತಿದೆ. ಗ್ರಂಥಾಲಯವು ಸಾಕಷ್ಟು ಪರಾಮರ್ಶನ ಗ್ರಂಥಗಳ ಸಂಗ್ರಹವನ್ನು ಹೊಂದಿದ್ದು, ಸಕಾಲಿಕ ಹಾಗೂ ನಿರ್ದಿಷ್ಟ ಪರಾಮರ್ಶನ ಸೇವೆಯನ್ನು ಒದಗಿಸಲು ಶಕ್ತವಾಗಿದೆ.

**ಪ್ರಸಕ್ತ ಸ್ಥಿತಿ ತಿಳುವಳಿಕೆ ಸೇವೆಗಳು:** ಗ್ರಂಥಾಲಯವು ತನ್ನ ಓದುಗರಿಗೆ ಅನುಕೂಲವಾಗುವ ಸಲುವಾಗಿ ಪ್ರತಿ ತಿಂಗಳೂ ತನ್ನಲ್ಲಿ ಸೇರ್ಪಡೆಯಾಗುವ ಹೊಸ ಗ್ರಂಥಗಳು, ಸದ್ಯದಲ್ಲಿ ತರಿಸುತ್ತಿರುವ ನಿಯತಕಾಲಿಕೆಗಳ ಪಟ್ಟಿ, ಸದ್ಯದಲ್ಲಿ ಸಂಗ್ರಹದಲ್ಲಿರುವ ವಿಷಯಗಳು ಹಾಗೂ ಲೇಖನಗಳ ಮಾಸಿಕ ಪಟ್ಟಿಯನ್ನು ಪ್ರಕಟಿಸುತ್ತಿದೆ.

**ಲೇಖನಗಳ ಪಟ್ಟಿ:** ಗ್ರಂಥಾಲಯವು ತಾನು ಚಂದಾದಾರ ಆಗಿರುವ ನಿಯತಕಾಲಿಕೆಗಳಲ್ಲಿನ ಸುಮಾರು ೭೭,೦೦೦ ಲೇಖನಗಳನ್ನು ಪಟ್ಟಿಮಾಡಿ ಸಂಗ್ರಹಿಸಿಟ್ಟುಕೊಂಡಿದೆ. ಲೇಖನಗಳ ವಿಷಯಗಳು ಹಾಗೂ ಮುಖ್ಯ ಪದಗಳನ್ನು ಸುಲಭವಾಗಿ ಹುಡುಕಲು ಸಾಧ್ಯವಾಗುವಂತಹ ಮೌಲ್ಯವರ್ಧನ ಸೇವೆಯನ್ನೂ ಒದಗಿಸುತ್ತಿದೆ.

**ದಿನಪತ್ರಿಕೆಗಳಲ್ಲಿನ ವಾರ್ತಾ ತುಣುಕುಗಳ ಪಟ್ಟಿ:** ಇದೊಂದು ಮಾಸಿಕ ವಾರ್ತಾ ಸೇವೆಯಾಗಿದ್ದು, ಐಸೆಕ್ ಬಳಕೆದಾರ ಸಮೂಹವು ಬಯಸುವಂತಹ ವಿಷಯಗಳಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟವಾದ ಇತ್ತೀಚಿನ ವಾರ್ತೆಗಳ ಬಗ್ಗೆ ಅರಿವು ಮೂಡಿಸಲು ಮತ್ತು ತಿಳುವಳಿಕೆ ಹೆಚ್ಚಿಸಲು ಪ್ರಯತ್ನಿಸುತ್ತಿದೆ.

**ಗ್ರಂಥಾಲಯಗಳ ನಡುವಿನ ಎರವಲು ಮತ್ತು ದಾಖಲೆ ರವಾನೆ ಸೇವೆಗಳು:** ಐಸೆಕ್‌ನ ಈ ಗ್ರಂಥಾಲಯವು ಬೆಂಗಳೂರಿನ ಉತ್ತಮ ವ್ಯವಸ್ಥಿತ

# ಐಸೆಕ್



ಗ್ರಂಥಾಲಯಗಳಾದ ಭಾರತೀಯ ನಿರ್ವಹಣಾ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ, ಭಾರತ ರಾಷ್ಟ್ರೀಯ ಕಾನೂನು ಶಾಲೆ ಮತ್ತಿತರ ಸಂಸ್ಥೆಗಳ ಗ್ರಂಥಾಲಯಗಳ ಸಹಕಾರದೊಂದಿಗೆ ಬಳಕೆದಾರರಿಗೆ ಗ್ರಂಥಾಲಯಗಳ ನಡುವಿನ ಎರವಲು ಸೇವೆಯನ್ನು ಒದಗಿಸುತ್ತಿದೆ. ಐಸೆಕ್ ಸಂಸ್ಥೆಯು ಸಂಪನ್ಮೂಲಗಳಿಗೆ ವ್ಯಾಪಕ ಸಾಮೀಪ್ಯ ಒದಗಿಸಿಕೊಳ್ಳುವ ದೃಷ್ಟಿಯಿಂದ ಇಎಲ್‌ಎನ್‌ಇಟಿ, ಜೆಸಿಸಿಸಿ@ಯುಜಿಸಿ–ಐಎನ್‌ಎಫ್‌ಒಎನ್‌ಇಟಿಗಳ ಸದಸ್ಯತ್ವನ್ನೂ ಹೊಂದಿದೆ.

## ದತ್ತಾಂಶ ಆಧಾರಗಳು

ಗ್ರಂಥಾಲಯವು ಸಾಮಾಜಿಕ ವಿಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿನ ಅನೇಕ ಮಾಹಿತಿ ಆಧಾರಗಳು ಹಾಗೂ ಇ–ನಿಯತಕಾಲಿಕೆಗಳ ಚಂದಾದಾರತ್ವವನ್ನು ಹೊಂದಿದೆ. ದಕ್ಷತೆಯ ಸೇವೆಯನ್ನು ಒದಗಿಸುವ ದೃಷ್ಟಿಯಿಂದ ಬಳಕೆದಾರರಿಗೆ ವ್ಯಾಪಕ ನೆರವನ್ನು ಒದಗಿಸುತ್ತಿದೆ.

ಗ್ರಂಥಾಲಯದಲ್ಲಿ ಲಭ್ಯವಿರುವ ಮಾಹಿತಿ ಆಧಾರಗಳು ಕೆಳಕಂಡಂತಿವೆ:

೧. **ಇಕಾನ್ ಲಿಟ್**– ಅಮೇರಿಕದ ಅರ್ಥಶಾಸ್ತ್ರ ಸಂಘದ ಇಲೆಕ್ಟ್ರಾನಿಕ್ ಮಾಹಿತಿ ಆಧಾರವಾಗಿದ್ದು, ಅರ್ಥಶಾಸ್ತ್ರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಶ್ವದ ಅಗ್ರಗಣ್ಯ ಪರಾಮರ್ಶನ ಮೂಲವಾಗಿದೆ. ಈ ಮಾಹಿತಿ ಆಧಾರವು ೧೯೬೯ರಿಂದ ಇಲ್ಲಿಯವರೆಗೆ ಒಂದು ದಶಲಕ್ಷಕ್ಕೂ ಹೆಚ್ಚಿನ ದಾಖಲೆಗಳನ್ನು ಹೊಂದಿದೆ. ಇದನ್ನು ತಿಂಗಳಿಗೊಮ್ಮೆ ಹೊಸ ಮಾಹಿತಿಗಳನ್ನು ಸೇರಿಸಿ ನವೀಕರಿಸಲಾಗುತ್ತದೆ. ಇದು ವಿಷಯಾಧಾರಿತ ಸೂಚ್ಯಾಂಕವನ್ನು ಹೊಂದಿದ್ದು, ೧೦೦೦ಕ್ಕೂ ಹೆಚ್ಚಿನ ಅರ್ಥಶಾಸ್ತ್ರೀಯ ಹಾಗೂ ಸಂಬಂಧಪಟ್ಟ ನಿಯತಕಾಲಿಕೆಗಳ ಸಾರಾಂಶವನ್ನು ಹೊಂದಿರುತ್ತದೆ.

೨. **ಐಎಂಎಫ್** ಇ–ಗ್ರಂಥಾಲಯ ಮತ್ತು ಮಾಹಿತಿ – ಈ ಮಾಹಿತಿ ಆಧಾರವು ೧೦,೪೦೦ಕ್ಕೂ ಹೆಚ್ಚಿನ ಪ್ರಕಟಣೆಗಳ ವಿವಿಧ ಡಿಜಿಟಲ್ ನಮೂನೆಗಳ ಸಂಪೂರ್ಣ ಪಟ್ಟಿಯನ್ನು ಒಂದೇ ಕ್ರೋಢೀಕೃತ ಸನ್ನಿವೇಶದಲ್ಲಿ ನೀಡುತ್ತದೆ. ಎಲ್ಲಾ ಪಠ್ಯವನ್ನೂ ಸಂಪೂರ್ಣವಾಗಿ ಪರಿಶೀಲಿಸಬಹುದಾಗಿದ್ದು, ಮಾಹಿತಿಯನ್ನು ಹುಡುಕಲು ಸುಲಭ ಮಾಡಿಕೊಟ್ಟಿದೆ.

೩. **ಇಂಡಿಯ ಸ್ಟ್ಯಾಟ್.ಕಾಮ್** – ಇದು ಭಾರತದ ಸಮಗ್ರ ಮಾಹಿತಿ ಪೋರ್ಟಲ್ ಆಗಿದ್ದು, ಇತ್ತೀಚಿನ ಅಧಿಕೃತ ಹಾಗೂ ಲಭ್ಯ ಸಂಪೂರ್ಣ ಸಾಮಾಜಿಕ–ಆರ್ಥಿಕ ಮಾಹಿತಿಯನ್ನು ಒದಗಿಸುತ್ತದೆ.

೪. **ಇಂಡಿಯ ಟೈಮ್ ಸೀರೀಸ್** – ಇಪಿಡಬ್ಲ್ಯುಆರ್‌ಎಫ್‌ಐಟಿಎಸ್ – ಇದು ನಿರ್ದಿಷ್ಟ ಆನ್‌ಲೈನ್ ಮಾಹಿತಿ ಆಧಾರವಾಗಿದ್ದು, ಕಾಲಶ್ರೇಣಿ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ. ಈ ಕಾಲಶ್ರೇಣಿ ಮಾಹಿತಿಯು ಆರ್ಥಿಕತೆಯ ೧೩ ವಲಯಗಳಲ್ಲಿನ ಸುಮಾರು ೨೫,೦೦೦ ವ್ಯತ್ಯಾಸ ಸಾಧ್ಯ ಅಂಶಗಳನ್ನು ಒಳಗೊಂಡಿದೆ. ಆರ್ಥಿಕತೆಯ ಈ ೧೩ ವಲಯಗಳು ವಿಶ್ಲೇಷಣಾತ್ಮಕ ಮತ್ತು ಮೂಲಭೂತ ಸಂಶೋಧನೆಗಾಗಿ ಬಳಕೆದಾರ ಸ್ನೇಹಿಯಾಗಿ ವರ್ತಿಸುವ ಹಾಗೂ ಸುಲಭಸಾಧ್ಯವಾದ ವಾಸ್ತವ ಹಾಗೂ ಆರ್ಥಿಕ ವಲಯಗಳ ವ್ಯಾಪಕ ಶ್ರೇಣಿಯ ಸ್ಥೂಲ ಆರ್ಥಿಕತೆಗೆ ಸಂಬಂಧಿಸಿರುತ್ತವೆ.

೫. **ಜೆ–ಗೇಟ್ – ಇದು ಜಾಗತಿಕ** ಇ–ನಿಯತಕಾಲಿಕೆ ಸಾಹಿತ್ಯಕ್ಕೆ ಹೆಬ್ಬಾಗಿಲಾಗಿದೆ. ಇನ್‌ಫರ್ಮ್ಯಾಟಿಕ್ಸ್ ಇಂಡಿಯ ಲಿಮಿಟೆಡ್ ಸಂಸ್ಥೆಯಿಂದ ೨೦೦೧ರಲ್ಲಿ ಪ್ರಾರಂಭಿಸಲ್ಪಟ್ಟ ಜೆ–ಗೇಟ್ ಮಾಹಿತಿ ಆಧಾರವು ೧೨,೩೫೬ ಪ್ರಕಟಣೆದಾರರು ಒದಗಿಸುವ ದಶಲಕ್ಷಕ್ಕೂ ಹೆಚ್ಚು ನಿಯತಕಾಲಿಕೆ ಲೇಖನಗಳನ್ನು ಓದುವ ಅವಕಾಶವನ್ನು ಕಲ್ಪಿಸುತ್ತದೆ. ಸದ್ಯದಲ್ಲಿ ಇದು ನಿಯತಕಾಲಿಕೆ ಲೇಖನಗಳ ಅಗಾಧ ಮಾಹಿತಿಯನ್ನು ಒದಗಿಸುತ್ತಲಿದ್ದು, ೪೧,೧೨೫ ಇ–ನಿಯತಕಾಲಿಕೆಗಳ ಸೂಚ್ಯಂಕಗಳನ್ನು ಹೊಂದಿದೆ ಹಾಗೂ ಪ್ರಕಟಣೆದಾರರ ಸೈಟ್‌ಗಳಲ್ಲಿ ಪೂರ್ಣಪಠ್ಯವನ್ನು ಓದಲು ಸಾಧ್ಯವಾಗುವಂತಹ ಲಿಂಕ್‌ಗಳನ್ನೂ ತೋರಿಸುತ್ತದೆ.

೬. **ಜೆಸ್ಟೋರ್ (ಜೆಎಸ್‌ಟಿಓಆರ್)** ಈ ಮಾಹಿತಿ ಆಧಾರವು ಆನ್‌ಲೈನ್‌ನಲ್ಲಿ ಸಮಾಜ ವಿಜ್ಞಾನಗಳ ವಿದ್ವತ್ಪೂರ್ಣ ಸಾಹಿತ್ಯವನ್ನು ಒದಗಿಸುತ್ತದೆ. ಜೆಸ್ಟೋರ್‌ನಲ್ಲಿನ ಸಂಗ್ರಹಗಳು ಪ್ರತಿ ನಿಯತಕಾಲಿಕೆಯಲ್ಲಿನ ಪ್ರಾಚೀನ ದಾಖಲೆಗಳನ್ನೂ ಸಹ ಒಳಗೊಂಡಿದೆ. ಈ ದಾಖಲೆಗಳು ನಿಯತಕಾಲಿಕೆಯು ಪ್ರಾರಂಭವಾದಾಗಿನ ಮೊದಲ ಸಂಚಿಕೆ ಹಾಗೂ ಸಂಪುಟದಿಂದ ಹಿಡಿದು ಕಳೆದ ೩ರಿಂದ ೫ ವರ್ಷಗಳವರೆಗೆ ಸಿಗುತ್ತವೆ.

೭. **ಪೊಲಿಟಿಕಲ್ ಸೈನ್ಸ್ ಕಂಪ್ಲೀಟ್ (ಪಿಎಸ್‌ಸಿ)** – ಈ ಮಾಹಿತಿ ಆಧಾರವು ೫೨೦ ನಿಯತಕಾಲಿಕೆಗಳ ಪೂರ್ಣ ಪಠ್ಯವನ್ನೂ ಮತ್ತು ೨೯೦೦ಕ್ಕೂ ಹೆಚ್ಚಿನ ಲೇಖನಗಳ ಶೀರ್ಷಿಕೆಯ (ಅಗ್ರಶ್ರೇಣಿಯ ವಿದ್ವತ್ಪೂರ್ಣ ನಿಯತಕಾಲಿಕೆಗಳನ್ನೂ ಒಳಗೊಂಡಂತೆ) ಸೂಚ್ಯಾಂಕಗಳನ್ನೂ (ಇವುಗಳಲ್ಲಿ ಬಹಳಷ್ಟು ಶೀರ್ಷಿಕೆಗಳು ವೈಶಿಷ್ಟ್ಯ ಪೂರ್ಣವಾಗಿವೆ) ಒದಗಿಸುತ್ತದೆ. ಪಿಎಸ್‌ಸಿಯು ವಿಶ್ವವ್ಯಾಪಿ ದೃಷ್ಟಿಕೋನವನ್ನು ಹೊಂದಿದ್ದು, ಸಮಕಾಲೀನ

ರಾಜಕೀಯ ವಿದ್ಯಮಾನಗಳ ಜಾಗತಿಕ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. ಈ ಮಾಹಿತಿ ಆಧಾರವು ೩೪೦ಕ್ಕೂ ಹೆಚ್ಚು ಪೂರ್ಣ ಪಠ್ಯದ ಪರಾಮರ್ಶನ ಗ್ರಂಥಗಳು ಹಾಗೂ ನೀಳ ಲೇಖನಗಳ ಸಂಗ್ರಹವನ್ನು ಹೊಂದಿದ್ದು, ಅಂತರ‍್ರಾಷ್ಟ್ರೀಯ ರಾಜಕೀಯ ವಿಜ್ಞಾನ ಸಂಘದ ಸಮಾವೇಶ ಲೇಖನಗಳನ್ನೂ ಒಳಗೊಂಡಂತೆ ಪೂರ್ಣ ಪಠ್ಯವುಳ್ಳ ೩೬,೦೦೦ಕ್ಕೂ ಹೆಚ್ಚಿನ ಸಮಾವೇಶ ಲೇಖನಗಳ ಮಾಹಿತಿಯನ್ನೂ ಒದಗಿಸುತ್ತದೆ.

೮. **ಪ್ರೊವೆಸ್** – ಈ ಮಾಹಿತಿ ಆಧಾರವು ದೊಡ್ಡ ಹಾಗೂ ಮಧ್ಯಮಗಾತ್ರದ ವ್ಯಾಪಾರ ಸಂಸ್ಥೆಗಳ ಮಾಹಿತಿಯನ್ನೊದಗಿಸುತ್ತಿದ್ದು, “ಭಾರತೀಯ ಆರ್ಥಿಕ ಉಸ್ತುವಾರಿ ಕೇಂದ್ರ (ಸಿಎಂಐಇ)” ಸಂಸ್ಥೆಯದ್ದಾಗಿದೆ. ಇದು ೨೦,೦೦೦ಕ್ಕೂ ಹೆಚ್ಚಿನ ವ್ಯಾಪಾರ ಸಂಸ್ಥೆಗಳ ವಿವರವಾದ ಮಾಹಿತಿಯನ್ನು ಒದಗಿಸುತ್ತದೆ. ಪ್ರೊವೆಸ್ ಮಾಹಿತಿ ಆಧಾರವು ಪ್ರತಿ ಸಂಸ್ಥೆಯ ವಿವರವಾದ ಆರ್ಥಿಕ ಮಾಹಿತಿಯನ್ನು ನೀಡುತ್ತದೆ. ಜೊತೆಗೆ ಯಾವುದೇ ಕಾಲಾವಧಿಯ ಉತ್ಪಾದನೆ, ಮಾರಾಟ, ಕಚ್ಚಾ ವಸ್ತುಗಳ ಬಳಕೆ, ಇಂಧನದ ಬಳಕೆ ಇತ್ಯಾದಿಗಳ ಮಾಹಿತಿಯನ್ನೂ ಒದಗಿಸುತ್ತದೆ. ಈ ಮಾಹಿತಿ ಆಧಾರವು ಗ್ರಂಥಾಲಯದಲ್ಲಿ ಏಕ ಬಳಕೆದಾರ ಅನುಮತಿ ಪತ್ರ ಹೊಂದಿರುವ ರೂಪದಲ್ಲಿ ಲಭ್ಯವಿದ್ದು, ಪರಾಮರ್ಶನ ವಿಭಾಗದಲ್ಲಿ ಬಳಸುವ ಅವಕಾಶವನ್ನು ಹೊಂದಿದೆ.

## ಡಿಜಿಟೈಸೇಷನ್ ಕಾರ್ಯಕ್ರಮ

ಬಳಕೆದಾರರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡಲು ಹಾಗೂ ಹುಡುಕುವಂತೆ ಮಾಡಲು ಡಿಜಿಟಲ್ ಗ್ರಂಥಾಲಯದ ಸಾಫ್ಟ್‌ವೇರ್ ಮತ್ತು ಸಂಪನ್ಮೂಲಗಳನ್ನು ಪ್ರಸ್ತುತ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಯಿತು. ಡಿಜಿಟಲ್ ಗ್ರಂಥಾಲಯವು ಪ್ರಸ್ತುತದಲ್ಲಿ ೧೦,೦೦೦ಕ್ಕೂ ಹೆಚ್ಚಿನ ದಾಖಲೆಗಳನ್ನು ತನ್ನ ಸಂಗ್ರಹದಲ್ಲಿ ಹೊಂದಿದೆ. ಧಾರವಾಡದ ಕೃಷಿ ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಭಾರತೀಯ ಮಿಥಿಕ್ ಸಂಘ ಹಾಗೂ ಪುಣೆಯ ಗೋಖಲೆ ರಾಜಕೀಯ ಹಾಗೂ ಅರ್ಥಶಾಸ್ತ್ರ ಸಂಸ್ಥೆ – ಇವುಗಳಲ್ಲಿ ಲಭ್ಯವಾದ ಅಪೂರ್ವ ಗ್ರಂಥಗಳು ಹಾಗೂ ಅಮೂಲ್ಯ ದಾಖಲೆಗಳ ಡಿಜಿಟೈಸೇಷನ್ ಪೂರ್ಣಗೊಂಡಿದೆ. ಬೆಂಗಳೂರಿನ ಗೋಖಲೆ ಸಾರ್ವಜನಿಕ ವ್ಯವಹಾರಗಳ ಸಂಸ್ಥೆ ಹಾಗೂ ರಾಜ್ಯ ಕೇಂದ್ರೀಯ ಗ್ರಂಥಾಲಯಗಳೊಡನೆ ಅವುಗಳಲ್ಲಿನ ಅಪೂರ್ವ ಹಾಗೂ ಅಮೂಲ್ಯ ಸಂಗ್ರಹಗಳು ಅದರಲ್ಲೂ ವಿಶೇಷವಾಗಿ ಸಾಮಾಜಿಕ ವಿಜ್ಞಾನಗಳ ಸಂಗ್ರಹಗಳನ್ನು ಪಾಲುದಾರಿಕೆ ಆಧಾರದ ಮೇಲೆ ಡಿಜಿಟೈಸೇಷನ್ ಮಾಡುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ.

## ಐಸೆಕ್



# ೧೨. ದತ್ತಾಂಶ ಬ್ಯಾಂಕ್

ಸರಳ ಭಾಷೆಯಲ್ಲಿ ಹೇಳುವುದಾದರೆ ದತ್ತಾಂಶ ಬ್ಯಾಂಕ್ ಎಂದರೆ ಮಾಹಿತಿ ಆಧಾರವೇ ಆಗಿದೆ. ಇದು ಮೂರು ಪ್ರಮುಖ ಚಟುವಟಿಕೆಗಳನ್ನು ಹೊಂದಿದೆ – ಮಾಹಿತಿ ಸಂಗ್ರಹಣೆ, ಅದರ ವ್ಯವಸ್ಥಿತ ಜೋಡಣೆ ಹಾಗೂ ವಿಷಯಾಧಾರಿತ ವರ್ಗೀಕರಣ. ವಿಷಯ ಸೂಚಿಯು ಗ್ರಂಥ ವಿವರಣ ಪಟ್ಟಿಯಾಗಿರಬಹುದು, ಪೂರ್ಣ ಪಠ್ಯವಾಗಿರಬಹುದು ಅಥವಾ ಸಾಂಖ್ಯಿಕವಾಗಿರಬಹುದು. ಯಾವುದೇ ದತ್ತಾಂಶ ಬ್ಯಾಂಕಿನ ಮುಖ್ಯ ಉದ್ದೇಶವು ಮಾಹಿತಿಯು ಸುಲಭವಾಗಿ ಲಭ್ಯವಾಗುವಂತೆ, ನಿರ್ವಹಿಸುವಂತೆ ಹಾಗೂ ನವೀಕೃತವಾಗುವಂತೆ ವ್ಯವಸ್ಥೆಗೊಳಿಸುವುದೇ ಆಗಿದೆ.

ಐಸೆಕ್ ಸಂಸ್ಥೆಯು ಪ್ರತಿ ವರ್ಷವೂ ಗಣನೀಯ ಪ್ರಮಾಣದ ಪ್ರಕಟಣೆಗಳನ್ನು ಯೋಜನೆಗಳು, ಲೇಖನಗಳು, ಸಂಶೋಧನಾ ಲೇಖನಗಳು, ನೀಳ ಲೇಖನಗಳು, ಕಾರ್ಯಾಧಾರಿತ ಲೇಖನಗಳ ರೂಪದಲ್ಲಿ ಹೊರತರುತ್ತಿದೆ. ಈ ಚಟುವಟಿಕೆಗಳ ಪ್ರಕ್ರಿಯೆಯಲ್ಲಿ ದೊಡ್ಡ ಪ್ರಮಾಣದ ಸಾಂಖ್ಯಿಕ ಮಾಹಿತಿಯು ಲಭ್ಯವಾಗುತ್ತಿದೆ. ಇವು ಪ್ರಾಥಮಿಕ ಮಾಹಿತಿ (ವೈಯಕ್ತಿಕ, ಕೌಟುಂಬಿಕ ಸಮೀಕ್ಷೆಗಳು ಇತ್ಯಾದಿ) ಹಾಗೂ ಉಪ ಮೂಲಗಳ (ಸರ್ಕಾರಿ ಹಾಗೂ ಸರ್ಕಾರೇತರ ಮಾಹಿತಿ ಆಧಾರಗಳು) ರೂಪದಲ್ಲಿರುತ್ತವೆ. ಆದರೆ ಈ ಸಂಗ್ರಹಿತ ಮಾಹಿತಿಯಲ್ಲಿ ಅತಿ ಕಡಿಮೆ ಪ್ರಮಾಣದ ಮಾಹಿತಿಯನ್ನು ಮಾತ್ರ ಅಧ್ಯಯನಗಳ ವಿಶ್ಲೇಷಣೆಗೆ ಬಳಸಲಾಗುತ್ತಿದೆ. ಜೊತೆಗೆ ಇದೇ ಸಮಯದಲ್ಲಿ ಬಹಳಷ್ಟು ಸಂಶೋಧನಾಕಾರರು ತಮ್ಮ ಸಂಶೋಧನೆಗಳಿಗೆ ಅಥವಾ ಯೋಜನಾ ಕಾರ್ಯಗಳಿಗೆ ಅಗತ್ಯವಾದ ಮಾಹಿತಿ ಮೂಲಗಳನ್ನು ಹುಡುಕುವುದಕ್ಕೆ ಕಷ್ಟ ಪಡುತ್ತಿರುವುದೂ ನಮ್ಮ ಅರಿವಿಗೆ ಬಂತು. ಇತರೆ ಕೆಲವು ಪ್ರಕರಣಗಳಲ್ಲಿ ಸಂಶೋಧನಾಕಾರರು ತಮ್ಮ ಹಿಂದಿನ ಸಂಶೋಧನೆಗಳಿಗಾಗಿ ಹಾಗೂ ಯೋಜನಾ ಕಾರ್ಯಗಳಿಗಾಗಿ ಸಂಗ್ರಹಿಸಿದ ಮಾಹಿತಿಯನ್ನು ಸೂಕ್ತ ಸಂಗ್ರಹಣೆ, ವ್ಯವಸ್ಥಿತಗೊಳಿಸುವಿಕೆ ಹಾಗೂ ನವೀಕರಿಸುವ ಬಗ್ಗೆ ಗಮನವೇ ಹರಿಸುವುದಿಲ್ಲ ಎಂಬ ಅಂಶವು ನಮ್ಮ ಅರಿವಿಗೆ ಬಂದಿತು. ಇದರಿಂದಾಗಿ ಅವರುಗಳು ತಾವು ಈಗಾಗಲೇ ಸಂಗ್ರಹಿಸಿರುವ ಮಾಹಿತಿಯನ್ನೇ ಮತ್ತೆ ಹುಡುಕುವ ಹಾಗೂ ವ್ಯವಸ್ಥಿತಗೊಳಿಸಿಕೊಳ್ಳುವ ಪ್ರಕ್ರಿಯೆಗಾಗಿಯೇ ಗಣನೀಯ ವೇಳೆಯನ್ನು ಕಳೆಯುತ್ತಾರೆಂಬುದೂ ಸಹ ತಿಳಿದಿದೆ.

ಇದೇ ರೀತಿ ಐಸೆಕ್‌ನಲ್ಲಿಯ ಸಂಶೋಧನೆಗಳು ನಿಯಮಿತವಾಗಿ ಪ್ರಗತಿಯನ್ನು ಅಂದಾಜು ಮಾಡುವ ಅಧ್ಯಯನಗಳು, ಅಭಿವೃದ್ಧಿ ಯೋಜನೆಗಳ ಪರಿಣಾಮದ ಮೌಲ್ಯಮಾಪನ, ಅಭಿವೃದ್ಧಿ ಪ್ರಕ್ರಿಯೆಯ ಸ್ಥಿತಿಗತಿಗಳು ಅಥವಾ ಕಾಲಾನುಕಾಲಗಳ ಅಂತರದಲ್ಲಿ ಅವುಗಳ ಆಯಾಮಗಳು ಅಥವಾ ವ್ಯಾಪಕ ವಿಸ್ತಾರದಲ್ಲಿ ಅವುಗಳ ಆಯಾಮಗಳನ್ನು ಕಂಡು ಹಿಡಿಯುತ್ತಿರುತ್ತವೆ. ಯೋಜನೆಗಳ ಅಧ್ಯಯನದ ವೇಳೆ ಮನೆ ಮನೆಗಳಲ್ಲಿನ ಅಗಾಧ ಪ್ರಮಾಣದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಆದರೆ ಸಾಂಖ್ಯಿಕ ಸಾಧನಗಳನ್ನುಪಯೋಗಿಸಿದ ಮೇಲೆ ಅಂತಿಮವಾಗಿ ಈ ಬಗ್ಗೆ ಅತಿ ಕಡಿಮೆ ಮಾಹಿತಿಯು ಯೋಜನಾ ವರದಿಗಳಲ್ಲಿ ಕಾಣಬರುತ್ತವೆ. ಇದಕ್ಕೂ ಹೆಚ್ಚಾಗಿ ಯೋಜನೆಗಳನ್ನು ಅಂತಿಮಗೊಳಿಸಿ ವರದಿಗಳನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಸಲ್ಲಿಸಿದ ನಂತರ ಇದೇ ವಿಷಯಗಳಲ್ಲಿ ಅಥವಾ ಇದಕ್ಕೆ ಸಂಬಂಧಿಸಿದ ಹೊಸ ವಿಷಯಗಳಲ್ಲಿ ಮತ್ತಷ್ಟು ಅಭಿವೃದ್ಧಿಗಾಗಿ ತೆಗೆದುಕೊಳ್ಳುವ ಅಧ್ಯಯನಗಳಿಗಾಗಿ ಈ ಮಾಹಿತಿಯನ್ನು ರಕ್ಷಿಸುವ ಅಥವಾ ಬಳಸುವ ಬಗ್ಗೆ ಏನನ್ನೂ ಮಾಡುತ್ತಿಲ್ಲ. ಈ ರೀತಿ ಮಾಹಿತಿ ನಷ್ಟವನ್ನು ತಪ್ಪಿಸಲು ಮತ್ತು ಹುಡುಕುವ ವೇಳೆಯನ್ನು ಉಳಿಸಲು ಐಸೆಕ್ ಸಂಸ್ಥೆಯು ಇಂತಹ ಮಾಹಿತಿಯನ್ನು ನಿರ್ವಹಿಸುವ ಸಲುವಾಗಿ ದತ್ತಾಂಶ ಬ್ಯಾಂಕನ್ನು ತೆರೆದಿದೆ.

## ದೂರದೃಷ್ಟಿ

- ಐಸೆಕ್ ಸಂಸ್ಥೆಯ ಸಂಶೋಧಕರಿಗೆ ನೆರವಾಗುವ ಕೇಂದ್ರವಾಗಿ ದತ್ತಾಂಶ ಬ್ಯಾಂಕ್ ಸ್ಥಾಪನೆಯಾಗುತ್ತಿದೆ.
- ಸಾಧ್ಯವಿದ್ದೆಡೆಗಳಲ್ಲೆಲ್ಲಾ ಐಸೆಕ್ ಸಂಸ್ಥೆಯಿಂದ ನಡೆಸಲಾದ ಸಂಶೋಧನೆಗಳ ಮೂಲಕ ವಿವಿಧ ಮೂಲಗಳಿಂದ ಸಂಗ್ರಹಿಸಿದ ಉಪಯುಕ್ತ ಮಾಹಿತಿಯನ್ನು ಒಟ್ಟುಗೂಡಿಸಿ ತಾಳೆ ನೋಡುತ್ತದೆ.
- ಐಸೆಕ್ ಸಂಸ್ಥೆಯ ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳು ಸಂಪೂರ್ಣಗೊಳಿಸಿದ ಯೋಜನೆಗಳಲ್ಲಿನ ಪ್ರಾಥಮಿಕ ಕ್ಷೇತ್ರ ಸಮೀಕ್ಷಾ ಮಾಹಿತಿಯ ಮುದ್ರಿತ ಹಾಗೂ ಸಾಫ್ಟ್ ಪ್ರತಿಗಳನ್ನು ನಿಯಮಿತವಾಗಿ ಸಂಗ್ರಹಿಸುತ್ತದೆ. ಈ ಮಾಹಿತಿಯನ್ನು ಇದನ್ನು ಬಳಸಲು ಆಸಕ್ತರಾದವರಿಗೆ ಆಯಾ ಯೋಜನೆಗಳ ನಿರ್ದೇಶಕರ ಅಥವಾ ಐಸೆಕ್ ಸಂಸ್ಥೆಯ ನಿರ್ದೇಶಕರ ಅನುಮತಿ ಪಡೆದು ನೀಡಲಾಗುತ್ತದೆ.
- ಐಸೆಕ್ ಸಂಸ್ಥೆಯ ವಿವಿಧ ವಿಭಾಗಗಳಿಂದ ಗೌಣ ಮಾಹಿತಿಯ ಸಾಫ್ಟ್ ಪ್ರತಿಗಳನ್ನೂ ನಿಯಮಿತವಾಗಿ ಸಂಗ್ರಹಿಸಿ, ಅಗತ್ಯವಿದ್ದಲ್ಲಿ ನವೀಕರಿಸುತ್ತದೆ.

- ಲಭ್ಯವಿರುವ ಮಾಹಿತಿಯನ್ನು ಅಧ್ಯಾಪಕ ವೃಂದ ಹಾಗೂ ವಿದ್ಯಾರ್ಥಿಗಳೊಡನೆ ಹಂಚಿಕೊಳ್ಳುತ್ತದೆ.
- ಈ ದತ್ತಾಂಶ ಬ್ಯಾಂಕು ಸಾಂಖ್ಯಿಕ ಮಾಹಿತಿ ಮತ್ತು ಅವುಗಳ ಮೂಲಗಳ ಲಭ್ಯತೆಯನ್ನೂ ಸಹ ತಿಳಿಸುವುದಲ್ಲದೆ, ಮಾಹಿತಿ ಲಭ್ಯವಿದ್ದ ಪಕ್ಷದಲ್ಲಿ ತನ್ನ ಸದಸ್ಯರಿಗೆ ಇ–ಅಂಚೆಯ ಮೂಲಕ ರವಾನಿಸುತ್ತದೆ.

ದತ್ತಾಂಶಬ್ಯಾಂಕು ತನ್ನಲ್ಲಿ ಲಭ್ಯವಿರುವ ಮಾಹಿತಿಯನ್ನು ಐಸೆಕ್‌ನಲ್ಲಿ ಕೆಲಸ ಮಾಡುತ್ತಿರುವ ಸಂಶೋಧಕರಿಗೆ, ಐಸೆಕ್‌ನೊಡನೆ ಜಂಟಿಯಾಗಿ ಸಂಶೋಧನೆ ಮಾಡುತ್ತಿರುವವರಿಗೆ, ಆಡಳಿತ ಮಂಡಳಿಯ ಸದಸ್ಯರಿಗೆ ಹಾಗೂ ಸಂಸ್ಥೆಯ ಸ್ಥಾಪಕ ಸದಸ್ಯರಿಗೆ ಒದಗಿಸುತ್ತಿದೆ. ಇವರುಗಳನ್ನು ಬಿಟ್ಟು ಉಳಿದ ಸಂಶೋಧಕರು ಈ ಮಾಹಿತಿಯನ್ನು ಪಡೆಯಲು ಆಸಕ್ತಿ ಹೊಂದಿದ್ದರೆ, ಚಾಲ್ತಿಯಲ್ಲಿರುವ ಕೃತಿ ಸ್ವಾಮ್ಯ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು, ಐಸೆಕ್ ಸಂಸ್ಥೆಯ ಕುಲಸಚಿವರಿಂದ ಅನುಮತಿ ಪಡೆಯಲು ತಿಳಿಸಲಾಗುತ್ತದೆ.  ಸಂಸ್ಥೆಯು ಮಾಹಿತಿಯನ್ನು ಒದಗಿಸುವುದಕ್ಕೆ ಯಾವುದೇ ಶುಲ್ಕವನ್ನು ಪಡೆಯುವುದಿಲ್ಲ. ಆದರೆ ನಾವು ನಮ್ಮ ಈ ಸೌಲಭ್ಯವನ್ನು ಸಾಫ್ಟ್ ಪ್ರತಿಯನ್ನು ಒದಗಿಸುವುದಕ್ಕೆ ಮಾತ್ರ ಮಿತಿಗೊಳಿಸಿಕೊಂಡಿದ್ದೇವೆ. ದತ್ತಾಂಶ ಬ್ಯಾಂಕನ್ನು ಬಳಕೆದಾರರಿಗೆ ಮಾಹಿತಿ ಸುಲಭವಾಗಿ ಲಭ್ಯವಾಗುವ ದೃಷ್ಟಿಯಿಂದ ಮಾತ್ರ ಪ್ರಾರಂಭಿಸಲಾಗಿದ್ದು, ಸಂಶೋಧನೆಗೆ ನೆರವು ನೀಡುವ ಕೇಂದ್ರವಾಗಿ ಅಲ್ಲ. ಇದನ್ನು ಬಳಕೆದಾರರು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಈ ರೀತಿಯ ನೆರವು ನೀಡಲು ದತ್ತಾಂಶ ಬ್ಯಾಂಕಿನ ಸಿಬ್ಬಂದಿಯು ಬಹಳ ಶ್ರಮ ಪಡಬೇಕಾಗುತ್ತದೆ. ಮಾಹಿತಿಯನ್ನು ಪಡೆದಿದ್ದಕ್ಕಾಗಿ ಬಳಕೆದಾರರ ಕೃತಜ್ಞತೆಯನ್ನು ನಾವು ಬಯಸುತ್ತೇವೆ.

## ಮುದ್ರಿತ ಹಾಳೆಯ ರೂಪದಲ್ಲಿನ ಪ್ರಾಥಮಿಕ ಮಾಹಿತಿ (ಯೋಜನೆಗಾಗಿ ಸಂಗ್ರಹಿಸಿದ ಮಾಹಿತಿಯನ್ನೊಳಗೊಂಡ ಅನುಸೂಚಿ ಅಥವಾ ಪ್ರಶ್ನಾವಳಿಗಳು

ಐಸೆಕ್‌ನ ವಿವಿಧ ವಿಭಾಗಗಳಲ್ಲಿನ ಕೆಳಕಂಡ ಮುದ್ರಿತ ಮಾಹಿತಿಯು ದತ್ತಾಂಶ ಬ್ಯಾಂಕ್‌ನಲ್ಲಿ ಲಭ್ಯವಿದ್ದು, ಅವುಗಳನ್ನು ನಿಯಮಿತ ರೀತಿಯಲ್ಲಿ ಜೋಡಿಸಿ ಇಡಲಾಗಿದೆ.

### ಎಡಿಆರ್‌ಟಿಸಿ

- ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ಒರಟುಧಾನ್ಯ ಬೆಳೆಗಳನ್ನು ಬೆಳೆಯಲು ಇರುವ ಅವಕಾಶಗಳು:  ಕರ್ನಾಟಕದಲ್ಲಿನ ಒಂದು ಅನ್ವೇಷಣಾ ಅಧ್ಯಯನ.
- ಕರ್ನಾಟಕದಲ್ಲಿನ ಎಣ್ಣೆಕಾಳು ಉತ್ಪಾದನಾ ಕಾರ್ಯಕ್ರಮದ ಮೌಲ್ಯಮಾಪನ.
- ರಾಷ್ಟ್ರದಲ್ಲಿನ ಖಾದ್ಯತೈಲ ವಲಯದ ಮೇಲೆ ಉದಾರೀಕೃತ ಆಮದು ಹಾಗೂ ಕಡಿಮೆ ಸುಂಕದಿಂದ ಉಂಟಾಗಬಹುದಾದ ಪರಿಣಾಮಗಳು.
- ಕರ್ನಾಟಕ ರಾಜ್ಯದಲ್ಲಿನ ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆಯ ಮೌಲ್ಯಮಾಪನ.
- ಬೆಳೆ ಕಟಾವು ಪ್ರಯೋಗಗಳ ಫಲಿತಾಂಶದ ಒಂದು ವಿಶ್ಲೇಷಣೆ.
- ಕವಾಡ್ ಯೋಜನೆಯ ಕೊಡುಗೆ ಹಾಗೂ ಪರಿಣಾಮ ಉಸ್ತುವಾರಿ ಅಧ್ಯಯನ.
- ಕರ್ನಾಟಕದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿನ ಮೇವು ಮತ್ತು ಮೇವು ಅಭಿವೃದ್ಧಿ ಯೋಜನೆಯ ಮೌಲ್ಯಮಾಪನ.
- ಬೃಹತ್ ಕಾರ್ಯನೀತಿಗಳಿಗಾಗಿ ಸೂಕ್ಷ್ಮ ಉಪಕ್ರಮಗಳು (ಅಯೋವಾ/ಯುಎಎಸ್/ಐಸೆಕ್ ಅಧ್ಯಯನ).
- ಕರ್ನೂಲ್ – ಕಡಪ ನಾಲಾ ಆಧುನೀಕರಣ ಯೋಜನೆಯಲ್ಲಿನ ನೀರು ಬಳಕೆದಾರರ ಸಂಘಗಳ ಮೌಲ್ಯ ನಿರ್ಧರಣೆ (ಜೆಬಿಐಸಿ ಯೋಜನೆ).
- ಗ್ರಾಮೀಣ ಜೈವಿಕ ಸಂಪನ್ಮೂಲ ಸಂಕೀರ್ಣ ಯೋಜನೆ.
- ಕರ್ನಾಟಕದಲ್ಲಿ ಒಪ್ಪಂದ ಕೃಷಿ:  ವರವೇ ಅಥವಾ ಶಾಪವೇ?
- ಕರ್ನಾಟಕದಲ್ಲಿ ಸಾವಯವ ಕೃಷಿಯ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ.
- ಕರ್ನಾಟಕದಲ್ಲಿ ಐಆರ್‌ಡಿಪಿ ಫಲಾನುಭವಿಗಳ ಸಹಗಾಮಿ ಮೌಲ್ಯಮಾಪನ – ಮನೆ ಮನೆಗಳಿಂದ ಸಂಗ್ರಹಿಸಿದ ಮಾಹಿತಿ.
- ಕರ್ನಾಟಕದ ಆಯ್ದ ಪ್ರದೇಶಗಳಲ್ಲಿ ಟೊಮೆಟೊ ಬೆಳೆಯಲ್ಲಾಗುವ ಕಟಾವಿನ ನಂತರದ ನಷ್ಟದ ಮೌಲ್ಯಮಾಪನ.
- ಜಲಾನಯನ ಅಭಿವೃದ್ಧಿ ಕಾರ್ಯಕ್ರಮದ ಸುಸ್ಥಿರತೆ:  ಕರ್ನಾಟಕದಲ್ಲಿನ ಕೃಷಿ ಕುಟುಂಬಗಳ ಅಧ್ಯಯನ.
- ಉದ್ಯೋಗ ಖಾತ್ರಿಯೋಜನೆಯ (ಇಎಎಸ್) ಮೌಲ್ಯಮಾಪನ:  ಕರ್ನಾಟಕದ ಎರಡು ಜಿಲ್ಲೆಗಳಲ್ಲಿ ಪ್ರಕರಣವಾರು ಅಧ್ಯಯನ).

# ಐಸೆಕ್



**ಸಿಇಇಎನ್‌ಆರ್**

- ಕರ್ನಾಟಕದಲ್ಲಿನ ಸಮುದಾಯ ಆಧಾರಿತ ಕೆರೆ ಸುಧಾರಣೆ ಮತ್ತು ನಿರ್ವಹಣಾ ಯೋಜನೆಯ ತಂತ್ರ ಕುಶಲತೆಯಿಂದೊಡಗೂಡಿದ ಸಾಮಾಜಿಕ ಮತ್ತು ಪರಿಸರೀಯ ಮೌಲ್ಯಮಾಪನ.

**ಸಿಇಎಸ್‌ಪಿ**

- ಭಾರತ ವಲಸೆ ಪ್ರವೃತ್ತಿಯಲ್ಲಿನ ಬದಲಾವಣೆ ಮತ್ತು ಹೊಸ ಆರ್ಥಿಕ ಸಾಂದರ್ಭಿಕತೆ.

**ಸಿಡಿಡಿ**

- ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸ್ಥಳೀಯ ಸಂಸ್ಥೆಗಳ ಪಾತ್ರ.
- ಕರ್ನಾಟಕದಲ್ಲಿನ ಮನೆ ಬೆಳಕು ಮತ್ತು ಉದ್ಯೋಗಿನಿ ಯೋಜನೆಗಳ ಮೌಲ್ಯಮಾಪನ.
- ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿನ ರಿಪೇರಿ ಮಹಿಳಾ ಸಹಾಯಕರು.
- ಐಎಂಎಸ್ ಯೋಜನೆ – ಕರ್ನಾಟಕದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿನ ಆದಾಯ ಮತ್ತು ಖರ್ಚಿಗೆ ಸಂಬಂಧಿಸಿದ ಮಾಹಿತಿ (೧೯೯೯–೨೦೦೦ ರಿಂದ ೨೦೦೨–೦೩; ೨೭ ಜಿಲ್ಲೆಗಳು).

**ಸಿಎಸ್‌ಎಸ್‌ಸಿಡಿ**

- ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯ ಮೌಲ್ಯಮಾಪನ (೨೦೦೭).
- ಕರ್ನಾಟಕದ ಕನಿಯನ್ ಕನ್ಯನ್ಗಳು – ಒಂದು ಜನಾಂಗೀಯ ಅಧ್ಯಯನ.
- ಶಿಕ್ಷಣಕ್ಕಾಗಿ ಜಿಲ್ಲಾ ಮಾಹಿತಿ ಪದ್ಧತಿ – ವಿಶೇಷ ಡಿಸಿಎಫ್ – ಶೇ.೫ರಷ್ಟು ಗಣತಿಯೋತ್ತರ ಸಮೀಕ್ಷೆಗಾಗಿ.
- ದೇವದಾಸಿಯರ ಪುನರ್ವಸತಿ ಅಧ್ಯಯನದ ಮೌಲ್ಯಮಾಪನ.

**ಸಿಎಚ್‌ಆರ್‌ಡಿ**

- ಎಂಎಚ್‌ಆರ್‌ಡಿ – ಸರ್ವ ಶಿಕ್ಷಾ  ಅಭಿಯಾನ ಶೈಕ್ಷಣಿಕ ಯೋಜನೆ
- ಶಿಕ್ಷಕರ ಮಹಾವಿದ್ಯಾಲಯದ ಸಮೀಕ್ಷೆ: ವಿದ್ಯಾರ್ಥಿ ಶಿಕ್ಷಕರ ವ್ಯಕ್ತಿ ವಿಶೇಷತೆಗಳು.
- ಕರ್ನಾಟಕದಲ್ಲಿ ಶಾಲಾ ಶಿಕ್ಷಣದ ಜನಸಂಖ್ಯಾ ಅಧ್ಯಯನ: ಗುಲ್ಬರ್ಗ, ಯಾದ್ಗೀರ್, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಹಾಗೂ ಉಡುಪಿ ಜಿಲ್ಲೆಗಳು (ಶಾಲಾ ವರದಿ ಕಾರ್ಡುಗಳ ಯೋಜನೆ).
- ಕರ್ನಾಟಕದ ಯೋಜನೆಗಳಲ್ಲಿ ಎಸ್‌ಎಸ್‌ಎ/ಎಂಎಚ್‌ಆರ್‌ಡಿ/ಭಾರತ ಸರ್ಕಾರಗಳ ಉಸ್ತುವಾರಿ (ಎಸ್‌ಎಸ್‌ಎ ಮತ್ತು ಎಂಡಿಎಂ) I, II, III ಮತ್ತು IV ನೇ ಹಂತಗಳು.
- ಅಕ್ಷಯ ಪಾತ್ರ ಪ್ರತಿಷ್ಠಾನ – ಶಾಲಾ ಊಟದ ಕಾರ್ಯಕ್ರಮ.
- ಈಶಾನ್ಯ ಪ್ರದೇಶದಿಂದ ವಲಸೆ:  ಈಶಾನ್ಯ ಪ್ರದೇಶದಿಂದ ವಲಸೆ ಬಂದು ಬೆಂಗಳೂರು ಮತ್ತು ದೆಹಲಿಗಳಲ್ಲಿ ನೆಲೆಸಿರುವ ವಿದ್ಯಾವಂತ ಯುವಕರ ಅಧ್ಯಯನ.
- ವ್ಯವಸ್ಥಾ ನಿರ್ವಹಣೆ ಅಭಿವೃದ್ಧಿ ಕಾರ್ಯಕ್ರಮ (ಎಂಡಿಪಿ ಯೋಜನೆ)

**ಸಿಪಿಐಜಿಡಿ**

- ಕರ್ನಾಟಕದ ಹಾವೇರಿ ಜಿಲ್ಲೆಯಲ್ಲಿ ಬಾಲ ಕಾರ್ಮಿಕರ ಸಮೀಕ್ಷೆ

# ಐಸೆಕ್

## ಆನ್‌ಲೈನ್/ಗಣಕ ಯಂತ್ರಗಳಲ್ಲಿ ಲಭ್ಯವಿರುವ ದತ್ತಾಂಶ

**(ಸಂಸ್ಥೆಯ ಆಂತರಿಕ ಉಪಯೋಗಕ್ಕೆ ಮಾತ್ರ)**

- ಡಬ್ಲ್ಯುಡಬ್ಲ್ಯುಡಬ್ಲ್ಯು. ಐಎನ್‌ಡಿಐಐಎಸ್‌ಟಿಎಟಿ.ಸಿಓಎಂ

### ಸಿಡಿ–ರೋಮ್‌ಗಳಲ್ಲಿನ ದತ್ತಾಂಶ:

- **ರಾಷ್ಟ್ರೀಯ ಮಾದರಿ ಸಮೀಕ್ಷೆ (ಎನ್‌ಎಸ್‌ಎಸ್)**
  ಎನ್‌ಎಸ್‌ಎಸ್ ದತ್ತಾಂಶ ಸಿಡಿಗಳು ಲಭ್ಯವಿದೆ. ಆದರೆ ಐಸೆಕ್ ಸಂಶೋಧಕರು ಸಿದ್ಧಪಡಿಸುವ ಕೋಷ್ಟಕಗಳಿಗೆ/ಪಟ್ಟಿಗಳಿಗೆ ಮಾತ್ರ ಒದಗಿಸಬಹುದಾಗಿದೆ.

- **ಜನಗಣತಿಯ ಸಿದ್ಧ ದತ್ತಾಂಶ**
  ಜನಗಣತಿ ದತ್ತಾಂಶದ ಸಿಡಿಗಳು ಲಭ್ಯವಿದ್ದು, ಆಂತರಿಕ ಉಪಯೋಗಕ್ಕೆ ಮಾತ್ರ ಲಭ್ಯವಿದೆ.

- **ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ಸಿದ್ಧ ದತ್ತಾಂಶ**
  ಎನ್‌ಎಫ್‌ಎಚ್‌ಎಸ್ ದತ್ತಾಂಶದ ಸಿಡಿಗಳು ಲಭ್ಯವಿದ್ದು, ಆಂತರಿಕ ಉಪಯೋಗಕ್ಕೆ ಮಾತ್ರ ಲಭ್ಯವಿದೆ.

- **ಸಾಮಾಜಿಕ–ಆರ್ಥಿಕ ಸಿದ್ಧದತ್ತಾಂಶ**
  ಸಾಮಾಜಿಕ–ಆರ್ಥಿಕ ದತ್ತಾಂಶದ ಸಿಡಿಗಳು ಲಭ್ಯವಿದ್ದು, ಆಂತರಿಕ ಉಪಯೋಗಕ್ಕೆ ಮಾತ್ರ ಲಭ್ಯವಿದೆ.

- **ಡಿಜಿಟಲ್ ರೂಪದಲ್ಲಿ ಲಭ್ಯವಿರುವ ದತ್ತಾಂಶ**

- ಕೊಚ್ಚಿನ್ ಬಂದರಿನಲ್ಲಿ ೨೦೦೬ರಿಂದ ಇಲ್ಲಿಯವರೆಗೆ ಆದ ಆಮದು ಮತ್ತು ರಫ್ತಿನ ದೈನಂದಿನ ಪಟ್ಟಿಯ ದತ್ತಾಂಶವು ಲಭ್ಯವಿದೆ.

### ಭಾರತದ ವಿದೇಶಿ ವ್ಯವಹಾರದ ಅಂಕಿ ಅಂಶಗಳು

– ಭಾರತದ ವಿದೇಶಿ ವ್ಯವಹಾರದ ಮಾಸಿಕ ಅಂಕಿ ಅಂಶಗಳು – ಪ್ರಧಾನ ಪದಾರ್ಥಗಳು ಮತ್ತು ರಾಷ್ಟ್ರಗಳು – ೨೦೦೩ರಿಂದ ೨೦೦೮ರವರೆಗೆ.

## ಅರ್ಥಶಾಸ್ತ್ರ ಸಾಹಿತ್ಯದ ನಿಯತಕಾಲಿಕೆ

### Microfiche ರೂಪದಲ್ಲಿ ಲಭ್ಯವಿರುವ ದತ್ತಾಂಶ:

– ಭಾರತದ ೧೮೭೧ರಿಂದ ೧೯೩೧ರ ವರೆಗಿನ ಜನಗಣತಿಯ ದತ್ತಾಂಶವು Microfiche ರೂಪದಲ್ಲಿ ಲಭ್ಯವಿದೆ

### Microfiche ರೂಪದಲ್ಲಿ ಇತರ ದಾಖಲೆಗಳು

– ಇಂಡಿಯಾ ಗೆಜೆಟಿಯರ್‌ಗಳು

### ಪ್ರಮುಖ ದತ್ತಾಂಶ ಆಧರಿತ ಜಾಲತಾಣಗಳಿಗೆ ಸಂಪರ್ಕ

– ಐಸೆಕ್ ಜಾಲತಾಣದ home page – ಕರ್ನಾಟಕ ಅಭಿವೃದ್ಧಿ
– ಹೆಚ್ಚಿನ ಮಾಹಿತಿಗಾಗಿ ನಮ್ಮ ಜಾಲತಾಣದ ದತ್ತಾಂಶ ಬ್ಯಾಂಕಿಗೆ ಭೇಟಿ ಕೊಡಿ.

### ದತ್ತಾಂಶ ಬ್ಯಾಂಕಿನ ಪ್ರಗತಿ ವರದಿ: ೨೦೧೫–೧೬

ದತ್ತಾಂಶ ಬ್ಯಾಂಕು ಅಖಿಲ ಭಾರತ ಮಟ್ಟದ ಮತ್ತು ರಾಜ್ಯ ಮಟ್ಟದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯತ್ಯಾಸ ಸಾಧ್ಯ ಅಂಶಗಳನ್ನು ಗಣನೀಯ ಪ್ರಮಾಣದಲ್ಲಿ ಸಂಗ್ರಹಿಸಿದೆ. ಇವುಗಳನ್ನು ಬಳಕೆದಾರ ಸ್ನೇಹಿ ರೂಪದಲ್ಲಿ ಸಂಗ್ರಹಿಸಿಟ್ಟಿದೆ. ಸಮಾಜ ವಿಜ್ಞಾನ ಸಂಶೋಧನೆಗೆ ಕೊಡುಗೆ ನೀಡುತ್ತಿರುವ ಸಂಶೋಧನಾ ಸಂಸ್ಥೆಗಳು ಹಾಗೂ ಸರ್ಕಾರಿ ಇಲಾಖೆಗಳ ಜಾಲತಾಣಗಳಲ್ಲಿನ ಸಾಫ್ಟ್ ಕಾಪಿ ವರದಿಗಳ ರೂಪದಲ್ಲಿ ಈ ಸಂಗ್ರಹವು ಇದೆ. ಪ್ರಸ್ತುತ ಸಾಲಿನಲ್ಲಿ ದತ್ತಾಂಶ ಬ್ಯಾಂಕು ಕಾರ್ಯಗತಗೊಳಿಸಿರುವ ಚಟುವಟಿಕೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:

# ಐಸೆಕ್



- ಪ್ರಸ್ತುತದಲ್ಲಿ ದತ್ತಾಂಶ ಬ್ಯಾಂಕಿನ ವಶದಲ್ಲಿ ೩೩ ಯೋಜನಾ ಪ್ರಶ್ನಾವಳಿಗಳು ಲಭ್ಯವಿದೆ.
- ದತ್ತಾಂಶ ಬ್ಯಾಂಕು ಪ್ರಸ್ತುತ ಸಾಲಿನಲ್ಲಿ ತನ್ನ ಸಂಗ್ರಹಾಲಯಕ್ಕೆ ಕೆಲವು ಮುಖ್ಯ ದತ್ತಾಂಶ ಆಧಾರಗಳನ್ನು ಸೇರಿಸಿಕೊಂಡಿದೆ. ಅವೆಂದರೆ –
  - ಶಿಕ್ಷಣದಲ್ಲಿ ಭಾಗವಹಿಸುವಿಕೆ (ಹಾಗೂ ಅದರ ಖರ್ಚುಗಳು) [ಎನ್‌ಎಸ್‌ಎಸ್ ೪೨ನೇ ಸುತ್ತು (೧೯೮೬–೮೭), ೫೨ನೇ ಸುತ್ತು (೧೯೯೫–೯೬) ಹಾಗೂ ೬೪ನೇ ಸುತ್ತು (೨೦೦೭–೦೮)].
  - ಬಳಕೆದಾರರ ಖರ್ಚಿನ ಸಮೀಕ್ಷೆ [ಎನ್‌ಎಸ್‌ಎಸ್ ೬೮ನೇ ಸುತ್ತು (೨೦೧೧–೧೨)].
  - ಉದ್ಯೋಗ ಮತ್ತು ನಿರುದ್ಯೋಗ ಸಮೀಕ್ಷೆ [ಎನ್‌ಎಸ್‌ಎಸ್ ೬೮ನೇ ಸುತ್ತು (೨೦೧೧–೧೨)].
  - ಕೊಳಗೇರಿಗಳ ವಿವರಗಳು [ಎನ್‌ಎಸ್‌ಎಸ್ ೬೯ನೇ ಸುತ್ತು (೨೦೧೨)]
  - ಕುಡಿಯುವ ನೀರು, ನೈರ್ಮಲ್ಯ, ಶುಚಿತ್ವ ಹಾಗೂ ವಸತಿ ಸ್ಥಿತಿಗತಿ [ಎನ್‌ಎಸ್‌ಎಸ್ ೬೯ನೇ ಸುತ್ತು (೨೦೧೨)].
  - ಅಖಿಲ ಭಾರತ ಸಾಲಗಾರಿಕೆ ಮತ್ತು ಬಂಡವಾಳ ಹೂಡಿಕೆ ಸಮೀಕ್ಷೆ [ಎನ್‌ಎಸ್‌ಎಸ್ ೭೦ನೇ ಸಮೀಕ್ಷೆ (೨೦೧೩)].
  - ಕೃಷಿ ಕುಟುಂಬಗಳ ಪರಿಸ್ಥಿತಿ ಅಂದಾಜು [ಎನ್‌ಎಸ್‌ಎಸ್ ೭೦ನೇ ಸುತ್ತು (೨೦೧೩)].
  - ಹೊಂದಿರುವ ಜಮೀನು ಮತ್ತು ಜಾನುವಾರು [ಎನ್‌ಎಸ್‌ಎಸ್ ೭೦ನೇ ಸುತ್ತು (೨೦೧೩)]
  - ಭಾರತದಲ್ಲಿ ಸಾಮಾಜಿಕ ಬಳಕೆ: ಆರೋಗ್ಯ ಮತ್ತು ಶಿಕ್ಷಣ [ಎನ್‌ಎಸ್‌ಎಸ್ ೭೧ನೇ ಸುತ್ತು (೨೦೧೪)]
  - ಎನ್‌ಎಸ್‌ಎಸ್ ೬೮ರಿಂದ ೭೧ನೇ ಸುತ್ತಿನ ವರೆಗಿನ ವರದಿಗಳು (ಸಾಫ್ಟ್ ಪ್ರತಿಗಳು)
  - ಎಕ್ಸೆಲ್ ಹಾಳೆಗಳಲ್ಲಿ ದತ್ತಾಂಶ ಸಂಗ್ರಹಣೆ
- ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನಗಳು (ಜೊತೆಗೆ ಅವುಗಳ ಉಪ ವಲಯಗಳು) – ಎಲ್ಲಾ ರಾಜ್ಯಗಳದ್ದು – ೧೯೮೦–೮೧ ರಿಂದ ೨೦೧೩–೧೪ರವರೆಗಿನ – ಈಗಿನ ಹಾಗೂ ಸ್ಥಿರ ಬೆಲೆಗಳಲ್ಲಿ.
- ೧೯೫೦–೫೧ರಿಂದ ಎಲ್ಲಾ ರಾಜ್ಯಗಳ ಭೂ ಬಳಕೆ ಮಾದರಿ
  - ಇತ್ತೀಚಿನ ಅಂಕಿ ಅಂಶಗಳ ವರದಿಗಳು – ಅಂಕಿ ಅಂಶಗಳ ಘೋಷ್ವಾರೆ, ರಾಜ್ಯ ಆರ್ಥಿಕ ಸಮೀಕ್ಷೆಗಳು, ಕಣ್ನೋಟದಲ್ಲಿ ಅಂಕಿ ಅಂಶಗಳು, ಕೃಷಿ ಗಣತಿ/ಪರಿಕರ ಸಮೀಕ್ಷೆ ವರದಿಗಳು; ಸಾಗುವಳಿ ವೆಚ್ಚದ ವರದಿಗಳು, ನೀರಿನ ದತ್ತಾಂಶ ಪುಸ್ತಕ ಇತ್ಯಾದಿ.
  - ಕಾರ್ಯಭಾರ ತಂಡಗಳ ಇತ್ತೀಚಿನ ಪ್ರಕಟಿತ ವರದಿಗಳು/ಸಮಿತಿಗಳ ವರದಿಗಳು/ಕಾರ್ಯತಂಡಗಳ ವರದಿಗಳು/ವಿವಿಧ ಸರ್ಕಾರಗಳು ರಚಿಸಿರುವ ಉಪತಂಡಗಳ ವರದಿಗಳು.
- ದತ್ತಾಂಶ ಬ್ಯಾಂಕು "ಕರ್ನಾಟಕ ಮತ್ತು ಭಾರತ"ಗಳಿಗಾಗಿ ಅಂಕಿ ಅಂಶಗಳ ಸಂಗ್ರಹವನ್ನು ಸಿದ್ಧಪಡಿಸಿದ್ದು, ಇದರಲ್ಲಿ ಪ್ರಮುಖ ಸಾಮಾಜಿಕ–ಆರ್ಥಿಕ ದತ್ತಾಂಶ ಮೂಲಗಳು/ಮುಖ್ಯ ಕಾರ್ಯ ನೀತಿ ದಾಖಲೆಗಳು/ವರದಿಗಳ ಜಾಲ ಸಂಪರ್ಕಗಳಿವೆ. ಇವುಗಳನ್ನು ಐಸೆಕ್‌ನ ಜಾಲ ಬಲೆಯಲ್ಲಿ ತುಂಬಿಸಲಾಗಿದ್ದು, ಬಳಕೆದಾರರು ಇವುಗಳನ್ನು ದತ್ತಾಂಶ ಬ್ಯಾಂಕಿನ ಜಾಲ ಪುಟದಲ್ಲಿ ಅಥವಾ ವಾಸ್ತವ್ಯ ಪುಟವನ್ನು ತೆರೆದು ಪಡೆಯಬಹುದಾಗಿದೆ.
- ದತ್ತಾಂಶ ಬ್ಯಾಂಕು ತನ್ನ ಬಳಕೆದಾರರಿಗೆ ಮಿಂಚಂಚೆಯ ಮೂಲಕ ಇತ್ತೀಚಿನ ಹಾಗೂ ಸಂಗ್ರಹಿತ ಮಾಹಿತಿಯನ್ನು (ಅಂಕಿ ಅಂಶಗಳು) ಒದಗಿಸುವುದನ್ನು ಮುಂದುವರೆಸಿದೆ.
- ಬಳಕೆದಾರರ ಪಟ್ಟಿಯು ಈ ರೀತಿ ಇದೆ: ಆಡಳಿತ ಮಂಡಳಿಯ ಸದಸ್ಯರು, ಐಸೆಕ್‌ನ ಅಧ್ಯಾಪಕ ಸಿಬ್ಬಂದಿ, ಗೌರವ/ಸಂದರ್ಶಕ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಹಾಗೂ ಕರ್ನಾಟಕ ಸರ್ಕಾರದ ಅಧಿಕಾರಿಗಳು (ಪ್ರಧಾನ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ಆಯುಕ್ತರು, ಇತ್ಯಾದಿ). ಇವೆಲ್ಲವುಗಳ ಜೊತೆಗೆ ತನ್ನ ಬಳಕೆದಾರರ ಸಂಶೋಧನಾ ಕಾರ್ಯಗಳಿಗಾಗಿ ಅಗತ್ಯವಾದ ದತ್ತಾಂಶ ಮೂಲಗಳನ್ನು ಹುಡುಕಿಕೊಳ್ಳುವುದಕ್ಕಾಗಿ ಅಗತ್ಯವಾದ ವೇದಿಕೆ ಹಾಗೂ ಮಾರ್ಗದರ್ಶನಗಳನ್ನೂ ಒದಗಿಸುವುದರ ಮೂಲಕ ಅವರೊಡನೆ ಸಂವಹನ ಸಂಪರ್ಕವನ್ನೂ ಬೆಳೆಸಿಕೊಳ್ಳುತ್ತಿದೆ. ಈ ಪ್ರಕ್ರಿಯೆಗೆ ಬಳಕೆದಾರರಿಂದ ಸಿಗುತ್ತಿರುವ ಸ್ಪಂದನದಿಂದ ದತ್ತಾಂಶ ಬ್ಯಾಂಕು ಬಹಳಷ್ಟು ತೃಪ್ತಿಪಟ್ಟಿದೆ.
- ದತ್ತಾಂಶ ಬ್ಯಾಂಕು ಪ್ರಮುಖ ಸಮಾಜ ವಿಜ್ಞಾನ ಸಂಸ್ಥೆಗಳು ಹಾಗೂ ವಿಶ್ವವಿದ್ಯಾನಿಲಯಗಳ ಅಧ್ಯಾಪಕ ವೃಂದದ ಈ–ಮೇಲ್ ವಿಳಾಸಗಳನ್ನೂ ಸಂಗ್ರಹಿಸಿದೆ. ಇದನ್ನು ಐಸೆಕ್ ನಿಯತಕಾಲಿಕೆಯ ಪ್ರಸರಣಾಭಿವೃದ್ಧಿಗೂ ಹಾಗೂ ಸಂಶೋಧನೆಗಳ ಉತ್ತಮ ಪ್ರಸರಣೆಗಾಗಿಯೂ ಬಳಸಿಕೊಳ್ಳಬಹುದಾಗಿದೆ.

# ೧೩. ಕೃತಜ್ಞತೆಗಳು

## ಉಪಕಾರ ಸ್ಮರಣೆಯ ನಮ್ಮ ವಂದನೆಗಳು ಕೆಳಕಂಡವರಿಗೆ ಸಲ್ಲುತ್ತದೆ.

- ಅನುದಾನ ನೀಡಿಕೆಗಾಗಿ ಕರ್ನಾಟಕ ಸರ್ಕಾರಕ್ಕೆ ಹಾಗೂ ಭಾರತೀಯ ಸಮಾಜ ವಿಜ್ಞಾನಗಳ ಸಂಶೋಧನಾ ಪರಿಷತ್ತಿಗೆ (ಐಸಿಎಸ್ಎಸ್ಆರ್).
- ಭಾರತ ಸರ್ಕಾರದ ಕೃಷಿ ಸಚಿವಾಲಯಕ್ಕೆ – ಕೃಷಿ ಅಭಿವೃದ್ಧಿ ಹಾಗೂ ಗ್ರಾಮೀಣ ಸ್ಥಿತ್ಯಂತರ ಕೇಂದ್ರ (ಎಡಿಆರ್‌ಟಿಸಿ) ವನ್ನು ಬೆಂಬಲಿಸಿದ್ದಕ್ಕಾಗಿ.
- ಭಾರತ ಸರ್ಕಾರದ ಆರ್ಥಿಕ ಸಚಿವಾಲಯಕ್ಕೆ
- ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಕ್ಕೆ – ಜನಸಂಖ್ಯಾ ಸಂಶೋಧನಾ ಕೇಂದ್ರ (ಪಿಆರ್‌ಸಿ) ವನ್ನು ಬೆಂಬಲಿಸಿದ್ದಕ್ಕಾಗಿ.
- ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾಗೆ – ಆರ್‌ಬಿಐ ದತ್ತಿ ಘಟಕವನ್ನು ಬೆಂಬಲಿಸಿದ್ದಕ್ಕಾಗಿ.
- ಸರ್ ರತನ್ ಟಾಟಾ ನ್ಯಾಸ ನಿಧಿಗೆ – ಎಸ್‌ಆರ್‌ಟಿ ಮುಂದೂಡಿದ ದತ್ತಿ ನಿಧಿಯ ಸ್ಥಾಪನೆಗಾಗಿ.
- ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ ಹಾಗೂ ಉಸ್ಮಾನಿಯಾ ವಿಶ್ವವಿದ್ಯಾಲಯಗಳಿಗೆ – ಪಿಎಚ್‌ಡಿ ಕಾರ್ಯಕ್ರಮಕ್ಕೆ ಅವು ನೀಡುತ್ತಿರುವ ಉತ್ತಮ ಸಹಕಾರಕ್ಕೆ.
- ಸಂಶೋಧನಾ ಯೋಜನೆಗಳ ಪುರಸ್ಕರ್ತರಿಗೆ: ಫೋರ್ಡ್ ಪ್ರತಿಷ್ಠಾನ, ವಿಶ್ವಬ್ಯಾಂಕು, ಎಡಿಬಿ, ಐಎಲ್‌ಓ, ಐಎಫ್‌ಪಿಆರ್‌ಐ, ಯುಎನ್‌ಎಫ್‌ಪಿಎ, ಎನ್‌ಐಆರ್‌ಡಿ, ಯೋಜನಾ ಆಯೋಗ, ಭಾರತ ಸರ್ಕಾರ, ಕಾರ್ನೆಲ್ ವಿಶ್ವವಿದ್ಯಾಲಯ, ನಬಾರ್ಡ್, ಇಸ್ರೋ, ಅಯೋವಾ ರಾಜ್ಯ ವಿಶ್ವವಿದ್ಯಾಲಯ, ಜಿಟಿಜಡ್ ಹಾಗೂ ಕೈಗಾರಿಕಾ ಸಚಿವಾಲಯ.
- ತರಬೇತಿ ಪಠ್ಯಕ್ರಮಗಳ ಪುರಸ್ಕರ್ತರಿಗೆ
- ನಮ್ಮ ಸ್ಥಾಪಕರಿಗೆ/ಆಜೀವ ಸದಸ್ಯರಿಗೆ ಹಾಗೂ ಐಸೆಕ್ ಸಂಘದ ಅಧ್ಯಕ್ಷರಿಗೆ.

*******



# ಹಣಕಾಸಿನ ಪಟ್ಟಿಗಳು

# 2015-16

# ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ
## ಡಾ. ವಿ.ಕೆ.ಆರ್.ವಿ. ರಾವ್ ರಸ್ತೆ, ನಾಗರಬಾವಿ, ಬೆಂಗಳೂರು–೫೬೦ ೦೭೨
## ವಾರ್ಷಿಕ ವರದಿ ೨೦೧೫–೧೬: ಒಂದುಕಣ್ಣೋಟ

| ವಾರ್ಷಿಕ ವರದಿ ೨೦೧೪–೧೫ ಅಧ್ಯಯನ ಕೇಂದ್ರ ಮತ್ತು ಅಧ್ಯಾಪಕ ವೃಂದದ ಕಾರ್ಯಕ್ಷಮತೆ | ಪೂರ್ಣ– ಗೊಳಿಸಿದ ಯೋಜನೆ ಗಳು | ಅಂತಿಮ ಪರಾಮರ್ಶೆ ಯಲ್ಲಿರುವ ವರದಿ ಗಳು ಮತ್ತು ಚಾಲ್ತಿ–ಯೋಜನೆಗಳು | ಎಸ್/ಸಿ/ಟಿಪಿ ಮತ್ತು ಆರ್‌ಸಿ ವ್ಯವಸ್ಥಿತ ಸಂಯೋಜಿತ | ಪ್ರಕಟಿಸಿದ/ ಸಂಪಾದಿಸಿದ ಗ್ರಂಥಗಳು | ನೀಳ ಲೇಖನಗಳು ಕಾರ್ಯನಿರತ ಸಂಶೋಧನಾ ಲೇಖನಗಳು | ನಿಯಮ ಕಾಲಿಕೆಗಳು/ ಸಂಪಾದಿತ ಗ್ರಂಥಗಳಲ್ಲಿ ಪ್ರಕಟಿಸಿದ ಲೇಖನಗಳು | ನೀಡಿದ ವಿಚಾರ ಸಂಕಿರಣ ಗಳು | ವಿಚಾರ ಸಂಕಿಣರ/ ಸಮಾವೇಶ ಕಾರ್ಯಾಗಾರ ಗಳಲ್ಲಿ ಮಂಡಿಸಿದ ಲೇಖನಗಳು | ವಿಚಾರ ಸಂಕಿರಣ ಗಳಲ್ಲಿ ಭಾಗವಹಿಸು ವಿಕೆ ಸಿ/ಡಿ/ ಆರ್ ಆಗಿ | ವಿ.ಸಂ./ ಕಾ/ಸ ಭಾಗವಹಿ ಸುವಿಕೆ | ಪ್ರಧಾನ ಅಧ್ಯಕ್ಷ ಭಾಷಣಗಳು | ಉಪನ್ಯಾಸಗಳು ಪ್ರವಚನಗಳು/ ಮಾಧ್ಯಮಗಳು /ದಿನ ಪತ್ರಿಕೆ ಗಳು | ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಸದಸ್ಯತ್ವ | ಶಿಷ್ಯ ವೃತ್ತಿ/ ಪ್ರಶಸ್ತಿಗಳು |
|---|---|---|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ |
| **ಎಡಿಆರ್‌ಟಿಸಿ** | | | | | | | | | | | | | | |
| ಪರಮೋದ್‌ಕುಮಾರ್ | ೨(ಎವಿಮ್) | ೬*** (ಎವಿಮ್+ಇಕೆ)+ ಆರ್‌ಕೆಬಿ+ಎಮ್‌ಆರ್ | – | ೨ | – | ೬ | – | ೯ | ೨ | – | ೨ | – | ೧ | – |
| ಐ ಮಾರುತಿ (ಐಎಮ್) | ೧ | ೨ | – | – | ೧ | ೨ | – | ೧ | – | – | – | – | – | – |
| ಏಳುಮಲೈ ಕಣ್ಣನ್ (ಇಕೆ) | ೩** (ಆರ್‌ಕೆಬಿ) | ೪**** *ಪಿಕೆ+ಎವಿಮ್ + ಆರ್‌ಕೆಬಿ+ಪಿಜಿಸಿ) | ೨** (ಪಿಜಿಸಿ+ ಎವಿಮ್) | ೧* (ಪಿಜಿಸಿ) | ೧ | ೧ | – | ೩ | ೧ | – | – | – | – | ೧ |
| ರಾಮಪ್ಪ ಕೆ.ಬಿ. (ಆರ್‌ಕೆಬಿ) | ೨** (ಇಕೆ) | ೫***** (ಪಿಕೆ+ಎವಿಎಮ್+ ಇಕೆ) | – | – | – | ೪ | – | ೧ | – | ೧ | – | ೨ | – | – |
| ಕೋಮೋಲ್ ಸಿಂಘ (ಕೆಎಸ್) | – | – | – | – | – | ೧ | – | – | – | – | – | – | – | – |
| ಎ.ವಿ. ಮಂಜುನಾಥ್ (ಎವಿಎಮ್) | ೧* (ಪಿಕೆ) | ೧೧******** (ಪಿಕೆ+ಇಕೆ) +ಆರ್‌ಕೆಬಿ+ ಪಿಜಿಸಿ) | ೪*** (ಪಿಜಿಸಿ) | – | – | ೭ | – | ೬ | – | ೨ | – | ೨ | – | – |
| | ೬ | ೧೬ | ೨ | ೩ | ೨ | ೨೧ | ೦ | ೨೦ | ೩ | ೩ | ೨ | ೪ | ೧ | ೧ |
| **ಸಿಡಿಡಿ** | | | | | | | | | | | | | | |
| ಡಿ ರಾಜಶೇಖರ್ (ಡಿಆರ್) | – | ೫* (ಎಮ್‌ಡಿಬಿ) | ೧* (ಎಮ್‌ಡಿಬಿ) | – | ೧ | ೧ | – | ೩ | – | – | – | ೫ | ೩ | – |
| ಎಂ. ದೇವೇಂದ್ರ ಬಾಬು (ಎಂಡಿಬಿ) | ೧ | ೨* (ಡಿಆರ್) | ೧ (ಡಿಆರ್) | – | – | ೧ | – | ೫ | ೨ | – | ೧ | ೯ | ೧ | – |
| | ೧ | ೬ | ೧ | ೦ | ೧ | ೨ | ೦ | ೮ | ೨ | ೦ | ೧ | ೧೪ | ೪ | ೦ |
| **ಸಿಇಇಎನ್‌ಆರ್** | | | | | | | | | | | | | | |
| ಕೆ.ವಿ.ರಾಜು (ಕೆವಿಆರ್) | ೧* (ಎಸ್‌ಎನ್) | – | – | ೧* (ಎಮ್‌ಎಸ್ +ಎಸ್‌ಎನ್) | ೩* (ಎಮ್‌ಎಸ್ +ಎಸ್‌ಎನ್) | – | – | – | – | – | – | – | – | – |
| ಸುನಿಲ್ ನೌಟಿಯಾಲ್ (ಎಸ್‌ಎನ್) | ೨** (ಎಮ್‌ಎಸ್ +ಕೆವಿಆರ್) | ೨ | ೫ | ೨* (ಕೆವಿಆರ್+ ಎಮ್‌ಎಸ್) | ೩** (ಕೆವಿಆರ್+ ಎಮ್‌ಎಸ್) | ೫ | – | ೭ | ೧ | ೩ | ೧ | ೪ | ೩ | ೩ |
| ಎಂ.ಬಾಲಸುಬ್ರಮಣಿ ಯನ್ (ಎಂಬಿ) | – | ೨* (ಎಸ್‌ಮ್+ ಕೆಎಸ್‌ಜೆ+ ಬಿಪಿವಿ) | – | – | – | ೧ | – | ೪ | – | – | – | ೪ | ೨ | – |
| | ೧ | ೩ | ೫ | ೨ | ೩ | ೬ | ೦ | ೧೧ | ೧ | ೩ | ೧ | ೮ | ೫ | ೩ |





ಮುಂದುವರೆದಿದೆ

# ಐಸೆಕ್

| ವಾರ್ಷಿಕ ವರದಿ ೨೦೧೪–೧೫ ಅಧ್ಯಯನ ಕೇಂದ್ರ ಮತ್ತು ಅಧ್ಯಾಪಕ ವೃಂದದ ಕಾರ್ಯಕ್ಷಮತೆ | ಪೂರ್ಣ–ಗೊಳಿಸಿದ ಯೋಜನೆಗಳು | ಅಂತಿಮ ಪರಾಮರ್ಶೆಯಲ್ಲಿರುವ ವರದಿಗಳು ಮತ್ತು ಚಾಲ್ತಿ–ಯೋಜನೆಗಳು | ಎಸ್/ಸಿ/ಟಿಪಿ ಮತ್ತು ಆರ್‌ಸಿ ವ್ಯವಸ್ಥಿತ ಸಂಯೋಜಿತ | ಪ್ರಕಟಿಸಿದ/ ಸಂಪಾದಿಸಿದ ಗ್ರಂಥಗಳು | ನೀಳ ಲೇಖನಗಳು ಕಾರ್ಯನಿರತ ಸಂಶೋಧನಾ ಲೇಖನಗಳು | ನಿಯಮ ಕಾಲಿಕೆಗಳು/ ಸಂಪಾದಿತ ಗ್ರಂಥಗಳಲ್ಲಿ ಪ್ರಕಟಿಸಿದ ಲೇಖನಗಳು | ನೀಡಿದ ವಿಚಾರ ಸಂಕಿರಣಗಳು | ವಿಚಾರ ಸಂಕಿರಣ/ ಸಮಾವೇಶ ಕಾರ್ಯಾಗಾರಗಳಲ್ಲಿ ಮಂಡಿಸಿದ ಲೇಖನಗಳು | ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಿಕೆ ಸಿ/ಡಿ/ಆರ್ ಆಗಿ | ವಿ.ಸಂ./ ಕಾ/ಸ ಭಾಗವಹಿಸುವಿಕೆ | ಪ್ರಧಾನ ಅಧ್ಯಕ್ಷ ಭಾಷಣಗಳು | ಉಪನ್ಯಾಸಗಳು ಪ್ರವಚನಗಳು/ ಮಾಧ್ಯಮಗಳು /ದಿನ ಪತ್ರಿಕೆಗಳು | ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಸದಸ್ಯತ್ವ | ಶಿಷ್ಯ ವೃತ್ತಿ/ ಪ್ರಶಸ್ತಿಗಳು |
|---|---|---|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ |
| **ಸಿಇಎಸ್‌ಪಿ** | | | | | | | | | | | | | | |
| ಎಂ.ಆರ್. ನಾರಾಯಣ (ಎಂ ಆರ್‌ಎನ್) | – | ೧ | – | – | – | ೩ | ೩ | – | ೩ | – | – | – | – | – |
| ಮೀನಾಕ್ಷಿ ರಾಜೀವ್ (ಎಮ್‌ಆರ್) | ೧* (ಬಿಪಿವಿ) | ೫*** (ಬಿಪಿವಿ+ಪಿಕೆ) | ೩* (ಎಸ್‌ಎಮ್+ ಬಿಪಿವಿ) | – | ೬* (ಬಿಪಿವಿ+ ವಿಎಸ್) | ೭ | ೫ | ೭ | ೪ | ೨ | – | – | – | – |
| ಎಸ್. ಮಾದೇಶ್ವರನ್ (ಎಸ್‌ಎಮ್) | – | ೪**** (ಬಿಪಿವಿ+ಕೆಜಿ+ ಕೆಎಸ್‌ಜೆ+ ಎಮ್‌ಬಿ) | ೧* (ಬಿಪಿವಿ) | – | – | ೧ | – | ೨ | ೪ | – | – | – | – | – |
| ಕೆ. ಗಾಯಿತ್ರಿ (ಕೆಜಿ) | | ೨ ** (ಎಸ್‌ಎಮ್+ಐಬಿ) | ೧ | – | – | ೧ | ೧ | ೧ | – | ೧ | – | – | – | – |
| ಕೃಷ್ಣರಾಜ್ (ಕೆಆರ್) | – | ೨ | ೨ | – | – | ೨ | – | ೧ | – | – | – | – | – | – |
| ಬಿ.ಪಿ. ವಾಣಿ (ಬಿಪಿವಿ) | ೨** (ಬಿಡಿಪಿ+ ಎಮ್‌ಆರ್ | ೬***** (ಎಮ್‌ಆರ್+ಎಸ್‌ಆರ್+ ಎಸ್‌ಮ್+ಕೆಎಸ್‌ಜೆ+ ಎಮ್‌ಬಿ | ೧* (ಎಸ್‌ಎಮ್) | – | – | ೨* (ವಿಎಸ್+ ಎಮ್‌ಆರ್) | – | – | – | – | – | – | – | – |
| ಮಾಲಿನಿ ಎಲ್ ತಂತ್ರಿ (ಎಮ್‌ಎಲ್‌ಟಿ) | ೧ | ೧ | – | – | ೧ | – | – | – | – | – | – | – | ೧ | – |
| ಬರುನ್ ದೇಬ್ ಪಾಲ್ (ಬಿಡಿಪಿ) | ೨* (ಬಿಪಿವಿ) | – | – | – | – | ೪ | ೧ | ೨ | ೧ | – | – | ೮ | ೧ | – |
| **ಸಿಎಚ್‌ಆರ್‌ಡಿ** | | | | | | | | | | | | | | |
| ಕೆ.ಎಸ್.ಉಮಾಮಣಿ (ಕೆಎಸ್ ಯು) | ೨* (ಎಮ್‌ಎಲ್ +ಐಬಿ) | – | – | – | – | ೧ | – | ೧ | – | ೧ | – | – | – | – |
| ಎಂ. ಲಿಂಗರಾಜು (ಎಮ್‌ಎಲ್) | ೨** (ಕೆಎಸ್ ಯು+ಐಬಿ+ ಎಸ್‌ಜಿ) | – | ೩ | – | – | ೨ | – | – | ೧ | ೧ | – | – | – | – |
| ಇಂದ್ರಜಿತ್ ಬೈರಾಗ್ಯ (ಐಬಿ) | ೨* (ಕೆಸ್‌ಯು+ ಎಮ್‌ಎಲ್) | ೩* (ಕೆಜಿ) | ೨ | – | ೧ | – | – | – | ೨ | – | – | ೬ | ೧ | – |
| **ಸಿಪಿಐಜಿಡಿ** | | | | | | | | | | | | | | |
| ಎಸ್.ಎನ್.ಸಂಗೀತಾ (ಎಸ್‌ಎನ್‌ಎಸ್) | ೨ | – | – | – | – | – | – | – | – | – | – | – | – | |
| ಸುಪ್ರಿಯಾ ರಾಯ್ ಚೌಧುರಿ (ಎಸ್‌ಆರ್) | – | ೧* (ಬಿಪಿವಿ) | – | – | – | – | ೨ | ೨ | ೨ | – | – | – | – | – |
| ಎನ್. ಶಿವಣ್ಣ (ಎನ್‌ಎಸ್) | ೧ | ೧ | ೨ | – | ೨* (ಎಮ್ ಎಸ್+ ಪಿಜಿಸಿ) | – | – | ೩ | – | – | – | ೭ | ೫ | – |
| ವಿ. ಅನಿಲ್‌ಕುಮಾರ್ (ವಿಎಕೆ) | – | ೩ | – | – | – | ೩ | ೧ | ೧ | ೧ | ೧ | – | – | – | – |
| | ೩ | ೫ | ೨ | ೦ | ೦ | ೩ | ೩ | ೬ | ೩ | ೧ | ೦ | ೭ | ೫ | ೯ |



ಮುಂದುವರೆದಿದೆ

| ವಾರ್ಷಿಕ ವರದಿ ೨೦೧೪–೧೫ ಅಧ್ಯಯನ ಕೇಂದ್ರ ಮತ್ತು ಅಧ್ಯಾಪಕ ವೃಂದದ ಕಾರ್ಯಕ್ಷಮತೆ | ಪೂರ್ಣ–ಗೊಳಿಸಿದ ಯೋಜನೆಗಳು | ಅಂತಿಮ ಪರಾಮರ್ಶೆಯಲ್ಲಿರುವ ವರದಿಗಳು ಮತ್ತು ಚಾಲ್ತಿ–ಯೋಜನೆಗಳು | ಎಸ್/ಸಿ/ಟಿಪಿ ಮತ್ತು ಆರ್‌ಸಿ ವ್ಯವಸ್ಥಿತ ಸಂಯೋಜಿತ | ಪ್ರಕಟಿಸಿದ/ ಸಂಪಾದಿಸಿದ ಗ್ರಂಥಗಳು | ನೀಳ ಲೇಖನಗಳು ಕಾರ್ಯನಿರತ ಸಂಶೋಧನಾ ಲೇಖನಗಳು | ನಿಯಮ ಕಾಲಿಕೆಗಳು/ ಸಂಪಾದಿತ ಗ್ರಂಥಗಳಲ್ಲಿ ಪ್ರಕಟಿಸಿದ ಲೇಖನಗಳು | ನೀಡಿದ ವಿಚಾರ ಸಂಕಿರಣಗಳು | ವಿಚಾರ ಸಂಕಿಣರ/ ಸಮಾವೇಶ ಕಾರ್ಯಾಗಾರಗಳಲ್ಲಿ ಮಂಡಿಸಿದ ಲೇಖನಗಳು | ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಿಕೆ ಸಿ/ಡಿ/ಆರ್ ಆಗಿ | ವಿ.ಸಂ./ ಕಾ/ಸ ಭಾಗವಹಿಸುವಿಕೆ | ಪ್ರಧಾನ ಅಧ್ಯಕ್ಷ ಭಾಷಣಗಳು | ಉಪನ್ಯಾಸಗಳು ಪ್ರವಚನಗಳು/ ಮಾಧ್ಯಮಗಳು /ದಿನ ಪತ್ರಿಕೆಗಳು | ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಸದಸ್ಯತ್ವ | ಶಿಷ್ಯ ವೃತ್ತಿ/ ಪ್ರಶಸ್ತಿಗಳು |
|---|---|---|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ |
| **ಸಿಆರ್‌ಯುಎ** | | | | | | | | | | | | | | |
| ಕಲಾ ಎಸ್. ಶ್ರೀಧರ್ (ಕೆಎಸ್‌ಎಸ್) | ೧* (ಎಮ್‌ಎಸ್ +ಸಿಕೆ) | ೩* (ಎಮ್‌ಎಸ್) | – | ೧ | ೧ | ೭ | ೨ | ೧೧ | ೨ | ೩ | – | ೧೭ | ೨ | ೨ |
| ಮಾನಸಿ ಎಸ್ (ಎಮ್‌ಎಸ್) | ೨** (ಎಸ್‌ಎನ್+ ಕೆಎಸ್‌ಎಸ್+ ಸಿಕೆ) | ೨* (ಕೆಎಸ್‌ಎಸ್) | ೧ | ೧* (ಕೆವಿಆರ್+ ಎಸ್‌ಎನ್+ ಎನ್‌ಎಸ್+ ಪಿಜಿಸಿ | ೭ | ೨ | – | ೫ | – | ೨ | – | ೨ | – | – |
| ಚನ್ನಮ್ಮ ಕಂಬಾರ (ಸಿಕೆ) | ೨** (ಕೆಎಸ್‌ಎಸ್+ ಎಮ್‌ಎಸ್ ಆರ್‌ಎಮ್) | ೧ | ೨ | – | – | – | – | ೨ | – | ೨ | – | ೧ | – | – |
| **ಸಿಎಸ್‌ಎಸ್‌ಸಿಡಿ** | | | | | | | | | | | | | | |
| ಮನೋಹರ್ ಯಾದವ್ (ಎಮ್‌ವೈ) | – | ೧ | – | – | – | ೧ | – | ೨ | – | – | ೨ | ೩ | – | – |
| ಆನಂದ್ ಇನ್ಬನಾಥನ್ (ಎಐ) | – | ೧ | – | – | – | – | – | – | – | – | – | ೧ | – | – |
| ಮಾರ್ಚಂಗ್ ರಿಮೀಂಗಮ್ (ಎಮ್‌ಆರ್‌ಇ) | – | ೧ | – | – | ೨ | ೩ | – | ೧ | ೧ | – | – | ೩ | ೧ | – |
| ಸೋಬಿನ್ ಜಾರ್ಜ್ (ಎಸ್‌ಜಿ) | ೧* (ಎಮ್‌ಎಲ್) | ೨ | ೨ | ೧ | ೧ | ೧ | ೩ | – | – | – | – | – | ೧ | – |
| | ೧ | ೫ | ೨ | ೧ | ೩ | ೭ | ೦ | ೩ | ೧ | ೦ | ೨ | ೭ | ೨ | ೦ |
| **ಪಿಆರ್‌ಸಿ** | | | | | | | | | | | | | | |
| ಕೆ.ಎಸ್. ಜೇಮ್ಸ್ (ಕೆಎಸ್‌ಜೆ) | ೧ | ೪*** (ಟಿಎಸ್‌ಎಸ್+ ಎಲ್‌ಎಸ್+ ಎಸ್‌ಎಮ್+ ಬಿಪಿವಿ+ಎಮ್‌ಬಿ) | – | – | – | ೧ | – | – | – | ೪ | – | – | – | – |
| ಆರ್ ಮುತ್ತುರಾಯಪ್ಪ (ಆರ್‌ಎಂ) | ೧* (ಸಿಕೆ) | ೧* (ಸಿಕೆ) | – | – | – | ೨ | – | – | – | – | – | – | – | – |
| ಟಿ.ಎಸ್. ಶ್ಯಾಮಲ (ಟಿಎಸ್‌ಎಸ್) | – | ೨** (ಕೆಎಸ್‌ಜೆ+ ಎಲ್‌ಎಸ್) | ೧ | – | – | ೨ | – | ೬ | – | ೨ | – | – | – | – |

ಮುಂದುವರೆದಿದೆ

| ವಾರ್ಷಿಕ ವರದಿ ೨೦೧೪–೧೫ ಅಧ್ಯಯನ ಕೇಂದ್ರ ಮತ್ತು ಅಧ್ಯಾಪಕ ವೃಂದದ ಕಾರ್ಯಕ್ಷಮತೆ | ಪೂರ್ಣ–ಗೊಳಿಸಿದ ಯೋಜನೆಗಳು | ಅಂತಿಮ ಪರಾಮರ್ಶೆಯಲ್ಲಿರುವ ವರದಿಗಳು ಮತ್ತು ಚಾಲ್ತಿ–ಯೋಜನೆಗಳು | ಎಸ್/ಸಿ/ಟಿಪಿ ಮತ್ತು ಆರ್‌ಸಿ ವ್ಯವಸ್ಥಿತ ಸಂಯೋಜಿತ | ಪ್ರಕಟಿಸಿದ/ ಸಂಪಾದಿಸಿದ ಗ್ರಂಥಗಳು | ನೀಳ ಲೇಖನಗಳು ಕಾರ್ಯನಿರತ ಸಂಶೋಧನಾ ಲೇಖನಗಳು | ನಿಯಮ ಕಾಲಿಕೆಗಳು/ ಸಂಪಾದಿತ ಗ್ರಂಥಗಳಲ್ಲಿ ಪ್ರಕಟಿಸಿದ ಲೇಖನಗಳು | ನೀಡಿದ ವಿಚಾರ ಸಂಕಿರಣಗಳು | ವಿಚಾರ ಸಂಕಿಣರ/ ಸಮಾವೇಶ ಕಾರ್ಯಾಗಾರಗಳಲ್ಲಿ ಮಂಡಿಸಿದ ಲೇಖನಗಳು | ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಿಕೆ ಸಿ/ಡಿ/ ಆರ್ ಆಗಿ | ವಿ.ಸಂ./ ಕಾ/ಸ ಭಾಗವಹಿಸುವಿಕೆ | ಪ್ರಧಾನ ಅಧ್ಯಕ್ಷ ಭಾಷಣಗಳು | ಉಪನ್ಯಾಸಗಳು ಪ್ರವಚನಗಳು/ ಮಾಧ್ಯಮಗಳು /ದಿನ ಪತ್ರಿಕೆಗಳು | ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಸದಸ್ಯತ್ವ | ಶಿಷ್ಯ ವೃತ್ತಿ/ ಪ್ರಶಸ್ತಿಗಳು |
|---|---|---|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ |
| ಸಿ.ಎಮ್. ಲಕ್ಷ್ಮಣ (ಸಿಎಂಎಲ್) | ೪ | ೨ | ೧ | – | – | ೨ | ೧ | ೧ | – | – | – | ೨ | ೩ | – |
| ಟಿ.ಎನ್. ಭಟ್ (ಟಿಎನ್‌ಬಿ) | ೧ | – | – | – | – | – | – | – | – | ೧ | – | – | – | – |
| ಲೇಖಾ ಸುಬ್ಬಯ್ಯ (ಎಲ್‌ಎಸ್) | – | ೧* (ಕೆಎಸ್‌ಜೆ+ಟಿಎಸ್‌ಎಸ್) | – | – | – | – | – | – | – | ೧ | – | – | – | – |
| ಐಸಿಎಆರ್ ರಾಷ್ಟ್ರೀಯ ಪ್ರಾಧ್ಯಾಪಕರು | – | – | – | – | – | – | – | – | – | – | – | – | – | – |
| ಪಿ.ಜಿ. ಚೆಂಗಪ್ಪ (ಪಿಜಿಸಿ) | – | ೪** (ಇಕೆ+ಎವಿಎಮ್) | ೫ | ೧ | ೨ | ೫ | | ೧೦ | ೫ | ೧ | ೪ | ೫ | | ೩ |
| | ೦ | ೩ | ೪ | ೦ | ೦ | ೫ | ೦ | ೧೦ | ೫ | ೧ | ೪ | ೫ | ೦ | ೩ |
| **ಒಟ್ಟು ಐಸೆಕ್** | **೨೯** | **೬೩** | **೩೫** | **೭** | **೩೭** | **೮೪** | **೧೪** | **೧೦೩** | **೨೯** | **೩೨** | **೧೮** | **೧೪೫** | **೪೦** | **೧೬** |

**ಟಿಪ್ಪಣಿ**

೧. ಎಸ್/ಸಿ/ಡಬ್ಲ್ಯು/ಟಿಪಿ ಮತ್ತು ಆರ್‌ಸಿ ಗಳು ಕ್ರಮವಾಗಿ ವಿಚಾರ ಸಂಕಿರಣಗಳು, ಸಮಾವೇಶಗಳು, ಕಾರ್ಯಾಗಾರಗಳು, ತರಬೇತಿ ಕಾರ್ಯಕ್ರಮಗಳು ಮತ್ತು ಪುನಶ್ಚೇತನ ಕ್ರಮವನ್ನು ಸೂಚಿಸುತ್ತವೆ.

೨. ಪಿ & ಪಿ ಬಾಡೀಸ್‌ಎಂಬುದು ಸಾರ್ವಜನಿಕ ಮತ್ತು ವೃತ್ತಿಪರ ಸಂಸ್ಥೆಗಳನ್ನು ಸೂಚಿಸುತ್ತವೆ.

೩. ಸಿ/ಡಿ/ಆರ್ ಗಳು ಸಭಾಧ್ಯಕ್ಷರು, ಚರ್ಚಾರ್ಥಿಗಳು ಮತ್ತು ವರದಿಗಾರರುಗಳನ್ನು ಸೂಚಿಸುತ್ತವೆ.

೪. ಕೆ ಮತ್ತು ಪಿ ಭಾಷಣಗಳು ಪ್ರಧಾನ ಭಾಷಣ ಮತ್ತು ಅಧ್ಯಕ್ಷೀಯ ಭಾಷಣಗಳನ್ನು ಸೂಚಿಸುತ್ತವೆ.

೫. ಚುಕ್ಕೆಗಳ ಸಂಖ್ಯೆಯು (*, **, ***, ****) ಯೋಜನೆಗಳ/ಇತರ ಅಧ್ಯಾಪಕ ವೃಂದದ ಸದಸ್ಯರೊಡನೆ ಜಂಟಿಯಾಗಿ ಪ್ರಕಟಿಸುತ್ತಿರುವ ಪ್ರಕಟಣೆಗಳನ್ನು ಸೂಚಿಸುತ್ತವೆ.

೬. ಅಧ್ಯಾಪಕ ವೃಂದದ ಸದಸ್ಯರ ಮುಂದಿರುವ ಕಂಸದಲ್ಲಿರುವ ಸಂಕ್ಷೇಪ ಅಕ್ಷರಗಳು ಅವರ ನಿರ್ದೇಶನದಲ್ಲಿ ಯೋಜನೆಯನ್ನು ತೆಗೆದುಕೊಂಡಿರುವುದನ್ನು ಸೂಚಿಸುತ್ತದೆ. ಚಿಹ್ನೆ + ಈ ಯೋಜನೆಯಲ್ಲಿರುವ ಇತರ ಅಧ್ಯಾಪಕ ವೃಂದದ ಸದಸ್ಯರನ್ನು ಸೂಚಿಸುತ್ತದೆ.

೭. ಆಯಾ ಕೇಂದ್ರದ ಒಟ್ಟು ಯೋಜನೆಗಳು ಆ ಕೇಂದ್ರದ ಅಧ್ಯಾಪಕ ಸದಸ್ಯ/ಸದಸ್ಯರು ನಿರ್ದೇಶಿಸಿರುವ ಯೋಜನೆಗಳನ್ನು ಮಾತ್ರ ಪರಿಗಣಿಸುತ್ತದೆ.

೮. ಐಸೆಕ್‌ನ ಒಟ್ಟಾರೆ ಯೋಜನೆಗಳು ಪಟ್ಟಿಮಾಡಿದ ಅಧ್ಯಾಪಕ ವೃಂದದಿಂದ ಕೈಗೊಂಡ ಒಟ್ಟು ಯೋಜನೆಗಳನ್ನು ಒಳಗೊಂಡಿರುತ್ತದೆ.

೯. @ ಚಿಹ್ನೆಯು ಐಸೆಕ್‌ನ ಹೊರಗೆ ಏರ್ಪಡಿಸಿದ ವಿಚಾರ ಸಂಕಿರಣಗಳನ್ನು ಸೂಚಿಸುತ್ತವೆ.

೧೦. ಒಟ್ಟಾರೆ ಎಸ್/ಡಬ್ಲ್ಯು/ಸಿ/ಟಿಪಿ/ಆರ್‌ಸಿ ಐಸೆಕ್ ಸಂಖ್ಯೆಯು ಎಲ್ಲಾ ಕೇಂದ್ರಗಳ ಒಟ್ಟು ಮೊತ್ತವಾಗಿರುತ್ತದೆ. ಆದರೆ ಐಸೆಕ್‌ನ ನಿರ್ದೇಶಕರ ಮತ್ತು ಕುಲಸಚಿವರ ಕಛೇರಿಯ ಸಂಖ್ಯೆಯು ಇದರಿಂದ ಹೊರತಾಗಿರುತ್ತದೆ.

೧೧. ಒಟ್ಟಾರೆ ಐಸೆಕ್ ಸಂಖ್ಯೆಯು ವಿದ್ಯಾರ್ಥಿಗಳು, ಅಧ್ಯಾಪಕ ವೃಂದ ಮತ್ತು ಸಂದರ್ಶನ ಅಧ್ಯಾಪಕರ ಮೊತ್ತವನ್ನು ಸೂಚಿಸುತ್ತದೆ.

# ಐಸೆಕ್



**ಮೆಸರ್ಸ್ ಪಿ. ಚಂದ್ರಶೇಖರ್**
**ಸನ್ನದು ಲೆಕ್ಕಿಗರು**

ಎಸ್-೫೧೨, ೫೧೪, ಮಣಿಪಾಲ್ ಸೆಂಟರ್
# ೪೭, ಡಿಕನ್ಸನ್ ರಸ್ತೆ
ಬೆಂಗಳೂರು-೫೬೦ ೦೪೨

ದೂರವಾಣಿ: ೦೮೦-೨೫೫೮೫೪೪೩
ಟೆಲಿಫ್ಯಾಕ್ಸ್: ೦೮೦-೨೫೫೯೭೪೯೪
ಇ-ಮೇಲ್: ಪಾರ್ಟ್ನರ್@ಪಿ.ಚಂದ್ರಶೇಖರ್.ಕಾಂ

## ಲೆಕ್ಕ ಪರಿಶೋಧಕರ ವರದಿ

೧. ನಾವು ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ ಜಮಾ ಖರ್ಚನ್ನು ೨೦೧೬ರ ಮಾರ್ಚ್ ೩೧ ರಲ್ಲಿದ್ದಂತೆ ಮತ್ತು ಅನುಬಂಧಿಸಿರುವ ಆ ದಿನಾಂಕಕ್ಕೆ ಕೊನೆಗೊಂಡಂತಹ ವರ್ಷದ ಆದಾಯ ಮತ್ತು ಖರ್ಚಿಗೆ ಸಂಬಂಧಪಟ್ಟಂತೆ ಪರಿಶೋಧಿಸಿದ್ದೇವೆ. ಈ ಹಣಕಾಸು ಪಟ್ಟಿಗಳು ಆಡಳಿತ ವರ್ಗದ ಹೊಣೆಗಾರಿಕೆಯಾಗಿರುತ್ತವೆ. ನಮ್ಮ ಹೊಣೆಗಾರಿಕೆಯು ನಮ್ಮ ಲೆಕ್ಕ ಪರಿಶೋಧನೆಯನ್ನಾಧರಿಸಿ ಈ ಹಣಕಾಸು ಪಟ್ಟಿಗಳ ಬಗ್ಗೆ ಅಭಿಪ್ರಾಯ ನೀಡುವುದಾಗಿರುತ್ತದೆ.

